# ಸಮುದಾಯ ಮತ್ತು ಸಹಭಾಗಿತ್ವ

## ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಪರಿಮಿತಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ್ಯಪೂರ್ಣವೂ ಆಗಿವೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನದ ಸರ್ವಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನ ಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡ ಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಬೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥಿಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ, ನಾಡಿನ ಕೋಟಿ ಕೋಟಿ ಶ್ರೀಸಾಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಗಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನಿತ ಕಾಯಕ ಇದರ ದಾರಿಯಾಗಿದೆ.

ಕನ್ನಡ ನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು, ಕನ್ನಡ ವಿಶ್ವವಿದ್ಯಾಲಯವನ್ನು ನೋಡಿದಲ್ಲದೆ ಕನ್ನಡ ನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗದು ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೊಳ್ಳಬೇಕಾದ ಮಹಾಸಂಸ್ಥೆ ಇದು. ಕನ್ನಡ ಪ್ರಜ್ಞೆ ತನ್ನ ಸತ್ವ ಮತ್ತು ಸ್ವತ್ವದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು. ವಿಶ್ವಪ್ರಜ್ಞೆ ಕನ್ನಡ ದೇಶೀಪ್ರಜ್ಞೆಯೊಳಗೆ ಪ್ರವೇಶಿಸಿ, ಪ್ರವಹಿಸಿ, ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರಗೊಳ್ಳಬೇಕು ಎಂಬುದೇ ಇದರ ಗುರಿ. ಈ ಗುರಿಯ ಮೂಲಕ ಕನ್ನಡ ಕರ್ನಾಟಕತ್ವದ ಉಸಿರಾಗಿ, ವಿಶ್ವಪ್ರಜ್ಞೆಯ ಹಸಿರಾಗಿ, ಕನ್ನಡ ಮಾನವ ವಿಶ್ವಮಾನವನಾಗಿ ಬೆಳೆಯಲು ಇದು ಸಾಧನವಾಗಬೇಕು. ಕನ್ನಡಿಗರೆಲ್ಲರ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಟಿ ಪ್ರಕ್ರಿಯೆಯಿಂದ ಬೆಳಕಿನ ಈ ಮಹಾಪಥವನ್ನು ಕ್ರಮಿಸುವುದು ನಮ್ಮ ವಿಶ್ವವಿದ್ಯಾಲಯದ ಮಹತ್ವದ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಶೇಷ ಹೊಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈಗಾಗಲೇ ೨೦೦ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ.

ಕನ್ನಡ ವಿಶ್ವವಿದ್ಯಾಲಯವು ಕೇವಲ ಕನ್ನಡ ಭಾಷೆ ಮತ್ತು ಸಾಹಿತ್ಯಗಳನ್ನು ಕುರಿತು ಸಂಶೋಧನೆ ಮಾಡುವ ಮತ್ತು ಪುಸ್ತಕ ಪ್ರಕಟಿಸುವ ವಿಶ್ವವಿದ್ಯಾಲಯವೆಂಬ ಮಿತ ಕಲ್ಪನೆ ಶಿಕ್ಷಣ ಲೋಕದ ಬಹಳ ಮಂದಿಗಿದೆ. ಆದರೆ, ಈ ನಮ್ಮ ಸಂಸ್ಥೆ ಜನಜೀವನದ ಸಮಗ್ರ ಉನ್ನತಿಗೆ ಸಹಕಾರಿಯಾಗುವ ಎಲ್ಲ ವಿಷಯಗಳ ಸಾಂದ್ರ ಅಧ್ಯಯನ, ಸಂಶೋಧನೆ, ವಿಶ್ಲೇಷಣೆಯನ್ನು ಮತ್ತು ಅದರಿಂದ ಲಭ್ಯವಾದ ಅನನ್ಯವಾದ ಮಾಹಿತಿ ಹಾಗೂ ವಿಶಿಷ್ಟ ಜ್ಞಾನ ಜನಸಮುದಾಯಕ್ಕೆ ಮತ್ತು ಅವರ ಬದುಕಿನ ಉನ್ನತಿಗೆ ಸಹಾಯವಾಗಬೇಕೆಂಬ, ಅವರ ಮನಸ್ಸಿಗೆ ಮೆದುಳಿಗೆ ಮುಟ್ಟಬೇಕೆಂಬ, ಅದು ಅವರ ಕ್ರಿಯಾಯೋಜನೆಗಳಲ್ಲಿ ಪ್ರಕಟವಾಗಬೇಕೆಂಬ, ಮಹತ್ವಾಕಾಂಕ್ಷೆಯನ್ನು ಹೊಂದಿದೆ. ಆದ್ದರಿಂದ ಮನಸ್ಸಿಗೆ ಮತ್ತು ಮೆದುಳಿಗೆ ಸತ್ವಶೀಲವಾದ ಆಹಾರವನ್ನು ಶೋಧಿಸಿಕೊಡುವ ಹೊಣೆಯ ಜೊತೆಗೆ ಮರೆತುಹೋದ ನಮ್ಮ ನಾಡಿನ ಜ್ಞಾನಝರಿಯನ್ನು ಅವುಗಳ ಪಳೆಯುಳಿಕೆಗಳಿಂದ ಹೊರತೆಗೆದು ನಿತ್ಯ ಜೀವನಕ್ಕೆ ಅವು ನೀರುಣಿಸುವಂತೆ ಮಾಡುವ ಅನನ್ಯ ಪ್ರಯತ್ನಗಳು ವಿಹರಿಸುವ ವಿದ್ವಾಂಸರ ತಂಡವನ್ನು ಸೃಷ್ಟಿಸುವ ವಿಶ್ವವಿದ್ಯಾಲಯ ಇದಲ್ಲ. ಬದಲಾಗಿ, ಮಾನವನ ಸಮಗ್ರ ಉನ್ನತೀಕರಣಕ್ಕೆ ಜೀವಸತ್ವ ಊಡುವ ಎಲ್ಲ ಸದಂಶಗಳೊಡನೆ ಸಂವಾದಗೈಯುತ್ತ ಅವುಗಳ ಸಾಹಚರ್ಯವನ್ನು ಸಾಧಿಸುತ್ತ ಅವುಗಳ ಅಂತರಂಗದ ಅಮೃತಸತ್ವವನ್ನು ಹೀರಿಕೊಳ್ಳುವ ಮತ್ತು ಜನಕಲ್ಯಾಣಕ್ಕಾಗಿ ಹಂಚುವ ಕಾಯಕದಲ್ಲಿ ಇದು ನಿರತವಾಗಿದೆ. ಹೀಗೆ ನಮ್ಮ ವಿಶ್ವವಿದ್ಯಾಲಯದಲ್ಲಿ ಸತತ ಕ್ರಿಯಾಶೀಲವಾಗಿರುವ ೧೮ ವಿಭಾಗಗಳಲ್ಲಿ ನಮ್ಮ ಅಭಿವೃದ್ಧಿ ಅಧ್ಯಯನ ವಿಭಾಗ ಒಂದು ಬಹುಮುಖ್ಯ ಅಂಗ. ಇದು ಏಕಕಾಲದಲ್ಲಿ ವಿಜ್ಞಾನಿಗಳೊಡನೆ, ವಿದ್ವಾಂಸರೊಡನೆ, ವ್ಯವಹಾರಸ್ಥ ಉದ್ಯಮಿಗಳೊಡನೆ, ಸಂಸ್ಕೃತಿ ಚಿಂತಕರೊಡನೆ, ಮಣ್ಣಿನ ಮಕ್ಕಳೊಡನೆ ಜೀವಂತ ಸಂಪರ್ಕವನ್ನು ಸಾಧಿಸುತ್ತಲೇ ತನ್ನ ಕಕ್ಷೆಯಲ್ಲಿ ತಾನು ಹೊಸದಾಗಿ ಕಂಡುಕೊಂಡ ತಿಳಿವನ್ನು ಮತ್ತೆ ಆ ಸಮುದಾಯದ ವಿಕಾಸಕ್ಕಾಗಿ ಧಾರೆಯೆರೆಯುವ ಕ್ರಿಯಾಪೂರ್ಣ ವಿಭಾಗವಾಗಿದೆ. ಈ ಕಾರಣದಿಂದಲೇ ಅದು ನಮ್ಮ ಜನತೆಯ ನಿತ್ಯ ಬದುಕಿನೊಡನೆ ಬೆರೆತುಕೊಂಡಿವೆ. ಈ ಹಿನ್ನೆಲೆಯಲ್ಲಿ ಅಭಿವೃದ್ಧಿ ಅಧ್ಯಯನ ವಿಭಾಗ ಶಿವಮೊಗ್ಗದ ಇತಿಹಾಸ ಇತಿಹಾಸ ವೇದಿಕೆಯೊಡನೆ ಸಂಯುಕ್ತವಾಗಿ ನಮ್ಮ ವಿಶ್ವವಿದ್ಯಾಲಯದಲ್ಲಿ ಎರಡು ದಿನಗಳ ವಿಚಾರಸಂಕಿರಣವನ್ನು ಸಂಯೋಜಿಸಿತ್ತು. ಜಲ ಸಂವರ್ಧನೆ, ಜಲ ನಿರ್ವಹಣೆಗಳ ಸಮಸ್ಯೆ ಇಂದು ಕೇವಲ ಪ್ರಾದೇಶಿಕ ಸಮಸ್ಯೆಯಾಗದೆ ಜಾಗತಿಕ ಸಮಸ್ಯೆಯಾಗಿದೆ. ನಮ್ಮ ಪ್ರಾಚೀನರು ಈ ಸಂವರ್ಧನೆ ಮತ್ತು ವಿತರಣೆಯ ಸಮಸ್ಯೆಯನ್ನು ತಮ್ಮ ದೇಶೀಯ ಜ್ಞಾನದ ಮೂಲಕ ಅತ್ಯಂತ ಸಮರ್ಥವಾಗಿ ಮತ್ತು ಸಮರ್ಪಕವಾಗಿ ನಿರ್ವಹಿಸುತ್ತಿದ್ದರೆಂಬುದು ಪ್ರಾಚೀನ ಇತಿಹಾಸದಿಂದ ವೇದ್ಯವಾಗುತ್ತದೆ.

ಪ್ರಸ್ತುತ ಈ ಜಲಸಂವರ್ಧನೆ ಮತ್ತು ನಿರ್ವಹಣೆಯ ಕಾರ್ಯವನ್ನು ಸರ್ಕಾರ ಕೈಗೆತ್ತಿಕೊಂಡಿವುದರಿಂದ, ಅನುಭವದ ಆಳವಿಲ್ಲದ ಪುಸ್ತಕ ಜ್ಞಾನದಿಂದ ತುಂಬಿಕೊಂಡ ಮೆದುಳಿನ ಕಾರ್ಯದಿಂದಲೇ ದಿನದಿನಕ್ಕೆ ಸಂಕೀರ್ಣವಾಗುತ್ತಿರುವ ಜನರ ಜೀವನ್ಮರಣದ ಪ್ರಶ್ನೆಯಾಗುತ್ತಿರುವ ಈ ಸಮಸ್ಯೆಯನ್ನು ಕೇವಲ ಹಣ ಚೆಲ್ಲಿ ಕೆಲಸ ಮಾಡಿಸುವ ಉಮೇದಿನೊಡನೆ ಪರಿಹರಿಸಲು ಯತ್ನಿಸಲಾಗುತ್ತಿದೆ. ಅನುಭೋಗಿಗಳಾದ ಸಮುದಾಯದ ಜನರ ಪ್ರಾಮಾಣಿಕ ಮತ್ತು ಸ್ವಯಿಚ್ಛಾಪೂರ್ಣ ಸಹಭಾಗಿತ್ವವಿಲ್ಲದೆ ಎಂಥ ಮಹದುದ್ದೇಶದ ಕಾರ್ಯವಾದರೂ ಫಲಕಾರಿಯಾಗುವುದಿಲ್ಲ. ಆದ್ದರಿಂದ ಕೆರೆ ನೀರಾವರಿ ನಿರ್ವಹಣೆಯಲ್ಲಿ ಜನರನ್ನು ಅರ್ಪಣಾ ಮನೋಧರ್ಮದ ಕ್ರಿಯಾಶೀಲ ಸಹಾಭಾಗಿಗಳಾಗಿ ಹೇಗೆ ಮಾಡಿಕೊಳ್ಳಬೇಕು, ಈ ನಿಟ್ಟಿನಲ್ಲಿ ಅವರ ಪರಂಪರಾಗತವಾದ ಮತ್ತು ಪ್ರಯೋಗಶೀಲವಾದ ತಿಳುವಳಿಕೆ ಹಾಗೂ ಪರಿಶ್ರಮವನ್ನು ಹೇಗೆ ಬಳಸಿಕೊಳ್ಳಬೇಕು, ಆ ಮೂಲಕ ಈ ಬೃಹತ್ ಸಮಸ್ಯೆಯನ್ನು ಶ್ರಮದ, ವೆಚ್ಚದ, ಅನುಭೋಗದ ವಿಕೇಂದ್ರಕರಣವನ್ನಾಗಿ ಹೇಗೆ ಪರಿವರ್ತಿಸಬೇಕು ಎಂಬುದು ಸ್ಪಷ್ಟವಾಗಬೇಕಾದರೆ ಈ ಅಂಶಗಳಲ್ಲಿ ಪರಿಣತರಾದ ನಮ್ಮ ಜನಸಮುದಾಯವನ್ನು ನಮ್ಮ ಅಧಿಕಾರಿ ವರ್ಗ ಮತ್ತು ವಿದ್ವತ್‌ವರ್ಗ ತಮ್ಮ ಚಿಂತನೆ ಮತ್ತು ಕ್ರಿಯೆಯ ಚಕ್ರದೊಳಕ್ಕೆ ಆಹ್ವಾನಿಸಿಕೊಳ್ಳಬೇಕು ಮತ್ತು ಆಪ್ತವಾಗಿಸಿಕೊಳ್ಳಬೇಕು. ಇದನ್ನರಿತ ನಮ್ಮ ಅಭಿವೃದ್ಧಿ ಅಧ್ಯಯನ ವಿಭಾಗ ಇಂತಹ ಜ್ವಲಂತ ಸಮಸ್ಯೆಯ ಬಗ್ಗೆ, ಬುದ್ಧಿಯ ವಾರಸುದಾರರಾದ ವಿದ್ವಾಂಸರು ಮತ್ತು ಲೋಕಜ್ಞಾನದ ನಿಧಿಗಳಾದ ರೈತರು ಇವರ ಸಮನ್ವಯದ ವಿಶಿಷ್ಟ ವಿಚಾರಸಂಕಿರಣವನ್ನು ಅರ್ಥಪೂರ್ಣವಾಗಿ ನಡೆಸಿತು.

ನೂರಕ್ಕಿಂತ ಹೆಚ್ಚು ಜನ ರೈತರು ಈ ಸಂಕಿರಣದಲ್ಲಿ ಪಾಲ್ಗೊಂಡು ತಮ್ಮ ತಾಜಾ ಅನುಭವಗಳನ್ನು ವಿದ್ವಾಂಸರೊಡನೆ ನಿರ್ಭಿಡೆಯಿಂದ ಹಂಚಿಕೊಂಡರು. ಪ್ರಶ್ನೆಗಳನ್ನು ಕೇಳಿದರು, ಉತ್ತರಗಳನ್ನು ಪಡೆದರು. ಸಮಾಧಾನವಾಗದಿದ್ದಾಗ ಮತ್ತೆ ಮತ್ತೆ ಕೆದಕಿ ಸಮಸ್ಯೆಗಳ ಸ್ವರೂಪವನ್ನು ಬಿಡಿ ಬಿಡಿಸಿ ಹೇಳುವಂತೆ ಮಾಡಿದರು. ವಿದ್ವಾಂಸರೂ ಸಹ ತಮ್ಮ ಕ್ಷೇತ್ರಕಾರ್ಯಜ್ಞಾನ ಮತ್ತು ಪುಸ್ತಕ ಜ್ಞಾನದ ಜೊತೆಗೆ ಈ ರೈತರ ಅನುಭವ ವೇದದ ಜ್ಞಾನವನ್ನು ಪ್ರಾಂಜಲವಾಗಿ ತಮ್ಮೊಳಗೆ ಆಹ್ವಾನಿಸಿಕೊಂಡು ಪ್ರತಿಸ್ಪಂದಿಸಿದರು. ನಮ್ಮ ವಿದ್ವಾಂಸರ ನಿಶಿತವಾದ ಚಿಂತನೆಗಳು, ಅವುಗಳ ಹರಹು ಮತ್ತು ರೈತ ಬಂಧುಗಳು ಎತ್ತಿದ ಆಕ್ಷೇಪಗಳು, ಸಮಸ್ಯೆಗಳ ಕಣ್ಣಿನಿಂದ ಕಂಡುಕೊಂಡ ಹೊಸ ತತ್ವಗಳು ಈ ಪುಸ್ತಕದ ಪ್ರಬಂಧಗಳಲ್ಲಿ ಮಿಡಿಯುತ್ತಿವೆ. ಈ ನಿತ್ಯ ಹಸಿರಾದ ಸಮಸ್ಯೆಯನ್ನು ತಾತ್ವಿಕ, ಚಾರಿತ್ರಿಕ, ಭಾವನಾತ್ಮಕ, ಕಾನೂನಾತ್ಮಕ, ತಾಂತ್ರಿಕ ದೃಷ್ಟಿಕೋನಗಳ ಚೌಕಟ್ಟಿನಲ್ಲಿ ಇಲ್ಲಿ ಬಿಂಬಿಸಲಾಗಿದೆ. ಇದು ಈ ಬೃಹತ್ ಸಮಸ್ಯೆಯ ಅರಿವಿಗೆ ಒಂದು ಮುಖ್ಯವಾದ ಕೀಲಿ ಕೈಯಾಗಿ ಪರಿಣಮಿಸಿದೆ ಎಂಬುದು ನನ್ನ ಅಭಿಮತ. ಈ ಸಂಕಿರಣದಲ್ಲಿ ಪಾಲ್ಗೊಂಡು ಉಪನ್ಯಾಸ ಮಾಡಿ ರೈತರ ಸಮಸ್ಯೆಗಳೊಡನೆ ಸ್ಪಂದಿಸಿ ತಮ್ಮ ವಿವೇಕವನ್ನು ಮತ್ತು ರೈತ ಕಾಳಜಿಯನ್ನು ಪ್ರಾಮಾಣಿಕವಾಗಿ ಮೆರೆದ ರಾಜ್ಯದ ಸಣ್ಣ ನೀರಾವರಿ ಸಚಿವರಾದ ಶ್ರೀ ಕುಮಾರ ಬಂಗಾರಪ್ಪ ಅವರನ್ನು ಸ್ಮರಿಸುವುದು ನನ್ನ ಕರ್ತವ್ಯ. ಈ ವಿಶಿಷ್ಟ ಚಿಂತನಾ ಚಾವಡಿಗೆ ಮೊದಲ ಬಾರಿಗೆ ರೈತರು ಪಾಲ್ಗೊಳ್ಳುವಂತಾದುದಕ್ಕೆ ಅವರು ತಮ್ಮ ಹರ್ಷವನ್ನು ವ್ಯಕ್ತಪಡಿಸಿ ರೈತರು ಮತ್ತು ವಿಶ್ವವಿದ್ಯಾಲಯದ ಸಂಪರ್ಕ ಇನ್ನಷ್ಟು ನಿಕಟವಾಗಲೆಂದು ಹಾರೈಸಿದರು.

ನಮ್ಮ ವಿದ್ವಾಂಸರು ಗಂಭೀರ ಕಾಳಜಿಯಿಂದ ಸಿದ್ಧಪಡಿಸುವ ಪ್ರಬಂಧಗಳನ್ನು ಮಂಡಿಸಿ ರೈತರ ಪ್ರತಿಕ್ರಿಯೆಗಳಿಗೆ ಅಹಂ ಇಲ್ಲದೆ ಸ್ಪಂದಿಸಿದರು. ಹೀಗಾಗಿ ವಿದ್ವತ್‌ಲೋಕ ಮತ್ತು ಅನುಭವಲೋಕಗಳೆರಡರ ಸತ್ವಪೂರ್ಣ ಸಮಾಗಮ ಈ ವಿಚಾರಸಂಕಿರಣದಲ್ಲಿ ಜರುಗಿತು ಎಂದರೆ ಅತಿಶಯೋಕ್ತಿಯಲ್ಲ. ನಮ್ಮ ಅಭಿವೃದ್ಧಿ ಅಧ್ಯಯನ ವಿಭಾಗದ ಡಾ.ಎಂ.ಚಂದ್ರ ಪೂಜಾರಿ ಅವರು ಮತ್ತು ಅವರ ಸಹೋದ್ಯೋಗಿಗಳು ಈ ವಿಚಾರಸಂಕಿರಣವನ್ನು ಸಂಯೋಜಿಸಿದ್ದಲ್ಲದೆ, ಅಲ್ಲಿ ಮಂಡನೆಗೊಂಡ ಪ್ರಬಂಧಗಳನ್ನು ಅಚ್ಚುಕಟ್ಟಾಗಿ ಸಂಪಾದಿಸಿ ಕೊಟ್ಟಿದ್ದಾರೆ. ರೈತರ ಮನೆ ಮನೆಗಳಿಗೆ ತಲುಪಬೇಕಾದ ಪುಸ್ತಕವಿದು. ಇದಕ್ಕೆ ಕಾರಣರಾದವರೆಲ್ಲರಿಗೂ ವಿಶ್ವವಿದ್ಯಾಲಯದ ಪರವಾಗಿ ಧನ್ಯವಾದಗಳು.

**ಡಾ. ಎಚ್.ಜೆ. ಲಕ್ಕಪ್ಪಗೌಡ**
ಕುಲಪತಿಗಳು

## ಕೃತಜ್ಞತೆಗಳು

ಕೆರೆ ನೀರಾವರಿ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವ ಕುರಿತ ಎರಡು ದಿನಗಳ ವಿಚಾರ ಸಂಕಿರಣವನ್ನು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗ ಮತ್ತು ಇತಿಹಾಸ ವೇದಿಕೆ, ಶಿವಮೊಗ್ಗ ಜಂಟಿಯಾಗಿ ಸಂಯೋಜಿಸಿದ್ದವು. ಆ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ತರಲಾಗಿದೆ. ವಿಚಾರ ಸಂಕಿರಣವನ್ನು ಸಂಯೋಜಿಸಲು ಮತ್ತು ಈ ಪುಸ್ತಕವನ್ನು ಪ್ರಕಟಿಸಲು ಎಲ್ಲ ರೀತಿಯಿಂದಲೂ ಪ್ರೋತ್ಸಾಹಿಸಿದ ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಚ್.ಜೆ. ಲಕ್ಕಪ್ಪಗೌಡ ಮತ್ತು ಕುಲಸಚಿವರಾದ ಡಾ. ಕೆ.ವಿ. ನಾರಾಯಣ ಅವರಿಗೆ ಕೃತಜ್ಞತೆಗಳು. ಇಲ್ಲಿನ ಲೇಖನಗಳ ಭಾಷೆಯನ್ನು ತಿದ್ದಿ ಸಹಕರಿಸಿದ ಅಭಿವೃದ್ಧಿ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಟಿ.ಆರ್.ಚಂದ್ರಶೇಖರ್ ಮತ್ತು ಸಹದ್ಯೋಗಿ ಜನಾರ್ದನ ಅವರಿಗೆ ಕೃತಜ್ಞತೆಗಳು. ಪುಟವಿನ್ಯಾಸ ಮಾಡಿದ ಸುಜ್ಞಾನಮೂರ್ತಿ, ಮುಖಪುಟವನ್ನು ರಚಿಸಿದ ಶ್ರೀ ಕೆ.ಕೆ. ಮಕಾಳಿ ಹಾಗೂ ಅಕ್ಷರ ಸಂಯೋಜಿಸಿದ ಸಂಧ್ಯಾ ಕಂಪ್ಯೂಟರ್ಸ್ ಅವರಿಗೆ ಕೃತಜ್ಞತೆಗಳು.

# ಕೆರೆ ನೀರಾವರಿ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವ ವಿಚಾರ ಸಂಕಿರಣದ ಉದ್ಘಾಟನಾ ಭಾಷಣ

ನಮ್ಮ ಸಂಸ್ಕೃತಿಯ ಜೀವಾಳ ಕೆರೆಗಳು. ಪ್ರಪಂಚ ಗೋಲಾಕಾರದಲ್ಲಿ ಇದ್ದು ಕೆರೆ ಅದರಲ್ಲಿ ಒಂದು ಬಿಂದು ಇದ್ದ ಹಾಗೆ. ಅಕ್ಷಯ ಪಾತ್ರೆ ಇದ್ದಂತೆ. ಈ ಅಕ್ಷಯ ಪಾತ್ರೆ ನಮ್ಮನ್ನು ಶತ ಶತಮಾನಗಳಿಂದ ಆಧರಿಸಿದೆ. ಹಾಗೆ ನಾವು ಕೂಡ ಪ್ರಕೃತಿ ಕೊಟ್ಟದನ್ನು ದೇವರ ಪ್ರಸಾದವೆಂದು ನಂಬಿಕೊಂಡು ಬದುಕುತ್ತಾ ಇದ್ದೆವು. ಕಾಲಕ್ರಮೇಣ ಈ ಪ್ರಕೃತಿ ಅಥವಾ ದೇವರು ನಮ್ಮದಾಗಿರಬೇಕು ಅನ್ನುವಂತಹ ಸ್ವಾರ್ಥ ಶುರುವಾಯಿತು. ಅಂದಿನಿಂದ ಈ ಅವ್ಯವಸ್ಥೆಗಳು ಶುರುವಾದವು. ಪ್ರಕೃತಿಯ ಸಂಪತ್ತು ನಮ್ಮ ಬಳಕೆಗೆ ಬರಬೇಕು ಎನ್ನುವುದರೊಂದಿಗೆ ನಾವು ಅದರ ಮೇಲೆ ಹತೋಟಿ ಸಾಧಿಸಲು ಆರಂಭಿಸಿದೆವು. ಸ್ವಾರ್ಥ ಹೆಚ್ಚಾದಂತೆ ತಾನು ಹೇಳಿದ ಹಾಗೆ ನಡೀಬೇಕು ಅನ್ನುವ ಯೋಚನೆ ಶುರುವಾಯಿತು. ಇಡೀ ಪ್ರಕೃತಿಯೇ ತನ್ನ ಸ್ವಾರ್ಥಕ್ಕೆ, ತನ್ನ ಅನುಕೂಲಕ್ಕೆ ಇರುವುದು ಎಂದು ಅದನ್ನು ಮನ ಬಂದಂತೆ ಬಳಸಲು ಆರಂಭಿಸಿದೆವು. ಅದು ಮಿತಿ ಮೀರಿ ಅವ್ಯವಸ್ಥೆಯಾಗಿರುವುದನ್ನು ನಾವು ಬೆಳೆಗಳಿಗೆ ಕೀಟನಾಶಕಗಳನ್ನು ಸಿಂಪಡಿಸುತ್ತೇವೆ. ಸುಮಾರು ನೂರರಲ್ಲಿ ಶೇಕಡಾ ಒಂದು ಮಾತ್ರ ಕೀಟನಾಶಕಕ್ಕೆ ಅನುಕೂಲವಾದರೆದ ಇನ್ನುಳಿದ ಶೇಕಡಾ ೯೯ ತಿರುಗಿ ನಮ್ಮ ಮೇಲೆ ದುಷ್ಪರಿಣಾಮ ಬೀರುತ್ತದೆ. ಅದೇ ರೀತಿ ದಶಲಕ್ಷ ವರ್ಷಗಳಿಂದ ಪ್ರಕೃತಿಯಲ್ಲಿ ಸಂಗ್ರಹವಾಗಿರುವ ಸಂಪತ್ತನ್ನು ನಮ್ಮ ದುರಾಶೆಗೆ ಬಳಸುತ್ತಾ ನಾಶ ಮಾಡುತ್ತಲೇ ಬಂದಿದ್ದೀವಿ. ಪ್ರಕೃತಿಯ ಸಂಪತ್ತು ಯಾವ ರೀತಿ ಬಳಕೆಯಾಗುತ್ತದೆ ಅಂದರೆ ವಾಹನಗಳ ಚಾಲನೆಗೆ ಪೆಟ್ರೋಲಿಯಂ ಅಂತ ಹೇಳಿ ಪೆಟ್ರೋಲ್ ತೆಗೆಯುತ್ತೇವೆ. ದಿನದಿಂದ ದಿನಕ್ಕೆ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದೆ. ಅದೇ ರೀತಿ ಪೆಟ್ರೋಲ್ ತೆಗೆಯುವುದು ಹೆಚ್ಚಾಗುತ್ತಿದೆ. ಕುಡಿಯಲು ಮತ್ತು ಬೇಸಾಯಕ್ಕೆಂದು ನೀರು ತೆಗೆಯುತ್ತೇವೆ. ಇಂಧನಕ್ಕಾಗಿ ಕಲ್ಲಿದ್ದಲು ತೆಗೆಯುತ್ತೇವೆ. ಪ್ರಕೃತಿ ಬಳಸಿದರೆ ಸಮಸ್ಯೆ ಇಲ್ಲ. ಯಾವಾಗ ನಾವು ಎಲ್ಲವನ್ನೂ ಎಷ್ಟೆಷ್ಟು ಸಾಧ್ಯವೋ ಅಷ್ಟಷ್ಟು ಬಳಸುವುದರಿಂದ ಇಂದು ಪ್ರಕೃತಿಯ ಖಜಾನೆ ಖಾಲಿಯಾಗುವ ಸ್ಥಿತಿ ಬಂದಿದೆ.

ಇಂದು ನನಗೆ ಮೊಟ್ಟೆ ಇಡುವ ಕೋಳಿ ಕತೆ ನೆನಪಿಗೆ ತರುತ್ತದೆ. ಕೋಳಿ ಮೊಟ್ಟೆಯನ್ನು ಬಳಸುವುದಾದರೆ ಒಂದೊಂದು ಮೊಟ್ಟೆಯನ್ನು ಹಾಕುತ್ತಾ ಇದ್ದ ಹಾಗೆ ಬಳಸುತ್ತಾ ಬರಬೇಕು. ಹೊಟ್ಟೆಯಲ್ಲಿ ತುಂಬಾ ಕೋಳಿ ಮೊಟ್ಟೆಯೇ ಇದೆ, ಅದಕ್ಕೆ ಕೋಳಿಯನ್ನೇ ಕೊಂದು ಬಿಡುವ ಅನ್ನುವ ಮಟ್ಟಕ್ಕೆ ನಾವು ಬಂದಿದ್ದೇವೆ. ನಮ್ಮ ಕೆರೆಗಳ ವ್ಯವಸ್ಥೆಗೂ ಹಾಗೆ ಆಗಿರುವುದು. ರಾಜಮಹಾರಾಜರುಗಳು ಕಟ್ಟಿಸಿರುವ ಈ ಕೆರೆಗಳ ಶತಮಾನಗಳಿಂದ ನಮ್ಮ ಬೇಕು ಬೇಡಗಳನ್ನು ಪೂರೈಸಿವೆ. ಸರಕಾರ, ರಾಜಕಾರಣ, ಆಧುನಿಕ ತಂತ್ರಜ್ಞಾನ ಇವೆಲ್ಲ ಹಿಂದಿನ ವ್ಯವಸ್ಥೆಯನ್ನು ಬದಲಾಯಿಸಿದವು. ಕೆರೆ ತೊರೆಗಳು ಬದಲು ಜನರಿಗೆ ಕಾಲುವೆಗಳಿಂದ, ನಲ್ಲಿಯಿಂದ ನೀರು ಕೊಡಲು ಶುರುವಾಯಿತು. ಎಲ್ಲ ಪೈಪ್‌ನಲ್ಲೇ ಬರಬೇಕಾದರೆ ಈ ಕೆರೆಗಳೇನು ಎನ್ನುವ ಲೆಕ್ಕಕ್ಕೆ ನಾವೆಲ್ಲರೂ ಬಂದಿದ್ದೇವೆ. ಒಟ್ಟಿನಲ್ಲಿ ನೀರು ಬರುತ್ತದೆ. ಈ ಕೆರೆಗಳನ್ನು ಕಟ್ಟಿಕೊಂಡು ಏನು ಮಾಡಬೇಕಾಗಿದೆ ಎನ್ನುವ ಧೋರಣೆ ಶುರುವಾಯಿತು. ಅಂತಹ ವಾದಗಳ ಮೇಲೆ ಯಾವಾಗ ನಾವು ನಿಲ್ಲಲು ಶುರು ಮಾಡಿದೆವೋ ಆವಾಗ ಕೆರೆಗಳನ್ನು ಕೈ ಬಿಟ್ಟೆವು. ಅಂದಿನಿಂದ ಒಂದಲ್ಲ ಒಂದು ರೀತಿ ಸಮಸ್ಯೆಗಳು ಶುರುವಾದವು. ರಾಜಮಹಾರಾಜರು ಕಟ್ಟಿಸಿದಂತಹ ಕೆರೆಗಳು ಇವೆ ನಮ್ಮಲ್ಲಿ. ಶತಮಾನಗಳ ಇತಿಹಾಸವನ್ನು ಹೇಳುವ ಕೆರೆಗಳು ಇವೆ. ಇದೇ ಹಂಪಿ ಸುತ್ತಮುತ್ತ ತಿರುಗಾಡಿದರೆ ವಿಜಯನಗರದ ಇತಿಹಾಸವನ್ನು ಹೇಳುವ ನೂರಾರು ಕೆರೆಗಳು ಇಂದಿಗೂ ಇವೆ. ಆಧುನಿಕ ತಂತ್ರಜ್ಞಾನದ ಸಹಾಯವಿಲ್ಲದೆ ಮಾಡಿರುವಂತಹ ಕೆರೆಗಳು ಇಂದಿಗೂ ಇವೆ. ಆಧುನಿಕ ತಂತ್ರಜ್ಞಾನದ ಸಹಾಯವಿಲ್ಲದೆ ಮಾಡಿರುವಂತಹ ಕೆರೆಗಳು ಆ ಕಾಲದ ಜನಸಂಖ್ಯೆಗೆ ಬೇಕಾಗುವಷ್ಟು ನೀರನ್ನು ಕೊಟ್ಟಿವೆ. ಆವತ್ತಿನಿಂದ ಹಿಡಿದು ಇವತ್ತಿನವರೆಗೂ ಅದರ ನಿರ್ವಹಣೆಯನ್ನು ನಾವು ನೋಡಿಲ್ಲ. ಆಗ ಭಾರತದಲ್ಲಿ ಪಾಕಿಸ್ತಾನ ಬರ್ಮ ಸೇರಿಕೊಂಡು ೩೩ಕೋಟಿ ಜನಸಂಖ್ಯೆ ಇತ್ತು. ಇವತ್ತು ಪಾಕಿಸ್ತಾನ ಬರ್ಮ ನಮ್ಮ ಜತೆ ಇಲ್ಲ. ನಮ್ಮದೇ ಜನಸಂಖ್ಯೆ ನೂರು ಕೋಟಿ ದಾಟಿದೆ. ಆದರೆ ಇಂದು ಕೂಡ ನಮ್ಮ ಬಹುತೇಕ ಜನರಿಗೆ ನೀರು ಕೊಡುತ್ತಿರುವುದು ಅದೇ ರಾಜಮಹಾರಾಜರು ಕಟ್ಟಿಸಿದ ಕೆರೆಗಳು. ಇವತ್ತು ಕೂಡ ಗ್ರಾಮೀಣ ಪ್ರದೇಶದಲ್ಲಿ ನಮ್ಮ ರೈತಾಪಿ ಜನ ಕುಡಿಯುವ ನೀರಿಗೆ ಮತ್ತು ಬೇಸಾಯಕ್ಕೆ ಅದೇ ಹಳೇ ವ್ಯವಸ್ಥೆಯನ್ನು ನಂಬಿದ್ದಾರೆ.

ಎಲ್ಲೋ ಒಂದು ಕೆರೆ ನೋಡುವುದು ಮೈನರ್ ಇರಿಗೇಶನ್ ಅನ್ನುವುದು, ಮತ್ತೆಲ್ಲೋ ಒಂದು ಅಣೆಕಟ್ಟು ನೋಡುವುದು ಮೇಜರ್ ಇರಿಗೇಶನ್ ಅನ್ನುವುದು ನಡೆಯುತ್ತಿದೆ. ಆದರೆ ನಾವು ಬಹುಮುಖ್ಯವಾದ ಒಂದು ಅಂಶವನ್ನು ಮರೆಯುತ್ತಿದ್ದೇವೆ. ಇವತ್ತು ಈ ವ್ಯವಸ್ಥೆ – ಮೈನರ್ ಅಥವಾ ಮೇಜರ್ ಇರಿಗೇಶನ್ – ಸಂಪೂರ್ಣವಾಗಿ ನಿಂತಿರುವುದು ಮಳೆ ಮೇಲೆ. ಮಳೆ ಸಂಪೂರ್ಣವಾಗಿ ಬರಬೇಕು ಅನ್ನುವುದಾದರೆ ನಮ್ಮ ಅರಣ್ಯ ವ್ಯವಸ್ಥೆ ಬೆಳೆಯಬೇಕು. ಆದರೆ ಜನಸಂಖ್ಯೆ ಹೆಚ್ಚಿದಂತೆ ಹೆಚ್ಚಿದಂತೆ ಕಾಡು ಬರಿದಾಗಿ ನಾಡು ಹೆಚ್ಚುತ್ತಾ ಬಂದಿದೆ. ಕೆರೆಗಳ ಎಡಬಲಕ್ಕೆ ಮತ್ತು ಜಲಾನಯನ ಪ್ರದೇಶದಲ್ಲಿ ಇದ್ದಿರಬಹುದಾದ ಕಾಡುಗಳು ಇಂದು ಕಾಣೆಯಾಗುತ್ತಿವೆ. ಕಾಡನ್ನು ಕಡಿದು ಬೇಸಾಯ ಮಾಡುತ್ತಾ ಬಂದೆವು. ಒಂದು ಕಾಲದಲ್ಲಿ, ಕಾಡುಗಳು ಇದ್ದ ಕಾಲದಲ್ಲಿ, ಮಳೆ ಬಿದ್ದ ತಕ್ಷಣ ಕೆರೆಗೆ ತಿಳಿಯಾದ ನೀರು ಬರುತ್ತಾ ಇತ್ತು. ಇವತ್ತು ಬರುವಾಗ ದಾರಿಯಲ್ಲಿ ಕಮಲಾಪುರದ ಕೆರೆ ನೋಡಿದೆ. ಇಡೀ ಕೆರೆ ನೀರು ಕೆಂಪಾಗಿದೆ. ಆ ಕೆರೆಯ ಜಲಾನಯನ ಪ್ರದೇಶವೆಲ್ಲ ಈಗ ಗಣಿಗಾರಿಕೆಯಿಂದ ತುಂಬಿದೆ. ಗಣಿಯಿಂದ ಬರುವ ಎಲ್ಲಾ ಹೂಳು ಕೆರೆಗೆ ಸೇರಿಕೊಂಡಿದೆ. ಇದು ಮಾತ್ರ ತಲತಲಾಂತರಗಳಿಂದ ಆಗಿದೆ ಅನ್ನುವ ಮಾತನ್ನು ನಾವು ನೀವು ಯಾರೂ ಒಪ್ಪುವುದಕ್ಕೆ ಸಾಧ್ಯವಿಲ್ಲ. ಸುಮಾರು ಹತ್ತು ಹದಿನೈದು ವರ್ಷಗಳಿಂದ ಈ ತರ ಆಗಿದೆ. ಇದಕ್ಕಿಂತ ಮುಂಚಿತವಾಗಿ ನಾವು ವರ್ಷದಲ್ಲಿ ಒಂದು ಸಲ ಹೂಳನ್ನು ತೆಗೆದು ನಮ್ಮ ಜಮೀನುಗಳಿಗೆ ಹಾಕುವುದನ್ನು ಬಿಟ್ಟೆವು. ಈಗ ಸರಕಾರಿ ಗೊಬ್ಬರ ಬಂದ ಮೇಲೆ ಯೂರಿಯ ಪೊಟೇಷ್ ಇವೆಲ್ಲಾ ಜಾಸ್ತಿ ಆಗಿವೆ. ಅಂದರೆ ಎಷ್ಟು ಗೊಬ್ಬರ ಹಾಕ್ತೀವಿ ಅಷ್ಟು ಚೆನ್ನಾಗಿ ಬೆಳೆ ಬರುತ್ತದೆ ಎಂದು ತಿಳಿಯುತ್ತೇವೆ. ಒಂದು ರೀತಿಯಲ್ಲಿ ಕಡಿಮೆ ಶ್ರಮ ಹೆಚ್ಚು ಲಾಭ ಎನ್ನುವ ನೀತಿ ಕಡೆ ನಾವೆಲ್ಲ ಹೋಗುತ್ತಿದ್ದೇವೆ.

ಕೆರೆಗಳನ್ನು ಸಂಪೂರ್ಣವಾಗಿ ಅಭಿವೃದ್ಧಿ ಮಾಡಬೇಕು ಅನ್ನುವುದು ಒಂದು ಸಣ್ಣ ಕೆಸಲವಲ್ಲ. ಈ ಕಾರ್ಯಕ್ರಮ ಕಾಂಗ್ರೆಸ್ ಪಕ್ಷದ್ದು ಅಥವಾ ಐದು ವರ್ಷದಲ್ಲಿ ಮುಗಿಯುವ ಕಾರ್ಯಕ್ರಮ ಅಂತ ನಾವು ಹೇಳುವುದಿಲ್ಲ. ಯಾವುದೇ ಸರಕಾರ ಇದ್ದರೂ ಕೂಡ ಇದು ನಡೆಯುತ್ತಲೇ ಇರಬೇಕಾಗಿದೆ. ದಾಖಲೆ ಪ್ರಕಾರ ಸುಮಾರು ೩೬ ಸಾವಿರ ಕೆರೆಗಳು ಇವೆ. ದಾಖಲೆ ಇಲ್ಲದೆ ಸಾವಿರಾರು ಕೆರೆಗಳು ಇವೆ. ಸಣ್ಣಪುಟ್ಟ ಹೊಂಡಗಳು ಸೇರಿ ಸುಮಾರು ೬೦ ರಿಂದ ೬೫ ಸಾವಿರ ಕೆರೆಗಳು ನಮ್ಮ ಕರ್ನಾಟಕ ರಾಜ್ಯದಲ್ಲಿವೆ. ಇವೆಲ್ಲವನ್ನು ಐದು ವರ್ಷದಲ್ಲಿ ಅಭಿವೃದ್ಧಿ ಮಾಡುತ್ತೇವೆ ಅನ್ನುವುದು ಸಲ್ಲದ ಮಾತು. ಒಂದಲ್ಲ, ಎರಡಲ್ಲ, ಮೂರ್ನಾಲ್ಕು ಸರಕಾರಗಳು ಒತ್ತಡ ಕೊಡುತ್ತಾ ಹೋದರೆ ಮಾತ್ರ ಇದನ್ನ ಸಾಧಿಸಬಹುದು. ಇದೇ ನವೆಂಬರ್ ಒಂದನೇ ತಾರೀಕಿಗೆ ೧೦೦ ಕೋಟಿ ರೂಪಾಯಿಗಳ ಹೋಬಳಿಗೆ ಒಂದು ಕೆರೆ ಎನ್ನುವ ಕಾರ್ಯಕ್ರಮ ಶುರುಮಾಡುತ್ತಾ ಇದ್ದೇವೆ. ಈ ಕಾರ್ಯಕ್ರಮವನ್ನು ಸರಕಾರದ ಸಾಧನೆ ಅಂಥ ಹೇಳೀ ಶುರುಮಾಡೋಕ್ಕೆ ಹೊರಟಿಲ್ಲ. ಇದು ಮೊದಲ ಹೆಜ್ಜೆ. ತುಂಬಾ ದೂರ ಸಾಗಬೇಕಾಗಿದೆ; ಹಲವಾರು ಹೆಜ್ಜೆಗಳನ್ನು ಇಡಬೇಕಾಗಿದೆ. ಹೊಸ ಕೆರೆಗಳನ್ನು ಕಟ್ಟಬೇಕು. ಹಳೇ ಕೆರೆಗಳ ದುರಸ್ತಿ ನಡೆಯಬೇಕಾಗಿದೆ. ನಾವು ಈ ಹಿಂದೆ ಎಷ್ಟು ಹೆಜ್ಜೆಗಳನ್ನು ಇಟ್ಟಿದ್ದೇವೆ ಮತ್ತು ಎಷ್ಟು ತಪ್ಪ ಹೆಜ್ಜೆಗಳನ್ನು ಇಟ್ಟಿದ್ದೇವೆ ಅನ್ನುವುದರ ಮೇಲೆ ನಾವು ಮೊದಲ ಹೆಜ್ಜೆ ಇಡಬೇಕಾಗಿದೆ. ಅದರಲ್ಲಿ ಮುಖ್ಯವಾಗಿ ಯಾರು ಈ ಕೆರೆ ನೀರು ಬಳಸುತ್ತಾರೋ ಅವರನ್ನೇ ಮರೆತು ಕಾರ್ಯಕ್ರಮ ರೂಪಿಸಿದ್ದು ಹಿಂದಿನ ತಪ್ಪು. ಅದನ್ನು ನಾವು ಮುಂದುವರಿಸಲು ಇಚ್ಛಿಸುವುದಿಲ್ಲ. ಹಾಗಾಗಿ ರೈತರ ಸಹಭಾಗಿತ್ವಕ್ಕೆ ಯಾಕೆಂದರೆ ಇವತ್ತು ಒಬ್ಬ ರೈತರ ಮಾರ್ಗದರ್ಶನ ಇಲ್ಲದೆ ಕೆರೆಗಳ ದುರಸ್ತಿ ಸಾಧ್ಯವಾಗುವುದಿಲ್ಲ. ಸರಕಾರ ದುಡ್ಡು ಕೊಟ್ಟ ತಕ್ಷಣ ವಿಧಾನಸೌಧದಲ್ಲಿ ಪೇಪರ್ ಮೇಲೆ ಮಾತ್ರ ಕಾರ್ಯಕ್ರಮಗಳು ಪ್ರಿಂಟ್ ಆಗುತ್ತವೆ. ಅಷ್ಟೆ. ಅದಕ್ಕಿಂತ ಮುಂದೆ ರೈತರಿಗೆ ತಲುಪುವುದೇ ಇಲ್ಲ. ಅದು ರೈತರಿಗೆ ತಲುಪಿ ಯಶಸ್ವಿ ಆಗಬೇಕಾದರೆ ರೈತರು ನೇರವಾಗಿ ಪಾಲುಗೊಳ್ಳವುದು ಅಗತ್ಯ.

ರೈತರ ಸಹಭಾಗಿತ್ವ ಯಾಕೆಂದರೆ ಕೆರೆಗಳ ಬಗ್ಗೆ ಮತ್ತು ಅದರ ನಿರ್ವಹಣೆ ಬಗ್ಗೆ ಅವರಿಗೆ ತಿಳಿದಷ್ಟು ನಮಗೆ ಅಥವಾ ಅಧಿಕಾರಿಗಳಿಗೆ ತಿಳಿದಿಲ್ಲ. ಇವತ್ತು ಹೂಳು ತೆಗಿಬೇಕು ಅಂತೀವಿ. ಯಾವ ನಿಟ್ಟಿನಲ್ಲಿ ಹೂಳು ತೆಗಿಬೇಕು, ಎಲ್ಲಿ ಹಾಕಬೇಕು, ಹೀಗೆ ಹಲವಾರು ತೀರ್ಮಾನಗಳು ಆಗಬೇಕು. ಎಲ್ಲಾ ಕೆರೆಯ ಹೂಳನ್ನು ನಮ್ಮ ಜಮೀನಿಗೆ ಹಾಕಲಾಗುವುದಿಲ್ಲ. ಕಪ್ಪು ಮಣ್ಣಿನ ಹೂಳು ಮತ್ತೊಂದು ಕಪ್ಪು ಮಣ್ಣಿನ ಜಮೀನಿನ ಮೇಲೆ ಹಾಕಲು ಬರುವುದಿಲ್ಲ. ಒಳ್ಳೆ ಫಲವತ್ತಾಗಿದೆ ಎಂದು ಟ್ರಾಕ್ಟರಲ್ಲಿ ತಂದು ಜಮೀನಿಗೆ ಕೆರೆ ಹೂಳು ಜಾಸ್ತಿ ಹಾಕಿದರೆ ಮುಂದಿನ ಹತ್ತು ವರ್ಷ ಪ್ರಮಾಣ ಇದೆ. ಒಂದೇ ಸಾರಿ ಹೂಳನ್ನೆಲ್ಲ ಜಮೀನಿಗೆ ಹಾಕಿದರೆ ಬೆಳೆ ಬೆಳೆಯುವುದಿರಲಿ ಓಡಾಡಲೂ ಆಗುವುದಿಲ್ಲ. ನಾವು ಏನೇ ಬಿತ್ತಿದರೂ ಅದು ಮೊಳಕೆಯೊಡೆದು ಹೊರಗೆ ಬರುವುದಿಲ್ಲ. ಇವನ್ನೆಲ್ಲ ನಮ್ಮ ರೈತರು ತಮ್ಮ ಹಲವಾರು ವರ್ಷಗಳ ಬೇಸಾಯದ

ಅನುಭವದಿಂದ ಕಂಡುಕೊಂಡಿದ್ದಾರೆ. ಇದೇ ರೀತಿ ಬೇರೆ ಬೇರೆ ಪ್ರದೇಶಗಳಲ್ಲಿನ ಕೆರೆಗಳಿಗೆ ವ್ಯತ್ಯಾಸ ಇದೆ. ಪಶ್ಚಿಮ ಘಟ್ಟದ ಮೇಲಿನ ಕೆರೆಗಳಿಗೂ ಬಯಲು ಸೀಮೆಯಲ್ಲಿ ಬರತಕ್ಕಂತಹ ಕೆರೆಗಳಿಗೂ ಬಳ್ಳಾರಿ ರಾಯಚೂರು ಕಡೆ ಬರತಕ್ಕಂತಹ ಕೆರೆಗಳಿಗೂ ಬಿಜಾಪುರ ಅಥವಾ ಕೋಲಾರದ ಕಡೆ ಇರುವಂತಹ ಕೆರೆಗಳಿಗೂ ಬಹಳ ವ್ಯತ್ಯಾಸಗಳಿವೆ. ಕೆರೆ ಹೂಳು ತೆಗಿಯುವ ಕಾರ್ಯಕ್ರಮದಲ್ಲಿ ರೈತರು ಕೆಲವು ಕಡೆ ಮುಂದೆ ಬರುತ್ತಾರೆ. ಉದಾಹರಣೆಗೆ ನಮ್ಮ ಕೋಲಾರ ಜಿಲ್ಲೆಯಲ್ಲಿ ನೀವು ಸುಮ್ಮನೆ ರೈತರಿಗೆ ಹೇಳಿದರು ಸಾಕು ತಕ್ಷಣ ಬಂದು ಆ ಹೂಳನ್ನೆಲ್ಲಾ ತಮ್ಮ ಗದ್ದೆಗಳಿಗೆ ಹೊಡೆದುಕೊಳ್ಳುತ್ತಾರೆ. ಆದರೆ ನಮ್ಮ ಮಲೆನಾಡ ಕಡೆ ಇದನ್ನು ಮಾಡುವುದಿಲ್ಲ. ನಮ್ಮ ಉತ್ತರ ಕನ್ನಡದ ಕೆಲವು ಕಡೆ ಮಾಡುವುದಿಲ್ಲ. ಧಾರವಾಡದ ಕೆಲವು ಕಡೆ ಮಾಡುತ್ತಾರೆ. ಆದುದರಿಂದ ರೈತರ ಸಹಭಾಗಿತ್ವ ಎಂದ ಕೂಡಲೇ ಕರ್ನಾಟಕದ ಎಲ್ಲಾ ಕಡೆ ರೈತರು ತಕ್ಷಣ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ ಎನ್ನುವ ನಂಬಿಕೆ ನಮಗೆ ಬೇಡ.

ಶಿವಮೊಗ್ಗ ಜಿಲ್ಲೆಯನ್ನು ಮಲೆನಾಡ ಪ್ರದೇಶ; ಬಹಳ ಮಳೆ ಬೀಳುವ ಪ್ರದೇಶ ಅಂತ ಹೇಳುತ್ತೇವೆ. ಅಂತಹ ಪ್ರದೇಶದಲ್ಲಿ ಈ ವರ್ಷ ಸರಿಯಾಗಿ ಮಳೆ ಬಂದಿಲ್ಲ. ಮುಂಗಾರು ಇನ್ನೂ ಪಶ್ಚಿಮಘಟ್ಟವನ್ನು ಏರಿಲ್ಲ. ಬಂಗಾಲಕೊಲ್ಲಿಯಿಂದ ಬರುವ ಡಿಪ್ರೆಷನ್ ಶಿವಮೊಗ್ಗ ಜಿಲ್ಲೆಗೆ ತಲುಪಲಿಲ್ಲ. ಇವತ್ತಿನ ತನಕ ನಮ್ಮ ಕರೆ ಕಟ್ಟೆಗಳಿಗೆ ಒಂದು ಹನಿ ನೀರಿಲ್ಲ. ೧೨-೧೩ ಅಡಿ ಆಳದ ಕೆರೆಗಳಲ್ಲಿ ಇಂದು ಎರಡರಿಂದ ಮೂರು ಅಡಿ ನೀರಿದೆ. ಇಂತಹ ಪರಿಸ್ಥಿತಿಯಲ್ಲಿ ರೈತರ ಬಳಿ ಹೋಗಿ ಹೂಳೆತ್ತಲು ಬನ್ನಿ ಅಂದರೆ ಯಾರು ಬರುವುದಿಲ್ಲ. ಅದಕ್ಕಾಗಿ ಅವರನ್ನು ದೂರುವ ಅಗತ್ಯವಿಲ್ಲ. ದಿನನಿತ್ಯದ ಕೂಳಿಗಾಗಿ ಒದ್ದಾಡುವ ಅವರನ್ನು ಕೆರೆ ದುರಸ್ತಿಯಲ್ಲಿ ಭಾಗವಹಿಸುವಂತೆ ಮಾಡುವುದು ಸಾಧ್ಯವಿಲ್ಲದ ಮಾತು. ಇನ್ನು ಬೀದರ್, ಗುಲಬರ್ಗಾ, ಬಳ್ಳಾರಿಯಂತಹ ಪ್ರದೇಶಗಳಲ್ಲಿ ರೈತರು ಕೃಷಿಯಿಂದ ಹೆಚ್ಚು ಕೂಲಿ ಮಾಡಿ ಬದುಕುತ್ತಾ ಇದ್ದಾರೆ. ಅವರನ್ನು ಸಹಭಾಗಿಯಾಗಿ ಎಂದು ಒಪ್ಪಿಸುವುದು ಸುಲಭದ ಕೆಲಸವಲ್ಲ. ನಾವು ತುಂಬಾ ಸಂಕಷ್ಟದ ಸಂದರ್ಭದಲ್ಲಿ ಈ ಕಾರ್ಯಕ್ರಮ ಆರಂಭಿಸಿದ್ದೇವೆ. ಬರಗಾಲದಲ್ಲಿ ಕೂಸು ಹುಟ್ಟಿದ ಹಾಗೆ. ತಾಯಿಗೇ ಊಟಕ್ಕಿಲ್ಲದಾಗ ಮಗುವನ್ನು ಸಾಕುವುದು ಹೇಗೆ? ತಾಯಿಗೆ ಊಟ ಹಾಕಿ ಮಗುವನ್ನು ಉಳಿಸಿಕೊಳ್ಳುವ ವಾದ ನಮ್ಮದು. ಹಾಗಾಗಿ ಇವತ್ತು ನೀರು ಅನ್ನುವಂತಹ ಒಂದು ವಿಚಾರವನ್ನು ನಾವು ಬಹಳ ವಿಶಾಲವಾಗಿ ಯೋಚನೆ ಮಾಡಬೇಕು. ಅಂದರೆ ನೀರಾವರಿ ಕಾರ್ಯಕ್ರಮ ಜಾರಿ ತರುವಾಗ ಇದರ ಪ್ರಯೋಜನ ಯಾರು ಯಾರಿಗೆ ಆಗುತ್ತದೆ ಅನ್ನುವುದನ್ನು ವಿಶಾಲವಾಗಿ ಯೋಚನೆ ಮಾಡಬೇಕು. ಅಂದರೆ ನೀರಾವರಿ ಕಾರ್ಯಕ್ರಮ ಜಾರಿ ತರುವಾಗ ಇದರ ಪ್ರಯೋಜನ ಯಾರು ಯಾರಿಗೆ ಆಗುತ್ತದೆ ಅನ್ನುವುದನ್ನು ವಿಶಾಲವಾಗಿ ಆಲೋಚಿಸಬೇಕು. ಆ ಯೋಚನೆ ಮಾಡಿದರೆ ಮಾತ್ರ ಸಮಸ್ಯೆಗೆ ಪರಿಹಾರ ಸಾಧ್ಯ. ಉದಾಹರಣೆಗೆ ಹೂಳು ತೆಗಿತೀವಿ ಅಂತ ಸರಕಾರ ಹೇಳುತ್ತದೆ. ಒಂದು ಕೆರೆ ಹೂಳು ತೆಗೆಯಲು ಲಕ್ಷ ಅಥವಾ ಕೆಲವು ಕೋಟಿಗಳಲ್ಲಿ ವಿನಿಯೋಜನೆ ಬೇಕು. ಇದನ್ನೆಲ್ಲ ಸರಕಾರವೇ ಭರಿಸಬೇಕು ಎನ್ನುವುದಾದರೆ ಸಹಭಾಗಿತ್ವದ ಪ್ರಶ್ನೆ ಬರುವುದಿಲ್ಲ. ಹೂಳು ತೆಗೆಯಲು ನೂರಾರು ಸಂಖ್ಯೆಯಲ್ಲಿ ಆಳುಗಳು ಬೇಕು. ರೈತರು ಇದರಲ್ಲಿ ಪಾಲುಗೊಳ್ಳಬಹುದು ಅಥವಾ ತಮ್ಮ ಆಳುಗಳನ್ನು ಕಳೂಹಿಸಿಕೊಡಬಹುದು. ಹೂಳು ಸಾಗಿಸಲು ದಿನಕ್ಕೆ ೧೦ ಟ್ರಾಕ್ಟರ್‌ಗಳು ನಿಲ್ಲಬೇಕಾಗುತ್ತದೆ. ಈ ೧೦ ಟ್ರಾಕ್ಟರ್‌ಗಳು ಸ್ಥಳೀಯ ಜಮೀನ್ದಾರರು ಕೊಡಬಹುದು. ಇದನ್ನೇ ಜನರ ಸಹಭಾಗಿತ್ವ ಅಂತ ನಾವು ಮಾತಾಡಿದ್ದೇವೆ. ಈ ಯೋಜನೆಗೆ ತಗಲುವ ವೆಚ್ಚದಲ್ಲಿ ಶೇ.೧೫ನ್ನು ರೈತರು ಕೊಡಬೇಕೆಂದು ಸರಕಾರ ಕಾನೂನು ಮಾಡಿದೆ. ಕೆರೆ ದುರಸ್ತಿಗೆ ವಿಶ್ವಬ್ಯಾಂಕ್ ನೆರವು ಕೋರಲಾಗಿದೆ. ಅವರು ಕೂಡ ರೈತರ ಅಥವಾ ಬಳಕೆದಾರರ ಪಾಲುಗಾರಿಕೆ ಬಗ್ಗೆ ಮಾತಾಡುತ್ತಾರೆ. ಹೀಗೆ ನಮ್ಮ ರೈತರ ಸಹಭಾಗಿತ್ವವನ್ನು ಅವರ ಶೇರ್ ಮುಖಾಂತರ ನಾವು ತೆಗೆದುಕೊಳ್ಳತ್ತೇವೆ. ಎಂದು ನಮ್ಮ ಮಂತ್ರಿಮಂಡಲ ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಇಂತಹ ಬರಗಾಲದ ಪರಿಸ್ಥಿತಿಯಲ್ಲಿ ನಮ್ಮ ದೇಶದಲ್ಲಿ ರೈತರಿಗೆ ಹೋಗಿ ೧೫% ಕೇಳಿದರೆ ಅವರು ಎಲ್ಲಿಂದ ತರುತ್ತಾರೆ? ಹೆಕ್ಟೇರಿಗೆ ೧೫ ಸಾವಿರದಂತೆ ರೈತರು ನೀಡಬೇಕೆಂದು ನಿರ್ಧಾರವಾಗಿದೆ. ೧೦೦ ಹೆಕ್ಟೇರ್ ಅಚ್ಚುಕಟ್ಟು ಇದ್ದರೆ ಸುಮಾರು ಒಂದೂವರೆಯಿಂದ ಎರಡು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಬೇಕಾಗುತ್ತದೆ. ಆದರೆ ಬರ ಇರುವ ಕಡೆ ರೈತರು ಇಷ್ಟು ಹಣ ಎಲ್ಲಿಂದ ತರುವುದು? ಅದಕ್ಕೆ ಮೊನ್ನೆ ಸಚಿವ ಸಂಪುಟದಲ್ಲಿ ಅದನ್ನು ಶ್ರಮದಾನ ಅಥವಾ ಹಣಕಾಸಿನ ರೂಪದಲ್ಲಿ ಅಂದರೆ ಕ್ಯಾಶ್/ಕೈಂಡ್ ರೂಪದಲ್ಲಿ ಸಂಗ್ರಹಿಸಲು ನಿರ್ಧರಿಸಲಾಯಿತು.

ನಾವು ಏನೇ ಕಾರ್ಯಕ್ರಮ ಮಾಡುವುದಾದರೂ ಕೂಡ ನಾನು ಒಬ್ಬನೇ ಕೂತು ಮಾಡಿದ ಚಿಂತನೆಯಂತೂ ಅಲ್ಲ. ರೈತರಿಗೆ ಸಂಬಂಧಪಟ್ಟ ಸಮಸ್ಯೆ ಬಂದರೆ ನಾನು ನೇರವಾಗಿ ರೈತರ ಜೊತೆ ಸೇರಿಕೊಂಡು ಬಿಡುತ್ತಿದ್ದೆ. ನಮ್ಮ ತಾಲೂಕಿನ ರೈತರ ಜೊತೆ ಕೂತು ಇಲ್ಲೊಂದು ಸಮಸ್ಯೆ ಬಂದಿದೆ. ಇದಕ್ಕೆ ಪರಿಹಾರ ನೀವೇ ಹೇಳಿ ಅಂತ ಅವರ ಉತ್ತರವನ್ನು ಸಂಗ್ರಹಿಸಿ ಅದೇ ಉತ್ತರವನ್ನು ನಾನು ವಿಧಾನಸೌಧದಲ್ಲಿ ಹೇಳುವುದು. ಅಂದರೆ ರೈತರ ಸಮಸ್ಯೆಗಳಿಗೆ ಅವರ ಹತ್ತಿರ ಹೋಗಿ ಪರಿಹಾರ ಕಂಡುಕೊಳ್ಳಬೇಕಾಗಿದೆ. ಇಂಜಿನಿಯರ್ ಗಳಾಗಲೀ ಅಥವಾ ಇತರ ಅಧಿಕಾರಿ ವರ್ಗದವರಾಗಲೀ ಉತ್ತರಿಸಲಾಗುವುದಿಲ್ಲ. ರೈತರ ಉತ್ತರ ಕಂಡುಕೊಳ್ಳದ ಹೊರತು ಯಾವ ಕಾರ್ಯಕ್ರಮಗಳೂ ಯಶಸ್ವಿಯಾಗದು. ರೈತರು ಭಾಗಿಯಾಗಬೇಕು. ಇಲ್ಲದಿದ್ದರೆ ನಮ್ಮ ಹಣಕಾಸುಗಳಾಗಲಿ ನಮ್ಮ ಕಾನೂನುಗಳಾಗಲಿ ಸಮರ್ಪಕವಾಗಿ ಬಳಕೆ ಬರಲು ಸಾಧ್ಯವಿಲ್ಲ. ಅಂತಹ ಒಂದು ವ್ಯವಸ್ಥೆ ಬರಬೇಕು. ಆ ವ್ಯವಸ್ಥೆ ಬೆಳೆಯಲು ತುಂಬಾ ಅವಶ್ಯ ಇರುವುದು ರೈತರ ಸಹಭಾಗಿತ್ವ. ಹಿಂದೆ ಒಂದು ಕೆರೆಗೆ ಇಂತಿಷ್ಟು ಹಣ ಎಂದು ಕೊಡುತ್ತಿದ್ದರು. ಅದರಲ್ಲಿ ಏನು ಕೆಲಸ ಮಾಡುತ್ತಿದ್ದಾರೆಂದು ಯಾರಿಗೂ ಗೊತ್ತಾಗುತ್ತಿರಲಿಲ್ಲ. ರೈತರ ಗಮನಕ್ಕೆ ಬಾರದೆ ರೈತರು ಪರಿತಪಿಸುತ್ತಿದ್ದರು. ಇವಾಗ ಹಾಗಿಲ್ಲ. ರೈತರ ಸಹಭಾಗಿತ್ವ ಅಗತ್ಯ. ಒಂದು ಕೆರೆ ಕೆಲಸ ತೆಗೆದುಕೊಳ್ಳತ್ತೇವೆ ಅಂದರೆ ಅದಕ್ಕೆ ಕಡ್ಡಾಯವಾಗಿ ನೀರಾವರಿ ಸಂಘಗಳು ಅಥವಾ ಹಿಂದೆ ಮಾಡಿರತಕ್ಕಂತಹ ಸಹಕಾರಿ ಸಂಘಗಳು ಇರಬೇಕು. ಇರಿಗೇಶನ್ ಇರಬಹುದು, ಬ್ಯಾರೇಜ್‌ಗಳಿರಬಹುದು, ಕರೆಗಳಿರಬಹುದು, ಯಾವುದೇ ಆದರೂ ಅದು ಕಡ್ಡಾಯವಾಗಿ ರೈತರ ಸಹಭಾಗಿತ್ವ ಇದ್ದರೆ ಮಾತ್ರ ಕೈ ಹಾಕಲು ಸಾಧ್ಯವಾಗುತ್ತದೆ. ಇಲ್ಲಾಂದ್ರೆ ಯಾವುದೇ ಕಾರಣಕ್ಕೂ ಕೆಲಸ ತೆಗೆದುಕೊಳ್ಳಲಾಗದು. ಹೀಗೆ ಫಲಾನುಭವಿಗೆ ಅಥವಾ ರೈತನ ಗಮನಕ್ಕೆ ಕಾರ್ಯಕ್ರಮದ ವಿವರಗಳು ತರಬೇಕು. ಎಷ್ಟು ಹಣಕಾಸು ಸರಕಾರದಿಂದ ಅದಕ್ಕೆ ಕೊಟ್ಟಿದ್ದೇವೆ? ಏನು ಕೆಲಸ ಆಗಬೇಕು? ಯಾರು, ಯಾವಾಗ ಮಾಡಿಸಬೇಕು? ಇತ್ಯಾದಿಗಳು ರೈತರ ಗಮನಕ್ಕೆ ಬರಬೇಕು. ಕೆರೆ ರಿಪೇರಿ, ತೂಬು ರಿಪೇರಿ, ಅಚ್ಚುಕಟ್ಟು ಪ್ರದೇಶದಲ್ಲಿ ಏನು ಕೆಲಸ ಮಾಡ್ತೀವಿ ಅನ್ನುವುದು ರೈತರಿಗೆ ಗೊತ್ತಾಗಿಲ್ಲ ಅಂದರೆ ವಿಧಾನಸೌಧದಲ್ಲಿ ಇರುವಂತಹ ಅಧಿಕಾರಿಗಳು, ಶಾಸಕರು, ಮಂತ್ರಿಗಳು ಪ್ರತಿ ಪ್ರದೇಶಕ್ಕೆ ಹೋಗಿ ನಿರೀಕ್ಷಿಸುವುದು ಕಷ್ಟವಾಗಬಹುದು. ಸ್ಥಳದಲ್ಲೇ ಇರುವ ರೈತ ಪ್ರತಿನಿಧಿಗಳಿಗೆ ಆ ಕಾರ್ಯಕ್ರಮದ ಅರಿವು ಇರಬೇಕು. ಅವರು ಅದರಲ್ಲಿ ಭಾಗಿಯಾಗಬೇಕು. ನಮಗೆ ತೂಬಿನ ರಿಪೇರಿ ಅಗತ್ಯವಿದೆ, ಕೆರೆ ದುರಸ್ತಿ ಆಗಬೇಕು, ಕೋಡಿಯಾಗಬೇಕು, ಇತ್ಯಾದಿಗಳನ್ನು ರೈತರು ನಿರ್ಧರಿಸಬೇಕಾಗಿದೆ. ಅದು ಬಿಟ್ಟು ದೂರದಲ್ಲಿರುವ ಅಧಿಕಾರಿಗಳು ಅಥವಾ ಇತರರು ನಿರ್ಧರಿಸಲು ಸಾಧ್ಯವಿಲ್ಲ. ಒಂದು ವೇಳೆ ನಾವು ಅಲ್ಲಿ ಕೂತು ತೀರ್ಮಾನ ಮಾಡಿದರೆ ಅದು ಯುದ್ವತದ್ವ ಆಗುತ್ತೆ.

ಇಂದು ಕೆರೆಯನ್ನು ಕೇವಲ ಪಾತ್ರ ಅಥವಾ ಅಚ್ಚುಕಟ್ಟು ಪ್ರದೇಶಕ್ಕೆ ಸೀಮಿತಗೊಂಡಂತೆ ನೋಡಲಾಗುವುದಿಲ್ಲ. ಜಲಾನಯನ ಪ್ರದೇಶಕ್ಕೆ ೧೫%, ಹೂಳು ತೆಗೆಯುವ ವ್ಯಾಪ್ತಿಗೆ ೨೦%, ಕೆರೆ ಏರಿ, ತೂಬು ಮತ್ತೆ ಚಾನಲ್‌ಗಳಿಗೆ ೨೦ ರಿಂದ ೨೫% ಹಾಗೆ ಅಚ್ಚುಕಟ್ಟು ಭಾಗಕ್ಕೆ ೨೦%. ಈ ತರ ಅದನ್ನ ವಿಂಗಡಿಸಿ ಇಟ್ಟಿದ್ದೇವೆ. ಇವತ್ತು ಯಾರೋ ಬಂದು ಕೆಲವು ಲಕ್ಷ ಕೊಡಿ ಕೆರೆ ಕೆಲಸ ಮಾಡಿಸುತ್ತೇವೆ ಎಂದರೆ ಆಗುವುದಿಲ್ಲ. ಹೂಳು ತೆಗೆದ ಕೂಡಲೇ ಕೆರೆ ತುಂಬುವುದಿಲ್ಲ. ಕೆರೆಗೆ ನೀರು ಎಷ್ಟು ಬರುತ್ತದೆ ಎನ್ನುವುದು ಬಹಳ ಮುಖ್ಯ. ಅಂದರೆ ಕೆರೆಗೆ ಜಲಾನಯನ ಪ್ರದೇಶ ಇರಬೇಕು. ಅಷ್ಟು ಮಾತ್ರವಲ್ಲ. ಆ ಪ್ರದೇಶ ಒತ್ತುವರಿ ಆಗದೆ ಅಥವಾ ಇತರ ಬಳಕೆಗೆ ಒಳಪಡದೆ ಮಳೆ ನೀರನ್ನು ಕೆರೆಗೆ ಸಾಗಿಸುವಂತಿರಬೇಕು. ಹಾಗಾಗಿ ಮೊದಲು ಜಲಾನಯನ ಪ್ರದೇಶ, ನಂತರ ಕೆರೆಯಂಗಳ, ಅದಾದ ಮೇಲೆ ಕೋಡಿ, ತೂಬು, ಕೆರೆ ಏರಿ, ಇದಾದ ನಂತರ ಅಚ್ಚುಕಟ್ಟು ಹೀಗೆ ಪ್ರತಿಯೊಂದು ರಿಪೇರಿ ಆಗಬೇಕು. ಫಲಾನುಭವಿಗಳಿಗೆ ಹೋಗತಕ್ಕಂತಹ ಅಚ್ಚುಕಟ್ಟು ಕೂಡ ಮುಖ್ಯ ಅಂಶವೇ. ಯಾಕೆಂದರೆ ಏರಿ ಪಕ್ಕದಲ್ಲಿರುವ ಜಮೀನುಗಳಿಗೆ ಸುಲಭವಾಗಿ ನೀರು ಬಂದು ಬಿಡುತ್ತದೆ. ಬರಿ ಅಂತರ್ಜಲದಲ್ಲೇ ಅವರ ಗದ್ದೆಗಳಿಗೆ, ತೋಟಗಳಿಗೆ ನೀರು ಹಾಯಿಸಿಕೊಳ್ಳಬಹುದು. ಆದರೆ ಕೊನೆ ಮೂಲೆಯ್ಲಲಿರುವ ಸಣ್ಣ ಹಿಂಡುವಳಿದಾರನಿಗೆ ನೀರು ಸಿಗುವುದು ಕಷ್ಟ. ಆತನಿಂದ ಅಚ್ಚುಕಟ್ಟುದಾದ ಅಂತ ಹೇಳಿ ಪ್ರತಿವರ್ಷನೂ ರೆವೆನ್ಯು ಕಲೆಕ್ಷನಿಗೆ ಅಥವಾ ನೀರು ಕರ ಕಲೆಕ್ಷನಿಗೆ ಹೋಗ್ತೀವಿ. ಅವನಿಗೆ ನೀರು ಸಿಗದಿದ್ದರೆ ಆತ ಸಹಭಾಗಿಯಾಗಲು ಸಾಧ್ಯವಿಲ್ಲ. ಹಾಗಾಗಿ ಕೊನೆಯ ಜಮೀನು ತನಕ ನೀರು ಹೋಗುವಂತೆ ನೋಡಿಕೊಳ್ಳಬೇಕಾಗಿದೆ. ಇದು ಸಾಧ್ಯವಾಗಬೇಕಾದರೆ ಪ್ರತಿಯೊಬ್ಬರು ರೈತ ಕೂಡ ನೀರು ಹಂಚಿಕೆ ನಿರ್ಧಾರದಲ್ಲಿ ಭಾಗಿಯಾಗಬೇಕು. ನೀರಾವರಿ ಸಂಘಗಳನ್ನು ರಚಿಸಲು ಪ್ರೋತ್ಸಾಹಿಸುವುದು ಆ ಉದ್ದೇಶದಿಂದಲೇ ಈ ನೀರಾವರಿ ಸಂಘ ಹೊಸದೇನಲ್ಲ. ಹಿಂದೆ ತಲೆತಲಾಂತರಗಳಿಂದ ನೀರು ಘಂಟಿ ಎಂದು ಮಾಡಿ ರಾಜಮಹಾರಾಜರುಗಳ ಕಾಲದಲ್ಲೇ ಇದರ ವ್ಯವಸ್ಥೆ ಇತ್ತು. ಯಾರ್ಯಾರಿಗೆ ನೀರು

ಬಿಡಬೇಕು? ಯಾರ್ಯಾರಿಗೆ ಎಷ್ಟು ಪ್ರಮಾಣದಲ್ಲಿ ನೀರು ಬಿಡಬೇಕು? ಯಾರು ನೀರಿಗೆ ಹೊಣೆಗಾರರು? ಇತ್ಯಾದಿಗಳು ಕೂಡ ನಿರ್ಧಾರವಾಗುತ್ತಿತ್ತು. ನೀರು ಬಿಡುವ ಕೆಲಸವನ್ನು ನೀರುಘಂಟಿ ನೋಡಿಕೊಳ್ಳುತ್ತಾನೆ. ಆ ಕೆಲಸಕ್ಕಾಗಿ ಆತನಿಗೆ ೨-೪ ಎಕ್ರೆ ಜಮೀನು ಬಿಟ್ಟು ಕೊಡುವ ಕ್ರಮ ಇತ್ತು. ಈಗ ನೀರುಘಂಟಿನೂ ಇಲ್ಲ, ತೂಬು ಕೆರೆ ನೋಡಿಕೊಳ್ಳುವವರೂ ಇಲ್ಲ. ನಮ್ಮ ಕೆರೆಗಳಿಗೆ ಪುನರ್ ಜೀವ ತುಂಬಬೇಕಾದರೆ ಮತ್ತೆ ಅದೇ ಹಳೆ ಇತಿಹಾಸದ ವ್ಯವಸ್ಥೆಗೆ ಹೋಗಬೇಕಾಗಿದೆ.

ನೀರಿಲ್ಲ ಅಂದ್ರೆ ನಾವಿಲ್ಲ. ಆರ್ಥಿಕವಾಗಿ, ಶೈಕ್ಷಣಿಕವಾಗಿ, ವೈಜ್ಞಾನಿಕವಾಗಿ ಮುಂದುವರಿಯಬೇಕಾದರೆ ನೀರು ಅಗತ್ಯ. ನೀರಿನ ಒಂದೊಂದು ಹನಿಯನ್ನೂ ಉಳಿಸಿಕೊಳ್ಳಬೇಕು. ನೀರಿನಿಂದಲೇ ಬದುಕು ನೀರಿನಿಂದಲೇ ಸಂಪತ್ತು. ಆದುದರಿಂದಲೇ ನೀರಿಗಾಗಿ ದೊಡ್ಡ ದೊಡ್ಡ ಯುದ್ಧಗಳೇ ನಡೆದಿದೆ ಮತ್ತು ನಡೆಯುತ್ತಿದೆ. ಉದಾಹರಣೆಗೆ ನಮ್ಮ ಕಾವೇರಿ ಗಲಾಟೆ ಅಥವಾ ಕೃಷ್ಣ ನೀರಿನ ಗಲಾಟೆಗಳು. ಇವು ಅಂತರ್‌ರಾಜ್ಯ ಹಾಗೂ ಅಂತರಾಷ್ಟ್ರೀಯ ಜಗಳಗಳಿಗೆ ಕಾರಣವಾಗಿದೆ. ಸಾವಿರಾರು ಜನ ನೀರಿಗಾಗಿ ತಮ್ಮ ಜೀವ ಬಲಿಕೊಟ್ಟಿದ್ದಾರೆ. ಈ ತರಹದ ಉದಾಹರಣೆಗಳು ನಮ್ಮ ಕಣ್ಣ ಮುಂದಿರುವಾಗಲೂ ನೀರಿನ ವ್ಯವಸ್ಥೆಯನ್ನು ಸರಿಮಾಡಿಸಿಕೊಳ್ಳದಿದ್ದರೆ ಮುಂದೆ ಬಹಳ ಕೆಟ್ಟ ದಿನಗಳನ್ನು ನೋಡಬೇಕಾಗುತ್ತದೆ. ಈ ಮಾತನ್ನು ಒಬ್ಬ ಶಾಸಕನಾಗಿ ಅಥವಾ ಮಂತ್ರಿಯಾಗಿ ಹೇಳ್ತಾ ಇಲ್ಲ. ಒಬ್ಬ ಸಾಮಾನ್ಯ ಮನುಷ್ಯನಾಗಿ ಹೇಳುತ್ತಿದ್ದೇನೆ. ಈ ಸಮಸ್ಯೆಯನ್ನು ನಾವು ಆದಷ್ಟು ಶೀಘ್ರವಾಗಿ ಪರಿಹರಿಸಿ ಕೊಳ್ಳಬೇಕಾಗಿದೆ. ಇಲ್ಲದಿದ್ದರೆ ಮುಂದಿನ ಜನಾಂಗ ನಮ್ಮನ್ನು ಖಂಡಿತವಾಗಿಯೂ ಕ್ಷಮಿಸುವುದಿಲ್ಲ. ವಿಚಾರ ಸಂಕಿರಣವನ್ನು ಉದ್ಘಾಟಿಸಿ ನನ್ನ ಕೆಲವು ಅಭಿಪ್ರಾಯಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಅವಕಾಶ ಮಾಡಿಕೊಟ್ಟಂತಹ ಕುಲಪತಿಗಳಿಗೂ, ಸಿಬ್ಬಂದಿ ವರ್ಗದವರಿಗೂ, ಹಿರಿಯರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಬರಹರೂಪ: ಜನಾರ್ದನ)

**– ಶ್ರೀ ಎಸ್. ಕುಮಾರ ಬಂಗಾರಪ್ಪ***

*ಸಚಿವರು, ಸಣ್ಣ ನೀರಾವರಿ ಇಲಾಖೆ, ಕರ್ನಾಟಕ ಸರ್ಕಾರ

## ಕೆರೆಗಳ ಜಲ ಕಾರ್ಯ ನಿರ್ವಹಣೆ ಮತ್ತು ಜನಸಾಮಾನ್ಯರ ಪಾಲ್ಗೊಳ್ಳುವಿಕೆ

## ಪ್ರಸ್ತಾವನೆ

ನಮ್ಮ ರಾಜ್ಯದಲ್ಲಿರುವ ಸುಮಾರು ೨೭,೦೦೦ ಹಳ್ಳಿಗಳಿಗೆ, ಹೆಚ್ಚು ಕಮ್ಮಿ ೩೬,೬೭೫ ಕೆರೆಗಳಿವೆ ಎಂದು ರಾಜ್ಯ ಶಾಸನದ ಖಾತೆಯಲ್ಲಿ ಗಣಿಸಲಾಗಿದೆ. ಬಹಳಷ್ಟು ಕೆರೆಗಳು ಪುರಾತನ ಕಾಲದಿಂದಲೂ ಉಪಯೋಗಿಸಲ್ಪಟ್ಟಿವೆ. ಸಾವಿರಾರು ವರ್ಷಗಳ ಹಿಂದಿನಿಂದ, ರಾಜ ಮಹಾರಾಜರೋ, ಪಾಳೆಯಗಾರರೋ ಮತ್ತು ಜನ ಹಿತಾಸಕ್ತಿಯುಳ್ಳ ಧರ್ಮಾತ್ಮರೋ ಇವರುಗಳಿಂದ ನಿರ್ಮಿಸಲ್ಪಟ್ಟ ಕೆರೆಗಳು ಹಳ್ಳಿಯವರ ಜನಜೀವನದಲ್ಲಿ ಮುಖ್ಯವಾದ ಅಂಗವಾಗಿ ಉಳಿದು ಬಂದಿದೆ. ಕೆಲವು ಕೆರೆಗಳು ಜನಸಾಮಾನ್ಯರಿಂದಲೂ ನಿರ್ಮಿತವಾಗಿ ಉಳಿದಿರುವ ಪ್ರಸಂಗಗಳೂ ಇವೆ. ಉದಾಹರಣೆಯಾಗಿ ಸದ್ಗುಣಪ್ಪ ಒಬ್ಬ ವೇಶ್ಯೆಯಿಂದ ನಿರ್ಮಿಸಿದ ಚಿತ್ರದುರ್ಗದ ಸೂಳೆಕೆರೆ (ಈಗ ಅದನ್ನು ಶಾಂತಿಸಾಗರ ಎಂದು ಕರೆಯಲಾಗುತ್ತಿದೆ) ಮತ್ತೆ ನರಗುಂದದ ನೀಲಮ್ಮನಕೆರೆ ಇವುಗಳು ಈಗಲೂ ಜನರಿಗೆ ನೀರಾವರಿಗೋ ಅಥವಾ ಕುಡಿಯುವ ನೀರಿಗೋ ಲಾಭದಾಯಕವಾಗಿ ಉಪಯೋಗಿಸಲ್ಪಡುತ್ತಿವೆ. ಹೀಗೆ ಪ್ರತಿ ಹಳ್ಳಿಗೂ ಒಂದಕ್ಕಿಂತ ಹೆಚ್ಚಾಗಿ ಅತವಾ ಕನಿಷ್ಟ

ಹಳ್ಳಿಗೊಂದು ಕೆರೆಯಂತೆ ಜನಜೀವನದಲ್ಲಿ ಹಾಸು ಹೊಕ್ಕಾಗಿದೆ. ಹಳ್ಳಿಗೆ ಕೆರೆಯ ಪ್ರಾಶಸ್ತ್ಯ ಎಷ್ಟೆಂದು ಹೇಳುವುದಾದರೆ ಖ್ಯಾತ ಕವಿ ನಿಸ್ಸಾರ್ ಅಹಮದ್ ಅವರ ವರ್ಣನೆಯಲ್ಲಿ 'ಕೆರೆ ಹಳ್ಳಿಗೆ ಹೆಣ್ಣಿನ ಹಣೆಯ ಕುಂಕುಮ ಬಟ್ಟಿನ ಅಂದದಂತೆ ಶೃಂಗರಿಸುತ್ತದೆ.'

ಆದರೆ ವರ್ತಮಾನ ಕಾಲದಲ್ಲಿ ಸುಮಾರು ಐವತ್ತು (೫೦)ವರ್ಷಗಳಿಂದ ಕೆರೆಗಳು ಸರಕಾರದಿಂದಲೂ ಮತ್ತು ಜನರಿಂದಲೂ ನಿರ್ಲಕ್ಷ್ಯಗೊಂಡು ದುಃಸ್ಥಿತಿಯ ದಿಸೆಯಲ್ಲಿ ಅದೋಗತಿಗೆ ಈಡಾಗುತ್ತಿವೆ. ಶತಮಾನಗಳ ಹಿಂದೆ ಹಳ್ಳಿಯ ಜನಸಾಮಾನ್ಯರು ಒಟ್ಟುಗೂಡಿ ಕೆರೆಗಳ ನಿರ್ವಹಣೆ ನಡೆಸುತ್ತಿದ್ದರು. ಕೆರೆಗಳು ಸರಕಾರ ಹತೋಟಿಗೆ ಬಂದಾಗಲಿಂದ ನಶಿಸುತ್ತಿವೆ. ಸರ್ಕಾರದ ಸ್ವತ್ತು ಯಾರ ಸ್ವತ್ತು ಅಲ್ಲ ಅಥವಾ ಪಾಳುಗೊಳಿಸುವುದಕ್ಕೆ ಎಲ್ಲರ ಸ್ವತ್ತಾಗಿ ಬೀಳು ಬಿದ್ದಿವೆ. ನಿರ್ಲಕ್ಷ್ಯದಿಂದ ಹೂಳು ತುಂಬಿಕೊಂಡು ನಿರ್ವಹಣೆರಹಿತವಾಗಿವೆ. ಅವುಗಳಿಂದ ಆಗುತ್ತಿದ್ದ ನೀರಾವರಿ ಮತ್ತು ಜಲದ ಉಪಯೋಗ ಒಂದಾನೊಂದು ಕಾಲದಲ್ಲಿ ಉಚ್ಛಮಟ್ಟದಲ್ಲಿದ್ದು ಈಗ ಕೀಳುಸ್ಥಿತಿಯಲ್ಲಿ ಹಾಳಾಗುತ್ತಿವೆ. ಇಂದಿನ ರಾಜ್ಯ ಸರಕಾರ ಕೆರೆಗಳ ದುಃಸ್ಥಿತಿಯನ್ನು ಅರಿತು, ಅವುಗಳ ಪುನರುಜ್ಜೀವನಗೊಳಿಸುವ ಕಾರ್ಯಕ್ರಮಗಳಿಗೆ ಆದ್ಯತೆಯನ್ನು ಕೊಟ್ಟಿದೆ. ವಿಶ್ವಬ್ಯಾಂಕ್, ಹುಡ್ಕೋ ಮತ್ತು ನಬಾರ್ಡ್ ಸಂಸ್ಥೆಗಳಿಂದ ಹಣದ ಸಹಾಯ ಒದಗಿಸಲು ಪ್ರಯತ್ನ ಮಾಡಿದೆ. ಈಗಾಗಲೇ ಈ ಸಂಸ್ಥೆಗಳೊಂದಿಗೆ ಮಾತುಕತೆ ನಡೆಯುತ್ತಿದೆ. ವಿಶ್ವಬ್ಯಾಂಕ್ ಕೆರೆಗಳ ಪುನರುದ್ದಾರಕ್ಕೆ ಹಣ ಸಹಾಯ ಕೊಡುವುದಕ್ಕೆ ಸಮ್ಮತಿ ನೀಡಿದೆ. ಮಾತುಕತೆ ಮುಗಿದ ನಂತರ ಕೆಲವು ತಿಂಗಳುಗಳಲ್ಲೇ ಹಣ ಸಹಾಯ ಒದಗುವ ಸಂಭವವಿದೆ.

ಈ ಕಾರ್ಯಕ್ರಮಗಳನ್ನು ತ್ವರಿತವಾಗಿ ಜರುಗಿಸಲು ಸರಕಾರದ ಸ್ತರದಲ್ಲಿ ಜಲಸಂವರ್ಧನಾ ಯೋಜನಾ ಸಂಘವನ್ನು ಸ್ಥಾಪಿಸಿದೆ. ಈ ಸಂಘವು ಈಗಾಗಲೇ ಕೆರೆಗಳ ನೀರನ್ನು ಬಳಸುವವರ ಸಂಘಗಳನ್ನು ರಚಿಸುವ ಕಾರ್ಯವನ್ನು ಶುರು ಮಾಡುತ್ತಿದೆ. ಇದಲ್ಲದೆ ಸರಕಾರೇತರ ಸ್ವಸಹಾಯ ಸಂಘಗಳು ಕೂಡ ಜಲಸಂವರ್ಧನಾ ಸಂಘಕ್ಕೆ ಈ ಕಾರ್ಯಕ್ರಮದಲ್ಲಿ ನೆರವು ನೀಡುತ್ತಿವೆ. 'ಸಹಯೋಗ' ಸರಕಾರೇತರ ಸ್ವಸಹಾಯ ಸಂಘವೂ ಕೂಡ ಈ ಕಾರ್ಯಕ್ರಮದಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸುತ್ತಿದೆ. ಸರಕಾರದ ಸ್ತರದಲ್ಲಿ ನೀರಾವರಿ ಸಂಬಂಧಿ ನೀತಿ ನಿಯಮಗಳ ಸುಧಾರಣೆಯಲ್ಲಿ ಸಹಯೋಗವು ಬಹುಮುಖ್ಯ ಯೋಗದಾನ ಮಾಡುತ್ತಿದೆ. ಇದಲ್ಲದೆ ರೈತರ ಸ್ತರದಲ್ಲೂ ಅವರೊಂದಿಗೆ ಒಳಕೂಡಿ ಅವರ ಅಭಿವೃದ್ಧಿಗೂ ಕೆಲಸ ಮಾಡುತ್ತಿದೆ. ಒಂದು ಕೆರೆಯ ಜಲ ಬಳಕೆಯನ್ನು ಮಾಡುವ ಎಲ್ಲಾ ಜನರನ್ನು ಕೂಡಿಸಿ ಬಳಕೆದಾರರ ಸಂಘವನ್ನು ಆಯಾ ಹಳ್ಳಿಯಲ್ಲೇ ರಚಿಸುವುದಕ್ಕೆ ಸಹಾಯ ಸೌಲಭ್ಯಗಳು ಮತ್ತು ಮಾರ್ಗದರ್ಶನವನ್ನು ಕೊಟ್ಟ ಸಹಕರಿಸುತ್ತದೆ. ಹೀಗೆ ಸ್ಥಾಪಿಸಿದ ಸಂಘಗಳಿವೆ ಸರಕಾರದಿಂದ ಕೆರೆಗಳ ಪುನರುದ್ಧಾರಕ್ಕೆ ಬೇಕಾದ ಧನಸಹಾಯ ಮತ್ತು ತಾಂತ್ರಿಕ ಸೌಲಭ್ಯಗಳನ್ನು ಒದಿಗಿಸುವುದಕ್ಕೆ ಬೆಂಬಲ ನೀಡುತ್ತಿದೆ. ಬಳಕೆದಾರರ ಮತ್ತು ಸರಕಾರದ ನಡುವೆ ನೇರವಾದ ಸಂಬಂಧ ಕಲ್ಪಿಸುವುದಕ್ಕೆ ಮಧ್ಯಸ್ಥಿಕೆಯ ರೂಪದಲ್ಲಿ ಕೆಲಸವನ್ನು ನಿರ್ವಹಿಸುತ್ತಿದೆ.

**ಸಂಘಟನಾ ಕಾರ್ಯಕ್ರಮ**

ರಾಜ್ಯದಲ್ಲಿ ೩೮,೦೦೦ಕ್ಕೂ ಹೆಚ್ಚು ಕೆರೆಗಳು ಇವೆ. ಸರಕಾರದ ನೀತಿಯ ಪ್ರಕಾರ, ಯಾವ ತಾಲ್ಲೂಕಿನಲ್ಲಿ ಹೆಚ್ಚಿನ ಜಲಸಂಕಟ, ಬಡತನ, ಹರಿಜನ ಗಿರಿಜನ ಸಂಖ್ಯೆ, ಸಮಾಜದಲ್ಲಿ ಜಲದ ವಿತರಣೆಯಲ್ಲಿ ಅವ್ಯವಸ್ಥೆ ಇತ್ಯಾದಿಗಳ ಆಧಾರದಲ್ಲಿ ಕೆರೆಯನ್ನು ಗುರುತಿಸಲಾಗುತ್ತದೆ. ಸಹಯೋಗದ ಕಾರ್ಯಕರ್ತರು ಅಂತಹ ಗುರುತಿಸಿದ ಹಳ್ಳಿಗೆ ಹೋಗಿ ಅಲ್ಲೇ ಬಿಡಾರ ಮಾಡಿ, ಕೆರೆಯ ನೀರನ್ನು ಬಳಸುವ ಎಲ್ಲ ಜನರನ್ನು ಸಂಪರ್ಕಿಸಿ ಆ ಗುಂಪಿನ ಸಮಾಜಿರೇಖ ರೂಪವನ್ನು ತಯಾರಿಸುತ್ತಾರೆ. ಈ ರೇಖಾರೂಪದಲ್ಲಿ ಪ್ರತಿಯೊಂದು ಸಂಬಂಧಿಸಿದ ಕುಟುಂಬದ ವ್ಯಕ್ತಿಗಳನ್ನು ಗುರುತಿಸಿ ಆ ಕುಟುಂಬದ ಆರ್ಥಿಕ ಸ್ತರ, ರೈತರೋ, ಮೀನುಗಾರಿಕೆ ಮಾಡುವವರೊ, ಕೂಲಿಗಳೋ, ಕುಂಬಾರರೋ ಹೀಗೆ ಕೆರೆಗಳಿಂದ ಜೀವನೋಪಾಯ ಮಾಡುವವರ ರೇಖಾಚಿತ್ರ ಮಾಡುತ್ತಾನೆ. ನಂತರದ ಹಂತದಲ್ಲಿ ಗಣನೆ ಮಾಡಿ ಜಲದ ಬಳಕೆ ಯಾವ ಯಾವ ರೀತಿಯಲ್ಲಿ ಪ್ರತಿಯೊಬ್ಬರೂ ಮಾಡುತ್ತಾರೆ ಎಂಬುವ ಒಂದು ಪಟ್ಟಿ ತಯಾರಿಸುತ್ತಾರೆ.

ಪಟ್ಟಿ ತಯಾರಿಸಿದ ಮೇಲೆ ಬಳಕೆದಾರರು ಮತ್ತು ಗ್ರಾಮದ ಮುಖಂಡರ ಜೊತೆಗೆ ಮಾತುಕತೆ ನಡೆಸಿ ಬಳಕೆದಾರ ಸಭೆಯನ್ನು ಒಂದು ನಿರ್ದಿಷ್ಟ ದಿನ ಸೇರಿಸುತ್ತಾರೆ. ಆ ಸಭೆಗೆ ಸಹಯೋಗದ ಒಬ್ಬಿಬ್ಬರು ನಿಪುಣರು ಬಂದು ಸೇರಿ ಕೆರೆಯ ಸ್ಥಿತಿ, ಕೊಡಿ, ಕಾಲುವೆ, ಏರಿ ಜಲಸಂಗ್ರಹದ ಕ್ಷೇತ್ರ ಬಗ್ಗೆ ವಿಶದವಾಗಿ ಚರ್ಚೆ ನಡೆಸುತ್ತಾರೆ. ಬಹಳ ಹಿಂದಿನಿಂದಲೂ ಹಳ್ಳಿಯ ಜನರಿಂದಲೇ ಕೆರೆಯ ಜಲನಿರ್ವಹಣೆಯನ್ನು ಅನೌಪಚಾರಿಕ ರೀತಿಯಲ್ಲಿ ಸಂಘಟಿಸಿ ನಡೆಸಿರುತ್ತಾರೆ. ಅನೌಪಚಾರಿಕ ಸಾಂಪ್ರದಾಯಿಹಿಕ ನಿರ್ವಹಣೆಯನ್ನು ಕೂಲಂಕಶವಾಗಿ ಅಧ್ಯಯನ ಮಾಡಿ, ಬಳಕೆದಾರರ ಸಭೆಯಲ್ಲಿ ಚರ್ಚಿಸಲಾಗುವುದು. (ಸಾಂಪ್ರದಾಯಿಕ ಮತ್ತು ಅನೌಪಚಾರಿಕ ಸಂಘಟನೆಯ ಉದಾಹರಣೆ ಹೊಸಪೇಟೆ ತಾಲೂಕಿನ ದೊಣನಾಯಕನ ಕೆರೆಯಲ್ಲಿ ಕಾಣಬಹುದು.) ಚರ್ಚೆಯನಂತರ ವರ್ತಮಾನ ಕಾಲದಲ್ಲಿ ಬೇರೆ ರಾಜ್ಯದಲ್ಲಿ ಮತ್ತು ವಿಶ್ವದ ಕೆಲವು ದೇಶಗಳಲ್ಲಿ ಮೂಡುತ್ತಿವ ಆಧುನಿಕ ಮತ್ತು ಸುಸಂಘಟಿತ ಬಳಕೆದಾರರ ಸಂಘಗಳ ಬಗ್ಗೆ ಚರ್ಚೆ ಮಾಡಲಾಗುವುದು. ಇದಲ್ಲದೆ ಜಲಸಂವರ್ಧನಾ ಸಂಘದ ಅಡಿಯಲ್ಲಿ ರೂಪಿಸಿರುವ ಮಾದರಿ ಸಂಘದ ರೂಪರೇಖೆಯನ್ನು ವಿಸ್ತೃತವಾಗಿ ವಿವರಿಸಿ ಸಭೆಯಲ್ಲಿ ಸೇರಿರುವ ಜನರಿಂದ ಅಭಿಪ್ರಾಯವನ್ನು ಪಡೆದು ಪ್ರಸ್ತುತ ಕೆರೆಯ ಸಂಘದ ರೂಪ ಹೇಗಿರುಬೇಕೆಂದು ಅವರಿಂದಲೇ ಸಮ್ಮತಿ ಪಡೆಯಲಾಗುವುದು. ಎಲ್ಲರ ಒಪ್ಪಿಗೆ ಆದನಂತರ ನವೀನ ಸಂಘವನ್ನು ಓಪಚಾರಿಕ ಘಟಿಸಿ ಸಂಘದ ಕಾರ್ಯಕಾರಿ ಸಮಿತಿಯನ್ನು ಜಲಸಂವರ್ಧನಾ ಸಂಘದ ಮಾದರಿಯಂತೆ ಸ್ಥಾಪಿಸಲಾಗುವುದು. ತದನಂತರ ಈ ಹೊಸ ಸಂಘವನ್ನು ಕರ್ನಾಟಕ ರಾಜ್ಯ ಸಂಘ ಕಾಯಿದೆ ೧೯೬೦ರ ಪ್ರಕಾರ ನೋಂದಣಿ ಮಾಡಲಾಗುವುದು. ಈ ಮೇಲೆ ಹೇಳಿದ ಪ್ರಕ್ರಿಯೆಗೆ ಸುಮಾರು ೧ ವಾರದಿಂದ ೨ವಾರ ಬೇಕಾಗುತ್ತದೆ. ಅವಧಿ ಹೆಚ್ಚು ಕಡಿಮೆ ಆಗಬಹುದು. ಬಳಕೆದಾರರ ಮನೋಗುಣ, ಸ್ವಭಾವ ಮತ್ತು ಸಾಂಪ್ರದಾಯಿಕತೆ ಮತ್ತು ಇತರೇ ಗುಣಗಳ ಮೇಲೆ ಹೆಚ್ಚು ದಿನಗಳು ಬೇಕಾಗಬಹುದು.

**ಸಂಘದಿಂದ ಕೆರೆಯ ಪುನರುದ್ಧಾರ ಮತ್ತು ನಿರ್ವಹಣೆ**

ಸಂಘ ಸ್ಥಾಪನೆ ಮತ್ತು ರಿಜಿಸ್ಟ್ರೀಕರಣವಾದ ಮೇಲೆ ಜಲಸಂವರ್ಧನಾ ಸಂಘ (ಸರಕಾರದಲ್ಲಿ ರಚಿತವಾಗಿರುವ) ಕಾರ್ಯನಿರ್ವಹಕ ಡೈರೆಕ್ಟರ್‌ಗೋ ಅಥವಾ ಡಿಸ್ಟ್ರಿಕ್‌ನ ಡಿ.ಸಿ. ಮುಖಾಂತರ ಜಲಸಂವರ್ಧನಾ ಸಂಘಕ್ಕೆ ಬಳಕೆದಾರರ ಸಂಘದ ಕಾರ್ಯನಿರ್ವಾಹಕ ಸಮಿತಿ ಅಧ್ಯಕ್ಷ ಅಥವಾ ಕಾರ್ಯದರ್ಶಿ, ತಮ್ಮ ಕೆರೆಯ ಪುನರುದ್ಧಾರಕ್ಕೆ ಮತ್ತು ನಿರ್ವಹಣೆ ಮಾಡುವುದಕ್ಕೆ ಹಸ್ತಾಂತರ ಮಾಡಲು ಅಜಿ ಸಲ್ಲಿಸಲಾಗುವುದು. ಸಂಘವು, ಸಂಘದ ಕಾರ್ಯಕರ್ತರು ಮತ್ತು ಸಣ್ಣ ನೀರಾವರಿ ಇಲಾಖೆ ತಂತ್ರಜ್ಞರು ಸೇರಿ, ಜಂಟಿ ಸರ್ವೇಕ್ಷಣ ಮಾಡಿ ಪುನರುದ್ಧಾರ ಕೆಲಸಕ್ಕೆ ತಲಗುವ ಒಟ್ಟು ವಿನಿಯೋಜನೆಯನ್ನು ನಿರ್ಧರಿಸುತ್ತದೆ. ನಿಗದಿಗೊಳಿಸಿದ ಖರ್ಚಿನ ೧೫% ಬಾಬ್ತನ್ನು ವಹಿಸಿಕೊಳ್ಳುವುದಕ್ಕೆ ಸಿದ್ಧರಿದ್ದೇವೆ ಅಂತ ಸಂಘ ವಿಜ್ಞಾಪಿಸಬೇಕು. ಈ ೧೫% ವೆಚ್ಚ ಹಣದಿಂದ ಅಥವಾ ಶ್ರಮದಾನದಿಂದಲೋ, ಅಥವಾ ಸಾಮಾನು ಸರಕುಗಳಿಂದಲೋ ಅಥವಾ ಎಲ್ಲದರ ಮಿಶ್ರವಾಗಿ ವಹಿಸುವುದಕ್ಕೆ ತಯಾರಿರಬಹುದು.

ಮೇಲ್ಕಂಡ ರೀತಿಯಲ್ಲಿ ಸಂಘದಿಂದ ಅರ್ಜಿ ಬಂದರೆ ಜಲ ಸಂವರ್ಧನಾ ಸಂಘವು ನಿರ್ಧಾರಿತ ನೀತಿ ಮತ್ತು ಅನುಕ್ರಮಣಿಕೆ ಮೇರೆ ಪುನರುದ್ಧಾನ ಬಾಬ್ತು ಖರ್ಚಿನ ೮೫% ಮೊಬಗಲನ್ನು ಬಳಕೆದಾರರ ಸಂಘದ ಬ್ಯಾಂಕ್ ಖಾತೆಯಲ್ಲಿ ಸರಕಾರದ ಅನುಮೋದನೆಯ ನಿಯಮಗಳ ಅಡಿಯಲ್ಲಿ ಜಮಾಯಿಸುವುದು. ಈ ರೀತಿಯ ೮೫% ಅನುದಾನ ಕೆರೆಯ ನೀರಾವರಿ ಆಗುವ ಪ್ರತಿ ಹೆಕ್ಟೇರ್‌ಗೆ ರೂ. ೧೫,೦೦೦ ಅಥವಾ ಪ್ರತಿ ಎಕರೆ ರೂ.೬,೦೦೦ ಪ್ರಮಾಣದಂತೆ ಒಟ್ಟು ಪುನರುದ್ಧಾನ ಖರ್ಚಿನ ಸೀಮಿತದಲ್ಲಿರುತ್ತದೆ.

ಸಂಘವು ತನ್ನ ಬ್ಯಾಂಕ್ ಖಾತೆಯಲ್ಲಿ ಸರಕಾರದಿಂದ ಹಣ ಸಹಾಯ ಪಡೆದ ನಂತರ, ಯಾವ ಸುಲಭ ಕೆಲಸಗಳು ಅಂದರೆ ಮಣ್ಣು ಅಗೆಯುವುದು ಕೆರೆ ಅಂಗಳದ ಹೂಳು ಮತ್ತು ನಾಲೆಯಲ್ಲಿರುವ ಹೂಳು ತಮ್ಮ ಶ್ರಮದಾನದಿಂದ ಮಾಡಬಹುದು. ಯಾವ ಯಾವ ಕಾರ್ಯಗಳು ಅಂದರೆ ಇಟ್ಟಿಗೆ ಮತ್ತು ಕಲ್ಲಿನ ಪುನಃ ನಿರ್ಮಾಣ; ತೂಬಿನ ರಿಪೇರಿ, ಕೋಡಿ ರಿಪೇರಿ ಮುಂತಾದವು ತಮ್ಮಿಂದ ಅಸಾಧ್ಯವಾದುದನ್ನು ಠೇಕೇದಾರರಿಂದ ಟೆಂಡರ್ ಮುಖಾಂತರ ಠೇಕೇದಾರನನ್ನು ಚುನಾಯಿಸಿ, ಕೆಲಸ ಕಾರ್ಯಗಳನ್ನು ಪೂರೈಸಬಹುದು. ಇಂತಹ ವಿಶೇಷ ಕಾರ್ಯಗಳಿಗೆ ಸಣ್ಣ ನೀರಾವರಿ ಇಲಾಖೆಯಂತ ತಂತ್ರಜ್ಞಾನ ಸಹಾಯ ಪಡೆದು ನೆರವೇರಿಸಬಹುದು. ಇಲ್ಲದಿದ್ದರೆ ಖಾಸಗಿ

ತಂತ್ರಜ್ಞರನ್ನು ನೇಮಕಾತಿ ಮಾಡಿಕೊಂಡು ವಿಶೇಷ ಕಾರ್ಯಗಳನ್ನು ಪೂರ್ಣಗೊಳಿಸಬಹುದು. ಈ ರೀತಿ ಸರಕಾರಿದ ವಿಭಾಗದ ಮಾಧ್ಯಮಕ್ಕಿಂತ ಕಡಿಮೆ ಖರ್ಚಿನಲ್ಲಿ ಕೆರೆಯ ಪುನರುದ್ಧಾರ ಮಾಡಿಕೊಂಡು, ಕೆರೆಯಿಂದ ಹಿಂದೆ ಯಾವ ರೀತಿ ಲಾಭವಾಗುತ್ತಿತ್ತೊ ಅದನ್ನು ಪುನಃಶ್ಚೇತನಗೊಳಿಸಿ ಎಲ್ಲರಿಗೂ ಲಾಭದಾಯಕವಾಗುವಂತೆ ಬಳಸಬಹುದು.

**ಕೆರೆಯ ಜಲ ವಿತರಣಾಕಾರ್ಯ ಮತ್ತು ಸಂರಕ್ಷಣೆ**

ಕೆರೆಗಳ ಮುಖ್ಯ ಉಪಯೋಗ ಕೃಷಿ ಭೂಮಿಗೆ ನೀರಾವರಿ ಒದಗಿಸಿ ಹೆಚ್ಚು ಹೆಚ್ಚಾಗಿ ಖಾದ್ಯಾನ್ನ ಬೆಳೆಯಲು ಸಹಾಯಕವಾಗುವುದು. ಇದಲ್ಲದೆ ಕುಡಿಯುವ ನೀರು, ಹಳ್ಳಿಯ ರೈತರೇತರ ಜನಗಳಿಗೆ ಅವರ ದುಡಿಮೆ ಅಥವಾ ವ್ಯವಸಾಯ ಅಂದರೆ ಕುಂಬಾರ, ಕುರುಬ, ಮೀನುಗಾರಿಕೆ ಹಳ್ಳಿಯ ಗೃಹ ಕೈಗರಿಕೋದ್ಯಮ ಮತ್ತು ಧಾರ್ಮಿಕ, ಸಾಮಾಜಿಕ ಹಬ್ಬ ಹರಿದಿನಗಳ ಕಾರ್ಯಕ್ಕೆ ಬಳಸಲು ಅವಕಾಶ ಕೊಡುವುದು. ಕೃಷಿ ಸಾಧನಕ್ಕೆ ಬೇಕಾದ ಜಲಕ್ಕಿಂತ, ಹಳ್ಳಿ ಜನರ ಇತರೇ ಕಾರ್ಯಗಳಿಗೆ ಬೇಕಾದ ಜಲದ ಪ್ರಮಾಣ ಬಹುಕಡಿಮೆ. ಆದರೂ, ಕೆರೆಗೆ ನಿಕಟವಾಗಿ ಬಳಸುವ ಪ್ರತಿಯೊಬ್ಬ ವ್ಯಕ್ತಿಗೂ ಕೆರೆಯ ಸಂಬಂಧ ತಲತಲಾಂದಿರದಿಂದ ಬಂದ ಹಕ್ಕಾಗಿರುತ್ತದೆ. ತಾನು ಪಡೆದ ಪ್ರತಿವ್ಯಕ್ತಿಗೂ ಜಲವಿತರಣೆ ಮಾಡುವುದು ಅವಶ್ಯಕ. ಯಾವುದೇ ಆಡಳಿತವಿದ್ದರೂ ಈ ಮುಖ್ಯ ಉದ್ದೇಶವನ್ನು ಪಾಲಿಸಬೇಕು.

ಆದರೆ ಕೆಲವು ಕಾರಣಗಳಿಂದ ಮತ್ತು ಸರಕಾರಿ ಆಡಳಿತದಲ್ಲಿ ಕೆರೆಗಳು ಬಂದಾಗಿನಿಂದ, ಜಲವಿತರಣಾ ವ್ಯವಸ್ಥೆ ಹದಗೆಟ್ಟಿದೆ. ಬಲಿಷ್ಟರು, ಶಕ್ತಿವಂತರು ಮತ್ತೆ ಕೆರೆಯ ಹತ್ತಿರ ಇರುವ ಕೃಷಿಕರು, ಹೆಚ್ಚು ಹೆಚ್ಚು ನೀರನ್ನು ಬಳಸುತ್ತಾ ಬಂದಿದ್ದಾರೆ. ಬಡವರು, ಕೆರೆಯ ಅಚ್ಚುಕಟ್ಟಿನ ಕೊನೆಯಲ್ಲಿರುವವರು ಮತ್ತು ಕೆಳಜಾತಿಯವರು ಜಲದಿಂದ ವಂಚಿತರಾಗಿದ್ದಾರೆ. ಈ ಅವ್ಯವಸ್ಥೆಯಿಂದ ಧನವಂತರು ಹೆಚ್ಚು ಧನಗಳಿಸುತ್ತಿದ್ದಾರೆ ಮತ್ತು ಬಡತನ ಹಳ್ಳಿಗಳಲ್ಲಿ ಜಾಸ್ತಿ ಆಗುತ್ತಿದೆ. ಈ ಪರಿಸ್ಥಿತಿಯನ್ನು ಪರಿವರ್ತಿಸಬೇಕಾದರೆ ಕೆರೆಗಳ ಸುಧಾರಣೆ ಅಥವಾ ಪುನರುದ್ಧಾರದ ಜತೆಗೆ ಹೊಸ ಪದ್ಧತಿಯಲ್ಲಿ ಜಲವಿತರಣೆ ಮಾಡುವುದು ಅವಶ್ಯಕವಾಗಿದೆ. ಯಾವುದಾದರೂ ಹೊಸ ಪದ್ಧತಿಯನ್ನು ಚಾಲನೆಯಲ್ಲಿ ತರಬೇಕಾದಾಗ ಅದಕ್ಕೆ ವ್ಯತಿರಿಕ್ತವಾಗಿ ವರ್ತಮಾನದಲ್ಲಿ ಅನುಚಿತ ಲಾಭ ಪಡೆಯುತ್ತಿರುವ ಮತ್ತು ಶಕ್ತಿಯುತ ಗುಂಪುಗಳು ವಿರೋಧಿಸಲು ಪ್ರಯತ್ನಿಸುವರು. ಸರ್ಕಾರ ತನ್ನ ಕರ್ಮಚಾರಿಗಳಿಂದ ಹೊಸ ಪದ್ಧತಿಯನ್ನು ಅಳವಡಿಸಲು ತಕ್ಕ ಸಾಮರ್ಥ್ಯವನ್ನು ಎಷ್ಟೇ ನಿಯಮಗಳಿದ್ದರೂ ಹೊಂದಿರುವುದಿಲ್ಲ. ಈ ಪರಿಸ್ಥಿತಿ ನಮ್ಮ ರಾಜ್ಯಕ್ಕೇ ವಿಶೇಷವಾಗಿಲ್ಲ. ರಾಷ್ಟ್ರಾದ್ಯಂತಲೂ ಮತ್ತು ಪರದೇಶಗಳಲ್ಲೂ ಈ ಸಮಸ್ಯೆ ಇದೆ.

ಆದ್ದರಿಂದ ನೀರು ಬಳಕೆದಾರರ ಸಂಘಗಳನ್ನು ಸ್ಥಾಪಿಸಿ, ನೀರಾವರಿ ಪಾಲ್ಗೊಳ್ಳುವಿಕೆಯ ಕಾರ್ಯಕ್ರಮಗಳನ್ನು ಕೈಕೊಂಡು ಪರಿಸ್ಥಿತಿಯನ್ನು ಬದಲಾಯಿಸಿ, ಎಲ್ಲ ಬಳಕೆದಾರರಿಗೂ ಜಲ ಅವಶ್ಯಕನಾನುಸಾರವಾಗಿ, ವಿತರಿಸುತ್ತಿದ್ದಾರೆ. ಜನಸಂಖ್ಯೆ ಜಾಸ್ತಿಯಾದಂತೆ ಮತ್ತು ನಿರ್ದಿಷ್ಟವಾದ ಮತ್ತು ಪ್ರದರ್ಶನ ಮತ್ತು ಇತರೇ ಅವಶ್ಯಕತೆಗಳಿಂದ ಅಲ್ಪವಾಗುತ್ತಿರುವ ಜಲವನ್ನು ಹೆಚ್ಚುಗೊಳಿಸಿ ಉತ್ಪನ್ನವನ್ನು ಅಧಿಕಗೊಳಿಸುವುದು ಪಾಲ್ಗೊಳ್ಳುವಿಕೆಯಿಂದ ಸಫಲವಾಗುತ್ತಿದೆ.

ಎರಡು ಸಾವಿರ ಹೆಕ್ಟೇರ್ ವಿಸ್ತೀರ್ಣ ಅಚ್ಚುಕಟ್ಟು ಮತ್ತು ಅದಕ್ಕೂ ಕಡಿಮೆ ಸಾಮರ್ಥ್ಯ ಉಳ್ಳ ನೀರಾವರಿ ಯೋಜನೆಗಳು ಯೋಜನಾ ಆಯೋಗದ ಮಾಪಕದಿಂದ ಸಣ್ಣ ನೀರಾವರಿ ಎಂದು ಪರಿಗಣಿಸಲಾಗಿದೆ. ಇಂತಹ ಯೋಜನೆಗಳ ಪಟ್ಟಿಯಲ್ಲಿ ಕೆರೆಗಳು ಸೇರಲ್ಪಟ್ಟಿವೆ. ವರ್ತಮಾನದಲ್ಲಿ ೨೦೦೦ ha-೪೦-ha ಅಚ್ಚುಕಟ್ಟಿನ ಕೆರೆಗಳು ಸರ್ಕಾರದ ಸಣ್ಣ ನೀರಾವರಿ ಇಲಾಖೆಯ ಅಧೀನದಲ್ಲಿ ಮತ್ತು ಆ ಇಲಾಖೆಯ ಆಡಳಿತದಲ್ಲಿವೆ. ೪೦ ha -ಕ್ಕಿಂತ ಕಡಿಮೆ ಅಚ್ಚುಕಟ್ಟಿನ ಕೆರೆಗಳು ಜಿಲ್ಲಾ ಪಂಚಾಯತ್ ಮತ್ತು ಗ್ರಾಮಪಂಚಾಯತ್‌ನ ಉಸ್ತುವಾರಿಯಲ್ಲಿವೆ.

ಜಲಸಂವರ್ಧನಾ ಯೋಜನಾ ಸಂಘವು, ಕ್ರಮೇಣ, ಎಲ್ಲಾ ಕೆರೆಗಳನ್ನು ಸರ್ಕಾರಿ ಪಂಚಾಯತ್ ವಿಭಾಗಗಳಿಂದ ಹಸ್ತಾಂತರಿಸಿಕೊಂಡು ನೀರು ಬಳಕೆದಾರರ ಸಂಘಗಳನ್ನು ಸ್ಥಾಪಿಸಿ ಕರ್ನಾಟಕ ಸಂಘಗಳ ನಿಯಮಾನುಸಾರ ನೋಂದಾಯಿಸಿ ತಕ್ಕ ಅಧಿಕಾರ ಮತ್ತು ಕೆರೆಗಳ

ಘೋಷಣೆ ಮತ್ತು ನಿರ್ವಹಣೆಕಾರ್ಯವನ್ನು ಸಂಘಗಳಿಗೆ ಹಸ್ತಾಂತರ ಮಾಡುವ ಕಾರ್ಯಕ್ರಮದಲ್ಲಿ ತೊಡಗಿದೆ. ಪೂರ್ಣವಾಗಿ ಹಸ್ತಾಂತರವಾಗುವ ಜಲಾನಯನ ಕ್ಷೇತ್ರ ಅಚ್ಚುಕಟ್ಟು, ಇವೆಲ್ಲವನ್ನು ಪುನರ್ಜೀವಗೊಳಿಸಿ ಸಂಘಗಳ ಪಾಲ್ಗೊಳ್ಳುವಿಕೆ ಕಾರ್ಯಕ್ರಮವನ್ನು ಪೂರ್ತಿ ಮಾಡುತ್ತವೆ.

ಪುನರ್ಜೀವಗೊಂಡ ಕೆರೆಗಳ ಜಲವಿತರಣೆ ಕಾರ್ಯಕ್ರಮಕ್ಕೆ ಸಂಘಗಳು ನಿರ್ದಿಷ್ಟ ನೀತಿ ನಿರ್ಧಾರ ಮಾಡಬೇಕು. ಕೆರೆಯ ಪೂರ್ಣ ಸಂಗ್ರಹಣೆ ಅದರಲ್ಲಿ ಕುಡಿಯುವ ನೀರಿಗೆ ಮತ್ತು ಇತರೇ ಅವಶ್ಯಕತೆಗಳಿಗೆ ಪರಿಮಾಣ ನಿರ್ಧರಿಸಿ, ಆ ಪರಿಮಾಣಕ್ಕೆ ಪ್ರಾಥಮಿಕ ಆದ್ಯತೆ ಕೂಡಬೇಕು. ಸಾಮಾನ್ಯವಾಗಿ ಇದರ ಪರಿಮಾಣ ಕಮ್ಮಿಯೇ ಇರುತ್ತದೆ. ಈ ಪರಿಮಾಣವನ್ನು ಸುರಕ್ಷಿತ ಮಾಡಿ, ಉಳಿದ ಹೆಚ್ಚು ಪರಿಮಾಣವನ್ನು ಕೃಷಿಗೋಸ್ಕರ ಪ್ರತಿ ಬೆಳೆ ಕಾಲ ಪರಿಮಾಣ ನಿರ್ಧರಿಸಬೇಕು. ನಿರ್ಧರಿಸಿದ ಪರಿಮಾಣ ಆಯಾ ಬೆಳೆಗಳ ಕಾಲದಲ್ಲಿ ವಿತರಣೆ ಶಾಖೆಗಳಿಂದ ಅಚ್ಚುಕಟ್ಟಿನ ಕೊನೆಯ ಜಮೀನವರೆಗೆ ಎಲ್ಲೆಲ್ಲಿ ಬೆಳೆಗಳನ್ನು ಕೃಷಿಕರು ಬಿತ್ತಿರುವುದೋ ಅವಶ್ಯಕತಾನುಸಾರವಾಗಿ ತಲುಪುವ ಒಂದು ವಿತರಣಾಕಾರ್ಯದ ರಚನಾಕ್ರಮವನ್ನು ಮುಂಗಡವಾಗಿ ತಯಾರಿಸಿ ಅದರಂತೆ ವಿತರಣೆಯನ್ನು ಮಾಡಬೇಕು. ಈ ವಿತರಣಾ ಕಾರ್ಯದಲ್ಲಿ ರೈತರಿಂದ ಬೆಳೆಕಾಲದ ಮುಂಗಡವಾಗಿ ಯಾವ ಯಾವ ಬೆಳೆ ಯಾರು ಯಾರು ಬಿತ್ತುತ್ತಾರೋ ಅವರಿಂದ ಸಲಹೆ ಪಡೆದು ಜಲಪ್ರಮಾಣದ ಮಟ್ಟಕ್ಕೆ ಅನುಗುಣವಾಗಿ cup pattern ನಿರ್ಧರಿಸಿ, ವಿತರಣಾ ಕಾರ್ಯದಲ್ಲಿ ಅಳವಡಿಸಬೇಕು.

ದೊಡ್ಡ ಕೆರೆಗಳಲ್ಲಿ ಅಂದರೆ ೪೦ haಅಧಿಕವಾಗಿರುವ ಅಚ್ಚು ಕಟ್ಟಿದ್ದರೆ, ಘನಪರಿಮಾಣ ಪ್ರಕಾರ ಪ್ರತಿ ಕೃಷಿಕರಿಗೆ ಹಂಚಬೇಕು. ನೀರಾವರಿಯ ಒಟ್ಟು ಪ್ರಮಾಣದಲ್ಲಿ, ವಿತರಣಾ ಕಾಲುವೆಗಳಲ್ಲಿ ಮತ್ತು ಕೆರೆಯಲ್ಲಿ ವರ್ಷದಲ್ಲಿ ಆಗುವ ಜಲದ ನಷ್ಟಗಳನ್ನು ಗುರುತಿಸಿ ಉಳಿದ ಪರಿಮಾಣವನ್ನು ಪ್ರತಿ ಅಚ್ಚುಕಟ್ಟುದಾರನಿಗೆ ಹಂಚಬೇಕು. ಹಂಚುವ ನೀತಿಯನ್ನು ಎಲ್ಲರ ಸಲಹೆಗಳನ್ನೊಳಗೊಂಡು, ಜಲದ ಪರಿಮಾಣವನ್ನು ಪ್ರತಿ ಬೆಳೆಯುವ ಕಾಲವನ್ನು ಗಣನೆಗೆ ತೆಗೆದುಕೊಂಡು ನಿರ್ಧರಿಸಬೇಕು. ಅದು ಆಯಾ ಕೃಷಿಕನ ಜಲದ ಹಕ್ಕು ಎಂದು ನಿರ್ಧರಿಸಬೇಕು. ಜಲಾಶಯ ಪೂರ್ಣವಾಗದಿದ್ದರೆ ಸರಿಯಾದ (proportional) ಪ್ರಮಾಣದಲ್ಲಿ ಹಂಚಬೇಕು.

ವಿತರಣಾ ಕಾಲುವೆಗಳಲ್ಲಿ ಮುಖ್ಯ ಕಾಲುವೆ ಹೆಬ್ಬಾಗದಿಂದ ಅಲ್ಲಲ್ಲಿ ನೀರು ಅಳೆಯುವುದು ಸುಲಭ. ಗೇಜ್‌ಗಳಲ್ಲಿ ಸ್ಥಾಪಿಸದ್ದಲ್ಲಿ ಹಂಚುವುದಕ್ಕೆ ಅನುಕೂಲವಾಗುತ್ತದೆ. ಕಾಲುವೆಗಳಲ್ಲಿ ಹರಿಯುವ ನೀರು ಹೆಚ್ಚುಕಮ್ಮಿ ಆದಲ್ಲಿ ಆಗಾಗ್ಗೆ ಅಳೆದು ನಿಯಂತ್ರಿಸಬಹುದು. ಈ ಕೆಲಸ ನೀರ ಗಂಟಿಗೆ ಸೇರಿದ್ದು. ಆತನಿಗೆ ತಾಂತ್ರಿಕ ತರಬೇತಿಕೊಟ್ಟು ಹೊಸ ವ್ಯವಸ್ಥೆಯ ಬಗ್ಗೆ ತಿಳುವಳಿಕೆ ಕೊಡಬೇಕು.

ಪ್ರತಿಯೊಬ್ಬ ಕೃಷಕನು ವಿತರಣಾ ಯೋಜನೆಯಲ್ಲಿ ನಿರ್ಧರಿಸಿದ ಪ್ರಮಾಣ ಅವನ ಸರತಿ ಬಂದಾಗ ಮಾತ್ರವೇ ತನ್ನ ಹೊಲಕ್ಕೆ ತಿರುಗಿಸಬೇಕು. ಈ ಪರಿಮಾಣ ಸಣ್ಣಕಾಲುವೆ ಹರಿಯುವ ನಿರ್ದಿಷ್ಟ ಕಾಲಕ್ಕೆ ಅನುಗುಣವಾಗಿ ಹರಿಸಬೇಕು. ಯಾರು ಯಾರಿಗೆ ಯಾವ ಯಾವ ನಿಗದಿಕಾಲವನ್ನು ನಿರ್ಧರಿಸುತ್ತಾರೆ. ಅದೇ ಪ್ರಕಾರ ಪಾಲಿಸಿ ನೀರಾವರಿ ಮಾಡಬಹುದು. ಹೀಗೆ ಒಂದು ತಾಂತ್ರಿಕ ಆಧಾರದ ಮೇಲೆ ನಿರ್ದಿಷ್ಟ ವಿತರಣಾ ಯೋಜನೆ ಪ್ರಕಾರ ಕೆರೆಯ ಜಲ ವಿತರಣೆ ಮಾಡಿದರೆ ಪ್ರತಿಯೊಬ್ಬ ಅಚ್ಚುಕಟ್ಟುದಾರನಿಗೆ ಜಲ ಒದಗುವುದು. ಇದಲ್ಲದೆ ಕೃಷಿ ಉತ್ಪನ್ನವೂ ಜಾಸ್ತಿ ಆಗುವುದು.

ಅಚ್ಚುಕಟ್ಟಿನ ಮಧ್ಯೆ ಮತ್ತು ಕೊನೆಯ ಭಾಗಗಳಲ್ಲಿ ಬಾವಿಗಳು ಇದ್ದರೆ, ಇಲ್ಲದಿದ್ದರೆ ಅಲ್ಲಲ್ಲಿ ಬಾವಿಗಳನ್ನು ಅನುಕೂಲವಾದ ಸ್ಥಳಗಳಲ್ಲಿ ತೋಡಿದರೆ, ಬಾವಿಗಳಿಂದ ನೀರನ್ನು ಪಂಪ್ ಮಾಡಿ ಬೆಳೆಗಳಿಗೆ, ಕೆರೆಯ ನೀರು ಉಪಲಬ್ದವಿಲ್ಲದಿದ್ದಾಗ ಉಣಿಸಬಹುದು. ಇದಲ್ಲದೆ ಸಮಯಕ್ಕೆ ತಕ್ಕ ಹಾಗೆ ಬೆಳೆಗೆ ಬೇಕಾದಾಗ ಪಂಪ್ ಮೂಲಕ ತಕ್ಷಣವೇ ನೀರು ಹಾಯಿಸಲು ಅನುಕೂಲವಾಗುತ್ತದೆ. ಕೆಲವು ವೇಳೆ ಕಾಲುವೆಯ ನೀರು ಬೇರೆ ಬೇರೆ ಹೊಲ, ಗದ್ದೆ ಮತ್ತು ಬೆಳೆಗೆ ಸಮಯೋಚಿತವಾಗಿ ಒದಗಿಸಲು ಸಾಧ್ಯವಾಗುವುದಿಲ್ಲ. ಕಾರಣ ಇತರ ಹೊಲಗದ್ದೆಗಳಿಗೆ ನೀರು ಪೂರೈಕೆ ಆದ ಮೇಲೆ ನೀರು ಮೇಲಿಂದ ಕೆಳಗೆ ಹರಿಯುತ್ತೆ. ಆದ್ದರಿಂದ ಅಲ್ಲಲ್ಲಿ ಭಾವಿಗಳಿದ್ದರೆ, ಈ ಕೊರತೆಯನ್ನು ನಿವಾರಿಸಬಹುದು. ಹೀಗೆ ಕೆರೆಯ ಮತ್ತು ಬಾವಿಯ ನೀರು ಎರಡನ್ನು ಸಮಯೋಚಿತವಾಗಿ ಬಳಸುವುದರಿಂದ ಬೆಳೆಗಳ ಉತ್ಪನ್ನ ಇನ್ನೂ

ಹೆಚ್ಚಿಸಬಹುದು. ಈ ವಿಧಾನಕ್ಕೆ ಭೂಮಿಯ ಮೇಲಿನ ಜಲ ಮತ್ತು ಅಂತರ್ಜಲದ ಜಂಟಿ ಉಪಯೋಗ ಎನ್ನುತ್ತಾರೆ. ಕೆರೆಗಳ ಜಲ ನಿರ್ವಹಣೆ ಹೀಗೆ ಮಾಡಿದರೆ ನೀರಿನ ಸದು ಉಪಯೋಗವಾಗುತ್ತದೆ. ಹೀಗೆ ಮಾಡುವದರಿಂದ ಉತ್ಪನ್ನ ಹೆಚ್ಚಿ ಕೃಷಿಕರ ಬಾಳು ಉನ್ನತ ದರ್ಜೆ ಏರುವುದು ಮತ್ತು ಹಳ್ಳಿಯ ಜೀವನ ಕುಶಲವಾಗುತ್ತದೆ.

ಸಣ್ಣ ಕೆರೆಗಳಲ್ಲಿ ಕೃಷಿಕರ ಸಂಖ್ಯೆ ಕಡಿಮೆ ಇರುವುದರಿಂದ ಜಲದ ಹಂಚಿಕೆಯನ್ನು ಪರಸ್ಪರ ಮೈತ್ರಿ ಮತ್ತು ಸೌಹಾರ್ದದಿಂದ ಪರಿಹರಿಸಿಕೊಳ್ಳಬಹುದು. ಹಿಂದಿನ ವರ್ಷದಲ್ಲಿ ಜಲದ ಹಂಚಿಕೆಯಲ್ಲಿ ಆದ ದೋಷ, ಅತೃಪ್ತಿ ಮತ್ತು ಸಮಾನ ಹಂಚಿಕೆಯಲ್ಲಿ ವಿರೋಧಾಭಾಸಗಳನ್ನು ಅಧ್ಯಯನ ಮಾಡಿ ಸಂಘದ ಆಡಳಿತ ಸಮಿತಿ ಎಲ್ಲರಿಗೂ ಆದಷ್ಟು ಸಮಾನ ಹಂಚಿಕೆ ಆಗುವಂತೆ ವಿಧಾನದಲ್ಲಿ ಬದಲಾವಣೆ ತರಬಹುದು. ಇದು ಸ್ವಲ್ಪ ನಿಧಾನವಾದ ಕೆಲಸ. ಆದರೆ ಅಧ್ಯಯನ ಮಾಡಿ ಉತ್ತಮ ರೀತಿಯಲ್ಲಿ ಆಯಾ ಕೆರೆಯ ಗುಣಕ್ಕೆ ತಕ್ಕಂತೆ ಒಂದು ಸಮಾನ ರೂಪದ ಹಂಚಿಕೆ ಅನುಭವದ ನಿಟ್ಟಿನಲ್ಲಿ ಸೃಷ್ಟಿಸಿ ಎಲ್ಲರಿಗೂ ಹಿತವಾಗುವಂತೆ ಅಳವಡಿಸಿಕೊಳ್ಳಬೇಕು.

**ಸಮಾವೇಶ**

ಕೆರೆಯ ನೀರನ್ನು ಬಳಸುವ ಹಳ್ಳಿಯ ಜನ ಸಮುದಾಯದಲ್ಲಿ ಎಲ್ಲರಿಗೂ ಸಂಘದ ವ್ಯವಹಾರದಲ್ಲಿ ಸಮಾನ ಹಕ್ಕಿರಬೇಕು. ಆಡಳಿತ ಸಮಿತಿಯಲ್ಲಿ ಅಲ್ಪಸಂಖ್ಯಾತರಿಗೆ, ಹಿಂದುಳಿದ ಕೋಮುಗಳಿಗೆ ಮತ್ತು ಅಶಕ್ತ ಗುಂಪಿಗೆ ಪ್ರತಿನಿಧಿತ್ವ ಮತ್ತು ಪ್ರಾಧಾನ್ಯತೆ ಇರಬೇಕು. ಕೆರೆಯಲ್ಲಿ ನೀರು ಬಳಸುವವರು ಹೆಚ್ಚಾಗಿ ಕೃಷಿಕರೆ ಇರುವುದರಿಂದ ಆಡಳಿತ ಸಮಿತಿಯು ಅವರಿಂದ ಜಲಕರವನ್ನು ವಸೂಲಿ ಮಾಡಿ ಸಂಘದ ಆದಾಯಕ್ಕೆ ಸೇರಿಸಬೇಕು. ಇದಲ್ಲದೆ ಕೆರೆಯ ಅಂಗಳದ ಮೀನುಗಾರಿಕೆಯ ಆದಾಯ, ಜಲಾನಯನ ಕ್ಷೇತ್ರದ ವನಸಂಪತ್ತಿನ ಆದಾಯ ಮತ್ತು ಕೆರೆಯಿಂದ ಉಪಯೋಗ ಪಟ್ಟವರಿಂದ ವಸೂಲಿ ಆಗುವ ತೆರಿಗೆ ಎಲ್ಲವೂ ಸಂಘಕ್ಕೆ ಸಂದಬೇಕು. ಹೀಗೆ ಕೆರೆಯ ಸಂಬಂಧಿಸಿದ ಹಣಕಾಸು ವಸೂಲಿಯನ್ನು ಕ್ರೋಢಿಕರಿಸಿ ಕೆರೆಯ ವಾರ್ಷಿಕ ಸಂರಕ್ಷಣೆ, ಪೋಷಣೆ, ಆಗಾಗ್ಗೆ ಹೂಳು ತೆಗೆಯುವುದು, ಕಾಲುವೆಗಳ ಸಂರಕ್ಷಣೆ ಮತ್ತು ಉತ್ತಮಗೊಳಿಸುವುದು, ಇತ್ಯಾದಿಗಳನ್ನು ನಿರ್ವಹಿಸಬೇಕು. ಈ ಎಲ್ಲಾ ಕಾರ್ಯಗಳನ್ನು ಸಂಘವೇ ನಿರ್ಧರಿಸಬೇಕು. ಹೀಗೆ ಆದರೆ ಜನಸಾಮಾನ್ಯರಲ್ಲಿ ಸಾಮೂಹಿಕವಾಗಿ ಕೆರೆಯ ಮೇಲೆ ತಮ್ಮ ಹಕ್ಕು ಮತ್ತು ಒಂದು ವಿಧದ ತನ್ನತನ ನಿಕಟ ಸಂಬಂಧ ಬೆಳೆದು ಹಿಂದಿನ ಕಾಲದಂತೆ ಕಲ್ಪಿಸಿ ಕೆರೆಗಳ ಉತ್ಥಾನ ಸದಾ ಬೆಳೆದು ಬರುತ್ತದೆ. ಇದು ರಾಜ್ಯದ ಹಿತ, ರಾಷ್ಟ್ರದ ಹಿತ.

ರಾಷ್ಟ್ರದ ೭೦% ಜನ ಸಮುದಾಯ ಹಳ್ಳಿಗಳಲ್ಲಿವೆ. ಮತ್ತು ಹಳ್ಳಿಗಳ ಕೆರೆಗಳು ಉಚ್ರಾಯ ಸ್ಥಿತಿಯಲ್ಲಿದ್ದರೆ ಹಳ್ಳಿಯೂ ಪಟ್ಟಣಗಳಂತೆ ಕುಶಲವಾಗಿ ಸಮೃದ್ಧವಾಗಬಲ್ಲದು. ಅಂತಹ ಪರಿಸ್ಥಿತಿ ಈಗ ಕಾಣುವಂತೆ ಪಟ್ಟಣದ ಕಡೆಗೆ ಜನಾಂಗದ ಓಟ ಕಡಿಮೆ ಆಗಿ ಒಂದು ಸಂತುಲನದೆಡೆಗೆ ರಾಷ್ಟ್ರ ಹೆಜ್ಜೆ ಇಡಬಹುದು. ಸಂತುಲನವಿದ್ದರೆ ಶಾಂತಿ ಇರುತ್ತದೆ. ಕೆರೆಯ ನಿರ್ವಹಣೆ ಜಲಪ್ರಬಂಧ ಎಷ್ಟು ಸಾಮಾಜಿಕ ತತ್ವವಿದೆಯೋ ಅದನ್ನು ಸಮರ್ಥ್ಯದಿಂದ ಪೋಷಿಸಬೇಕಾದರೆ ಅಷ್ಟೆ ತಾಂತ್ರಿಕ ತತ್ವಗಳೂ ಅಳವಡಿಸಿ ನೀರು ಬಳಕೆದಾರರ ಸಂಘಗಳ ಕಾರ್ಯಕರ್ತರಿಗೂ ಮತ್ತು ಸದಸ್ಯರ ಜ್ಞಾನವೃದ್ಧಿಗೋಸ್ಕರ ಒಂದು ಕೆರೆಯ ನಿರ್ವಹಣೆಗೆ ಅನುಕೂಲವಿರುವಂತೆ ಒಂದು ಕೈಪಿಡಿಯನ್ನು ತಯಾರಿಸಿದೆ. ಸಂಘಗಳಿಂದ ಕೆರೆಗಳ ಸಂರಕ್ಷಣೆ ಮತ್ತು ಎಲ್ಲರಿಗೂ ತೃಪ್ತಿಕರ ಜಲವಿತರಣೆ ಮಾಡಲು ಸಕ್ಷಮತೆ ಬರಬೇಕಾದರೆ ಸರಕಾರದ ತಾಂತ್ರಿಕ ವಿಭಾಗವು ಸಂಘಗಳಿಗೆ ಸಹಾಯಕವಾಗಿರಬೇಕು. ಪ್ರತಿ ವಿಭಾಗ ಮತ್ತು ಕರ್ಮಚಾರಿಗಳು ಸಲಹಾಕಾರರಂತೆ ಕೆಲಸ ಮಾಡಬೇಕು. ಸಂರಕ್ಷಣ ಕಾರ್ಯದಲ್ಲಿ ಅತ್ಯಂತ ಖರ್ಚಿನ ಕೆಲಸವಿದ್ದರೆ ಸರಕಾರ ಹಣ ಸಹಾಯ ಮಾಡಿ ಅನುಕೂಲ ಮಾಡಿ ಕೊಡಬೇಕು. ನೀರು ಬಳಕೆದಾರರ ಸಂಘಗಳು ಸಫಲವಾಗಿ ಕಾರ್ಯ ನಿರ್ಧರಿಸುವುದಕ್ಕೆ ಸರಕಾ ಸದಾ ತಯಾರಿರಬೇಕು. ಆಗಲೇ ಸರಿಯಾದ ಪಾಲ್ಗೊಳ್ಳುವಿಕೆ ಅರ್ಥವತ್ತಾಗಿರುತ್ತದೆ ಮತ್ತು ಸಕಲರಿಗೂ ಲಾಭದಾಯಕವಾಗಿರುತ್ತದೆ. ಜಲವಿದ್ದರೆ ಜೀವ, ಜೀವ ಇದ್ದರೆ ಜನಜೀವನ. ಹಳ್ಳಿ ಜನರು "ನಮ್ಮ ಕೆರೆ ನಮ್ಮ ಹಕ್ಕು" ಎನ್ನುವುದನ್ನು ಸಾಧಿಸಬೇಕು. ಆಗಲೇ ಕೆರೆಗಳು ಜನ್ಮಜನ್ಮಾಂತರಕ್ಕೂ ಮುಂಬರುವ ಪೀಳಿಗೆಗಳಿಗೆ ಉಳಿಯಲು ಸಾಧ್ಯ.

# ಕೆರೆ ಪಂಚಾಯತಿ ಕಾಯಿದೆ – ೧೯೧೧*

ಭಾರಿ ಕೆರೆಗಳ ನಿರ್ವಹಣೆ ಮತ್ತು ಸಣ್ಣಕೆರೆಗಳ ಜೀರ್ಣೋದ್ಧಾರ, ದುರಸ್ತಿ ಹಾಗೂ ನಿರ್ವಹಣೆಗಳನ್ನು ರೈತರು ಸಮರ್ಪಕವಾಗಿ ನಡೆಸಲು ಅನುಕೂಲವಾಗುವಂತೆ ಕೆರೆಗಳ ಮೇಲಿನ ಹತೋಟಿ ಹಾಗೂ ಅವುಗಳ ಜೀರ್ಣೋದ್ಧಾರ, ದುರಸ್ತಿ ಹಾಗೂ ನಿರ್ವಹಣೆಗಳಿಗೆ ಮೀಸಲಿಟ್ಟ ಹಣಕಾಸು ಇವುಗಳ ಜವಾಬ್ದಾರಿ ಹೊತ್ತ ಪಂಚಾಯತಿಗಳನ್ನು ರಚಿಸುವ ಉದ್ದೇಶದಿಂದ ಘನತೆವೆತ್ತ ಮಹಾರಾಜರು ಕೆಳಕಂಡ ಕಾಯಿದೆ ರೂಪಿಸಿದ್ದಾರೆ.

೧ (ಅ) ಈ ಕಾಯಿದೆಯನ್ನು "ಕೆರೆ ಪಂಚಾಯತಿ ಕಾಯಿದೆ – ೧೯೧೧" ಎಂದು ಕರೆಯಬಹುದು.

(ಆ) ಇದರ ಕಾರ್ಯವ್ಯಾಪ್ತಿಯ ಬಳ್ಳಾರಿ ಜಿಲ್ಲೆಯನ್ನು ಹೊರತುಪಡಿಸಿ ಮೈಸೂರು ಸಂಸ್ಥಾನವನ್ನು ಒಳಗೊಂಡಿದೆ.

(ಇ) ಈ ಕಾಯಿದೆಯು ಫೆಬ್ರವರಿ ೬, ೧೯೧೧ರಂದು ಜಾರಿಗೆ ಬರುತ್ತದೆ.

೨. ವಿಷಯ ಅಥವಾ ಸಂದರ್ಭಕ್ಕೆ ವ್ಯತಿರಿಕ್ತವಾದ ಪ್ರಸಂಗವನ್ನು ಬಿಟ್ಟು ಉಳಿದಂತೆ ಈ ಕಾಯಿದೆ ಪ್ರಕಾರ

(ಅ) "ಕೆರೆ" ಎಂದರೆ ನೀರಾವರಿ ಕೆರೆ ಎಂದು ಅರ್ಥ. ಕೆರೆ ಎಂಬುದು ಅಣೆಕಟ್ಟು, ವಡ್ಡು ಮತ್ತು ಕೆರೆಗಳಿಂದ ನೀರು ಪಡೆಯುವ ಕಾಲುವೆಗಳನ್ನು ಒಳಗೊಂಡಿರುತ್ತದೆ.

(ಆ) "ಭಾರಿ ಕೆರೆ" ಎಂದರೆ ಯಾವ ಕೆರೆಯ ಅಚ್ಚುಕಟ್ಟು ಪ್ರದೇಶದ ವಾರ್ಷಿಕ ಕಂದಾಯವು ರೂ.೩೦೦ ಮೀರುತ್ತದೊ ಮತ್ತು ಸರ್ಕಾರವು ಕಾಲಕಾಲಕ್ಕೆ ಯಾವುದನ್ನು ಬಾರಿ ಕೆರೆಯೆಂದು ಘೋಷಿಸಿ ಪ್ರಕಟಣೆ ಹೊರಡಿಸುತ್ತದೋ ಅವು ಎಂದು ಅರ್ಥ.

ಉಳಿದ ಎಲ್ಲ ಕೆರೆಗಳು "ಸಣ್ಣ ಕೆರೆಗಳು"

(ಇ) "ನಿರ್ಮಾಣ"ವೆಂದರೆ ಹೊಸಕೆರೆಯನ್ನು ಕಟ್ಟುವುದು ಎಂದು ಅರ್ಥ.

(ಈ) "ಜೀರ್ಣೋದ್ಧಾರ" ವೆಂದರೆ ಅಲಕ್ಷ್ಯದಿಂದ, ಅಪಘಾತದಿಂದ ಅಥವಾ ಇನ್ನಾವುದೇ ಕಾರಣಗಳಿಂದ ಹಾಳಾದ ಅಥವಾ ದುರ್ಬಲಗೊಂಡ ಅಥವಾ ಉಪಯೋಗಿಸಲು ಸಾಧ್ಯವಿಲ್ಲದಂತಾದ ಕೆರೆಗಳನ್ನು ಸರಿಪಡಿಸಿ ಅದರ ಕಾರ್ಯಕ್ಷಮತೆಯನ್ನು ಮರುಸ್ಥಾಪಿಸುವುದು ಎಂದು ಅರ್ಥ.

(ಉ) "ಸುಧಾರಣೆ" ಎಂದರೆ ನೀರಾವರಿ ಉದ್ಧೇಶಕ್ಕೆ ಹೆಚ್ಚಾಗಿ ಉಪಯುಕ್ತವಾಗುವಂತೆ ಅಥವಾ ನೀರಾವರಿಗೆ ಅಧಿಕ ನೀರು ಒದಗುವಂತೆ ಕೆರೆಯ ಸಾಮರ್ಥ್ಯವನ್ನು ಹೆಚ್ಚಿಸುವ ಕೆಲಸ ಮಾಡುವುದು ಎಂದು ಅರ್ಥ.

(ಊ) "ನಿರ್ವಹಣೆ" ಎಂದರೆ ಕೆರೆಯು ನಿರ್ಮಾಣವಾದ ಸಂದರ್ಭದಲ್ಲಿ ನಿಗದಿಪಡಿಸಿದ್ದ ಅದರ ಭದ್ರತೆಯ ಗುಣಮಟ್ಟವನ್ನು ಕಾಯ್ದುಕೊಳ್ಳುವುದು, ಜೀರ್ಣೋದ್ಧಾರ ಮಾಡುವುದು ಅಥವಾ ಸುಧಾರಣೆಗೆ ಅಗತ್ಯವಾದ ಲಘು ದುರಸ್ತಿ ಕಾರ್ಯ ನಡೆಸುವುದು ಎಂದು ಅರ್ಥ ಮತ್ತು ಇದು ಕೆಳಕಂಡ ಸಂಗತಿಗಳನ್ನು ಒಳಗೊಂಡಿರುತ್ತದೆ.

(i) ನಿರ್ದಿಷ್ಟ ಗುಣಮಟ್ಟದಲ್ಲಿ ಕೆರೆಯ ಏರಿಯನ್ನು ಕಾಯ್ದುಕೊಳ್ಳುವುದು, ಏರಿಯ ಇಳುಕಲು, ಎತ್ತರ ಮತ್ತು ಕಾರ್ಯನಿರ್ವಹಣಾ ಅಭಿಯಂತರರು ಹಾಗೂ ಜಿಲ್ಲಾಧಿಕಾರಿಗಳು ನಿರ್ದಿಷ್ಟ ಪಡಿಸಿದ ರೀತಿಯಲ್ಲಿ ಏರಿಯ ಸ್ಥಿತಿಗತಿಗಳನ್ನು ಸಂರಕ್ಷಿಸುವುದು,

(ii) ಮಳೆಯಿಂದ, ದನಗಳ ತಿರುಗಾಟದಿಂದ ಅಥವಾ ಇನ್ನಾವುದೇ ಕಾರಣದಿಂದ ಏರಿಯಲ್ಲಿ ಹಾಗೂ ಕಾಲುವೆಗಳಲ್ಲಿ ಉಂಟಾಗುವ ತಗ್ಗುಗಳನ್ನು ಮತ್ತು ಕೊರಕಲುಗಳನ್ನು ತುಂಬುವುದು,

(iii) ಮುಳ್ಳಿನ ಗಿಡ, ಮುಳ್ಳಿನ ಪೊದೆ ಮತ್ತು ಅದೇ ರೀತಿಯ ಇನ್ನಾವುದೇ ವಿನಾಶಕಾರಿ ಕಳೆ ಏರಿಯ ಮೇಲೆ ಬೆಳೆಯದಂತೆ ತಡೆಯುವುದು,

(iv) ಕೆರೆಯ ಏರಿಗೆ ದಕ್ಕೆ ಉಂಟು ಮಾಡಬಲ್ಲ ಸಣ್ಣ-ಪುಟ್ಟ ಗಿಡ-ಮರಗಳನ್ನು ತೆಗೆದು ಹಾಕುವುದು,

(v) ನೀರಾವರಿ ಜಮೀನುಗಳಿಗೆ ಸಮರ್ಪಕವಾಗಿ ನೀರು ಹರಿದು ಹೋಗುವಂತೆ ಕಾಲುವೆಗಳಲ್ಲಿ ಹಾಗೂ ತೂಬುಗಳಲ್ಲಿ ತುಂಬಿಕೊಂಡಿರುವ ಹೂಳು, ಮಣ್ಣು, ಕಸ ತೆಗೆದು ಸರಿಪಡಿಸುವುದು.

(vi) ಕೆರೆಯ ಕಾಲುವೆಗಳನ್ನು ನೀರು ಸರಾಗವಾಗಿ ಹರಿಯುವಂತೆ ಮಾಡುವುದು,

(vii) ಮಳೆಗಾಲದಲ್ಲಿ ಕೆರೆಗಳ ಏರಿಗಳ ಮೇಲೆ ನಿಗಾ ಇಡುವುದು, ಗಾಳಿ-ಮಳೆಯಿಂದ ಏರಿಯ ಮೇಲೆ ಉಂಟಾಗುವ ತಗ್ಗು-ಕೊರಕಲುಗಳನ್ನು ತುಂಬುವುದು. ತೂಬಿನ ಬಾಗಿಲುಗಳನ್ನು ತೆಗೆಯಲು ಹಾಗೂ ಮುಚ್ಚಲು ನೆರವಾಗುವುದು ಮತ್ತು ಕೆರೆಯ ಏರಿ ಒಡೆದು ಹೋಗದಂತೆ ಅಥವಾ ಇನ್ನಾವುದೇ ಅಪಘಾತ ನಡೆಯದಂತೆ ಜಾಗ್ರತೆ ವಹಿಸುವುದು.

(ಋ) "ಹಳ್ಳಿ" ಎಂದರೆ ಕೆರೆ ಪಂಚಾಯತಿ ಕಾರ್ಯವ್ಯಾಪ್ತಿಯಲ್ಲಿ ಬರುವ ಹಳ್ಳಿಗಳ ಗುಂಪು ಅಥವಾ ನಿರ್ದಿಷ್ಟ ಭೂ ಪ್ರದೇಶವೆಂದು ಅರ್ಥ.

(ಋ) "ಸಾಂಪ್ರದಾಯಿಕ ಜವಾಬ್ದಾರಿ" ಎಂದರೆ ೧೮೭೩, ಅಕ್ಟೋಬರ್ ೨ ರಂದು ಮೈಸೂರಿನ ಪ್ರಧಾನ ಆಯುಕ್ತರು ಹೊರಡಿಸಿದ ಸಂಖ್ಯೆ ೬೫ರ ಪ್ರಕಟಣೆಯಲ್ಲಿ ಮತ್ತು ಅಲ್ಲಿಂದ ಮುಂದೆ ೧೯೦೪ರ ಡಿಸೆಂಬರ್ ೧೫ರಂದು ಸಂಖ್ಯೆ ೫೨೬೨ರ ಪ್ರಕಟಣೆಗಳಲ್ಲಿ ಸೇರಿಸುವ ಎಲ್ಲಾ ಜಬಾಬ್ದಾರಿಗಳು ಎಂದು ತಿಳಿಯಬೇಕು.

(ಎ) "ಪಟೇಲ ಮತ್ತು ಶಾನುಭೋಗ" ಎಂದರೆ ಹಳ್ಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪಟೇಲ ಮತ್ತು ಶಾನುಭೋಗರೆಂದು ಮತ್ತು ಪಟೇಲ ಮತ್ತು ಶಾನುಭೋಗರ ಸಂಖ್ಯೆ ಹಳ್ಳಿಯೊಂದರಲ್ಲಿ ಒಂದಕ್ಕಿಂತ ಅಧಿಕವಿದ್ದರೆ ಜಿಲ್ಲಾಧಿಕಾರಿಗಳು ಸದರಿ ಕಾಯಿದೆ ಉದ್ಧೇಶಕ್ಕಾಗಿ ಆಯ್ಕೆ ಮಾಡುವ ಪಟೇಲ ಮತ್ತು ಶಾನುಭೋಗ ಎಂದು ಅರ್ಥ.

೩. ಯಾವುದೇ ಹಳ್ಳಿಗೆ ಸಂಬಂಧಿಸಿದಂತೆ ಸರ್ಕಾರವು ಅಗತ್ಯವೆಂದು ಪರಿಗಣಿಸಿದರೆ ಮತ್ತು ಸದರಿ ಕೆರೆ ಅಚ್ಚುಕಟ್ಟು ಪ್ರದೇಶದಲ್ಲಿರುವ ಸಾಗುವಳಿ ಪ್ರದೇಶದಲ್ಲಿ ಅರ್ಧದಷ್ಟು ಪ್ರದೇಶದ ಎರಡನೇ ಮೂರರಷ್ಟು ರೈತರು ಬಯಸಿದರೆ ಸರ್ಕಾರವು ಪಟೇಲ ಮತ್ತು ಶಾನುಭೋಗರನ್ನು ಒಳಗೊಂಡಂತೆ ಇಲ್ಲಿ ನಿರ್ದೇಶಿಸಿರುವ ರೀತಿಯಲ್ಲಿ ರೈತರಿಂದ ಚುನಾಯಿತರಾದ ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಸದಸ್ಯರುಗಳಿಂದ ಕೂಡಿದ ಪಂಚಾಯತಿಯೊಂದನ್ನು ರಚಿಸಬಹುದು.

೪. ಪ್ರಕರಣ-೫ರಲ್ಲಿ ನಿರ್ದಿಷ್ಟ ಅನರ್ಹತೆಗಳನ್ನು ಬಿಟ್ಟು, ಉಳಿದಂತೆ ಯಾವ ರೈತ

(ಅ) ಗ್ರಾಮದಲ್ಲಿ ಖುಷ್ಕಿ ಅಥವಾ ಬಾಗಾಯತು ಜಮೀನಿಗೆ ರೂ. ೨೦ಕ್ಕಿಂತ ಹೆಚ್ಚು ಕಂದಾಯ ಸಲ್ಲಿಸುತ್ತಿದ್ದಾರೋ

(ಆ) ಗ್ರಾಮದಲ್ಲಿ ತರಿ ಜಮೀನಿಗೆ ರೂ. ೧೦ಕ್ಕಿಂತ ಕಡಿಮೆಯಿಲ್ಲದಂತೆ ಕಂದಾಯ ಕಟ್ಟುತ್ತಿದ್ದಾರೋ

(ಇ) ಹಳ್ಳಿಯಲ್ಲಿ ರೂ. ೫ಕ್ಕಿಂತ ಕಡಿಮೆಯಿಲ್ಲದಂತೆ ಮೋಹತರ್ಫಾ ತೆರಿಗೆ ಕಟ್ಟುತ್ತಿದ್ದಾರೋ

(ಈ) ಒಟ್ಟಾರೆ ರೂ. ೨೫ ಕಂದಾಯ ಸಲ್ಲಿಸುತ್ತಿದ್ದಾರೋ

ಅವರು ಪಂಚಾಯತಿಗೆ ಚುನಾಯಿತರಾಗಲು ಅರ್ಹರಾಗಿರುತ್ತಾರೆ ಮತ್ತು ಸರ್ಕಾರವು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಣೆ ನೀಡಿ ಸ್ಥಳೀಯ ಪ್ರದೇಶದಲ್ಲಿ ಕಂದಾಯ ಅಥವಾ ಮೊಹತರ್ಫಾ ತೆರಿಗೆಯ ಮೊತ್ತವನ್ನು ಕಡಿತಗೊಳಿಸಿದೆ ಇದ್ದ ಪಕ್ಷದಲ್ಲಿ ಯಾರು ಖುಷ್ಕಿ, ತರಿ ಅಥವಾ ಬಾಗಾಯತು ಇನಾಂಭೂಮಿ ಪಡೆದಿರುತ್ತಾರೋ, ಸರ್ವೆ ಮೂಲಕ ನಿಗದಿ ಪಡಿಸಿದ ಕಂದಾಯ ಮೌಲ್ಯವು ಮೇಲೆ ವರ್ಗೀಕರಿಸಿರುವ (ಅ) ಮತ್ತು (ಆ)ವರ್ಗದ ಭೂಮಿಯ ಕಂದಾಯಕ್ಕಿಂತ ಕಡಿಮೆಯಿಲ್ಲದಂತೆ ಭೂಮಿ ಪಡೆದಿದ್ದಾರೋ ಅಥವಾ ಇನಾಂ ಭೂಮಿಯ ಸರ್ವೇ ಮೌಲ್ಯ ಮತ್ತು ಮೊಹತರ್ಫಾ ತೆರಿಗೆಗಳ ಒಟ್ಟು ಮೊತ್ತ ರೂ.೨೫ಕ್ಕಿಂತ ಕಡಿಮೆಯಿರುವುದಿಲ್ಲವೋ ಅಂತಹ ರೈತರು ಪಂಚಾಯತಿಗೆ ಚುನಾಯಿತರಾಗಲು ಅರ್ಹರಾಗಿರುತ್ತಾರೆ.

೫. ಪಂಚಾಯತಿ ಸದಸ್ಯರಾಗಿ ಚುನಾಯಿತರಾಗಲು ಅನರ್ಹರೆಂದು ಜಿಲ್ಲಾಧಿಕಾರಿಯವರ ಆದೇಶವನ್ನು ಪ್ರಶ್ನಿಸಿ ಸರ್ಕಾರಕ್ಕೆ ಕೆಳಕಂಡ (ಅ) ಮತ್ತು (ಆ) ಗಳಿಗೆ ಸಂಬಂಧಿಸಿದಂತೆ ಅಪೀಲು ಮಾಡಿದ ಸಂದರ್ಭವನ್ನು ಹೊರತುಪಡಿಸಿ,

(ಅ) ಕ್ರಿಮಿನಲ್ ನ್ಯಾಯಾಲಯವು ಅಪರಾಧಿಯೆಂದು ಶಿಕ್ಷೆ ನೀಡಿದ ಸಂದರ್ಭದಲ್ಲಿ ಅವರು ಪಂಚಾಯತಿಯಲ್ಲಿ ಅಧಿಕಾರ ಸ್ಥಾನಕ್ಕೆ ಅನರ್ಹನೆಂದು ಜಿಲ್ಲಾಧಿಕಾರಿ ಘೋಷಿಸಿದಾಗ, ಅಂತವರು

(ಆ) ಜಿಲ್ಲಾಧಿಕಾರಿಯ ತಿಳುವಳಿಕೆ ಪ್ರಕಾರ ಅಧಿಕಾರ ಸ್ಥಾನದ ಜವಾಬುದಾರಿಗಳನ್ನು ನಿರ್ವಹಿಸಲು ಶಾರೀರಿಕ ಮತ್ತು ಬೌದ್ಧಿಕ ಸಾಮರ್ಥ್ಯವಿಲ್ಲದವರು,

(ಇ) ೨೧ ವರ್ಷ ವಯಸ್ಸು ತುಂಬದವರು

(ಈ) ಪುರುಷರಲ್ಲದವರು

ಪಂಚಾಯತಿ ಸದಸ್ಯರಾಗಲು ಚುನಾವಣೆಗೆ ನಿಲ್ಲಲು ಅರ್ಹರಾಗಿರುವುದಿಲ್ಲ.

೬. ಕೆರೆ ಪಂಚಾಯತಿಯ ಚುನಾಯಿತ ಸದಸ್ಯರ ಸಂಖ್ಯೆಯನ್ನು ಜಿಲ್ಲಾಧಿಕಾರಿ ನಿರ್ಧರಿಸುತ್ತಾರೆ. ಹೀಗೆ ನಿಗದಿಪಡಿಸುವ ಸದಸ್ಯರಲ್ಲಿ ಒಂದನೇ ನಾಲ್ಕರಷ್ಟು ಖುಷ್ಕಿ ಮತ್ತು ಬಾಗಾಯಿತು ಜಮೀನುಗಳಿಲ್ಲದೆ ಕೇವಲ ತರಿ ಜಮೀನು ಹೊಂದಿದ ಅಥವಾ ಮೊಹತರ್ಫಾ ತೆರಿಗೆ ನೀಡುವವರಿರಬೇಕು. ಉಳಿದ ಸದಸ್ಯರುಗಳು ತರಿ ಜಮೀನು ಇರಲಿ ಅಥವಾ ಇಲ್ಲದಿರಲಿ ಖುಷ್ಕಿ ಮತ್ತು ಬಾಗಾಯಿತು ಜಮೀನು ಹೊಂದಿರುವ ರೈತರು ಇರುತ್ತಾರೆ.

೭.(ಅ) ಕೆರೆ ಪಂಚಾಯತಿಯ ರಚನೆ ಹಾಗೂ ಅದರ ಸದಸ್ಯರುಗಳ ಹೆಸರುಗಳನ್ನು ಅಧಿಕೃತ ಗೆಜೆಟಿನಲ್ಲಿ ಪ್ರಕಟಿಸಬೇಕು.

(ಆ) ಕೆರೆ ಪಂಚಾಯತಿಯ ಚುನಾಯಿತ ಸದಸ್ಯರ ಅಧಿಕಾರಾವಧಿ ಮೂರು ವರ್ಷಗಳು.

೮. (ಅ) ಪಂಚಾಯತಿಯ ಸದಸ್ಯರು ಅಪರಾಧವೆಸೆಗಿದಾಗ ಅಥವಾ ತಮ್ಮ ಸ್ಥಾನಕ್ಕೆ ಕುಂದು ಬರುವಂತೆ ನಡೆದುಕೊಂಡಾಗ ಅಥವಾ ಜವಾಬುದಾರಿ ನಿರ್ವಹಿಸಲು ಅಸಮರ್ಥರೆಂದು ಕಂಡು ಬಂದಾಗ, ಕೆರೆ ಪಂಚಾಯತಿಯ ಶಿಫಾರಸ್ಸಿನ ಮೇರೆಗೆ ಜಿಲ್ಲಾಧಿಕಾರಿಯು ಅಂತಹ ಪಂಚಾಯತಿ ಸದಸ್ಯನನ್ನು ಸದಸ್ಯತ್ವದಿಂದ ತೆಗೆದು ಹಾಕಬಹುದು.

(ಆ) ಪಂಚಾಯತಿಯ ಚುನಾಯಿತ ಸದಸ್ಯನು ಸಾವಿಗೀಡಾದರೆ, ರಾಜೀನಾಮೆ ನೀಡಿದರೆ, ಅನರ್ಹರಾದರೆ, ಅಸಮರ್ಥನೆಂದು ಸಿದ್ಧವಾದರೆ ಅಥವಾ ಅಧಿಕಾರಾವಧಿ ಮುಗಿಯುವ ಮೊದಲೆ ಸದಸ್ಯತ್ವ ಕಳೆದುಕೊಂಡ ಪರಿಣಾಮವಾಗಿ ಪಂಚಾಯತಿಯಲ್ಲಿ ತೆರವಾಗುವ ಸ್ಥಾನವನ್ನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಚುನಾವಣೆ ಅಥವಾ ನೇಮಕಾತಿ ಮೂಲಕ ಸ್ಥಾನ ಕಳೆದುಕೊಂಡ ಸದಸ್ಯನ ಉಳಿದ ಅಧಿಕಾರಾವಧಿಗೆ ಅಥವಾ ಸ್ಥಾನಕಳೆದುಕೊಂಡ ಸದಸ್ಯನ ಅಧಿಕಾರಾವಧಿ ಎಲ್ಲಿಯವರೆಗೆ ಇರುತ್ತಿತ್ತೋ ಅಲ್ಲಿಯವರೆಗೆ, ತುಂಬಬೇಕು.

೯. ಪಟೇಲನು ಕೆರೆ ಪಂಚಾಯತಿ ಅಧ್ಯಕ್ಷನಾಗಿರುತ್ತಾನೆ ಮತ್ತು ಕೆರೆ ಪಂಚಾಯತಿ ಪರವಾಗಿ ಎಲ್ಲ ವ್ಯವಹಾರಗಳನ್ನು ನಡೆಸುತ್ತಾನೆ.

೧೦. (i) ಕೆಳಕಂಡ ಮೂಲಗಳಿಂದ ಸಂಗ್ರಹವಾದ ಕೆರೆ ನಿಧಿಯ ನಿಯಂತ್ರಣದ ಅಧಿಕಾರ ಪಂಚಾಯತಿಗಿರುತ್ತದೆ.

(ಅ) ಪ್ರಕರಣ-೧೨ರ ಪ್ರಕಾರ ರೈತರಿಂದ ಸಂಗ್ರಹಿಸಿದ ಮೊತ್ತ
(ಆ) ಗೇಣಿ ಅಥವಾ ಉತ್ಪತ್ತಿಯಲ್ಲಿನ ಪಾಲು ಅಥವಾ ಪ್ರಕರಣ-೧೩ರ ಪ್ರಕಾರ ಮಾರಾಟದಿಂದ ಬಂದ ವರಮಾನ
(ಇ) ಕೆರೆ ನಿಧಿಗೆ ಕಾಲಕಾಲಕ್ಕೆ ನೀರಾವರಿ ಸೆಸ್ ನಿಧಿಯಿಂದ ಬರುವ ಅನುದಾನ
(ಈ) ಸರ್ಕಾರವು ಕೆರೆ ನಿಧಿಗೆ ನೀಡುವ ಇತರೆ ಯಾವುದಾದರೂ ಕೊಡುಗೆ
(ಉ) ಪ್ರಕರಣ-೧೬ರ ಪ್ರಕಾರ ಕಲ್ಲು-ಮಣ್ಣು ಕಾಮಗಾರಿ ನಡೆಸಲು ಪಂಚಾಯತಿಗೆ ಸರ್ಕಾರವು ನೀಡುವ ಮುಂಗಡ
(ಊ) ಕಾಯಿದೆಯಲ್ಲಿ ನಿರ್ಧರಿಸಿರುವ ಉದ್ದೇಶಗಳು ಸಾಧಿಸುವುದಕ್ಕಾಗಿ ಪಂಚಾಯತಿಗೆ ಸರ್ಕಾರವು ನೀಡುವ ಯಾವುದೇ ಸಾಲ.
(ii) ಈ ನಿಧಿಯನ್ನು ಸರ್ಕಾರದ ಉಳಿತಾಯ ಬ್ಯಾಂಕಿನ ಖಾತೆಯಲ್ಲಿ ಠೇವಣಿ ಇಡಬೇಕು ಅಥವಾ ಜಿಲ್ಲಾಧಿಕಾರಿ ಶಿಫಾರಸ್ಸು ಮಾಡಿದ ಕೃಷಿ ಬ್ಯಾಂಕ್ ಅಥವಾ ಸಹಕಾರಿ ಸೊಸೈಟಿ ಖಾತೆಗಳಲ್ಲಿ ಠೇವಣಿ ಇಡಬೇಕು. ಈ ನಿಧಿಯು ಭಾರಿ ಕೆರೆ ಮತ್ತು ಸಣ್ಣ ಕೆರೆಗಳ ನಿರ್ವಹಣೆ ಮತ್ತು ಸಂರಕ್ಷಣೆ ಕಾಮಗಾರಿ ಕೈಗೊಳ್ಳಲು ಪಂಚಾಯತಿಗೆ ದೊರೆಯುವಂತಿರಬೇಕು. ಪ್ರಕರಣ -೧೬ರ ಅಡಿಯಲ್ಲಿ ಪಂಚಾಯತಿಗೆ ಒಪ್ಪಿಸಿರುವ ಸಣ್ಣ ಕೆರೆಗಳ ನಿರ್ಮಾಣ, ಜೀರ್ಣೋದ್ಧಾರ ಅಥವಾ ಸುಧಾರಣಾ ಕಾಮಗಾರಿ ಕೈಗೊಳ್ಳಲು, ವಿಶೇಷ ಕಾರಣಗಳಿಂದ ಉಂಟಾಗುವ ಕೆಲಸಗಳನ್ನು ನಿರ್ವಹಿಸಲು ಅದು ದೊರೆಯುವಂತಿರಬೇಕು.

೧೧. ಸರ್ಕಾರವು ಗ್ರಾಮದ ಕೆರೆ ಅಥವಾ ಕೆರೆಗಳನ್ನು ಪಂಚಾಯತಿಯ ವ್ಯಾಪ್ತಿಯಿಂದ ಹೊರಗಿಟ್ಟ ಸಂದರ್ಭವನ್ನು ಬಿಟ್ಟು ಉಳಿದಂತೆ ಪ್ರಕರಣ-೩ರಂತೆ ಅಸ್ತಿತ್ವಕ್ಕೆ ಬಂದ ಪಂಚಾಯತಿಯು ಗ್ರಾಮದ ಕೆರೆಗಳ ನಿರ್ವಹಣೆ ಮತ್ತು ಸಂರಕ್ಷಣೆ ಕಾರ್ಯಗಳನ್ನು ಸಾಂಪ್ರದಾಯಿಕ ಜವಾಬುದಾರಿಯೆಂದು ತಿಳಿದು ರೈತರು ನಿಭಾಯಿಸುವಂತೆ ನೋಡಿಕೊಳ್ಳಬೇಕು.

೧೨. (i) ಕೆರೆಯ/ಕೆರೆಗಳ ನಿರ್ವಹಣೆ ಮತ್ತು ಸಂರಕ್ಷಣೆ ಕಾಮಗಾರಿ ಖರ್ಚು ತನ್ನ ಕಾರ್ಯ ವ್ಯಾಪ್ತಿಯಲ್ಲಿರುವ ರೈತರಿಗೆ ಅವರವರ ಹೊಣೆಗೆ ಅನುಗುಣವಾಗಿ ವಿಧಿಸುವ ಅಧಿಕಾರ ಪಂಚಾಯತಿಗೆ ಇರುತ್ತದೆ.
(ii) ರೈತನೊಬ್ಬ ಅವನಿಗೆ ವಹಿಸಿಕೊಟ್ಟ ಕಾಮಗಾರಿಯನ್ನು ನಡೆಸಲು ಸಾಧ್ಯವಾಗದಿದ್ದಾಗ ಅಥವಾ ವಹಿಸಿದ ಕಾಮಗಾರಿಗೆ ಸಂಬಂಧಿಸಿದ ಶ್ರಮಕ್ಕೆ ಪರ್ಯಾಯವಾಗಿ ಹಣವನ್ನು ನೀಡಲು ಅಪೇಕ್ಷಿಸಿದಾಗ ಪಂಚಾಯತಿಯು ತನ್ನ ನಿಧಿಯಿಂದ ಸಂಬಂಧಿಸಿದ ಕಾಮಗಾರಿಯನ್ನು ಪೂರ್ಣಗೊಳಿಸಿ ಸದರಿ ಕಾಮಗಾರಿಗೆ ತಗುಲಿದ ಖರ್ಚನ್ನು ಸಂಬಂಧಿಸಿದ ರೈತನಿಂದ ವಸೂಲು ಮಾಡಿಕೊಳ್ಳಬೇಕು.

(iii) ಮೇಲಿನ ಉಪಪ್ರಕರಣದಲ್ಲಿ ವಿಷದ ಪಡಿಸಿರುವಂತೆ ರೈತರಿಂದ ಹಣವನ್ನು ವಸೂಲಿ ಮಾಡುವಾಗ ಪಂಚಾಯತಿಗೆ ನಿರ್ದಿಷ್ಟ ಪಡಿಸಿದ ಶ್ರಮಕ್ಕೆ ಸಂಬಂಧಿಸಿದಂತೆ ದಿನಗೂಲಿಯನ್ನು ಸರ್ಕಾರವು ನಿಗದಿಪಡಿಸಿದ ಕನಿಷ್ಟ ಮತ್ತು ಗರಿಷ್ಟ ವ್ಯಾಪ್ತಿಯೊಳಗೆ ನಿರ್ಧರಿಸುವ ಅಧಿಕಾರವಿರುತ್ತದೆ.

೧೩. (i) ಕೆರೆ ಪಂಚಾಯತಿಗೆ

(ಅ) ತನ್ನ ವ್ಯಾಪ್ತಿಯಲ್ಲಿರುವ ಕೆರೆಗಳಲ್ಲಿ ಮೀನುಗಾರಿಕೆ ನಡೆಸುವ ಹಕ್ಕನ್ನು,
(ಆ) ಕೆರೆಯ ಮೇಲೆ ಬೆಳೆದ ಹುಲ್ಲನ್ನು ಕಟಾವು ಮಾಡಿಕೊಳ್ಳುವ ಹಕ್ಕನ್ನು ಮತ್ತು ದನಗಳನ್ನು ಮೇಯಲು ಕೆರೆ ಅಂಗಳಕ್ಕೆ ಬಿಡುವ ಹಕ್ಕನ್ನು
(ಇ) ಕೆರೆ ಮತ್ತು ಏರಿಯಲ್ಲಿ ಇರುವ ಮರಗಳಿಂದ ಬರುವ ಉತ್ಪತ್ತಿಯನ್ನು ಸಂಗ್ರಹಿಸಿಕೊಳ್ಳುವ ಹಕ್ಕನ್ನು ಮಾರಾಟ ಮಾಡುವ ಅಧಿಕಾರವಿರುತ್ತದೆ.

(ii) ಜಿಲ್ಲಾಧಿಕಾರಿಯು ಯಾವುದೇ ಹಂಗಾಮಿನಲ್ಲಿ ಕೆರೆಯ ಅಂಗಳವನ್ನು ಸಾಗುವಳಿ ಮಾಡುವುದನ್ನು ನಿಷೇಧಿಸದೆ ಇದ್ದ ಪಕ್ಷದಲ್ಲಿ ತಾತ್ಕಾಲಿಕವಾಗಿ ಗೇಣಿ ಅಥವಾ ಉತ್ಪನ್ನದ ಒಂದು ಭಾಗ ನೀಡುವ ಕರಾರಿನ ಮೇಲೆ ಕೆರೆ ಅಂಗಳದಲ್ಲಿ ಶೀಘ್ರವಾಗಿ ಬೆಳೆಯುವ ಬೆಳೆಯನ್ನು ಸಾಗುವಳಿ ಮಾಡಲು ಅನುಮತಿ ನೀಡುವ ಅಧಿಕಾರ ಪಂಚಾಯತಿಗಿರುತ್ತದೆ.

೧೪. ನೀರಾವರಿ ಉದ್ದೇಶವನ್ನು ಕುರಿತಂತೆ ತನ್ನ ವ್ಯಾಪ್ತಿಯಲ್ಲಿರುವ ಕೆರೆಗಳಿಗೆ ಸಂಬಂಧಿಸಿದಂತೆ

(ಅ) ನೀರನ್ನು ಸಾಗುವಳಿ ಮಾಡಲು ಕೆರೆಯಿಂದ ಕಾಲುವೆಗೆ ಯಾವ ದಿನಾಂಕದಿಂದ ಬಿಡಲಾಗುವುದು ಎಂಬುದನ್ನು ನಿರ್ಧರಿಸುವ
(ಆ) ನೀರನ್ನು ಸಾಗುವಳಿಗೆ ಎಷ್ಟು ಕಾಲಾವಧಿಗೆ ಬಿಡಲಾಗುತ್ತದೆ ಎಂಬುದನ್ನು ನಿರ್ಧರಿಸುವ
(ಇ) ಕೆರೆಯಿಂದ ಕಾಲುವೆಗೆ ಬಿಡುವ ನೀರಿನ ಪ್ರಮಾಣವನ್ನು ನಿರ್ಧರಿಸುವ ಅಧಿಕಾರ ಪಂಚಾಯತಿಗೆ ಇರುತ್ತದೆ.

೧೫. (i) ಸರ್ಕಾರದಿಂದ ಅಧಿಕಾರ ಪಡೆದುಕೊಂಡ ಕೆರೆ ಪಂಚಾಯತಿಯು ಯಾವುದೇ ಸಾಲಿನಲ್ಲಿ ಲಭ್ಯವಿರುವ ನೀರಿನ ಪ್ರಮಾಣವನ್ನು ಪರಿಗಣಿಸಿ

(ಅ) ಕೆರೆಯ ಅಚ್ಚುಕಟ್ಟಿನಲ್ಲಿ ಖುಷ್ಕಿ ಅಥವಾ ತರಿ ಅಥವಾ ಅರೆ ತರಿ ಬೆಳೆಗಳನ್ನು ಸಾಗುವಳಿ ಮಾಡುವ ಪ್ರದೇಶದ ವಿಸ್ತೀರ್ಣವನ್ನು ನಿರ್ಧರಿಸಬೇಕು ಮತ್ತು ನೀರಾವರಿಗೆ ಒದಗಿಸುವ ನೀರಿನ ಪೂರೈಕೆಯನ್ನು ನಿಯಂತ್ರಿಸಬೇಕು.
(ಆ) ಕೆರೆಯ ತೂಬಿಗೆ ಹತ್ತಿರವಿರುವ ಜಮೀನನ್ನು ಆಯ್ಕೆ ಮಾಡಿ ಅದನ್ನು ಒಂದು ಕ್ಷೇತ್ರವನ್ನಾಗಿ ಮಾಡಿ, ಯಾರು ತಯಾರಿದ್ದಾರೋ ಅಂತಹ ರೈತರಿಗೆ ಗೇಣಿ ಅಥವಾ ವಾರ್ಷಿಕ ಉತ್ಪತ್ತಿಯ ಒಂದು ಭಾಗವನ್ನು ಪಂಚಾಯತಿಯು ಆಯ್ಕೆ ಮಾಡಿರುವ ಜಮೀನಿನ ಮಾಲೀಕರಿಗೆ ಅಥವಾ ಮಾಲೀಕರುಗಳಿಗೆ ನೀಡುವ ಕರಾರಿನ ಮೇಲೆ ಕಬ್ಬು ಬೆಳೆಯಲು ನೀಡಬೇಕು.

(ii) ಮೇಲಿನ ಉಪ-ಪ್ರಕರಣ-೧ರಲ್ಲಿ ದತ್ತವಾಗಿರುವ ಅಧಿಕಾರವನ್ನು ಹೊರತುಪಡಿಸಿ ಉಳಿದಂತೆ ಎರಡನೇ ಮೂರರಷ್ಟು ರೈತರ ಮತ್ತು ಅಚ್ಚುಕಟ್ಟಿನ ಎರಡನೇ ಮೂರರಷ್ಟು ಖುಷ್ಕಿ ಸಾಗುವಳಿದಾರರ ಒಪ್ಪಿಗೆ ಇಲ್ಲದೆ ಯಾವುದೇ ಹೆಚ್ಚಿನ ಅಧಿಕಾರ ತನ್ನ ವ್ಯಾಪ್ತಿಯಲ್ಲಿರುವ ಕೆರೆಯ ಮೇಲೆ ಕೆರೆ ಪಂಚಾಯತಿಗೆ ಇರುವುದಿಲ್ಲ.
(iii) ಒಂದು ವೇಳೆ ಉಪ ಪ್ರಕರಣ-೧ರ(ಅ)ಭಾಗದಲ್ಲಿ ತಿಳಿಸಿರುವಂತೆ ಖುಷ್ಕಿ ಕಂದಾಯ ನಿಗದಿಪಡಿಸಿರುವ ಜಮೀನಿಗೆ ನೀರಾವಳಿ ಬೆಳೆ ಬೆಳೆಯಲು ಕ್ರಮವಾಗಿ ನೀರು ಪೂರೈಕೆಯಾಗದಿದ್ದರೆ ಅಂತಹ ಸಾಗುವಳಿದಾರರು ತಮ್ಮ ಭೂಮಿಯ ಒಟ್ಟು ಕಂದಾಯದ ಅರ್ಧ ಭಾಗಕ್ಕೆ ವಿನಾಯಿತಿ ಪಡೆಯುತ್ತಾರೆ.

೧೬. (i) ೧೯೨೩ರ ಕಾಯಿದೆ ೨೫ರಂತೆ ಸಣ್ಣ ಕೆರೆಯ ಜೀರ್ಣೋದ್ಧಾರದ ಕೆಲಸವನ್ನು ಸರ್ಕಾರವು ಮಂಜೂರು ಮಾಡಿದಾಗ ಕೆರೆ ಪಂಚಾಯತಿ ಅಥವಾ ಗ್ರಾಮಪಂಚಾಯತಿ ಕಾಯಿದೆ-೧೯೨೬ರ ಪ್ರಕಾರ ಅಧಿಕಾರ ಪಡೆದಿರುವ ಗ್ರಾಮಪಂಚಾಯತಿಯು ನಿಯಮಾನುಸಾರ ಕೈಗೊಳ್ಳಬೇಕು.

(ii) ಕೆರೆ ಪಂಚಾಯತಿ ಅಥವಾ ೧೯೨೬ರ ಗ್ರಾಮ ಪಂಚಾಯತಿ ಕಾಯಿದೆಯ ಪ್ರಕರಣ ೨೩ರ ಪ್ರಕಾರ ತನಗೆ ವಹಿಸಿರುವ ಜೀರ್ಣೋದ್ಧಾರ ಕಾಮಗಾರಿಯನ್ನು ಸರ್ಕಾರವು ನಿರ್ದಿಷ್ಟಪಡಿಸಿರುವ ನಿಬಂಧನೆ ಹಾಗೂ ಕಟ್ಟಡ ಸೂಚನೆಗಳಿಗೆ ಅನುಗುಣವಾಗಿ ನಿಗದಿಪಡಿಸಿರುವ ಕಾಲಾವಧಿಯಲ್ಲಿ ಮಾಡಿ ಮುಗಿಸಬೇಕು.

೧೭. ಈ ಕಾಯಿದೆ ಪ್ರಕರಣ-೧೦ರ ಪ್ರಕಾರ ಕೆರೆ ನಿಧಿಗೆ ರೈತರಿಗೆ ಬರಬೇಕಾದ ತೆರಿಗೆ-ಕಂದಾಯಗಳನ್ನು ರೈತರು ಪಾವತಿ ಮಾಡಲು ತಪ್ಪಿದಾಗ, ಜಿಲ್ಲಾಧಿಕಾರಿಯು ಪಂಚಾಯತಿಯ ಅರ್ಜಿಯನ್ನು ಪರಿಗಣಿಸಿ ಕಂದಾಯ ಬಾಕಿಯೆಂದು ಪರಿಗಣಿಸಿ, ಸದರಿ ಮೊತ್ತವನ್ನು ಸಂಬಂಧಿಸಿದ ರೈತರಿಂದ ವಸೂಲು ಮಾಡಬೇಕು.

೧೮. ಸರ್ಕಾರದ ಅಭಿಪ್ರಾಯದಲ್ಲಿ ೧೯೨೬ರ ಗ್ರಾಮ ಪಂಚಾಯತಿ ಕಾಯಿದೆಯ ಪ್ರಕರಣ-೨೩ರ ಪ್ರಕಾರ ರಚಿಸಿರುವ ಗ್ರಾಮ ಪಂಚಾಯತಿ ಅಥವಾ ಕೆರೆ ಪಂಚಾಯತಿಯು ತನಗೆ ವಹಿಸಿರುವ ಕಾರ್ಯ ನಿರ್ವಹಿಸುವಲ್ಲಿ ಅಸಮರ್ಥವೆಂದು, ಅಥವಾ ಕಾಯಿದೆಯಲ್ಲಿ ದತ್ತವಾಗಿರುವ ಅಥವಾ ಅದಕ್ಕೆ ವಹಿಸಿಕೊಡಲಾಗಿರುವ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ವಿಫಲಗೊಂಡಾಗ ಅಥವಾ ತನಗೆ ದತ್ತವಾದ ಅಧಿಕಾರದ ಮಿತಿಯನ್ನು ಮೀರಿದಾಗ ಅಥವಾ ತನಗೆ ದತ್ತವಾದ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಾಗ ಅಂತಹ ಕೆರೆ ಪಂಚಾಯತಿಯನ್ನು ಸಕಾರಣ ನೀಡಿ ಗೆಜೆಟಿನಲ್ಲಿ ಪ್ರಕಟಣೆ ನಿಡುವುದರ ಮೂಲಕ ರದ್ದು ಪಡಿಸಬಹುದು.

(ಆ) ಕೆರೆ ಪಂಚಾಯತಿಯನ್ನು ರದ್ದು ಪಡಿಸಿದಾಗ ಅಥವಾ ಗ್ರಾಮ ಪಂಚಾಯತಿಯ ಅಧಿಕಾರವನ್ನು ರದ್ದು ಪಡಿಸಿದಾಗ, ಅವುಗಳಿಗೆ ಸಂಬಂಧಿಸಿದ ಹಣಕಾಸು ನಿಧಿಯ ಜಬಾಬು ದಾರಿಯನ್ನು ಜಿಲ್ಲಾಧಿಕಾರಿ ವಹಿಸಿಕೊಳ್ಳಬೇಕು ಮತ್ತು ಕೆರೆ ಪಂಚಾಯತಿ ಅಥವಾ ಗ್ರಾಮಪಂಚಾಯತಿ ಇದ್ದಿದ್ದರೆ ಹೇಗೆ ರೈತರ ಸಾಂಪ್ರದಾಯಿಕ ಕರ್ತವ್ಯಗಳು ನೇರವೇರುವಂತೆ ಮಾಡುತ್ತಿದ್ದವೊ ಅದೇ ರೀತಿ ರೈತರು ತಮ್ಮ ಸಾಂಪ್ರದಾಯಿಕ ಕರ್ತವ್ಯಗಳನ್ನು ಪಾಲಿಸುವಂತೆ ಜಿಲ್ಲಾಧಿಕಾರಿ ನೋಡಿಕೊಳ್ಳಬೇಕು ಹಾಗೂ ಪಂಚಾಯತಿ ಇದ್ದಿದ್ದರೆ ಹೇಗೆ ಬಳಸಲಾಗುತ್ತಿತ್ತೋ ಅದೇ ರೀತಿ ಪ್ರಕರಣ-೧೦ರಲ್ಲಿ ನಿಯಮಗೊಳಸಿರುವಂತೆ ಹಣಕಾಸು ನಿಧಿಯನ್ನು ಬಳಸಬೇಕು. ರದ್ದುಗೊಳಿಸಿದ ಕೆರೆ ಪಂಚಾಯತಿ ಅಥವಾ ಅಧಿಕಾರವನ್ನು ಕಳೆದುಕೊಂಡಿರುವ ಗ್ರಾಮ ಪಂಚಾಯತಿಗೆ ಸಂಬಂಧಿಸಿದಂತೆ, ಸರ್ಕಾರವು ಸೂಕ್ತವೆಂದು ಭಾವಿಸಿದಾಗ ಕೆರೆ ಪಂಚಾಯತಿಯನ್ನು ಪುನಾರಚಿಸಬಹುದು ಅಥವಾ ಗ್ರಾಮ ಪಂಚಾಯತಿಗೆ ಅಧಿಕಾರವನ್ನು ವಾಪಸ್ಸು ನೀಡಬಹುದು.

೧೯. ಈ ಕಾಯಿದೆಯಿಂದಾಗಿ ಕೆರೆಗಳ ಜೀರ್ಣೋದ್ಧಾರ, ದುರಸ್ತಿ ಹಾಗೂ ನಿರ್ವಹಣೆಗಳಿಗೆ ಸಂಬಂಧಿಸಿದಂತೆ ಇನ್ನಾವುದೇ ಕಾಯಿದೆ, ನಿಯಮ, ಆದೇಶ ಅಥವಾ ಶಾಸನ ಬಲವುಳ್ಳ ಸಾಂಪ್ರದಾಯಿಕ ಕರ್ತವ್ಯಗಳಿಂದ ರೈತರಿಗೆ ವಿನಾಯತಿ ದೊರೆಯುವುದಿಲ್ಲ.

೨೦. ಈ ಕಾಯಿದೆಯ ಪ್ರಕರಣಗಳ ವ್ಯಾಪ್ತಿಯಲ್ಲಿ ಸದುದ್ಧೇಶದಿಂದ ಕೆರೆ ಪಂಚಾಯತಿ ಮಾಡಿದ ಕಾರ್ಯ ಅಥವಾ ಕಾರ್ಯ ಮಾಡುವಂತಗೆ ನೀಡಿದ ಆದೇಶ ಕುರಿತಂತೆ ಕೆರೆ ಪಂಚಾಯತಿ ಸದಸ್ಯರ ಮೇಲೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುವಂತಿಲ್ಲ.

೨೧. (i) ಸರ್ಕಾರವು ಇಡೀ ರಾಜ್ಯಕ್ಕೆ ಅಥವಾ ರಾಜ್ಯದ ಕೆಲವು ಭಾಗಕ್ಕೆ (ಬಳ್ಳಾರಿ ಜಿಲ್ಲೆ ಬಿಟ್ಟು ಉಳಿದ ಮೈಸೂರು ರಾಜ್ಯ) ಅಥವಾ ಪಂಚಾಯತಿ ಅಥವಾ ಪಂಚಾಯತಿಗಳದ ಗುಂಪಿಗೆ ಸಂಬಂಧಿಸಿದಂತೆದ ಕಾಯಿದೆಯನ್ನು ಜಾರಿಗೊಳಿಸುವ ಉದ್ದೇಶದಿಂದ ನಿಯಮಗಳನ್ನು ರೂಪಿಸುವ ಅಧಿಕಾರ ಪಡೆದಿರುತ್ತದೆ.

(ii) ಮೇಲೆ ತಿಳಿಸಿರುವ ಅಧಿಕಾರಕ್ಕೆ ಯಾವುದೇ ವ್ಯತ್ಯಯ ಬಾರದಂತೆ ಕೆಳಕಂಡ ನಿಯಮಗಳನ್ನು ಸರ್ಕಾರ ರೂಪಿಸಬಹುದು. (ಅ) ಪ್ರಕರಣ ೬, ೧೫ ಮತ್ತು ೧೬ಗಳಿಗೆ ಸಿದ್ಧಪಡಿಸುವುದು ಹಾಗೂ ಪ್ರಕರಣ-೪ ಮತ್ತು ೫ರಂತೆ ಪಂಚಾಯತಿ ಚುನಾವಣೆಗೆ ಸ್ಪರ್ಧಿಸಲು ಅರ್ಹರಾದ ವ್ಯಕ್ತಿಗಳ ಪಟ್ಟಿಯನ್ನು ಸಿದ್ಧಪಡಿಸುವುದು.

(ಆ) ಮತದಾರರ ಸಭೆಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ನಿಗದಿಪಡಿಸುವುದು.
(ಇ) ಪಂಚಾಯತಿ ಸಭೆಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ನಿಗದಿಪಡಿಸುವುದು.
(ಈ) ಪಂಚಾಯತಿಯ ಹಣಕಾಸು ವ್ಯವಹಾರಗಳ ಲೆಕ್ಕ ಹಾಗೂ ಲೆಕ್ಕದ ಪುಸ್ತಕಗಳನ್ನು ಇಡುವುದಕ್ಕೆ ಸಂಬಂಧಿಸಿದಂತೆ ಹಾಗೂ ಹಣಕಾಸು ವ್ಯವಹಾರದ ಆಡಿಟ್ ಮಾಡಿಸುವ ಬಗ್ಗೆ ಕ್ರಮಗಳನ್ನು ನಿಗದಿಪಡಿಸುವುದು.
(ಉ) ಪಂಚಾಯತಿಯು ಸಲ್ಲಿಸಬೇಕಾದ ಹಣಕಾಸು ಲೆಕ್ಕ, ವರಮಾನದ ವಿವರ ಮತ್ತು ವರದಿಗಳ ಪಟ್ಟಿ ಮಾಡುವದು,
(ಊ) ಪಂಚಾಯತಿಯು ತನ್ನ ಬಾಕಿಯನ್ನು ವಸೂಲು ಮಾಡಲು ಕ್ರಮಗಳನ್ನು ನಿಗದಿಪಡಿಸುವುದು.

ಅನುವಾದ:**ಟಿ ಆರ್ ಚಂದ್ರಶೇಖರ****
*ಮೂಲ : ಮೈಸೂರು ಮಹಾರಾಜರ ಮೈಸೂರು ಕಾಯಿದೆ ಸಂಖ್ಯೆ-೧, ೧೯೧೧
**ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ

## ಕೆರೆ ನೀರಾವರಿ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವ – ಸಾಧ್ಯತೆಗಳು

(೧)

ಕೆರೆ ನೀರಾವರಿ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವದ ಸಾಧ್ಯತೆಗಳನ್ನು ಗುರುತಿಸುವುದು ಈ ಲೇಖನದ ಉದ್ದೇಶ. ಸಹಭಾಗಿತ್ವದ ಪ್ರಶ್ನೆ ಯಾಕೆ ಹುಟ್ಟಿಕೊಂಡಿತು ಎನ್ನುವುದರ ವಿವರಣೆಯೊಂದಿಗೆ ಪ್ರಬಂಧ ಆರಂಭವಾಗುತ್ತದೆ. ನಂತರದ ಪುಟಗಳಲ್ಲಿ ಸಹಭಾಗಿತ್ವ ಅಂದರೇನು? ಅರ್ಥಪೂರ್ಣ ಸಹಭಾಗಿತ್ವದ ವ್ಯಾಖ್ಯಾನದೊಳಗೆ ಸೇರುವ ಅಂಶಗಳೇನು? ಇತ್ಯಾದಿಗಳ ಸಂಕ್ಷಿಪ್ತ ವಿವರ ಇದೆ. ಅಧ್ಯಯನದ ಉದ್ದೇಶ, ವಿಧಾನ ಇತ್ಯಾದಿಗಳ ಕುರಿತು ಕಿರು ಪರಿಚಯದ ನಂತರ ಕ್ಷೇತ್ರಕಾರ್ಯದಿಂದ ಬಂದ ಮಾಹಿತಿಯ ವಿಶ್ಲೇಷಣೆಯನ್ನು ಕೊಟ್ಟಿದ್ದೇನೆ. ಕೆಲವು ವಾಕ್ಯಗಳಲ್ಲಿ ಲೇಖನದ ಮಿತಿಯನ್ನು ವಿವರಿಸಿ ಮುಂದುವರಿಯುತ್ತೇನೆ. ಇದೊಂದು ಪೂರ್ಣ ಪ್ರಮಾಣದ ಅಧ್ಯಯನವಲ್ಲ. ವಿಜಯನಗರ ಕಾಲದ ಕೆವಲು ಕೆರೆಗಳ ನೀರು ಬಳಕೆದಾರರನ್ನು ಭೇಟಿಯಾಗಿ ಮಾಹಿತಿ ಸಂಗ್ರಹಿಸಲಾಗಿದೆ. ಮಾಹಿತಿ ಕೂಡ ಸಹಭಾಗಿತ್ವದ ಪ್ರಾಥಮಿಕ ವಿವರಗಳನ್ನು ನೀಡುವ ರೀತಿಯಲ್ಲಿದೆ. ಕೆರೆ ನೀರಾವರಿ ನಿರ್ವಹಣೆ ಮತ್ತು ಅದರ ತಾಂತ್ರಿಕತೆ ಕುರಿತು ಮಾಹಿತಿ ಕಡಿಮೆ ಇದೆ. ಅಧ್ಯಯನದ ಉದ್ದೇಶಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಇತರ ಅಧ್ಯಯನ ಸಂದರ್ಭದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಲೇಖನ ಸಾಕಷ್ಟು ಬಳಸಿದೆ. ಇದು ಲೇಖನದ ಮಿತಿಯೂ ಆಗಬಹುದು ಅಥವಾ ಶಕ್ತಿಯೂ ಆಗಬಹುದು. ಆದರು ಒಂದು ಶಿಸ್ತುಬದ್ಧ ಅಧ್ಯಯನದ ದೃಷ್ಟಿಯಿಂದ ಇದನ್ನೊಂದು ಮಿತಿಯೆಂದೇ ಪರಿಗಣಿಸುವುದು ಉಚಿತ. ಹಾಗಾಗಿ ಇಲ್ಲಿ ಬರುವ ತೀರ್ಮಾನಗಳನ್ನು ಕೆರೆ ನೀರಾವರಿ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವದ ಸಮಸ್ಯೆಗೆ ಪರಿಹಾರವಾಗಲಿಕ್ಕಿಲ್ಲ. ಹೆಚ್ಚೆಂದರೆ ಅವು ಆ ಸಮಸ್ಯೆಗಳನ್ನು ಇನ್ನೂ ಹೆಚ್ಚು ಸಮಸ್ಯೀಕರಿಸಬಹುದು.

**ತಾತ್ವಿಕ ಹಿನ್ನೆಲೆ**

ಪ್ರಸ್ತಾವನೆಯಲ್ಲಿ ಚರ್ಚಿಸಿದ ಕೆಲ ವಿಚಾರಗಳನ್ನು ಇಲ್ಲಿ ಪುನಃ ನೆನಪಿಸಲಾಗುವುದು. ಜನರ ಸಹಭಾಗಿತ್ವದ ಚರ್ಚೆ ಇಂದು ಬಲಗೊಳ್ಳುವುದರ ಹಿಂದೆ ಅಂತರಾಷ್ಟ್ರೀಯ ಮತ್ತು ಆಂತರಿಕ ಕಾರಣಗಳಿವೆ. ಒಂದು ಕಾಲದಲ್ಲಿ ಬಂಡವಾಳದ ವಿಸ್ತರಣೆ (ಆಧುನೀಕರಣ) ಮತ್ತು ಸಾಂಪ್ರದಾಯಿಕ ಸಮುದಾಯ ಬದುಕು ಪರಸ್ಪರ ವಿರುದ್ಧ ಎನ್ನುವ ವಿವರಣೆ ಚಾಲ್ತಿಯಲ್ಲಿತ್ತು. ಆದರೆ ನಂತರದ ದಿನಗಳಲ್ಲಿ, ಮುಖ್ಯವಾಗಿ ಅಭಿವೃದ್ಧಿಶೀಲ ದೇಶಗಳಲ್ಲಿ ನಡೆದ ಆಧುನೀಕರಣವನ್ನು ಆಧರಿಸಿ ಬಂಡವಾಳ ಮತ್ತು ಸಮುದಾಯ ಬದುಕಿನ ಬಗ್ಗೆ ಹೊಸ ಥಿಯರಿಗಳು ಬಂದವು. ಅವುಗಳ ಪ್ರಕಾರ ಬಂಡವಾಳದ ವಿಸ್ತರಣೆ ಮತ್ತು ಸಾಂಪ್ರದಾಯಿಕ ಸಮುದಾಯ ಬದುಕು ಪರಸ್ಪರ ವಿರುದ್ಧ ಆಗಬೇಕಿಲ್ಲ; ಪೂರಕವೂ ಆಗಬಹುದು. ಈ ಬದಲಾವಣೆ ಎರಡು ರೀತಿಯ ಬೆಳವಣಿಗೆಗಳನ್ನು ಆಧರಿಸಿವೆ. ಒಂದು, ಆಧುನೀಕರಣದ ನಡುವೆಯೂ ಸಾಂಪ್ರದಾಯಿಕ ಸಮುದಾಯಗಳು ಸಣ್ಣ ಪುಟ್ಟ ಪರಿವರ್ತನೆಗಳನ್ನು ಮಾಡಿಕೊಂಡು ಜೀವಂತ ಉಳಿದಿರುವುದು. ಮಾತ್ರವಲ್ಲ ಕೆಲವು ವಿಚಾರಗಳಲ್ಲಿ ಹಿಂದಿಗಿಂತಲೂ ಹೆಚ್ಚು ಪ್ರಬಲವಾಗಿ ವ್ಯಕ್ತವಾದವು. ನಮ್ಮ ದೇಶದ ಉದಾಹರಣೆ ತೆಗೆದುಕೊಳ್ಳುವುದಾದರೆ ಆಧುನೀಕರಣದೊಂದಿಗೆ ನಮ್ಮ ಜಾತಿ, ಧರ್ಮ ಮತ್ತು ಕುಟುಂಬ ವ್ಯವಸ್ಥೆ ಮೂಲಭೂತವಾಗಿ ಬದಲಾಗಬೇಕಿತ್ತು. ಆದರೆ ಅವೆಲ್ಲ ಸಣ್ಣ ಪುಟ್ಟ ಬದಲಾವಣೆಯೊಂದಿಗೆ ಬಲಯುತಗೊಂಡವು. ಎರಡನೇ ಅಂಶ-ಹಲವಾರು ವ್ಯಾಪಾರಿ ಸಮುದಾಯಗಳು ತಮ್ಮ ಸಮುದಾಯ ಬದುಕನ್ನು ಬಂಡವಾಳದ ವೃದ್ಧಿಗೆ ಪರಿಣಾಮಕಾರಿಯಾಗಿ ಬಳಸಿಕೊಂಡವು. ಇದು ಕೇವಲ ಭಾರತದ ಮಾರ್ವಾಡಿ ಅಥವಾ ಜೈನ ವ್ಯಾಪಾರಿಗಳಿಗೆ ಮಾತ್ರ ಅನ್ವಯಿಸುವುದಲ್ಲ. ಪ್ರಪಂಚದ ಎಲ್ಲ ಕಡೆ ಇಂತಹ ವ್ಯಾಪಾರಿ ಸಮುದಾಯಗಳು ಇವೆ. ಮತ್ತು ಇವು ಇದೇ ರೀತಿ ಹೊಂದಾಣಿಕೆ ಮಾಡಿಕೊಂಡಿವೆ.

ಇದೇ ಸಂದರ್ಭದಲ್ಲಿ ಸಂಘಟಿತ ನಾಗರಿಕ ಬದುಕು ಅಥವಾ ಸಿವಿಲ್ ಸೊಸೈಟಿ ಮತ್ತು ಅದು ಅಭಿವೃದ್ಧಿಯ ಮೇಲೆ ಬೀರುವ ಪ್ರಭಾವದ ಕುರಿತು ಸಾಕಷ್ಟು ಬರಹಗಳು ಬಂದವು. ಅವುಗಳಲ್ಲಿ ಅಲೆಕ್ಸಿ ಡಿ ತೊವಿಲ್ಲೆ (೧೯೬೯), ಜೇಮ್ಸ್ ಎಸ್ ಕೊಲ್ ಮೆನ್ (೧೯೯೦) ಮತ್ತು ರೊಬರ್ಟ್ ಪುನಮ್ (೧೯೯೩) ಅವರ ಥಿಯರಿಗಳು ಮುಖ್ಯ. ಇವರ ಥಿಯರಿಗಳು ಸಿವಿಲ್ ಸೊಸೈಟಿ ಮತ್ತು ಒಳ್ಳೆಯ ಆಡಳಿತ ಸಂಬಂಧವನ್ನು ವಿವರಿಸುತ್ತವೆ. ನೆರೆಕರೆಯವರ ಸುಖ ದುಃಖಗಳಲ್ಲಿ ಭಾಗಿಯಾಗಲು ತರಬೇತಿಯನ್ನು ಈ ಸಣ್ಣಪುಟ್ಟ ಸಂಘಟನೆಗಳು ನೀಡುತ್ತವೆ. ಅದೇ ರೀತಿಯಲ್ಲಿ ಪರಸ್ಪರಲ್ಲಿ ನಂಬಿಕೆ ಮತ್ತು ಎಲ್ಲರು ಸೇರಿ ರೂಪಿಸಿಕೊಳ್ಳುವ ನೀತಿ ನಿಯಮಗಳಿಗೆ ಅನುಗುಣವಾಗಿ ವ್ಯವಹರಿಸುವ ತರಬೇತಿಯನ್ನು ಇಂತಹ ಸಂಘಟನೆಗಳಲ್ಲಿ ಕಲಿಯಬಹುದಾಗಿದೆ. ಸಂಘಟಿತ ಬದುಕಿನ ಇಂತಹ ಸಣ್ಣ ಸಣ್ಣ ಹನಿಗಳು ಸೇರಿ ಆರೋಗ್ಯಕರ ಸಮಾಜ ರೂಪುಗೊಳ್ಳುತ್ತದೆ ಎಂದು ಮೇಲಿನ ಥಿಯರಿಗಳು ವಾದಿಸುತ್ತವೆ. ಕೋಟಿಗಟ್ಟಲೆ ದುಡ್ಡನ್ನು ಬಡ ದೇಶಗಳಲ್ಲಿ ವಿನಿಯೋಜಿಸುವ ವಿಶ್ವ ಬ್ಯಾಂಕಿಗೆ ಈ ಥಿಯರಿಗಳು ವರದಾನವಾದವು. ಯಾಕೆಂದರೆ ಶ್ರೀಮಂತ ದೇಶಗಳು ಕೊಡಮಾಡುವ ಅಭಿವೃದ್ಧಿ ಮಾದರಿಗಳನ್ನು ಯಾಥಾ ರೂಪದಲ್ಲಿ ಅನುಸರಿಸಿದರೂ ಬಡ ದೇಶಗಳು ಉದ್ಧಾರವಾಗುವ ಲಕ್ಷಣ ಕಾಣುತ್ತಿಲ್ಲ. ಅಂತಹ ಸಂದರ್ಭದಲ್ಲಿ ನೀವು ಪುನಃ ಬಂಡವಾಳ ಹೂಡಿ ಎಂದು ಬಡ ದೇಶಗಳಿಗೆ ಸಾಲ ಕೊಡುವುದಾದರೂ ಹೇಗೆ? ಇಂತಹ ಸಂದಿಗ್ಧ ಸಂದರ್ಭದಲ್ಲಿ ಅಭಿವೃದ್ಧಿ ಮತ್ತು ಸಿವಿಲ್ ಸೊಸೈಟಿ ಮಧ್ಯೆ ಸಂಬಂಧ ಬೆಸೆಯುವ ಈ ಥಿಯರಿಗಳು ವಿಶ್ವ ಬ್ಯಾಂಕಿನವರಿಗೆ ಪ್ರಿಯವಾದವು (ಜೋನ್ ಹೇರಿಸ್, ೨೦೦೧). ಇಂದು ಪ್ರಪಂಚದ ಮೂಲೆ ಮೂಲೆಯಲ್ಲೂ ವಿಶ್ವಬ್ಯಾಂಕ್ ಹಣಕಾಸು ನೆರವಿನೊಂದಿಗೆ ನಡೆಯುವ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳು ಇವೆ. ಕೆರೆ ನೀರಾವರಿಗೂ ವಿಶ್ವಬ್ಯಾಂಕ್ ನೆರವು ಇದೆ. ಇಲ್ಲೂ ಕೂಡ ಅದು ಜನರ ಸಹಭಾಗಿತ್ವದಲ್ಲಿ ಯೋಜನೆಯನ್ನು ಜಾರಿಗೊಳಿಸಲು ಸೂಚಿಸಿದೆ. ಈ ರೀತಿಯಲ್ಲಿ ಬಾಹ್ಯ ಕಾರಣದಿಂದ ಜನರ ಸಹಭಾಗಿತ್ವ ಇಂದು ನಮ್ಮ ಯೋಜನೆಗಳ ಭಾಗವಾಗಿದೆ.

ಇದರೆ ಇತರೆ ಆಂತರಿಕ ಕಾರಣವು ಇದೆ. ಇದನ್ನು ಸಮುದಾಯವಾದ ಅಥವಾ ಕಮ್ಯುನಿಟೇರಿಯನ್ ರಾಜಕೀಯ ಮತ್ತು ಪರಿಸರ ಚಳವಳಿಗಳ ಫಲ ಎನ್ನಬಹುದು. ಇವರು ತಾಂತ್ರಿಕ ಆಧೂನೀಕರಣವನ್ನು ಕಟುವಾಗಿ ಟೀಕಿಸುತ್ತಾರೆ. ಇವರ ಪ್ರಕಾರ ಆಧುನಿಕ ವಿಜ್ಞಾನ, ತಂತ್ರಜ್ಞಾನ ಮತ್ತು ಸಾಂಘಿಕ ರಚನೆಗಳನ್ನು ನಮ್ಮಲ್ಲಿ ಅಳವಡಿಸುವ ಮೂಲಕ ಸಾಮಾಜಿಕ ಪರಿವರ್ತನೆ ಸಾಧ್ಯ ಎಂದು ನಂಬುವುದು ತುಂಬಾ ಸೀಮಿತ ದೃಷ್ಟಿಕೋನ. ಯಾಕೆಂದರೆ ಈ ದೃಷ್ಟಿಕೋನ ನಮ್ಮ ಸಂಸ್ಕೃತಿಯಲ್ಲಿ ಚಾರಿತ್ರಿಕವಾಗಿ ರೂಪುಗೊಂಡ ಸಂಸ್ಥೆಗಳನ್ನು ಗಣನೆಗೆ ತೆಗೆದುಕೊಂಡಿಲ್ಲ (ಆಶಿಶ್ ನಂದಿ, ೧೯೯೮). ವಸಾಹತು ಪೂರ್ವದಲ್ಲಿ ನೆಲ,ಜಲ, ಅರಣ್ಯ ಇತ್ಯಾದಿಗಳ ನಿರ್ವಹಣೆ ಕುರಿತು

ನಮ್ಮದೇ ವ್ಯವಸ್ಥೆಗಳು ಇದ್ದವು. ಸಾಂಪ್ರದಾಯಿಕ ಸಮಾಜದಲ್ಲಿನ ನಿಕಟ ಮತ್ತು ಪರಸ್ಪರ ಅರಿತಿರುವ ಸಂದರ್ಭದಲ್ಲಿ ಸಮುದಾಯದ ಸಂಪನ್ಮೂಲ ಬಳಕೆ ಮತ್ತು ನಿರ್ವಹಣೆ ಕುರಿತಂತೆ ಸ್ವಯಂ ಪ್ರೇರಿತ ನಿಬಂಧನೆಗಳಿದ್ದವು. ಸ್ಥಳೀಯ ಸಂಪನ್ಮೂಲಗಳನ್ನು ಆಧರಿಸಿ ಬದುಕುತ್ತಿದ್ದ ಸಮುದಾಯಗಳಿಗೆ ಆ ಸಂಪನ್ಮೂಲಗಳ ಬಳಕೆ ಮತ್ತು ಸಂರಕ್ಷಣೆ ಕುರಿತು ತಿಳುವಳಿಕೆಯಿತ್ತು, ಜವಾಬ್ದಾರಿಯಿತ್ತು (ಮಾಧವ ಗಾಡ್ಗಿಲ್ ಮತ್ತು ರಾಮಚಂದ್ರ ಗುಹ ೧೯೯೫). ಆದರೆ ಆಧುನಿಕತೆ ಮುಚ್ಚಿಕೊಂಡಿದ್ದ ಸಮುದಾಯ ಬದುಕನ್ನು ತೆರೆದು ಇತರ ಸಮುದಾಯಗಳೊಂದಿಗೆ ಸಂಪರ್ಕ ಮತ್ತು ವಿನಿಮಯವನ್ನು ಕಲಿಸಿತು. ಈ ಸಂಪರ್ಕ ಮತ್ತು ವಿನಿಮಯ ಇಂದು ಸ್ಥಳೀಯ ಸಂಪನ್ಮೂಲಗಳ ಬಳಕೆಯನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಯೊಂದಿಗೆ ಜೋಡಿಸಿದೆ. ಹಾಗಾಗಿ ಸಂಪನ್ಮೂಲಗಳ ಬಳಕೆ ಕುರಿತಂತೆ ನಿರ್ಧಾರಗಳು ಇಂದು ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗಿ ರೂಪಿತವಾಗುವುದಿಲ್ಲ. ಬದಲಿಗೆ ಮಾರುಕಟ್ಟೆಗಳ ಅಗತ್ಯಗಳಿಗೆ ಅನುಗುಣವಾಗಿ ಅಮೂರ್ತ ರೂಪದಲ್ಲಿ ಆಗುತ್ತಿದೆ. ಇದು ಎರಡು ರೀತಿಯ ದುಷ್ಪರಿಣಾಮಗಳಿಗೆ ಕಾರಣವಾಗಿದೆ. ಒಂದು, ಸಂಪನ್ಮೂಲಗಳ ಎಗ್ಗಿಲ್ಲದ ನಾಶ ಮತ್ತು ಎರಡು, ಸ್ಥಳೀಯ ಸಮುದಾಯಗಳು ಕೂಡ ಅವುಗಳ ಸಂರಕ್ಷಣೆ ಬಗ್ಗೆ ದಿವ್ಯ ನಿರ್ಲಕ್ಷ್ಯ ತೋರುವುದು, ಈ ಸಮಸ್ಯೆಗಳಿಂದ ಹೊರಬರಲು ಒಂದೇ ದಾರಿ-ಸಂಪನ್ಮೂಲಗಳ ನಿರ್ವಹಣೆಯಲ್ಲಿ ಸ್ಥಳೀಯ ಸಮುದಾಯಗಳು ಭಾಗವಹಿಸುವುದು. ತಮ್ಮ ಪರಿಸರದಲ್ಲಿನ ನೆಲ, ಜಲ, ಅರಣ್ಯ ಇತ್ಯಾದಿಗಳ ನಿರ್ವಹಣೆ ಮತ್ತು ಸಂರಕ್ಷಣೆಯ ಜವಾಬ್ದಾರಿಗಳನ್ನು ಸ್ಥಳೀಯ ಸಮುದಾಯಗಳು ವಹಿಸಿಕೊಳ್ಳಬೇಕೆಂದು ಪರಿಸರವಾದಿಗಳು ಮತ್ತು ಸಮುದಾಯವಾದಿಗಳು ವಾದಿಸುತ್ತಾರೆ. ಇದೇನು ಹೊಸ ಪ್ರಯೋಗವಲ್ಲ. ಕೆರೆ ಮತ್ತು ಇತರ ಜಲ ಸಂಪನ್ಮೂಲಗಳ ನಿರ್ವಹಣೆ ಕುರಿತು ಧಾರಾಳ ಮಾಹಿತಿ ನಮ್ಮ ಚರಿತ್ರೆಯಲ್ಲಿ ಸಿಗುತ್ತದೆ. ಕೆರೆ ಕಟ್ಟಿಸುವುದರಲ್ಲಿ ಊರಿನ ಧನಿಕರ, ವ್ಯಾಪಾರಿಗಳು, ದೇವಸ್ಥಾನಗಳ ಮತ್ತು ರಾಜರ ಪಾತ್ರ ಮಹತ್ವದ್ದು. ಆದರೆ ಅವುಗಳ ನಿರ್ವಹಣೆ ಮತ್ತು ಸಂರಕ್ಷಣೆಯಲ್ಲಿ ರೈತಾಪಿ ಜನರ ಪಾತ್ರ ಅಲ್ಲಗೆಳೆಯುವಂತಿರಲಿಲ್ಲ. ನಮ್ಮ ಹಿರಿಯರು ಮಾಡಿದ ಪ್ರಯೋಗಗಳಿಂದ ಇಂದಿನ ನಮ್ಮ ಸಮಸ್ಯೆಗಳಿಗೆ ಕೆಲವು ಪರಿಹಾರಗಳಾದರೂ ಸಿಗಬಹುದು. ಆ ನಿಟ್ಟಿನಲ್ಲಿ ಪ್ರಮಾಣಿಕ ಪ್ರಯತ್ನ ಅಗತ್ಯವೆಂದು ಸಮುದಾಯವಾದಿಗಳು ವಾದಿಸುತ್ತಾರೆ.

**ಸರಕಾರದ ಸಹಭಾಗಿತ್ವ ನೀತಿ**

ಸ್ವಾತಂತ್ರ್ಯ ನಂತರದ ಆಧುನಕ ನೀರಾವರಿ ವ್ಯವಸ್ಥೆ ಜಾರಿ ಬಂತು. ಹೊಸ ವ್ಯವಸ್ಥೆ ಒಂದು ಕಡೆಯಿಂದ ಬೃಹತ್ ನೀರಾವರಿ ವ್ಯವಸ್ಥೆಗೆ ಮಹತ್ವ ಕೊಟ್ಟರೆ ಇನ್ನೊಂದು ದಿಕ್ಕಿನಲ್ಲಿ ನೀರಾವರಿ ನಿರ್ವಹಣೆಯಲ್ಲಿ ಸಮುದಾಯದ ಪಾತ್ರವನ್ನು ಕಡೆಗಣಿಸಿದೆ. ಇದರಿಂದಾಗಿ ಕೆರೆ ನೀರಾವರಿ ವ್ಯವಸ್ಥೆ ಅರ್ಥ ಕಳೆದುಕೊಳ್ಳುತ್ತಾ ಬಂತು. ಜತೆಗೆ ಕೆರೆ ನಿರ್ಮಾಣ, ಉಸ್ತುವಾರಿ, ನೀರಿನ ಹಂಚುವಿಕೆ, ಇತ್ಯಾದಿಗಳು ಸರಕಾರದ ಜವಾಬ್ದಾರಿಯಾದವು ೨೦೦೦ ಹೆಕ್ಟೇರಿಗಿಂತ ಹೆಚ್ಚು ಅಚ್ಚುಕಟ್ಟು ಪ್ರದೇಶವುಳ್ಳ ಕೆರೆಗಳು ಬೃಹತ್ ನೀರಾವರಿ ಇಲಾಖೆಯ ವ್ಯಾಪ್ತಿಯೊಳಗೆ ಬಂದವು. ೪೦ ಹೇಕ್ಟೇರಿಗಿಂತ ಹೆಚ್ಚು ಅಂದರೆ ೨೦೦೦ ಹೆಕ್ಟೇರಿಗಿಂತ ಕಡಿಮೆ ಅಚ್ಚುಕಟ್ಟು ಉಳ್ಳ ಕೆರೆಗಳು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯೊಳಗೆ ಬರುತ್ತವೆ. ೪೦ ಹೆಕ್ಟೇರಿಗಿಂತ ಕಡಿಮೆ ಅಚ್ಚುಕಟ್ಟು ಉಳ್ಳ ಕೆರೆಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಯೊಳಗೆ ಸೇರಿಕೊಂಡಿವೆ. ಈ ಎಲ್ಲಾ ಬೆಳವಣಿಗೆಗಳಿಂದ ಕೆರೆ ನೀರಿನ ನಿರ್ವಹಣೆಯಲ್ಲಿ ಸಮುದಾಯದ ಪಾತ್ರ ಕಡಿಮೆಯಾಗುತ್ತಾ ಬಂತು. ಈ ಬೆಳವಣಿಗೆಗಳ ದುಷ್ಪರಿಣಾಮಗಳನ್ನು ನಾವಿಂದು ಮನಗಾಣುತ್ತಿದ್ದೇವೆ. ಬಹುತೇಕ ಕೆರೆಗಳು ಹೂಳು ತುಂಬಿ ನಿರುಪಯುಕ್ತವಾಗಿವೆ. ಮಳೆ ನೀರನ್ನು ಸಂಗ್ರಹಿಸುವ ಕಾಲುವೆಗಳು, ಹೊಲಗಳಿಗೆ ನೀರುಣ್ಣಿಸುವ ಕಾಲುವೆಗಳ, ಕೆರೆ ಏರಿ, ಇತ್ಯಾದಿಗಳು ಜೀರ್ಣಾವಸ್ಥೆಯಲ್ಲಿವೆ. ಎಲ್ಲಾ ಕೆರೆಗಳಿಗೆ ಪುನರ್‌ಜೀವ ನೀಡಲು ಕೋಟ್ಯಾಂತರ ರೂಪಾಯಿಗಳ ವಿನಿಯೋಜನೆ ಅಗತ್ಯವಿದೆ. ಆದರೆ ಅಷ್ಟು ಸಂಪನ್ಮೂಲ ಸರಕಾದಲ್ಲಿ ಇಲ್ಲ. ಅಗತ್ಯ ಹಣಕಾಸು ಒದಗಿಸಲು ವಿಶ್ವ ಬ್ಯಾಂಕಿನ ನೆರವು ಕೇಳಲಾಯಿತು. ನಮ್ಮಲ್ಲಿನ ಕೆರೆಗಳ ಇಂದಿನ ಸ್ಥಿತಿ ಬಗ್ಗೆ ತಕ್ಕ ಮಟ್ಟಿನ ಅರಿವು ಬ್ಯಾಂಕಿಗೆ ಇದೆ. ಕೆರೆಗಳ ನಿರ್ವಹಣೆಯಿಂದ ಸಮುದಾಯಗಳು ಹಿಂದೆ ಸರಿದಿರುವುದು, ಜಲಾನಯನ ಮತ್ತು ಕೆರೆ ಪಾತ್ರ ಒತ್ತುವರಿ ಆಗಿರುವುದು, ಬಹುತೇಕ ಕೆರೆಗಳು ಜೀರ್ಣಾವಸ್ಥೆಯಲ್ಲಿರುವುದು ಇತ್ಯಾದಿಗಳು ಬ್ಯಾಂಕಿನ ಗಮನಕ್ಕೆ ಬಂದಿದೆ. ಆದುದರಿಂದ ಅದು ಹಣಕಾಸು ನೆರವು

ನೀಡಲು ಹಲವಾರು ಶರತ್ತುಗಳನ್ನು ಮುಂದಿಟ್ಟಿದೆ. ಒತ್ತುವರಿ ತಡೆಯುವುದು, ಕೆರೆ ಹೂಳೆತ್ತುವುದರಲ್ಲಿ ಮತ್ತು ನಂತರದ ಕೆರೆ ಸಂರಕ್ಷಣೆಯಲ್ಲಿ ಸ್ಥಳೀಯ ಸಮುದಾಯಗಳು ಪಾಲುಗೊಳ್ಳುವಿಕೆ, ಒತ್ತುವರಿ ಮಾಡಿದವರು ಭೂ ರಹಿತರಾಗಿದ್ದರೆ ಅವರಿಗೆ ಪುನರ್ ವಸತಿ ಕಲ್ಪಿಸುವುದು, ಇತ್ಯಾದಿಗಳು ಬ್ಯಾಂಕ್ ಮುಂದಿಟ್ಟ ಶರತ್ತುಗಳಲ್ಲಿ ಮುಖ್ಯವು. ಹಾಗಾಗಿ ಕೆರೆ ನೀರಿನ ನಿರ್ವಹಣೆಯಲ್ಲಿ ನೀರು ಬಳಸುವ ಸಮುದಾಯಗಳು ಭಾಗವಹಿಸುವಿಕೆಂದು ಸರಕಾರ ಬಯಸುತ್ತಿದೆ.

ಬೃಹತ್ ನೀರಾವರಿ ಇಲಾಖೆ ಕೆಳಗೆ ಬರುವ ಕೆರೆ ನೀರು ಬಳಸುವವರ ಸಹಕಾರಿ ಸಂಘಟನೆಯನ್ನು ರಾಜ್ಯದ ಎಲ್ಲ ಕಡೆಗಳಲ್ಲೂ ಆರಂಭಿಸಲಾಗಿದೆ (ಕರ್ನಾಟಕ ಸರಕಾರ, ೨೦೦೦). ಸಣ್ಣ ನೀರಾವರಿ ಇಲಾಖೆ ಕೂಡ ಆ ನಿಟ್ಟಿನ್ನಲ್ಲಿ ಆಲೋಚಿಸುತ್ತಿದೆ. ಹೀಗೆ ತಳಮಟ್ಟದಲ್ಲಿ ಕೆರೆ ನೀರಾವರಿ ನಿರ್ವಹಣೆಗೆ ಬಳಕೆದಾರರ ಸಹಕಾರಿ ಸಂಘಟನೆಗಳು ಜಾರಿ ಬರಲಿವೆ ಮತ್ತು ಕೆಲವು ಕಡೆಗಳಲ್ಲಿ ಜಾರಿ ಬಂದಿವೆ. ಬಳಕೆದಾರರು ಕೆರೆ ನೀರಾವರಿ ನಿರ್ವಹಣೆಯ ಜವಾಬ್ದಾರಿ ಹೊರುವುದನ್ನು ಕೆರೆ ನೀರಾವರಿ ನಿರ್ವಹಣೆಯಲ್ಲಿ ಜನರ ಸಹಾಭಾಗಿತ್ವ ಎನ್ನಬಹುದು. ಕೆರೆ ನೀರಾವರಿ ನಿರ್ವಹಣೆಯಲ್ಲಿ ಬರುವ ಮುಖ್ಯ ಅಂಶಗಳು ಯಾವುವು? ಜಲಾನಯನ ಪ್ರದೇಶ, ಅಲ್ಲಿಂದ ನೀರು ಹರಿದು ಬರಲು ಕಾಲುವೆ ನಿರ್ಮಾಣ ಮತ್ತು ಕಾಲಕಾಲಕ್ಕೆ ಅದರ ರಿಪೇರಿ, ಕೆರೆಯ ಪಾತ್ರ ಮತ್ತು ಅದರ ನಿರ್ವಹಣೆ ಅಂದರೆ ಅದು ಹೂಳು ತುಂಬದಂತೆ ನೋಡಿಕೊಳ್ಳುವುದು ಮತ್ತು ಅದನ್ನು ಒತ್ತುವರಿ ಮಾಡಿಕೊಳ್ಳದಂತೆ ನೋಡಿಕೊಳ್ಳವುದು. ಕರೆ ಕಟ್ಟೆ, ನೀರು ಬಿಡುವ ತೂಬುಗಳನ್ನು ಸೇರಿಸಿ ಅಲ್ಲಿಂದ ಕೆರೆ ಕೆಳಭಾಗದಲ್ಲಿ ಬರುವ ಹೊಲಗಳಿಗೆ ಕ್ರಮಪ್ರಕಾರ ನೀರು ಹೋಗಲು ಕಾಲುವೆ ನಿರ್ಮಾಣ ಮತ್ತು ಉಸ್ತುವಾರಿ. ಹೊಸ ಕೆರೆ ಅಥವಾ ಕಾಲುವೆ ನಿರ್ಮಾಣದ ಕೆಲಸ ಇಂದಿಲ್ಲ. ಇಂದು ಏನಿದ್ದರೂ ಈಗಾಗಲೇ ಇರುವ ಕೆರೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ನಿರ್ಮಾಣಗಳನ್ನು ಕೆಡದಂತೆ ನೋಡಿಕೊಳ್ಳುವ ಜವಾಬ್ದಾರಿ ಮಾತ್ರ. ಮೇಲಿನ ಎಲ್ಲ ಜವಾಬ್ದಾರಿಗಳ ನಿರ್ವಹಣೆ, ನೀರು ಹಂಚಿಕೆ, ತೆರಿಗ ಸಂಗ್ರಹ, ಇವುಗಳಿಗೆ ಸಂಬಂಧಿಸಿದ ತಕರಾರುಗಳ ಪರಿಹಾರ ಇತ್ಯಾದಿಗಳು ಜನರ ಸಹಭಾಗಿತ್ವದ ವ್ಯಾಪ್ತಿಯೊಳಗೆ ಬರಬಹುದಾದ ವಿಚಾರಗಳು.

ಸರಕಾರದ ಹೊಸ ನೀರಿ-ಕೆರೆ ನೀರಾವರಿ ನಿರ್ವಣೆಯಲ್ಲಿ ಸಹಾಭಾಗಿತ್ವ -ಹಲವಾರು ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತದೆ. ಕೆರೆ ನೀರಾವರಿ ನಿರ್ವಹಣೆಯಲ್ಲಿ ಸಮುವಾಯ ಪಾಲು ಗೊಳ್ಳುವ ಬಗ್ಗೆ ನಮ್ಮ ಚರಿತ್ರೆಯಲ್ಲಿ ಸಾಕಷ್ಟು ಮಾಹಿತಿ ಇದೆ ಎಂದು ಸಮುದಾಯವಾದಿಗಳು ಮತ್ತು ಪರಿಸರವಾದಿಗಳು ವಾದಿಸುತ್ತಾರೆ. ಒಂದು ವೇಳೆ ಹಿಂದೆ ಕೂಡ ಸಹಭಾಗಿತ್ವ ಇದ್ದರೆ ಅದು ಯಾವ ರೂಪದಲ್ಲಿ ಇತ್ತು? ಕೆರೆ ನೀರು ಬಲಸುವ ಇಂದಿನ ಬಳಕೆದಾರರು ಆ ವ್ಯವಸ್ಥೆ ಬಗ್ಗೆ ಎಷ್ಟು ತಿಳಿದ್ದಾರೆ? ಅದೇ ವ್ಯವಸ್ಥೆಯನ್ನು ಪುನರ್‌ಜೀವಗೊಳಿಸುವ ಬಗ್ಗೆ ಬಳಕೆದಾರರು ಏನು ಹೇಳುತ್ತಾರೆ? ಸ್ವಾತಂತ್ರ್ಯ ನಂತರ ಹಲವಾರು ದಶಕಗಳಿಂದ ಕೆರೆ ನೀರಾವರಿ ನಿರ್ವಹಣೆಯಲ್ಲಿ ಸರಕಾರ ವಹಿಸಿಕೊಂಡಿತ್ತು, ಆ ವ್ಯವಸ್ಥೆ ಕುರಿತು ಅವರ ಅಭಿಪ್ರಾಯಗಳೇನು? ಕೆರೆ ಸಂರಕ್ಷಣೆಯ ಜವಾಬ್ದಾರಿಯನ್ನು ನೀರು ಬಳಕೆದಾರರು ಹೊರಬೇಕೆಂದು ಸರಕಾರದ ಹೊಸ ನೀತಿ ಹೇಳುತ್ತದೆ. ಆಧುನೀಕರಣಕ್ಕೆ ಒಗ್ಗಿ ಹೋಗಿರುವ ಜನರು ಒಮ್ಮಿಂದೊಮ್ಮೆಲೆ ಈ ಜವಾಬ್ದಾರಿ ಹೊರಲು ಸಿದ್ದರಾಗಿದ್ದಾರೆಯೇ? ಒಂದು ವೇಳೆ ಅವರ ಸಿದ್ಧತೆ ಬಗ್ಗೆ ವಿಶೇಷ ತಲೆ ಕೆಡಿಸಿಕೊಳ್ಳದೆ ವಿವಿಧ ಕೆಲಸಗಳಿಗೆ ಅವರನ್ನು ಜವಾಬ್ದಾರರನ್ನಾಗಿಸುವುದೆಂದು ತೀರ್ಮಾನಿಸಿದರೆ (ತೀರ್ಮಾನಿಸಲಾಗಿದೆ)ಅದನ್ನು ಯಾವ ರೀತಿಯಲ್ಲಿ ಮಾಡುವುದು? ಕೆರೆ ನೀರಾವರಿ ನಿರ್ವಹಣೆಯಲ್ಲಿ ಸಹಭಾಗಿತ್ವದ ಸಾಧ್ಯತೆಗಳನ್ನು ತಿಳಿಯಲು ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಅಗತ್ಯ. ಮೇಲಿನ ಪ್ರಶ್ನೆಗಳಿಗೆ ಉತ್ತರ ಹುಡುಕುವ ಕಿರು ಪ್ರಯತ್ನ ಈ ಅಧ್ಯಯನದ ಉದ್ದೇಶ.

**ಅಧ್ಯಯನದ ಉದ್ದೇಶ, ವಿಧಾನ ಇತ್ಯಾದಿಗಳು**

ಕೆರೆ ನೀರಾವರಿ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವದ ಸಾಧ್ಯತೆಗಳನ್ನು ಅರ್ಥಮಾಡಿಕೊಳ್ಳುವುದು ಈ ಅಧ್ಯಯನದ ಮುಖ್ಯ ಉದ್ದೇಶ. ಸಹಭಾಗಿತ್ವದ ಪ್ರಶ್ನೆ ನಮಗೇನು ಹೊಸತಲ್ಲ. ಅದು ನಮ್ಮ ಸಂಸ್ಕೃತಿಯ ಭಾಗವೆಂಬ ವಾದವು ಇದೆ. ಹಿಂದೆ ಇದ್ದ ಸಹಭಾಗಿತ್ವ, ಅದರ ಅರಿವು, ಇಂದಿನ ಸಮಸ್ಯೆಗಳಿಗೆ ಹಿಂದಿನ ವ್ಯವಸ್ಥೆ ಪರಿಹಾರವಾಗುವ ಸಾಧ್ಯತೆ. ಇಂದಿನ ಸಹಭಾಗಿತ್ವ ಕುರಿತು ರೈತರ ನಿಲುವು ಇತ್ಯಾದಿಗಳ

ಕುರಿತು ಕರೆ ನೀರು ಬಳಕೆದಾರರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದು ಕೂಡ ಅಧ್ಯಯನದ ಉದ್ದೇಶವಾಗಿದೆ. ಈ ಎಲ್ಲವನ್ನು ನಿರ್ದಿಷ್ಟವಾಗಿ ಈ ಕೆಳಗಿನಂತೆ ಪಟ್ಟಿಮಾಡಬಹುದು

೧. ಹಿಂದೆ ಇದ್ದ ಸಹಭಾಗಿತ್ವದ ಗುಣ ಲಕ್ಷಣಗಳ ಕಿರು ಪರಿಚಯ ಮಾಡಿಸುವುದು.
೨. ಹಿಂದಿನ ಸಹಭಾಗಿತ್ವ ಕುರಿತು ಇಂದಿನ ಕೆರೆ ನೀರು ಬಳಕೆದಾರರು ಹೊಂದಿರುವ ಅಭಿಪ್ರಾಯಗಳನ್ನು ಸಂಗ್ರಹಿಸುವುದು.
೩. ಸರಕಾರದ ಹೊಸ ಸಹಭಾಗಿತ್ವ ನೀತಿ ಕುರಿತು ಕೆರೆ ನೀರು ಬಳಕೆದಾರರ ನಿಲುವುಗಳನ್ನು ತಿಳಿಯುವುದು.
೪. ಈ ಎಲ್ಲದರ ಹಿನ್ನೆಲೆಯಲ್ಲಿ ಸರಕಾರ ಮುಂದಿಡುವ ಕೆರೆ ನೀರಿನ ನಿರ್ವಹಣೆಯಲ್ಲಿ ಜನರ ಪಾಲುಗೊಳ್ಳುವಿಕೆಯ ಸಾಧ್ಯತೆಗಳನ್ನು ಅರ್ಥಮಾಡಿಕೊಳ್ಳುವುದು.

ಇದೊಂದು ಎಂಪಿರಿಕಲ್ ಅಧ್ಯಯನ. ಅಧ್ಯಯನದ ಉದ್ದೇಶದಲ್ಲಿ ತಿಳಿಸಿರುವ ವಿಚಾರಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಎರಡು ಮೂಲಗಳಿಂದ ಪಡೆಯಲಾಗಿದೆ. ಹಿಂದೆ ಇದ್ದ ಸಹಭಾಗಿತ್ವದ ಗುಣಲಕ್ಷಣಗಳನ್ನು ಈಗಾಗಲೇ ಮುದ್ರಿತವಾಗಿರುವ ಅಧ್ಯಯನಗಳಿಂದ ಪಡೆಯಲಾಗಿದೆ. ಶಾಸನಗಳು ಆ ಅಧ್ಯಯನಗಳು ಮುಖ್ಯ ಆಕರ ಮೂಲಗಳು. ಎಷ್ಟೋ ಸಂದರ್ಭಗಳಲ್ಲಿ ಶಾಸನಗಳು ಕೊಡುವ ಮಾಹಿತಿ ವಸಾಹತು ಪೂರ್ವದ ಮೇಲ್ ವರ್ಗಕ್ಕೆ ಹೆಚ್ಚು ಸಂಬಂಧಿಸಿರುತ್ತವೆ. ಅಂದಿನ ಸಮಾಜದ ಕೆಳವರ್ಗದ ಪಾಲುಗೊಳ್ಳುವಿಕೆ ಕುರಿತು ಶಾಸನಗಳಲ್ಲಿ ಮಾಹಿತಿ ಸ್ವಲ್ಪ ಕಡಿಮೆಯೇ ಇದೆ. ಈ ಕೊರತೆಯನ್ನು ತುಂಬಲು ಇಂದಿನ ಕೆರೆ ನೀರು ಬಳಕೆದಾರರನ್ನು ಭೇಟಿ ಮಾಡಿ ಮಾಹಿತಿ ಸಂಗ್ರಹಿಸಲಾಗಿದೆ. ಕಮಲಾಪುರ, ತಿಮ್ಮಲಾಪುರ ಮತ್ತು ಕಲ್‌ತಾವರೆಗೆರೆ- ಈ ಮೂರು ಹಳ್ಳಿಗಳದ ರೈತರುಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಈ ಮೂರು ಹಳ್ಳಿಗಳಲ್ಲಿ ವಿಜಯನಗರ ಕಾಲದ ಕೆರೆಗಳು ಜನರ ನೀರಿನ ಬೇಡಿಕೆಯನ್ನು ಇಂದೂ ಪೂರೈಸುತ್ತಿವೆ. ಕಮಲಾಪುರ ಕೆರೆ ಬೃಹತ್ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಉಳಿದೆರಡು ಕೆರೆಗಳು ಎಲ್ಲಾ ಪಂಚಾಯಯತ್ ವ್ಯಾಪ್ತಿಗೆ ಬರುತ್ತವೆ. ಕಮಲಾಪುರ ಕೆರೆ ಹಂಪಿಗೆ ಸಮೀಪವಿದೆ. ಈ ಕೆರೆಗೆ ಸುಮಾರು ೧೮ ಚದರ ಮೈಲು ವಿಸ್ತೀರ್ಣದ ಜಲಾನಯನ ಪ್ರದೇಶವಿದೆ. ಆದರೆ ಆ ಪ್ರದೇಶವೆಲ್ಲ ಇಂದು ಗಣಿಗಾರಿಕೆ ಚಟುವಟಿಕೆಗಳಿಂದ ತುಂಬಿದೆ. ಅಪರೂಪಕ್ಕೆ ಬರುವ ಮಳೆ ಆ ಪ್ರದೇಶಗಳಿಂದ ಗಣಿಗಾರಿಕೆ ಹೊರ ಹಾಕುವ ಹುಡಿ ಮಣ್ಣನ್ನು ತಂದು ಕೆರೆ ಪಾತ್ರ ತುಂಬುತ್ತದೆ. ತುಂಗಭದ್ರಾ ಆಣೆಕಟ್ಟು ನೀರು ಪ್ರತಿವರ್ಷ ಕೆರೆ ತುಂಬುವುದರಿಂದ ರೈತರಿಗೆ ನೀರಿನ ಅಭಾವ ಕಾಡಿಲ್ಲ. ಸರಕಾರಿ ದಾಖಲೆ ಪ್ರಕಾರ ಸುಮಾರು ೧೨೦೦ ಎಕ್ರೆ ಭೂಮಿ ಕಮಲಾಪುರದ ಕೆರೆಯಿಂದ ಕೃಷಿಯಾಗುತ್ತಿದೆ. ಅನಧಿಕೃತವಾಗಿ ಇನ್ನು ಕೆಲವು ಎಕ್ರೆ ಭೂಮಿ ಕೃಷಿಯಾಗುತ್ತಿದೆ. ಈ ಕೆರೆಯ ನೀರು ಬಳಸುವ ೨೦೫ ಕೃಷಿಕರಿದ್ದಾರೆ. ಅವರಲ್ಲಿ ೨೫ ಜನ ರೈತರನ್ನು ಭೇಟಿಯಾಗಿ ಮಾಹಿತಿ ಸಂಗ್ರಹಿಸಲಾಗಿದೆ.

ತಿಮ್ಮಲಾಪುರ ಚಿಲಕನಹಟ್ಟಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಬರುತ್ತದೆ. ಹೊಸಪೇಟೆಯಿಂದ ಸುಮಾರು ೩೦ ಕಿ.ಲೋ. ಮೀಟರು ದೂರದಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಈ ಹಳ್ಳಿ ಇದೆ. ಅಲ್ಲಿ ಒಟ್ಟು ನಾಲ್ಕು ಕೆರೆಗಳಿವೆ. ಅವುಗಳಲ್ಲಿ ಒಂದು ಕೆರೆ ಮಾತ್ರ ರಿಪೇರಿಯಾಗಿ ನೀರು ಸಂಗ್ರಹಿಸಲು ಯೋಗ್ಯವಾಗಿದೆ. ತೂಬು ಮತ್ತು ಕೆರೆ ಕಟ್ಟೆ ಹಲವು ಕಡೆಗಳಲ್ಲಿ ಸೋರುವುದರಿಂದ ಉಳಿದ ಮೂರು ಕೆರೆಗಳು ರೈತರ ಉಪಯೋಗಕ್ಕೆ ಬರುತ್ತಿಲ್ಲ. ನಾಲ್ಕು ಕೆರೆಗಳಿಗೂ ವಿಸ್ತಾರವಾದ ಜಲಾನಯನ ಪ್ರದೇಶವಿದೆ. ಅವೆಲ್ಲ ಅರಣ್ಯ ಪ್ರದೇಶವಾದುದರಿಂದ ಇಂದು ಕೂಡ ಜಲಾನಯನ ಪ್ರದೇಶವಾಗಿ ಕೆಲಸಮಾಡುತ್ತಿವೆ. ಮಳೆಗಾಲದಲ್ಲಿ ಎಲ್ಲ ಕೆರೆಗಳಲ್ಲಿ ನೀರು ಸಂಗ್ರಹವಾಗುತ್ತದೆ. ಆದರೆ ತೂಬು ಮತ್ತು ಇತರ ಸೋರುವಿಕೆಯಿಂದಾಗಿ ಕೇವಲ ಒಂದು ಕೆರೆಯಲ್ಲಿ ಮಾತ್ರ ನೀರು ರೈತರ ಕೃಷಿ ಬಳಕೆಯಾಗುತ್ತಿದೆ. ಈ ಹಳ್ಳಿಯ ಸುಮಾರು ೫೪ ರೈತರು ಈ ಕೆರೆಯ ನೀರನ್ನು ತಮ್ಮಕೃಷಿಗೆ ನಂಬಿದ್ದಾರೆ. ಅವರಲ್ಲಿ ೧೨ ಜನರನ್ನು ಭೇಟಿಯಾಗಿ ಮಾಹಿತಿ ಸಂಗ್ರಹಿಸಲಾಗಿದೆ.

ಕಲ್‌ತಾವರೆಗೆರೆ ಗ್ರಾಮಪಂಚಾಯತ್‌ನ ಕಲ್‌ತಾವರೆಗೆರೆ ಹಳ್ಳಿ ಕೊಪ್ಪಳ ತಾಲ್ಲೂಕಿನಲ್ಲಿದೆ. ಕೆರೆಯ ಹೆಸರೆ ಊರಿನ ಹೆಸರು. ಇಲ್ಲಿನ ಕೆರೆ ಕೂಡ ವಿಜಯನಗರದ ಕಾಲದ್ದು. ಅದರ ಪಾತ್ರ ಸುಮಾರು ೨೦ ಹೆಕ್ಟೇರಿನಷ್ಟಿದೆ. ಹಳ್ಳಿಯಲ್ಲಿ ಒಟ್ಟು, ಸಣ್ಣ ಮತ್ತು ದೊಡ್ಡ ಹಿಡುವಳಿದಾರರನ್ನು

ಸೇರಿಸಿ, ೪೨೨ ಕೃಷಿ ಹಿಡುವಳಿದಾರರು ಇದ್ದಾರೆ. ಕೆರೆ ನೀರಾವರಿ ಆಧರಿತ ಕೃಷಿ ಸಂಖ್ಯೆ ಸುಮಾರು ೮೫. ಅಲ್ಲಿನ ೧೫ ಕೆರೆ ನೀರು ಬಳಕೆದಾರರನ್ನು ಭೇಟಿಯಾಗಿ ಮಾಹಿತಿ ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ಮಾಹಿತಿಯನ್ನು ವಿವರಣಾತ್ಮಕ ವಿಧಾನದಲ್ಲಿ ವಿಶ್ಲೇಷಿಸಿದ್ದೇನೆ.

**ಹಿಂದೆ ಇದ್ದ ಸಹಭಾಗಿತ್ವ**

ದೊರೆಗಳು, ಶ್ರೀಮಂತ ಅಧಿಕಾರಿಗಳು, ವ್ಯಾಪಾರಿಗಳು, ದೇವಸ್ಥಾನದ ಅಧಿಕಾರಿಗಳು ಮುಂತಾದವರು ಕೆರೆ ಕಟ್ಟಿಸುತ್ತಿದ್ದರು. ಜನ ಸಾಮಾನ್ಯರು ತಮ್ಮ ಶಕ್ತಿಯಾನುಸಾರ ಕೆರೆ ನಿರ್ಮಾಣ ಕಾರ್ಯದಲ್ಲಿ ಭಾಗಿಯಾಗಬೇಕಿತ್ತು (ವಾಸುದೇವನ್, ೨೦೦೧). ಆದರೆ ಕೆರೆಗಳ ಸಂರಕ್ಷಣೆ ಸಂಪೂರ್ಣ ಬಳಕೆದಾರರ ಜವಾಬ್ದಾರಿಯಾಗಿತ್ತು. ಹೂಳೆತ್ತುವುದು, ಕಟ್ಟೆ ರಿಪೇರಿ ಮಾಡಿಸುವುದು, ತೂಬು ಕೋಡಿಗಳ ದುರಸ್ತಿ, ಕೆರೆ ಪಾತ್ರ ಅಥವಾ ಜಲಾನಯನ ಪ್ರದೇಶದ ಒತ್ತುವರಿ ಆಗದಂತೆ ನೋಡಿಕೊಳ್ಳುವುದು ಇತ್ಯಾದಿಗಳು ನೀರು ಬಳಕೆದಾರರ ಹೊಣೆ (ಕೊಟ್ರಯ್ಯ, ೨೦೦೧). ಕೌಟಿಲ್ಯನ ಅರ್ಥಶಾಸ್ತ್ರ, ನೀರಿನ ತೆರಿಗೆ ಕುರಿತು ಹೀಗೆ ಹೇಳುತ್ತದೆ. "ರಾಜನು ಭೂಮಿಗೆ ಒಡೆಯನಾಗಿರುವಂತೆ ನೀರಿಗೂ ಒಡೆಯನಾದ್ದರಿಂದ ನೀರಿನ ತೆರಿಗೆಯನ್ನು ಕೊಡಬೇಕು. ತಮ್ಮ ದೇಹಾಯಾಸ ಮತ್ತು ತಮ್ಮ ಧನ ವ್ಯಯದಿಂದ ನಿರ್ಮಿಸಿದ ಕೆರೆಯಿಂದ ಕೊಡದಿಂದ ನೀರು ಹಾಕಿ ಬೆಳೆಸಿದ ಬೆಳೆಯಿಂದ ಐದನೆ ಒಂದು ಭಾಗವನ್ನು ನೀರಿನ ತೆರಿಗೆಯಾಗಿ ರಾಜನಿಗೆ ಕೊಡಬೇಕು. ಹೆಗಲಿನಿಂದ ಹೊರುವ ಯಂತ್ರದಿಂದ ನೀರು ಹಾಕಿ ಬೆಳೆಸಿದ ಬೆಳೆಯಿಂದ ನಾಲ್ಕನೆ ಒಂದು ಭಾಗವನ್ನು ಕೊಡಬೇಕು. ಏತ ಮೊದಲಾದವುಗಳಿಂದ ನೀರು ಹಾಯಿಸಿದ ಬೆಳೆಯಿಂದ ಮೂರನೆ ಒಂದು ಭಾಗವನ್ನು ಕೊಡಬೇಕು. ("ಕೌಟಿಲ್ಯನ ಅರ್ಥಶಾಸ್ತ್ರ, ೨೦೦೦). ಕೆರೆ ನಿರ್ಮಾಣದಲ್ಲಿದ ಪಾಲುಗೊಳ್ಳಲು ತಪ್ಪಿಸುವ ರೈತರ ಕಠಿಣ ಶಿಕ್ಷೆಗೆ ಗುರಿಯಾಗುತ್ತಿದ್ದರು. "ಎಲ್ಲರೂ ಒಟ್ಟಿಗೆ ಸೇರಿ ನೀರಾವರಿಯನ್ನು ಮಾಡುವಾಗ ತನ್ನ ಅಂಶದ ಕೆಲಸವನ್ನು ಮಾಡಲು ತಪ್ಪಿಸುವವನ ಕೆಲಸದವರೂ ಎತ್ತುಗಳೂ ಕೆಲಸ ಮಾಡುವಂತೆ ರಾಜನು ಮಾಡಬೇಕು. ಅಷ್ಟು ಮಾತ್ರವಲ್ಲದೆ ನೀರಾವರಿಗೆ ತಗಲಿದ ಖರ್ಚಿನಲ್ಲಿ ಪಾಲುದಾರನಾಗುತ್ತಾನೆ. ಆದರೆ ನಂತರ ಉಂಟಾಗುವ ಫಲದಲ್ಲಿ ಅವನಿಗೆ ಪಾಲು ಸಿಗಲಾರದು" (ಕೌಟಿಲ್ಯನ ಅರ್ಥಶಾಸ್ತ್ರ, ೨೦೦೧).

ಕೆರೆ ಸಂರಕ್ಷಣೆ ಕುರಿತು ಅರ್ಥಶಾಸ್ತ್ರ ಈ ರೀತಿ ಹೇಳುತ್ತದೆ. 'ಕೆರೆ ಇತ್ಯಾದಿಗಳ ಕೆಳಗೆ ಬೇಸಾಯ ಮಾಡುವ ವ್ಯಕ್ತಿಗಳು ಅಥವಾ ಯಾವುದೇ ರೀತಿಯ ಕಂದಾಯವೂ ಇಲ್ಲದೆ ಅಂಥ ಭೂಮಿಯನ್ನು ಅನುಭವಿಸಲು ಅನುಮತಿ ಪಡೆದ ವ್ಯಕ್ತಿಗಳು ಕೆರೆ ಇತ್ಯಾದಿಗಳನ್ನು ಒಳ್ಳೆಯ ದುರಸ್ತಿಯಲ್ಲಿ ಇಟ್ಟಿರಬೇಕು. ಇಲ್ಲವಾದರೆ ಅವರಿಗೆ ನಷ್ಟದ ಎರಡರಷ್ಟು ಜುಲ್ಮಾನೆಯ ಶಿಕ್ಷೆ ವಿಧಿಸಬೇಕು' (ಕೌಟಿಲ್ಯನ ಅರ್ಥಶಾಸ್ತ್ರ, ೨೦೦೦). ಅಂದರೆ ಕೆರೆ ಸಂರಕ್ಷಣೆ ಕೆಲಸ ಅದರ ಲಾಭ ಪಡೆಯುವುದರ ಅಥವಾ ನೀರು ಬಳಕೆದಾರರ ಜಬಾಬ್ದಾರಿ ಎಂದಾಯಿತು. ಹೀಗೆ ಹಿಂದೆ ಕೆರೆ ಸಂರಕ್ಷಣೆ ಗ್ರಾಮ ಸಮುದಾಯದ ಹೊಣೆಯಾಗಿತ್ತು. ಜಿ.ಎಸ್.ದೀಕ್ಷಿತ್ ಮಧ್ಯಯುಗೀನ ಕರ್ನಾಟಕದಲ್ಲಿ ಕೆರೆ ಸಂರಕ್ಷಣೆಯಲ್ಲಿ ಜನರ ಸಹಭಾಗಿತ್ವ ಕುರಿತು ಹೀಗೆ ಹೇಳುತ್ತಾರೆ, "ಫಲಾನುಭವಿಗಳು ಆ ಸಮುದಾಯದ ಪ್ರಮುಖ ಭಾಗವಾಗಿದ್ದರು. ಅವರು ಈ ಕೆಲಸವನ್ನು ಹಳ್ಳಿಯ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ತಂಡಕ್ಕೆ ವಹಿಸುತ್ತಿದ್ದರು. ಆತ ಅಥವಾ ಅವರು ಸಂರಕ್ಷಣಾ ಕಾರ್ಯವನ್ನಿ ನಡೆಸುವ ಸಲುವಾಗಿ ಅವರಿಗೆ ಕೆಲವು ಭೂಮಿಗಳನ್ನು ಬಿತ್ತುವಟ್ಟ ಅಥವಾ ದಶವಂದವಾಗಿ ನೀಡುತ್ತಿದ್ದರು. ಇಲ್ಲವೆ ಕಂದಾಯದಲ್ಲಿ ರಿಯಾಯಿತಿ ನೀಡುತ್ತಿದ್ದರು. ಭಾರಿ ನೀರಾವರಿ ಕಾರ್ಯಗಳಲ್ಲಿ ದುರಸ್ತಿ ಕಾರ್ಯವನ್ನು ನಡೆಸುವುದಕ್ಕಾಗಿ ಕೆಲವು ಸ್ಥಳೀಯ ತೆರಿಗೆಗಳ ಬಳಕೆಯ ಸೌಲಭ್ಯವನ್ನು ಸ್ಥಳೀಯ ಸಂಸ್ಥೆಗಳಿಗೆ ದೊರೆಗಳು ನೀಡುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಕೆರೆ ಸಂರಕ್ಷಣೆಗಾಗಿ ಬಂಡಿಗಳನ್ನು, ಭೂಮಿಯನ್ನು ಕೊಡಲಾಗುತ್ತಿತ್ತು. ಬಂಡಿಗಳನ್ನು ಕೊಡುತ್ತಿದ್ದುದು ಕೆರಯಿಂದ ಹೂಳೆತ್ತಲು." (ಜಿ.ಎಸ್. ದೀಕ್ಷಿತ್ ಮತ್ತು ಇತರರು, ೨೦೦೦). ವಿಜಯನಗರದ ಆಡಳಿತ ಅವಧಿಯಲ್ಲಿ ಕೆರೆ ನೀರಾವರಿ ನಿರ್ವಹಣೆ ಕಾರ್ಯವನ್ನು ಸ್ಥಳೀಯರಿಗೆ ಬಿಟ್ಟು ಕೊಡಲಾಗುತ್ತಿತ್ತು. ಯಾರು ಇವುಗಳಿಂದ ಲಾಭ ಪಡೆಯುತ್ತಿದ್ದರೋ ಅವರೇ ಅದರ ಉಸ್ತುವಾರಿ ಕಾರ್ಯವನ್ನು ನೋಡಿಕೊಳ್ಳುತ್ತಿದ್ದರು. ಪ್ರಭುತ್ವ ಆದೇಶ ನಿರ್ದೇಶನಗಳನ್ನು ನೀಡುತ್ತಿತ್ತು. ಹಲವು ಬಾರಿ ಆರ್ಥಿಕ ಸಹಾಯವನ್ನು ನೀಡುತ್ತಿತ್ತು. ಈ ಕಾರ್ಯವನ್ನು ಸ್ಥಳೀಯ ಹಳ್ಳಿಯ ಅಧಿಕಾರಿಗಳು, ದೇವಾಲಯದ ಧರ್ಮದರ್ಶಿಗಳು ಮತ್ತು ಇತರ ಪ್ರಮುಖರಿಂದ ನಡೆಸಲಾಗುತ್ತಿತ್ತು. ಇದರ ಜತೆಗೆ ಹಳ್ಳಿಯ ಸಮಿತಿಯ ಪಾತ್ರ ಅಪಾರವಾಗಿತ್ತು (ಕೊಟ್ರಯ್ಯ, ೨೦೦೧).

ಕೌಟಿಲ್ಯ, ಮಧ್ಯ ಯುಗದ ಕರ್ನಾಟಕ ಇತ್ಯಾದಿಗಳು ತುಂಬಾ ದೂರದ ಸಂಗತಿಗಳು. ಅಂದಿನ ಸಹಭಾಗಿತ್ವದ ಚಿತ್ರಣ ವಾಸ್ತವಕ್ಕೆ ಎಷ್ಟು ಹತ್ತಿರ ಎಂದು ಊಹಿಸಿಕೊಳ್ಳುವುದು ಸ್ವಲ್ಪ ಕಷ್ಟವೇ ಸರಿ. ಆದರೆ ಮಧ್ಯಯುಗಕ್ಕೂ ಆಧುನಿಕಕ್ಕೂ ಕೊಂಡಿಯಾಗಿದ್ದ ಮೈಸೂರು ರಾಜರ ಕಾಲದಲ್ಲಿನ ಸಹಭಾಗಿತ್ವದ ಚಿತ್ರಣ ವಾಸ್ತವಕ್ಕೆ ಎಷ್ಟು ಹತ್ತಿರ ಒಂದು ಉಹಿಸಿಕೊಳ್ಳುವುದು ಸ್ವಲ್ಪ ಕಷ್ಟವೇ ಸರಿ. ಆದರೆ ಮಧ್ಯಯುಗಕ್ಕೂ ಆಧುನಿಕಕ್ಕೂ ಕೊಂಡಿಯಾಗಿದ್ದ ಮೈಸೂರು ರಾಜರ ಕಾಲದಲ್ಲಿನ ಸಹಭಾಗಿತ್ವದ ಮಾಹಿತಿ ಹಿಂದಿನ ವ್ಯವಸ್ಥೆ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಬಹುದು. ತಮ್ಮ ಅಧೀನ ಪ್ರದೇಶಗಳಲ್ಲಿ ಬರುವ ಕೆರೆಗಳ ನಿರ್ವಹಣೆಗೆ ರೈತರನ್ನು ಹೊಣೆಯನ್ನಾಗಿಸುವ ಉದ್ದೇಶದಿಂದ ಮೈಸೂರು ಅರಸರು ಕೆರೆ ಪಂಚಾಯಿತಿ ಮಸೂದೆಯನ್ನು ಜಾರಿ ತಂದರು (ಮೈಸೂರು ಆಕ್ಟ್,೧೯೧೧). ಆ ಕಾಯಿದೆ ಪ್ರಕಾರ ಕೆರೆ ಸಂರಕ್ಷಣೆ ಮತ್ತು ನಿರ್ವಹಣೆ ಕೆರೆ ಪಂಚಾಯತ್‌ನ ಜವಾಬ್ದಾರಿ. ನಿರ್ದಿಷ್ಟ ಮೊತ್ತದ ಭೂ ಕಂದಾಯ ಕಟ್ಟುವ ರೈತರು ಮಾತ್ರ ಕೆರೆ ಪಂಚಾಯತ್‌ನ ಸದಸ್ಯರಾಗಲು ಅರ್ಹರಾಗಿದ್ದರು. ಮಹಿಳೆಯರು ಜಿಲ್ಲಾಧಿಕಾರಿಗಳು ನಿರ್ಧರಿಸುತ್ತಿದ್ದರು. ಅದರಲ್ಲಿ ನಾಲ್ಕನೇ ಒಂದಂಶದಷ್ಟು ಸದಸ್ಯರನ್ನು ಒಣ ಭೂಮಿ ಹೊಂದಿರುವವರು ಆಯ್ಕೆ ಮಾಡುತ್ತಾರೆ. ಉಳಿದವರನ್ನು ನೀರಾವರಿಯುಳ್ಳ ರೈತರಿಂದ ಆರಿಸುತ್ತಾರೆ. ಊರಿನ ಪಟೇಲರು ಪಂಚಾಯತ್ ಅಧ್ಯಕ್ಷರಾಗಿರುತ್ತಾರೆ. ಕೆರೆ ನಿರ್ವಹಣೆಗೆ ತಗಲುವ ವೆಚ್ಚವನ್ನು ಭರಿಸಲು ವಿವಿಧ ಮಾರ್ಗಗಳನ್ನು ಸೂಚಿಸಲಾಗಿತ್ತು. ಕೆರೆ ಸಂರಕ್ಷಣೆಯ ಕೆಲಸವನ್ನು ಪಂಚಾಯತ್ ತಮ್ಮ ಸದಸ್ಯರಿಗೆ ವಹಿಸುತ್ತಿತ್ತು. ತಮ್ಮ ಪಾಲಿನ ಸಂರಕ್ಷಣಾ ಕೆಲಸವನ್ನು ಪೂರೈಸಲು ರೈತರು ವಿಫಲರಾದರೆ ಅವರು ಒಂದೋ ಆ ಕೆಲಸಕ್ಕೆ ತಗಲುವ ವೆಚ್ಚವನ್ನು ಭರಿಸಬೇಕು. ಇಲ್ಲವಾದರೆ ತಮ್ಮ ಪರವಾಗಿ ಕೆಲಸ ಮಾಡಲು ಕೂಲಿಗಳನ್ನು ಕಳುಹಿಸಬೇಕಿತ್ತು. ತನ್ನ ಆದಾಯಕ್ಕಾಗಿ ಕೆರೆಯಲ್ಲಿನ ಮೀನುಗಳನ್ನು ಮಾರಲು ಪಂಚಾಯತ್‌ಗೆ ಅಧಿಕಾರವಿತ್ತು. ಕೆರೆ ಪಾತ್ರದಲ್ಲಿನ ಹುಲ್ಲನ್ನು ಏಲಂ ಮಾಡುವುದರಿಂದ, ಕೆರೆ ಏರಿ ಮೇಲೆ ಇರುವ ಮರಗಿಡಗಳ ಮಾರಾಟದಿಂದ ಮತ್ತು ಕೆಲವು ಬಾರಿ ಕೆರೆ ಪಾತ್ರವನ್ನು ತಾತ್ಕಾಲಿಕವಾಗಿ ಕೃಷಿ ಮಾಡಲು ಗೇಣಿಗೆ ಕೊಡುವುದರಿಂದ ಪಂಚಾಯತ್ ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳಬಹುದಿತ್ತು. ಇದರ ಜತೆಗೆ ಸಹಾಯ ಧನ, ಮುಂಗಡ ಮತ್ತು ಕೆಲವು ಬಾರಿ ಸಾಲ ರೂಪದಲ್ಲಿ ಸರಕಾರದಿಂದ ಸಹಾಯ ದೊರೆಯುವ ಸಾಧ್ಯತೆಗಳಿದ್ದವು. ಹೀಗೆ ೧೯೧೧ರಲ್ಲಿ ಮೈಸೂರು ಅರಸರು ಕೆರೆ ಸಂರಕ್ಷಣೆ ಕುರಿತು ಮಾಡಿದ ಕೆರೆ ಪಂಚಾಯತ್ ಕಾಯಿದೆ ಹಿಂದೆ ಇದ್ದ ಸಹಭಾಗಿತ್ವದ ಚಿತ್ರಣವನ್ನು ಇನ್ನೂ ಸ್ಪಷ್ಟಗೊಳಿಸುತ್ತದೆ (ಮೈಸೂರು ಆಕ್ಟ್ ೧೯೧೧). ನಮ್ಮ ಸಂಸ್ಕೃತಿಯಲ್ಲಿ ಇದ್ದ ಸಹಭಾಗಿತ್ವದ ಕಿರು ಪರಿಚಯ ಆದಂತಾಯಿತು. ಅದರ ಮುಖ್ಯ ಗುಣ ಲಕ್ಷಣಗಳನ್ನು ಹೀಗೆ ಪಟ್ಟಿ ಮಾಡಬಹುದು. ಒಂದು, ದೊರೆಗಳು, ಅಧಿಕಾರಿಗಳು, ಶ್ರೀಮಂತ ವ್ಯಾಪಾರಿಗಳು, ದೇವಸ್ಥಾನದ ಅಧಿಕಾರಿಗಳು ಮುಂತಾದವರು ಕೆರೆ ಕಟ್ಟಿಸುತ್ತಿದ್ದರು. ಕೆರೆ ನಿರ್ಮಾಣದಲ್ಲಿ ರೈತರು ತಮ್ಮ ಶಕ್ತಿಯಾನುಸಾರ ಪಾಲುಗೊಳ್ಳಬೇಕಿತ್ತು. ಎರಡು, ಕೆರೆಗಳ ಸಂರಕ್ಷಣೆ ಮತ್ತು ನೀರಾವರಿ ನಿರ್ವಹಣೆ ರೈತರ ಹೊಣೆ. ಮೂರು, ಆ ಹೊಣೆಯಿಂದ ನೀರು ಬಳಕೆದಾರರು ತಪ್ಪಿಸಿಕೊಳ್ಳುವ ಸಾಧ್ಯತೆ ಇರಲಿಲ್ಲ. ನಾಲ್ಕು, ಕೆರೆ ನೀರಾವರಿ ನಿರ್ವಹಣೆಗಾಗಿ ಕೆರೆ ಪಂಚಾಯತ್‌ಗಳನ್ನು ಸಂಘಟಿಸುತ್ತಿದ್ದರು. ಐದು, ಅದರ ಸದಸ್ಯತ್ವ ಕೇವಲ ದೊಡ್ಡ ಮೊತ್ತದ ಭೂ ಕಂದಾಯ ಸಂದಾಯ ಮಾಡುವ ರೈತರಿಗೆ ಸೀಮಿತವಾಗಿತ್ತು. ಆರು, ಸಣ್ಣ ರೈತರು, ಕೃಷಿ ಕೂಲಿಗಳು, ಮಹಿಳೆಯವರು, ಕೆರೆ ನೀರು ಬಳಸುವ ಇತರರು ಪಂಚಾಯತ್ ಸದಸ್ಯರಾಗುವ ಸಾಧ್ಯತೆಗಳು ಇರಲಿಲ್ಲ ಅಥವಾ ಹಿಂದಿನ ಸಹಭಾಗಿತ್ವದ ಭಾಗವಾಗಿರಲಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ ಅಂದಿನ ಸಹಭಾಗಿತ್ವ ಸಮಾಜದ ಮೇಲ್ ಸ್ತರಕ್ಕೆ ಸೀಮಿತವಾಗಿದ್ದ ಒಂದು ವ್ಯವಸ್ಥೆ.

(೨)

**ಇಂದಿನ ಬಳಕೆದಾರರ ದೃಷ್ಟಿಯಲ್ಲಿ ಹಿಂದಿನ ವ್ಯವಸ್ಥೆ**

ಕಮಲಾಪುರ, ತಿಮ್ಮಲಾಪುರ ಮತ್ತು ಕಲ್‌ತಾವರೆಗೆರೆ ಊರಿನಲ್ಲಿರುವ ಕೆರೆ ನೀರಾವರಿ ಬಳಕೆದಾರರನ್ನು ಭೇಟಿಯಾಗಿ ಹಿಂದಿನ ಸಹಭಾಗಿತ್ವ ಕುರಿತು ಕೇಳಲಾಯಿತು. ಸಹಭಾಗಿತ್ವಕ್ಕೆ ಸಂಬಂಧಿಸಿದ ಸುಮಾರು ಇಪ್ಪತ್ತು ಅಂಶಗಳ ಕುರಿತು ಅವರ ಅಭಿಪ್ರಾಯ ಸಂಗ್ರಹಿಸಲಾಯಿತು. ಅವುಗಳನ್ನು ಸ್ಥೂಲವಾಗಿ ಆರು ಗುಂಪುಗಳಾಗಿ ವಿಂಗಡಿಸಿಕೊಳ್ಳಬಹುದು. ಒಂದು, ಬಳಕೆದಾರರ ಸಂಘಟನೆ ಕುರಿತು. ಇಲ್ಲಿ ಮುಖ್ಯವಾಗಿ

ಸಂಘಟನೆಯ ಸದಸ್ಯರು, ಅವರು ನೀಡಬೇಕಾದ ಸದಸ್ಯತನ ಮತ್ತು ನಡೆಸಬೇಕಾದ ಸದಸ್ಯರ ಸಭೆ ಕುರಿತು ವಿಚಾರಿಸಲಾಗಿದೆ. ಹಿಂದೆ ಇದ್ದ ಕೆರೆ ನೀರಿನ ನಿರ್ವಹಣೆ ಮತ್ತು ಕೆರೆ ಸಂರಕ್ಷಣೆ ಕುರಿತು ರೈತರಲ್ಲಿ ವಿವಿಧ ನಿಲುವುಗಳಿವೆ. ಕೆಲವರು ಹಿಂದೆ ಸಹಭಾಗಿತ್ವ ಇತ್ತು ಎಂದರೆ ಇನ್ನು ಕೆಲವರು ಇಲ್ಲ ಮತ್ತು ಕೆಲವರು ಗೊತ್ತಿಲ್ಲ ಎಂದಿದ್ದಾರೆ. ಇಲ್ಲ ಮತ್ತು ಗೊತ್ತಿಲ್ಲ ಎನ್ನುವವರನ್ನು ಒಟ್ಟು ಸೇರಿಸಿದರೆ ಅವರ ಸಂಖ್ಯೆ ಸರಿ ಸುಮಾರು ಮೂರನೆ ಒಂದರಷ್ಟಿದೆ. ಕಮಲಾಪುರದಲ್ಲಿ ಭೇಟಿಯಾದ ರೈತರಲ್ಲಿ ಮೂರನೆ ಎರಡರಷ್ಟು ರೈತರು ಹಿಂದಿನ ವ್ಯವಸ್ಥೆ ಬಗ್ಗೆ ತಿಳುವಳಿಕೆ ಸೂಚಿಸಿದ್ದಾರೆ. ಜತೆಗೆ ಅರಿವಿದೆ ಎನ್ನುವವರಲ್ಲಿ ಹಿರಿಯರ ಸಂಖ್ಯೆ ಹೆಚ್ಚಿದೆ. ತಿಮ್ಮಲಾಪುರದ ಸುಮಾರು ಅರ್ಧದಷ್ಟು ಮಂದಿ ಹಿಂದಿನ ವ್ಯವಸ್ಥೆ ಬಗ್ಗೆ ಖಚಿತವಾಗಿ ಹೇಳಲು ಹಿಂದೆ ಮುಂದೆ ನೋಡಿದರು. ಅದಕ್ಕೆ ಕಾರಣವನ್ನು ಅವರೆ ನೀಡಿದರು. ಈಗ ಅವರು ವಾಸವಾಗಿರುವ ಊರು ಅವರ ಹಿರಿಯರು ಹುಟ್ಟಿ ಬೆಳೆದ ಊರಲ್ಲ. ಅವರ ಹಿರಿಯರು ಹುಟ್ಟಿ ಬೆಳದ ಊರು ಮರಿಯಮ್ಮನ ಹಳ್ಳಿ ಪಕ್ಕ ಒಂದೂರು. ಅದು ಐವತ್ತರ ದಶಕದಲ್ಲಿ ತುಂಗಭದ್ರಾ ಆಣೆಕಟ್ಟಿನ ನೀರು ನಿಂತು ಮುಳುಗಡೆಯಾಯಿತು. ಆವಾಗ ಸರಕಾರ ಅವರಿಗೆ ತಿಮ್ಮಲಾಪುರದಲ್ಲಿ ಭೂಮಿ ಕೊಟ್ಟು ಹೊಸ ಜೀವನಕ್ಕೆ ಅವಕಾಶ ಮಾಡಿಕೊಟ್ಟಿತು. ತಿಮ್ಮಲಾಪುರ ಊರವರ ಪ್ರಕಾರ ಹಿಂದೆ ಹಳ್ಳಿಯೇ ಆಗಿರಲಿಲ್ಲ. ಅದು ವಿಜಯನಗರ ಹೊರಹೊಲಯದಲ್ಲಿ ಇದ್ದ ಯಾವುದೋ ಒಂದು ಹಳ್ಳಿಯ ಸ್ಮಶಾನವಾಗಿತ್ತು. ಆದುದರಿಂದ ಅವರಿಗೆ ಆ ಹಳ್ಳಿ ಮತ್ತು ಅದರ ಮೇಲ್‌ಗಡೆ ಇರುವ ಕೆರೆಯ ಚರಿತ್ರೆ ಬಗ್ಗೆ ವಿಶೇಷ ಮಾಹಿತಿ ಇಲ್ಲ ಎಂದು ಅಭಿಪ್ರಾಯಪಡುತ್ತಾರೆ. ಕಲ್‌ತಾವರೆಗೆರೆಯಲ್ಲಿ ಈ ಸಮಸ್ಯೆ ಇಲ್ಲ. ಅದು ಕಮಲಾಪುರದಂತೆ ಹಳೇ ಕೆರೆ ಮತ್ತು ಹಳೇ ತಲೆಮಾರಿನ ಜನ ಇಂದು ಇದ್ದಾರೆ. ಅಲ್ಲಿಯ ಹಿರಿಯರು ಕೂಡ ಕೆರೆ ನೀರಿನ ಉಸ್ತುವಾರಿಯನ್ನು ಹಿಂದೆ ಊರವರೆ ನೋಡಿಕೊಳ್ಳುತ್ತಿದ್ದರು ಎನ್ನುತ್ತಾರೆ. ಸಹಭಾಗಿತ್ವವನ್ನು ಪುನರ್ ಜೀವಗೊಳಿಸುವಲ್ಲಿ ಜನ ಸಾಮಾನ್ಯರ ಕಲ್ಪನೆಯಲ್ಲಿರುವ ಹಿಂದಿನ ವ್ಯವಸ್ಥೆ ಚರಿತ್ರೆಯಲ್ಲಿ ಬರುವ ಹಿಂದಿನ ವ್ಯವಸ್ಥೆಗಿಂತ ಗಟ್ಟಿ. ಯಾಕೆಂದರೆ ಚರಿತ್ರೆಯಲ್ಲಿನ ಹಿಂದಿನ ವ್ಯವಸ್ಥೆ ಬಗ್ಗೆ ಜನರಿಗೆ ಮನವರಿಕೆ ಮಾಡುವುದು ಕಷ್ಟ. ಆದರೆ ಅವರ ಕಲ್ಪನೆಯಲ್ಲಿರುವ ಸಹಭಾಗಿತ್ವಕ್ಕೆ ವಿಶೇಷ ಶ್ರಮ ಇಲ್ಲವೆ ಪುನರ್ ಜೀವ ನೀಡಬಹುದು. ಆದುದರಿಂದ ಹಿಂದೆ ಸಹಭಾಗಿತ್ವ ಇತ್ತು ಎನ್ನುವುದು ಇಂದಿನ ಸಹಭಾಗಿತ್ವದ ಸಾಧ್ಯತೆಯನ್ನು ಗಣನೀಯವಾಗಿ ಹೆಚ್ಚಿಸುತ್ತದೆ. ಆದರೆ ಈ ಕುರಿತು ಯಾವುದೇ ತೀರ್ಮಾನಕ್ಕೆ ಬರುವ ಮುನ್ನ ಮತ್ತೊಂದು ವಿಚಾರದತ್ತ ಗಮನ ಹರಿಸಬೇಕಾಗಿದೆ. ಆ ಹಿಂದಿನ ವ್ಯವಸ್ಥೆಯ ರೂಪುರೇಶೆ ಬಗ್ಗೆ ವಿಚಾರಿಸಿದರೆ ತುಂಬಾ ನಿರಾಶದಾಯಕ ಉತ್ತರ ಬಂತು. ಬಳಕೆದಾರರ ಸಂಘಟನೆ ಅಥವಾ ನೀರು ಪಂಚಾಯತ್ ಹಿಂದೆ ಇದ್ದುದರ ಬಗ್ಗೆ ತಮಗೆ ಅರಿವಿಲ್ಲ ಎಂದು ಬಹುತೇಕ ಎಲ್ಲ ಹಳ್ಳಿಯ ಎಲ್ಲ ರೈತರು ಅಭಿಪ್ರಾಯ ಪಡುತ್ತಾರೆ. ಬಳಕೆದಾರರ ಸಂಘಟನೆ ಬಗ್ಗೆಯೇ ಅರಿವಿಲ್ಲ ಎಂದ ಮೇಲೆ ಸದಸ್ಯರು, ಸದಸ್ಯತನ, ಸದಸ್ಯರ ಸಭೆ ಇತ್ಯಾದಿಗಳ ಬಗ್ಗೆ ಮಾಹಿತಿ ಸಿಗುವುದು ದುರ್ಲಭ.

ಎರಡು, ಬಳಕೆದಾರರು ಪಾವತಿಸಬೇಕಾದ ತೆರಿಗೆಗೆ ಸಂಬಂಧಿಸಿದ ಪ್ರಶ್ನೆಗಳು. ಇಲ್ಲಿ ನೀರು ತೆರಿಗೆಯ ಇರುವಿಕೆ, ತೆರಿಗೆ ದರ ಅಥವಾ ಮೊತ್ತ ಮತ್ತು ತೆರಿಗೆ ಪಾವತಿ ಕುರಿತು ಜನರ ಅಭಿಪ್ರಾಯಗಳನ್ನು ಕೇಳಲಾಗಿತ್ತು. ಹಿಂದೆ ನೀರಿಗೆ ತೆರಿಗೆ ಕೊಡುವ ಕ್ರಮ ಇತ್ತೇ ಎಂದರೆ ಕಮಲಾಪುರ ಮತ್ತು ತಿಮ್ಮಲಾಪುರದ ಹೆಚ್ಚು ಕಡಿಮೆ ಎಲ್ಲ ರೈತರು ಇತ್ತು ಎಂದು ಹೇಳಿದ್ದಾರೆ. ಇಲ್ಲಿ ಹಿಂದೆ ಎನ್ನುವುದನ್ನು ನಿರ್ದಿಷ್ಟವಾಗಿ ವ್ಯಾಖ್ಯಾನಿಸಿಲ್ಲ. ಹಿಂದೆ ಎಂದರೆ ಕೆಲವರಿಗೆ ಕೆಲವು ವರ್ಷಗಳ ಹಿಂದೆ. ಇನ್ನು ಕೆಲವರಿಗೆ ಅವರ ಹಿರಿಯರ ಕಾಲದಲ್ಲಿ ಮತ್ತು ಕೆಲವರಿಗೆ ವಿಜಯನಗರ ಕಾಲದಲ್ಲಿ. ಸಂದರ್ಶನದ ಸಂದರ್ಭದಲ್ಲಿ ಹಿಂದೆ ಅಂದರೆ ತಮ್ಮ ಹಿರಿಯರ ಕಾಲದಲ್ಲಿ ಎನ್ನುವುದನ್ನು ಮನದಟ್ಟು ಮಾಡಲು ಪ್ರಯತ್ನಿಸಲಾಗಿತ್ತು. ಆದರೂ ತಿಮ್ಮಲಾಪುರದ ಎಲ್ಲ ರೈತರು ಹಿಂದೆ ತೆರಿಗೆ ಕೊಡುವ ಕ್ರಮ ಇತ್ತು ಎನ್ನುವಾಗ ಅವರು ತಿಮ್ಮಲಾಪುರಕ್ಕೆ ಬಂದ ನಂತರ ಇದ್ದಿರಬಹುದೋ ಏನೋ ಎಂದು ಕೇಳಲಾಯಿತು. ಅವರ ಪ್ರಕಾರ ನೀರಿಗೆ ತೆರಿಗೆ ಕೊಡುವ ಕ್ರಮ ಒಂದು ಸಾಮಾನ್ಯ ವಿಚಾರ. ಅದು ಎಲ್ಲರಿಗೂ ತಿಳಿದ ವಿಚಾರ ಮತ್ತು ಯಾವ ಊರಿಗೂ ಹೋದರೂ ಇದೆ ಎಂದು ಹೇಳುತ್ತಾರೆ. ಆದರೆ ವಿಚಿತ್ರವೆಂದರೆ ಕಲ್‌ತಾವರೆಗೆರೆ ಬಹುತೇಕ ಎಲ್ಲ ರೈತರು ಹಿಂದೆ ತೆರಿಗೆ ಕೊಡುವ ಕ್ರಮ ಇರಲಿಲ್ಲ ಎನ್ನುತ್ತಾರೆ. ತುಂಬಾ ಹಳೇ ಕೆರೆ ಮತ್ತು ಹಳೇ ತಲೆಮಾರಿನ ಜನರ ಅಭಿಪ್ರಾಯ ಅದು. ಬಹಳ ಅಭಿಪ್ರಾಯವನ್ನು ಹೇಗೆ ಅರ್ಥಮಾಡಿಕೊಳ್ಳುವುದು?

ತೆರಿಗೆ ದರ ಕುರಿತು ಕಮಲಾಪುರ ಮತ್ತು ತಿಮ್ಮಲಾಪುರದ ರೈತರ ಅಭಿಪ್ರಾಯ ಒಂದೇ ಇಲ್ಲ. ಕಮಲಾಪುರದ ಬಹುತೇಕ ರೈತರು ಹಿಂದೆ ತೆರಿಗೆ ದರ ಅಥವಾ ಮೊತ್ತ ಸರಿಯಾಗಿತ್ತು ಎಂದಿದ್ದಾರೆ. ಹಾಗೆ ಹೇಳುವಾಗ ಅವರ ಮನಸ್ಸಲ್ಲಿ ಯಾವ ಹಿಂದೆ ಇತ್ತು ಎನ್ನುವುದು ಕಷ್ಟ.

ಕಮಲಾಪುರ ಕೆರೆ ಬೃಹತ್ ನೀರಾವರಿ ಇಲಾಖೆ ವ್ಯಾಪ್ತಿಗೆ ಬರುತ್ತದೆ. ತುಂಗಾಭದ್ರಾ ಆಣೆಕಟ್ಟಿನ ನೀರು ಕೆರೆಗೆ ಮುಖ್ಯ ಆಧಾರ. ಕಬ್ಬು, ಭತ್ತ, ಬಾಳೆ ಇಲ್ಲಿನ ರೈತರ ಮುಖ್ಯ ಬೆಳೆಗಳು. ೧೦೦೦ ಇಸವಿಯವರೆಗೆ ಒಂದು ಎಕ್ರೆ ಕಬ್ಬಿನ ಬೆಳೆಗೆ ವಾರ್ಷಿಕ ನೀರಿನ ತೆರಿಗೆ ರೂ.೧೭೫ ಆಗಿತ್ತು. ೧೦೦೯ರಲ್ಲ ನೀರಿನ ತೆರಿಗೆಯನ್ನು ರೂ.೪೫೦ಕ್ಕೆ ಏರಿಸಲಾಗಿತ್ತು. ಆದುದರಿಂದ ಅಲ್ಲಿನ ಎಲ್ಲ ರೈತರು ಹಿಂದೆ ತೆರಿಗೆ ಸರಿ ಎತ್ತು ಎನ್ನುವಾಗ ಅವರ ಹಿಂದೆಯನ್ನು ಅವರ ಹಿರಿಯರ ಅಥವಾ ವಿಜಯನಗರ ಕಾಲದ ತೆರಿಗೆಗೆ ಹೋಲಿಸುವುದು ಕಷ್ಟ. ಇಲ್ಲಿ ಹಿಂದೆ ಸರಿ ಇತ್ತು ಎನ್ನುವಾಗ ಈಗ ಸರಿ ಇಲ್ಲ ಎನ್ನುವ ಧ್ವನಿ ಇದೆ. ತಿಮ್ಮಲಾಪುರದ ಮೂರನೆ ಒಂದಕ್ಕಿಂತ ಹೆಚ್ಚು ರೈತರು ಹಿಂದೆ ತೆರಿಗೆ ಮೊತ್ತ ಸರಿ ಇತ್ತು ಎಂದಿದ್ದಾರೆ. ಅವರಲ್ಲಿ ಈಗ ವಾರ್ಷಿಕ ತೆರಿಗೆ ದರ ಕೇವಲ ರೂ.೪೦. ಒಬ್ಬಳು ಅಜ್ಜಿ ಜತೆ, 'ಅಲ್ಲ ನೀನು ರೂ.೪೦ನ್ನು ಕೂಡ ಜಾಸ್ತಿ ಎಂದರೆ ಹೇಗೆ?' ಎಂದೆ. ಅದಕ್ಕೆ ಅವಳು, 'ನನಗೆ ಇರುವುದು ಎರಡು ಎಕರೆ ಭೂಮಿ. ಅದರಲ್ಲಿ ವರ್ಷವಿಡೀ ಕೃಷಿ ಮಾಡಿದರೂ ನನ್ನ ಸಂಸಾರದ ಹೊಟ್ಟೆ ತುಂಬುವುದಿಲ್ಲ. ಕೆರೆ ನೀರು ಒಂದು ಕೃಷಿಗೂ ಸರಿಯಾಗಿ ಬರುವುದಿಲ್ಲ. ಅದಕ್ಕೆ ನಾನ್ಯಾಕೆ ನಲ್ವತ್ತು ರೂಪಾಯಿ ಕೊಡಬೇಕು' ಎಂದು ಉತ್ತರಿಸಿದಳು. ಹಿಂದೆ ತೆರಿಗೆ ಕಡಿಮೆ ಇತ್ತು ಎನ್ನುವ ಅಜ್ಜಿಯ ವಾದದ ಹಿಂದೆ ಈಗ ಜಾಸ್ತಿ ಇದೆ ಎನ್ನುವ ಗ್ರಹಿಕೆ ಇದೆ. ಜತೆಗೆ ಅದು ಜಾಸ್ತಿ ಆದುದು ಮೊತ್ತದ ದೃಷ್ಟಿಯಿಂದ ಅಲ್ಲ; ಬದಲಿಗೆ ಪೂರೈಕೆಯಾಗುವ ನೀರಿನ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಅಜ್ಜಿ ಆ ತೀರ್ಮಾನಕ್ಕೆ ಬಂದಿರುವುದು. ತೆರಿಗೆ ಪಾವತಿ ಬಗ್ಗೆ ವಿಚಾರಿಸಿದರೆ ಮಿಶ್ರ ಅಭಿಪ್ರಾಯ ವ್ಯಕ್ತವಾಗಿದೆ. ಕಮಲಾಪುರದ ಕೇವಲ ೭ ರೈತರು (ಭೇಟಿಯಾದ ೧೫ರಲ್ಲಿ) ಹಿಂದೆ ತೆರಿಗೆ ಕ್ರಮ ಪ್ರಕಾರ ಪಾವತಿ ಆಗುತ್ತಿತ್ತು ಎಂದು ಹೇಳುತ್ತಾರೆ. ಉಳಿದವರು ಆಗುತ್ತಿರಲಿಲ್ಲ ಅಥವಾ ಗೊತ್ತಿಲ್ಲ ಅಂದಿದ್ದಾರೆ. ಇಲ್ಲೂ ಕೂಡ ವರ್ತಮಾನ ಅವರ ಭೂತಕ್ಕೆ ಸಂಬಂಧಿಸಿದ ಅಭಿಪ್ರಾಯವನ್ನು ಪ್ರಭಾವಿಸಿರಬಹುದು. ವರ್ತಮಾನದಲ್ಲಿ ಕಮಲಾಪುರದಲ್ಲಿ ನೀರಿನ ತೆರಿಗೆ ಕ್ರಮ ಪ್ರಕಾರ ವಸೂಲಿಯಾಗುತ್ತಿದೆ. ತಿಮ್ಮಲಾಪುರದ ಅರ್ಧಕ್ಕಿಂತ ಹೆಚ್ಚು ರೈತರು ಅದೇ ಅಭಿಪ್ರಾಯ (ಹಿಂದೆ ಕ್ರಮ ಪ್ರಕಾರ ತೆರಿಗೆ ಸಂದಾಯವಾಗುತ್ತಿತ್ತು) ನೀಡುತ್ತಾರೆ. ಇಲ್ಲೂ ಕೂಡ ಹಿಂದೆ ಅನ್ನುವಾಗ ವರ್ತಮಾನಕ್ಕೆ ಹೋಲಿಸಿಕೊಂಡು ಆ ತೀರ್ಮಾನಕ್ಕೆ ಬಂದಿರಲೂಬಹುದು.

ಮೂರು, ಕೆರೆ ಪಾತ್ರ ಒತ್ತುವರಿ ಕುರಿತಂತೆ ರೈತರ ಅಭಿಪ್ರಾಯ. ಕಮಲಾಪುರ ಕೆರೆಯ ಸುಮಾರು ನೂರು ಎಕ್ರೆಗಳಿಗಿಂತಲೂ ಹೆಚ್ಚು ಕೆರೆ ಪಾತ್ರ ಒತ್ತುವರಿ ಆಗಿದೆ. ಅಲ್ಲಿ ಸುಮಾರು ಐವತ್ತು ಕುಟುಂಬಗಳು ಕೃಷಿ ಮಾಡುತ್ತಿವೆ. ಈ ಹಿನ್ನೆಲೆಯಲ್ಲಿ ಹಿಂದೆ ಕೆರೆ ಪಾತ್ರ ಒತ್ತುವರಿ ಸಮಸ್ಯೆ ಇತ್ತೇ? ಎಂದು ವಿಚಾರಿಸಿದರೆ ಕಮಲಾಪುರದ ಬಹುತೇಕ ರೈತರು ಇತ್ತು ಎಂದು ಅಭಿಪ್ರಾಯಪಡುತ್ತಾರೆ. ಪುನಃ ಇಲ್ಲಿ ಹಿಂದೆ ಎಂದರೆ ಎಷ್ಟು ಹಿಂದೆ ಎನ್ನುವ ಪ್ರಶ್ನೆ ಕೇಳಬೇಕಾಗುತ್ತದೆ. ಕೆಲವು ಹಿರಿಯರ ಪ್ರಕಾರ ಹಿಂದೆ ಕೆರೆ ಪಾತ್ರ ಒತ್ತುವರಿ ಸಮಸ್ಯೆ ಇರಲಿಲ್ಲ. ಈ ಸಮಸ್ಯೆ ಇರಲಿಲ್ಲ. ಹಾಗೆ ಹೇಳುವಾಗ ಪುನಃ ವರ್ತಮಾನವೇ ಅವರ ಮುಂದೆ ಇದ್ದಂತೆ ಕಾಣುತ್ತದೆ. ತಿಮ್ಮಲಾಪುರದ ನಾಲ್ಕು ಕೆರೆಗಳು ಕೂಡ ರಕ್ಷಿತ ಅರಣ್ಯ ಪ್ರದೇಶದಲ್ಲಿವೆ. ಆದುದರಿಂದ ಆ ಸ್ಥಳದಲ್ಲಿ ಒತ್ತುವರಿ ಮಾಡುವುದು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿದಂತೆ ಆಗುತ್ತದೆ. ಅದಕ್ಕೆ ಅರಣ್ಯ ಇಲಾಖೆಯವರು ಅವಕಾಶ ಕೊಡುವುದಿಲ್ಲ. ಹಾಗೆ ಅಲ್ಲಿ ಇಂದು ಒತ್ತುವರಿ ಆಗಿಲ್ಲ. ಇಂದು ಒತ್ತುವರಿ ಇಲ್ಲದಿರುವುದು ಹಿಂದೆ ಕೂಡ ಒತ್ತುವರಿ ಇರಲಿಲ್ಲ ಎಂದು ರೈತರು ಅಭಿಪ್ರಾಯಪಡಲು ಕಾರಣವಾಗಿರಬಹುದು. ಕಲ್ ತಾವರೆಗೆರೆಯಲ್ಲಿ ಹಿಂದೆ ಒತ್ತುವರಿ ಇರಲಿಲ್ಲ ಎಂದು ಬಹುತೇಕ ಎಲ್ಲ ರೈತರು ಅಭಿಪ್ರಾಯ ಪಡುತ್ತಾರೆ. ವರ್ತಮಾನದಲ್ಲೂ ಅಲ್ಲಿನ ಕೆರೆ ಪಾತ್ರ ಒತ್ತುವರಿ ಆಗಿಲ್ಲ. ಒತ್ತುವರಿ ತಡೆಯುವ ಅಗತ್ಯ ಕುರಿತು ಬಹುತೇಕ ಎಲ್ಲ ರೈತರಲ್ಲೂ ಸಹಮತವಿದೆ. ಹಿಂದೆ ಒತ್ತುವರಿ ಇಲ್ಲದಿರುವಲ್ಲಿ (ಆ ಹಿಂದೆ ಹೇಗೆ ವರ್ತಮಾನದ ಬೆಳವಣಿಗೆ ಮೇಲೆ ಆಧಾರಿತ ಎನ್ನುವುದನ್ನು ನಾವು ನೋಡಿದ್ದೇವೆ) ಅದನ್ನು ತಡೆಯುವ ಅಗತ್ಯದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ವರ್ತಮಾನದಲ್ಲಿ ಒತ್ತುವರಿ ಸಮಸ್ಯೆ ಇರುವ ಪ್ರದೇಶದ ರೈತರು ಹಿಂದೆ ಕೂಡ ಆ ಸಮಸ್ಯೆ ಇತ್ತು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಹಿಂದೆ ಆ ಸಮಸ್ಯೆ ಇದ್ದುದರಿಂದ ಹಿಂದೆ ಕೂಡ ಅದನ್ನು ತಡೆಯುವ ಅಗತ್ಯವಿತ್ತು ಎಂದು ಅಭಿಪ್ರಾಯ ಪಡುವುದು ಸಹಜವಾಗುತ್ತದೆ. ಒತ್ತುವರಿ ಕುರಿತಂತೆ ಇನ್ನೊಂದು ಬಹುಮುಖ್ಯ ಪ್ರಶ್ನೆ- ಒತ್ತುವರಿ ತಡೆಯುವ ಕೆಲಸ ಯಾರು ಮಾಡಬೇಕು? ಕಮಲಾಪುರ ಎಲ್ಲ ರೈತರು, ತಿಮ್ಮಲಾಪುರದ ಮೂರನೆ ಒಂದರಷ್ಟು ರೈತರು ಮತ್ತು ಕಲ್‌ತಾವರೆಗೆರೆಯ ಅರ್ಧದಷ್ಟು ರೈತರು ಒತ್ತುವರಿ ತಡೆಯುವುದು ಸರಕಾರದ ಕೆಲಸ ಎಂದು ಅಭಿಪ್ರಾಯ ಪಡುತ್ತಾರೆ. ತಿಮ್ಮಲಾಪುರದಲ್ಲಿ ಆ ಸಮಸ್ಯೆಯೇ ಇಲ್ಲದಿರುವುದುದರಿಂದ ಅದರ ಪರಿಹಾರಕ್ಕೆ ಯಾರನ್ನು ಹೊಣೆಯಾಗಿಸಬೇಕು ಎನ್ನುವ ಪ್ರಶ್ನೆ ರೈತರನ್ನು ಅಷ್ಟಾಗಿ

ಕಾಡಿದಂತೆ ಕಾಣುವುದಿಲ್ಲ. ಒಂದು ವೇಳೆ ಅವರಲ್ಲೂ ಕಮಲಾಪುರದಷ್ಟೆ ಗಾಢವಾಗಿ ಒತ್ತುವರಿ ಸಮಸ್ಯೆ ಇರುತ್ತಿದ್ದರೆ ಅವರು ಇತರ ರೈತರಿಗಿಂತ ಭಿನ್ನವಾದ ಉತ್ತರ ಕೊಡುತ್ತಿದ್ದನು ಎಂದು ಊಹಿಸುವುದು ಕಷ್ಟ.

ನಾಲ್ಕು, ಕೆರೆ ಕಾಲುವೆ ಇತ್ಯಾದಿಗಳಿಗೆ ರಿಪೇರಿಗೆ ಶ್ರಮದಾನ ಮಾಡುವ ಕ್ರಮ ಹಿಂದೆ ಇತ್ತೇ ಎಂದು ಕೇಳಲು ಎಲ್ಲ ಹಳ್ಳಿಯ ಹೆಚ್ಚಿನ ರೈತರು ಇತ್ತೆಂದು ಉತ್ತರಿಸಿದ್ದಾರೆ. ಅದೇ ರೀತಿ ವರ್ತಮಾನದಲ್ಲೂ ಶ್ರಮದಾನ ಮಾಡುವ ಕ್ರಮ ಇದೆ ಎಂದು ಒಪ್ಪಿಕೊಂಡಿದ್ದಾರೆ. ಆದರೆ ಆಶ್ಚರ್ಯದ ಸಂಗತಿಯೆಂದರೆ ಕೆರೆ ಕಾಲುವೆ ಇತ್ಯಾದಿಗಳ ರಿಪೇರಿಗೆ ವಂತಿಗೆ ನೀಡುವ ಕ್ರಮ ಹಿಂದೆ ಅಥವಾ ವರ್ತಮಾನದಲ್ಲಿ ಇರಲಿಲ್ಲವೆಂದು ಎಲ್ಲ ರೈತರು ಹೇಳುತ್ತಾರೆ. ಹಣದ ವ್ಯವಹಾರ ತುಂಬಾ ಸೀಮಿತವಾಗಿದ್ದ ಕಾಲದಲ್ಲಿ ಕೆರೆ ಕಾಲುವೆ ಇತ್ಯಾದಿಗಳ ರಿಪೇರಿಗೆ ಹಣ ಕೊಡುವ ಸಂಪ್ರದಾಯ ದುಬಾರಿಯಾಗಿರಬಹುದು. ಆದರೆ ವಾಣಿಜ್ಯ ಬೆಳೆ ಬೆಳೆಯುವ ಇಂದಿನ ದಿನಗಳಲ್ಲಿ ಹಣ ಕೊಡುವ ಕ್ರಮ ಇಲ್ಲ ಎನ್ನುವ ರೈತರ ಅಭಿಪ್ರಾಯವನ್ನು ಜೀರ್ಣಿಸಿಕೊಳ್ಳುವುದು ಸ್ವಲ್ಪ ಕಷ್ಟ. ಕಮಲಾಪುರದ ಹೆಚ್ಚಿನ ರೈತರು ವಾಣಿಜ್ಯ ಬೆಳೆಗಾರರು. ಆದರೆ ಅವರಲ್ಲಿ ಹತ್ತು ಎಕ್ರೆಗಿಂತ ಭೂ ಹಿಡುವಳಿ ಇರುವವರ ಸಂಖ್ಯೆ ಸ್ವಲ್ಪ ಕಡಿಮೆ ಇದೆ. ಹೆಚ್ಚಿನ ರೈತರು ಎರಡರಿಂದ ಮೂರು ಎಕ್ರೆ ಹಿಡುವಳಿ ಇರುವವರು. ಇವರು ವಾಣಿಜ್ಯ ಬೆಳೆ ಬೆಳೆದರು ಅದರಿಂದ ಬರುವ ಆದಾಯ ಅವರ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಸಾಕಾಗುವಷ್ಟು ಮಾತ್ರ. ತಿಮ್ಮಲಾಪುರ ಅಥವಾ ಕಲ್‌ತಾವರೆಗಳಲ್ಲಿ ಒಂದು ವಿಧದ ಒಣ ಭೂಮಿ ವ್ಯವಸಾಯವೇ. ಯಾಕೆಂದರೆ ಅಲ್ಲಿನ ಕೆರೆಗಳು ಮಳೆ ಬಂದರೆ ತುಂಬುತ್ತವೆ; ಇಲ್ಲವಾದರೆ ಖಾಲಿ ಇರುತ್ತವೆ. ಉತ್ತರ ಕರ್ನಾಟಕದಲ್ಲಿ ಮಳೆ ಬರುವುದು ಗ್ಯಾರಂಟಿಯೇನಲ್ಲ. ಜತೆಗೆ ಬಹುತೇಕ ರೈತರ ಭೂಹಿಡುವಳಿ ಎರಡರಿಂದ ಮೂರು ಎಕ್ರೆಗಳು. ನೀರಾವರಿ ಇರುವಲ್ಲಿ ಇದೇನು ಕಡಿಮೆ ಹಿಡುವಳಿ ಅಲ್ಲ. ಆದರೆ ನೀರಾವರಿ ವ್ಯವಸ್ಥೆ ಇಲ್ಲದ ಕಡೆ ಮೂರು ಎಕ್ರೆ ಭೂ ಹಿಡುವಳಿ ಇರುವ ರೈತರು ಮೂರು ಹೊತ್ತಿನ ಊಟಕ್ಕೆ ಪರದಾಡುವ ಸ್ಥಿತಿ ಇದೆ. ಆದುದರಿಂದ ಇಂದು ಕೂಡ ರೈತರು ಶ್ರಮದಾನ ಮಾಡಲು ತೋರುವ ಉತ್ಸಾಹವನ್ನು ವಂತಿಗೆ ನೀಡಲು ತೋರಿಸುತ್ತಿಲ್ಲ.

ಐದು, ಕೆರೆ ಹೂಳಿನ ಸಮಸ್ಯೆ. ಕೆರೆ ಹೂಳಿನ ಸಮಸ್ಯೆ ಹಿಂದೆ ಕೂಡ ಇತ್ತೆಂದು ಕಮಲಾಪುರದ ೧೮ ಮತ್ತು ತಿಮ್ಮಲಾಪುರದ ೪ ರೈತರು ಅಭಿಪ್ರಾಯ ಪಡುತ್ತಾರೆ. ಆದರೆ ಕಲ್‌ತಾವರೆಗೆರೆಯ ಇಬ್ಬರು (ಮಾತಾಡಿಸಿದ ೧೫ ರೈತರಲ್ಲಿ) ರೈತರು ಮಾತ್ರ ಕೆರೆ ಹೂಳಿನ ಸಮಸ್ಯೆ ಹಿಂದೆ ಇತ್ತೆಂದು ಹೇಳುತ್ತಾರೆ. ವರ್ತಮಾನದ ಬೆಳವಣಿಗೆಯ ಆಧಾರದಲ್ಲಿ ಹಿಂದಿನ ಸಮಸ್ಯೆ ಕುರಿತು ರೈತರು ತಮ್ಮ ಅಭಿಪ್ರಾಯಗಳನ್ನು ನೀಡುತ್ತಾರೆಂದು ನೀರಿನ ತೆರಿಗೆ ಕುರಿತು ಚರ್ಚಿಸುವಾಗ ನೋಡಿದ್ದೇವೆ. ಆ ಥಿಸಿಸ್ ಇಲ್ಲೂ ಕೆಲಸ ಮಾಡುತ್ತಿದೆ. ಅದಕ್ಕೆ ಉದಾಹರಣೆಯೆಂದರೆ ಕಮಲಾಪುರ ಕೆರೆ ಹೂಳಿನ ಸಮಸ್ಯೆ. ಆ ಕೆರೆಯಲ್ಲಿ ತುಂಬಿದ ಹೂಳಿನ ಲೆಕ್ಕಾಚಾರವನ್ನು ಮುಂದೆ ಕೊಡಲಾಗಿದೆ. ಕೆರೆಯ ಸರಿ ಅರ್ಧ ಪಾತ್ರ ಹೂಳು ತುಂಬಿದೆ. ಅದುದರಿಂದಲೇ ಅಲ್ಲಿ ಮಾತಾಡಿಸಿದ ಎಲ್ಲ ರೈತರು ಕೆರೆ ಹೂಳಿನ ಸಮಸ್ಯೆ ಬಹು ದೊಡ್ಡ ಸಮಸ್ಯೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಕಮಲಾಪುರ ಕೆರೆಗೆ ಹೋಲಿಸಿದರೆ ತಿಮ್ಮಲಾಪುರದಲ್ಲಿ ಹೂಳಿನ ಸಮಸ್ಯೆ ಅಷ್ಟು ಬೃಹತ್ ಪ್ರಮಾಣದಲ್ಲಿ ಇಲ್ಲ. ಕಲ್‌ತಾವರೆಗೆರೆಯಲ್ಲಿನ ಕೆರೆಯಲ್ಲಿ ಸ್ವಲ್ಪ ಮಟ್ಟಿಗೆ ಹೂಳಿನ ಸಮಸ್ಯೆ ಇದೆ. ಆದಾಗ್ಯೂ ಹಿಂದೆ ಕೂಡ ಹೂಳಿನ ಸಮಸ್ಯೆ ಇತ್ತೆಂದು ಅಭಿಪ್ರಾಯ ಪಟ್ಟವರಲ್ಲಿ ಕಮಲಾಪುರ ರೈತರ ಸಂಖ್ಯೆ ಜಾಸ್ತಿ ಇದೆ. ಕೆರೆ ಹೂಳೆತ್ತಲು ಶ್ರಮದಾನ ಮಾಡುವ ಕ್ರಮ ಹಿಂದೆ ಇತ್ತೆಂದು ಹೇಳುವ ರೈತರ ಸಂಖ್ಯೆ ತುಂಬಾ ಕಡಿಮೆ. ಕಮಲಾಪುರದ ನಾಲ್ವರು, ತಿಮ್ಮಲಾಪುರದ ಮೂವರು ಮತ್ತು ಕಲ್‌ತಾವರೆಗೆರೆಯ ಒಬ್ಬ ರೈತ ಮಾತ್ರ ಹಿಂದೆ ಕೆರೆ ಹೂಳೆತ್ತಲು ಶ್ರಮದಾನ ಮಾಡುವ ಕ್ರಮ ಇತ್ತೆಂದು ಹೇಳುತ್ತಾರೆ. ಹಿಂದೆ ಹೂಳಿನ ಸಮಸ್ಯೆ ಇತ್ತೆಂದು ಶ್ರಮದಾನ ಮಾಡುವ ಕ್ರಮ ಇತ್ತೆಂದು ಹೇಳುತ್ತಾರೆ. ಹಿಂದೆ ಹೂಳಿನ ಸಮಸ್ಯೆ ಇತ್ತೆಂದು ಹೇಳುವವರಲ್ಲಿ ಕಮಲಾಪುರದಲ್ಲಿ ರೈತರ ಸಂಖ್ಯೆ ಹೆಚ್ಚಿದೆ. ಆದರೆ ಹಿಂದೆ ಅಥವಾ ಈಗ ಹೂಳೆತ್ತಲು ಶ್ರಮದಾನ ಮಾಡುವ ಕುರಿತು ಕೇಳಿದರೆ ಇದೆ ಎನ್ನುವವರ ಸಂಖ್ಯೆ ಕಮಲಾಪುರದಲ್ಲಿ ಕಡಿಮೆ ಇದೆ. ತಿಮ್ಮಲಾಪುರದ ಬಹುತೇಕ ರೈತರು ಹೂಳೆತ್ತಲು ಶ್ರಮದಾನ ಮಾಡುವ ಕ್ರಮ ಕುರಿತು ಇಲ್ಲ ಅಥವಾ ಗೊತ್ತಿಲ್ಲ ಎಂದಿದ್ದಾರೆ. ಅದಕ್ಕೆ ಕಾರಣ ಅಲ್ಲಿ ಹೂಳಿನ ಸಮಸ್ಯೆ ಇಲ್ಲದಿರುವುದಿರಬಹುದು. ಅದೇ ರೀತಿ ಹೂಳೆತ್ತಲು ವಂತಿಗೆ ನೀಡುವ ಕ್ರಮ ಹಿಂದೆ ಇರಲಿಲ್ಲವೆಂದು ಎಲ್ಲ ಹಳ್ಳಿಯ ಎಲ್ಲಾ ರೈತರು ಅಭಿಪ್ರಾಯ ಪಡುತ್ತಾರೆ. ಹಿಂದೆ ಮಾತ್ರವಲ್ಲ ಈಗಲೂ ಇಲ್ಲವೆಂದು ಅವರೆಲ್ಲರ ಅಭಿಪ್ರಾಯ. ಕೆರೆ ಹೂಳೆತ್ತುವ ಜವಾಬ್ದಾರಿ

ಕೂಡ ರೈತರದಲ್ಲ; ಸರಕಾರದ್ದೆಂದು ಬಹುತೇಕ ಎಲ್ಲ ರೈತರ ಅಂಬೋಣ. ಕೆರೆ ಹೂಳಿನ ಕುರಿತು ರೈತರ ಅಭಿಪ್ರಾಯಗಳು ಚರಿತ್ರೆಯಲ್ಲಿನ ನಡಾವಳಿಕೆಗೆ ಸಂಪೂರ್ಣ ಭಿನ್ನ. ಯಾಕೆ ಹೀಗಾಯಿತು? ಇದನ್ನು ಹೇಗೆ ಅರ್ಥಮಾಡಿಕೊಳ್ಳಬಹುದು?

ಆರು, ನೀರು ಹಂಚಿಕೆ ಕ್ರಮ ಹಿಂದೆ ಸಮರ್ಪಕವಾಗಿತ್ತೆಂದು ಕಮಲಾಪುರ ಮತ್ತು ತಿಮ್ಮಲಾಪುರದ ಬಹುತೇಕ ಎಲ್ಲ ರೈತರ ಅಭಿಪ್ರಾಯ. ಕಲ್ತಾವರೆಗೆರೆಯ ಹನ್ನೆರೆಡು ರೈತರು ಸಮರ್ಪಕವಾಗಿತ್ತೆಂದರೆ ಮೂರು ಮಂದಿ ರೈತರು (ಗೊತ್ತಿಲ್ಲವೆಂದು ಹೇಳಿದವರನ್ನು ಸೇರಿಸಿಕೊಂಡು) ಸಮರ್ಪಕವಾಗಿರಲಿಲ್ಲವೆಂದು ಹೇಳುತ್ತಾರೆ. ಅದೇ ರೀತಿ ಎಲ್ಲ ರೈತರು ಹಿಂದೆ ನೀರು ಹಂಚಿಕೆ ನಿಯಮವನ್ನು ಎಲ್ಲ ರೈತರು ಪಾಲಿಸುತ್ತಿದ್ದರೆಂದು ಅಭಿಪ್ರಾಯ ಪಡುತ್ತಾರೆ. ಆದರೆ ನೀರು ಹಂಚಿಕೆ ಕುರಿತು ರೈತರ ಮಧ್ಯೆ ಜಗಳ ಇತ್ತೇ ಎಂದರೆ ಕಮಲಾಪುರದ ಬಹುತೇಕ ರೈತರು ಇತ್ತೆಂದು ಒಪ್ಪಿಕೊಳ್ಳುತ್ತಾರೆ. ಇದೊಂದು ರೀತಿಯ ವಿರೋಧಭಾಸ. ಎಲ್ಲ ರೈತರು ನೀರು ಹಂಚಿಕೆಯ ನಿಯಮ ಅನುಸರಿಸಿದರೆ ಜಗಳ ಆಗುವ ಸಾಧ್ಯತೆಗಳು ಕಡಿಮೆ. ಜಗಳ ಇದೆ ಎಂದು ಹೇಳಿದ ರೈತರಲ್ಲಿ ಹೆಚ್ಚಿನವರು ಕಮಲಾಪುರ ಕೆರೆ ನೀರು ಬಳಕೆದಾರರು. ಅಲ್ಲಿನ ರೈತರಿಗೆ ವರ್ಷವಿಡೀ ನೀರಿನ ಪೂರೈಕೆ ಇದೆ. ಹಾಗಿದ್ದರೂ ಏಪ್ರಿಲ್‌ನಿಂದ ಜುಲೈ ತನಕ ಕೆರೆಯಲ್ಲಿ ನೀರು ಕಡಿಮೆಯಾಗುತ್ತದೆ. ಆವಾಗ ಅಚ್ಚುಕಟ್ಟು ಪ್ರದೇಶದ ಕೊನೆಗೆ ಬರುವ ಹೊಲಗಳಿಗೆ ನೀರು ತಲುಪುವ ಸಾಧ್ಯತೆಗಳು ಕಡಿಮೆ. ಆ ಸಂದರ್ಭದಲ್ಲಿ ಜಗಳ ಆಗುವ ಸಾಧ್ಯತೆಗಳು ಹೆಚ್ಚು.

**ಸಹಭಾಗಿತ್ವದ ಸಾಧ್ಯತೆಗಳು**

ಸಹಭಾಗಿತ್ವದ ಸಾಧ್ಯತೆಗಳನ್ನು ಗುರುತಿಸಲು ಎರಡು ವಿಧಾನಗಳನ್ನು ಅನುಸರಿಸಲಾಗಿದೆ. ಒಂದು, ಸಹಭಾಗಿತ್ವ ಕುರಿತು ಬಳಕೆದಾರರ ಅಭಿಪ್ರಾಯ. ಎರಡು, ಒಟ್ಟು ಸಾಮಾಜಿಕ ಪರಿಸರದ ಹಿನ್ನೆಲೆಯಲ್ಲಿ ಸಹಭಾಗಿತ್ವದ ಸಾಧ್ಯತೆಯನ್ನು ವಿಶ್ಲೇಷಿಸುವುದು. ರೈತರು ಹೇಗೆ? ಯಾವ ರೂಪದಲ್ಲಿ? ಮತ್ತು ಎಷ್ಟರ ಮಟ್ಟಿಗೆ ನೀರಾವರಿ ನಿರ್ವಹಣೆಯಲ್ಲಿ ಪಾಲುಗೊಳ್ಳಲು ಸಿದ್ಧರಿದ್ದಾರೆ? ಎನ್ನುವುದರ ಕುರಿತು ಅಭಿಪ್ರಾಯ ಸಂಗ್ರಹಿಸಲಾಗಿದೆ. ತುಂಬಾ ಸಂತೋಷದ ಸಂಗತಿಯೆಂದರೆ ಸಂದರ್ಶಿಸಿದ ಎಲ್ಲ ಹಳ್ಳಿಯ ಎಲ್ಲ ರೈತರು ಬಳಕೆದಾರರ ಸಂಘಟನೆ ಬೇಕು ಎಂದಿದ್ದಾರೆ. ಅಷ್ಟು ಮಾತ್ರವಲ್ಲ ಸಂಘಟನೆಯಲ್ಲಿ ಸದಸ್ಯರು, ಸದಸ್ಯತನ ಇರಬೇಕು, ಜತೆಗೆ ಕಾಲಕಾಲಕ್ಕೆ ಸದಸ್ಯರ ಸಭೆ ನಡೆಯಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಅದೇ ರೀತಿ ಸದಸ್ಯತನವನ್ನು ಕೇವಲ ನೀರು ಬಳಕೆದಾರರಿಗೆ ಸೀಮಿತಗೊಳಿಸಬೇಕು ಎನ್ನುವ ವಿಚಾರದಲ್ಲೂ ತಕ್ಕಮಟ್ಟಿನ ಸಹಮತವಿದೆ. ನೀರಿನ ಮೇಲೆ ತೆರಿಗೆ ವಿಧಿಸುವ ಕುರಿತು ರೈತರ ಆಕ್ಷೇಪವಿಲ್ಲ. ಆದರೆ ಅದು ಒಂದು ಮಿತಿಯೊಳಗೆ ಇರಬೇಕು. ಎಲ್ಲ ರೈತರು ತೆರಿಗೆ ಪಾವತಿ ಮಾಡಬೇಕು ಮತ್ತು ಪಾವತಿ ಮಾಡದವರ ವಿರುದ್ಧ ಕ್ರಮ ಇರಬೇಕೆಂದು ವಾದಿಸುತ್ತಾರೆ. ಇದು ಯಾಕೆಂದರೆ ಇಂದು ತೆರಿಗೆ ಕಟ್ಟಿದವನಿಗೂ ಬಾಕಿ ಇಟ್ಟವನಿಗೂ ವಿಶೇಷ ವ್ಯತ್ಯಾಸವಿಲ್ಲ. ಕೆರೆ ತುಂಬಿರುವಷ್ಟು ಕಾಲ ಇಬ್ಬರಿಗೂ ನೀರು ದೊರೆಯುತ್ತದೆ ಹಾಗಿದ್ದರೆ ತೆರಿಗೆ ಕಟ್ಟುವುದಾದರೂ ಯಾಕೆಂದು ಕೆಲ ರೈತರು ಪ್ರಶ್ನೆ ಕೇಳುತ್ತಾರೆ.

ಕೆರೆ ಪಾತ್ರ ಒತ್ತುವರಿ ತಡೆಯುವ ಅಗತ್ಯವಿದೆ ಎಂದು ಎಲ್ಲ ರೈತರು ಒಪ್ಪುತ್ತಾರೆ. ಆದರೆ ಆ ಜವಾಬ್ದಾರಿಯನ್ನು ಹೊರಲು ಅವರು ಸಿದ್ಧರಿಲ್ಲ. ಅದನ್ನು ಸರಕಾರವೇ ಹೊರಬೇಕೆಂದು ಅವರು ಬಯಸುತ್ತಾರೆ. 'ನಿಮ್ಮ ಊರಿನ ಜನ, ನಿಮ್ಮ ಕಣ್ಣೆದುರೆ ಊರಿನ ಕೆರೆ ಪಾತ್ರ ಒತ್ತುವರಿ ಮಾಡುವಾಗ ಸುಮ್ಮನಿದ್ದು, ಈಗ ಅದನ್ನು ತಡೆಯುವ ಅಥವಾ ಖಾಲಿ ಮಾಡಿಸುವ ಜವಾಬ್ದಾರಿ ಸರಕಾರದ್ದು ಎನ್ನುವುದು ಸರಿಯೇ?, ಎಂದು ಕೇಳಿದೆ. ಕಮಲಾಪುರದ ಕೆಲವು ಹಿರಿಯರ ಪ್ರಕಾರ ಸ್ಥಳೀಯ ರಾಜಕಾರಿಣಿಗಳೇ ಈ ಸಮಸ್ಯೆಗೆ ಕಾರಣ. ಪಾರ್ಟಿ ರಾಜಕೀಯದಿಂದ ಒತ್ತುವರಿ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲು ಆಗುತ್ತಿಲ್ಲ. ಯಾವ ರಾಜಕೀಯ ಪಕ್ಷದವರೂ ಕೂಡ ಒತ್ತುವರಿ ಮಾಡುವವರ ವಿರುದ್ಧ ಮಾತಾಡುತ್ತಿಲ್ಲ. ಮಾತಾಡಿದರೆ ಎಲ್ಲಿ ತಮ್ಮ ಓಟಿಗೆ ತೊಂದರೆಯಾಗುತ್ತದೋ ಎನ್ನುವ ನಿಲುವು ಅವರದ್ದು ಎಂದು ಸ್ಥಳೀಯ ಹಿರಿಯರು ಹೇಳುತ್ತಾರೆ. ಒಬ್ಬ ಸ್ಥಳೀಯ ನಾಯಕರಂತೂ ಒತ್ತುವರಿ ಮಾಡುವುದು ತಮ್ಮ ಹಕ್ಕು ಎನ್ನುವ ರೀತಿಯಲ್ಲಿ ವಾದಿಸಿದರು. ಒತ್ತುವರಿ ಮಾಡಿದವರು ಭೂಮಿ ಇಲ್ಲದ ನಿರ್ಗತಿಕರು., ಸರಕಾರ ಅವರಿಗೆ ಬೇರೆ ಭೂಮಿ ಕೊಡಲಿ ಅವರು ಅಲ್ಲಿಗೆ ಹೋಗುತ್ತಾರೆ. ಜನರಿಗೆ ಬದುಕಲು ಅವಕಾಶ ಮಾಡಿಕೊಡದೆ ಕೆರೆ ಪಾತ್ರ ಒತ್ತುವರಿ ಆಯಿತೆಂದು ಯಾಕೆ ಗೋಳಿಡುತ್ತೀರಾ? ಎಂದು ವಾದಿಸಿದರು. ಹೀಗೆ ಒತ್ತುವರಿ ಸ್ವಲ್ಪ

ಸಂಕೀರ್ಣವಾದ ಸಮಸ್ಯೆ. ಕೆರೆ ಕಾಲುವೆಗಳ ರಿಪೇರಿಗೆ ಶ್ರಮದಾನ ಮಾಡುವ ಕ್ರಮ ಹಿಂದೆ ಇತ್ತು. ಮುಂದೆಯೂ ಇರಬೇಕೆಂದು ಹೇಳುತ್ತಾರೆ. ಆದರೆ ಕಮಲಾಪುರದ ೧೭(ಒಟ್ಟು ೨೫) ಮತ್ತು ಕಲ್ ತಾವರೆಗೆರೆಯ ೧೪ (ಒಟ್ಟು ೧೫) ರೈತರು ಕೆರೆ ಕಾಲುವೆ ರಿಪೇರಿಗೆ ವಂತಿಗೆ ನೀಡುವ ಕ್ರಮ ಬೇಡವೆನ್ನುವ ಅಭಿಪ್ರಾಯ ಹೊಂದಿದ್ದಾರೆ. ಕೆರೆ ಹೂಳೆತ್ತಲು ಶ್ರಮದಾನ ಮಾಡುವ ಬಗ್ಗೆ ರೈತರು ಮಿಶ್ರ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕಮಲಾಪುರದ ೧೭ ಮತ್ತು ತಿಮ್ಮಲಾಪುರದ ೭ ಮಂದಿ ಶ್ರಮದಾನ ಮಾಡಲು ರೈತರು ಸಿದ್ಧರಿದ್ದಾರೆ ಎಂದಿದ್ದಾರೆ. ಕಲ್ ತಾವರೆಗೆರೆಯ ಮುಕ್ಕಾಲಂಶ ಮತ್ತು ತಿಮ್ಮಲಾಪುರದ ಅರ್ಧಕ್ಕಿಂತ ಸ್ವಲ್ಪ ಕಡಿಮೆ ರೈತರು ಹೂಳೆತ್ತಲು ಶ್ರಮದಾನ ಮಾಡುವ ಕುರಿತು ಉತ್ಸುಕರಾಗಿಲ್ಲ. ಅದೇ ರೀತಿ ಹೂಳೆತ್ತಲು ವಂತಿಗೆ ನೀಡಲು ಮುಂದೆ ಬರುವ ರೈತರ ಸಂಖ್ಯೆ ಅಷ್ಟು ಆಶಾದಾಯಕವಾಗಿಲ್ಲ. ಕಮಲಾಪುರದ ಮೂರನೆ ಒಂದಕ್ಕಿಂತ ಸ್ವಲ್ಪ ಹೆಚ್ಚಿನ, ತಿಮ್ಮಲಾಪುರದ ಮೂರನೇ ಒಂದರಷ್ಟು ಮತ್ತು ಕಲ್ ತಾವರೆಗೆರೆಯ ಕೇವಲ ಒಬ್ಬ ಬಳಕೆದಾರರು ಮಾತ್ರ ಕೆರೆ ಹೂಳೆತ್ತಲು ವಂತಿಗೆ ನೀಡಲು ಸಿದ್ದರಿದ್ದಾರೆ. ಉಳಿದವರು ಆ ಬಗ್ಗೆ ಅಷ್ಟು ಉತ್ಸುಕರಾಗಿಲ್ಲ.

ಇಷ್ಟಾಗಿಯೂ ಕೆರೆ ಹೂಳೆತ್ತುವ ಜಬಾಬ್ದಾರಿ ಪ್ರಶ್ನೆ ಬಂದಾಗ ಎಲ್ಲ ಹಳ್ಳಿಯ ಎಲ್ಲ ರೈತರು ಅದು ಸರಕಾರದ್ದು ಎಂದು ಅಭಿಪ್ರಾಯ ಸೂಚಿಸಿದ್ದಾರೆ. ಇದನ್ನು ಹೇಗೆ ಅರ್ಥಮಾಡಿಕೊಳ್ಳುವುದು? ಇದಕ್ಕೆ ಮೂರು ರೀತಿಯ ವಿವರಣೆ ಸಾಧ್ಯ. ಒಂದು ಸಮಸ್ಯೆಯ ಅಗಾಧತೆ. ಸಮಸ್ಯೆಯ ಆಗಾಧತೆಯ ವಿವರಣೆಯನ್ನು ಅರ್ಥಮಾಡಿಕೊಳ್ಳಲು ಕಮಲಾಪುರ ಕೆರೆಯ ಹೂಳಿನ ಸಮಸ್ಯೆ ಒಳ್ಳೆಯ ಉದಾಹರಣೆಯಾಗಬಹುದು. ನೀರಾವರಿ ಇಲಾಖೆ ಸರ್ವೇ ರಿಪೋರ್ಟು ಪ್ರಕಾರ ೧೯೬೦ರಲ್ಲಿ ೧೦ ರಿಂದ ೧೨ ಅಡಿ ಹೂಳು ಕೆರೆ ಪಾತ್ರ ಸೇರಿದೆ. ಇದರಿಂದಾಗಿ ನೀರಿನ ಸಂಗ್ರಹ ಪ್ರಮಾಣ ೮೫ ಎಂ.ಸಿ.ಎಫ್.ಟಿ.ಯಿಂದ ೬೫ ಎಂ.ಸಿ. ಎಫ್.ಟಿ.ಗೆ ಇಳಿದಿದೆ. ೧೯೬೦ರಿಂದ ೨೦೦೧ರ ವರೆಗೆ ಇನ್ನಷ್ಟು ಹೆಚ್ಚು ಪ್ರಮಾಣದಲ್ಲಿ ಹೂಳು ತುಂಬಿ ನೀರಿನ ಸಂಗ್ರಹ ಪ್ರಮಾಣವನ್ನು ಗಣನೀಯವಾಗಿ ಕಡಿಮೆಗೊಳಿಸಿರುವ ಸಾಧ್ಯತೆ ಇದೆ. ಇಷ್ಟೊಂದು ಬೃಹತ್ ಪ್ರಮಾಣದ ಹೂಳಿನ ಸಮಸ್ಯೆಗೆ ಅಪರೂಪಕ್ಕೆ ಬರುವ ಮಳೆ ಗಣಿಗಾರಿಕೆ ಹುಟ್ಟು ಹಾಕುವ ಧೂಳುಮಣ್ಣನ್ನು ಸುತ್ತಲಿನ ಹೊಲಗಳಲ್ಲಿ, ಕೆರೆಗಳಲ್ಲಿ ಪುಕ್ಸಟ್ಟೆಯಾಗಿ ತುಂಬಿ ಕೆರೆಗಳ ನೀರನ್ನು ಕೆಂಪಾಗಿಸುತ್ತಿದೆ. ಕೆರೆಯಲ್ಲಿನ ಹೂಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಭಾಗ ಈ ಗಣಿಗಳು ಹೊರಹಾಕಿದ ಧೂಳುಮಣ್ಣೆ ತುಂಬಿದೆ. ಈ ಹೂಳನ್ನು ಎತ್ತಲು ಕೆಲವು ಕೋಟಿ ರೂಪಾಯಿಗಳು ಬೇಕು. ಯಂತ್ರಗಳನ್ನು ಬಳಸಿದರೂ ಕೆಲವು ತಿಂಗಳುಗಳು ಬೇಕು. ಇಷ್ಟೊಂದು ಆಗಾಧ ಪ್ರಮಾಣದ ಕೆಲಸವನ್ನು ಮಾಡಲು ಸಾಧ್ಯವೆಂದು ಯಾವ ರೈತ ಹೇಳಲು ಸಾಧ್ಯ. ಎರಡು ಹಲವಾರು ದಶಕಗಳ ಆಧುನೀಕರಣದ ಸಂದರ್ಭದಲ್ಲಿ ಕೆರೆ ಸಂರಕ್ಷಣೆಯ ಜಬಾಬ್ದಾರಿಯನ್ನು ಸರಕಾರ ಹೊತ್ತದ್ದು ಮತ್ತೊಂದು ಕಾರಣ. ನೀರು ಬಳಕೆದಾರ ತನ್ನ ಪಾಲಿನ ತೆರಿಗೆ ನೀಡಿದರೆ ಆಯಿತು. ಕೆರೆ ರಿಪೇರಿ, ಹೂಳೆತ್ತುವುದು ಇತ್ಯಾದಿಗಳು ನೀರಾವರಿ ಇಲಾಖೆಯ ಹೊಣೆಯೆಂದು ರೈತರು ತಿಳಿಯುವಂತಾಯಿತು. ಇದರಿಂದಾಗಿ ಹೂಳಿನ ಸಮಸ್ಯೆ ಪರಿಹಾರಕ್ಕೆ ವಂತಿಗೆ ನೀಡುವ ಅಥವಾ ಶ್ರಮದಾನ ಮಾಡುವ ಕುರಿತು ರೈತ ಆಲೋಚನೆಯೇ ಮಾಡಿಲ್ಲ. ಮೂರು, ಕಮಲಾಪುರದ ಬಹುತೇಕ ರೈತರು ಇಂದು ಮಾರುಕಟ್ಟೆಗಾಗಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ. ಜತೆಗೆ ಹಲವಾರು ವರ್ಷಗಳಿಂದ ಮಾರುಕಟ್ಟೆಯಲ್ಲಿ ವ್ಯವಹರಿಸಿ ಅವರಿಗೆ ವೆಚ್ಚ, ಲಾಭ, ನಷ್ಟ, ಇತ್ಯಾದಿಗಳ ಖಚಿತ ಅರಿವಿದೆ. ಇಷ್ಟೊಂದು ಅಗಾಧ ಪ್ರಮಾಣದ ಹೂಳೆತ್ತಲು ತಗಲುವ ವೆಚ್ಚದ ಹಣ ಅಥವಾ ಶ್ರಮ ರೂಪದಲ್ಲಿ ಕನಿಷ್ಠ ತಿಳುವಳಿಕೆ ಇದೆ. ಇದು ಅವರ ಒಟ್ಟು ವ್ಯವಹಾರವನ್ನು ಹೇಗೆ ಪ್ರಭಾವಿಸಬಹುದೆಂಬ ಆಲೋಚನೆ ಕೂಡ ತಮ್ಮ ಕೆರೆಯ ಹೂಳಿನ ಸಮಸ್ಯೆಯನ್ನು ಸಾರ್ವಜನಿಕ ನಿಧಿಗೆ ವರ್ಗಾಯಿಸಲು ಕಾರಣವಾಗಿರಬಹುದು. ಇನ್ನು ನೀರು ಹಂಚಿಕೆ ನಿಯಮ ಪಾಲನೆ ಕುರಿತು ಪರಸ್ಪರ ವಿರುದ್ಧ ನಿಲುವುಗಳು ವ್ಯಕ್ತವಾಗಿವೆ. ನೀರು ಹಂಚಿಕೆ ಕ್ರಮ ಸಮರ್ಪಕವಾಗಿದೆಯೇ ಎಂದರೆ ಬಹುತೇಕ ರೈತರು ಹಿಂದೆ ಮತ್ತು ಈಗ ಸಮರ್ಪಕವಾಗಿದೆ ಎಂದು ಉತ್ತರಿಸಿದ್ದಾರೆ. ಅದೇ ರೀತಿ ಹಂಚಿಕೆಯ ವಿಚಾರದಲ್ಲಿ ಎಲ್ಲರೂ ನಿಯಮ ಅನುಸರಿಸುತ್ತಾರೋ ಎನ್ನುವ ಪ್ರಶ್ನೆಗೆ ಹೌದು ಎನ್ನುವ ಉತ್ತರ ಬಂದಿದೆ. ಆದರೆ ನೀರು ಹಂಚಿಕೆಯ ವಿಚಾರದಲ್ಲಿ ಜಗಳಗಳು ಇಲ್ಲವೇ ಎಂದರೆ ಹೆಚ್ಚು ಕಡಿಮೆ ಅರ್ಧದಷ್ಟು ಮಂದಿ ನೀರಾವರಿ ಹಂಚಿಕೆಯಲ್ಲಿ ಜಗಳಗಳು ಇವೆ ಎಂದಿದ್ದಾರೆ. ಇದು ಅವರ ಹಿಂದಿನ ಅಭಿಪ್ರಾಯಗಳಿಗೆ ಭಿನ್ನವಾದ ನಿಲುವು. ನೀರು ಹಂಚಿಕೆ ಸಮರ್ಪಕವಾಗಿದ್ದರೆ ಅಥವಾ ಎಲ್ಲರೂ ನಿಯಮ ಪಾಲನೆ ಮಾಡುತ್ತಿದ್ದರೆ ಜಗಳಗಳು ಆಗುವ ಸಾಧ್ಯತೆ ಕಡಿಮೆ. ಆದರೆ ಇಲ್ಲಿ ಜಗಳಗಳು ಆಗುತ್ತಿವೆ. ಅಂದರೆ ನಿಯಮ ಪಾಲನೆ ಆಗುತ್ತಿಲ್ಲ ಅಥವಾ ಸಮರ್ಪಕವಾದ ಹಂಚಿಕೆ ಆಗುತ್ತಿಲ್ಲ. ಇದು ಹಿಂದಿನ ವ್ಯವಸ್ಥೆ ಸಮಸ್ಯೆ. ಮುಂದಿನ ವ್ಯವಸ್ಥೆ ಬಗ್ಗೆ ಸ್ವಲ್ಪ ಸಕರಾತ್ಮಕ ನಿಲುವು ತಾಳಬಹುದು. ಯಾಕೆಂದರೆ ಮುಂದಿನ ವ್ಯವಸ್ಥೆಯಲ್ಲಿ ನೀರು ಹಂಚಿಕೆ ಸಕರಾತ್ಮಕ ನಿಲುವು

ತಾಳಬಹುದು. ಯಾಕೆಂದರೆ ಮುಂದಿನ ವ್ಯವಸ್ಥೆಯಲ್ಲಿ ನೀರು ಹಂಚಿಕೆ ನಿಯಮ ಇರಬೇಕು ಮತ್ತು ಅದರ ಪಾಲನೆ ಆಗಬೇಕು ಎನ್ನುವುದರ ಕುರಿತು ಎಲ್ಲ ರೈತರು ತಮ್ಮ ಸಹಮತ ಸೂಚಿಸಿದ್ದಾರೆ.

(೩)

**ಒಟ್ಟು ಪರಿಸರದ ಹಿನ್ನೆಲೆಯಲ್ಲಿ ಸಹಭಾಗಿತ್ವದ ಸಾಧ್ಯತೆಗಳು**

ಸಹಭಾಗಿತ್ವ ಒಂದು ಸಾಮಾಜಿಕ ಪರಿಸರದಲ್ಲಿ ಕಾರ್ಯರೂಪಕ್ಕೆ ಬರಬೇಕಾಗಿದೆ. ಆ ಪರಿಸರದಲ್ಲಿ ಚಾರಿತ್ರಿಕವಾಗಿ ರೂಪುಗೊಂಡ ಸಂಸ್ಥೆಗಳು ಮತ್ತು ಮೌಲ್ಯಗಳು ಸಹಭಾಗಿತ್ವವನ್ನು ಪ್ರಭಾವಿಸುತ್ತದೆ. ಇಂತಹ ಸಂಸ್ಥೆಗಳು ಮತ್ತು ಮೌಲ್ಯಗಳು ಆಧುನಿಕ ಸಹಭಾಗಿತ್ವವನ್ನು ಹೇಗೆ ಪ್ರಭಾವಿಸಬಹುದು ಎನ್ನುವುದರ ಕಿರು ಪರಿಚಯ ಮುಂದೆ ಇದೆ. ಇಲ್ಲಿ ನಾಲ್ಕೈದು ವಿಚಾರಗಳ ಕಡೆಗೆ ಗಮನ ಹರಿಸಲಾಗಿದೆ. ಒಂದು, ನಮ್ಮಲ್ಲಿ ಕಾರ್ಯರೂಪಕ್ಕೆ ಬಂದ ಆಧುನೀಕರಣ. ಐದು ದಶಕಗಳ ಆಧುನೀಕರಣ ಅಥವಾ ಸರಕಾರದ ನೇತೃತ್ವದಲ್ಲಿ ನಡೆದ ಅಭಿವೃದ್ಧಿ ಪ್ರಕ್ರಿಯೆ ನಮ್ಮ ಸಾಂಪ್ರದಾಯಿಕ ಆರ್ಥಿಕ, ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ಮೂಲಭೂತವಾಗಿ ಬದಲಾಯಿಸದಿದ್ದರೂ ಗಾಢವಾಗಿ ಪ್ರಭಾವಿಸಿದೆ. ಹಿಂದೆ ಕೃಷಿಕರಲ್ಲದ ಎಷ್ಟೋ ಜಾತಿ ಮತ್ತು ಕುಟುಂಬಗಳು ಇಂದು ಕೃಷಿಕರಾಗಿದ್ದಾರೆ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ತಕ್ಕ ಮಟ್ಟಿನ ಮುಂದುವರಿಕೆ ಇದ್ದರೂ ಆರ್ಥಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಗಣನೀಯವಾದ ಬದಲಾವಣೆಯನ್ನು ಗಮನಿಸಬೇಕಾಗಿದೆ. ಒಂದು ಕಾಲದಲ್ಲಿ ಗ್ರಾಮವೊಂದರ ಅಧಿಕಾರ ಕೇಂದ್ರ ಪಟೇಲ ಅಥವಾ ಗೌಡನಾದರೆ ಇಂದು ಆ ಸ್ಥಿತಿ ಉಳಿದಿಲ್ಲ. ಪಂಚಾಯತ್ ವ್ಯವಸ್ಥೆ ಜಾರಿ ಬರುವುದರೊಂದಿಗೆ ಒಂದೇ ಹಳ್ಳಿಯಲ್ಲಿ ಹಲವಾರು ಅಧಿಕಾರ ಕೇಂದ್ರಗಳು ರೂಪುಗೊಂಡಿದೆ. ಇದು ಒಳ್ಳೆಯದು ಕೆಟ್ಟದು ಎನ್ನುವ ತೀರ್ಮಾನಕ್ಕಿಂತ ಆ ವಾಸ್ತವಿಕತೆಯನ್ನು ಅರ್ಥಮಾಡಿಕೊಳ್ಳುವುದು ಇಂತಹ ಪರಿಸರದಲ್ಲಿ ಸಾಧ್ಯವಾಗಬಹುದಾದ ಸಂಘಟಿತ ಕಾರ್ಯಕ್ರಮಗಳ ಬಗ್ಗೆ ಆಲೋಚಿಸಲು ಸಾಧ್ಯ. ಜಾತಿ ನೆಲೆಯಲ್ಲಿ ರಾಜಕೀಯ ಸಂಘಟನೆ ಮತ್ತು ಆ ಮೂಲಕ ಸಮುದಾಯದ ಸಂಪನ್ಮೂಲ ವಿತರಣೆಯ ನಿರ್ಣಯದಲ್ಲಿ ಪಾಳುಗೊಳ್ಳುವುದು ಇಂದು ಸಹಜವಾಗಿದೆ. ಇಂತಹ ವಾತಾವರಣದಲ್ಲಿ ಸಹಕಾರಿ ಸಂಘಟನೆಗಳು ರೂಪುಗೊಳ್ಳಬೇಕಾಗಿದೆ.

ಹೊಸ ಮಾನದಂಡ ಪ್ರಕಾರ ಕೆರೆ ನೀರು ಬಳಸುವ ಪ್ರತಿಯೊಬ್ಬರು ಸಹಕಾರಿ ಸಂಘದ ಸದಸ್ಯರಾಗಲು ಅರ್ಹರು. ಎಲ್ಲ ಜಾತಿಗಳಿಂದಲೂ ಸದಸ್ಯರನ್ನು ಮಾಡಿ ಸಂಘಟನೆ ಸ್ಥಾಪಿಸುವುದು ಕಷ್ಟವಾಗುವುದಿಲ್ಲ. ಇದರ ಜತೆಗೆ ಅವರು ಒಂದು ಸಮುದಾಯವಾಗಿ ಕಾರ್ಯ ನಿರ್ವಹಿಸುವ ಮೌಲ್ಯ ನಿರ್ಮಾನವಾಗಬೇಕಾಗಿದೆ. ಪ್ರತ್ಯೇಕಿತ ಗುಂಪಾಗಿ ಅಥವಾ ಸಮುದಾಯವಾಗಿ (ಜಾತಿ ನೆಲೆಯಲ್ಲಿ) ಕಾರ್ಯಕ್ರಮ ಹಮ್ಮಿಕೊಳ್ಳುವ ಪರಿಪಾಠ ನಮಗಿದೆ. ಈಗ ಪ್ರತ್ಯೇಕಿತ ಸಮುದಾಯಗಳು ಒಂದಾಗಬೇಕಾಗಿದೆ. ತಾಂತ್ರಿಕವಾಗಿ ಒಂದಾಗುವುದು ಕಷ್ಟವಲ್ಲ. ಆದರೆ ಇವರೆಲ್ಲ ಒಟ್ಟು ಕಲೆತು ವ್ಯವಹರಿಸಲು ಅಗತ್ಯವಾದ ಮೌಲ್ಯ ನಿರ್ಮಾಣವಾಗಬೇಕಾಗಿದೆ. ಪ್ರಶ್ನೆ ಇರುವುದು ಇದು ಈಗಾಗಲೇ ಇರುವ ಯಾವುದಾದರೂ ಒಂದು ಸಮುದಾಯದ ಮೌಲ್ಯ ಆಗಬೇಕೇ? ಅಥವಾ ಎಲ್ಲರಿಗೂ ಅನುಕೂಲವಾಗುವ ಒಂದು ಹೊಸ ಮೌಲ್ಯ ನಿರ್ಮಾಣವಾಗಬೇಕೇ? ಐದು ದಶಕಗಳ ಆಧುನೀಕರಣದ ಇತಿಹಾಸ ನೋಡಿದರೆ ಪ್ರತ್ಯೇಕಿತ ಅಥವಾ ಯಾವುದಾದರು ಒಂದು ಅಥವಾ ಯಜಮಾನಿಕೆಯಲ್ಲಿ ಭಾಗವಹಿಸುವ ಕೆಲವು ಜಾತಿ ಜನರು ಸಮುದಾಯದ ಸಂಪನ್ಮೂಲಗಳ ವಿತರಣೆಯನ್ನು ನಿರ್ಧರಿಸುವ ಪರಿಪಾಠವಿದೆ. ಪ್ರತಿಯೊಂದನ್ನು ಪ್ರತ್ಯೇಕ ಜಾತಿ ಅಥವಾ ಗುಂಪಿನ ಹಿತಾಸಕ್ತಿಯ ನೆಲೆಯಿಂದ ನೋಡುವ ಅಭ್ಯಾಸವನ್ನು ಇಲ್ಲಿ ಬದಲಾಯಿಸಿಕೊಳ್ಳಬೇಕಾಗಿದೆ. ಇದು ಒಂದೆರಡು ವರ್ಷಗಳಲ್ಲಿ ಆಗುವಂತಹ ಕೆಲಸವಲ್ಲ. ಹಲವಾರು ವರ್ಷಗಳ ಪ್ರಯೋಗದ ಅಗತ್ಯವಿದೆ.

ಎರಡು, ಸಾಮಾಜಿಕ ಪರಿವರ್ತನೆಗೆ ರೂಢಿಸಿಕೊಳ್ಳುವ ನಮ್ಮ ಕ್ರಮ. ಚಾರಿತ್ರಿಕವಾಗಿ ನಾವು ಸಾಮಾಜಿಕ ಅಥವಾ ಸಾಂಸ್ಕೃತಿಕ ಚಳವಳಿಗಳ ಮೂಲಕ ಇತರ ಕ್ಷೇತ್ರಗಳಲ್ಲಿನ ಮುಖ್ಯವಾಗಿ ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿನ ಬದಲಾವಣೆಗಳನ್ನು ರೂಢಿಸಿ

ಕೊಳ್ಳಲು ಪ್ರಯತ್ನಿಸುತ್ತೇವೆ. ಈಗ ಅದಕ್ಕೆ ವಿರುದ್ಧ ಪ್ರಕ್ರಿಯೆ ಅಗತ್ಯವಿದೆ. ಅಂದರೆ ಆರ್ಥಿಕ ಹಾಗೂ ರಾಜಕೀಯ ಸಂಪನ್ಮೂಲ ವಿತರಣೆಯ ಪ್ರಶ್ನೆ ಪರಿಹರಿಸಲು ಸಂಘಟನೆಗಳು ರೂಪುಗೊಳ್ಳಬೇಕಾಗಿದೆ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಾಮರಸ್ಯವನ್ನು ಆರ್ಥಿಕ ಹಾಗು ರಾಜಕೀಯ ವಿತರಣೆಯ ಅಂಶಗಳಿಗೆ ವಿಸ್ತರಿಸಲು ಸಾಧ್ಯವಾಗಬೇಕು. ಇಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಾಮರಸ್ಯ ಎನ್ನುವುದನ್ನು ನಾನು ತುಂಬಾ ಸೀಮಿತ ನೆಲೆಯಲ್ಲಿ ಬಳಸುತ್ತಿದ್ದೇನೆ. ವಿವಿಧ ಜಾತಿ/ಸಮುದಾಯಕ್ಕೆ ಸೇರಿದ ಜನರು ಒಂದು ಕಡೆ ಸೇರುವ ಮತ್ತು ಕಾರ್ಯಕ್ರಮಗಳಲ್ಲಿ ಭಾಗವಹಿಸುವ ದೃಷ್ಟಿಯಿಂದ ಬಳಸಿದ್ದೇನೆ. ಜತೆಗೆ ಇದನ್ನು ನಾನು ಗ್ರಾಮೀಣ ಪರಿಸರವನ್ನು ಗಮನದಲ್ಲಿಟ್ಟುಕೊಂಡು ಹೇಳುತ್ತಿದ್ದೇನೆ. ಇಲ್ಲೊಂದು ತೋರಿಕೆಯ ಒಗ್ಗಟ್ಟಿದೆ. ತೋರಿಕೆ ಯಾಕೆಂದರೆ ಈ ಸಾಂಸ್ಕೃತಿಕ ಆಚರಣೆಗಳಲ್ಲೂ ಸಾಕಷ್ಟು ಸೇರಿಸಿಕೊಳ್ಳುವ ಮತ್ತು ದೂರ ಇಡುವ ಪ್ರಕ್ರಿಯೆ ನಡೆದೆ ಇರುತ್ತದೆ. ಜತೆಗೆ ದಿನ ನಿತ್ಯದ ಬದುಕಿನ ಏಣಿಶ್ರೇಣಿಗಳನ್ನು ಸೂಕ್ಷ್ಮವಾಗಿ ಇಲ್ಲಿ ಕೂಡ ಕಾಪಾಡಲಾಗುತ್ತದೆ. ಆದಾಗ್ಯೂ ನಮ್ಮಲ್ಲೊಂದು ನಂಬಿಕೆಯಿದೆ. ಅದೇನೆಂದರೆ ಸಾಂಸ್ಕೃತಿಕ ಕ್ಷೇತ್ರದಲ್ಲಿ ಏಣಿಶ್ರೇಣಿಯ ಪ್ರಶ್ನೆಯೇ ಇಲ್ಲ. ದೇವರು ದಿಂಡರುಗಳ ವಿಚಾರ ಬಂದರೆ ತಕ್ಕ ಮಟ್ಟಿನ ಸಹಮತ ನಮ್ಮಲ್ಲಿದೆ ಎನ್ನುವ ನಂಬಿಕೆ ಇದೆ. ಊರ ಜಾತ್ರೆ ಅಥವಾ ಊರಿಗೆ ಸಂಬಂಧಿಸಿದ ಸಾಂಸ್ಕೃತಿಕ ಆಚರಣೆಯಲ್ಲಿ ಸಮುದಾಯವಾಗಿ ಭಾಗವಹಿಸುವುದು ಚಾರಿತ್ರಿಕವಾಗಿ ರೂಪುಗೊಂಡ ನಮ್ಮ ಸಮಾಜದ ಗುಣ. ಊರಿನ ಬಹುತೇಕರು ಊರ ಜಾತ್ರೆಯಲ್ಲಿ, ಸತ್ಯನಾರಾಯಣ ಪೂಜೆಗಳಲ್ಲಿ, ಮೊಹರಂ ಹಬ್ಬದಲ್ಲಿ ಪಾಲುಗೊಳ್ಳುವುದನ್ನು ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಕಾಣಬಹುದು. ಇಲ್ಲಿ ಕೂಡ ಸಮಾಜದ ಕೆಳ ಸ್ತರದಲ್ಲಿರುವ ದಲಿತರನ್ನು ಸೂಕ್ಷ್ಮವಾಗಿ ದೂರ ಇಡಲಾಗುತ್ತಿದೆ.

ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಕನಿಷ್ಠ ಒಂದಾದರೂ ಸಂಘ ಸಂಸ್ಥೆಯನ್ನು ಪ್ರತಿ ಹಳ್ಳಿಯಲ್ಲೂ ಕಾಣಬಹುದು. ವಿಚಿತ್ರವೆಂದರೆ ಇದು ಯಾವುದು ಕೂಡ ಸರಕಾರ ಅಥವಾ ಹೊರಗಿನ ಪ್ರೋತ್ಸಾಹದಿಂದ ಹುಟ್ಟಿಕೊಂಡವಲ್ಲ. ನಾನು ಕ್ಷೇತ್ರ ಕಾರ್ಯ ಮಾಡಿದ ಹಳ್ಳಿಗಳಲ್ಲಿ ಇರುವ ಸಂಘ ಸಂಸ್ಥೆಗಳ ಪಟ್ಟಿ ಮಾಡಿದ್ದೇನೆ. ಪ್ರತಿ ಹಳ್ಳಿಯಲ್ಲಿ ಇರುವ ಸಂಘ ಸಂಸ್ಥೆಗಳಲ್ಲಿ ಶೇಕಡಾ ೯೦ರಷ್ಟು ಸಂಘಗಳ ಮುಖ್ಯ ಕಾರ್ಯಕ್ರಮಗಳು ಸಾಮಾಜಿಕ ಅಥವಾ ಸಾಂಸ್ಕೃತಿಕ ಉದ್ದೇಶಗಳಿಗಾಗಿ ರೂಪುಗೊಂಡಿವೆ. ಅವು ಬೇರೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಿಲ್ಲವೆಂದಲ್ಲ. ಆದರೆ ಅವುಗಳು ಮುಖ್ಯ ಉದ್ದೇಶವಾಗಿ ಅಲ್ಲ; ಒಂದು ಉಪ ಕಾರ್ಯಕ್ರಮವಾಗಿ. ಅದೇನೆ ಇರಲಿ ಇಲ್ಲಿ ನಾವು ಗಮನಿಸಬೇಕಾದ ವಿಚಾರ ಅಂದರೆ ಸಂಘ ಸಂಸ್ಥೆಗಳನ್ನು ರೂಪಿಸುವ ಮತ್ತು ಅವುಗಳ ಮೂಲಕ ಸಮುದಾಯದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳೂವ ಅಭ್ಯಾಸ ಈಗಾಗಲೇ ಇದೆ ಎನ್ನುವ ಅಂಶ ಮುಖ್ಯ. ಇದು ಜನರಿಗೆ ಸಮುದಾಯವಾಗಿ ಕಾರ್ಯನಿರ್ವಹಿಸಲು ಅಗತ್ಯವಿರುವ ಕೆಲವೊಂದು ಮೂಲಭೂತ ಪಾಠಗಳನ್ನು ಕಲಿಸಿಕೊಟ್ಟಿದೆ. ಮುಖ್ಯವಾಗಿ ಮೂರು ವಿಚಾರಗಳನ್ನು ಇಲ್ಲಿ ಕಾಣಬಹುದು. ಸಂಘಟನೆಯಲ್ಲಿ ಬರುವ ಇತರ ಸದಸ್ಯರ ಸಂಕಷ್ಟದ ಬಗ್ಗೆ ಸಹಾನುಭೂತಿ, ಒಂದು ಸಂಸ್ಥೆಯ ನಿಯಮಕ್ಕೆ ಅನುಸಾರ ಕಾರ್ಯನಿರ್ವಹಿಸುವ ಅಭ್ಯಾಸ, ಇತರ ಸದಸ್ಯರು ಮತ್ತು ಸಂಸ್ಥೆಯ ವ್ಯಾಪ್ತಿಯೊಳಗೆ ಬರುವ ಇತರರ ಬಗ್ಗೆ ನಂಬಿಕೆ ಇತ್ಯಾದಿಗಳು ಈಗಾಗಲೇ ಇರುವ ಸಂಘಗಳಿಂದ ಕಲಿಯಬಹುದಾದ ಮೂಲಭೂತ ಪಾಠ. ಈ ಗುಣಗಳನ್ನು ಆರ್ಥಿಕ ವಿಚಾರಕ್ಕೆ ರೂಪುಗೊಳ್ಳುವ ಸಂಘಟನೆಗಳಿಗೆ ವರ್ಗಾಯಿಸಲು ಸಾಧ್ಯವಾದರೆ ಕೆರೆ ನೀರಾವರಿ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವವನ್ನು ರೂಪುಗೊಳಿಸುವ ಕೆಲಸ ಸ್ವಲ್ಪಮಟ್ಟಿಗೆ ಸುಲಭವಾಗಬಹುದು.

ಮೂರು, ತಳಮಟ್ಟದಲ್ಲಿ ಪ್ರಜಾಪ್ರಭುತ್ವ ಮೀಡಿಯೇಟ್ ಆಗುವ ವಿಧ. ತಳ ಮಟ್ಟದಲ್ಲಿ ಈಗಾಗಲೇ ಹಲವಾರು ಸಂಸ್ಥೆಗಳು ಕಾರ್ಯರೂಪದಲ್ಲಿವೆ. ಕೃಷಿಕರ ಸಹಕಾರಿ ಸೊಸೈಟಿಗಳು, ಪಂಚಾಯತ್ ಸಂಸ್ಥೆಗಳು, ಸಮುದಾಯ ಅರಣ್ಯ ಸಮಿತಿಗಳು ಅವುಗಳಲ್ಲಿ ಮುಖ್ಯ. ಅವುಗಳು ಕೆಲವು ಕೃಷಿಕರ ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿವೆ ಮತ್ತೆ ಕೆಲವು ಕೃಷಿಗೆ ಅವಶ್ಯವಾದ ಹಣಕಾಸು ವ್ಯವಸ್ಥೆ ಮಾಡುತ್ತಿವೆ. ಗ್ರಾಮದ ಸಮಗ್ರ ಅಭಿವೃದ್ಧಿಗಾಗಿ ಪಂಚಾಯತ್ ವ್ಯವಸ್ಥೆ ಜಾರಿಯಲ್ಲಿದೆ. ಇವೆಲ್ಲ ತಕ್ಕಮಟ್ಟಿಗೆ ಗ್ರಾಮೀಣ ಸಮಸ್ಯೆಗಳನ್ನು ಪರಿಹರಿಸಲು ಸಹಕಾರಿಯಾಗಿವೆ. ಆದರೆ ಇವುಗಳಿಗೆ ಸಂಬಂಧಿಸಿದಂತೆ ಕೆಲವು ನ್ಯೂನತೆಗಳು ಇಂದಿಗೂ ಮುಂದುವರಿಯುತ್ತಿವೆ. ಇವುಗಳು ತಾಂತ್ರಿಕ ಬದ್ಧತೆಗಳನ್ನು ಸರಿಯಾಗಿ ಅನುಸರಿಸುತ್ತಿವೆ. ಅಂದರೆ ಕನಿಷ್ಠ ಸಂಖ್ಯೆಯ ಸದಸ್ಯರು ಇಲ್ಲದಿದ್ದರೂ ಇದ್ದಾರೆ ಎಂದು ಪ್ರಮಾಣ ಪತ್ರ ನೀಡುವುದು ಸದಸ್ಯರ ಸಭೆ ನಡೆಯದಿದ್ದರೂ ನಡೆದಿದೆ ಎಂದು ವರದಿ ಮಾಡುವುದು ಇತ್ಯಾದಿಗಳನ್ನು ತಾಂತ್ರಿಕ ಬದ್ದತೆ ಎನ್ನಬಹುದು.

ಆದರೆ ಇವುಗಳ ಮೂಲ ಉದ್ದೇಶಕ್ಕೆ ಅಗತ್ಯವಾದ ಪ್ರಜಾಪ್ರಭುತ್ವ ಮಾದರಿಯಲ್ಲಿ ನಿರ್ಣಯ ಕೈಗೊಳ್ಳುವುದು ಮತ್ತು ಕೈಗೊಂಡ ನಿರ್ಣಯಗಳನ್ನು ಜಾರಿ ತರುವುದರಲ್ಲಿ ಇಂದಿಗೂ ಸಫಲವಾಗಿಲ್ಲ. ಪ್ರತಿಯೊಂದು ಸಂಸ್ಥೆಯಲ್ಲೂ ಸ್ಥಳೀಯ ಸಾಂಪ್ರದಾಯಿಕ ಅಥವಾ ಆಧುನಿಕ ಯಜಮಾನಿಕೆಯ ಗುಂಪುಗಳು ತಮ್ಮ ಹಿತಾಸಕ್ತಿಗಳಿಗೆ ಅನುಸಾರವಾಗಿ ನಿರ್ಣಯ ಕೈಗೊಳ್ಳುವುದು ನಡೆಯುತ್ತಿದೆ. ಜತೆಗೆ ನಿರ್ಣಯಗಳನ್ನು ಜಾರಿ ತರುವಾಗ ಸ್ಥಳೀಯ ಪ್ರಭಾವಿ ಕುಲಗಳು ಸಮುದಾಯದ ನಿರ್ಣಯಗಳನ್ನು ಮುರಿಯುವುದರಲ್ಲಿ ಪ್ರಮುಖರು. ಎಲ್ಲರಿಗೂ ಅನ್ವಯವಾಗುವ ನಿಯಮಗಳನ್ನು ಪಾಲಿಸುವುದೇ ಮರ್ಯಾದೆಗೆ ಕಡಿಮೆ ಎನ್ನುವುದು ನಮ್ಮಲ್ಲಿ ಮೇಲಿನಿಂದ ಕೆಳಗಿನ ತನಕ ಇರುವ ಒಂದು ದೊಡ್ಡ ರೋಗ. ಒಂದು ಕಾಲದಲ್ಲಿ ಸಮಾಜದ ಮೇಲ್ ವರ್ಗಗಳು ನಿಯಮಗಳನ್ನು ಮುರಿಯುವುದನ್ನು ನೋಡುತ್ತಿದ್ದೆವು. ಇಂದು ಬಹುತೇಕ ಸಂಸ್ಥೆಗಳಲ್ಲಿ ಸಮಾಜದ ಕೆಳವರ್ಗದವರು ಸ್ಥಾನ ಪಡೆದಿದ್ದಾರೆ. ಆದರೆ ಅವರು ಕೂಡ ನಿಯಮಗಳನ್ನು ಅನುಸರಿಸಿ ಇತರರಿಗೆ ಮಾದರಿಯಾಗುವುದರತ್ತ ಗಮನ ಹರಿಸಿಲ್ಲ. ಬದಲಿಗೆ ಬಹುತೇಕ ಸಂದರ್ಭದಲ್ಲಿ ತಮ್ಮ ಮೇಲ್ ವರ್ಗದ ಚಾಳಿಯನ್ನು ಮುಂದುವರಿಸುವುದೇ ತಾವು ಯಜಮಾನರದ್ದನ್ನು ತೋರಿಸಲು ಸರಿಯಾದ ಮಾರ್ಗ ಎಂದು ತಿಳಿದಂತಿದೆ. ನಿಯಮ ಅನುಸರಿಸಿದರೆ ಸಾಮಾನ್ಯ, ಅನುಸರಿಸದಿದ್ದರೆ ಅಸಮಾನ್ಯ ಎನ್ನುವ ಅಭ್ಯಾಸ ನಮ್ಮ ಸಾರ್ವಜನಿಕ ಬದುಕಿನಲ್ಲಿ ಸಾಕಷ್ಟು ಪ್ರಚಲಿತದಲ್ಲಿದೆ. ಇದು ಬದಲಾಗಬೇಕಾಗಿದೆ.

ನಾಲ್ಕು, ಸಮುದಾಯದ ಸಂಪನ್ಮೂಲದ ವೆಚ್ಚ ಭರಿಸುವ ಕ್ರಮ. ನಾವು ಬಳಸುವ ಪ್ರತಿಯೊಂದಕ್ಕು ವೆಚ್ಚವಿದೆ. ಯಾವುದು ಕೂಡ ಪುಕ್ಸಟ್ಟೆಯಾಗಿ ಸಿಗುವುದಿಲ್ಲ. ಹಿಂದಿನ ಕಾಲದಲ್ಲಿ ಕೆರೆ ನೀರು ಬಳಸುವವರು ಅದರ ವೆಚ್ಚ ಬರಿಸುತ್ತಿದ್ದರು. ಕೆರೆ ಕಟ್ಟಿಸುವವರಿಗೆ ಅವರಿಗೆ ಕೆರೆ ರಿಪೇರಿ ಮಾಡುವವರಿಗೆ ಭೂಮಿ ದಾನವಾಗಿ ಕೊಡುವ ಅಥವಾ ಕಡಿಮೆ ಕಂದಾಯಕ್ಕೆ ಕೊಡುವ ಕ್ರಮವಿತ್ತು. ಕೆರೆ ರಿಪೇರಿ ಅಥವಾ ಹೂಳೆತ್ತುವುದಕ್ಕೆ ರೈತರಿಂದ ಹಣ ಅಥವಾ ಧಾನ್ಯ ಅಥವಾ ಶ್ರಮ ರೂಪದಲ್ಲಿ ದೇಣಿಗೆ ಪಡೆಯುತ್ತಿದ್ದರು. ಹೀಗೆ ಹಿಂದೆ ಕೂಡ ಕೆರೆ ನೀರಾವರಿ ಪುಕ್ಸಟ್ಟೆಯಾಗಿ ಬರುತ್ತಿರಲಿಲ್ಲ. ಇಂದು ಅದರಲ್ಲೂ ೧೯೪೭ರ ನಂತರ ಕೆರೆ ನಿರ್ಮಾಣ, ರಿಪೇರಿ ಇತ್ಯಾದಿಗಳನ್ನು ಸರಕಾರವೇ ಮಾಡಲು ಹೊರಟಿದೆ. ಇದರಿಂದಾಗಿ ನಮ್ಮಲ್ಲೊಂದು ಮುಗ್ಧ ದೋರಣೆ ಬೆಳೆದಿದೆ. ಅದೇನೆಂದರೆ ಕೆರೆ ರಿಪೇರಿ ಅಥವಾ ಹೂಳೆತ್ತುವುದು ಇತ್ಯಾದಿಗಳು ಸರಕಾರದ ಜವಾಬ್ದಾರಿ. ಇದರ ಅರ್ಥ ರೈತರು ಕೆರೆ ನೀರಾವರಿಗೆ ಯಾವುದೇ ತೆರಿಗೆ ನೀಡುತ್ತಿಲ್ಲ ಎಂದು ನಾನು ವಾದಿಸುತ್ತಿಲ್ಲ ಈಗಲೂ ಸಣ್ಣ ಮತ್ತು ಬೃಹತ್ ನೀರಾವರಿ ವ್ಯಾಪ್ತಿಯಲ್ಲಿ ಬರುವ ಕೆರೆ ನೀರಾವರಿಗೆ ರೈತರು ನಿಗದಿತ ತೆರಿಗೆ ಸಂದಾಯ ಮಾಡುತ್ತಿದ್ದಾರೆ. ಆದರೆ ಅವರು ಕಟ್ಟುವ ತೆರಿಗೆ, ಮುಖ್ಯವಾಗಿ ಬೃಹತ್ ನೀರಾವರಿ ವ್ಯಾಪ್ತಿಯೊಳಗೆ ಬರುವ ಕೆರೆ ನೀರಾವರಿ ವ್ಯವಸ್ಥೆಯ ವೆಚ್ಚಕ್ಕೆ ಅನುಗುಣವಾಗಿಲ್ಲ. ಒಂದು ಎಕರೆಗೆ ಕನಿಷ್ಠ ರೂ.೨೫೦೦ ವೆಚ್ಚ ಬರುತ್ತದೆ. ಆದರೆ ರೈತರು ಸಂದಾಯ ಮಾಡುವುದು ಕೇವಲ ರೂ.೪೫೦. ಇನ್ನು ಸಣ್ಣ ನೀರಾವರಿ ವ್ಯಾಪ್ತಿಯೊಳಗೆ ಬರುವ ಕೆರೆಗಳ ಸ್ಥಿತಿಯು ಬೇರೆಯೇ ಇದೆ. ಎಷ್ಟೋ ಸಂದರ್ಭದಲ್ಲಿ ಇಲಾಖೆ ಹೆಸರಿಗೆ ಮಾತ್ರ ಇದೆ. ಕೆರೆ ರಿಪೇರಿ ಇಲ್ಲದೆ ಸೊರಗಿದೆ. ಸರಿ ಇದ್ದ ಕಡೆ ತುಂಬಾ ಕಡಿಮೆ ತೆರಿಗೆ ವಸೂಲಾಗುತ್ತಿದೆ. ವರ್ಷಕ್ಕೆ ರೂ ೨೦ ರಿಂದ ೪೦. ಇದು ಕೂಡ ಜಾಸ್ತಿ ಎನ್ನುವ ಅಭಿಪ್ರಾಯವಿದೆ. ಎರಡನೇ ಸಮಸ್ಯೆ ನಿಗದಿಯಾದ ತೆರಿಗೆ ಸಂದಾಯ ಮಾಡಿದಿರುವು. ಸುಮಾರು ಮೂರನೇ ಒಂದರಷ್ಟು ಜನ ತೆರಿಗೆ ಸರಿಯಾಗಿ ಪಾವತಿ ಆಗುತ್ತಿಲ್ಲ ಎಂದಿದ್ದಾರೆ. ಇದು ಕೆರೆ ನೀರಾವರಿ ಸಂಬಂಧಿಸಿ ಮಾತ್ರವಲ್ಲ. ಮನೆ ತೆರಿಗೆಯಿಂದ ಹಿಡಿದು ಎಲ್ಲ ತೆರಿಗೆಯನ್ನು ಕಟ್ಟದಿರುವ ಅಭ್ಯಾಸ ನಮಗಿದೆ. ನೀರಾವರಿ ತೆರಿಗೆ ಮತ್ತು ವೆಚ್ಚ ಭರಿಸುವುದರ ಮೂಲಕ ಪಾಲುದಾರರಾಗುವ ಕುರಿತ ಪ್ರಶ್ನೆಗಳಿಗೆ ತೃಪ್ತಿಕರ ಉತ್ತರ ಸಿಕ್ಕಿಲ್ಲ. ಕೆರೆ, ಕಾಲುವೆ ರಿಪೇರಿಗೆ ಅಥವಾ ಹೂಳೆತ್ತಲು ಶ್ರಮದಾನ ಮಾಡಲು ರೈತರು ಸಿದ್ಧರಿದ್ದಾರೆ. ಆದರೆ ವಂತಿಗೆ ನೀಡುವ ವಿಚಾರದಲ್ಲಿ ಬಳಕೆದಾರರು ಧಾರಾಳತನ ಪ್ರದರ್ಶಿಸುವುದಿಲ್ಲ. ಕೆರೆ ಹೂಳೆತ್ತುವುದು ಸರಕಾರದ ಜವಾಬ್ದಾರಿಯಾಗಬೇಕೆಂದು ಸಂದರ್ಶಿಸಿದ ಬಹುತೇಕರ ಅಭಿಪ್ರಾಯ.

ಐದು, ಖಾಸಗಿ ಮತ್ತು ಸಮುದಾಯದ ಸಂಪನ್ಮೂಲ ಬಳಸುವಲ್ಲಿ ಮಾಡುವ ವ್ಯತ್ಯಾಸ. ಖಾಸಗಿ ಸಂಪನ್ಮೂಲದ ಬಳಕೆಯಲ್ಲಿ ಸಾಕಷ್ಟು ಜಾಗ್ರತೆ ವಹಿಸುವುದನ್ನು ಎಲ್ಲರಲ್ಲೂ ಕಾಣುತ್ತೇವೆ. ಆದರೆ ಸಾರ್ವಜನಿಕ ಸಂಪನ್ಮೂಲ ಬಳಕೆಯಲ್ಲಿ ಅದೇ ನಿಯಮವನ್ನು ಪಾಲಿಸುವುದಿಲ್ಲ. ಅದು ಸಾರ್ವಜನಿಕ ಹಣ ಇರಬಹುದು, ಕೆರೆ ನೀರು ಇರಬಹುದು, ಸಮುದಾಯದ ಅರಣ್ಯ ಇರಬಹುದು, ರಸ್ತೆ ಇರಬಹುದು, ವಿದ್ಯುತ್ ಇರಬಹುದು ಅಥವಾ ಇನ್ನ್ಯಾವುದೋ ಸಾರ್ವಜನಿಕ ಆಸ್ತಿ ಇರಬಹುದು. ಅದು ಸಾರ್ವಜನಿಕ ಎಂದ ಕೂಡಲೇ ನಮ್ಮದಲ್ಲ ಎನ್ನುವ ಧೋರಣೆ.

ಆದುದರಿಂದ ಅದನ್ನು ಹೇಗೆ ಬೇಕೆಂದಾಗ ಉಪಯೋಗಿಸುವುದು ನಮ್ಮ ಹಕ್ಕು ಎಂದು ತಿಳಿದುಕೊಂಡಂತಿದೆ. ತನ್ನ ಸ್ವಂತ ದುಡ್ಡಿನ ಬಗ್ಗೆ ನೂರು ಬಾರಿ ಯೋಚಿಸಿ ಖರ್ಚು ಮಾಡುವವರು ಪಂಚಾಯತ್ ದುಡ್ಡು ಅಥವಾ ಇನ್ಯಾವುದೋ ಸಾರ್ವಜನಿಕ ದುಡ್ಡಿನ ಪ್ರಶ್ನೆ ಬಂದರೆ ತುಂಬಾ ಧಾರಾಳವಾಗಿ ಖರ್ಚು ಮಾಡುವುದು ಸಾಮಾನ್ಯವಾಗಿದೆ. ಕೆರೆ ಸಂರಕ್ಷಣೆ ಮತ್ತು ನೀರು ಬಳಕೆಯಲ್ಲೂ ಇದೇ ರೀತಿಯ ಧೋರಣೆಯನ್ನು ಕಾಣಬಹುದು. ಅದು ಎಲ್ಲರ ಆಸ್ತಿ ಆದುದರಿಂದ ಯಾರ ಆಸ್ತಿನೂ ಅಲ್ಲ. ಕೆರೆ ಪಾತ್ರ ಒತ್ತುವರಿ, ಕೆರೆ ಜಲಾನಯನ ಪ್ರದೇಶದ ಒತ್ತುವರಿ, ಕೆರೆ ನೀರು ಬರುವ ಕಾಲುವೆ ಹಾನಿಯಾಗುವಂತೆ ತಮ್ಮ ಹೊಲದ ಕೆಲಸ ಮಾಡುವುದು ಇತ್ಯಾದಿಗಳು ಈ ಸಾಲಿನಲ್ಲಿ ಬರುವಂತಹ ಸಂಗತಿಗಳು. ತಮ್ಮ ಕಣ್ಣೆದುರೆ ಕೆರೆ ಹೂಳು ತುಂಬಿ ನಿರುಪಯುಕ್ತ ಸ್ಥಿತಿ ತಲುಪುವಾಗಲು ಅದರ ರಿಪೇರಿಗಿಂತ ಈ ವರ್ಷದ ಕೃಷಿ ಮುಖ್ಯ ಎಂದು ತಿಳಿಯುವುದು ದೂರದೃಷ್ಟಿಯ ಕೊರತೆ ಹೊರತು ಬುದ್ಧಿವಂತಿಕೆಯಲ್ಲ. ಇದೊಂದು ರೀತಿ ಕೊಂಬೆಯಲ್ಲಿ ಕುಳಿತು ಬುಡ ಕಡಿದಂತೆ. ಕೆಲವೊಂದು ಕೆರೆಗಳ ವಿಚಾರದಲ್ಲಿ ಖಾಸಗಿ ಮತ್ತು ಸಾರ್ವಜನಿಕ ವಿಂಗಡಣೆಯ ಚರ್ಚೆ ಆಯಾಯ ಊರಿಗೆ ಸೀಮಿತಗೊಂಡರೆ ಸಾಲುವುದಿಲ್ಲ. ಉದಾಹರಣೆಗೆ ಪಾಪಿನಾಯಕನ ಹಳ್ಳಿಯ ಸೆಟ್ಟಿಕೆರೆ, ವಡ್ಡರಹಳ್ಳಿ ಕೆರೆ, ಕಮಲಾಪುರ ಕೆರೆ ಮುಂತಾದವು ಕೇವಲ ಆ ಊರಿನವರ ಅನಾಸಕ್ತಿಯಿಂದ ಈ ಸ್ಥಿತಿ ತಲುಪಿದೆ ಎನ್ನಲಾಗುವುದಿಲ್ಲ. ಅಲ್ಲಿನ ಕೆರೆಗಳ ಬಹುಪಾಲು ಸಮಸ್ಯೆಗೆ ಊರಿನಿಂದ ಹೊರಗೆ ನಡೆಯುವ ಗಣಿಗಾರಿಕೆ ಕಾರಣ. ಕೆರೆಯ ಜಲಾನಯನ ಪ್ರದೇಶವೆಲ್ಲ ಇಂದು ಗಣಿಗಾರಿಕೆಯ ಮುಖ್ಯ ಪ್ರದೇಶಗಳಾಗಿವೆ. ಗಣಿಗಾರಿಕೆಯಿಂದ ಹೊರಬೀಳುವ ಬಿಡಿ ಮಣ್ಣು ಮಳೆಗಾಲದಲ್ಲಿ ಕೆರೆಗೆ ಸೇರುತ್ತಿದೆ. ಕಮಲಾಪುರ ಕೆರೆಯ ಸರಿ ಅರ್ಧಕ್ಕಿಂತಲೂ ಹೆಚ್ಚು ಭಾಗ ಹೂಳು ತುಂಬಿದೆ. ಇದನ್ನು ತೆಗೆಯಲು ಕನಿಷ್ಠ ಕೆಲವು ಕೋಟಿ ರೂಪಾಯಿಗಳು ಹೆಚ್ಚು ಭಾಗ ಹೂಳು ತುಂಬಿದೆ. ಇದನ್ನು ತೆಗೆಯಲು ಕನಿಷ್ಠ ಕೆಲವು ಕೋಟಿ ರೂಪಾಯಿಗಳು ಬೇಕು. ಇದನ್ನು ಭರಿಸುವವರು ಯಾರು? ಅಥವಾ ಭರಿಸಬೇಕದವರು ಯಾರು? ಗಣಿಗಾರಿಕೆಯಿಂದ ನಾಶವಾಗುವ ಅರಣ್ಯ ಪ್ರದೇಶವನ್ನು ಸರಿಗಟ್ಟಿಸುವಷ್ಟು ಅರಣ್ಯ ಬೆಳಸಬೇಕು ಅಥವಾ ಅರಣ್ಯ ಬೆಳೆಸಲು ಒಂದು ನಿರ್ದಿಷ್ಟ ಕರ ಸಂದಾಯ ಮಾಡಬೇಕೆಂಬ ನಿಯಮ ಇದೆ. ಆದರೆ ಎಲ್ಲೂ ಗಣಿಗಾರಿಕೆಯಿಂದಲೇ ತುಂಬಿದ ಹೂಳನ್ನು ತೆಗೆಯಲು ಗಣಿಮಾಲಿಕರು ವಂತಿಗೆ ನೀಡಬೇಕೆಂದಿಲ್ಲ. ಆದುದರಿಂದ ಸಾರ್ವಜನಿಕ ಆಸ್ತಿಯ ದುರುಪಯೋಗ ನೇರ ಹಾನಿ ಮಾಡುವುದರ ಜೊತೆಗೆ ಪರೋಕ್ಷ ಹಾನಿಗೂ ಕಾರಣವಾಗುತ್ತದೆ. ನೇರ ಹಾನಿ ಮಾಡುವವರನ್ನು ಕಾನೂನು ಪ್ರಕಾರ ಜವಾಬ್ದಾರರನ್ನಾಗಿಸಬಹುದು. ಆದರೆ ಈ ರೀತಿ ಪರೋಕ್ಷವಾಗಿ ಸಮುದಾಯದ ಆಸ್ತಿಗೆ ಹಾನಿ ತರುವವರನ್ನು ಹೇಗೆ ಜವಾಬ್ದಾರರನ್ನಾಗಿಸುವುದು? ಇಷ್ಟೇ ಪ್ರಾಮುಖ್ಯವಾದ ವಿಚಾರವೆಂದರೆ ಕೆರೆ ಪಾತ್ರದ ಒತ್ತುವರಿ, ಜಲಾನಯನ ಪ್ರದೇಶದ ಒತ್ತುವರಿ ಅಥವಾ ದುರುಪಯೋಗ, ಕೆರೆ ಕಾಲುವೆಗಳಿಗೆ ಅಥವಾ ಏರಿಗೆ ಹಾನಿ ತರುವಂತಹ ಕೆಲಸ ಇತ್ಯಾದಿಗಳನ್ನು ಸರಿಪಡಿಸುವುದು ಹೇಗೆ? ಕಮಲಾಪುರ ಕೆರೆಯ ಹಲವಾರು ಎಕ್ರೆಗಳಷ್ಟು ಪಾತ್ರ ಒತ್ತುವರಿಯಾಗಿದೆ. ಇವೆಲ್ಲವನ್ನು ಯಾವ ರೀತಿಯಲ್ಲಿ ಪರಿಹರಿಸುವುದು. ಸುಮಾರು ಶೇಕಡಾ ೭೫ರಷ್ಟು ಮಂದಿ ಒತ್ತುವರಿ ತಡೆಯುವ ಅವಶ್ಯಕತೆ ಇದೆ ಎಂದು ಒಪ್ಪುತ್ತಾರೆ. ಆದರೆ ಅಷ್ಟೇ ಮಂದಿ ಒತ್ತುವರಿ ತಡೆಯುವುದು ಸರಕಾರದ ಕೆಲಸ ಎನ್ನುತ್ತಾರೆ. ಅಂದರೆ ನಮ್ಮ ಕಣ್ಣೆದುರೇ ನಮ್ಮವರೇ ಸಮುದಾಯದ ಸಂಪನ್ಮೂಲಗಳನ್ನು ತಮ್ಮ ಖಾಸಗಿ ಉಪಯೋಗಕ್ಕೆ ಬಳಸುವಾಗ ಸುಮ್ಮನಿದ್ದು ಅದನ್ನು ತೆರವು ಗೊಳಿಸುವ ಪ್ರಶ್ನೆ ಬಂದಾಗ ಸರಕಾರದ ಜವಾಬ್ದಾರಿ ಎಂದರೆ ಜೀರ್ಣಿಸಿಕೊಳ್ಳುವುದು ಕಷ್ಟ. ಸಹಭಾಗಿತ್ವ ಪರಿಣಾಮಕಾರಿಯಾಗಬೇಕಾದರೆ ಸರಕಾರದ ಜವಾಬ್ದಾರಿ ಎನ್ನುವಲ್ಲಿ ನಮ್ಮ ಜವಾಬ್ದಾರಿ ಎನ್ನುವುದು ಜಾಗ್ರತವಾಗಬೇಕು. ಇಲ್ಲೊಂದು ಬಹು ದೊಡ್ಡ ದ್ವಂದ್ವಂತೆ ಇದೆ. ಸಮಾನತೆ ಇಲ್ಲದ ಒಂದು ಸಮಾಜದಲ್ಲಿ ಸಮಾಜದ ಕೆಳವರ್ಗ ಸಮುದಾಯದ ಸಂಪನ್ಮೂಲವನ್ನು ಒತ್ತುವರಿ ಮಾಡಿದರೆ ತಪ್ಪೇನು ಎನ್ನುವ ಧೋರಣೆ ಇದೆ. ಆ ರೀತಿ ಮಾಡುವುದರಿಂದ ಕೆಳವರ್ಗದ ಎಲ್ಲ ಸಮಸ್ಯೆಗಳು ಪರಿಹಾರಗೊಂಡು ಸಮಾನತೆ ಸಾಧ್ಯವಾಗುವುದಾದರೆ ತಪ್ಪಿಲ್ಲ ಎನ್ನಬಹುದು. ಆದರೆ ಆ ರೀತಿ ಆಗುವುದಿಲ್ಲ. ಜತೆಗೆ ಒಂದು ವೇಳೆ ಇಂತ ಕ್ರಮಗಳಿಂದ ಹೆಚ್ಚು ಕಡಿಮೆ ಸಮಾನತೆಯುಳ್ಳ ಒಂದು ಸಮಾಜ ರೂಪುಗೊಂಡಿತು ಎಂದು ಊಹಿಸುವ ಅಲ್ಲಿ ಕೂಡ ಊರ ಎಲ್ಲರು ಬಳಸುವ ಹಲವಾರು ವ್ಯವಸ್ಥೆಗಳು ಬೇಕಲ್ಲ. ಆ ಸಂದರ್ಭದಲ್ಲಿ ಸಮುದಾಯದ ಸಂಪನ್ಮೂಲವನ್ನು ಖಾಸಗಿ ಆಸಕ್ತಿಗಾಗಿ ಬಳಸುವ ಈ ಅಭ್ಯಾಸವನ್ನು ಯಾವ ರೀತಿಯಲ್ಲಿ ಅರ್ಥೈಸಿಕೊಳ್ಳುವುದು.

**ಕೆಲವು ತಾತ್ಕಾಲಿಕ ತೀರ್ಮಾನಗಳು**

ಸ್ಥಳೀಯ ಸಂಪನ್ಮೂಲ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವ ನಮಗೇನು ಹೊಸತಲ್ಲ. ಅದು ನಮ್ಮ ಸಂಸ್ಕೃತಿಯ ಭಾಗವಾಗಿಯೇ ಇತ್ತು. ಆದುದರಿಂದ ಅದನ್ನು ಪುನರುಜ್ಜೀವನ ಗೊಳಿಸುವುದು ವಿಶೇಷ ಕಷ್ಟವಲ್ಲ ಎನ್ನುವ ವಾದ ಪ್ರಚಲಿತದಲ್ಲಿದೆ. ಹಿಂದಿನ ಪುಟಗಳಲ್ಲಿ ನಮ್ಮ ಸಂಸ್ಕೃತಿಯಲ್ಲಿ ಚಾರಿತ್ರಿಕವಾಗಿ ರೂಪುಗೊಂಡ ಸಹಭಾಗಿತ್ವದ ಗುಣ ಲಕ್ಷಣಗಳನ್ನು ನೋಡಿದ್ದೇವೆ. ಅಂದಿನ ಪ್ರಭುತ್ವ ಮತ್ತು ಅದು ತನ್ನ ಜವಾಬ್ದಾರಿಯನ್ನು ವ್ಯಾಖ್ಯಾನಿಸಿಕೊಂಡ ಬಗೆ ಹೇಗೆ ಅಂದಿನ ಸಹಭಾಗಿತ್ವವನ್ನು ಪ್ರಭಾವಿಸಿದೆ ಎನ್ನುವುದರ ಕಿರು ಪರಿಚಯ ಆಗಿರಬಹುದು. ಪ್ರಭುತ್ವಕ್ಕೆ ಆದಾಯ ಹೆಚ್ಚಿಸಿಕೊಳ್ಳುವುದು ಮುಖ್ಯವಾಗಿತ್ತು. ಚಾರಿತ್ರಿಕವಾಗಿ ರೂಪುಗೊಂಡ ಅಂದಿನ ಸಾಮಾಜಿಕ ಸಂಬಂಧಗಳನ್ನು ಬಳಸಿಕೊಂಡು ಉತ್ಪಾದನೆ ಹೆಚ್ಚಿಸುವ ಕೆಲಸವನ್ನು ಅಂದಿನ ಪ್ರಭುತ್ವ ಮಾಡಿದೆ. ಕೆರೆಗಳ ನಿರ್ಮಾಣ, ಸಂರಕ್ಷಣೆ ಇತ್ಯಾದಿಗಳಿಗೆ ಒಂದು ಧಾರ್ಮಿಕ ಚಟುವಟಿಕೆಯ ರೂಪ ಕೊಟ್ಟದ್ದು ಕೂಡ ಅದರಲ್ಲಿ ಸೇರುತ್ತದೆ. ಜತೆಗೆ ಅಲ್ಲಿ ದಲಿತರ, ಕೆಳಜಾತಿ ಜನರ, ಮಹಿಳೆ ಮುಂತಾದವರ ಶೋಷಣೆ ಅಸಹಜವಾಗಿರಲಿಲ್ಲ. ಇವೆಲ್ಲ ಅಂದಿನ ಸಹಭಾಗಿತ್ವದ ರೂಪುರೇಷೆಗಳನ್ನು ಪ್ರಭಾವಿಸಿದೆ. ಸಣ್ಣ ಕೃಷಿಕರು, ದಲಿತರು, ಮಹಿಳೆಯರು, ಕೆರೆ ನೀರು ಬಳಸುವ ಅಗಸರು ಮತ್ತು ಇತರ ಸಾಂಪ್ರದಾಯಿಕ ಕಸುಬುದಾರರು ಅಂದಿನ ಸಹಭಾಗಿತ್ವದ ಭಾಗವಾಗಿರಲಿಲ್ಲ. ಅದೇ ಸಂದರ್ಭದಲ್ಲಿ ಅಂದಿನ ವ್ಯವಸ್ಥೆಯಲ್ಲಿನ ಕೆಲವೊಂದು ಒಳ್ಳೆಯ ಅಂಶಗಳನ್ನು ಅಲ್ಲಗೆಳೆಯಲಾಗುವುದಿಲ್ಲ. ದೊಡ್ಡ ಕೃಷಿಕರನ್ನು ಮತ್ತು ಕೆರೆ ನೀರಾವರಿಯಿಂದ ಪರೋಕ್ಷ ಲಾಭ ಗಳಸುತ್ತಿದ್ದ ಸಮಾಜದ ಇತರ ಅನುಕೂಲಸ್ಥರನ್ನು ಕೆರೆಗಳ ಸಂರಕ್ಷಣೆಯ ಹೊಣೆಗಾರರನ್ನಾಗಿಸಿದ್ದು ಅದರಲ್ಲಿ ಬಹು ಮುಖ್ಯವಾದ ಅಂಶ. ಇಂದಿನ ಬಳಕೆದಾರರಿಗೆ ಅಂದಿನ ವ್ಯವಸ್ಥೆ ಬಗ್ಗೆ ಒಂದು ಸಾಮಾನ್ಯ ಅರಿವಿದೆ. ಆದರೆ ಅಂದಿನ ವ್ಯವಸ್ಥೆಯ ನಿಖರವಾದ ಮಾಹಿತಿ ಇಲ್ಲ. ಆದಾಗ್ಯೂ ಸಹಭಾಗಿತ್ವವನ್ನು ಪುನರ್ ಜೀವಗೊಳಿಸುವಲ್ಲಿ ಜನ ಸಾಮಾನ್ಯರ ಕಲ್ಪನೆಯಲ್ಲಿರುವ ಹಿಂದಿನ ವ್ಯವಸ್ಥೆ ಚರಿತ್ರೆಯಲ್ಲಿ ಬರುವ ಹಿಂದಿನ ವ್ಯವಸ್ಥೆಗಿಂಗ ಗಟ್ಟಿ. ಯಾಕೆಂದರೆ ಚರಿತ್ರೆಯಲ್ಲಿನ ಹಿಂದಿನ ವ್ಯವಸ್ಥೆ ಬಗ್ಗೆ ಜನರಿಗೆ ಮನವರಿಗೆ ಮಾಡುವುದು ಕಷ್ಟ. ಆದರೆ ಅವರ ಕಲ್ಪನೆಯಲ್ಲಿರುವ ಸಹಭಾಗಿತ್ವಕ್ಕೆ ವಿಶೇಷ ಶ್ರಮ ಇಲ್ಲದೆ ಪುನರ್ ಜೀವ ನೀಡಬಹುದು. ಆದುದರಿಂದ ಹಿಂದೆ ಸಹಭಾಗಿತ್ವ ಇತ್ತು ಎನ್ನುವುದು ಇಂದಿನ ಸಹಭಾಗಿತ್ವದ ಸಾಧ್ಯತೆಯನ್ನು ಗಣನೀಯವಾಗಿ ಹೆಚ್ಚಿಸುತ್ತದೆ.

ಆಧುನಿಕ ಸಹಭಾಗಿತ್ವಕ್ಕೆ ಪೂರಕವಾಗುವ ಹಲವಾರು ವಿಚಾರಗಳ ಕುರಿತು ರೈತರು ಸಹಮತ ವ್ಯಕ್ತ ಪಡಿಸಿದ್ದಾರೆ. ನೀರು ಬಳಕೆದಾರರ ಸಂಘಟನೆ, ಸದಸ್ಯತ್ವ, ಸದಸ್ಯತನ ಮತ್ತು ಸದಸ್ಯರ ಸಭೆ ಇತ್ಯಾದಿಗಳು ಇರಬೇಕೆಂದು ರೈತರು ಬಯಸುತ್ತಾರೆ. ನೀರಿಗೆ ತೆರಿಗೆ ಕೊಡುವ ಕುರಿತು ರೈತರ ತಕರಾರು ಇಲ್ಲ. ತೆರಿಗೆ ದರ ನಿರ್ಧರಿಸುವಾಗ ಅವರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳುವ ಅಗತ್ಯವಿದೆ. ಇದನ್ನು ಅವರು ನೇರವಾಗಿ ಹೇಳಿಲ್ಲ. ತೆರಿಗೆ ದರ ತಮ್ಮ ಇತಿಮಿತಿಯೊಳಗೆ ಇರಬೇಕು ಎಂದು ಸೂಚಿಸುವುದರ ಮೂಲಕ ದರ ನಿರ್ಧಾರದಲ್ಲಿ ತಮ್ಮ ಸಹಭಾಗಿತ್ವವನ್ನು ಪರೋಕ್ಷವಾಗಿ ವ್ಯಕ್ತ ಪಡಿಸಿದ್ದಾರೆ. ಅದಕ್ಕಿಂತಲೂ ಮುಖ್ಯವಾಗಿ ತಮ್ಮ ಸಹಭಾಗಿತ್ವವನ್ನು ಪರೋಕ್ಷವಾಗಿ ವ್ಯಕ್ತಿ ಪಡಿಸಿದ್ದಾರೆ. ಅದಕ್ಕಿಂತಲೂ ಮುಖ್ಯವಾಗಿ ತೆರಿಗೆ ಸಂಗ್ರಹ ಕಟ್ಟುನಿಟ್ಟಾಗಿ ಆಗಬೇಕೆಂದು ಎಲ್ಲ ರೈತರು ಅಭಿಪ್ರಾಯ ಪಡುತ್ತಾರೆ. ಕೆರೆ, ಕಾಲುವೆ,ಇತ್ಯಾದಿಗಳ ಸಣ್ಣ ಮಟ್ಟಿನ ರಿಪೇರಿಗೆ ಶ್ರಮದಾನ ಮಾಡುವ ಬಗ್ಗೆ ರೈತರ ಆಕ್ಷೇಪವಿಲ್ಲ. ಹೂಳಿನ ಸಮಸ್ಯೆಯನ್ನು ಅವರಿಗೆ ಮನದಟ್ಟು ಮಾಡಿ ಸರಿಯಾದ ನಾಯಕತ್ವ ದೊರೆತರೆ ಹೂಳೆತ್ತಲು ಕೂಡ ಶ್ರಮದಾನ ಮಾಡಲು ಅವರು ಮುಂದೆ ಬರಬಹುದು. ಕೆಲವು ಹಳ್ಳಿಗಳಲ್ಲಿ ಹೂಳೆತ್ತಲು ಆಸಕ್ತಿ ತೋರಿಸದಿರಲು ಕಾರಣವನ್ನು ಮೇಲೆ ವಿವರಿಸಿದ್ದೇನೆ. ಅದರಲ್ಲಿ ಬಹು ಮುಖ್ಯವಾದುದು ಸಮಸ್ಯೆಯ ಅಗಾಧತೆ. ಕಮಲಾಪುರದ ಕೆರೆಯ ಹೂಳೆತ್ತಲು ಕೆಲವು ಕೋಟಿ ರೂಪಾಯಿಗಳ ವಿನಿಯೋಜನೆ ಬೇಕು. ರೈತರ ಶ್ರಮ ಬಳಸಿ ಹೂಳೆತ್ತಲು ಕನಿಷ್ಠ ಎರಡು ವರ್ಷಗಳು ಬೇಕು. ಹೀಗಿರುವಾಗ ರೈತರು ಹೂಳೆತ್ತಲು ಮುಂದೆ ಬರುವುದಾದರೂ ಹೇಗೆ? ಇನ್ನು ಒತ್ತುವರಿ ತಡೆಯಬೇಕೆಂದು ಹೆಚ್ಚಿನ ಎಲ್ಲ ರೈತರ ಆಶಯ. ಆದರೆ ಸ್ಥಳೀಯ ರಾಜಕಾರಣ ಅದಕ್ಕೆ ಅವಕಾಶ ಕೊಡುತ್ತಿಲ್ಲ ಎನ್ನುವುದು ಅವರ ಕೊರಗು. ಒತ್ತುವರಿಯನ್ನು ತಡೆಯುವ ಕಾನೂನು ತಂದು ಪರಿಣಾಮಕಾರಿಯಾಗಿ ಜಾರಿ ತಂದರೆ ಒತ್ತುವರಿ ಸಮಸ್ಯೆ ಪರಿಹಾರವಾಗಬಹುದು. ಇಲ್ಲಿ ಕೇವಲ ರೈತರ ಪಾತ್ರ ಮಾತ್ರ ಮುಖ್ಯವಲ್ಲ. ಕಾನೂನನ್ನು ಜಾರಿ ತರುವವರ ಪಾತ್ರ ಕೂಡ ಮುಖ್ಯ. ಜತೆಗೆ ಒತ್ತುವರಿ ಮಾಡಿದವರು ಸ್ಥಳೀಯ ಭೂರಹಿತರಾಗಿದ್ದರೆ ಅವರಿಗೆ ಬದಲಿ ವ್ಯವಸ್ಥೆ ಮಾಡುವ ಹೊಣೆಯೂ ಇದೆ. ಈ ಸಮಸ್ಯೆ ಸ್ಥಳೀಯ ಸಮುದಾಯಗಳ ಪ್ರಯತ್ನದಿಂದ ಮಾತ್ರ ಪರಿಹಾರ ಆಗಲಿಕ್ಕಿಲ್ಲ. ಇನ್ನು ನೀರು ಹಂಚಿಕೆ ನಿಯಮ ಪಾಲಿಸುವುದರ ಕುರಿತು ಯಾವ ರೈತನೂ ವಿರೋಧ ಸೂಚಿಸಿಲ್ಲ. ಬದಲಾಗಿ ನೀರು ಹಂಚಿಕೆ ಕುರಿತು ಕಟ್ಟುನಿಟ್ಟಾದ ನೀತಿ ನಿಯಮ ಬೇಕು ಮತ್ತು ಅದನ್ನು ಸಂಬಂಧಪಟ್ಟವರೆಲ್ಲ ಚಾಚೂ ತಪ್ಪದೆ ಅನುಸರಿಸಬೇಕೆಂದು

ಬಹುತೇಕ ರೈತರು ಅಭಿಪ್ರಾಯ ಪಡುತ್ತಾರೆ. ಇಡೀ ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ನಾನು ಕಂಡು ಕೊಂಡ ಒಂದು ಬಹು ಮುಖ್ಯ ಅಂಶವೆಂದರೆ ರೈತರು ಎಲ್ಲೂ ಕೂಡ ಸರಕಾರ ತರುವ ಬದಲಾವಣೆಗಳಿಗೆ ತಾವು ವಿರುದ್ಧ ಎನ್ನುವ ನಿಲುವು ವ್ಯಕ್ತ ಪಡಿಸಿಲ್ಲ. ಬದಲಿಗೆ ಹಲವಾರು ವಿಚಾರಗಳ ಕುರಿತು ತಮ್ಮ ಸಹಮತ ಸೂಚಿಸಿದ್ದಾರೆ. ರೈತರನ್ನು ಉದ್ದಾರ ಮಾಡುವ ಕಾನೂನು ತರುವ ಮುನ್ನ ರೈತರನ್ನು ಭೇಟಿಯಾಗಿ ಆ ಕುರಿತು ಅವರ ಅಭಿಪ್ರಾಯವೇನೆಂದು ವಿಚಾರಿಸುವ ಗೋಜಿಗೆ ಯಾರು ಹೋಗದಿರುವುದೇ ಬಹು ದೊಡ್ಡ ದುರಂತ. ತಳ ಮಟ್ಟದ ವಸ್ತವಿಕತೆಯನ್ನು ಅರ್ಥಮಾಡಿಕೊಳ್ಳದೆ ಕಾನೂನು ತರುವುದು. ನಂತರ ಅದನ್ನು ಬೇಕಾಬಿಟ್ಟಿಯಾಗಿ ಜಾರಿ ತರುವುದು ನಮ್ಮ ಆಧುನೀಕರಣದ ಬಹು ದೊಡ್ಡ ದುರಂತ.

ಇದೇ ಸಂದರ್ಭದಲ್ಲಿ ಸಹಭಾಗಿತ್ವ ಕಾರ್ಯರೂಪಕ್ಕೆ ಬರಬೇಕಾದ ಒಟ್ಟು ಪರಿಸರದ ಬಗ್ಗೆಯೂ ತಕ್ಕಮಟ್ಟಿನ ತಿಳುವಳಿಕೆ ಅಗತ್ಯ. ಅವುಗಳಲ್ಲಿ ಎರಡು ಮುಖ್ಯ ವಿಚಾರಗಳನ್ನು ಇಲ್ಲಿ ಪರಿಗಣಿಸಬೇಕಾಗಿದೆ. ಒಂದು, ಹೆಪ್ಪುಗಟ್ಟಿರುವ ಅಸಮಾನ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾನತೆಯ ಕನಸು. ನಮ್ಮ ಸಮಾಜದಲ್ಲಿ ಹಿಂದೆ ಮತ್ತು ಈಗ ಸಮಾನತೆ ಇಲ್ಲ. ಆದಾಗ್ಯೂ ಪ್ರತಿಯೊಂದು ಯೋಜನೆಯಲ್ಲೂ ಸಮಾನತೆಯ ಕುರಿತು ಧಾರಾಳಿಗಳಾಗುವುದರಲ್ಲಿ ನಾವು ಹಿಂದೆ ಬಿದ್ದಿಲ್ಲ. ಅಂದ ಮಾತ್ರಕ್ಕೆ ಸಮಾನತೆಯ ಅಂಶ ಇರಬಾರದೆಂದಲ್ಲ. ಆದರೆ ಸಮಾನತೆಯನ್ನು ಗಮನಕ್ಕೆ ತೆಗೆದುಕೊಳ್ಳದೆ ಸಮಾನತೆಯ ಬಗ್ಗೆ ಧಾರಾಳಿಗಳಾಗುವುದರಿಂದ ಸಮಾಜದ ಕೆಳ ವರ್ಗಕ್ಕೆ ವಿಶೇಷ ಉಪಯೋಗವಿಲ್ಲ. ಯಾಕೆಂದರೆ ಎಷ್ಟೋ ಬಾರಿ ಅಂತಹ ಯೋಜನೆಗಳು ಕೇವಲ ನಾಮಕಾವಸ್ಥೆ ರೂಪದಲ್ಲಿ ಜಾರಿ ಬರುತ್ತವೆ. ಅದರ ಮೂಲ ತತ್ತ್ವಕ್ಕೆ ಅನುಸಾರ ಜಾರಿ ತರುವ ಇಚ್ಚೆ ಯೋಜನೆಗಳನ್ನು ಕಾರ್ಯರೂಪಕ್ಕೆ ಇಳಿಸುವವರಿಗೆ ಇರುವುದಿಲ್ಲ. ಅದರ ನಿಜರೂಪದಲ್ಲಿ ಜಾರಿ ತರುವಂತೆ ಒತ್ತಡ ಏರುವಷ್ಟು ಅರಿವು ಅಥವಾ ಸಂಘಟನಾ ಶಕ್ತಿ ಅದರಿಂದ ಲಾಭ ಪಡೆಯಬೇಕಾದ ವರ್ಗಕ್ಕೆ ಇಲ್ಲ. ಐದು ದಶಕಗಳ ಆಧುನೀಕರಣದಿಂದ ನಮ್ಮ ಮೇಲ್ ವರ್ಗಕ್ಕೆ ಒಂದಂತು ಸ್ಪಷ್ಟವಾಗಿದೆ. ಅದೇನೆಂದರೆ ಎಷ್ಟೇ ಕ್ರಾಂತಿಕಾರಿ ಕಾನೂನು ಅಥವಾ ಯೋಜನೆಯನ್ನು ಯಾವುದೇ ಭಯವಿಲ್ಲದ ರೂಪಿಸಬಹುದು. ಯಾಕೆಂದರೆ ಅದು ಖಂಡಿತವಾಗಿಯೂ ಅದರ ಯಥಾ ರೂಪದಲ್ಲಿ ಜಾರಿ ಬರುವುದಿಲ್ಲ ಎನ್ನುವ ವಿಶ್ವಾಸ ಮೇಲ್ ವರ್ಗಕ್ಕೆ ಇದೆ. ಆದುದರಿಂದಲೇ ನಮ್ಮಲ್ಲಿ ಇಡೀ ಸಮಾಜವನ್ನು ಅಡಿಮೇಲು ಮಾಡುವ ಕಾನೂನು ಅಥವಾ ಯೋಜನೆ ತರುವಾಗಲೂ ಯಾರು ಕೂಡ ವಿರೋಧಿಸುವುದಿಲ್ಲ. ಹಾಗೆಂದು ಸಮಾನತೆಯ ಕನಸನ್ನು ಬಿಟ್ಟು ಬಿಡಬೇಕೆಂದು ವಾದಿಸುತ್ತಿಲ್ಲ. ಅದೊಂದು ಆದರ್ಶ ಎನ್ನುವುದನ್ನು ಗಮನದಲ್ಲಿರಿಸಿ ಕೊಳ್ಳುವುದು ಮುಖ್ಯ. ಅದು ಕಾರ್ಯ ರೂಪಕ್ಕೆ ಬರಬೇಕಾದ ಸಾಮಾಜಿಕ ಪರಿಸರದ ಕನಿಷ್ಠ ತಿಳುವಳಿಕೆ ಇದ್ದರೆ ನಾವು ಚರ್ಚಿಸುವ ವಿಚಾರಗಳು ಸ್ವಲ್ಪ ಮಟ್ಟಿಗೆ ರಿಲೆವೆಂಟ್ ಆಗಬಹುದು. ಅಂದರೆ ಸಾಮಾಜಿಕ ಹಾಗೂ ಆರ್ಥಿಕ ಏಣಿಶ್ರೇಣಿಗಳನ್ನು ಗಣನೆಗೆ ತೆಗೆದುಕೊಳ್ಳುವ ನಡೆಯುವ ಕಾರ್ಯಕ್ರಮಗಳು ಆದರ್ಶವಾಗಿರಬಹುದು. ಆದರೆ ಅವು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬರಬೇಕಾದರೆ ಸಾಮಾಜಿಕ ವಾಸ್ತವಿಕತೆಯನ್ನು ಗಣನೆಗೆ ತೆಗೆದುಕೊಳ್ಳುವುದು ಅಗತ್ಯ.

ಎರಡನೇ ವಿಚಾರ ಮೂಲೆ ಮೂಲೆಗೆ ಹಬ್ಬುತ್ತಿರುವ ಮಾರುಕಟ್ಟೆ ನೀತಿ. ಕೆರೆ ನೀರಾವರಿ ನಿರ್ವಹಣೆಗೆ ಜನರ ಸಹಭಾಗಿತ್ವ ಅಥವಾ ನಮ್ಮ ಸಾಂಪ್ರದಾಯಿಕ ಸಮಾಜದ ಸಮುದಾಯ ಪ್ರಜ್ಞೆಯನ್ನು ಪುನರುಜ್ಜಿವನಗೊಳಿಸುವ ಬಗ್ಗೆ ಚರ್ಚಿಸಿದ್ದೇವೆ. ಒಂದು ಕಾಲದಲ್ಲಿ ಮಾರುಕಟ್ಟೆ ನೀತಿಯ ಪಸರಿಸುವಿಕೆಗೆ ಸಮುದಾಯ ಪ್ರಜ್ಞೆ ಅಡ್ಡಿ ಎನ್ನುವ ಧೋರಣೆ ಇತ್ತು. ಆದರೆ ಇಂದು ಒಂದು ಕಡೆಯಿಂದ ಮುಕ್ತ ಮಾರುಕಟ್ಟೆಯ ಬಗ್ಗೆ ಭರದಿಂದ ಚರ್ಚೆ ನಡೆಯುವಾಗಲೇ ಸಮುದಾಯ ಪ್ರಜ್ಞೆಯನ್ನು ಜಾಗೃತಗೊಳಿಸುವ ಅಗತ್ಯದ ಚರ್ಚೆಯೂ ನಡೆಯುತ್ತಿದೆ. ಇದೊಂದು ರೀತಿಯ ದ್ವಂದ್ವತೆ ಅನ್ನುವುದಕ್ಕಿಂತ ವಾಸ್ತವಿಕತೆ ಎನ್ನುವುದು ಉತ್ತಮ. ಯಾಕೆಂದರೆ ಮಾರುಕಟ್ಟೆ ಸಮಾಜದ ಅಸಮಾನತೆಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅದು ಬಡವ ಶ್ರೀಮಂತ, ಮೇಲ್ ಕೆಳ ಜಾತಿ ಎಲ್ಲರನ್ನೂ ಒಂದೇ ಮಾನದಂಡದಿಂದ ಅಳೆಯುತ್ತದೆ. ಇದೊಂದು ರೀತಿ ಬಲವಾಗಿ ಬೀಸುವ ಬಿರುಗಾಳಿ ಇದ್ದಂತೆ. ಇದರಿಂದ ಬಹುಬೇಗ ಕುಸಿದು ಬೀಳುವುದು ಜೋಪಡಿ ಪಟ್ಟಿಗಳು ಮತ್ತು ಮುರುಕಲು ಗುಡಿಸಲುಗಳು. ಇಂತಹ ಸಂದರ್ಭದಲ್ಲಿ ಪ್ರಭುತ್ವ ಕೆಳವರ್ಗದ ಪರವಾಗಿ ಕಾರ್ಯ ನಿರ್ವಹಿಸಬೇಕಿತ್ತು. ಆದರೆ ಪ್ರಭುತ್ವ ತನ್ನ ಜವಾಬ್ದಾರಿಯಿಂದ ಹಿಂದಕ್ಕೆ ಸರಿಯುತ್ತಿದೆ. ಅಂದ ಮಾತ್ರಕ್ಕೆ ಅದು ಕೋಟಿಗಟ್ಟಲೆ ಜನರ ಬದುಕಿಗೆ ಕನಿಷ್ಠ ವ್ಯವಸ್ಥೆ ಮಾಡದಿರಲು ಸಾಧ್ಯವಿಲ್ಲ. ಆದುದರಿಂದ ಮಾರುಕಟ್ಟೆಯಲ್ಲಿ ಎಲ್ಲ ರೀತಿಯಿಂದಲೂ ಭಾಗವಹಿಸಲು ಸಾಧ್ಯವಿಲ್ಲದವರು ತಮ್ಮ ಸಮುದಾಯ ಪ್ರಜ್ಞೆಯ ಮೊರೆ

ಹೋಗಬೇಕಾಗಿದೆ. ಆದರೆ ಇಲ್ಲೂ ಸಾಕಷ್ಟು ವಿರೋಧಾ ಭಾಸಗಳಿವೆ. ಹೊರ ಪರಿಸರವೆಲ್ಲ ಮಾರುಕಟ್ಟೆ ನೀತಿಗನುಗುಣವಾಗಿ ಕಾರ್ಯನಿರ್ವಹಿಸುವಾಗ ಅದರಿಂದ ಯಾರಿಗೂ ಸಂಪೂರ್ಣ ಹೊರಗಿರಲು ಸಾಧ್ಯವಿಲ್ಲ. ಅದರ ಆಕರ್ಷಣೆ ರೈತರನ್ನು ಮಾರುಕಟ್ಟೆಗಾಗಿ ಬೆಳೆಯುವುದಕ್ಕೆ ಪ್ರೇರೆಪಿಸುತ್ತದೆ. ಮಾರುಕಟ್ಟೆಗೆ ಬೆಳೆಯುವುದೆಂದರೆ ಲಾಭ ನಷ್ಟದ ಪ್ರಶ್ನೆ ಇದ್ದೇ ಇರುತ್ತದೆ. ಲಾಭ ನಷ್ಟದ ಪ್ರಶ್ನೆ ಬಂದಾಗ ವೆಚ್ಚ ಕಡಿಮೆಗೊಳಿಸುವ ದಾರಿ ಹುಡುಕಬೇಕಾಗುತ್ತದೆ. ವೆಚ್ಚ ಹಲವು ರೀತಿಯಲ್ಲಿ ಕಡಿಮೆಗೊಳಿಸಬಹುದು. ಅವುಗಳಲ್ಲಿ ಸುಲಭದ ದಾರಿಯೆಂದರೆ ಸಮುದಾಯದ ಸಂಪನ್ಮೂಲವನ್ನು ಖಾಸಗಿ ಲಾಭಕ್ಕೆ ಬಳಸುವುದು. ಅದರಿಂದ ಲಾಭ ಖಾಸಗಿಯವರಿಗೆ ಆದರೆ ನಷ್ಟ ಸಮುದಾಯಕ್ಕೆ ವರ್ಗಾವಣೆ ಆಗುತ್ತದೆ. ಅದು ಸಮುದಾಯ ಪ್ರಜ್ಞೆಯಿಂದ ಸಂಪನ್ಮೂಲ ಬಳಸುವ ಕ್ರಮವನ್ನು ಖಂಡಿತವಾಗಿಯೂ ಪ್ರಭಾವಿಸುತ್ತದೆ.

## ಕೆರೆಗಳ ನಿರ್ವಹಣೆ ಮತ್ತು ಜನರ ಪಾತ್ರ

### (೧)

ಗ್ರಾಮ ವಿಕಾಸ ಒಂದು ಗ್ರಾಮೀಣ ಅಭಿವೃದ್ಧಿ ಸಂಸ್ಥೆ. ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನಲ್ಲಿ ಈ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ. ಗ್ರಾಮ ಸಮುದಾಯದ ಶಾಶ್ವತ ಅಭಿವೃದ್ಧಿ ಹಾಗೂ ಆಹಾರ ಭದ್ರತೆ ಗುರಿ ಸಾಧಿಸಲು ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆ ಹಾಗೂ ಆಹಾರ ಭದ್ರತೆ ಗುರಿ ಸಾಧಿಸಲು ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆ ಹಾಗೂ ನಿರ್ವಹಣೆ ಬಹಳ ಮುಖ್ಯ ಎಂಬುದು ಗ್ರಾಮ ವಿಕಾಸದ ದೃಷ್ಟಿಕೋನ. ಇದಕ್ಕಾಗಿ ಕೆರೆಗಳ ರಕ್ಷಣೆ ಬಹಳ ಮುಖ್ಯ. ಈ ಅಂಶವನ್ನು ಗುರುತಿಸಿ ಪರಿಹಾರ ರೂಪವಾಗಿ ಗ್ರಾಮ ವಿಕಾಸ ೧೯೮೧-೮೨ರಿಂದ ಕೆಲಸ ಮಾಡುತ್ತಿದೆ. ಈ ದಿಸೆಯಲ್ಲಿ ಕೋಲಾರ ಜಿಲ್ಲೆ ಮತ್ತು ರಾಜ್ಯದ ಇತರ ನೀರಿನ ಸಂಪನ್ಮೂಲ ಕೊರತೆ ಇರುವ ಜಿಲ್ಲೆಗಳ ಗ್ರಾಮ ಸಮುದಾಯವನ್ನು ಉಳಿಸುವ ದಿಸೆಯಲ್ಲಿ ಕೆರೆಗಳ ಮರುಸಂವರ್ಧನೆಗಾಗಿ ಗ್ರಾಮ ವಿಕಾಸ ಜನರ ಅರಿವನ್ನು ಹೆಚ್ಚಿಸುವಲ್ಲಿ ತೊಡಗಿದೆ.

ನೀರಿನ ಅಮೂಲ್ಯ ಮೂಲಗಳನ್ನು ಮರುಸಂವರ್ಧನೆಗೊಳಿಸುವುದಕ್ಕೆ ಗಮನಕೊಡಬೇಕೆಂದು ಸಂಬಂಧಪಟ್ಟವರ ಮೇಲೆ ಒತ್ತಡ ತರುವ ದೃಷ್ಟಿಯಿಂದ ಜನರ ಅರಿವನ್ನು ಹೆಚ್ಚಿಸುವತ್ತ ಮತ್ತು ಕೆರೆಗಳ ಪ್ರಾಮುಖ್ಯತೆ ಬಗ್ಗೆ ತಿಳುವಳಿಕೆ ಮೂಡಿಸುವತ್ತ ಗ್ರಾಮ ವಿಕಾಸ ಕಾರ್ಯತತ್ಪರವಾಗಿದೆ. ಗ್ರಾಮೀಣ ಪ್ರದೇಶದ ಕೆರೆಗಳನ್ನು ಪುನಶ್ಚೇತನಗೊಳಿಸುವ ದಿಸೆಯಲ್ಲಿ ಹೂಳೆತ್ತುವುದು, ಸಾರವತ್ತಾದ ಹೂಳನ್ನು ಕೃಷಿ ಭೂಮಿಗೆ ಬಳಸುವುದು, ಕೆರೆಕಟ್ಟೆಗಳನ್ನು ಬಲಪಡಿಸುವುದು, ಕೃಷಿಗೆ ಅನುಕೂಲವಾಗುವಂಥ ಮರಗಳನ್ನು ಕೆರೆಕಟ್ಟೆಗಳ ಮೇಲೆ ಬೆಳೆಸುವುದು ಹಾಗೂ ಸಮುದಾಯ ಅರಣ್ಯವನ್ನು ಅಭಿವೃದ್ಧಿ ಮಾಡುವುದು ಮುಂತಾದ ಕಾರ್ಯಗಳ ಅಗತ್ಯವನ್ನು ಗ್ರಾಮ ವಿಕಾಸ ಒತ್ತಿ ಹೇಳುತ್ತ ಬಂದಿದೆ.

ಜನರು ಈ ಎಲ್ಲ ಕಾರ್ಯಗಳಲ್ಲಿ ಭಾಗಿಯಾಗುವಂತೆ ಮಾಡಲು ಹಾಗೂ ಅದಕ್ಕೆ ಪ್ರೋತ್ಸಾಹ ನೀಡಲು ಗ್ರಾಮ ವಿಕಾಸ ಹಲವು ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಗ್ರಾಮೀಣ ಮಹಿಳಾ ಒಕ್ಕೂಟದ ಆಶ್ರಯದಲ್ಲಿ ಗ್ರಾಮ ವಿಕಾಸ ಸಂಸ್ಥೆ ಗ್ರಾಮಗಳಲ್ಲಿ ಸಂವೇದನಾ ಆಂದೋಲವನ್ನು ನಡೆಸಿದೆ. ಪರಿಸರ ಜಾಥಾ ಎಂದು ಕರೆಯಲಾಗುವ ಈ ಕಾರ್ಯಕ್ರಮವನ್ನು ಎರಡು ಹಂತಗಳಲ್ಲಿ ನಡೆಸಲಾಗಿದೆ. ಮೊದಲ ಹಂತದ ಕಾರ್ಯಕ್ರಮ ೧೯೯೭ರಲ್ಲಿ ಹಾಗೂ ಎರಡನೆಯ ಹಂತದ ಕಾರ್ಯಕ್ರಮ ೧೯೯೯ರಲ್ಲಿ ನಡೆದಿದೆ. ಗ್ರಾಮೀಣ ಮಹಿಳಾ ಒಕ್ಕೂಟದ ೪೦ ಮಂದಿ ಕಾರ್ಯಕರ್ತರು ತಮ್ಮ ಮನೆಗೆಲಸಗಳಿಂದ ಒಂದು ತಿಂಗಳ ಕಾಲ ದೂರ ಬಂದು ಕೋಲಾರ ಜಿಲ್ಲೆಯ ಮುಳಬಾಗಿಲು, ಬಂಗಾರಪೇಟೆ ಹಾಗೂ ಕೋಲಾರ ತಾಲ್ಲೂಕುಗಳ ೪೦೦ ಹಳ್ಳಿಗಳಲ್ಲಿ ಪ್ರವಾಸ ಮಾಡಿದ್ದಾರೆ. ಕೆರೆಗಳ ಹೂಳೆತ್ತುವ ಅಗತ್ಯದ ಬಗ್ಗೆ ಕಿರು ಚಲನಚಿತ್ರವೊಂದನ್ನು ಈ ಸಂದರ್ಭದಲ್ಲಿ ನಿರ್ಮಿಸಲಾಗಿದೆ.

ಜನರೇ ನೇರವಾಗಿ ಭಾಗವಹಿಸುವ ಮೂಲಕ ಕೆರೆಗಳ ಹೂಳೆತ್ತುವುದರಿಂದ ಆಗಬಹುದಾದ ಅನುಕೂಲಗಳನ್ನು ಜನರಿಗೆ ತಿಳುವಳಿಕೆ ಮಾಡಿಕೊಡಲು ಗ್ರಾಮವಿಕಾಸ ಮಾದರಿ ಯೋಜನೆಯೊಂದನ್ನು ಸಿದ್ಧಪಡಿಸಿ ಜನರ ಸಹಕಾರದಿಂದ ಮುಳಬಾಗಿಲು ತಾಲ್ಲೂಕಿನ ೧೩ ಕೆರೆಗಳ ಹೂಳನ್ನು ಭಾಗಶಃ ತೆಗೆಯಲಾಯಿತು. ಇದು ಸಂಘಟನೆಗೆ ಕಲಿಕೆಯ ಕಾರ್ಯಕ್ರಮವಾಗಿತ್ತು. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಭಾಗವಹಿಸುದರ ಅರ್ಥವನ್ನು ಜನರಿಗೆ ಪುನರ್ ಮನನ ಮಾಡುವಂತಾಯಿತು. ಈ ಮಾದರಿ ಯೋಜನಾ ವ್ಯಾಪ್ತಿಯು ಬಡವರ್ಗದಲ್ಲಿನ ಅತಿ ಬಡವರಿಗೆ ಉದ್ಯೋಗ ಕಲ್ಪಿಸಿದಂತಾಯಿತು.

ಗ್ರಾಮವಿಕಾಸ ಇದುವರೆಗೆ ಕೆರೆಗಳ ಹೂಳೆತ್ತಿನ ವಿವರ ಇಲ್ಲಿದೆ. ಈ ಕಾರ್ಯವನ್ನು ಸ್ವಂತ ಸಂಪನ್ಮೂಲ, ಹೊರಗಿನವರ ವಂತಿಗೆ ನೆರವಿನಿಂದ, ನಬಾರ್ಡ್ ಮರ ಆರ್ಥಿಕ ನೆರವಿನ ಬ್ಯಾಂಕ್ ಸಾಲದಿಂದ, ಜನರ ನೆರವು ಹಾಗೂ ನೇರ ಭಾಗವಹಿಸುವಿಕೆಯಿಂದ ಈ ಕಾರ್ಯವನ್ನು ಮಾಡಲಾಗಿದೆ.

| ವರ್ಷ | ಗ್ರಾಮ | ನೀರಿನಹರಹಿನ ಪ್ರದೇಶ (ಎಕರೆಗಳಲ್ಲಿ) | ಅಚ್ಚುಕಟ್ಟು ಪ್ರದೇಶ (ಎಕರೆಗಳಲ್ಲಿ) | ಖರ್ಚು (ರೂ.ಗಳಲ್ಲಿ) | ಹಣದ ಮೂಲಗಳು |
|---|---|---|---|---|---|
| ೧ | ೨ | ೩ | ೪ | ೫ | ೬ |
| ೧೯೮೭ | ಕುಣಿಬಂಡೆ | ೫.೦೦ | ೭.೦೦ | ೭೫,೦೦೦ | ಜಿ.ವಿ. (ನೋವಿಬ್) |
| ೧೯೯೩ | ಹೊನ್ನೆಟ್ಟಳ್ಳಿ | ೧೮.೪೦ | ೪೦.೦೦ | ೪೦,೦೦೦ | ಜಿ.ವಿ. (ನೋವಿಬ್) |
| ೧೯೯೪ | ದೊಡ್ಡಗುಟ್ಟಹಳ್ಳಿ | ೨೦.೦೦ | ೬೭.೦೦ | ೧,೦೦,೦೦೦ | ಜಿ.ವಿ. (ನೋವಿಬ್) |
| ೧೯೯೬ | ನಾಗಮಂಗಲ (ದೊಡ್ಡಕೆರೆ) | ೨೫.೦೦ | ೩೧.೦೦ | ೨,೬೫,೦೦೦ | ಜಿ.ವಿ. / ಜನರು. |
| ೧೯೯೭ | ಬೇವನಾಥ | ೯.೩೯ | ೪೦.೦೦ | ೨,೩೦,೦೦೦ | ಬ್ಯಾಂಕ್ ಸಾಲ / ಮಹಿಳಾ ಒಕ್ಕೂಟಕ್ಕೆ |
| ೧೯೯೮ | ಸೀಗೆಹೊಸಹಳ್ಳಿ ಸೀಗೆಹಳ್ಳಿ | ೯,೨೭ | ೩೮.೦೦ | ೪,೬೦,೦೦೦ | ಬ್ಯಾಂಕ್ ಸಾಲ / ಜಿ.ವಿ. / ನೋವಿಬ್ |
| ೧೯೯೮ | ನಾಗಮಂಗಲ, ಚಪರಹಳ್ಳಿ (ಮಲ್ಲಿಕುಂಟೆ) | ೧೪.೦೦ | ೪೪.೦೦ | ೪,೬೦,೪೩೭ | ಬ್ಯಾಂಕ್‌ಸಾಲ |
| ೧೯೯೮ | ನಾಗಮಂಗಲ (ಗಜಲಕುಂಟೆ) | ೧೩.೦೦ | ೩೧.೦೦ | ೧,೮೮,೦೮೫ | ಬ್ಯಾಂಕ್ ಸಾಲ |
| ೧೯೯೮ | ನಾಗಮಂಗಲ (ದೊಡ್ಡಕೆರೆ ೨ನೇ ಹಂತ) | ೬.೧೮ | ೩೧.೦೦ | ೮೯,೬೭೭ | ಜಿ.ವಿ. (ನೋವಿಬ್) |
| ೧೯೯೯ | ಬೊಮ್ಮಸಂದ್ರ | ೬೫.೩೩ | ೮೯.೧೫ | ೧,೬೨,೧೮೩ | ಜಿ.ವಿ. (ನೋವಿಬ್) |
| ೨೦೦೦ | ದೊಡ್ಡತಮ್ಮನಹಳ್ಳಿ | ೨೨.೧೦ | ೩೦.೧೫ | ೭,೪೮,೬೦ | ಜಿ.ವಿ. (ನೋವಿಬ್) |
| ೨೦೦೦ | ನಾಗಸಂದ್ರ | ೧೨.೦೦ | ೪೦.೦೦ | ೩,೭೬,೪೩೧ | ಜಿ.ವಿ. (ನೋವಿಬ್) |
| ೨೦೦೧ | ಮಿಣಿಜೇನಹಳ್ಳಿ | ೧೬.೩೭ | ೧೮.೦೦ | ೩,೨೮,೧೪೪* | ಜಿ.ವಿ. / ಕೋಲಾರ ಜಿ.ಪಂ. |
| ಒಟ್ಟು | | | | ೪೩,೫೨,೫೧೭ | |

***೨೦೦೧ ಅಗಸ್ಟ್ ೨೧ರ ವೇಳೆಗೆ ಆದ ವೆಚ್ಚ. ಈ ವಾರ್ಷಾಂತ್ಯದವರೆಗೆ ವೆಚ್ಚ ಮಾಡಬಹುದಾದ ೧,೪೦,೦೦೦ ರೂ.ಹಣ ಲಭ್ಯವಿದೆ.**

**ಕೆರೆಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳು**

ಕೆರೆಗಳ ಮರುಸಂವರ್ಧನೆಗೆ ಗ್ರಾಮವಿಕಾಸ (ಜ.ವಿ.)ಹಮ್ಮಿಕೊಂಡಿರುವ ಕಾರ್ಯವನ್ನು ಎರಡು ವಿಭಾಗಗಳಾಗಿ ಗುರುತಿಸಲಾಗಿದೆ.

೧. ಮಾದರಿಗಳಾಗಿ ಕೆರೆಗಳ ಮರುಸಂವರ್ಧನೆ

೨. ಕೆರೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ನೀತಿಗಳ ಮೇಲೆ ಪರಿಣಾಮ ಬೀರುವಂಥ ಕಾರ್ಯಕ್ರಮ ರೂಪಣೆ

- ಕೆರೆಗಳ ಮರುಸಂವರ್ಧನೆಯಲ್ಲಿ ಜನರು ಭಾಗವಹಿಸಬೇಕು.
- ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರಿಗೆ ಅನುಕೂಲವಾಗುವಂತಹ ಕೆರೆಗಳ ಪುನಶ್ಚೇತನ.
- ಮಾನವ ಶ್ರಮದ ಗರಿಷ್ಠ ಬಳಕೆಯ ಮೂಲಕ ಕೆರೆಗಳ ಹೂಳೆತ್ತುವುದು.
- ಹೂಳನ್ನು ಸಾಗಿಸಲು ಪರಿಸರ ಪ್ರೇಮಿ ಮಾರ್ಗಗಳಾದ ಎತ್ತಿನ ಗಾಡಿ ಮುಂತಾದವುಗಳನ್ನು ಬಳಸಬಹುದು. ಯಂತ್ರಗಳನ್ನು ಈ ಕಾರ್ಯಕ್ಕೆ ಬಳಸಬಾರದು.
- ಈ ಕಾರ್ಯಕ್ರಮದ ಯೋಜನೆ ತಯಾರಿಕೆ, ವೆಚ್ಚ, ಉತ್ತೇಜನ ಮತ್ತು ಜಾರಿಯನ್ನು ಮಹಿಳಾ ಸ್ವ ಸಹಾಯ ಗುಂಪುಗಳಿಂದಲೇ ಮಾಡಿಸಬೇಕು.
- ಬರಗಾಲದಲ್ಲಿ ಬಡ ಹಾಗೂ ಮಧ್ಯಮ ಪ್ರಮಾಣದ ಕುಟುಂಬಗಳಿಗೆ ಅನುಕೂಲವಾಗುವಂಥ ‘ಕೂಲಿಗಾಗಿ ಕಾಳು’ ಕಾರ್ಯಕ್ರಮದ ಆಧಾರದ ಮೇಲೆಯೇ ಕೆರೆಗಳ ಸಂರಕ್ಷಣೆ ಕಾರ್ಯ ನಡೆಯಬೇಕು.

**ಕೆರೆಗಳ ಮರುಸಂವರ್ಧನೆಯ ಕಾರ್ಯಕ್ರಮಗಳು**

- ಕೆರೆಗಳ ಸಂರಕ್ಷಣೆ ಅಗತ್ಯವಿರುವ ಕಡೆ ಗ್ರಾಮೀಣ ಮಹಿಳೆಯರಿಗೆ ಸಂಬಂಧಿಸಿದಂತೆ ಸಮಾವೇಶ ಏರ್ಪಡಿಸುವುದು.
- ಈ ವಿಚಾರದ ಬಗ್ಗೆ ಗಮನ ಸೆಳೆಯಲು ಸಮಾವೇಶಕ್ಕೆ ರಾಜ್ಯಪಾಲರು, ಸ್ಪೀಕರ್, ಕೇಂದ್ರ ಗ್ರಾಮೀಣ ಅಭಿವೃದ್ಧಿ ಸಚಿವರು, ರಾಜ್ಯದ ಸಚಿವರು, ಅಧಿಕಾರಿಗಳು ಹಾಗೂ ನೀತಿ ನಿರೂಪಕರು ಹಾಗೂ ಪ್ರಮುಖರನ್ನು ಆಹ್ವಾನಿಸುವುದು.
- ಕೆರೆಗಳ ಸಂವರ್ಧನೆ ಯೋಜನೆಗಳಿಗೆ ಜಿಲ್ಲಾಪಂಚಾಯಿತಿಯಿಂದ ಹಣ ಒದಗಿಸುವಂತೆ ಮಾಡಲು ಮಹಿಳಾ ತಂಡಗಳನ್ನು ಉತ್ತೇಜಿಸುವುದು.
- ಮಾದ್ಯಮಗಳ (ಮುದ್ರಿತ ಹಾಗೂ ದೃಶ್ಯ) ಗಮನ ಸೆಳೆಯುವುದು.

**ಜನರ ಪಾತ್ರ**

ಅಭಿವೃದ್ಧಿ ಪ್ರಕ್ರಿಯೆ ಸಾಧಿಸುವಲ್ಲಿ ಗುರಿಸಾಧಿಸಲು ಜನರು ಮುಖ್ಯ ಪಾಲುದಾರರಾಗಿರುವುದು ಅಗತ್ಯ ಎಂದು ಗ್ರಾಮವಿಕಾಸ ಸಂಸ್ಥೆ ಭಾವಿಸಿದೆ. ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು ಈ ಪ್ರಕ್ರಿಯೆಗೆ ಬೆಂಬಲವಾಗಿರಬೇಕು ಎಂದು ಸಂಸ್ಥೆ ಭಾವಿಸಿದೆ. ಅಲ್ಲದೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಅದರಲ್ಲಿಯೂ ಮುಖ್ಯವಾಗಿ ಯೋಜನೆಗಳ ಅಂದಾಜು ವೆಚ್ಚ ತಯಾರಿಕೆ, ರೂಪುರೇಷೆಗಳ ತಯಾರಿ, ಅವುಗಳ ಕಲ್ಪನೆ ಹಾಗೂ ವಿಶ್ಲೇಷಣೆಯಲ್ಲಿ ಜನರು ಗರಿಷ್ಠ ಪ್ರಮಾಣದಲ್ಲಿ ಭಾಗವಹಿಸುವಂತಾಗಬೇಕು. ಹೀಗೆ ಜನರ ಒಳಗೊಳ್ಳುವಿಕೆಯಿಂದ ಮಾತ್ರ ಯೋಜನೆಗಳು ಬಾಳಿಕೆ ಬರುತ್ತದೆ ಅಷ್ಟೇ ಅಲ್ಲ ಯೋಜನಾ ಜಾರಿ ನಂತರದ ನಿರ್ವಹಣೆ ಸಾಧ್ಯವಾಗುತ್ತದೆ.

ಜನರು ಭಾಗವಹಿಸುವುದೆಂದರೆ ಹಣಕಾಸು ನೆರವು ನೀಡುವುದು ಎಂಬ ತಪ್ಪು ಕಲ್ಪನೆ ಕೆಲವೆಡೆ ಇದೆ. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸರ್ಕಾರ ಏಕೈಕ ಪಾತ್ರದಾರ ಎಂಬ ಅರ್ಥ ಇದರಿಂದ ಬರುತ್ತದೆ. ಇಂಥ ತಪ್ಪು ಕಲ್ಪನೆಯಿಂದಾಗಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜನರು ಭಾವನಾತ್ಮಕವಾಗಿ ಪಾಲ್ಗೊಳ್ಳುವುದರಿಂದ ದೂರ ಇಟ್ಟಂತಾಗುತ್ತದೆ. ಅಭಿವೃದ್ಧಿ ಪ್ರಕ್ರಿಯೆಗೆ ಜನರು ಹಣಕಾಸು ನೆರವು ನೀಡಿದರೆ ಅವರನ್ನು ಆ ಪ್ರಕ್ರಿಯೆಯಲ್ಲಿ ಹೆಚ್ಚು ತೊಡಗಿಸಿಕೊಂಡಂತಾಗುತ್ತದೆ. ಇದಕ್ಕೂ ಮುಖ್ಯವಾದುದು ಈ ಪ್ರಕ್ರಿಯೆಯ ಮುಖ್ಯ ಪಾಲುದಾರರಾದ ಸಮುದಾಯ ಭೌದ್ಧಿಕ ಮತ್ತು ಭಾವನಾತ್ಮಕವಾಗಿ ತೊಡಗಿಸಿಕೊಳ್ಳುವುದು ಹೆಚ್ಚು ಮೌಲಿಕವಾದುದು. ಇಂಥ ತತ್ವಗಳಲ್ಲಿ ಗ್ರಾಮವಿಕಾಸ ನಂಬಿಕೆಯಿಟ್ಟಿದೆ ಮತ್ತು ಕೆರೆಗಳ ಮರು ಸಂವರ್ಧನೆ ಕಾರ್ಯಕ್ರಮದಲ್ಲಿ ಇವುಗಳನ್ನು ಜಾರಿಗೆ ತರಲು ಯತ್ನಿಸುತ್ತಿದೆ.

**ಸ್ವ–ಸಹಾರ ಗುಂಪುಗಳ ನಾಯಕತ್ವ**

ಕೆರೆಗಳ ಇಂದಿನ ಸ್ಥಿತಿಗೆ ಗ್ರಾಮಗಳ ಮಟ್ಟದಲ್ಲಿ ಸಮುದಾಯದ ನಾಯಕತ್ವ ಇಲ್ಲದಿರುವುದೇ ಕಾರಣ. ಇದಕ್ಕೆ ಕಾರಣಗಳು ಬಹಳಷ್ಟು ಇವೆ. ಆದರೆ ಗ್ರಾಮಮಟ್ಟದ ನಾಯಕತ್ವ ನಾಶಗೊಳ್ಳಲು ಸಮುದಾಯವನ್ನು ಜಾತಿ ಆಧಾರಿತ ರಾಜಕೀಯಕ್ಕೆ ಬಳಸಿಕೊಂಡದ್ದೇ ಬಹು ಮುಖ್ಯ ಕಾರಣ. ವಿಷಾದದ ವಿಷಯವೆಂದರೆ ಪಂಚಾಯತ್ ಚುನಾವಣೆಗಳು ಗ್ರಾಮಗಳ ಏಕತೆ ಹಾಗೂ ಅವಿನಾಭಾವ ಸಂಬಂಧಕ್ಕೆ ಹೆಚ್ಚು ಅಪಾಯವನ್ನು ಮಾಡಿವೆ ಎಂಬುದು. ಗ್ರಾಮಗಳ ಪ್ರಬಲ ಜಾತಿಗಳು ಭಿನ್ನ ರಾಜಕೀಯ ಪಕ್ಷಗಳನ್ನು ಬೆಂಬಲಿಸುವ ಮೂಲಕ ಬಹಳ ಕಡೆ ಜಾತೀಯ ವಿಭಜನೆ ರಾಜಕೀಯ ಗುಂಪುಗಾರಿಕೆಗೆ ಅವಕಾಶ ಮಾಡಿಕೊಟ್ಟಿದೆ. ಇದರಿಂದಾಗಿ ಒಂದು ರಾಜಕೀಯ ಗುಂಪು ಆರಂಭಿಸುವ ಅಭಿವೃದ್ಧಿ ಕಾರ್ಯಗಳನ್ನು ಇನ್ನೊಂದು ರಾಜಕೀಯ ಗುಂಪು ವಿರೋಧಿಸುತ್ತದೆ. ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಒಂದು ರಾಜಕೀಯ ಗುಂಪಿಗೆ ಆಗಬಹುದಾದ ರಾಜಕೀಯ ಲಾಭವನ್ನು ತಡೆಯುವುದೇ ಇಂಥ ಪ್ರತಿರೋಧದ ಉದ್ದೇಶ.

ಇಂದಿನ ಗ್ರಾಮಗಳ ಪರಿಸ್ಥಿತಿಯನ್ನು ನೋಡಿದರೆ ಅವು ರಾಜಕೀಯ ಪಕ್ಷಗಳ ಆಧಾರದ ಮೇಲೆ ಒಡೆದು ಹೋಗಿವೆ. ಬಹಳಷ್ಟು ಹಳ್ಳಿಗಳಲ್ಲಿ ನಾಯಕತ್ವದ ಅಭಾವವನ್ನು ಕಾಣಬಹುದು. ಈಗ ಅಂಥ ಸಮುದಾಯವೇ ಮಾಡುತ್ತಿತ್ತು. ಕೆರೆಗಳ ನಿರ್ವಹಣೆಯ ವಿಚಾರದಲ್ಲಿ ಈಗ ಅಂಥ ಸಮುದಾಯದ ಪಾತ್ರದ ಅಭಾವ ಕಾಣುತ್ತಿದೆ. ಸರ್ಕಾರಗಳ ನೀತಿಯಿಂದಾಗಿ ಕೆರೆಗಳ ನಿರ್ವಹಣೆಯಿಂದ ಜನರು ದೂರ ಉಳಿದಿದ್ದಾರೆ.

ಕೆರೆಗಳು ಮತ್ತು ಇತರೆ ಗ್ರಾಮೀಣ ಸಮುದಾಯದ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಮತ್ತೆ ಗ್ರಾಮ ಸಮುದಾಯವನ್ನು ತೊಡಗಿಸುವಂತೆ ಮಾಡಲಾಗುವುದು. ಈ ಕಾರ್ಯಕ್ಕಾಗಿ ಸ್ವ-ಸಹಾಯ ಗುಂಪುಗಳು ಗ್ರಾಮೀಣ ನಾಯಕತ್ವವಹಿಸಿಕೊಳ್ಳುವಂತೆ ಉತ್ತೇಜಿಸಲಾಗುವುದು. ಇದು ಜಿ.ವಿ.ಯ ಕಾರ್ಯತಂತ್ರವಾಗಿದೆ. ಗ್ರಾಮ ವಿಕಾಸದ ವ್ಯಾಪ್ತಿಯ ಸ್ವ-ಸಹಾಯ ಗುಂಪುಗಳು ಗ್ರಾಮೀಣ ಮಟ್ಟದಲ್ಲಿ ಸಾಕಷ್ಟು ಪ್ರಗತಿ ಸಾಧಿಸಿವೆ. ಬಡ ಮಹಿಳೆಯರಲ್ಲಿ ಉಳಿತಾಯ ಭಾವನೆಯನ್ನು ಮೂಡಿಸಿವೆ. ಸಾಲ ಸೌಲಭ್ಯ ಒದಗಿಸುವ ದಿಸೆಯಲ್ಲಿ ಮೊದಲ ಹೆಜ್ಜೆಯನ್ನು ಸ್ವ-ಸಹಾಯ ಗುಂಪುಗಳು ಇಟ್ಟವು. ಈಗ ಅವು ಅವಿನಾಭಾವ ಸಂಬಂಧವುಳ್ಳ ಸಮಗ್ರ ಗುಂಪುಗಳಾಗಿ ಬೆಳೆದು ಕೆಲವು ಕಡೆ ಒಂದಕ್ಕಿಂತ ಹೆಚ್ಚು ಸಮಸ್ಯೆಗಳನ್ನು ಕೈಗೆತ್ತಿಕೊಂಡು ಪರಿಹಾರವನ್ನು ಕಂಡುಹಿಡಿಯಲು ಯತ್ನಿಸುತ್ತಿವೆ. ಕುಡಿಯುವ ನೀರು, ನೈರ್ಮಲೀಕರಣ, ಮೂಲಭೂತ ಸೌಕರ್ಯಗಳಾದ ಬಸ್ಸು, ರಸ್ತೆ, ಸಮುದಾಯ ಭವನದಂಥ ಸೌಲಭ್ಯಗಳನ್ನು ಕೊಡಿಸುವ ದಿಕ್ಕಿನಲ್ಲಿ ಕೆಲಸ ಮಾಡಲಾಗುತ್ತಿದೆ. ಪುರುಷ ನಾಯಕತ್ವ ಗ್ರಾಮೀಣ ಸಮಸ್ಯೆಗಳನ್ನು ಪರಿಹರಿಸುವಲ್ಲಿ ವಿಫಲವಾದ ಕಡೆಯೂ ಸಮುದಾಯದ ಸಾಮಾನ್ಯ ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನಗಳನ್ನು ಪುನಶ್ಚೇತನಗೊಳಿಸುವಂಥ ಸವಾಲನ್ನುಈ ಸ್ವ-ಸಹಾಯ ಗುಂಪುಗಳು ಕೈಗೆತ್ತುಕೊಂಡಿವೆ.

**ತಂತ್ರಗಾರಿಕೆ**

ಕೆರೆಗಳ ಹೂಳೆತ್ತುವ ಕಾರ್ಯದಲ್ಲಿ ಜನರು ಭಾಗವಹಿಸುವುದನ್ನು ಪ್ರೋತ್ಸಾಹಿಸುವ ದಿಸೆಯಲ್ಲಿ ಗ್ರಾಮವಿಕಾಸ ಅನುಸರಿಸುತ್ತಿರುವ ಕಾರ್ಯತಂತ್ರ, ಮಾರ್ಗದರ್ಶಿಗಳು ಹಾಗೂ ಮಾನದಂಡಗಳು ಹೀಗಿವೆ.

- ಕೆರೆಯನ್ನು ನೀರಿನ ಬಹು ಮುಖ್ಯ ಮೂಲವೆಂದು ಗ್ರಾಮೀಣ ಜನರಿಗೆ ತಿಳಿಯುವಂತೆ ಮಾಡುವುದು.
- ಕೆರೆಯಲ್ಲಿ ತಮ್ಮ ಪಾಲು ಇದೆ ಎಂಬುದನ್ನು ಇಡೀ ಗ್ರಾಮ ಸಮುದಾಯಕ್ಕೆ ಮನವರಿಕೆ ಮಾಡುವುದು.
- ಕೆರೆ ಹೂಳೆತ್ತುವ ವಿಚಾರದಲ್ಲಿ ಯೋಜನೆ ತಯಾರಿಕೆ, ಅಂದಾಜು ವೆಚ್ಚದ ಲೆಕ್ಕಾಚಾರದ ಹಂತದಿಂದ ಯೋಜನೆ ಕಾರ್ಯರೂಪಕ್ಕೆ ಬರುವವರೆಗೆ ಮಹಿಳಾ ಸ್ವ-ಸಹಾಯ ಗುಂಪುಗಳ ಮೂಲಕ ಗ್ರಾಮ ಸಮುದಾಯ ಭಾಗವಹಿಸುವಂತೆ ಮಾಡುವುದು.
- ಕೆರೆಗಳ ಹೂಳೆತ್ತುವ ಕಾರ್ಯದಲ್ಲಿ ಯಂತ್ರಗಳ ಬಳಕೆಗಿಂತ ಮಾನವ ಶಕ್ತಿ ಬಳಕೆಯ ಕಡೆಗೆ ಒತ್ತು ನೀಡುವಂತೆ ಗ್ರಾಮೀಣ ಸಮುದಾಯವನ್ನು ಉತ್ತೇಜಿಸುವುದನ್ನು, ಗ್ರಾಮೀಣ ಬಡ ಕಾರ್ಮಿಕರಿಗೆ ಉದ್ಯೋಗ ದೊರಕುವಂತೆ ಮಾಡುವುದು ಮತ್ತು ಕೂಲಿಯ ಹಣ ಗ್ರಾಮದಲ್ಲಿಯೇ ಅವರಿಗೆ ಸಿಗುವಂತೆ ಮಾಡುವುದು.
- ಕೆರೆ ತಮ್ಮ ಗ್ರಾಮದ ಆಸ್ತಿ ಎಂಬ ಭಾವನೆ ಆ ಗ್ರಾಮದ ಸಮುದಾಯದಲ್ಲಿ ಬರುವಂತೆ ಮಾಡುವುದು. ಕೆರೆಯ ನಿರ್ವಹಣೆಯಲ್ಲಿ ತಾವು ಪಾಲುದಾರರು ಎಂಬ ಭಾವನೆ ಅವರಲ್ಲಿ ಮೂಡಿಸುವುದು.
- ಕೆರೆಗಳ ಹೂಳೆತ್ತುವ ಕಾರ್ಯದಲ್ಲಿ ಸ್ಥಳೀಯರನ್ನೇ ತೊಡಗಿಸುವುದು. ಇದರಿಂದ ಕೆರೆಯ ಹೂಳೆತ್ತುವ ಕಾರ್ಯದಲ್ಲಿ ತಮ್ಮ ಪಾತ್ರ ಇದೆ ಎಂಬ ಭಾವನೆ ಅವರಲ್ಲಿ ಮೂಡುವುದು. ಇದರಿಂದ ತಾವೂ ಕೂಡ ಕೆರೆಯ ಮಾಲೀಕರು ಎಂಬ ಭಾವನೆ ಅವರಲ್ಲಿ ಮೂಡುತ್ತದೆ.
- ಕೆರೆಯ ಹೂಳು ರೈತರ ಹೊಲ ಗದ್ದೆಗಳಿಗೆ ಮಾತ್ರ ಬಳಕೆಯಾಗುವಂತೆ ನೋಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಹೂಳು, ಇಟ್ಟಿಗೆ, ಹೆಂಚು ಕಾರ್ಖಾನೆಗಳಿಗೆ ಸಾಗಣೆ ಯಾಗದಂತೆ ನೋಡಿಕೊಳ್ಳಬೇಕು.
- ಕೆರೆ ಹೂಳೆತ್ತುವುದರಿಂದ ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರು ಹೆಚ್ಚು ಅನುಕೂಲ ಪಡೆಯುವಂತೆ ಮಾಡಬೇಕು.
- ಕೆರೆ ಹೂಳೆತ್ತುವ ಕಾರ್ಯದಲ್ಲಿ ತೊಡಗಿರುವ ಕುಟುಂಬಗಳಿಗೆ ಹೆಚ್ಚು ಅನುಕೂಲವಾಗುವಂತೆ ನೋಡಿಕೊಳ್ಳಬೇಕು.
- ಸಮಾನವಾದ ನೀರಿನ ಹಂಚಿಕೆಯಾಗಬೇಕು.
- ಕೆರೆ ನೀರು ವಿತರಣೆಗೆ ಪ್ರಸಕ್ತ ಅಸ್ತಿತ್ವದಲ್ಲಿರುವ ನೀರುಗಂಟಿ ವ್ಯವಸ್ಥೆಯನ್ನು ಬಲಪಡಿಸಬೇಕು.

**ಈ ಕಾರ್ಯದ ಸಕಾರಾತ್ಮಕ ಅಂಶಗಳು**

**ಪ್ರತ್ಯಕ್ಷ ಲಾಭಗಳು**

- ಹೂಳೆತ್ತಿದ ಕೆರೆಯ ಸುತ್ತ ಅಂತರಜಲ ಮಟ್ಟದ ಏರಿಕೆ (ಅನುಚ್ಛೇದ ನೋಡಿ-ಗಜಲ ಕುಂಟೆ ಮತ್ತು ದೊಡ್ಡತಮ್ಮನಹಳ್ಳಿ ಕೆರೆಗಳ ಅಚ್ಚುಕಟ್ಟು ಪ್ರದೇಶದಲ್ಲಿನ ಬಾವಿಗಳಲ್ಲಿ ನೀರಿನ ಅಂತರ್ಜಲ ಮಟ್ಟ ಏರಿದೆ.)
- ಕೆರೆಗಳ ಹೂಳುಮಣ್ಣು ಬಳಸಿದ ಭೂಮಿಗಳಲ್ಲಿ ಉತ್ಪಾದನೆ ಹೆಚ್ಚಳ. ಮುಖ್ಯವಾಗಿ ಕಡಲೆಕಾಯಿ ಉತ್ಪಾದನೆ ಶೇಕಡ ೬೦ರಷ್ಟು ಏರಿಕೆ (ಅನುಚ್ಛೇದ ನೋಡಿ-ಬೆಳೆಗಳ ಮೇಲೆ ಕೆರೆ ಹೂಳುಮಣ್ಣಿನ ಪರಿಣಾಮ).
- ಕೆರೆಗಳ ಹೂಳುಮಣ್ಣು ಬಳಸಿದ್ದರಿಂದ ರೈತರಿಗೆ ರಾಸಾಯನಿಕ ಗೊಬ್ಬರಕ್ಕೆ ಬಳಸುತ್ತಿದ್ದ ಹಣದ ಉಳಿತಾಯವಾಗಿದೆ. ಕನಿಷ್ಠ ನಾಲ್ಕು ಬೆಳೆಗಳಿಗೆ ಈ ಹಣದ ಉಳಿತಾಯ.

**ಪರೋಕ್ಷ ಲಾಭಗಳು**

- ಕೆರೆಗಳ ಹೂಳೆತ್ತುವ ಕಾರ್ಯಕ್ಕಾಗಿ ಕೆರೆ ಅಭಿವೃದ್ಧಿ ಸಮಿತಿ ರಚಿಸಲಾಯಿತು. ಇದರಿಂದ ಜನರು ಈ ಕಾರ್ಯದಲ್ಲಿ ಸಂಪೂರ್ಣವಾಗಿ ಭಾಗವಹಿಸಿದಂತಾಯಿತು. ಈ ಸಮಿತಿಯ ಜೊತೆಗೆ ಮಹಿಳಾ ಸ್ವ-ಸಹಾಯ ಗುಂಪುಗಳು ಈ ಕಾರ್ಯದ ಯೋಜನಾ ತಯಾರಿಕೆ. ಖರ್ಚು ವೆಚ್ಚ ಅಂದಾಜು ಹಾಗೂ ಈ ಕಾರ್ಯದ ಜಾರಿಯಲ್ಲಿ ಸಕ್ರಿಯವಾಗಿ ತೊಡಗುವುದರಿಂದ ಜನರನ್ನು ತೊಡಗಿಸಿದಂತಾಯಿತು.

- ಸ್ವ-ಸಹಾಯ ಗುಂಪು ಹಾಗೂ ಕೆರೆ ಅಭಿವೃದ್ಧಿ ಸಮಿತಿಗಳ ಮೂಲಕ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುವುದರಿಂದ ಅವರ ಸಶಕ್ತೀಕರಣದ ಮಟ್ಟ ಏರಿದಂತಾಯಿತು.
- ಕೆರೆ ಹೂಳೆತ್ತುವುದರಿಂದ ಜನರಲ್ಲಿ ಬದ್ಧತೆ ಹಾಗೂ ಆಸಕ್ತಿ ಹೆಚ್ಚುತ್ತದೆ. ಹೆಚ್ಚು ಹಳ್ಳಿಗಳಲ್ಲಿ ಇಂಥದೇ ಆಸಕ್ತಿ ಬೇಡಿಕೆ ಮೂಡುತ್ತದೆ.
- ಜನರು ಭಾಗವಹಿಸಿದ್ದರಿಂದ ಯೋಜಿಸಿದಂತೆ ಕಾರ್ಯಕ್ರಮ ಜಾರಿಗೆ ಬಂತು. ಯೋಜನೆಯ ಗುರಿ ಗರಿಷ್ಠ ಪ್ರಮಾಣದಲ್ಲಿ ತಲುಪಲಾಯಿತು. ಜನರಿಗೆ ಉದ್ಯೋಗ ದೊರಕುವಂತಾಯಿತು.
- ಹೂಳನ್ನು ಗಾಡಿಗಳಲ್ಲಿ ಮತ್ತು ಟ್ರಾಕ್ಟರುಗಳಲ್ಲಿ ಸಾಗಿಸುವುದನ್ನು ಹೊರತುಪಡಿಸಿದರೆ ಎಲ್ಲ ಹಂತಗಳಲ್ಲಿಯೂ ಮಾನವನ ದೈಹಿಕ ಶ್ರಮದ ಬಳಕೆಯಾಗುವಂತಾಯಿತು.
- ಪರಿಸರ ರಕ್ಷಣೆ ಸಾಮಾಜಿಕ, ಆರ್ಥಿಕವಾಗಿ ಬಹುಮುಖ್ಯ ಚಟುವಟಿಕೆಯಾಗಿರುವಂಥ ಕಾರ್ಯಕ್ಕೆ ಸ್ವ-ಸಹಾಯ ಗುಂಪುಗಳ ಮೂಲಕ ಬ್ಯಾಂಕುಗಳು ಹಣಕಾಸು ನೆರವು ನೀಡಲು ಸಿದ್ಧವಾದವು.
- ಸ್ಥಳೀಯ ಶಾಸಕರು, ಮತ್ತು ನಬಾರ್ಡ್ ಅಧಿಕಾರಿಗಳನ್ನು ಈ ಕಾರ್ಯವನ್ನು ಪರಿಶೀಲಿಸಲು ಆಹ್ವಾನಿಸಲಾಯಿತು. ಇದರಿಂದ ಕೆರೆ ಹೂಳೆತ್ತುವ ಕಾರ್ಯವನ್ನು ಕೈಗೆತ್ತಿಕೊಳ್ಳುವಂತೆ ಅವರ ಮೇಲೆ ಜನರು ಒತ್ತಡ ತರಲು ಅವಕಾಶವಾಯಿತು.
- ಎಲ್ಲಾ ಹಂತಗಳಲ್ಲಿ ಜನರ ಸಹಕಾರವನ್ನು ಕಾಣಬಹುದು.

**ಕೆರೆ ಹೂಳೆತ್ತುವ ಕಾರ್ಯದಲ್ಲಿ ಜನರು ಭಾಗವಹಿಸುವಿಕೆ**

೧. ಜನರಿಂದ ಬೇಡಿಕೆ ಬರುವಂತೆ ಮಾಡಬೇಕು.

೨. ಸ್ವಸಹಾಯ ಗುಂಪುಗಳನ್ನು ಈ ಯೋಜನೆಯ ಮುಖ್ಯ ಅಂಗವನ್ನಾಗಿ ಗುರುತಿಸಬೇಕು. ಆದರೆ ಇಡೀ ಸಮುದಾಯ ಈ ಯೋಜನೆಯ ಜಾರಿಯಲ್ಲಿ ತೊಡಗುವಂತೆ ಮಾಡಬೇಕು.

ಅಗತ್ಯವನ್ನು ಗುರುತಿಸಿ ಹೂಳೆತ್ತುವ ಕೆರೆಗಳನ್ನು ಆಯ್ಕೆಮಾಡಿಕೊಳ್ಳಬೇಕು (ಹೂಳೆತ್ತುವುದರಿಂದ ದಲಿತ ಸಮುದಾಯಕ್ಕೆ ಆಗುವ ಅನುಕೂಲದ ಪ್ರಮಾಣ, ಸಣ್ಣ ಮತ್ತು ಮದ್ಯಮ ಪ್ರಮಾಣದ ರೈತರಿಗೆ ಆಗುವ ಅನುಕೂಲ, ಸ್ವಸಹಾಯ ಗುಂಪುಗಳ ಸದಸ್ಯರ ಪ್ರಮಾಣ ಮುಂತಾದವು) ಹೂಳು ಜಾಸ್ತಿಯಾಗಿ ಕೆರೆ ನೀರು ಕೋಡಿ ಹೋಗಿ ಸಾಕಷ್ಟು ನೀರು ಸಂಗ್ರಹವಾಗದಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

೪. ಯೋಜನೆ ಜಾರಿಯಿಂದ ಅಚ್ಚುಕಟ್ಟು ಪ್ರದೇಶದಲ್ಲಿ ಭೂಮಿ ಇರುವವರಿಗೂ, ಭೂಮಿ ಇಲ್ಲದವರಿಗೂ ಲಾಭವಾಗುವಂತಾಗಬೇಕು (ಹೂಳೆತ್ತುವುದರಿಂದ ಸಂಗ್ರಹವಾಗುವ ನೀರು ಬಡ ರೈತರಿಗೂ ಸಿಗುವಂತಾಗಬೇಕು, ಕೆರೆಯಲ್ಲಿ ಮೀನು ಬೆಳೆಸುವ ಮೂಲಕ ಭೂರಹಿತರು ಪಾಲುದಾರರಾಗುವಂತೆ ಮಾಡಬೇಕು.)

೫. ಸಾಮಾಜಿಕ ಮತ್ತು ತಾಂತ್ರಿಕ ಸಿದ್ಧತೆಗಾಗಿ ಹೂಳೆತ್ತಬೇಕಾದ ಕೆರೆಗಳನ್ನು, ಗ್ರಾಮವನ್ನು ಒಂದು ವರ್ಷ ಮೊದಲೇ ಗುರುತಿಸಬೇಕು.

೬. ಜಲಾನಯನ ಮತ್ತು ಅಚ್ಚುಕಟ್ಟು ಪ್ರದೇಶದ ರೈತರ ಜಂಟಿ ಸಭೆಗಳನ್ನು ನಡೆಸಬೇಕು.

೭. ನೆರೆಯ ಸಮುದಾಯ ಜಾಲದ ನಾಯಕರನ್ನು (ಎನ್ ಸಿ ಎನ್) ಗುರುತಿಸಿ ಜನರಿಂದ ನೆರೆವು ಹಾಗೂ ಕಾರ್ಯಕ್ರಮದ ಜಾರಿಯನ್ನು ಅವರಿಗೆ ವಹಿಸಿಕೊಡಬೇಕು. ಪ್ರತಿ ಎನ್ ಸಿ ಎನ್ ನಾಯಕರಿಂದ ಒಪ್ಪಂದ ಪಡೆಯಬೇಕು. ಹಣಕಾಸು ನೆರವಿನ ವಸೂಲಿ ಹಾಗೂ ಕಾರ್ಯವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಜವಾಬ್ದಾರಿಯನ್ನು ಅವನಿಗೆ/ಅವಳಿಗೆ ವಹಿಸಬೇಕು. ಒಪ್ಪಂದದಲ್ಲಿ ಬಾಕಿ ಕಂತುಗಳನ್ನು ನಮೂದಿಸಬೇಕು.

೮. ಹಣವನ್ನು ಬಳಸಿಕೊಳ್ಳುವಲ್ಲಿನ ಪ್ರತಿ ರೈತನ ಸಾಮರ್ಥ್ಯ ಹಾಗೂ ವಾಪಸಾತಿಯಲ್ಲಿನ ಅವನ ಶಕ್ತಿಯನ್ನು ಗುರುತಿಸಬೇಕು.

೯. ಕೊಳವೆ ಬಾವಿಗಳುಳ್ಳ ಹಾಗೂ ವಾಣಿಜ್ಯ ಬೆಳೆ ಬೆಳೆಯುವ ರೈತರನ್ನು ಗುರುತಿಸಿ ಅವರಿಗೆ ಹೆಚ್ಚು ಹಣ ವಿಧಿಸಬೇಕು.

೧೦. ಸಾಲ ವಸೂಲಾತಿ ಮೂಲಗಳನ್ನು ಗುರುತಿಸಬೇಕು: ಡೇರಿ ಮತ್ತು ರೇಷ್ಮೆ ಉದ್ಯಮ, ರೇಷ್ಮೆ ಉಪಕರಣಗಳನ್ನು ಸಮುದಾಯದಿಂದ ಬಾಡಿಗೆಗೆ ಪಡೆಯುವುದು, ಕುರಿ ಸಾಕಣೆ ಇತ್ಯಾದಿ.

೧೧. ಕೆರೆ ಹೂಳೆತ್ತಲು ತಗಲುವ ವೆಚ್ಚವನ್ನು ಹಂಚಿಕೊಳ್ಳ ಬಯಸುವ ಜನರ ಸಾಮರ್ಥ್ಯವನ್ನು ಗುರುತಿಸಬೇಕು. ಶೇ.೨೦; ಅಥವಾ ಶೇ ೨೫. ಒಪ್ಪಂದಕ್ಕೆ ಸಹಿ ಮಾಡಿದ ಎಲ್ಲರಿಗೂ ಹಾಗು ಸದಸ್ಯರಿಗೆ ಒಪ್ಪಂದದ ಜೆರಾಕ್ಸ್ ಪ್ರತಿ ಕೊಡಬೇಕು.

ಜನರು ಭಾಗವಹಿಸುವ ಮೂಲಕ ಕೆರೆ ಹೂಳೆತ್ತುವ ಗ್ರಾಮವಿಕಾಸ ಯೋಜನಾ ಪ್ರದೇಶದಲ್ಲಿ ತೆಗೆದುಕೊಳ್ಳುವ ಹಂತ ಹಂತದ ಪ್ರಕ್ರಿಯೆ- ಮೊದಲ ಹೆಜ್ಜೆ, ಯೋಜನೆ ರೂಪುರೇಷೆ ತಯಾರಿಕೆ ಮತ್ತು ಜಾರಿ.

(೨)

**೧. ಜನರ ಬೇಡಿಕೆ ವಿವರದ ಸಂಗ್ರಹ**

ಕೆರೆ ಮರುಸಂವರ್ಧನೆ ಕಾರ್ಯಕ್ರಮ ಪರಿಸರ ರಕ್ಷಣೆ ಮತ್ತು ಆಹಾರ ಭದ್ರತೆ ಕಾರ್ಯಕ್ರಮ. ಆದ್ದರಿಂದ ಕೆರೆಗೆ ಸಂಬಂಧಿಸಿದಂತೆ ಇಡೀ ಯೋಜನಾ ಪ್ರದೇಶದ ಸಮೀಕ್ಷೆಯನ್ನು ಗ್ರಾಮವಿಕಾಶ ನಡೆಸಿತು. ಗ್ರಾಮವಾರು ಮಾಹಿತಿಯನ್ನು ಸಂಗ್ರಹಿಸಲಾಯಿತು. ಕೆರೆಯ ಪರಿಸ್ಥಿತಿಯೂ ಸೇರಿದಂತೆ ಇದರ ಮಾಹಿತಿಗಳ ವಿವರ:

- ಕೆರೆಯ ನೀರು ಆವರಿಸಿದ ಪ್ರದೇಶ.
- ಕೆರೆಯ ಹೂಳೆತ್ತಬೇಕಾದ ಪ್ರಮಾಣ.
- ಕೆರೆಯ ಅಚ್ಚುಕಟ್ಟು ಪ್ರದೇಶ.
- ಕೆರೆಯ ಜಲಾನಯನ ಪ್ರದೇಶ
- ಕೆರೆಯ ಜಲಾನಯನ ಪ್ರದೇಶ.
- ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಪ್ರತಿ ರೈತ ಪಡೆದಿರುವ ಜಮೀನಿನ ಪ್ರಮಾಣ ರೈತರ ಸಾಮಾಜಿಕ ಆರ್ಥಿಕ ಪರಿಸ್ಥಿತಿಯ ವಿವರ.
- ಅನುಸರಿಸುತ್ತಿರುವ ಬೆಳೆ ಪದ್ಧತಿ.
- ಕೆರೆಗೆ ಅಧಿಕ ನೀರು ಬರುತ್ತಿದೆಯೇ.
- ಬೆಳೆ ಪ್ರದೇಶದ ನೀರಿನ ಕೊರತೆ, ಕೆರೆಯಲ್ಲಿನ ನೀರಿನ ಸಂಗ್ರಹದ ಕೊರತೆ.

- ಅಚ್ಚಕಟ್ಟು ಪ್ರದೇಶದಲ್ಲಿರುವ ತೆರೆದ ಬಾವಿಗಳ ಸಂಖ್ಯೆ.
- ಅಂತರ್ ಜಲದ ಮಟ್ಟ.

ಗ್ರಾಮವಿಕಾಸ ಸಮೀಕ್ಷೆ ನಡೆಸಿದ ಸಂದರ್ಭದಲ್ಲಿ ಹೆಚ್ಚು ಗ್ರಾಮಗಳ ಜನರು ಕೆರೆಗಳ ಹೂಳೆತ್ತಬೇಕೆಂಬ ಬೇಡಿಕೆಯನ್ನು ಪ್ರಸ್ತಾಪಿಸಿದರು. ಇದರ ಪರಿಣಾಮವಾಗಿ ಮಹಿಳಾ ಸ್ವ-ಸಹಾಯ ಗುಂಪಿಗೆ ನಾಯಕರ ನೇತೃತ್ವದಲ್ಲಿ ಗ್ರಾಮಗಳ ಜನರ ನಿಯೋಗಗಳು ಗ್ರಾಮವಿಕಾಸ ಯೋಜನಾ ಮುಖ್ಯ ಕಚೇರಿಗೆ ಭೇಟಿ ನೀಡಿದವು. ಕೆರೆಗಳ ಹೂಳೆತ್ತಲು ಅಗತ್ಯವಾದ ಸಂಪನ್ಮೂಲಗಳನ್ನು ಸಂಗ್ರಹಿಸುವ ಸಾಧ್ಯತೆಗಳನ್ನು ಪರಿಶೀಲಿಸಲು ಪ್ರಯತ್ನಿಸಿದರು. ಅಗತ್ಯಗಳನ್ನು ಪರಿಶೀಲಿಸಿದ ನಂತರ ಹೂಳೆತ್ತುವುದಕ್ಕಾಗಿ ಕೆರೆಗಳನ್ನು ಆಯ್ಕೆ ಮಾಡಲು ಜನರು ಎಲ್ಲ ರೀತಿಯಲ್ಲಿ ಭಾಗವಹಿಸುವುದು ಅನಿವಾರ್ಯ ಎಂದು ಗ್ರಾಮದ ಜನರ ಮುಖಂಡರಿಗೆ ತಿಳಿಸಲಾಯಿತು. ಹಣಕಾಸನ್ನು ಹೊಂದಿಸಬಹುದಾದಂಥ (ಹಣದ ಪ್ರಮಾಣ ಪರಿಗಣಿಸದೆ) ಗ್ರಾಮಗಳ ಕೆರೆಗಳನ್ನು ಆಯ್ಕೆ ಮಾಡಲಾಯಿತು. ಕಡು ಬಡವರ ಸಂಖ್ಯೆ ಜಾಸ್ತಿಯಿರುವ ಪ್ರದೇಶಗಳ ಗ್ರಾಮದ ಜನರನ್ನು ಈ ಷರತ್ತನ್ನು ಪಾಲಿಸಲು ಒತ್ತಾಯಿಸಲಿಲ್ಲ.

**೧. ಕೆರೆಗಳ ಆಯ್ಕೆಯಲ್ಲಿ ಆದ್ಯತೆ**

ಹೂಳೆತ್ತಲು ಕೆರೆಗಳ ಪಟ್ಟಿ ಸಿದ್ಧಪಡಿಸಿದ ನಂತರ ಆದ್ಯತೆಯ ಮೇಲೆ ಯೋಜನೆ ಜಾರಿ ಮಾಡಲು ನಿರ್ಧರಿಸಲಾಯಿತು. ಕೆರೆ ಹೂಳೆತ್ತಬೇಕೆಂದು ಜನರ ಬೇಡಿಕೆಯನ್ನು ಮುಂದಿಟ್ಟ ನಂತರ ಸಂಬಂಧಿಸಿದ ಗ್ರಾಮಗಳ ಸಾಮಾಜಿಕ ಆರ್ಥಿಕ ನಕ್ಷೆ ತಯಾರಿಸಲು ಗ್ರಾಮೀಣ ಸಹಭಾಗಿತ್ವ ಮೌಲ್ಯಮಾಪನ ನಡೆಸಲಾಯಿತು. ಈ ಮಾಪನದ ನಂತರ ಸಮುದಾಯದ ಸಭೆಗಳನ್ನು ನಡೆಸಲಾಯಿತ. ಗ್ರಾಮೀಣ ಸಹಭಾಗಿತ್ವ ಮೌಲ್ಯಮಾಪನ ಮತ್ತು ಸಮೀಕ್ಷೆಯ ಫಲಶೃತಿಗಳನ್ನು ಸಮೀಕರಿಸಿ, ಆದ್ಯತೆಯ ಮೇಲೆ ಕೆರೆಗಳ ಹೂಳೆತ್ತಲು ಆಯ್ಕೆ ಮಾಡಲಾಯಿತು. ಆಯ್ಕೆಗೆ ಅನುಸರಿಸಿದ ಮಾನದಂಡಗಳನ್ನು ಈ ರೀತಿ ಇವೆ.

- ಗ್ರಾಮದ ಸಾಮಾಜಿಕ ಚಿತ್ರದ ವಿವರ (ದಲಿತ ಸಮುದಾಯ, ಸಣ್ಣ ಹಾಗೂ ಮಧ್ಯಮ ಪ್ರಮಾಣದ ರೈತ ಪ್ರಮಾಣ)
- ಸ್ವ-ಸಹಾಯ ಗುಂಪುಗಳ ವಿವರ (ಸಕ್ರಿಯವಾಗಿಯೇ ಇಲ್ಲವೇ, ಇಂಥ ಕಾರ್ಯ ಕೈಗೆತ್ತಿಕೊಳ್ಳಲು ಶಕ್ತವಾಗಿಯೇ ಇಲ್ಲವೆ, ಸ್ವ-ಸಹಾಯ ಗುಂಪುಗಳು ಈ ಯೋಜನೆಯ ಜಾರಿಯಲ್ಲಿ ಭಾಗಿಯಾಗುವವೇ ಇಲ್ಲವೇ, ಅಚ್ಚುಕಟ್ಟು ಪ್ರದೇಶದಲ್ಲಿ ಜಮೀನುಳ್ಳ ರೈತರ ಸಂಖ್ಯೆ).
- ಕೆರೆಯ ಹೆಚ್ಚುವರಿ ನೀರಿನ ಪ್ರಮಾಣ (ಪ್ರತಿ ಮುಂಗಾರಿನಲ್ಲಿ ಕೆರೆ ಕೋಡಿ ಹೋಗುತ್ತದೆಯೇ, ಹಾಗಿದ್ದರೆ ಎಷ್ಟು ದಿನ ಹೆಚ್ಚು ನೀರು ಹೊರ ಹೋಗುತ್ತದೆ)
- ಕೆರೆಯ ಪ್ರಸ್ತುತ ಸ್ಥಿತಿ (ಬೆಳೆಗೆ ಕೊರತೆಯಾಗುವ ನೀರಿನ ಪ್ರಮಾಣ, ಕಟ್ಟೆಯ ಕಾಲುವೆ, ಕ್ರೆಸ್ಟ್ ಗೇಟು ನಿರುಪಯುಕ್ತ ಒಡ್ಡುಗಳು ಮತ್ತಿತರೆ)
- ಕೆರೆಗೆ ನೀರು ಬರುವ ಮೂಲ (ಉತ್ತಮ ಜಲಾನಯನ ಪ್ರದೇಶ ಇದೆಯೇ, ಕೆರೆಗೆ ನೀರು ಹರಿದು ಬರುವ ಮಾರ್ಗಗಳ ಒತ್ತುವರಿ ಆಗಿದೆಯೇ ಇತ್ಯಾದಿ)
- ಕೆರೆಯಿಂದ ಅನುಕೂಲ ಪಡೆಯುತ್ತಿರುವವ ವ್ಯಾಪ್ತಿ (ಗ್ರಾಮವಿಕಾಸ ವ್ಯಾಪ್ತಿಗೆ ಬರುವ ಕುಟುಂಬಗಳ ಸಂಖ್ಯೆ, ಒಂದು ಗ್ರಾಮಕ್ಕಿಂತ ಹೆಚ್ಚು ಗ್ರಾಮಗಳ ಕುಟುಂಬಕ್ಕೆ ಕೆರೆ ನೀರು ಬಳಕೆಯಾಗುತ್ತಿದೆಯೇ ಇತ್ಯಾದಿ).

**೨. ಸಮದರ್ಶಿತ್ವ**

ಕೆರೆ ಹೂಳೆತ್ತುವ ಯೋಜನೆಗೆ 'ಗ್ರಾಮವಿಕಾಸ' ಬೆಂಬಲ ನೀಡಲು ಮತ್ತು ಇಂಥ ಕಾರ್ಯದಲ್ಲಿ ಭಾಗವಹಿಸಲು ಮುಖ್ಯವಾದ ಕಾರಣ ಎಲ್ಲರಿಗೂ ಸಮ್ಮತವಾದ ನ್ಯಾಯ ದೊರಕಿಸಿಕೊಡುವುದಾಗಿದೆ. ಆಯ್ಕೆಯಾದ ಕೆರೆಗಳ ರೈತರು ಕೆಲವು ಮಾನದಂಡಗಳನ್ನು ಪಾಲಿಸಬೇಕು.

- ಹೆಚ್ಚುವರಿ ನೀರು ಬಡ ರೈತರಲ್ಲಿ ಹಂಚಿಕೆಯಾಗಬೇಕು (ಬೆಳೆ ಹಂಚಿಕೊಳ್ಳುವುದು).
- ಭೂರಹಿತರಿಗೆ ಕೆರೆಯ ಪಾಲನ್ನು ಹಂಚಿಕೊಳ್ಳಲು ರೈತರು ಸಿದ್ಧರಿರಬೇಕು (ಭೂರಹಿತರಿಗೆ ಕೆರೆಗಳಲ್ಲಿ ಮೀನು ಅಭಿವೃದ್ಧಿಗೆ ಅವಕಾಶ ನೀಡಬೇಕು)

**೪. ಈ ಯೋಜನೆಯ ವ್ಯಾಪ್ತಿಯ ಕೆರೆ ಮತ್ತು ಹಳ್ಳಿಗಳ ಆಯ್ಕೆ**

ಗ್ರಾಮ ಮತ್ತು ಕೆರೆಗಳನ್ನು ಗುರುತಿಸಿದ ನಂತರ ಮುಂದಿನ ಕ್ರಮ ಅನುಸರಿಸಬೇಕು. ಕಾರ್ಯಕ್ರಮ ಜಾರಿಗೆ ಬಂದ ಒಂದು ವರ್ಷದ ಮೊದಲೇ ಸಾಮಾಜಿಕ, ತಾಂತ್ರಿಕ ಪ್ರಕ್ರಿಯೆ ಆರಂಭಿಸಲಾಗುವುದು.

**೫. ಸ್ವ–ಸಹಾಯ ಗುಂಪು ಹಾಗೂ ಸಮುದಾಯದ ಪಾತ್ರದ ವಿಂಗಡಣೆ**

ಇಡೀ ಸಮುದಾಯವನ್ನು ಈ ಕಾರ್ಯಕ್ರಮದ ಜಾರಿಯಲ್ಲಿ ಭಾಗಿಯನ್ನಾಗಿ ಮಾಡಿಕೊಳ್ಳಬೇಕು. ಈ ಯೋಜನೆಯ ಕೇಂದ್ರ ಬಿಂದು ಸ್ವ-ಸಹಾಯ ಗುಂಪುಗಳು. ಮಹಿಳೆಯರಲ್ಲಿ ನಾಯಕತ್ವ ಅಭಿವೃದ್ಧಿಗೆ ಅವಕಾಶ ನೀಡುವ ಕೆರೆಗಳ ಹೂಳೆತ್ತುವ ಯೋಜನೆಗಳು ಮಹಿಳೆಯರ ಸಬಲೀಕರಣಕ್ಕೆ ಮಾರ್ಗ ಎಂದು ಗ್ರಾಮವಿಕಾಸ ಭಾವಿಸಿದೆ. ಜೊತೆಗೆ ಸಾರ್ವಜನಿಕ ಸಂಪನ್ಮೂಲಗಳ ನಿರ್ವಹಣೆ ಮತ್ತು ಮಾಲಿಕತ್ವದಲ್ಲಿ ಮಹಿಳೆಯರಿಗೆ ಸಮಾನ ಪಾಲು ನೀಡಬೇಕಾದ ಅಗತ್ಯವನ್ನು ಗುರುತಿಸಿ ಹಾಗೂ ಹಾಗೆ ನೀಡಬೇಕೆಂದು ಗ್ರಾಮವಿಕಾಸ ಬಯಸುತ್ತದೆ. ಗ್ರಾಮವಿಕಾಸ ಕೈಗೆತ್ತಿಕೊಂಡ ಯೋಜನೆಗಳ ಮುಂಚೂಣಿಯಲ್ಲಿ ಮಹಿಳಾ ಸ್ವ-ಸಹಾಯ ಗುಂಪುಗಳೇ ಕಾರ್ಯನಿರ್ವಹಿಸುತ್ತಿವೆ. ಯೋಜನೆ ರೂಪುರೇಷೆ ತಯಾರಿಕೆಯಿಂದ ಜಾರಿಯವರೆಗೆ ಮಹಿಳಾ ಸ್ವ-ಸಹಾಯ ಗುಂಪುಗಳ ಮಹಿಳೆಯರೇ ಇದ್ದಾರೆ. ಗ್ರಾಮವಿಕಾಸದ ಬೆಂಬಳದ ಯೋಜನೆಯಲ್ಲಿ ಮಹಿಳೆಯರೇ ನಾಯಕತ್ವ ವಹಿಸುತ್ತಾರೆ ಅಥವಾ ಮುಂಚೂಣಿಯಲ್ಲಿರುತ್ತಾರೆ ಎಂದು ಸಮುದಾಯಕ್ಕೆ ಸ್ಪಷ್ಟವಾಗಿ ತಿಳಿಸಲಾಗುತ್ತದೆ. ಬಹುಪಾಲು ಕಾರ್ಯತಂಡಗಳ ನಾಯಕರು ಮಹಿಳೆಯರು ಆಗಿದ್ದಾರೆ.

**೬. ಸಭೆಗಳ ಯೋಜನೆ**

ಆನಂತರ ಗ್ರಾಮವಿಕಾಸ ಜಲಾನಯನ ಮತ್ತು ಅಚ್ಚುಕಟ್ಟು ಪ್ರದೇಶದ ರೈತರ ಸಭೆಗಳನ್ನು ನಡೆಸುತ್ತದೆ. ಸ್ವ-ಸೇವಾ ಗುಂಪುಗಳೂ ಈ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಸೂಚಿಸಲಾಗುತ್ತದೆ. ಈ ಸಭೆಗಳಲ್ಲಿ ಗ್ರಾಮವಿಕಾಸ ಸಿಬ್ಬಂದಿಯ ಪಾತ್ರ ಇಲ್ಲ. ಎಲ್ಲ ತೀರ್ಮಾನ ರೈತರದೇ. ಸ್ಥಳೀಯ ಗ್ರಾಮ ಪಂಚಾಯ್ತಿ ಸದಸ್ಯ ಅಥವಾ ಸದಸ್ಯರೂ ಈ ಸಭೆಯಲ್ಲಿ ಭಾಗವಹಿಸುತ್ತಾರೆ. ಸಂಬಂಧಿಸಿದ ವಿಷಯಗಳನ್ನು ಚರ್ಚಿಸಿ ನಿರ್ಧಾರಗಳನ್ನು ತಗೆದುಕೊಳ್ಳಲಾಗುತ್ತದೆ. ನಿರ್ಧಾರ ತೆಗೆದುಕೊಳ್ಳುವ ವಿಷಯಗಳು ಈ ರೀತಿ ಇವೆ.

- ಸಂಪನ್ಮೂಲಗಳು ಸಮುದಾಯದ ಜವಾಬ್ದಾರಿಯನ್ನು ಹೊರುವ ಸಮಿತಿಯ ರಚನೆ.
- ಯೋಜನೆಯ ಒಟ್ಟಾರೆ ಜವಾಬ್ದಾರಿಯನ್ನು ಹೊರುವ ಸಮಿತಿಯ ರಚನೆ.
- ಜನರ ಪಾಲನ್ನು ನೀಡುವ ವಿಧಾನ ಕುರಿತು ನಿರ್ಧಾರ.
- ಕೆರೆಗೆ ಸಂಬಂಧಿಸಿದ ಕೆಲಸಗಳನ್ನು ಆದ್ಯತೆ ಮೇರೆಗೆ ನಿರ್ಧರಿಸುವುದು.
- ಕೆರೆ ಹೂಳೆತ್ತುವ ವಿಧಾನ (ಗ್ರಾಮವಿಕಾಸದ ಎಲ್ಲ ಹೂಳೆತ್ತುವ ಯೋಜನೆಗಳ ಮಾರ್ಗದರ್ಶಿ ಕೈಪಿಡಿಯಾಗಿರುತ್ತದೆ)
- ಎತ್ತಿನ ಗಾಡಿ ಮತ್ತು ಟ್ರಾಕ್ಟರುಗಳ ಮೂಲಕ ಹೂಳಿನ ಸಾಗಣೆ.

- ನಿರ್ದಿಷ್ಟ ಅವಧಿ-ಹಣ ಪಾವತಿ
- ಹೂಳನ್ನು ಸಾಗಿಸಬೇಕಾದ ಜಮೀನುಗಳನ್ನು ನಿಗದಿ ಮಾಡುವುದು.
- ಹೂಳು ತೆಗೆಯುವ ಕೆಲಸ ಮತ್ತು ಕೂಲಿ ನಿಗದಿ ಮಾಡುವುದು.
- ಕೆಲಸದ ತಂಡಗಳ ವ್ಯವಸ್ಥೆ (ಕೊರತೆಯಿದ್ದರೆ ಬೇರೆ ಊರಿಗಳಿಂದ ಕಾರ್ಮಿಕರ ವ್ಯವಸ್ಥೆ)
- ಕಾಮಗಾರಿ ಮೇಲುಸ್ತುವಾರಿ ವಹಿಸಲು ಕಾರ್ಮಿಕರ ನೇಮಕ.
- ಹೂಳು ಸಾಗಣೆ ಮೇಲೆ ನಿಗಾ ಇಡಲು ಮತ್ತು ಹಣ ಪಾವತಿಗಾಗಿ ಟೋಕನ್ ನೀಡಿಕೆ ಪದ್ಧತಿ ಜಾರಿ.
- ಕಾಮಗಾರಿ ವೆಚ್ಚದಲ್ಲಿನ ರೈತರ ಪಾಲನ್ನು ವಸೂಲು ಮಾಡಲು ಜವಾಬ್ದಾರಿ ನಿಗದಿ ಮಾಡುವುದು. (ನೆರೆಯ ಸಮುದಾಯ ಜಾಲದ ಸದಸ್ಯರೆಂದು ಗುರುತಿಸಿದವರಿಗೆ ರೈತ ರಿಂದ ಬಾಕಿ ವಸೂಲಿಮಾಡುವ ಜವಾಬ್ದಾರಿಯನ್ನು ವಹಿಸಲಾಗುವುದು. ಈ ವ್ಯಕ್ತಿಗಳು ಸಮುದಾಯದಲ್ಲಿ ಗೌರವಾನ್ವಿತರಾಗಿರಬೇಕು. ಕನಿಷ್ಠ ಐದು ಕುಟುಂಬಗಳಿಂದ ಬಾಕಿಯನ್ನು ಇವರು ವಸೂಲಿ ಮಾಡಿಕೊಡಬೇಕು. ಹೂಳು ಪಡೆಯುವ ರೈತರ ನಡುವೆ ವಾಸಿಸುವಂತವರು ಅವರಾಗಿರಬೇಕು. ಎಂಬ ಇನ್ನೊಂದು ಮಾನದಂಡ ಇದೆ. ಪ್ರತಿ ನೆರೆ ಸಮುದಾಯ ಜಾಲದ ನಾಯಕನ ಜವಾಬ್ದಾರಿಯನ್ನು ನಿಗದಿಮಾಡಲಾಗುತ್ತದೆ. ಪ್ರತಿಯೊಬ್ಬರಿಗೆ ನಿಗದಿಪಡಿಸಿದ ರೈತರ ವಿವರ ಅವು ಕೊಡಬೇಕಾದ ಹಣ ಮತ್ತಿತರ ವಿವರಗಳು ಅವರಿಗೆ ನೀಡಲಾಗುತ್ತದೆ. ಆ ಸಂಬಂಧ ಒಪ್ಪಂದವೊಂದಕ್ಕೆ ಪ್ರತಿಯೊಬ್ಬರೂ ಸಹಿ ಮಾಡಿರುತ್ತಾರೆ.
- ಪ್ರತಿ ರೈತ ಮಾಡಬಹುದಾದ ಹಣದ ಬಳಕೆ ಮತ್ತು ಮರುಪಾವತಿ ಸಾಮರ್ಥ್ಯವನ್ನು ಗುರುತಿಸಲಾಗುತ್ತದೆ. (ಇದನ್ನು ತೀವ್ರತರ ಚರ್ಚೆಯ ನಂತರ ಸಮಿತಿ ನಿರ್ಧರಿಸುತ್ತದೆ) ಈ ಸಮಿತಿ ಪ್ರತಿ ರೈತ ಹೊರಬಹುದಾದ ಪಾಲನ್ನು ಗುರುತಿಸುತ್ತದೆ. ಒಪ್ಪಂದಕ್ಕೆ ಸಹಿ ಮಾಡಿದವರಿಗೆ ಮತ್ತು ಸಮಿತಿ ಸದಸ್ಯರಿಗೆ ಒಪ್ಪಂದದ ಜೆರಾಕ್ಸ್ ಪ್ರತಿಯೊಂದನ್ನು ನೀಡಲಾಗುವುದು. ಕೊಳವೆ ಬಾವಿ ಇರುವ ರೈತರು, ವಾಣಿಜ್ಯ ಬೆಳೆ ತೆಗೆಯುವ ರೈತರನ್ನು ಗುರುತಿಸಿ ಅವರಿಗೆ ಕೊಡಬೇಕಾದ ಹಣವನ್ನು, ಕಂತುಗಳನ್ನು ಈ ಚರ್ಚೆಯಲ್ಲಿ ನಿಗದಿಮಾಡಲಾಗುತ್ತದೆ. ಸಾಲದ ಹಣ ವಸೂಲಿಯ ಮೂಲಗಳನ್ನು ಗುರುತಿಸಲಾಗುತ್ತದೆ.

ಬಹುಪಾಲು ಯೋಜನೆಗಳಲ್ಲಿ ಗ್ರಾಮವಿಕಾಸವೇ ಸಂಪನ್ಮೂಲದ ಮುಖ್ಯಪಾಲನ್ನು ಒದಗಿಸುತ್ತದೆ. ಇತ್ತೀಚಿನ ಅನುಭವದ ಹಿನ್ನೆಲೆಯಲ್ಲಿ ಹೂಳು ತೆಗೆಯುವ ಕೆಲಸಕ್ಕೆ ಕ್ಯೂಬಿಕ್ ಮೀಟರ್ ಪದ್ಧತಿ ಅಳವಡಿಸಲಾಗಿದೆ. ಒಂದು ಕ್ಯೂಬಿಕ್ ಮೀಟರ್ ಹೂಳು ತೆಗೆಯಲು ಇಂತಿಷ್ಟು ಹಣ ಎಂದು ನಿಗದಿಮಾಡಿದ ಮೇಲೆ ಹಳೆಯ ಸಮಸ್ಯೆಗಳ ನಿವಾರಣೆಯಾಗಿವೆ.

ಕೆರೆಯಿಂದ ದೂರವಿರುವ ಜಮೀನಿಗೆ ಮೊದಲು ಹೂಳು ಸಾಗಿಸುವ ಒಂದು ಹೊಸ ಪದ್ಧತಿ ಜಾರಿಗೆ ತರಲಾಗಿದೆ. ಈ ಮೊದಲು ಟ್ರಾಕ್ಟರುಗಳಲ್ಲಿ ಹತ್ತಿರದ ಜಮೀನುಗಳಿಗೆ ಹೂಳು ಸಾಗಿಸಲಾಗುತ್ತಿತ್ತು. ಡೀಸೆಲ್ ವೆಚ್ಚ ಉಳಿತಾಯವಾಗುವುದರಿಂದ ಹೀಗೆ ಮಾಡಲಾಗುತ್ತಿತ್ತು. ಗ್ರಾಮವಿಕಾಸದ ಸಲಹೆ ಮೇರೆಗೆ ಕಾಮಗಾರಿ ನಿರ್ವಹಣಾ ಸಮಿತಿಗಳು ಈಗ ಹೊಸ ನಿಯಮ ಅಳವಡಿಸಿವೆ. ಕೆರೆಯಿಂದ ದೂರವಿರುವ ಜಮೀನುಗಳಿಗೆ ಮೊದಲು ಹೂಳು ಸಾಗಿಸುವುದು ಕಡ್ಡಾಯ ಮಾಡಲಾಗಿದೆ. ಕೆರೆಯಿಂದ ದೂರವಿರುವ ಬಹುಪಾಲು ಜಮೀನುಗಳು ಬಡ ರೈತರಿಗೆ ಸೇರಿದವು. ಜೊತೆಗೆ ಭೂಮಿ ಕೂಡ ಫಲವತ್ತಾಗಿ ಇರುವುದಿಲ್ಲ. ಆದ್ದರಿಂದ ಈ ಜಮೀನುಗಳಿಗೆ ಮೊದಲು ಹೂಳು ಸಾಗಿಸಲು ಸೂಚಿಸಲಾಗಿದೆ. ಪ್ರತಿ ರೈತರ ಜಮೀನಿಗೆ ಒಂದು ಟ್ರಾಕ್ಟರನ್ನು ನಿಗದಿಪಡಿಸಲಾಗಿದೆ. ಹೆಚ್ಚು ಜಮೀನಿರುವವರು ಹೆಚ್ಚು ಟ್ರಾಕ್ಟರುಗಳನ್ನು ಬಾಡಿಗೆಗೆ ಪಡೆದು ಹೆಚ್ಚು ಹೂಳು ಸಾಗಿಸುವುದನ್ನು ತಡೆಯಲು ಈ ಕ್ರಮ ತೆಗೆದುಕೊಳ್ಳಲಾಗಿದೆ. ಹೊಸ ಪದ್ಧತಿಯಿಂದ ಹೂಳು ಎಲ್ಲ ರೈತರಿಗೂ ಸಮಾನವಾಗಿ ಹಂಚಿಕೆಗೆ ಲಭ್ಯವಾದಂತಾಗಿದೆ.

**ವೆಚ್ಚದ ಪಾಲು –ಪ್ರಯೋಗ**

೧೯೯೭ರಲ್ಲಿ ಕೆರೆ ಹೂಳೆತ್ತಲು ತಲಗುವ ವೆಚ್ಚವನ್ನು ಜನರ ಜೊತೆ ಹಂಚಿಕೊಳ್ಳುವ ವಿಚಾರದಲ್ಲಿ ಗ್ರಾಮವಿಕಾಸ ಪ್ರಯೋಗ ನಡೆಸಿದೆ. ಬೇವನಾಥ ಗ್ರಾಮದ ಸ್ವ-ಸಹಾಯ ಗುಂಪಿನ ಜೊತೆ ವಿವರವಾದ ಸಮಾಲೋಚನೆ ನಡೆಸಿದೆ. ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಲು ಗ್ರಾಮವಿಕಾಸ ಪ್ರೋತ್ಸಾಹ ನೀಡಿದೆ. ಈ ಯೋಜನೆಗೆ ಸ್ಥಳೀಯವಾಗಿ ಸಂಪನ್ಮೂಲ ಕ್ರೋಢಿಕರಿಸುವ ಮತ್ತು ಬೆಂಬಲ ಒದಗಿಸುವ ದೃಷ್ಟಿಯಿಂದ ಈ ರೀತಿ ಮಾಡಲಾಗಿದೆ. ಆ ವೇಳೆಗೆ ಗ್ರಾಮವಿಕಾಸ ಮೂರು ಕೆರೆಗಳ ಹೂಳೆತ್ತುವ ಅನುಭವ ಪಡೆದಿತ್ತು. ನೆರವು ಸಂಸ್ಥೆಯಿಂದ ಬಂದಿದ್ದ ಹಣದ ಆಧಾರದ ಮೇಲೆ ಮಹಿಳಾ ಸ್ವ-ಸಹಾಯ ಗುಂಪಿಗೆ ಬ್ಯಾಂಕಿನಿಂದ ಸಾಲ ಪಡೆಯಲು ಗ್ರಾಮವಿಕಾಸ ಸಂಸ್ಥೆ ಸಹಾಯ ನೀಡಿತು. ೧೯೯೮ರಲ್ಲಿ ಇನ್ನೂ ಎರಡು ಸ್ವ-ಸಹಾಯ ಗುಂಪುಗಳು ಬ್ಯಾಂಕಿನಲ್ಲಿ ಸಾಲ ಪಡೆಯಲು ಜಿ.ವಿ. ನೆರವಾಯಿತು. ೧೯೯೯ರಲ್ಲಿ ಕೆರೆಯ ಹೂಳೆತ್ತಲು ನೇರಳಹಳ್ಳಿ ಮತ್ತು ಗದ್ದೂರು ಸ್ವ-ಸಹಾಯ ಗುಂಪುಗಳಿಗೆ ನೆರವಿನ ಹಣ ನೀಡಿತು.

**ಹಂತ –೧:-**ಎರಡು ಕೆರೆಗಳ ಹೂಳೆತ್ತುವ ಸಂಪೂರ್ಣ ವೆಚ್ಚವನ್ನು ಗ್ರಾಮವಿಕಾಸವೇ ಭರಿಸಿತು.

**ಹಂತ–೨:-**ಕೆರೆಯೊಂದರ ಹೂಳೆತ್ತಲು ತಗುಲಿದ ವೆಚ್ಚದಲ್ಲಿ ಶೇಕಡ ೬೦ರಷ್ಟನ್ನು ಗ್ರಾಮವಿಕಾಸ ಭರಿಸಿತು. ಶ್ರಮದ ರೂಪದಲ್ಲಿ ಉಳಿದ ಶೇಕಡ ೪೦ರಷ್ಟು ವೆಚ್ಚವನ್ನು ಜನರು ಭರಿಸಿದರು.

**ಹಂತ –೩:-**ಮಹಿಳಾ ಸ್ವ-ಸಹಾಯ ಗುಂಪುಗಳು ಬ್ಯಾಂಕ್ ಸಾಲದ ಮೂಲಕ ಶೇಕಡ ೭೫ರಷ್ಟನ್ನು ಭರಿಸಿದವು. ನಬಾರ್ಡ್ ಯೋಜನೆಯನ್ವಯ ಬ್ಯಾಂಕುಗಳಿಂದ ಈ ಸಾಲ ದೊರಕಿತು.

**ಹಂತ –೪:-**ಗ್ರಾಮವಿಕಾಸದಿಂದ ಶೇಕಡ ೧೦೦ರಷ್ಟುಹಣ ಸಾಲ ಪಡೆದು ಜನರೇ ಕೆರೆಯ ಹೂಳೆತ್ತುವ ಯೋಜನೆ ನಿರ್ವಹಿಸಿದರು.

**ಹಂತ ೧**

ಹೊನ್ನಶೆಟ್ಟಿಹಳ್ಳಿಕೆರೆಯಲ್ಲಿನ ೨೫೦೦೦ ಕ್ಯೂಬಿಕ್ ಮೀಟರಿನಷ್ಟು ಹೂಳನ್ನು ತೆಗೆಸಲಾಯಿತು. ಸುಮಾರು ೩೦೦ ಪುರುಷರು/ಮಹಿಳೆಯರು ಪ್ರತಿದಿನ ಮೂರು ತಿಂಗಳ ಕಾಲ ದುಡಿದರು. ತೆಗೆದ ಹೂಳನ್ನು ಜಮೀನುಗಳಿಗೆ ಸಾಗಿಸಲಾಯಿತು. ಹೂಳಿನ ಸ್ವಲ್ಪ ಭಾಗವನ್ನು ಕಟ್ಟೆಯನ್ನು ಬಲಪಡಿಸಲು ಹಾಗೂ ಎತ್ತರಿಸಲು ಬಳಸಲಾಯಿತು. ಹೂಳನ್ನು ಸಾಗಿಸಲು ಅಧಿಕ ಸಂಖ್ಯೆಯಲ್ಲಿ ಎತ್ತಿನ ಗಾಡಿಗಳನ್ನು ಬಳಸಲಾಯಿತು. ಹನ್ನೊಂದು ಮಂದಿ ರೈತರು ಗ್ರಾಮವಿಕಾಸದಿಂದ ಸಾಲ ಪಡೆದು ಎತ್ತಿನಗಾಡಿಗಳನ್ನು ಕೊಂಡರು. ಹೂಳು ತೆಗೆಯುವ ಕೆಲಸ ಮುಗಿಯುವುದರೊಳಗಾಗಿ ಸಾಲವನ್ನು ಅವರು ಮರುಪಾವತಿ ಮಾಡಿದರು. ಈ ಗಾಡಿಗಳು ಆ ರೈತ ಕುಟುಂಬಕ್ಕೆ ಆಸ್ತಿಯಾದವು. ಹೂಳು ತೆಗೆಯಲು ಜನರಿಗೆ ನೀಡಿದ ಹಣ, ಸಾಗಿಸಲು ಹಣ ಎಲ್ಲವೂ ಹಳ್ಳಿಯಲ್ಲೇ ಉಳಿದವು. ಈ ಕಾಮಗಾರಿಯನ್ನು ನೋಡಿಕೊಳ್ಳಲು ಜನರ ಸಮಿತಿಯನ್ನು ನೇಮಿಸಲಾಗಿತ್ತು.

**ಎರಡನೆಯ ಹಂತ**

ದೊಡ್ಡಗುಟ್ಟಹಳ್ಳಿಯಲ್ಲಿ ನಡೆದ ಇಂಥದೇ ಚಟುವಟಿಕೆ ಮೊದಲ ಹಂತದಲ್ಲಿ ಅನುಸರಿಸಿದ ಮಾರ್ಗವನ್ನೇ ಅನುಸರಿಲಾಗಿತ್ತು. ಈ ಹಂತದಲ್ಲಿ ಜನರು ಶ್ರಮದ ಮೂಲಕ ಶೇಕಡ ೪೦ರಷ್ಟು ವೆಚ್ಚವನ್ನು ಭರಿಸಿದರು. ಎರಡನೆಯ ಹಂತದಲ್ಲೂ ಎತ್ತಿನ ಗಾಡಿಗಳಿಂದಲೇ ಕೆರೆ ಹೂಳನ್ನು ಸಾಗಿಸಲಾಯಿತು. ಸುಮಾರು ೯೦೦೦ ಟ್ರಾಕ್ಟರ್ ಲೋಡುಗಳಷ್ಟು ಹೂಳನ್ನು ೭೦೦ ಎಕರೆ ಜಮೀನಿಗೆ ಸಾಗಿಸಲಾಯಿತು.

**ಮೂರನೆಯ ಹಂತ**

ಈ ಹಂತದಲ್ಲಿ ಸ್ವ-ಸಹಾಯ ಗುಂಪುಗಳು ಬ್ಯಾಂಕುಗಳಿಂದ ಸಾಲ ಪಡೆದ ಕೆರೆ ಹೂಳು ತೆಗೆಸುವ ಕಾರ್ಯ ಮಾಡಿದವು. ಅವು ಬ್ಯಾಂಕುಗಳನ್ನು ಸಂಪರ್ಕಿಸಿದಾಗ ಯಾವುದೇ ಸಮಸ್ಯೆಯಿಲ್ಲದೆ ಸಾಲ ಕೊಡಲು ಮುಂದೆ ಬಂದವು. ಹೂಳೆತ್ತುವ ಕಾರ್ಯ ಆರಂಭವಾಗುವ ಮೊದಲೇ ಎರಡು ವರ್ಷಗಳಲ್ಲಿ ಬ್ಯಾಂಕ್ ಸಾಲವನ್ನು ಮರುಪಾವತಿ ಮಾಡಬೇಕೆಂದು ಗ್ರಾಮವಿಕಾಸ ಮತ್ತು ಸ್ವ-ಸಹಾಯ ಗುಂಪುಗಳು ಒಪ್ಪಿದವು. ಗ್ರಾಮವಿಕಾಸ ವಾರ್ಷಿಕ ಶೇಕಡ ೧೨ಬಡ್ಡಿಯನ್ನು ಕೊಡುವುದಾಗಿ ಒಪ್ಪಿತ್ತು. ಮೂರು ಕೆರೆಗಳ ಹೂಳೆತ್ತುವ ಕಾರ್ಯಕ್ರಮಕ್ಕೆ ಈ ಒಪ್ಪಂದ ಅನ್ವಯವಾಯಿತು.

**ಚಟುವಟಿಕೆಯ ಮಾರ್ಗ**

ಕೆರೆ ಹೂಳೆತ್ತಲು ಮತ್ತು ಜಮೀನುಗಳಿಗೆ ಹೂಳು ಸಾಗಿಸಲು ಬ್ಯಾಂಕಿನಿಂದ ಪಡೆದ ಸಾಲವನ್ನು ಸ್ವ-ಸಹಾಯ ಗುಂಪುಗಳು ಉತ್ತಮವಾಗಿ ನಿರ್ವಹಿಸಿದವು. ರೈತರು ಹೂಳನ್ನು ಕೊಂಡು ತಮ್ಮ ಜಮೀನುಗಳಿಗೆ ಬಳಸಿದರು. ಉದಾಹರಣೆಗೆ:

- ಬೇವನಾಥ (೧೯೯೭)ದಲ್ಲಿ ಒಣಭೂಮಿ ಇರುವವರು ಟ್ರಾಕ್ಟರ್ ಹೂಳು ಮಣ್ಣಿಗೆ ರೂ. ೨೫/- ಕೊಡಬೇಕು, ಖುಷ್ಕಿ ಭೂಮಿ ಇರುವವರು ಗುಂಟೆಯೊಂದಕ್ಕೆ (೨.೫ ಸೇಂಟ್) ರೂ.೨೦೦/- ಕೊಡಲು ತಮ್ಮ ತಮ್ಮಲ್ಲೇ ರೈತರು ಒಪ್ಪಿದರು. ಸಾಲದ ಪ್ರಮಾಣ ಇದರ ಆಧಾರದ ಮೇಲೆಯೇ ನಿರ್ಧಾರವಾಯಿತು.
- ಸೀಗೆ ಹೊಸಹಳ್ಳಿ ಮತ್ತು ನಾಗಮಂಗಲದಲ್ಲಿ ಹೂಳು ತೆಗೆಯಲು ತಗಲುವ ವೆಚ್ಚ ಹಾಗೂ ಸಾಗಿಸಲು ತಗಲುವ ವೆಚ್ಚದ ಆಧಾರದ ಮೇಲೆ ಸಾಲದ ಪ್ರಮಾಣ ನಿರ್ಧಾರ ಮಾಡಲಾಯಿತು. ಒಂದು ಎಕರೆ ಭೂಮಿಗೆ ೧೮ಟ್ರಾಕ್ಟರ್ ಲೋಡ್ ಹೂಳು ಹೊಡೆಸಲು ತಗುಲಿದ ವೆಚ್ಚ ೧೨೦೦/-ರೂ. ದಿನವೊಂದಕ್ಕೆ ೪೦ರೂ ಗಳಂತೆ ಮೇಲ್ವಿಚಾರಕರನ್ನು ನೇಮಿಸಲಾಗಿತ್ತು.

**ಹಣ ವಾಪಸಾತಿ**

ಪ್ರತಿವಾರ ಕಾರ್ಮಿಕರು ಕೂಲಿ ಪಡೆಯುವ ಸಂದರ್ಭದಲ್ಲಿ ೪೦ರಿಂದ ೫೦ ರೂ ಸಾಲವನ್ನು ಹಿಂತಿರುಗಿಸುವಂತೆ ಪ್ರೋತ್ಸಾಹಿಸಲಾಯಿತು. ಕೆರೆ ಅಭಿವೃದ್ಧಿ ಸಮಿತಿ ಮತ್ತು ಗ್ರಾಮವಿಕಾಸದ ಸಿಬ್ಬಂದಿ ಸಾಲ ವಸೂಲಿಯ ಜವಾಬ್ದಾರಿ ಹೊತ್ತದ್ದರು. ಕೆರೆ ಕೆಲಸ ಮುಗಿದ ಮೇಲೂ ಸದಸ್ಯರು ಪ್ರತಿನಿತ್ಯ ೧೦ ರಿಂದ ೨೦ ರೂ ಸಾಲ ಹಿಂತಿರುಗಿಸುತ್ತಿದ್ದರು. ಸಾಲ ಪಡೆದ ಎಲ್ಲರಿಗೆ ಪಾಸ್ ಬುಕ್ ನೀಡಲಾಗಿತ್ತು. ಸಾಲ ಮರುಪಾವತಿಯನ್ನು ಆ ಪಾಸ್ ಬುಕ್‌ನಲ್ಲಿ ಪ್ರತಿದಿನ ನಮೂದಿಸಲಾಗುತ್ತಿತ್ತು. ಸಾಲದ ಪ್ರಮಾಣ ಮತ್ತು ಮರು ಪಾವತಿಯನ್ನು ಸ್ವ-ಸಹಾಯ ಗುಂಪುಗಳ ಸದಸ್ಯರ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗಿತ್ತು.

**ನಾಲ್ಕನೆಯ ಹಂತ**

ಈ ಹಂತದಲ್ಲಿಯೂ ನೇರ್ಲಹಳ್ಳಿ-ಗದ್ದೂರು ಮಾದರಿಯನ್ನೇ ಅನುಸರಿಸಲಾಯಿತು. ಬ್ಯಾಂಕ್ ಸಾಲದ ಬದಲಾಗಿ ಗ್ರಾಮವಿಕಾಸವೇ ಸ್ವ-ಸಹಾಯ ಗುಂಪುಗಳಿಗೆ ಬಡ್ಡಿರಹಿತ ಎರಡು ವರ್ಷಗಳ ಅವಧಿಯ ಸಾಲವನ್ನು ನೀಡಿತು. ಮೂರು ತಿಂಗಳ ಚಟುವಟಿಕೆಯ ಅವಧಿಯಲ್ಲಿ

೬೩೧೩ ಟ್ರ್ಯಾಕ್ಟರ್ ಲೋಡು ಹೂಳನ್ನು ತೆಗೆದು ಜಮೀನುಗಳಿಗೆ ಸಾಗಿಸಲಾಯಿತು. ತಲಾ ೧೪ ಸಾವಿರ ರೂ. ಗಳ ಸಾಲ ನೀಡಲಾಯಿತು. ತಮ್ಮ ಗಾಡಿಗಳಿಂದ ಬಂದ ಹಣದಲ್ಲಿ ಅವರು ಸಾಲವನ್ನು ಮರುಪಾವತಿಸಬೇಕೆಂದು ತೀರ್ಮಾನಿಸಲಾಗಿತ್ತು.

**ವೆಚ್ಚದ ಪಾಲುದಾರಿಕೆ ಪ್ರಯೋಗ–ಅನುಭವ ಮತ್ತು ತೀರ್ಮಾನಗಳು**

ಕೆರೆ ಹೂಳೆತ್ತುವ ಕಾರ್ಯಕ್ರಮದಲ್ಲಿ ವೆಚ್ಚದ ಹಂಚಿಕೆಯನ್ನು ಪ್ರಯೋಗಿಕವಾಗಿ ಗ್ರಾಮವಿಕಾಸ ಜಾರಿಗೆ ತರಲು ಯತ್ನಿಸಿತು. ಹೂಳು ತೆಗೆಯುವುದರಿಂದ ಆಗುವ ಅನುಕೂಲದ ಹಿನ್ನೆಲೆಯಲ್ಲಿ ಜನರು ಭಾಗವಹಿಸುವಂತೆ ಕಾರ್ಯಕ್ರಮದಲ್ಲಿ ವೆಚ್ಚವನ್ನು ಹಂಚಿಕೊಳ್ಳುವಂಥ ಸ್ಥಿತಿಯಲ್ಲಿ ರೈತರು ಇನ್ನು ಇಲ್ಲದಿರುವುದು ಗ್ರಾಮವಿಕಾಸದ ಗಮನಕ್ಕೆ ಬಂದಿದೆ.

- ಎರಡು ವರ್ಷಗಳ ಅವಧಿಯಲ್ಲಿ ಸಾಲ ಮರುಪಾವತಿ ಜನರಿಗೆ ಕಷ್ಟ. ದೊಡ್ಡ ಪ್ರಮಾಣದ ಸಾಲವನ್ನು ಕಡಿಮೆ ಅವಧಿಯಲ್ಲಿ ತೀರಿಸಬೇಕೆಂದು ಮಾಡಿದ ಯೋಚನೆ ವಾಸ್ತವ ಪರಿಸ್ಥಿತಿಗೆ ಅನುಗುಣವಾಗಿಲ್ಲ. ರೈತರಿಗೆ ಅಂಥ ಸಾಮರ್ಥ್ಯ ಇಲ್ಲ.
- ಕೆರೆ ಹೂಳೆತ್ತಿದ ವರ್ಷದಲ್ಲಿ ಮುಂಗಾರು ಮಳೆ ಬೀಳದೆ ಬೆಳೆ ಆಗಲಿಲ್ಲ. ಹೀಗಗಿ ನಿಗದಿತ ಅವಧಿಯೊಳಗೆ ಸ್ವ-ಸಹಾಯ ಗುಂಪುಗಳು ಸಾಲ ಮರುಪಾವತಿ ಮಾಡಲಾಗಲಿಲ್ಲ.
- ಪ್ರತಿ ಕುಟುಂಬ ಸರಾಸರಿ ೧೦ ಸಾವಿರ ರೂ.ಗಳಷ್ಟು ಭಾರ ಹೊತ್ತಿತ್ತು. ಇಷ್ಟು ಹಣ ತೀರಿಸುವ ದಾರಿ ಅವರಿಗಿರಲಿಲ್ಲ. ಅಷ್ಟೇ ಅಲ್ಲ ಸಾಮರ್ಥ್ಯವೂ ಇರಲಿಲ್ಲ.
- ಕೆರೆ ಹೂಳೆತ್ತಿದ ವರ್ಷದಲ್ಲಿ ಮುಂಗಾರು ವಿಫಲವಾಗಿ ಬೆಳೆ ನಷ್ಟವಾಯಿತು. ಕೆರೆ ಹೂಳೆತ್ತುವ ಸಂದರ್ಭದಲ್ಲಿ ಮಾಡಿದ ಸಾಲ ಜೊತೆಗೆ ಮುಂಗಾರು ಕೈಕೊಟ್ಟು ಬೆಳೆ ನಷ್ಟದಿಂದಾದ ಬಿಕ್ಕಟ್ಟು ಒಂದಕ್ಕೊಂದು ಸೇರಿಕೊಂಡು ರೈತರು ತೀವ್ರ ಆರ್ಥಿಕ ಒತ್ತಡಕ್ಕೆ ಮತ್ತು ಸಂಕಷ್ಟಕ್ಕೆ ಈಡಾದರು.
- ಕೆರೆ ಹೂಳೆತ್ತುವಂಥ ಪರಿಸರ ಸಂರಕ್ಷಣೆ ಹಾಗೂ ಸಾಮಾಜಿಕವಾಗಿ ಲಾಭದಾಯಕ ಕಾರ್ಯಕ್ಕೆ ನೀಡಲಾಗುವ ಹಣಕ್ಕೆ ನಿಗದಿಪಡಿಸಲಾಗಿರುವ ಶೇಕಡ ೧೨ರ ಬ್ಯಾಂಕ್ ಬಡ್ಡಿದರ ಅತಿ ಹೆಚ್ಚು ಮೂಲಧನ ಮತ್ತು ಬಡ್ಡಿ ಸೇರಿ ಕಟ್ಟಬೇಕಾದ ಹಣ ಸಾಮಾನ್ಯ ಜನರ ಸಾಮರ್ಥ್ಯವನ್ನು ಮೀರಿದ್ದು.
- ಬಡ ರೈತರು ಹೊತ್ತು ಹೊತ್ತಿಗೆ ಜೀವನ ಸಾಗಿಸುವಂಥ ಸ್ಥಿತಿಯಲ್ಲಿದ್ದಾರೆ. ತಾವು ಹೂಡಿದ ಬಂಡವಾಳ ತಕ್ಷಣ ಫಲತಂದು ಕೊಡದಿದ್ದರೆ ಅಂಥ ಸಂದರ್ಭದಲ್ಲಿ ಅವರಲ್ಲಿ ಉಂಟಾಗುವ ನಿರಾಸೆ ಕೆರೆಗಳ ಹೂಳೆತ್ತುವಂಥ ಕಾರ್ಯಕ್ರಮಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ.
- ಯಾವುದೇ ಯೋಜನೆಯ ವೆಚ್ಚದ ಪಾಲುದಾರಿಕೆ ಪ್ರಯೋಗ ನಡೆಸುವ ಕನಿಷ್ಠ ಒಂದು ವರ್ಷ ಮೊದಲು ರೈತರನ್ನು ಮಾನಸಿಕವಾಗಿ ಸಿದ್ಧಪಡಿಸುವ ಅಗತ್ಯವಿತ್ತು.

**ತೀರ್ಮಾನಗಳು**

ಕೆರೆಗಳ ಹೂಳೆತ್ತುವುದರಿಂದ ಅಚ್ಚುಕಟ್ಟು ಪ್ರದೇಶದ ರೈತರಿಗಷ್ಟೇ ಅನುಕೂಲವಾಗುವುದಿಲ್ಲ ಒಟ್ಟಾರೆ ಅವರಿಂದ ಪರಿಸರ ಸಂರಕ್ಷಣೆಯಾಗುತ್ತದೆ. ಕೆರೆಗಳು ಹವಾಮಾನದ ಮೇಲೆ ಪರಿಣಾಮ ಬೀರುತ್ತವೆ. ಆ ಪ್ರದೇಶದಲ್ಲಿ ಫಲಪುಷ್ಪಗಳು ಬೆಳೆದು ಅನುಕೂಲ ಮಾಡುವವು. ವಲಸೆ ಹಕ್ಕಿ ಪಕ್ಷಿಗಳು ನೆಲೆಯೂರಲು ಕೆರೆಗಳು ಅನುಕೂಲ ಕಲ್ಪಿಸುವವು. ಕೆರೆಗಳು ನಮ್ಮ ಆರ್ಥಿಕ ಮತ್ತು ಸಾಮಾಜಿಕ ಸ್ವರೂಪದ ಅಂಗಗಳು. ಕೊಳವೆ ಬಾವಿಗಳನ್ನು ತೋಡಿಸಲು ಶಕ್ತಿಯಿಲ್ಲದ ನಮ್ಮ ಬಡ ರೈತರಿಗೆ ಕೆರೆಗಳೇ ಆಧಾರ. ಕೆರೆಗಳ ಮೇಲಿನ ಅವರ ಅವಲಂಬನೆ ಪರೋಕ್ಷವಾಗಿ ಜಲಸಂಪನ್ಮೂಲದ ಸಂರಕ್ಷಣೆ. ಆದ್ದರಿಂದಲೇ ಪರಿಸರ ರಕ್ಷಣೆಯ ಚಟುವಟಿಕೆಯಾಗಿ ಕೆರೆಗಳ ಹೂಳೆತ್ತುವುದನ್ನು ಪ್ರೋತ್ಸಾಹಿಸಬೇಕು. ಸರ್ಕಾರವೇ ಅದರ ಪೂರ್ಣವೆಚ್ಚವನ್ನು ಭರಿಸಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಅಸಾಂಪ್ರದಾಯಿಕ ಇಂಧನ ಕ್ಷೇತ್ರಕ್ಕೆ

ಪ್ರೋತ್ಸಾಹ ನೀಡಿದ ರೀತಿಯಲ್ಲಿ ಬಡ್ಡಿರಹಿತ ಸಾಲ ಮತ್ತು ಭಾರಿ ಪ್ರಮಾಣದ ಸಬ್ಸಿಡಿ ನೀಡಿ ಸರ್ಕಾರ ಕೆರೆ ಹೂಳೆತ್ತುವ ಕಾರ್ಯಕ್ರಮಕ್ಕೆ ಉತ್ತೇಜನ ನೀಡಬೇಕು. ಕೆರೆಗಳ ಬಳಕೆದಾರರ ಸಾಮಾಜಿಕ -ಆರ್ಥಿಕ ಪರಿಸ್ಥಿತಿ ದುರ್ಬಲವಾಗಿರುವುದರಿಂದ ಮತ್ತು ಅವರಿಗೆ ಆರ್ಥಿಕ ಮತ್ತು ರಾಜಕೀಯ ಶಕ್ತಿ ಇಲ್ಲದಿರುವುದರಿಂದ ಸರ್ಕಾರ ಕೆರೆಗಳನ್ನು ನಿರ್ಲಕ್ಷಿಸುತ್ತಿದೆ ಎನ್ನಿಸುತ್ತದೆ.

ಈ ಹಿನ್ನೆಲೆಯಲ್ಲಿ ಕೆರೆಗಳ ಹೂಳೆತ್ತುವುದರಿಂದ ಲಾಭ ಪಡೆಯುವ ರೈತರು ಅಂಥ ಚಟುವಟಿಕೆಯ ವೆಚ್ಚವನ್ನು ಬಹುಪಾಲು ಭರಿಸಬೇಕೆಂದು ಅಪೇಕ್ಷಿಸುವುದು ಸರಿಯಾದುದಲ್ಲ. ಅಷ್ಟೇ ಅಲ್ಲ ಅವಾಸ್ತವಿಕ ಕೂಡ. ೧೩ ಕೆರೆಗಳ ಹೂಳೆತ್ತಿನ ಅನುಭವವನ್ನು ಗ್ರಾಮವಿಕಾಸ ಪಡೆದಿದೆ. ವಿವಿಧ ರೀತಿಯಲ್ಲಿ ಹಣಕಾಸು ತೊಡಗಿಸಿದ ಪ್ರಯೋಗಗಳನ್ನು ಈ ದಿಸೆಯಲ್ಲಿ ಮಾಡಲಾಗಿದೆ. ಈ ಕೆರೆ ಹೂಳೆತ್ತುವ ಚಟುವಟಿಕೆಯಿಂದ ಅನುಕೂಲ ಪಡೆಯುವ ರೈತರಿಂದ ಹೆಚ್ಚು ನಿರೀಕ್ಷಿಸಲಾಗುವುದಿಲ್ಲ. ಒಟ್ಟು ವೆಚ್ಚದ ಶೇಕಡ ೧೦ರಷ್ಟಕ್ಕಿಂತ ಹೆಚ್ಚು ಹಣವನ್ನು ಅವರು ಭರಿಸಲಾರರು.

ಗ್ರಾಮವಿಕಾಸ ಕೆರೆ ಹೂಳೆತ್ತುವ ಯೋಜನೆಗಳನ್ನು ಆರಂಭಿಸಿತು. ಅವು ಕೆರೆ ಆಧುನೀಕರಣ ಯೋಜನೆಗಳಲ್ಲ. ಕೆರೆ ತನಗೆ ತಾನೇ ಸಂಪೂರ್ಣ ಇಲ್ಲ. ಅದೊಂದು ವ್ಯವಸ್ಥೆ. ಕೆರೆಗೆ ಜಲಾನಯನ ಪ್ರದೇಶ ಇರುತ್ತದೆ. ನೀರು ಪೂರೈಕೆ ವ್ಯವಸ್ಥೆ, ಕಾಲುವೆ, ಕಟ್ಟೆ, ನಿರುಪಯುಕ್ತ ಒಡ್ಡುಗಳು ಮತ್ತು ನೀರಾವರಿ ಪ್ರದೇಶಗಳು ಕೆರೆಗಳ ಭಾಗಗಳು. ಕೆರೆಗಳು ಸಂಪೂರ್ಣವಾಗಿ ಉಪಯೋಗಕ್ಕೆ ಬರಬೇಕಾದರೆ ಇಡೀ ವ್ಯವಸ್ಥೆಯನ್ನು ಆಧುನೀಕರಿಸಬೇಕು. ೨೦ ರಿಂದ ೨೫ಹೆಕ್ಟೇರ್ ಗಳಷ್ಟು ಅಚ್ಚುಕಟ್ಟು ಪ್ರದೇಶವುಳ್ಳ ಮಧ್ಯಮ ಪ್ರಮಾಣದ ಒಂದು ಕೆರೆಯನ್ನು ಕನಿಷ್ಠ ನಿರ್ವಹಣೆಯ ಮೂಲಕ ಅರ್ಧಶತಮಾನದಷ್ಟು ಕಾಲ ಉಳಿಯಬೇಕಾದರೆ ಅದರ ಆಧುನೀಕರಣಕ್ಕೆ ಸರಾಸರಿ ಸುಮಾರು ೨೫ಲಕ್ಷ ರೂ. ವೆಚ್ಚವಾಗಬಹುದು.

ಗ್ರಾಮವಿಕಾಸ ಕೈಗೆತ್ತಿಕೊಂಡ ಕೆರೆ ಹೂಳೆತ್ತುವ ಯೋಜನೆಗಳಲ್ಲಿ ಸಾಲ ಮರುಪಾವತಿಗೆ ನೀಡಲಾದ/ವಸೂಲಾತಿಗೆ ನೀಡಲಾದ ಎರಡು ವರ್ಷದ ಅವಧಿ ತೀರ ಕಡಿಮೆ. ಕನಿಷ್ಠ ೫ ವರ್ಷಗಳಾದರೂ ನೀಡುವುದು ಹೆಚ್ಚು ವಾಸ್ತವ. ಹೂಳೆತ್ತಿದ ಕೆರೆಗಳಿಂದ ರೈತರಿಗೆ ಲಾಭ ಬರಬೇಕಾದರೆ ಉತ್ತಮ ಮಳೆಯಾಗಬೇಕು. ಕೆರೆಗಳು ತುಂಬಬೇಕು. ಮಳೆ ಬರುವಲ್ಲಿ ವಿಳಂಬವಾದರೆ ಅಂಥ ಯೋಜನೆಯ ಲಾಭಗಳು ರೈತರಿಗೆ ಸಿಗುವಲ್ಲಿಯೂ ವಿಳಂಬವಾಗುತ್ತವೆ. ಜೊತೆಗೆ ಯೋಜನೆಯ ವೆಚ್ಚವನ್ನು ಭರಿಸಬೇಕಾದರೆ ಅದು ಅವರಿಗೆ ಹೆಚ್ಚುವರಿ ಹೊರೆಯಾಗುತ್ತದೆ.

**ಆರ್ಥಿಕ ಸಾಧ್ಯತೆಗಳು**

ರಾಜ್ಯದಲ್ಲಿ ಕೆರೆಗಳ ಹೂಳೆತ್ತುವ ಅಥವಾ ಮರುಸಂವರ್ಧನೆ ಕುರಿತಂತೆ ದೊಡ್ಡ ಪ್ರಶ್ನೆಯೇ ಎದ್ದಿದೆ. ಅದು ಅಷ್ಟು ಲಾಭದಾಯಕವಲ್ಲವೆಂದು ಹೇಳಲಾಗುತ್ತಿದೆ. ಈ ವಾದವನ್ನು ಹೀಗೆ ಅರ್ಥೈಸಬಹುದು.

- ಬಹಳ ಕೆರೆಗಳು ಹೂಳಿನಿಂದ ತುಂಬಿದ್ದು, ಹೂಳು ತೆಗೆಯುವ ಸ್ಥಿತಿಯಲ್ಲಿ ಇಲ್ಲ.
- ಹೂಳು ತೆಗೆಯುವ ಕಾರ್ಯಕ್ರಮದ ಹಣಕಾಸು ವೆಚ್ಚವನ್ನು ಭರಿಸುವಷ್ಟು ಸಾಮರ್ಥ್ಯ ಸರ್ಕಾರಕ್ಕೆ ಇಲ್ಲ.
- ಕೆರೆಗಳ ಹೂಳೆತ್ತುವುದರಿಂದ ಬರಬಹುದಾದ ಲಾಭ ಮಾಡಿದ ಖರ್ಚನ್ನು ಸಮರ್ಥಿಸುವುದಿಲ್ಲ.

ಈ ವಾದಗಳ ಹುರುಳಿಲ್ಲ. ರಾಜ್ಯದ ಬಹು ಜನರಿಗೆ ಅನುಕೂಲವಾಗಿರುವ ಕೆರೆಗಳ ಹೂಳೆತ್ತುವ ಕಾರ್ಯಕ್ರಮ ಹಾಕಿಕೊಳ್ಳದೆ ಸರ್ಕಾರ ಕಾವೇರಿ, ಕೃಷ್ಣ ಹಾಗೂ ತುಂಬಭದ್ರಾದಂಥ ಮೂರು ಮುಖ್ಯ ನೀರಾವರಿ ಯೋಜನೆಗಳ ಬಗ್ಗೆ ತನ್ನ ಎಲ್ಲಗಮನವನ್ನು ಕೇಂದ್ರೀಕರಿಸಿದೆ. ಇದರಿಂದಾಗಿ ಕೆರೆಗಳನ್ನು ಅವಲಂಬಿಸಿರುವ ಒಣ ಭೂಮಿ ಕೃಷಿವಲಯ ಲಾಭದಾಯಕವಾಗಿ ಕಂಡಿಲ್ಲ. ಇದರಿಂದಾಗಿ ಲಕ್ಷಾಂತರ ಬಡಜನರ ಆಹಾರ ಭದ್ರತೆ ಇಕ್ಕಟ್ಟಿಗೆ ಒಳಗಾಗಿದೆ.

ಒಂದು ಉತ್ತಮ ಹಾಗೂ ಸ್ವಾಗತಾರ್ಹ ಬೆಳವಣಿಗೆಯಲ್ಲಿ ಪ್ರಸಕ್ತ ಕರ್ನಾಟಕ ಸರ್ಕಾರ ಕೆರೆ ಹೂಳೆತ್ತುವ ಕಾರ್ಯಕ್ರಮವನ್ನು ತನ್ನ ಆದ್ಯತಾ ಪಟ್ಟಿಯಲ್ಲಿ ಸೇರಿಸಿದೆ. ಆದರೂ ಕೆರೆಗಳ ಮರುಸಂವರ್ಧನೆಯಿಂದಾಗುವ ಆರ್ಥಿಕ ಲಾಭದ ಬಗ್ಗೆ ಸರ್ಕಾರ ಸರಿಯಾಗಿ ಅರಿತುಕೊಂಡಂತೆ ಕಾಣುತ್ತಿಲ್ಲ. ಅದರ ದೃಷ್ಟಿಯಲ್ಲೇ ದೋಷವಿದ್ದಂತೆ ಕಾಣುತ್ತಿದೆ. ಕೆರೆಗಳ ವ್ಯವಸ್ಥೆಯನ್ನು ಸುಧಾರಿಸುವುದರಿಂದ ಕೃಷಿ ಉತ್ಪಾದನೆ ಹೆಚ್ಚುತ್ತದೆ. ಅಷ್ಟೇ ಅಲ್ಲ, ಪರಿಸರ ಒಣಭೂಮಿ ಪ್ರದೇಶಗಳಲ್ಲಿನ ಜೀವನ ಸುಧಾರಿಸುತ್ತದೆ ಎನ್ನುವುದನ್ನು ಸರ್ಕಾರ ಗಮನಿಸಬೇಕು.

ಕೆರೆಗಳ ಸಮಗ್ರ ರಕ್ಷಣೆ ಆರ್ಥಿಕವಾಗಿ ಅನುಕೂಲಕರ. ಇಂಥ ಯೋಜನೆಗಳ ವೆಚ್ಚ ಮತ್ತು ಲಾಭದ ಪ್ರಮಾಣ (ಡಿಬಿಸಿಆರ್) ಸುಮಾರು ೧.೭ ಲಾಭದ ಪ್ರಮಾಣ ಜಾಸ್ತಿಯಿರುವುದರಿಂದ ಕೆರೆಗಳ ಹೂಳೆತ್ತುವ ಕಾರ್ಯ ಲಾಭದಾಯಕ. ಎಂಥ ಪರಿಸ್ಥಿತಿಯಲ್ಲಿಯೂ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾದ ಅಗತ್ಯವಿದೆ.

**ವೆಚ್ಚ ನಿಯಂತ್ರಣ**

- ಯಂತ್ರಗಳ ಬದಲಾಗಿ ಮಾವನ ಶ್ರಮ ಆಧಾರಿತ ಕೆರೆ ಆಧಾರಿತ ಕೆರೆ ಹೂಳೆತ್ತುವ ಯೋಜನೆಗಳನ್ನು ರೂಪಿಸಿದರೆ ಯಂತ್ರಗಳ ಮೇಲೆ ವೆಚ್ಚತಗಲುವುದಿಲ್ಲ.
- ಶ್ರಮ ಆಧಾರಿತ ಕೆಲಸ ವಿಳಂಬ, ತಡೆ, ಇಂಧನ ಅಗತ್ಯ, ಯಂತ್ರಗಳಿಂದ ಆಗಬಹುದಾದ ಪರಿಸರ ಮಾಲಿನ್ಯವನ್ನು ತಡೆಯಬಹುದು.
- ಯಂತ್ರಗಳ ಮೂಲಕ ಕೆರೆ ಹೂಳೆತ್ತಿದರೆ ತಗಲುವ ವೆಚ್ಚಕ್ಕೆ ಹೋಲಿಸಿದರೆ ಶ್ರಮಿಕರಿಂದ ಮಾಡುವ ಕಾರ್ಯದ ವೆಚ್ಚ ಸ್ವಲ್ಪ ಹೆಚ್ಚಾಗಬಹುದು. ಹಾಗೆಯೇ ಶ್ರಮಿಕರ ದುಡಿಮೆಯ ನಿರ್ವಹಣಾ ವೆಚ್ಚ ಸ್ವಲ್ಪ ಹೆಚ್ಚಾಗಬಹುದಷ್ಟೆ.

**ಸಾಮಾಜಿಕವಾಗಿ ಆಗಬಹುದಾದ ಲಾಭದ ವಿಶ್ಲೇಷಣೆ**

- ಕುಟುಂಬಗಳ ಆದಾಯ ಹೆಚ್ಚುವುದರಿಂದ ಜೀವನದ ಗುಣಮಟ್ಟ ಸುಧಾರಿಸುತ್ತದೆ.
- ಮಹಿಳೆಯರು ಈ ಯೋಜನೆಗಳ ಜಾರಿಯಲ್ಲಿ ಮುಖ್ಯ ಪಾತ್ರ ವಹಿಸುವುದರಿಂದ ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಅವರು ಸಬಲಗೊಳ್ಳುತ್ತಾರೆ.
- ಕೆರೆಗಳ ಹೂಳೆತ್ತುವುದರಿಂದ ಸಾಮಾಜಿಕವಾಗಿ ಹಿಂದುಳಿದ, ದಲಿತರಂಥ ವರ್ಗಗಳು ಅನುಕೂಲ ಪಡೆಯುತ್ತವೆ. (ಉದಾಹರಣೆಗೆ ಪೂರ್ವದ ಒಣ ಕೃಷಿ ಪ್ರದೇಶವನ್ನು ನೋಡಬಹುದು) ಈ ಯೋಜನೆಗಳನ್ನು ಅವರ ಆದಾಯ ಮೂಲವನ್ನು ಸುಧಾರಿಸುವ, ಅವರಲ್ಲಿ ಅರಿವು ಮೂಡಿಸುವ ಮತ್ತು ಅವರ ಜೀವನದ ಗುಣಮಟ್ಟ ಸುಧಾರಿಸುವ ಉದ್ದೇಶದಿಂದ ರೂಪಿಸಲಾಗಿದೆ.

ನೆಲದ ಫಲವಂತಿಕೆ ಸುಧಾರಿಸುತ್ತದೆ, ನೀರಿನ ಲಭ್ಯತೆ ಜಾಸ್ತಿಯಾಗುವುದರಿಂದ ಬಡ ಮತ್ತು ಶ್ರಮಿಕ ವರ್ಗದವರು ತಮ್ಮ ಜಮೀನುಗಳನ್ನು ಹಾಗೆಯೇ ಬಿಡುವುದಿಲ್ಲ. ಕೃಷಿ ಕ್ಷೇತ್ರ ಕ್ರಮೇಣ ಆರ್ಥಿಕವಾಗಿ ಲಾಭದಾಯಕವಲ್ಲವಾಗಿ ಪರಿಣಮಿಸಿರುವುದರಿಂದ ಅವರು ತಮ್ಮ ಜಮೀನನ್ನು ಉತ್ಪಾದನೆಗೆ ಬಳಸದೇ ಇರುವ ಸಾಧ್ಯತೆಗಳು ಕೆರೆಗಳ ಹೂಳೆತ್ತುವುದರಿಂದ ಕಡಿಮೆಯಾಗುತ್ತದೆ.

- ಬರಗಾಲದಲ್ಲಿ ತಮ್ಮ ಆಸ್ತಿ ಪಾಸ್ತಿ ಮಾರಿ ನಗರಗಳಿಗೆ ಬಡ ರೈತರು ಹಾಗೂ ಕಾರ್ಮಿಕರು ವಲಸೆ ಬರುವುದು ನಿಲ್ಲುತ್ತದೆ. ವಲಸೆ ಜನರಿಂದ ಬರಬಹುದಾದ ಹೆಚ್.ಐ.ವಿ., ಏಡ್ಸ್, ಮತ್ತಿತರ ರೋಗಗಳು ಹರಡುವುದನ್ನು ತಡೆಯಬಹುದು. ವಲಸೆ ಜನರ ಮಕ್ಕಳ

ವಿದ್ಯಾಭ್ಯಾಸ ಕುಂಠಿತವಾಗುತ್ತದೆ, ಗ್ರಾಮ ಮಟ್ಟದಲ್ಲಿಯೇ ಅನುಕೂಲ ಸೃಷ್ಟಿ ಮಾಡುವುದರಿಂದ ಮಕ್ಕಳು ಹಳ್ಳಿಗಳಲ್ಲಿಯೇ ಉಳಿದು ಶಿಕ್ಷಣ ಮುಂದುವರಿಯಲು ಸಾಧ್ಯವಾಗುತ್ತದೆ.

- ಇಂಥ ಯೋಜನೆಗಳ ಜಾರಿಯಿಂದ ಸಮುದಾಯ ಸಂಘಟನೆಗಳು ಬಲಗೊಳ್ಳುತ್ತವೆ.
- ಕುಟುಂಬಗಳ ಆದಾಯ ಹೆಚ್ಚುವುದರಿಂದ ಸಾಕ್ಷರತೆ ಪ್ರಮಾಣ ಹೆಚ್ಚುತ್ತದೆ. ಶಾಲೆ ಬಿಡುವ ಮಕ್ಕಳ ಸಂಖ್ಯೆ ತಗ್ಗುತ್ತದೆ.
- ಕುಟುಂಬಗಳ ಆದಾಯ ಮೂಲ ಹೆಚ್ಚುವುದರಿಂದ ಅವರು ಸೇವಿಸುವ ಆಹಾರದ ಪೌಷ್ಟಿಕಾಂಶದ ಮಟ್ಟವೂ ಹೆಚ್ಚುತ್ತದೆ. ಆರೋಗ್ಯ ಮತ್ತು ಸ್ವಚ್ಛತೆಯ ಪ್ರಮಾಣವೂ ವೃದ್ಧಿಸುತ್ತದೆ.
- ಮಾನವ ಅಭಿವೃದ್ಧಿ ಸೂಚ್ಯಾಂಕಗಳು ಏರುವುದನ್ನು ಕಾಣಬಹುದು.
- ಯೋಜನೆಗಳನ್ನು ರೂಪಿಸುವುದರಲ್ಲಿ ಮತ್ತು ಜಾರಿಯಲ್ಲಿದೆ ಮತ್ತು ಅವುಗಳ ಮೇಲುಸ್ತುವಾರಿ ಹಾಗೂ ಮೌಲ್ಯಮಾಪನದಲ್ಲಿ ಸಮುದಾಯ ಭಾಗವಹಿಸುವಂತಾಗುತ್ತದೆ.
- ಕೆರೆ ಹೂಳೆತ್ತುವ ಯೋಜನೆ ಜಾರಿಯಿಂದ ಪರಿಸರ ಪ್ರೇಮಿ ಅಭಿವೃದ್ಧಿ ಕಾರ್ಯಗಳನ್ನು ಆರಂಭಿಸಲು ಹಾಗೂ ಭೂಮಿ ಮತ್ತು ನೀರಿನ ಸಂಪನ್ಮೂಲ ಹೆಚ್ಚಿದಂತಾಗುತ್ತದೆ.
- ಬಡತನ, ಸಾಮಾಜಿಕ ತುಳಿತಕ್ಕೆ ಒಳಗಾಗಿರುವ ಮಹಿಳೆಯರಿಗೆ ಈ ಯೋಜನೆಗಳಲ್ಲಿ ಮುಂಚೂಣಿ ಸ್ಥಾನ ನೀಡುವುದರಿಂದ ಲಿಂಗಭೇದ ಹೋಗುತ್ತದೆ.
- ಪರಿಸರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಈ ಯೋಜನೆಗಳು ನೆರವಾಗುತ್ತವೆ. ಸಮುದಾಯ ಆಧಾರಿತ ಭೂಮಿ ಮತ್ತು ನೀರಿನ ನಿರ್ವಹಣೆ ಅಗತ್ಯವನ್ನು ಒತ್ತಿ ಹೇಳುವಂತಾಗುತ್ತದೆ.
- ಈ ಯೋಜನೆಗಳಿಗೆ ಸಾಂಪ್ರದಾಯಿಕ ಮುಖವೂ ಇದೆ. ಜನರಿಗೆ, ದನಕರುಗಳಿಗೆ ನೀರು ಒದಗಿಸುತ್ತದೆ. ಹಕ್ಕಿಗಳಿಗೆ ನಿಸರ್ಗಧಾಮ, ಕಟ್ಟಡ ನಿರ್ಮಾಣಕ್ಕೆ ಮರಗಳನ್ನು ಈ ಯೋಜನೆ ಒದಗಿಸುತ್ತದೆ.
- ಕೆರೆ ಹೂಳೆತ್ತುವ ಯೋಜನೆ ಜಾರಿಯಿಂದ ಮಳೆ ಆಧಾರಿತ ಪ್ರದೇಶದಲ್ಲಿಯೂ ಮಳೆಯಿಲ್ಲದ ಕಾಲದಲ್ಲಿ ಕೃಷಿ ಉತ್ಪಾದನೆ ಸ್ಥಿರಗೊಳ್ಳಲು ನೆರವಾಗುತ್ತದೆ.
- ಹೂಳಿನ ಕೈಗಾರಿಕಾ ಬಳಕೆ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಗಳನ್ನು ಸೃಷ್ಟಿಸುತ್ತದೆ.
- ಕೆರೆ ಸಂರಕ್ಷಣೆಯ ಸಮಗ್ರ ಯೋಜನೆ ಪರಿಸರ ಸಮತೋಲನ ಹಾಳು ಮಾಡದೆ ಜಿಲ್ಲೆಯ ಕೃಷಿ ಆಧಾರಿತ ಕೈಗಾರಿಕೆಗಳ ಉತ್ಪಾದನಾ ಪ್ರಮಾಣವನ್ನು ಹೆಚ್ಚಿಸುತ್ತದೆ.

(೩)

**ಕೆರೆ ಪದ್ಧತಿ ರಕ್ಷಣೆ ಯೋಜನೆ: ಮಾದರಿ ಬಜೆಟ್**

| ಕ್ರ. ಸಂ. | ಚಟುವಟಿಕೆ | ಘಟಕ ಒಟ್ಟು ಅಂದಾಜು ವೆಚ್ಚ | ಹಣ ರೂ.ಗಳಲ್ಲಿ |
|---|---|---|---|
| ೧. | ಕೆರೆ ಹೂಳೆತ್ತುವುದು (ಹೂಳು ತೆಗೆದು ಹೂಳನ್ನು ಜಮೀನುಗಳಿಗೆ ಸಾಗಿಸುವುದು) | ೩೦೦೦೦ಸಿಎಂಟಿ ಹೂಳನ್ನು ತೆಗೆದು ಸಾಗಿಸುವುದು ಪ್ರತಿ ಸಿಎಂಟಿಗೆ ರೂ.೫೦ರಂತೆ. | ೧೫,೦೦,೦೦೦ |
| ೨ | ಭೂಮಿಯ ಸಂರಕ್ಷಣೆ | ಪ್ರತಿ ಎಕರೆಗೆ ರೂ. ೫೦೦ರಂತೆ ೨೫೦ ಎಕರೆಗೆ | ೧,೨೫,೦೦೦ |

| | | | |
|---|---|---|---|
| ೩ | ಅಣೆಕಟ್ಟೆಯನ್ನು ಭದ್ರಗೊಳಿಸುವುದು | ೨೯೦೦ ಮಾನವ ದಿನಗಳು ಪ್ರತಿ ಮಾನವ ದಿನಕ್ಕೆ ರೂ.೩೫೦ರಂತೆ | ೧,೦೧,೫೦೦ |
| ೪. | ಮಣ್ಣಿನ ಕೊರೆತ ತಪ್ಪಿಸಲು ಅಡ್ಡಕಟ್ಟೆ ಹಾಗೂ ಬಿರುಕುಗಳನ್ನು ಮುಚ್ಚುವುದು | ೪ ಘಟಕಗಳು ಪ್ರತಿಯೊಂದಕ್ಕೆ ರೂ.೭೫,೦೦೦ರಂತೆ | ೧,೨೫,೦೦೦ |
| ೫. | ಕೃಷಿ ಅರಣ್ಯೀಕರಣ | ೧೨,೫೦೦ ಸಸಿಗಳನ್ನು ಅಚ್ಚುಕಟ್ಟು ಪ್ರದೇಶದಲ್ಲಿ ನೆಡುವುದು ಸಸಿಗೆ ರೂ.೧೦ರಂತೆ | |
| ೬. | ಮೇವು ಅಭಿವೃದ್ಧಿ(ಮರಗಳಿಂದ) | ೨೫೦೦ ಸಸಿ ರೂ.೧೦ ರಂತೆ | ೨೫,೦೦೦ |
| ೭. | ನಿರುಪಯುಕ್ತ ಅಡ್ಡಕಟ್ಟೆಗಳ ಕಾಲುವೆ ರಿಪೇರಿ | ೨೯೦೦ ಮಾನವದಿನ ರೂ.೩೫ರಂತೆ | ೨೫,೦೦೦ |
| ೮. | ಅಚ್ಚುಕಟ್ಟು ಪ್ರದೇಶದಲ್ಲಿ ನಾಲೆಗಳ ದುರಸ್ತಿ | – | – |
| ೯. | ಮೀನುಗಾರಿಕೆ ಮೀನು ಮಾರಿ/ಬಲೆ/ಆಹಾರ/ಭದ್ರತೆ | – | ೨೫,೦೦೦ |
| ಒಟ್ಟು | | | ೨೩,೫೦,೦೦೦ |

೨. ನೀರಿನ ಹರಹು ೨೨ ಎಕರೆ ೩೦.೧೫ ಎಕರೆ ಅಚ್ಚುಕಟ್ಟು ಪ್ರದೇಶ. ೨೫೦ ಎಕರೆ ಜಲಾನಯನ ಪ್ರದೇಶ. ೧೩ ಕೆರೆಗಳ ಭಾಗಶಃ ಹೂಳೆತ್ತುವ ಗ್ರಾಮವಿಕಾಸದ ಅನುಭವ ಆಧಾರದ ಮೇಲೆ ಜೊತೆಗೆ ಮುಳಬಾಗಿಲು ತಾಲೂಕಿನ ಒಂದು ಸಾಮಾನ್ಯ ಮಟ್ಟದ ಕೆರೆಯ ಹೂಳೆತ್ತಿದ ಅನುಭವ.

೩. ಒಂದೇ ಒಂದು ಕೆರೆಯಲ್ಲಿ ಮಾತ್ರ ಮೀನು ಅಭಿವೃದ್ಧಿ ಪಡಿಸಿರುವುದರಿಂದ ವಿವರ ಲೆಕ್ಕ ಹಾಕಿಲ್ಲ.

೪. ಆಡಳಿತ/ಹೆಚ್ಚುವರಿ ಖರ್ಚು/ಜಾರಿ ಖರ್ಚು ಶೇಕಡ ೧೫ ಇದರಲ್ಲಿ ಸೇರಿಲ್ಲ.

**ಕೆರೆ ಹೂಳೆತ್ತುವ ಕಾರ್ಯದಲ್ಲಿ ಎತ್ತಿನ ಬಂಡಿಗಳ ಬಳಕೆ**

ಗ್ರಾಮವಿಕಾಸ ತನ್ನ ಕೆರೆ ಹೂಳೆತ್ತುವ ಕಾರ್ಯಕ್ರಮದಲ್ಲಿ ಯಂತ್ರಗಳನ್ನು ಬಳಸದಿರುವ ನಿರ್ಧಾರ ತೆಗೆದುಕೊಂಡಿತು. ಕೆರೆಗಳ ಹೂಳನ್ನು ಸಾಗಿಸಲು ಯಂತ್ರಗಳನ್ನು ಬಳಸದೆ ಬೇರೆ ಮೂಲಗಳನ್ನು ಬಳಸಿಕೊಳ್ಳಲಾಯಿತು. ಪರಿಸರ ಸ್ನೇಹಿ ಮಾರ್ಗವನ್ನು ಅನುಸರಿಸಿ ಎತ್ತಿನ ಬಂಡಿಗಳನ್ನು ಹೂಳು ಸಾಗಿಸುವ ಕಾರ್ಯಕ್ಕೆ ಬಳಸಲಾಯಿತು. ಟ್ರಾಕ್ಟರುಗಳು ಡೀಸೆಲ್ ಸುಡುತ್ತದೆ. ಪರಿಸರ ಮಾಲಿನ್ಯ ಮಾಡುತ್ತವೆ. ಆದರೆ ಎತ್ತಿನ ಗಾಡಿಗಳು ಪರಿಸರ ನೈರ್ಮಲ್ಯ ಹಾಳು ಮಾಡುವುದಿಲ್ಲ. ಎತ್ತುಗಳು ಕೃಷಿಗೆ ಬೇಕಾದ ಪರಿಸರ ಸ್ನೇಹಿ ಗೊಬ್ಬರವನ್ನು ಒದಗಿಸುತ್ತವೆ.

ಸರ್ಕಾರಗಳ ನೀತಿಗಳು ಎತ್ತಿನ ಗಾಡಿಗಳು ಬಳಕೆಯನ್ನು ವ್ಯವಸ್ಥಿತವಾಗಿ ನಾಶಮಾಡಿವೆ. ಸರ್ಕಾರ ಹಾಗೂ ಆರ್ಥಿಕ ನೆರವು ಸಂಸ್ಥೆಗಳು ಟ್ರಾಕ್ಟರ್ ಬಳಕೆಯನ್ನೇ ಪ್ರೋತ್ಸಾಹಿಸುತ್ತಾ ಬಂದಿವೆ. ಟ್ರಾಕ್ಟರ್ ಕೊಳ್ಳುವವರಿಗೆ ಸಬ್ಸಿಡಿಯನ್ನು ನೀಡಲಾಗುತ್ತಿದೆ. ಎತ್ತಿನ ಗಾಡಿಗಳ ಅವಸಾನದ ದಾರಿಯ ನೇತೃತ್ವವನ್ನು ಟ್ರಾಕ್ಟರುಗಳು ವಹಿಸಿವೆ. ಆದ್ದರಿಂದಲೇ ಗ್ರಾಮವಿಕಾಸ ತನ್ನ ಯೋಜನೆಯಲ್ಲಿ ಪರಿಸರ ಪ್ರೇಮಿ ಎತ್ತಿನ ಗಾಡಿಗಳನ್ನು ಬಳಸಿಕೊಳ್ಳುತ್ತ ಬಂದಿದೆ.

ಕೋಲಾರ ಜಿಲ್ಲೆಯ ಒಂದು ಗ್ರಾಮೀಣ ಬ್ಯಾಂಕಿನ ಶಾಖೆಯನ್ನು ನಿದರ್ಶನವಾಗಿ ನೋಡಬಹುದು. ಈ ಬ್ಯಾಂಕಿ ಎತ್ತಿನ ಗಾಡಿಕೊಳ್ಳಲು ಸಾಲವನ್ನು ಹಲವು ವರ್ಷಗಳ ಹಿಂದೆ ಕೊಟ್ಟಿತ್ತು. ಆದರೆ ಕಳೆದ ೩ ವರ್ಷಗಳಲ್ಲಿ (೧೯೯೮ ರಿಂದ ೨೦೦೧) ತನ್ನ ವಿವಿಧ ಶಾಖೆಗಳ ಮೂಲಕ

೩೧,೯೯,೦೦೦ರೂ. ಗಳನ್ನು ಟ್ರಾಕ್ಟರ್ ಕೊಳ್ಳಲು ಸಾಲವಾಗಿ ನೀಡಿದೆ. ಆದರೆ ಎತ್ತಿನ ಗಾಡಿಯನ್ನು ಕೊಳ್ಳಲು ಒಂದು ರೂಪಾಯಿಯನ್ನೂ ಸಾಲವಾಗಿ ನೀಡಿಲ್ಲ. ಯಾವುದೇ ಕೆರೆ ಹೂಳೆತ್ತುವ ಯೋಜನೆ ಶ್ರಮಿಕ ಆಧಾರಿತವಾಗಿರಬೇಕೆ ಹೊರತು ತಂತ್ರಜ್ಞಾನ ಆಧಾರಿತವಾಗಿರಬಾರದು. ಒಂದು ರೀತಿಯಲ್ಲಿ ಕಾರ್ಮಿಕರು, ಎತ್ತಿನ ಗಾಡಿಗಳು, ಟ್ರಾಕ್ಟರುಗಳಂಥ ಯಂತ್ರಗಳನ್ನು ಎಲ್ಲಿ ಬೇಕೊ ಅಲ್ಲಿ ಬಳಸಬೇಕು. ಹೂಳು ಸಾಗಿಸಲು ಗರಿಷ್ಠ ಮಟ್ಟದಲ್ಲಿ ಎತ್ತಿನ ಗಾಡಿಗಳನ್ನು ಬಳಸಬೇಕು. ಗ್ರಾಮವಿಕಾಸ ತನ್ನ ಯೋಜನೆಯಲ್ಲಿ ಎತ್ತಿನ ಗಾಡಿಗಳನ್ನು ಯಶಸ್ವಿಯಾಗಿ ಬಳಸಿದೆ. ಎತ್ತಿನ ಗಾಡಿಗಳನ್ನು ಕೊಳ್ಳಲು ರೈತರಿಗೆ ಸಾಲ ನೀಡಿದೆ. ಹೂಳು ತೆಗೆಯುವ ಕಾರ್ಯ ಮುಗಿಯುವ ಮೊದಲೇ ಸಾಲ ಪಡೆದ ಬಹುಪಾಲು ಜನರು ಸಾಲವನ್ನು ಪೂರ್ಣವಾಗಿ ಹಿಂತಿರುಗಿಸಿದ ನಿದರ್ಶನಗಳಿವೆ. ಇದರಿಂದಾಗಿ ಎಷ್ಟೋ ಮಂದಿ ರೈತರ ಬಳಿ ತಮ್ಮದೇ ಸ್ವಂತ ಎತ್ತಿನ ಬಂಡಿಗಳಿವೆ. ಕೆರೆ ಹೂಳೆತ್ತುವ ಕಾರ್ಯಕ್ಕೆ ೧೬ ಮಂದಿ ರೈತರಿಗೆ ಎತ್ತಿನಗಾಡಿ ಕೊಳ್ಳಲು ಗ್ರಾಮವಿಕಾಸ ನೆರವು ನೀಡಿತ್ತು. ಎತ್ತಿನ ಗಾಡಿಗಳು ಸಣ್ಣರೈತನನ್ನು ಬಲಪಡಿಸುತ್ತವೆ. ಟ್ರಾಕ್ಟರ್ ಬಳಸುವುದರಿಂದ ಶ್ರೀಮಂತರಿಗೆ ಮಾತ್ರ ಅನುಕೂಲವಾಗುತ್ತದೆ. ಎತ್ತಿನ ಗಾಡಿಗಳಿಗೆ ಬದಲು ಈಗ ಟ್ರಾಕ್ಟರುಗಳೂ ಬಳಕೆಯಾಗುತ್ತಿರುವುದರಿಂದ ಸಣ್ಣ ರೈತರು ಟ್ರಾಕ್ಟರುಗಳು ಇರುವ ದೊಡ್ಡ ರೈತರನ್ನು ತಮ್ಮ ಕೃಷಿ ಚಟುವಟಿಕೆಗಳಿಗೆ ಅವಲಂಬಿಸಬೇಕಾಗಿ ಬಂದಿದೆ. ಎತ್ತಿನ ಗಾಡಿಗಳು ಈ ಅವಲಂಬನೆಯನ್ನು ಕಡಿಮೆ ಮಾಡುತ್ತವಲ್ಲದೆ ಉತ್ತಮ ಗೊಬ್ಬರವನ್ನು ರೈತನಿಗೆ ದೊರಕುವಂತೆ ಮಾಡುತ್ತವೆ. ರಸಗೊಬ್ಬರ ಕೊಳ್ಳಲು ಬಳಸುತ್ತಿದ್ದ ಹಣ ಉಳಿತಾಯವಾಗುತ್ತದೆ. ಸರ್ಕಾರದ ಯೋಜನೆಗಳ ಜಾರಿಯಲ್ಲಿ ಪರಿಸರ ಪ್ರೇಮಿ ವಿಧಾನ ಅನುಸರಿಸುವುದು ಕಾಣುವುದಿಲ್ಲ. ಟ್ರಾಕ್ಟರುಗಳ ಮೂಲಕ ವೇಗವಾಗಿ ಕೆಲಸ ಆಗಬಹುದು. ಆದರೆ ಪರಿಸರ ನೈರ್ಮಲ್ಯ ಹಾಳು ಮಾಡುತ್ತವೆ. ಕೆರೆ ಹೂಳೆತ್ತುವ ಮುಖ್ಯ ಉದ್ದೇಶವನ್ನೇ ಅವು ವಿಫಲಗೊಳಿಸುತ್ತವೆ. ಕೆರೆಗಳ ಹೂಳೆತ್ತುವ ಯೋಜನೆಗಳು ಪರಿಸರವನ್ನು ಸುಧಾರಿಸಬೇಕು.

**ಜನರ ಪಾತ್ರ – ಒಂದು ಅಧ್ಯಯನ**

**ಮಿಣಿಜೇನಹಳ್ಳಿ**

ಈ ಗ್ರಾಮ ಮುಳಬಾಗಲು ತಾಲ್ಲೂಕಿನ ಒಳ ಭಾಗದಲ್ಲಿದೆ. ಗ್ರಾಮದಲ್ಲಿ ಸುಮಾರು ೪೪೦ ಜನರಿದ್ದಾರೆ. ೮೫ ಕುಟುಂಬಗಳು ಅಲ್ಲಿವೆ. ಈ ಪೈಕಿ ೫೯ ಕುಟುಂಬಗಳು ಪರಿಶಿಷ್ಟ ಜಾತಿಗೆ ಸೇರಿದವು. ೭ ಕುಟುಂಬಗಳು ಪರಿಶಿಷ್ಟ ವರ್ಗಕ್ಕೆ ಸೇರಿದವು. ೧೦ ಕುಟುಂಬ ಹಿಂದುಳಿದ ವರ್ಗಕ್ಕೆ ಸೇರಿವೆ. ೯ ಕುಟುಂಬ ಮೇಲ್ವರ್ಗಗಳಿಗೆ ಸೇರಿವೆ. ಈ ಗ್ರಾಮ ಎರಡು ಕೆರೆಗಳನ್ನು-ಮಾವಿನಕೆರೆ, ಬಡವನಕೆರೆ – ಒಳಗೊಂಡಿದೆ. ಮಾವಿನಕೆರೆಯ ವ್ಯಾಪ್ತಿಯಲ್ಲಿ ಮಿಣಿಜೇನಹಳ್ಳಿಯ ೩೫ ಕುಟುಂಬಗಳ ಜಮೀನಿದೆ. ೪ ಕುಟುಂಬಗಳನ್ನು ಹೊರತು ಪಡಿಸಿ ಉಳಿದೆಲ್ಲ ಕುಟುಂಬಗಳೂ ಪರಿಶಿಷ್ಟ ಜಾತಿಗೆ ಸೇರಿದ್ದು ಈ ಜಮೀನುಗಳ ಮಾಲಿಕರು ಅವರೇ ಆಗಿದ್ದಾರೆ. ಈ ಕೆರೆ ತನ್ನ ಹೆಸರಿಗೆ ತಕ್ಕಂತೆಯೇ ಇದೆ.

ಈ ಕೆರೆಯ ನೀರಿಯ ಹರಹು ೧೬.೩೭ ಎಕರೆ. ಒತ್ತುವರಿಯಿಂದಾಗಿ ಈಗ ೧೨ ಎಕರೆಯ ಪ್ರದೇಶದ ವ್ಯಾಪ್ತಿಯಲ್ಲಿ ಮಾತ್ರ ನೀರಿದೆ. ಐದು ಅಡಿಗಳಷ್ಟು ಹೂಳು ಕೆರೆಯಲ್ಲಿದೆ. ಈ ಊರಿನ ಸಾಂಪ್ರದಾಯಿಕ ಕೃಷಿ ಪ್ರದೇಶದಲ್ಲಿ ರಾಗಿ ಬೆಳೆಯುತ್ತಾರೆ. ಒಂದು ದಶಕದ ಹಿಂದೆ ಈ ಕೆರೆಯ ನೀರಿನಿಂದ ರೈತರು ಎರಡು ಬೆಳೆ ತೆಗೆಯುತ್ತಿದ್ದರು. ಖಾರಿಫ್ ಮತ್ತು ರಬಿ. ಕಳೆದ ಆರು ವರ್ಷಗಳ ಹಿಂದಿನವರೆಗೆ ಈ ಕೆರೆ ಒಂದು ಮೊದಲ ಬೆಳೆ ಮತ್ತು ಅರ್ಧ ಎರಡನೆಯ ಬೆಳೆಗೆ ನೀರು ಉಣಿಸುತ್ತಿತ್ತು. ಕಳೆದ ನಾಲ್ಕು ವರ್ಷದಿಂದ ಈಚೆಗೆ ಕೆರೆಯ ನೀರು ಒಂದು ಬೆಳೆಗೂ ಸಾಕಾಗುತ್ತಿಲ್ಲ. ಇದು ಭಾಗಶಃ ಹೂಳಿನಿಂದ, ಭಾಗಶಃ ಒತ್ತುವರಿಯಿಂದ. ಎಂಟು ವರ್ಷಗಳ ಹಿಂದೆ ೧೦ ಅಡಿಗಳಷ್ಟಿದ್ದ ನೀರಿನ ಮಟ್ಟ ಈಗ ೫೦೦ ಅಡಿಗಳಷ್ಟು ಭೂಮಿಯ ಕೆಳಕ್ಕೆ ಇಳಿದಿದೆ. ಕೊಳವೆ ಬಾವಿಗಳು ನೀರನ್ನು ಎಳೆದುಕೊಂಡು ಅಂತರ್ಜಲ ಕುಂಠಿತವಾಗಿದೆ. ತೆರೆದ ಬಾವಿಗಳಲ್ಲಿ ಆರು ವರ್ಷಗಳ ಹಿಂದೆಯೇ ನೀರು ಬತ್ತಿಹೋಗಿವೆ. ಊರಿನಲ್ಲಿರುವ ಹಲವು ಕೊಳವೆ ಬಾವಿಗಳೂ ಬತ್ತಿವೆ.

ಪರಿಸ್ಥಿತಿಯ ಗಂಭೀರತೆಯನ್ನು ಅರಿತ ಗ್ರಾಮಸ್ಥರು ೧೯೯೫ರಲ್ಲಿ ಗ್ರಾಮವಿಕಾಸದ ಜೊತೆ ಚರ್ಚಿಸಿದರು. ಬಡವನ ಕೆರೆಯ ಹೂಳು ತೆಗೆಯಬೇಕೆಂದು ಸರ್ವಾನುಮತದಿಂದ ಅಭಿಪ್ರಾಯ ಪಟ್ಟರು. ಇದಕ್ಕಾಗಿ ಗ್ರಾಮವಿಕಾಸದ ನೆರವು ಕೋರಿದರು. ಆದರೆ ತಮ್ಮ ಬಳಿ ಹಣ ಇಲ್ಲವೆಂದು ಗ್ರಾಮವಿಕಾಸದವರು ರೈತರಿಗೆ ತಿಳಿಸಿದರು. ಸ್ಥಳೀಯವಾಗಿಯೇ ಹಣವನ್ನು ಸಂಗ್ರಹಿಸಿ ಇಂಥ ಕೆಲಸ ಮಾಡಬೇಕಾದ

ಅಗತ್ಯವನ್ನು ಗ್ರಾಮವಿಕಾಸದ ಪ್ರತಿನಿಧಿಗಳು ಗ್ರಾಮಸ್ಥರಿಗೆ ತಿಳಿಸಿದರು. ಬ್ಯಾಂಕಿನಿಂದ ಸಾಲ ಪಡೆದು ಕರೆ ಹೂಳೆತ್ತಲು ಪ್ರಯತ್ನಿಸಬಹುದೆಂದು ಅವರು ಸಲಹೆ ನೀಡಿದರು.

ಗ್ರಾಮದ ಬಹುಪಾಲು ಜನರು ಇದಕ್ಕೆ ಒಪ್ಪಿದರು. ಕೆಲವರು ಈ ಸಲಹೆಗೆ ಒಪ್ಪಲಿಲ್ಲ. ಸರ್ಕಾರದ ನೆರವು ಕೇಳುವುದಾಗಿ ಅವರು ಹೇಳಿದರು. ಗ್ರಾಮವಿಕಾಸದ ಪ್ರತಿನಿಧಿಗಳು ಮತ್ತು ಗ್ರಾಮಸ್ಥರು ಅವರ ಸಲಹೆಗೆ ಒಪ್ಪಿದರು.

ಈ ಪ್ರಕಾರ ನಾಲ್ವರು ಸ್ವ-ಸಹಾಯ ಗುಂಪಿನವರು ಕೆರೆಯ ಹೂಳೆತ್ತಬೇಕೆಂದು ಜಿಲ್ಲಾಪಂಚಾಯ್ತಿಗೆ ಕಾಗದ ಬರೆದರು. ಜಿಲ್ಲಾ ಪಂಚಾಯ್ತಿಯ ಅಧ್ಯಕ್ಷರು, ತಾಂತ್ರಿಕ ವಿಭಾಗದ ಅಧಿಕಾರಿಗಳನ್ನು ಭೇಟಿಮಾಡಿ ಚರ್ಚಿಸಿದರು. ಜಿಲ್ಲಾ ಪಂಚಾಯ್ತಿಯಲ್ಲಿ ಕೆರೆ ಹೂಳೆತ್ತಲು ಈ ವರ್ಷ ಹಣವಿಲ್ಲ ಮುಂದಿನ ವರ್ಷ ಹಣ ಒದಗಿಸುವುದಾಗಿ ಭರವಸೆ ನೀಡಿದರು.

೧೯೯೯ರಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂತು. ಜಿಲ್ಲಾ ಪಂಚಾಯ್ತಿ ಚುನಾವಣೆಗಳು ನಡೆದು ಹೊಸ ಸದಸ್ಯರು ಅಧಿಕಾರಕ್ಕೆ ಬಂದರು. ಕೆರೆ ಹೂಳೆತ್ತಲು ಮತ್ತೆ ಜಿಲ್ಲಾ ಪಂಚಾಯ್ತಿಯನ್ನು ಕೇಳಲಾಯಿತು. ಗ್ರಾಮೀಣ ಮಹಿಳಾ ಒಕ್ಕೂಟ ಕೂಡ ಈ ವಿಚಾರವನ್ನು (ಗ್ರಾಮವಿಕಾಸ ಯೋಜನಾ ಪ್ರದೇಶದ ಸ್ವ-ಸಹಾಯ ಗುಂಪುಗಳ ಅಂಗ ಸಂಸ್ಥೆ) ಜಿಲ್ಲಾ ಪಂಚಾಯ್ತಿ ಅಧಿಕಾರಿಗಳ ಜೊತೆ ಚರ್ಚಿಸಿತ್ತು. ಕೆರೆ ಹೂಳೆತ್ತುವ ಕಾರ್ಯಕ್ಕೆ ಜಿಲ್ಲಾ ಪಂಚಾಯ್ತಿ ೨,೦೫,೦೦೦ ರೂ.ಗಳನ್ನು ಮಂಜೂರು ಮಾಡಿ ಪತ್ರ ನೀಡಿತು. ಆದರೆ ಹಣ ಬಿಡುಗಡೆಯಾಗಲಿಲ್ಲ. ಜಿಲ್ಲಾ ಪಂಚಾಯ್ತಿ ಬಜೆಟ್ ಹಣವಾಗಿರುವುದರಿಂದ ಮುಂದಿನ ವರ್ಷ ಹಣ ಮಂಜೂರಾಗಿ ಪಡೆಯಲು ಸಾಕಷ್ಟು ಪ್ರಯತ್ನ ನಡೆಸಿದರೂ ಫಲಕಾರಿಯಾಗಲಿಲ್ಲ. ಗಾಯದ ಮೇಲೆ ಬರೆ ಎಳೆದಂತೆ ಬಡವನ ಕೆರೆಗೆ ಮಂಜೂರಾಗಿದ್ದ ಹಣವನ್ನು ನಂತರ ಬೇರೆ ಕರೆಗೆ ಮಂಜೂರು ಮಾಡಲಾಯಿತು.

೨೦೦೧ರಲ್ಲಿ ಸ್ಥಳೀಯ ಶಾಸಕರನ್ನು ಸಂಪರ್ಕಿಸಲಾಯಿತು. ಅವರು ವಿಧಾನ ಸಭೆಯಲ್ಲಿ ಸ್ಪೀಕರ್ ಕೂಡ ಆಗಿದ್ದು ಹಣ ಬಿಡುಗಡೆ ಮಾಡುವಂತೆ ಜಿಲ್ಲಾ ಪಂಚಾಯ್ತಿಗೆ ಸೂಚಿಸಿದರು. ಆದರೆ ಜಿಲ್ಲಾ ಪಂಚಾಯ್ತಿ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನಡುವೆ ಭಿನ್ನಾಭಿಪ್ರಾಯದಿಂದಾಗಿ ಮತ್ತೆ ಹಣ ಬಿಡುಗಡೆಯಾಗಲಿಲ್ಲ. ಅಂತಿಮವಾಗಿ ಮಿಣಿಜೇನಹಳ್ಳಿಯ ೭೦ ಹೆಂಗಸರು, ಮಕ್ಕಳು ಮತ್ತು ಇತರರು ಒಂದು ಟೆಂಪೊದಲ್ಲಿ ಕೋಲಾರಕ್ಕೆ ಬಂದು ಜಿಲ್ಲಾ ಪಂಚಾಯ್ತಿ ಕಚೇರಿ ಮುಂದೆ ಧರಣಿ ಕುಳಿತರು. ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಬೇರೊಂದು ಊರಿಗೆ ಹೋಗಿದ್ದುದರಿಂದ ಪ್ರತಿಭಟನಾಕಾರರು ಅವರನ್ನು ಭೇಟಿ ಮಾಡಲಾಗಲಿಲ್ಲ. ಮಾರನೆಯ ದಿನ ಸಂಸತ್ ಸದಸ್ಯರು ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾ ಪಂಚಾಯ್ತಿ ಅಧ್ಯಕ್ಷರ ನಡುವೆ ಸಭೆಯೊಂದು ನಿಗದಿಯಾಗಿತ್ತು. ಊರಿನ ಜನರು ಮಾರನೆ ಬೆಳಿಗ್ಗೆ ಮತ್ತೆ ಜಿಲ್ಲಾ ಪಂಚಾಯ್ತಿ ಕಚೇರಿಗೆ ಬಂದರು. ಜಿಲ್ಲಾ ಪಂಚಾಯ್ತಿ ಕಚೇರಿಯ ಗೇಟುಗಳಿಗೆ ಬೀಗ ಹಾಕಿದರು. ಯಾವುದೇ ಗಣ್ಯರು ಜಿಲ್ಲಾ ಪಂಚಾಯ್ತಿ ಕಚೇರಿಯ ಒಳಕ್ಕೆ ಹೋಗಲು ಅವಕಾಶ ನೀಡಲಿಲ್ಲ. ಸಂಸತ್ ಸದಸ್ಯ ಕೆ.ಹೆಚ್. ಮುನಿಯಪ್ಪ ಅವರು ಪ್ರತಿಭಟನಕಾರರ ಮನವೊಲಿಸಲು ನಡೆಸಿದ ಪ್ರಯತ್ನ ಫಲಿಸಲಿಲ್ಲ. ಕೆರೆ ಹೂಳೆತ್ತಲು ಹಣ ಮಂಜೂರು ಮಾಡಿದ ನಂತರವೇ ತಾವು ಅಲ್ಲಿಂದ ಹೊರ ಸರಿಯುವುದು ಎಂದು ಹಟ ಹಿಡಿದರು. ಅಂತಿಮವಾಗಿ ಸಂಸತ್ ಸದಸ್ಯರ ನಿಧಿಯಿಂದ ಹಣ ಬಿಡುಗಡೆ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಮುನಿಯಪ್ಪ ಪತ್ರ ಬರೆದುಕೊಟ್ಟರು. ಮಾಧ್ಯಮಗಳು ಈ ಘಟನೆಯನ್ನು ವಿವರವಾಗಿ ವರದಿಮಾಡದೆ. ಅಂತಿಮವಾಗಿ ಜಿಲ್ಲಾ ಪಂಚಾಯ್ತಿಯೇ ಹಣ ಬಿಡುಗಡೆ ಮಾಡಿತು. ಈ ಪ್ರಕರಣ ಇಲ್ಲಿಗೇ ಮುಕ್ತಾಯವಾಗಲಿಲ್ಲ.

ಜಿಲ್ಲಾ ಪಂಚಾಯ್ತಿ ತಾಂತ್ರಿಕ ವಿಭಾಗದ ಇಂಜಿನಿಯರುಗಳು ಗ್ರಾಮಕ್ಕೆ ಭೇಟಿ ನೀಡಿದರು. ಕೆರೆಯ ಸಮೀಕ್ಷೆ ನಡೆಸಿದರು. ಅಳತೆ ಮಾಡಿದರು. ಕೆರೆ ಹೂಳೆತ್ತುವ ಕಾರ್ಯವನ್ನು ಯಂತ್ರೋಪಕರಣಗಳ ನೆರವಿನಿಂದ ಮಾಡಲಾಗುವುದೆಂದು ಅವರು ತಿಳಿಸಿದರು. ಇದು ಬರಗಾಲವಾದ್ದರಿಂದ ಕೆಲವರಿಗಾದರೂ ಉದ್ಯೋಗ ಸಿಗುತ್ತದೆಂದು ಭಾವಿಸಿದ್ದವರಿಗೆ ಆಘಾತವೇ ಆಯಿತು. ಕೆರೆ ಹೂಳೆತ್ತುವ ಕಾರ್ಯಕ್ಕೆ ಯಂತ್ರಗಳನ್ನು ಬಳಸುವುದನ್ನು ವಿರೋಧಿಸುವುದಾಗಿ ಜನರು ಜಿಲ್ಲಾ ಪಂಚಾಯ್ತಿ ಇಂಜಿನಿಯರುಗಳಿಗೆ ತಿಳಿಸಿದರು. ಶ್ರಮಿಕರಿಗೆ ಉದ್ಯೋಗ

ನೀಡುವ ಮೂಲಕ ಜಿಲ್ಲಾ ಪಂಚಾಯ್ತಿ ಹಣದಿಂದ ತಾವೇ ಕೆರೆಯ ಹೂಳೆತ್ತುವುದಾಗಿ ತಿಳಿಸಿದರು. ಊರಿನ ಜನರ ಮನೋಭಿಲಾಷೆಯನ್ನು ಅರ್ಥಮಾಡಿಕೊಂಡು ಅದಕ್ಕೆ ಜಿಲ್ಲಾ ಪಂಚಾಯ್ತಿ ಇಂಜಿನಿಯರುಗಳೂ ಒಪ್ಪಿಗೆ ನೀಡಿದರು.

೬.೬.೨೦೦೧ರಲ್ಲಿ ಕೆರೆ ಹೂಳೆತ್ತುವ ಕೆಲಸ ಆರಂಭವಾಯಿತು. ಮಳೆಯಿಂದಾಗಿ ಸ್ವಲ್ಪ ದಿನ ಈ ಕಾರ್ಯ ನಿಂತಿತ್ತು. ಮತ್ತೆ ಆ ಕಾರ್ಯ ಪುನರಾರಂಭವಾಗಿದೆ. ಬರಗಾಲವಾದ್ದರಿಂದ ಉದ್ಯೋಗ ಅರಸಿ ಬೇರೆ ಕಡೆ ಹೋಗುವ ಸ್ಥಿತಿಯಲ್ಲಿದ್ದ ೩೦ ಕುಟುಂಬಗಳು ಈ ಕಾಮಾಗಾರಿಯಿಂದಾಗಿ ಊರಿನಲ್ಲಿಯೇ ಉಳಿದಿವೆ.

ಮಿಣಿಜೇನಹಳ್ಳಿಯ ಮಹಿಳಾ ಸ್ವ-ಸಹಾಯ ಗುಂಪುಗಳು ಒಟ್ಟಾಗಿ ಜಿಲ್ಲಾ ಪಂಚಾಯ್ತಿಯಿಂದ ಹಣ ಬಿಡುಗಡೆ ಮಾಡಿಸಿಕೊಳ್ಳುವಲ್ಲಿ ಸಫಲವಾದವು. ಅಷ್ಟೇ ಅಲ್ಲ ಯಂತ್ರಗಳ ಮೂಲಕ ಹೂಳೆತ್ತುವ ಅಧಿಕಾರಿಗಳ ಪ್ರಯತ್ನವನ್ನು ವಿಫಲಗೊಳಿಸುವಲ್ಲಿ ಅವು ಸಫಲವಾಗಿವೆ.

**ಕೆರೆ ಸಂರಕ್ಷಣೆ ಕಾರ್ಯದಲ್ಲಿ ಜನರು ಭಾಗವಹಿಸುವಂತೆ ಮಾಡುವುದು–ಸಮಸ್ಯೆಯ ವಿಶ್ಲೇಷಣೆ, ಕಾರಣಗಳು, ಪರಿಣಾಮಗಳು, ಪರಿಹಾರ ತಂತ್ರಗಳು–ಗ್ರಾಮವಿಕಾಸ ಅನುಸರಿಸಿದ ಕ್ರಮಗಳು**

**ಸಮಸ್ಯೆ: ಕೆರೆ ರಕ್ಷಣೆ ಹಾಗೂ ನಿರ್ವಹಣೆಯಲ್ಲಿ ಜನರು ನಿರೀಕ್ಷಿಸಿದಷ್ಟು ಭಾಗವಹಿಸದೆ ಇರುವುದು.**

| ಕಾರಣಗಳು | ಪರಿಣಾಮಗಳು | ಗ್ರಾಮವಿಕಾಸ ಅನುಸರಿಸಿದ ಕಾರ್ಯತಂತ್ರಗಳು | ಅನುಸರಿಸಬೇಕಾದ ಪದ್ಧತಿಗಳು |
|---|---|---|---|
| ಕೆರೆಗಳ ಮೇಲಿನ ಸರ್ಕಾರದ ನಿಯಂತ್ರಣ ಹಾಗೂ ಅದರ ಗ್ರಾಮೀಣಾಭಿವೃದ್ಧಿ ನೀತಿಗಳು. | ಕೆರೆಗಳಲ್ಲಿ ತಮ್ಮ ಪಾಲುದಾರಿಕೆ ಏನೂ ಇಲ್ಲ ಎಂದು ಜನರು ತಿಳಿಯುವಂತಾಗುತ್ತದೆ. ಇದರಿಂದಾಗಿ ಕೆರೆಗಳ ಸಂರಕ್ಷಣೆ ಮತ್ತು ನಿರ್ವಹಣೆಯಲ್ಲಿ ರೈತರಲ್ಲಿ ನಿರಾಸಕ್ತಿ ಮೂಡಲು ಕಾರಣವಾಗಿದೆ. | ಕೆರೆಗಳಲ್ಲಿ ಜನರ ಪಾಲುದಾರಿಕೆ ಇದೆ ಎಂದು ಜನರಿಗೆ ಮನವರಿಕೆ ಮಾಡಿಕೊಡಬೇಕು. ಕೆರೆಗಳು ಸರ್ಕಾರದ ಆಸ್ತಿಯಲ್ಲ. ಸಮುದಾಯದ ಆಸ್ತಿ. ಕೋಲಾರ ಜಿಲ್ಲೆಯ ೪೦೦ ಗ್ರಾಮಗಳಲ್ಲಿ ಗ್ರಾಮೀಣ ಮಹಿಳಾ ಒಕ್ಕೂಟದ ನಾಯಕರು ಎರಡು ಸುತ್ತು ಪರಿಸರ ರಕ್ಷಣೆ ಕುರಿತು ಪ್ರಚಾರ ನಡೆಸಿದ್ದಾರೆ. ಕೆರೆಗಳು ಜನರಲ್ಲಿ ಪುನರಾಸಕ್ತಿ ಮೂಡುವಂತೆ ಮಾಡುವುದೇ ಈ ಪ್ರಚಾರದ ಉದ್ದೇಶ. | ಸಮುದಾಯದಲ್ಲಿ ಅರಿವು ಮೂಡಿಸುವುದು ಮಹಿಳೆಯರನ್ನು ಒಳಗೊಂಡಂತೆ ಪರಿಸರ ಚಳುವಳಿ ಸಂಘಟಿಸುವುದು. ಗ್ರಾಮದ ಪ್ರತಿನಿಧಿಗಳ ಜೊತೆ ಚರ್ಚಿಸುವುದು.<br><br>ಕೆರೆಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಸ್ವ-ಸೇವಾ ಗುಂಪುಗಳನ್ನು ಪ್ರೋತ್ಸಾಹಿಸುವುದು. |
| | | ಸ್ವ-ಸಹಾಯ ಗುಂಪುಗಳಿಗೆ ಪ್ರೋತ್ಸಾಹ ನೀಡಿ ಸ್ಥಳೀಯ ಕೆರೆಗಳ ಬಗ್ಗೆ ಮಾಹಿತಿ ಸಂಗ್ರಹಿಸಬೇಕು | ಪತ್ರ ಬರೆಯುವ ಮೂಲಕ ಚಳವಳಿ. |

| | | | |
|---|---|---|---|
| | | ನೀರಾವರಿ ಸಮಸ್ಯೆಗಳು, ಮುಖ್ಯವಾಗಿ ಕೆರೆಗಳ ಬಗ್ಗೆ ಚರ್ಚೆ ಗ್ರಾಮೀಣ ಹಂತದಲ್ಲಿ ಸಂಘಟಿಸಬೇಕು. | |
| ಕೆರೆಗಳ ಮೇಲಿನ ಸರ್ಕಾರದ ನಿಯಂತ್ರಣ ಮತ್ತು ಸರ್ಕಾರದ ಗ್ರಾಮೀಣ ಅಭಿವೃದ್ಧಿ ನೀತಿಗಳು. | ಹೂಳು ಸಂಗ್ರಹವಾಗುತ್ತದೆ ನಂತರ ಹೂಳೆತ್ತುವುದು ಬಹಳ ದುಬಾರಿ ಎಂದು ಜನರಿಗೆ ಮನವರಿಕೆ ಮಾಡಿಕೊಡುವುದು. | ಕೆರೆಗಳ ಪರಿಸ್ಥಿತಿ ಮನವರಿಕೆ ಮಾಡಿಕೊಡಲು ಮತ್ತು ಅವುಗಳ ರಕ್ಷಣೆಗೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುವ ದಿಸೆಯಲ್ಲಿ ೧೦ಳ ಸ್ವ-ಸಹಾಯ ಗುಂಪುಗಳು ಪ್ರತಿ ತಿಂಗಳು ಎಂ.ಎಲ್.ಎ.,ಜಿಲ್ಲಾಧಿಕಾರಿ, ಕೃಷಿ ಇಲಾಖೆ ಹೆಚ್ಚುವರಿ ನಿರ್ದೇಶಕರಿಗೆ ಪತ್ರ ಬರೆಯಬೇಕು.<br>ಗ್ರಾಮವಿಕಾಸ ಜನರ ಅಗತ್ಯ ವಿಶ್ಲೇಷಣೆಯನ್ನು ಎಲ್ಲ ಹಳ್ಳಿಗಳಲ್ಲಿ ನಡೆಸಿತು. ಕೆರೆ ಹೂಳೆತ್ತುವುದರಿಂದ ಆಗಬಹುದಾದ ಲಾಭಗಳನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು. ಉತ್ಪಾದನೆ ಹೆಚ್ಚಾಗುವುದರಿಂದ ಹೆಚ್ಚು ಲಾಭ ಬರುತ್ತದೆ. ಎಂಬುದನ್ನು ಜನರಿಗೆ ಹೇಳಬೇಕು.<br><br>ಹಣವನ್ನು ತೊಡಗಿಸುವ ಮೂಲಕ ಕೆರೆ ಹೂಳೆತ್ತುವ ಕಾರ್ಯದಲ್ಲಿ ಸಮುದಾಯಗಳು ಭಾಗವಹಿಸುವಂತಾಗಲು ಗ್ರಾಮವಿಕಾಸ ಸಮುದಾಯವನ್ನು ಪ್ರೋತ್ಸಾಹಿಸುತ್ತಿದೆ. | ಸ್ವ-ಸಹಾಯ ಗುಂಪುಗಳ ನೇತೃತ್ವದಲ್ಲಿರುವ ಕೆರೆಗಳ ವಿಶ್ಲೇಷಣೆ ಅಗತ್ಯವಿದೆ. ಹೊರಗಿನವರಿಂದ ಹೂಳು ತೆಗೆಸುವುದು ಇದರಿಂದ ಸ್ಥಳೀಯರಿಗೆ ಪ್ರಚೋದನೆ ದೊರೆತಂತಾಗುತ್ತದೆ.<br><br>ಜನರು ಭಾಗವಹಿಸುವಂತೆ ಮಾಡಲು ಸ್ವ-ಸಹಾಯ ಗುಂಪುಗಳನ್ನು ಬಳಸಿಕೊಳ್ಳಬೇಕು. ಸಾಲ ಹಿಂತಿರುಗಿಸುವ ಶಕ್ತಿ ಆಧಾರದ ಮೇಲೆ ಸಾಲ ಪಡೆಯಲು ಸ್ವ-ಸಹಾಯ ಗುಂಪುಗಳಿಗೆ ಒತ್ತಾಯಿಸಲಾಯಿತು. |
| ಕೆರೆಗಳ ಮೇಲಿನ ಸರ್ಕಾರದ ನಿಯಂತ್ರಣ | ಕೃಷಿಯಲ್ಲಿ ಬಳಸುವ ಟ್ರಾಕ್ಟರ್ ಮಣ್ಣು ಎತ್ತುವ ಯಂತ್ರಗಳ ಬಳಕೆಗೆ ಪ್ರೋತ್ಸಾಹ. | ಗ್ರಾಮವಿಕಾಸಕ್ಕೆ ಸಂಸ್ಥೆ ೧೩ ಕೆರೆಗಳ ಭಾಗಶ: ಹೂಳೆತ್ತುವ | ಮಾನವ ಶ್ರಮದ ಮೂಲಕ ಕೆರೆ ಹೂಳೆತ್ತುವದರಿಂದ |

| | | | |
|---|---|---|---|
| ಮತ್ತು ಸರ್ಕಾರದ ಗ್ರಾಮೀಣ ಅಭಿವೃದ್ಧಿ ನೀತಿಗಳು. | ಯಂತ್ರೀಕರಣ ದಕ್ಷತೆಗೂ ದೈಹಿಕ ಶ್ರಮ ವ್ಯಯವನ್ನು ಅದಕ್ಕೆ ಹೋಲಿಕೆ ಮಾಡಲಾಗಿದೆ. ಯಂತ್ರೀಕರಣದಿಂದ ಮಾನವ ಶ್ರಮಕ್ಕೆ ಇದ್ದ ಗೌರವ, ಸಮುದಾಯದಲ್ಲಿದ್ದ ಆತ್ಮವಿಶ್ವಾಸ ಕಳೆದುಕೊಂಡಿತು. | ಕಾಯಾ ಮಾಡಿತು. ಸರ್ಕರದ ಮೇಲೆ ಅವಲಂಬನೆ ಕಡಿಮೆ ಮಾಡಲು ಹಾಗೂ ಈ ದಿಸೆಯಲ್ಲಿ ಸ್ವ-ಸಹಾಯ ಗುಂಪುಗಳನ್ನು ಪ್ರೋತ್ಸಾಹಿಸಬೇಕು. ಸಮುದಾಯದ ನಾಯಕತ್ವದ ಅಭಾವ ಇರುವ ಕಡೆ ಸ್ವ-ಸಹಾಯ ಗುಂಪುಗಳು ಅಂಥ ಕೆಲಸ ಮಾಡಲು ಸಜ್ಜಾಗುವಂತೆ ಕ್ರಮ ತೆಗೆದುಕೊಳ್ಳಲಾಯಿತು ಹೂಳೆತ್ತುವ ವಿವಿಧ ಉಪಯೋಗಗಳ ಬಗ್ಗೆ ಸ್ವ-ಸಹಾಯ ಗುಂಪುಗಳು ಜನರಿಗೆ ನೆರವಾಗಬೇಕು.<br><br>ಕೆರೆಗಳ ಹೂಳೆತ್ತಲು ಬ್ಯಾಂಕುಗಳಿಂದ ಸಾಲ ಪಡೆಯಲು ಗ್ರಾಮವಿಕಾಸ ಸ್ವ-ಸಹಾಯ ಗುಂಪುಗಳಿಗೆ ಪ್ರೋತ್ಸಾಹ ನೀಡಿದೆ. | ಆಗುವ ಅನುಕೂಲದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು. ಕೆರೆ ಹೂಳೆತ್ತುವ ಕಾರ್ಯವನ್ನು ಸಮುದಾಯದ ಕಲಿಕೆ ಭಾಗವಾಗಿ ಮಾಡುವುದು<br><br>ಶ್ರಮದ ಮೂಲಕ ಕೆರೆ ಹೂಳೆತ್ತುವುದನ್ನು ಕಡ್ಡಾಯ ಮಾಡುವುದು.<br><br>ಸಮುದಾಯದ ಎಲ್ಲರೂ ಈ ಕಾರ್ಯದಲ್ಲಿ ಭಾಗವಹಿಸುವಂತೆ ಮಾಡಬೇಕು. ಕೂಲಿಗಾಗಿ ಕಾಳು ಕಾರ್ಯಕ್ರಮವನ್ನು ಈ ಯೋಜನೆ ಜಾರಿಯಲ್ಲಿ ಬಳಸಬೇಕು. |
| ಕೆರೆಗಳ ಮೇಲಿನ ಸರ್ಕಾರದ ನಿಯಂತ್ರಣ ಮತ್ತು ಸರ್ಕಾರದ ಗ್ರಾಮೀಣ ಅಭಿವೃದ್ಧಿ ನೀತಿಗಳು. | ಕೊಳವೆ ಬಾವಿ ನೀರಾವರಿಯನ್ನು ಪ್ರೋತ್ಸಾಹಿಸುವುದು. ವಾಣಿಜ್ಯ ಬೆಳಗಳನ್ನು ಬೆಳೆಯಲು ದೊಡ್ಡ ರೈತರಿಗೆ ಪ್ರೋತ್ಸಾಹ.<br><br>ಕೆರೆಗಳ ಸಂರಕ್ಷಣೆ ಬಗ್ಗೆ ನಿರ್ಲಕ್ಷ. | ಮಾನವ ಶ್ರಮ ಬಳಕೆಯ ಮೂಕ ಕೆರೆ ಹೂಳೆತ್ತುವ ಅಗತ್ಯದ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಯಿತು. ಉದ್ಯೋಗಗಳು ದೊರಕದ ಕಾಲದಲ್ಲಿ ಮತ್ತು ಕೃಷಿ ಚಟುವಟಿಕೆ ಇಲ್ಲದ ಕಾಲದಲ್ಲಿ ಇದರಿಂದ ಉದ್ಯೋಗಗಳು ದೊರಕುವುದೆಂದು ಮನವರಿಕೆ ಮಾಡಿಕೊಡಲಾಯಿತು. ಮಾವನ ಶ್ರಮ ಬಳಕೆಯ ಉಪಯೋಗಗಳನ್ನು ವಿವರಿಸಲು ಗ್ರಾಮವಿಕಾಸ ಮಾದರಿ ಕೆರೆ ಹೂಳೆತ್ತುವ ಕಾಮಗಾರಿಯನ್ನು ಕೈಗೊಳ್ಳಲಾಯಿತು. ಇದೊಂದು ರೀತಿಯಲ್ಲಿ ಕಲಿಕೆಯ | ಹೂಳು ಸಾಗಿಸಲು ಎತ್ತಿನ ಗಾಡಿಗಳನ್ನೇ ಬಳಸಬೇಕು. ಸಾಕಷ್ಟು ಸಂಖ್ಯೆಯಲ್ಲಿ ಎತ್ತಿನ ಗಾಡಿಗಳು ಲಭ್ಯವಿಲ್ಲದಿದ್ದರೆ ಅವುಗಳನ್ನು ಕೊಳ್ಳಲು ಸಾಲ ಹಾಗೂ ಬೆಂಬಲ ನೀಡಬೇಕು. ಕೆರೆಗಳನ್ನು ನೀರಿನ ಮೂಲಗಳಾಗಿ ಪರಿಗಣಿಸಬೇಕಾದ ಅಗತ್ಯದ ಬಗ್ಗೆ ಸಮುದಾಯದಲ್ಲಿ ಅರಿವು ಮೂಡಿಸುವುದು.<br><br>ಅಂತರ್ ಜಲ ಮೂಲಗಳು |

| | | | |
|---|---|---|---|
| | | ಅಭ್ಯಾಸವಾಗಿತ್ತು.<br><br>ಮಾನವ ಶ್ರಮ ಬಳಸಿ ಕೆರೆ ಹೂಳೆತ್ತುವ ಕಾರ್ಯವನ್ನು ಕೈಗೆತ್ತಿಕೊಂಡರೆ ಭಾಗಶ: ತಾನು ನೆರವು ನೀಡುವುದಾಗಿ ಗ್ರಾಮವಿಕಾಸ ಜನರಿಗೆ ತಿಳಿಸಿತು. | ಬತ್ತಿ ಹೋಗುತ್ತಿರುವ ಬಗ್ಗೆ ಜನರಿಗೆ ಅರಿವು ಮೂಡಿಸುವುದು.<br><br>ಅಂತರ್ ಜಲ ಮಟ್ಟ ಸುಧಾರಿಸುವಲ್ಲಿ ಕೆರೆಗಳ ಪಾತ್ರ ಕುರಿತು ಸಮುದಾಯದಲ್ಲಿ ಅರಿವು ಮೂಡಿಸುವುದು. |
| ಕೆರೆಗಳ ಮೇಲಿನ ಸರ್ಕಾರದ ನಿಯಂತ್ರಣ ಮತ್ತು ಸರ್ಕಾರದ ಗ್ರಾಮೀಣ ಅಭಿವೃದ್ಧಿ ನೀತಿಗಳು. | ಕೆರೆಗಳ ಸಂರಕ್ಷಣೆ/ನಿರ್ವಹಣೆ ಕಾರ್ಯಕೈಗೆತ್ತಿಕೊಳ್ಳುವಲ್ಲಿ ಸಂಬಂಧಿಸಿದ ವಿಭಾಗ/ಪಂಚಾಯತ್ ಗಳಿಂದ ಅನುಮತಿ ಪಡೆಯುವಲ್ಲಿ ಇರುವ ಅಡ್ಡಿ ಆತಂಕಗಳು, ಅಧಿಕಾರಶಾಹಿ ವಿಳಂಬನೀತಿ ಸೇರಿ ಸಮುದಾಯ ಪಾತ್ರ ವಹಿಸಲು ಅವಕಾಶ ನೀಡಿದರೆ ಎಲ್ಲವೂ ಪಾರದರ್ಶಕವಾಗಿರಬೇಕಾಗುತ್ತದೆ. ನೀತಿ ಹಾಗೂ ಯೋಜನೆ ಜಾರಿಯಲ್ಲಿ ಪಟ್ಟಭದ್ರ ಹಿತಾಸಕ್ತಿ ಬೆಳೆದಿದೆ. | ಕೂಲಿಗೆ ಹಣ ನೀಡುವ ಬದಲು ರಾಗಿ, ಅಕ್ಕಿ, ಗೋಧಿ, ಮುಂತಾದವನ್ನು ನೀಡಲಾಯಿತು. ಹಣ ಕೊಟ್ಟರೆ ಮದ್ಯದ ಮೇಲೆ ಕೂಲಿಗಾರರು ವ್ಯಯಮಾಡುವ ಸಾಧ್ಯತೆ ಇರುವುದರಿಂದ ಹೀಗೆ ಮಾಡಲಾಯಿತು. ಈ ವಿಧಾನ ಮಹಿಳೆಯರ ಮೆಚ್ಚುಗೆಗೆ ಪಾತ್ರವಾಯಿತು.<br>ಕೆರೆ ಹೂಳೆತ್ತುವುದನ್ನು ಮಾನವ ಶ್ರಮದ ಮೂಲಕ ಮಾಡಬೇಕೆಂದು ಗ್ರಾಮವಿಕಾಸ ನಿಗದಿ ಮಾಡಿದ್ದರಿಂದ ಗ್ರಾಮವಿಕಾಸ ಎತ್ತಿನ ಬಂಡಿಗಳನ್ನು ಕೊಳ್ಳಲು ಧನ ನೆರವು ನೀಡಿತು. ಟ್ರಾಕ್ಟರುಗಳ ಮೇಲೆ ಅವಲಂಬನೆಯನ್ನು ಕಡಿಮೆ ಮಾಡಿ ನೈಸರ್ಗಿಕ ಕೃಷಿಯನ್ನು ಪ್ರೋತ್ಸಾಯಿಸಲಾಯಿತು. ರೈತರಿಗೆ ಎತ್ತಿನ ಗಾಡಿಗಳು ಆಸ್ತಿಯಂತಾದವು.<br><br>ಒಣ ಕೃಷಿ ಪ್ರದೇಶದಲ್ಲಿ ಕುಡಿಯುವ ನೀರು ಹಾಗು ನೀರಾವರಿಯ ಮುಖ್ಯ ಮೂಲ ಕೆರೆಗಳು. ಆದ್ದರಿಂದ | ಅಂತರ್ ಜಲದ ಮಟ್ಟ ಕುರಿತು ಮಾಹಿತಿ ಸಂಗ್ರಹಿಸಲು ಸ್ವ-ಸಹಾಯ ಗುಂಪುಗಳಿಗೆ ಉತ್ತೇಜನ ನೀಡುವುದು.<br>ಕೊಳವೆ ಬಾವಿಗಳಿಂದ ನೀರಾವರಿ ಮಾಡುವುದರ ವಿರುದ್ಧ ರೈತರಲ್ಲಿ ಅರಿವು ಮೂಡಿಸುವುದು.<br>ಕೆರೆಗಳು ಸಮುದಾಯದ ಸಂಪನ್ಮೂಲಗಳು ಎಂಬ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು.<br><br>ಕೆರೆಗಳ ಸಂರಕ್ಷಣೆ ಅವರ ಹಕ್ಕು ಎಂಬ ಅಂಶವನ್ನು ಜನರಿಗೆ ಮನವರಿಕೆ ಮಾಡಿಕೊಡುವುದು ಮತ್ತು ಆ ಬಗ್ಗೆ ಸಂಬಂಧಿಸಿದವರನ್ನು ಸಂಪರ್ಕಿಸುವುದು. |

| | | | |
|---|---|---|---|
| ಕೆರೆಗಳ ಮೇಲಿನ ಸರ್ಕಾರದ ನಿಯಂತ್ರಣ ಮತ್ತು ಸರ್ಕಾರದ ಗ್ರಾಮೀಣ ಅಭಿವೃದ್ಧಿ ನೀತಿಗಳು. | ಪಾರದರ್ಶಕತೆ ಇರಬೇಕಾಗಿರುವುದರಿಂದಲೇ ಸಮುದಾಯದ ಪಾತ್ರವಹಿಸುವುದನ್ನು ಪ್ರೋತ್ಸಾಹಿಸುತ್ತಿಲ್ಲ. | ಅವುಗಳ ಅನಿವಾರ್ಯ. ಈ ಬಗ್ಗೆ ಗ್ರಾಮವಿಕಾಸ ಸಮುದಾಯದಲ್ಲಿ ಅರಿವು ಮೂಡಿಸುವ ಕಾರ್ಯ ಆರಂಭಿಸಿದೆ.<br><br>ಅಂತರ್ ಜಲ ಬತ್ತಿ ಹೋಗುತ್ತಿರುವ ಬಗ್ಗೆ ಮತ್ತು ಅದರಿಂದ ಪರಿಸರಕ್ಕೆ ಆಗುವ ಅಪಾಯದ ಬಗ್ಗೆ ಸಮುದಾಯಕ್ಕೆ ಗ್ರಾಮವಿಕಾಶ ಅರಿವು ಮೂಡಿಸಿತು.<br>ಕೆರೆಗಳ ಪುನರುಜ್ಜೀವನದಿಂದ ಆಗಬಹುದಾದ ಅನುಕೂಲಗಳು ಹಾಗೂ ಜಲ ಜೀವರಾಶಿಗೂ ಕೆರೆಗಳಿಗೂ ಇರುವ ಸಂಬಂಧಗಳ ಬಗ್ಗೆ ಗ್ರಾಮವಿಕಾಶ ಸಮುದಾಯದಲ್ಲಿ ಅರಿವು ಮೂಡಿಸಿತು.<br><br>ತನ್ನ ಯೋಜನಾ ಪ್ರದೇಶದಲ್ಲಿ ಅಂತರ್ ಜಲದ ನೀರಿನ ಮಟ್ಟ ಒಣಗಿದ ತೆರೆದ ಬಾವಿಗಳು, ನೀರು ಸಿಗದ ಕೊಳವೆ ಬಾವಿಗಳು, ನೀರಿನ ಗುಣಮಟ್ಟ ಮುಂತಾದ ಮಾಹಿತಿಯನ್ನು ಗ್ರಾಮವಿಕಾಸ, ಸ್ವ-ಸಹಾಯ ಗುಂಪುಗಳ ಮೂಲಕ ಸಂಗ್ರಹಿಸಿತು.<br><br>ಯೋಜನೆಯ ಹಣವನ್ನು ಕೊಳವೆ ಬಾವಿ ಆಧಾರಿತ ನೀರಾವರಿ ಕೃಷಿ ಆರಂಭಿಸುವ ವಿರುದ್ಧ ರೈತರಲ್ಲಿ ಅರಿವು ಮೂಡಿಸಲಾಯಿತು. | ಯಾಂತ್ರೀಕೃತ ಹೂಳೆತ್ತುವ ವಿರುದ್ಧ ಸ್ವ-ಸಹಾಯ ಗುಂಪುಗಳಲ್ಲಿ ಅರಿವು ಮೂಡಿಸುವುದು. |
| ಕೆರೆಗಳ ಮೇಲಿನ ಸರ್ಕಾರದ ನಿಯಂತ್ರಣ | | ಕೆರೆಗಳು ಜನರ ಆಸ್ತಿ ಎಂಬುದನ್ನು ಗ್ರಾಮವಿಕಾಸ ಮನವರಿಕೆ ಮಾಡಿದೆ | ಕೆರೆಗಳ ಸಂರಕ್ಷಣೆಯ ಅಗತ್ಯದ ಬಗ್ಗೆ ಮಾಧ್ಯಮ |

| | | | |
|---|---|---|---|
| ಮತ್ತು ಸರ್ಕಾರದ ಗ್ರಾಮೀಣ ಅಭಿವೃದ್ಧಿ ನೀತಿಗಳು. | | (ಕೆರೆ ಹೂಳೆತ್ತುವ ಸಂದರ್ಭದಲ್ಲಿ ಹೊನ್ನಶೆಟ್ಟಿಹಳ್ಳಿಯ ಜನರು ಸಣ್ಣ ನೀರಾವರಿ ಇಲಾಖೆ ಅಧಿಕಾರಿಯೊಬ್ಬರನ್ನು ಬೆನ್ನಟ್ಟಿ ಹೊರಗೆ ಕಳುಹಿಸಿದರು) ಕೆರೆಗಳ ಬಗ್ಗೆ ಮಾಧ್ಯಮ ಮತ್ತು ಆಡಳಿತಗಾರರ ಗಮನ ಸೆಳೆಯಲು ಆ ವಿಷಯ ಕುರಿತು ಸಮಾವೇಶ ಸಂಘಟಿಸುವುದು.<br><br>ಕೆರೆಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಸ್ವ-ಸಹಾಯ ಗುಂಪುಗಳನ್ನು ಗ್ರಾಮವಿಕಾಸ ಪ್ರೋತ್ಸಾಹಿಸಿದೆ.<br><br>ಜಿಲ್ಲಾ ಪಂಚಾಯ್ತಿ ಬಜೆಟ್ ಕಾಪಿಗಳನ್ನು ಸಂಗ್ರಹಿಸಲು ಗ್ರಾಮವಿಕಾಸ ಸ್ವಸಹಾಯ ಗುಂಪುಗಳಿಗೆ ಮತ್ತು ಅವುಗಳ ಒಕ್ಕೂಟಕ್ಕೆ ಪ್ರೋತ್ಸಾಹ ನೀಡಿದೆ. ಕೆರೆಗಳ ಸಂರಕ್ಷಣೆ ನಿಗದಿ ಮಾಡಿರುವ ಹಣದ ವಿವರ ತಿಳಿದು ಆ ಕಾರ್ಯಕ್ರಮ ಸರಿಯಾಗಿ ಜಾರಿಯಾಗುವಂತೆ ಮಾಡಲು ಗ್ರಾಮವಿಕಾಸ ಪ್ರೋತ್ಸಾಹ ನೀಡಿತು.<br><br>ಕೆರೆ ಹೂಳೆತ್ತುವ ಕಾರ್ಯವನ್ನು ಯಂತ್ರೀಕರಣಗೊಳಿಸಲು ಅಧಿಕಾರಶಾಹಿ ಯತ್ನಿಸಿದ ಸಂದರ್ಭದಲ್ಲಿ ಅದನ್ನು ಪ್ರತಿರೋಧಿಸಲು ಗ್ರಾಮವಿಕಾಸ ಸ್ವ-ಸಹಾಯ ಗುಂಪುಗಳನ್ನು ಹಾಗೂ ಸಮುದಾಯದಲ್ಲಿ ಅರಿವು ಮೂಡಿಸಿತು. (ಮಿಣಿಜೇನಹಳ್ಳಿ | ಹಾಗೂ ಆಡಳಿತದ ಗಮನ ಸೆಳೆಯಲು ಆ ವಿಷಯಕ್ಕೆ ಸಂಬಂಧಿಸಿದ ಸಮ್ಮೇಳನವನ್ನು ಗ್ರಾಮವಿಕಾಸ ಸಂಘಟಿಸಿತ್ತು. |

೨೦೦೧)

ಕೆರೆಗಳ ಸಂರಕ್ಷಣೆಯ ಅಗತ್ಯದ ಬಗ್ಗೆ
ಮಾಧ್ಯಮ ಹಾಗೂ ಆಡಳಿತದ
ಗಮನ ಸೆಳೆಯಲು ಆ ವಿಷಯಕ್ಕೆ
ಸಂಬಂಧಿಸಿದ ಸಮ್ಮೇಳವನ್ನು
ಗ್ರಾಮವಿಕಾಸ ಸಂಘಟಿಸಿತ್ತು.

## ವಿಜಯನಗರ ಕಾಲದ ಕೆರೆ ನೀರಾವರಿ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವ – ಕೆಲ ಅಂಶಗಳು

(೧)

ನೀರು ಮಾನವನಿಗೆ ಅತ್ಯಂತ ಅವಶ್ಯವಾದ ವಸ್ತು. ಮಾನವನ ಉಳಿವು ಮತ್ತು ಬದುಕಿಗೆ ನೀರು ಬೇಕಾಗಿದ್ದು, ಅದು ಮುಖ್ಯ ಪಾತ್ರವನ್ನು ವಹಿಸುತ್ತದೆ. ಅವನ ಸರ್ವಾಂಗೀಕ ಬೆಳವಣಿಗೆಗಳಾದ ಕೃಷಿ, ಕೈಗಾರಿಕೆ, ಆರ್ಥಿಕ, ಕಲೆ ಮುಂತಾದ ವಿಷಯಗಳಿಗೆ ಮೂಲ ವಸ್ತು ನೀರು. ಪುರಾತನ ಕಾಲದಿಂದಲೂ ಇಂದಿನವರೆಗೆ ಭಾರತದಲ್ಲಿ ಹಾಗೂ ಇನ್ನಿತರ ದೇಶಗಳಲ್ಲಿಯೂ ಮಾನವನು ಕೃಷಿಯನ್ನೇ ಮುಖ್ಯ ಕಸುಬಾಗಿಸಿಕೊಂಡಿರುವುದು ಇತಿಹಾಸದಿಂದ ತಿಳಿದುಬರುವ ವಿಷಯ. ನೀರಿಗಾಗಿ ಮಾನವನು ನದಿ ಮತ್ತು ಮಳೆಯನ್ನೇ ಪ್ರಧಾನವಾಗಿ ಅವಲಂಬಿಸಿಕೊಂಡಿದ್ದಾನೆ. ನದಿಗಳು ಮಳೆಯ ಮೂಲವನ್ನು ಆಶ್ರಯಿಸಿವೆ. ಮಳೆಯು ನಿಯತಕಾಲಿಕವಾಗಿ ಬೀಳುತ್ತಿದ್ದು, ಅದು ವರ್ಷದ ಕೆಲ ಮಾಸಗಳಲ್ಲಿ ಮಾತ್ರವಿರುತ್ತಿತ್ತು. ಮಳೆಯು ವಿಫಲವಾದಾಗ ಸಹಜವಾಗಿ ನದಿಯಲ್ಲಿನ ನೀರಿನ ಪ್ರಮಾಣ ಕಡಿಮೆಯಾಗುತ್ತಿತ್ತು. ಕೃಷಿಗೆ ಬೇಕಾದ ನೀರು ಯಾವಾಗ ಬೇಕೆಂದರೆ ಆವಾಗದ ದೊರಕದ ಕಾರಣವಾಗಿ ಮಾನವನು ನೀರನ್ನು ಕೃತಕವಾಗಿ ಸಂಗ್ರಹಿಸಿಕೊಂಡು, ಬೇಕೆಂದಾಗ ಕೃಷಿಗೆ ಬಳಸಿಕೊಳ್ಳುತ್ತಿದ್ದರು. ಇಂತಹ ಕೃತಕ ಜಲಸಂಗ್ರಾಹಕಗಳೇ ಕೆರೆಗಳು. ಭಾರತದಲ್ಲಿ ಪ್ರಾಗೈತಿ ಹಾಸಿಕ ಕಾಲದಿಂದಲೂ ಜನರು ಕೃತಕ ಬಲ ಸಂಗ್ರಾಹಕಗಳನ್ನು ನಿರ್ಮಿಸಿ, ನೀರನ್ನು ಶೇಖರಿಸಿ ಕೃಷಿಗೆ ಬಳಸಿಕೊಳ್ಳುತ್ತಿದ್ದುದರ ಬಗೆಗೆ ಸಾಕ್ಷ್ಯಾಧಾರಗಳು ದೊರಕಿವೆ.

ಭಾರತದ ಸಿಂಧೂಕೊಳ್ಳದ ನಾಗರಿಕತೆಯ ಕೆಲವು ನೆಲೆಗಳಲ್ಲಿ ಕೃತಕ ಜಲಸಂಗ್ರಾಹಕಗಳು ಇದ್ದವೆಂಬ ಅಂಶವು ಉತ್ಖನನಗಳಿಂದ ಬೆಳಕಿಗೆ ಬಂದಿವೆ. ಕೆಲವು ಪುರಾತತ್ತ್ವ ವಿದ್ವಾಂಸರುಗಳು, ದಕ್ಷಿಣ ಭಾರತದಲ್ಲಿ ಮೊಟ್ಟಮೊದಲಿಗೆ ಕೃಷಿಯನ್ನು ಪ್ರಾರಂಭಿಸಿದರಂದು ಅಭಿಪ್ರಾಯಪಟ್ಟಿದ್ದಾರೆ. ಮುಖ್ಯವಾಗಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಜನರು ಕೃಷಿಯನ್ನು ಈ ಭಾಗಗಳಲ್ಲಿ ಪ್ರಾರಂಭಿಸಿದರೆಂದು ದೊರಕಿರುವ ಪುರಾವೆಗಳ ಆಧಾರಗಳಿಂದ ಈ ಅಭಿಪ್ರಾಯಗಳನ್ನು ಹೊಂದಿರುವರು. ಪ್ರಾಚೀನ ಕೃತಿಗಳಾದ ಯಜುರ್ವೇದ, ಅಥರ್ವವೇದ, ಕೌಟಿಲ್ಯನ ಅರ್ಥಶಾಸ್ತ್ರ, ಮಹಾಭಾರತ, ಜಾತಕ ಕಥೆಗಳು ಮುಂತಾದವುಗಳು ಕೆರೆ ನೀರಾವರಿಯನ್ನು ಕುರಿತ ಹಲವಾರು ಅಂಶಗಳನ್ನು ತಿಳಿಸುತ್ತದೆ.

[1] ಆದಿ ಇತಿಹಾಸ ಕಾಲದಿಂದಲೂ ಕೃಷಿಗೆ ಮುಖ್ಯ ಸ್ಥಾನವನ್ನು ಅಂದಿನ ಜನರು ನೀಡುತ್ತಿದ್ದರು.[2] ಆದಿ ಇತಿಹಾಸ ಕಾಲದ ಕೆಲವು ಶಾಸನಗಳು ಸಹ ಕೆರೆಗಳ ಬಗೆಗೆ ಉಲ್ಲೇಖಿಸುತ್ತವೆ. ನೀರಾವರಿ ತಂತ್ರಜ್ಞಾನಕ್ಕೆ ಪ್ರಸಿದ್ಧಿಯನ್ನು ಪಡೆದ ಸುದರ್ಶನ ಕೆರೆಯ ಉಲ್ಲೇಖವನ್ನು ಗುಜರಾತಿನಲ್ಲಿರುವ ಜುನಾಗಡದ ರಾಜ ಮಹಾಕ್ಷತ್ರಪ ರುದ್ರದಾಮನ ಶಾಸನವು ತಿಳಿಸುತ್ತದೆ.[3] ಈ ಕೆರೆಯನ್ನು ಚಂದ್ರಗುಪ್ತ ಮೌರ್ಯನ (ಕ್ರಿ.ಪೂ. ೩೨೪-೩೦೦) ಪ್ರಾಂತೀಯ ರಾಜ್ಯಪಾಲನಾದ ವೈಶ್ಯ ಪುಷ್ಯಗುಪ್ತನೆಂಬುವನು ಕಟ್ಟಿಸಿದನು. ಇದನ್ನು ಓರ್ವ ಯುವರಾಜನು

ಅಭಿವೃದ್ಧಿಗೊಳಿಸಿದನು. ನಂತರ ಅಶೋಕನ ಕಾಲದಲ್ಲಿ ಪ್ರಾಂತೀಯ ರಾಜ್ಯಪಾಲನು ಕೆರೆಯ ಹೂಳನ್ನು ಎತ್ತಿ ನೀರು ಹರಿಯುವ ಕಾಲುವೆಗಳನ್ನು ದುರಸ್ತಿಗೊಳಿಸಿದನು.

ದಕ್ಷಿಣ ಭಾರತದಲ್ಲಿ ಕ್ರಿಸ್ತಾಬ್ದದ ಪ್ರಾರಂಭದಲ್ಲಿ ಚೋಳರು ಸಹ ನೀರಾವರಿ ವ್ಯವಸ್ಥೆಗೆ ಸಾಕಷ್ಟು ಉತ್ತೇಜನವಿತ್ತರು. ಅವರ ತರುವಾಯದಲ್ಲಿ ಶಾತವಾಹನರು, ಇಕ್ಷ್ವಾಕುಗಳು ಸಹ ಕೆರೆಗಳ ಬಗೆಗೆ ಸಾಕಷ್ಟು ಕಾಳಜಿವಹಿಸಿ ಉತ್ತೇಜನವನ್ನು ನೀಡಿರುವುದು ಪುರಾತತ್ತ್ವೀಯವಾಗಿ ಪುರಾವೆಗಳು ಸಿಕ್ಕಿವೆ. ಪಲ್ಲವರು, ಚೋಳರು, ಪಾಂಡ್ಯರು, ಕದಂಬ, ಗಂಗರು, ಚಾಳುಕ್ಯರು, ಹೊಯ್ಸಳರು, ಹಿಂದಿನ ಅರಸರ ಸಾರ್ವಜನಿಕ ಹಿತಾಶಕ್ತಿ ಕಾರ್ಯಗಳನ್ನು ಮುಂದುವರಿಸಿಕೊಂಡು ಸಾಗಿದರು. ಇವರ ಕಾಲದ ಅನೇಕ ಶಾಸನಗಳು ವಿಪುಲವಾದ ಮಾಹಿತಿಗಳನ್ನು ನಮಗೆ ಒದಗಿಸಿಕೊಡುತ್ತದೆ.[4]ಕರ್ನಾಟಕದ ಚಂದ್ರವಳ್ಳಿ ಕೆರೆ,[5] ತಮಿಳುನಾಡಿನ ವೈರಮೇಘ ತಟಾಕ,[6]ಆಂಧ್ರಪ್ರದೇಶ ಕವಿತಾಗುಣಾರ್ಣವ ಕೆರೆಗಳು[7] ಇತಿಹಾಸ ಕಾಲದಿಂದಲೂ ಪ್ರಸಿದ್ಧಿಯನ್ನು ಪಡೆದ ಕೆರೆಗಳಾಗಿವೆ.

ವಿಜಯನಗರದ ಇತಿಹಾಸವು ದಕ್ಷಿಣ ಭಾರತದ ಇತಿಹಾಸದಲ್ಲಿಯೇ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿದೆ. ವಿಜಯನಗರ ಇತಿಹಾಸದ ಪೂರ್ವದಲ್ಲಿದ್ದ ರಾಜಕೀಯ ಪರಿಸ್ಥಿತಿಯು, ವಿಜಯನಗರ ಇತಿಹಾಸದಲ್ಲಿಯೇ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿದೆ. ವಿಜಯನಗರ ಇತಿಹಾಸದ ಪೂರ್ವದಲ್ಲಿದ್ದ ರಾಜಕೀಯ ಪರಿಸ್ಥಿತಿಯು, ವಿಜಯನಗರದ ಅರಸರು ಆಳ್ವಿಕೆಯನ್ನು ಪ್ರಾರಂಭಿಸಿದ ಕಾಲದಿಂದ ಹೊಸ ಆಯಾಮಗಳನ್ನು ಪಡೆದು, ನವ ಚೈನತ್ಯದೊಂದಿಗೆ ಚದುರಿ ಹಂಚಿಹೋಗಿದ್ದ ರಾಜ್ಯಗಳು ಒಂದಾದವು. ಪರಕೀಯರ ದಾಳಿಗೆ ಒಳಗಾಗಿ ರಾಜಕೀಯ ಅಭದ್ರತೆಯು, ಒಂದು ಹೊಸ ಬುನಾದಿಯೊಂದಿಗೆ ನಿರ್ದಿಷ್ಟರೂಪ ಪಡೆದದ್ದು ವಿಜಯನಗರದ ಅರಸರ ಆಳ್ವಿಕೆಯಿಂದಲೇ ಎಂಬುದು ಸ್ಪಷ್ಟವಾಗಿದೆ. ಇವರ ಕಾಲದಲ್ಲಿ ಇಡೀ ದಕ್ಷಿಣ ಭಾರತವು ಒಂದಾಗಿ ಸಮಗ್ರತೆಯನ್ನು ಪಡೆಯಿತು. ಇಂದಿನ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡಿನ ಮತ್ತು ಕೇರಳದ ಭಾಗಗಳನ್ನು ಒಳಗೊಂಡಂತೆ ವಿಜಯನಗರ ಸಾಮ್ರಾಜ್ಯವು ವ್ಯಾಪಿಸಿತ್ತು. ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿಯೂ ಈ ಅರಸು ಮನೆತನವು ಸುಭದ್ರತೆಯನ್ನು ತಂದುಕೊಟ್ಟಿತು. ಆರ್ಥಿಕ ಕ್ಷೇತ್ರಗಳಲ್ಲಿಯೂ ಈ ಅರಸು ಮನೆತನವು ಸುಭದ್ರತೆಯನ್ನು ತಂದುಕೊಟ್ಟಿತು. ಆರ್ಥಿಕ ಭದ್ರತೆಯನ್ನು ಮುಖ್ಯ ಕಾರಣವು, ಅವರು ಕೃಷಿ ಮತ್ತು ವ್ಯಾಪಾರಕ್ಕೆ ನೀಡಿದ ಉತ್ತೇಜನ ಮತ್ತು ಪ್ರಾಮುಖ್ಯತೆಯೆಂದರೆ ತಪ್ಪಾಗಲಾರದು. ವಿಜಯನಗರದರಸರು ಹಿಂದಿನ ಅರಸು ಮನೆಗಳವರು ಕೈಗೊಂಡ ಪ್ರಜಾಹಿತಾತ್ಮಕ ಕಾರ್ಯಗಳನ್ನು ಮುಂದುವರಿಸಿದರು. ನದಿ ಮತ್ತು ಹಳ್ಳಗಳಿಗೆ ಹೊಸ ಅಣೆಕಟ್ಟುಗಳನ್ನು ನಿರ್ಮಿಸುವುದು, ಬಾವಿ, ಕುಂಟೆ, ಕೆರೆ ಮುಂತಾದವುಗಳನ್ನು ನಿರ್ಮಿಸುವುದರ ಮೂಲಕ ಕೃಷಿಗೆ ನವಚೈತನ್ಯವನ್ನು ತುಂಬಿದರು. ಬೀಳು ಬಿದ್ದ ಭೂಮಿಯನ್ನು ಮತ್ತು ಹೆಚ್ಚುವರಿ ಪ್ರದೇಶಗಳನ್ನು ಕೃಷಿಗೆ ಒಳಪಡಿಸಿದರು. ಇವುಗಳಿಂದ ರಾಜ್ಯದ ಬೊಕ್ಕಸವು ತುಂಬಿ ಆರ್ಥಿಕ ಭದ್ರತೆಯನ್ನು ಕಂಡಿತು.

ವಿಜಯನಗರ ಕಾಲದಲ್ಲಿಯೂದ ಕೆರೆ ಕಟ್ಟಿಸುವುದು, ಬಾವಿ ತೋಡಿಸುವುದು ಮುಂತಾದ ಕೆಲಸಗಳನ್ನು ಕೈಗೊಳ್ಳುವುದು ಅತ್ಯಂತ ಮುಖ್ಯ ಕೆಲಸವೆಂದು ಪರಿಗಣಿಸಲಾಗಿತ್ತು. ಇವರ ಪೂರ್ವದ ಕಾಲದಲ್ಲಿದ್ದ ಈ ನಂಬಿಕೆಯು ಮುಂದುವರೆದು ನಿರ್ದಿಷ್ಟ ರೂಪವನ್ನು ಪಡೆಯಿತೆಂಬುದು ವಿಜಯನಗರ ಕಾಲದ ಕ್ರಿ.ಶ. ೧೪೧೦ರ ಮೊದಲನೆಯ ದೇವರಾಯನ ಕಾಲದಲ್ಲಿ ರಚನೆಗೊಂಡ ಶಾಸನದಿಂದ ತಿಳಿಯುತ್ತದೆ. ಅದರಂತೆ ಮಧುರಕವಿಯು, ಲಕ್ಷ್ಮೀಧರನ ತಾಯಿಯು ಮಗನಿಗೆ ಹಾಲನ್ನು ನೀಡುವ ಸಂದರ್ಭದಲ್ಲಿ ಏಳು ಉತ್ತಮ ಕೆಲಸಗಳನ್ನು ಮಾಡುವುದು ಎಂದು ಹೇಳುತ್ತಾಳೆ.[8] ಇದರಲ್ಲಿ ಕೆರೆ ಕಟ್ಟುವುದು, ಬಾವಿ ತೋಡಿಸುವುದು, ದೇವಾಲಯ ನಿರ್ಮಿಸುವುದು, ಸೆರೆಯಾಳುಗಳನ್ನು ಬಿಡಿಸುವುದು, ಉತ್ತಮರನ್ನು ರಕ್ಷಿಸುವುದು, ಸಜ್ಜನ/ಮಿತ್ರರಿಗೆ ಆಶ್ರಯ ನಿಡುವುದು, ನಂಬಿದವರನ್ನು ಕೈ ಬಿಡದೆ ಕಾಪಾಡುವುದು ಮುಂತಾದ ವಿಷಯಗಳನ್ನು ಮಗನಿಗೆ ಹಾಲನ್ನು ನೀಡುವಾಗ ಹೇಳಿ ಕೈಕೂಸಾಗಿದ್ದಾಗಲೇ ಪ್ರಜಾಹಿತಾತ್ಮಕ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಹೇಳುವುದು ಅಂದಿನ ಕಾಲದಲ್ಲಿದ್ದ ಸಾಮಾಜಿಕ ಪ್ರಜ್ಞೆಯನ್ನು ನಮಗೆ ತಿಳಿಸಿಕೊಡುತ್ತವೆ. ಕೆರೆಗಳನ್ನು ನಿರ್ಮಿಸುವುದು ಪುಣ್ಯ ಕೆಲಸವೆಂದು, ಧಾರ್ಮಿಕ ಲೇಪನದೊಂದಿಗೆ ಈ ಕೆಲಸಗಳನ್ನು ಮಾಡಿಸುತ್ತಿದ್ದುದರ ಹಿನ್ನೆಲೆಯ ಸಾಮಾಜಿಕ ಏಳಿಗೆ ಮತ್ತು ಉನ್ನತಿಗಾಗಿಯೇ ಎಂಬುದರಲ್ಲಿ ಎರಡು ಮಾತಿಲ್ಲ. ಪ್ರಜಾಹಿತಾತ್ಮಕ ಕೆಲಸಗಳಲ್ಲಿ ಕೆರೆ ಕಟ್ಟಿಸುವುದು, ಬಾವಿ ತೋಡಿಸುವುದು ಮುಂತಾದ ಕೆಲಸಗಳಿಂದ ಪುಣ್ಯವು

ದೊರಕುತ್ತದೆ ಎಂದು ಸಾಮಾನ್ಯ ಜನರು, ಅಧಿಕಾರಿಗಳು, ಅರಸರು, ಮಾಂಡಲಿಕರು, ವ್ಯಾಪಾರಿಗಳು ಇಂತಹ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಅವರುಗಳು ನಿರ್ಮಿಸಿದ ಕೆರೆ, ಕುಂಟೆಗಳಿಗೆ ಹಿರಿಯರ, ಅರಸರ, ತಂದೆ, ತಾಯಿ, ಸಹೋದರ, ಸಹೋದರಿ, ಪುತ್ರ, ಪುತ್ರಿಯರ ಹೆಸರುಗಳನ್ನು ಇರಿಸಿ, ಅವರುಗಳ ಹೆಸರುಗಳ ಶಾಶ್ವತವಾಗಿರುವಂತೆ ನೋಡಿಕೊಳ್ಳುತ್ತಿದ್ದರು. ಈ ಹಿನ್ನೆಲೆಯಲ್ಲಿ ವಿಜಯನಗರ ಕಾಲದಲ್ಲಿ ಹೇಗೆ ನೀರಾವರಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಿದರೆಂಬುದನ್ನು ಅವರ ಕಾಲಕ್ಕೆ ಸೇರಿದ ಕೆರೆಗಳು, ಅಣೆಕಟ್ಟೆಗಳು, ನಾಲೆಗಳು ಮತ್ತು ಶಾಸನಗಳ ಆಧಾರಗಳಿಂದ ಅರಿಯಬಹುದು. ಅವರು ನಿರ್ಮಿಸಿದ ಅನೇಕ ಕೆರೆಗಳು ಉಳಿದು ಬಂದ್ದಿದ್ದು ಇಂದಿಗೂ ಅವುಗಳನ್ನು ಬಳಸಲಾಗುತ್ತಿದೆ. ಪುರಾತತ್ತ್ವೀಯ ಆಧಾರಗಳಿಗಿಂತ ಶಾಸನಗಳಿಂದ ಅನೇಕ ಮಾಹಿತಿಗಳು ನಮಗೆ ದೊರಕುತ್ತವೆ. ದಕ್ಷಿಣ ಭಾರತದ ಇಂದಿನ ನಾಲ್ಕು ರಾಜ್ಯಗಳನ್ನು, ಅಂದಿನ ವಿಜಯನಗರದ ಸಾಮ್ರಾಜ್ಯವು ಆವರಿಸಿತ್ತು. ಈ ಎಲ್ಲಾ ರಾಜ್ಯಗಳಿಂದ ಇಂದಿನವರೆಗೆ ಸುಮಾರು ಹತ್ತು ಸಾವಿರಕ್ಕೂ ಅಧಿಕವಾದ ಅವರ ಶಾಸನಗಳು ದೊರಕಿವೆ. ಅವುಗಳ ಕೂಲಂಕಷ ಅಧ್ಯಯನದಿಂದ ಹೊಸ ಮಾಹಿತಿಗಳು ಬೆಳಕಿಗೆ ಬರುತ್ತಲಿವೆ. ಶಾಸನಗಳ ಒಂದು ಅಂಕಿ ಅಂಶದಂತೆ ವಿಜಯನಗರ ಕಾಲದಲ್ಲಿ ಕೆರೆ ನಿರ್ಮಿಸಿದವರ ಶೇಕಡಾವಾರು ವಿವರಗಳು ಇಂತಿವೆ.[9]

| ಕ್ರ.ಸಂ | ಕೆರೆ ಕಟ್ಟಿಸಿದ ವರ್ಗ | ಶೇಕಡ |
|---|---|---|
| ೧. | ಅರಸರು | ೫.೭೨ |
| ೨. | ಮಂತ್ರಿವರ್ಗ | ೭.೯೦ |
| ೩. | ಸ್ಥಳೀಯ ಅಧಿಕಾರಿಗಳು | ೨೯.೯೦ |
| ೪. | ಸಾಮಂತರು | ೨೦.೫೪ |
| ೫. | ವ್ಯಾಪಾರಿ, ಸಂಘಸಂಸ್ಥೆಗಳು, ವ್ಯಕ್ತಿಗಳು | ೨೬.೫೬ |
| ೬. | ಕೇಂದ್ರ ಅಧಿಕಾರಿಗಳು | ೫.೭೨ |
| ೭. | ಪ್ರಾಂತೀಯ ಅಧಿಕಾರಿಗಳು | ೩.೬೬ |

ವಿಜಯನಗರ ಕಾಲದ ಕೆರೆಗಳ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವವನ್ನು ಎರಡು ಹಂತಗಳಲ್ಲಿ ಗುರುತಿಸಬಹುದು. ಮೊದಲನೆಯ ಹಂತದಲ್ಲಿ ಕೆರೆಗಳನ್ನು ಕಟ್ಟುವುದು ಮತ್ತು ಕೆರೆಯ ನೀರನ್ನು ವಿತರಿಸುವುದು ಆಗಿದ್ದರೆ, ಎರಡನೆಯ ಹಂತದಲ್ಲಿ ಕೆರೆಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡಿರುವಲ್ಲಿ ಜನರು ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಈ ಮೇಲೆ ಸುಸ್ಥಿತಿಯಲ್ಲಿಟ್ಟುಕೊಂಡಿರುವಲ್ಲಿ ಜನರು ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಈ ಮೇಲೆ ನೀಡಿರುವ ಅಂಕಿಅಂಶಗಳಂತೆ ಕೆರೆಗಳನ್ನು ನಿರ್ಮಿಸುತ್ತಿದ್ದವರಲ್ಲಿ ಸ್ಥಳೀಯ ಅಧಿಕಾರಿಗಳು, ವ್ಯಾಪಾರಿಗಳು, ಸಂಘಸಂಸ್ಥೆಗಳು, ವ್ಯಕ್ತಿಗಳು ಮತ್ತು ಸಾಮಂತರುಗಳು ಅಧಿಕವಾಗಿ ತೊಡಗಿಸಿಕೊಂಡಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಸ್ಥಳೀಯವಾಗಿ ದೊರಕುತ್ತಿದ್ದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸಮಪರ್ಕವಾಗಿ ಬಳಸಿಕೊಳ್ಳುತ್ತಿದ್ದರೆಂಬ ಅಂಶವು ಸ್ಪಷ್ಟವಾಗುತ್ತದೆ.

ಕ್ರಿ.ಶ. ೧೩೫೭ ಶಾಸನದಂತೆ ಮೊದಲನೆಯ ಬುಕ್ಕನು ರಾಜಕುಮಾರನಾಗಿದ್ದಾಗ, ಮಹಾವಡ್ಡ ವ್ಯವಹಾರಿ ಮಹದೇವಣ್ಣನು ಅರಸನಿಂದ ಅಪ್ಪಣೆ ಪಡೆದು ಲಕ್ಷ್ಮೀಪುರ ಎಂಬ ಹಳ್ಳಿ ಮತ್ತು ಅಲ್ಲಿ ಕೆರೆಯನ್ನು ನಿರ್ಮಿಸಿದ. ಈ ಕೆರೆಯಿಂದ ಹೊರಟ ಕಾಲುವೆಗೆ "ರಾಜ ಕಾಲುವೆ" ಯೆಂದು ಹೆಸರಿಸಲಾಗಿದ್ದು, ಆ ಕಾಲುವೆಯು ನಾಲ್ಕು ಊರುಗಳ ಮೂಲಕ ಹರಿದುಹೋಗುತ್ತಿತ್ತು. ಸದರು ಪ್ರದೇಶವನ್ನು ರಾಜಕುಮಾರನ ಆಳ್ವಿಕೆಗೆ ಒಳಪಟ್ಟಿದ್ದವು. ಹರಿಹರ ಮಹಾರಾಜನು, ಈ ಕಾಲುವೆಯ ಎರಡು ಬದಿಗಳಿಗೆ ಕಲ್ಲು ಚಪ್ಪಡಿಗಳನ್ನು ಅಳವಡಿಸಬೇಕೆಂದು ಆಜ್ಞೆ ಮಾಡಿದನು. ಅದರಂತೆ ರಾಜಕುಮಾರ ಮತ್ತು ಪ್ರಧಾನ ಸೋವಪ್ಪ ರಸ ಕಲ್ಲಿನ ಹೊದಿಕೆಯನ್ನು ಪೂರೈಸಿದರು.[10] ಕಾಲುವೆಗೆ ಕಲ್ಲುಚಪ್ಪಡಿಗಳನ್ನು ಕೂರಿಸುವುದರಿಂದ ನೀರು ವೃಥಾ ಪೋಲಾಗದಂತೆ ಹರಿದು ಗುರಿಯನ್ನು ತಲುಪಲು ಸಾಧ್ಯವಾಗುತ್ತದೆ. ಈ ಕೆಲಸವನ್ನು ಮಾಡಿದವರಿಗೆ ಉಂಬಳಿಯನ್ನು ನೀಡಲಾಯಿತು. ಆಂಧ್ರಪ್ರದೇಶದ ಕಡಪ ಜಿಲ್ಲೆಯ ಪೊರುಮಾಮಿಲ್ಲ ಕೆರೆಯು ಹಲವಾರು ವಿಷಯಗಳಿಗೆ ಮಹತ್ವವನ್ನು

ಪಡೆದಿದೆ. ಈ ಕೆರೆಯ ಸಮೀಪವಿರುವ ಶಾಸನವು ಕೆರೆಗಳ ನಿರ್ಮಾಣದ ಮತ್ತು ನಿರ್ವಹಣೆಯನ್ನು ಕುರಿತ ಮುಖ್ಯವಾದ ಮಾಹಿತಿಯನ್ನು ನೀಡುತ್ತದೆ.[11] ಒಂದು ಕೆರೆಯನ್ನು ನಿರ್ಮಾಣ ಮಾಡಬೇಕಾದರೆ, ಏನೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಮುನ್ನೆಚ್ಚರಿಕೆಯ ಕ್ರಮಗಳನ್ನು ಸಹ ತಿಳಿಸುತ್ತದೆ. ಸದರಿ ಕೆರೆಯು ಇಂದಿಗೂ ಬಳಕೆಯಲ್ಲಿದ್ದು, ಅಂದಿನ ಕಾಲದ ಉನ್ನತಮಟ್ಟದ ತಂತ್ರಜ್ಞಾನವನ್ನು ಪರಿಚಯಿಸುತ್ತದೆ. ಕಡಪಾ ಜಿಲೆಲಯ ಇಂದಕೂರು ಗ್ರಾಮದ ಕ್ರಿ.ಶ.೧೩೮೯ ಶಾಸನವು ಎರಗಮರೆಡಿ ಮತ್ತು ಮಾರಂರೆಡಿ ಎಂಬ ಸಹೋದರರು ಕೆರೆಯನ್ನು ನಿರ್ಮಿಸಿದರೆಂದು ಹೇಳುತ್ತದೆ.[12]ಕ್ರಿ.ಶ. ೧೩೬೭ ಕರ್ನೂಲು ಜಿಲ್ಲೆಯ ತಿರುಮೆಲ್ಲಾದ ಶಾನಸವು ಕಠಾರಿ ಸಾಳುವ ಗುಂಡಯ್ಯದೇವ ಮಹಾರಾಜನು ಅಲ್ಲಿಯ ಪ್ರಾಂತೀಯ ಅಧಿಕಾರಿಯಾಗಿದ್ದಾಗ ಹಲವಾರು ಕುಟುಂಬಗಳು, ಹಳ್ಳಿಯ ಕರ್ಣಗಳು (ಶಾನುಭೋಗರು) ಸೇರಿದಂತೆ, ಕೆರೆಯ ನಿರ್ಮಾಣ ಮಾಡಿ, ಕೆರೆಯ ಕೆಳಗಣ ಭೂಮಿಯನ್ನು ಹಂಚಿಕೊಂಡರು ಎಂದು ಉಲ್ಲೇಖಿಸುತ್ತದೆ.[13] ಹಂಪಿಯಲ್ಲಿನ ಒಂದು ಶಾಸನದಂತೆ ವಿರೂಪಾಕ್ಷ ಪಂಡಿತ ಮತ್ತು ವಿನಾಯಕ ಪಂಡಿತ ಎಂಬ ಸಹೋದರರು ಒಂದು ಹೊಸ ದೇವಾಲಯ ಸರೋವರಗಳನ್ನು ಕ್ರಿ.ಶ. ೧೩೬೯ರಲ್ಲಿ ನಿರ್ಮಿಸಿದರೆಂದು ತಿಳಿಸುತ್ತದೆ.[14]

ಕೆರೆಗಳ ನಿರ್ಮಾಣ ಕಾರ್ಯಗಳಲ್ಲಿ ಸ್ತ್ರೀಯರು ತೊಡಗಿಸಿಕೊಳ್ಳುತ್ತಿದ್ದರು ಎಂಬುದು ವಿಜಯನಗರ ಕಾಲದ ಶಾಸನಗಳಿಂದ ತಿಳಿದುಬರುವ ವಿಷಯ. ಬುಕ್ಕರಾಯನ ಪುತ್ರಿ ಜೊಮ್ಮದೇವಿ ಪೆನುಗೊಂಡೆಯ ನಿವಾಸಿಯಾಗಿದ್ದು, ತಿರುಮಣಿಯೂರಿನಲ್ಲಿ ಒಂದು ಕೆರೆಗೆ ನೀರು ಹರಿದು ಬರುವಂತೆ ಕಾಲುವೆಯನ್ನು ಅಗೆಸಿದಳು. ಪೆದ್ದಭೈರೋಜ ಮತ್ತು ಪಿನ್ನಭೈರೋಜ ಎಂಬುವವರು ಈ ಕೆಲಸವನ್ನು ಸಮಪರ್ಕವಾಗಿ ನಿರ್ವಹಿಸಿದರೆ ೧೩೦ ಬಂಗಾರನಾಣ್ಯ (ಸಿಂಗೆಯ ಗದ್ಯಾಣ), ತೂಬಿನಡಿಯ ಭೂಮಿ, ಹಳ್ಳಿಯಲ್ಲಿ ಮನೆ, ಬಂಗಾರದ ಕಡಗ ನೀಡಬೇಕೆಂಬ ಒಪ್ಪಂದದ ಮೇರೆಗೆ ಕೆಲಸವನ್ನು ಪ್ರಾರಂಭಿಸಿದರು. ಕೆಲಸವು ಅಸಪರ್ಮಕವಾದಲ್ಲಿ ಅವರು ಪಡೆದ ಎಲ್ಲ ವಸ್ತುಗಳನ್ನು ಹಿಂತಿರುಗಿಸಬೇಕೆಂದು ಸಹ ಒಪ್ಪಂದವಾಗಿತ್ತು. ಆದರೆ ಇವರಿಬ್ಬರೂ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಎಲ್ಲಾ ವಸ್ತುಗಳನ್ನು ಹೊಂದಿದರು ಎಂದು ಕ್ರಿ.ಶ.೧೩೬೭ ಶಾಸನವು ಹೇಳುತ್ತದೆ,[15] ಕ್ರಿ.ಶ.೧೪೦೩ರ ಶಾಸನದಂತೆ ಇರುಗಶೆಟ್ಟಿ ಎಂಬ ವ್ಯಾಪಾರಿಯು ಆರು ಕೆರೆಗಳನ್ನು ಮತ್ತು ವೀರಭದ್ರ ದೇವಾಲಯಗಳನ್ನು ನಿರ್ಮಿಸಿ, ಆ ಕೆರೆಯ ಸಾಗುವಳಿ ಉತ್ಪನ್ನಗಳನ್ನು ದೇವಾಲಯಕ್ಕೆ ದಾನವಾಗಿ ನೀಡಬೇಕೆಂಬ ಷರತ್ತನ್ನು ವಿಧಿಸಿದ್ದನು.[16]

ಕೆಲವು ಸಂದರ್ಭಗಳಲ್ಲಿ ರಾಜ್ಯವು ವ್ಯಕ್ತಿಗಳಿಗೆ ಭೂಮಿಯನ್ನು ನೀಡಿ, ಆ ಭೂಮಿಯನ್ನು ಕೆರೆಗಳ ನಿರ್ಮಾಣಕ್ಕೆ ಬಳಸಬೇಕೆಂದು ಹೇಳುತ್ತಿದ್ದರು. ಕ್ರಿ.ಶ. ೧೪೧೯ ಶಾಸನವು ಈ ವಿಷಯದ ಬಗೆಗೆ ಬೆಳಕನ್ನು ಚೆಲ್ಲುತ್ತದೆ.[17] ಅದರಂತೆ "ನಾವು ನಿಮಗೆ ತುಂಡುಭೂಮಿ ನೀಡುವೆವು ಅದರಲ್ಲಿ ಕಾಡುಕಡಿದು, ಸಾಗುವಳಿಗೆ ಏರ್ಪಡಿಸಬೇಕು ನೀವು ತೋಡುವ ಕೆರೆಯನ್ನು ಬಳಸಬೇಕು" ಎಂದು ಮತ್ತು ಕೆರ ನಿರ್ಮಿಸಿದವರು ಹಾಗೂ ರಾಜ್ಯವು ೩:೧ ದಾಮಾಂಶದಂತೆ ಅಲ್ಲಿಯ ಭೂಮಿಯನ್ನು ಹಂಚಿಕೊಳ್ಳಬೇಕೆಂದು ಸೂಚಿಸಿರುವುದು ಗಮನಾರ್ಹ.

ನೆಲ್ಲೂರು ಜಿಲ್ಲೆಯ ವೆಂಕಟಾಪುರಹಳ್ಳಿಯ ತೆಲುಗು ಶಾಸನವು ಕುತೂಹಲಕಾರಿಯಾಗಿದೆ. ಇದರ ತೇದಿಯು ಕ್ರಿ.ಶ. ೧೪೨೯. ಈ ಶಾಸನದಂತೆ ದಾನಿಯು ತನ್ನ ವಶದಲ್ಲಿದ್ದ ಕೆರೆಯನ್ನು ಮಾರಾಟ ಮಾಡಿದುದನ್ನು ತಿಳಿಸುವ ಶಾಸನವು ಕೆರೆಯನ್ನು 'ದಾಸವಂದನಕು ಕಟ್ಟಿಂಚಿನ ಚೆರುವು' ಎಂದು ಉಲ್ಲೇಖಿಸುತ್ತದೆ.[18] ಉದಯಗಿರಿ ರಾಜ್ಯದಲ್ಲಿದ್ದ ಬೋಯವೀಡು ಮತ್ತು ಕುಡಿಚಿಪಾಡು ಎಂಬ ಗ್ರಾಮಗಳಲ್ಲಿ ನಿರ್ಮಿಸಿದ್ದ ಕೆರೆಗಳನ್ನು ಬಾಯಿಚಿನ್ನಬ್ಬೋಯಡು ಎಂಬ ವ್ಯಕ್ತಿಗೆ ಮಾರಾಟ ಮಾಡಿದುದನ್ನು ಶಾಸನವು ದಾಖಲಿಸಿದೆ. ಕೆರೆಗಳು ರಾಜ್ಯದ ಒಂದು ಭಾಗವಾಗಿದ್ದರೂ, ಕೆಲವೊಂದು ನಿದರ್ಶನಗಳಲ್ಲಿ ವೈಯಕ್ತಿಕ ಆಸ್ತಿಯಾಗಿದ್ದು, ಅವುಗಳನ್ನು ಮಾರಾಟ ಮಾಡುವ ಹಕ್ಕು ಅದರ ನಿರ್ಮಾತೃವಿಗೆ ಇತ್ತೆಂದು ಮೇಲಿನ ಶಾಸನದಿಂದ ಸ್ಪಷ್ಟವಾಗುತ್ತದೆ.

ಜನರಂತೆ ದೇವಾಲಯಗಳು ಸಹ ಜನರ ಹಿತಾತ್ಮಕ ಕಾರ್ಯಗಳಲ್ಲಿ ತೊಡಗಿದ್ದವು. ಅದರಂತೆ ಅವುಗಳು ಅಂದಿನ ಸಮಾಜವನ್ನು ನಿಯಂತ್ರಿಸುತ್ತಿತ್ತು. ಈ ದಿಸೆಯಲ್ಲಿ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿರುವ ತಿರುಪತಿಯ ದೇವಾಲಯವು ಮುಖ್ಯಪಾತ್ರವನ್ನು ವಹಿಸುತ್ತದೆ. ಈ ದೇವಾಲಯದಲ್ಲಿ ಮತ್ತು ಅದರ ಸಮೀಪದಲ್ಲಿರುವ ದೇವಾಲಯಗಳಲ್ಲಿ ಒಂದು ಸಾವಿರಕ್ಕೂ ಅಧಿಕವಾದ ಶಾಸನಗಳು ಲಭ್ಯವಿದೆ.

ಅವುಗಳಲ್ಲಿ ಬಹುಪಾಲು ಶಾಸನಗಳು ವಿಜಯನಗರ ಕಾಲಕ್ಕೆ ಸೇರಿದ್ದು, ದೇವಾಲಯಕ್ಕೆ ನೀಡಿದ ದಾನ ವಿವರಗಳಿವೆ. ದೇವಸ್ಥಾನದ ಕ್ರಿ.ಶ. ೧೪೫೬ ಶಾಸನದಂತೆ ಕೋವಿಲ್ ಕೇಳ್ವಿ ಎಂಪೆರುಮನಾರ್ ಜೀಯರ್ ೫,೦೦೦ ನರ್ಪಣಂ (ಬಂಗಾರದ ನಾಣ್ಯ)ಗಳನ್ನು ಶ್ರೀ ಭಂಡಾರಕ್ಕೆ ಸಲ್ಲಿಸಿದರು. ಆ ಹಣವನ್ನು ದೇವಾಲಯಕ್ಕೆ ಸೇರಿದ ಭೂಮಿಯನ್ನು ಬಳಸಿ ಕೃಷಿ ಮಾಡಿ ಅದರ ಉತ್ಪನ್ನಗಳನ್ನು ದೇವಾಲಯಕ್ಕೆ ಸೇರುವಂತಹ ವ್ಯವಸ್ಥೆಯನ್ನು ದೇವಾಲಯದ ಉಸ್ತುವಾರಿ ಸಮಿತಿಯವರು ಏರ್ಪಾಡುಗಳನ್ನು ಮಾಡಿದರು.[19] ಕ್ರಿ.ಶ. ೧೫೦೭ ಶಾಸನದಂತೆ ತಿಪ್ಪಶೆಟ್ಟಿಯೆಂಬ ವ್ಯಕ್ತಿಯು ೮,೩೦೫ ಪಣಂಗಳನ್ನು ದೇವಾಲಯದಲ್ಲಿ ಠೇವಣಿಯಾಗಿಟ್ಟು, ಆ ಹಣದಿಂದ ದೇವಾಲಯಗಳ ಹಳ್ಳಿ ಮತ್ತು ಕೆರೆ-ಕಾಲುವೆಗಳ ರಚನೆಗೆ ಬಳಸಬೇಕೆಂದು ಷರತ್ತನ್ನು ವಿಧಿಸಿದ್ದರು.[20] ಶ್ರೀಶೈಲದ ಮತ್ತೊಂದು ಶಾಸನವು ಕ್ರಿ.ಶ.೧೫೧೬ಕ್ಕೆ ಸೇರಿದ್ದು, ಸಿದ್ಧಾಪುರದಲ್ಲಿನ ದಂಪತಿಗಲು ಒಂದು ಕೆರೆಯನ್ನು ನಿರ್ಮಿಸಿದರೆಂದು ಹೇಳುತ್ತದೆ.[21] ಕೃಷ್ಣದೇವರಾಯನ ಕ್ಷೌರಿಕ ಜೀಯಪ್ಪ ನಾಯಕನ ಸಹಾಯಕ ಭೂಪತಿರಾಜು ಒಂದು ಕೆರೆಯನ್ನು ದುರಸ್ತಿಗೊಳಿಸಿ ಕಡೂರು ಜಿಲ್ಲೆಯ ಯಾಗಟ್ಟಹಳ್ಳಿಯ ದೇವಾಲಯಕ್ಕೆ ದಾನ ನೀಡಿದನೆಂದು ಒಂದು ಶಾಸನ ದಾಖಲಿಸಿದೆ.[22] ತಮಿಳುನಾಡಿನ ಶ್ರೀರಂಗಂನ ಶಾಸನದಂತೆ ರಾಮಾನುಜದಾಸ ಬಿನ್ ಲಕ್ಷ್ಮೀಪತಿಶೆಟ್ಟಿ ಮತ್ತು ಆತನ ಸಹೋದರ ಅಂತಪ್ಪ ದೇವಾಲಯದ ಭಂಡಾರಕ್ಕೆ ೧೦,೫೦೦ ಚಕ್ರಪಣಂಗಳನ್ನು ಠೇವಣಿಯಾಗಿ ನೀಡಿ, ಭೂಮಿಯ ಅಭಿವೃದ್ಧಿಗೆ ಬಳಸಬೇಕೆಂದು ತಿಳಿಸುತ್ತಾರೆ.[23] ಈ ರೀತಿಯಾಗಿ ಸಮಾಜದ ಎಲ್ಲಾ ವರ್ಗಗಳಿಗೆ ಸೇರಿದ ಜನರು ಕೆರೆ ನಿರ್ಮಾಣ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಮೇಲೆ ವಿವರಿಸಿದವುಗಳು ಕೆರೆಗಳನ್ನು ಕಟ್ಟುವುದರ ಬಗೆಗೆ ತಿಳಿಸಿದರೆ, ಎರಡನೆಯ ಭಾಗದಲ್ಲಿ ಕೆರೆಗಳು ನಿರ್ಮಾಣಗೊಂಡ ನಂತರ ಅವುಗಳ ದುರಸ್ತಿ, ಉಸ್ತುವಾರಿ ಮತ್ತು ಸಂರಕ್ಷಣೆಯಲ್ಲಿ ಜನರು ಹೇಗೆ ತೊಡಗಿಸಿಕೊಂಡಿದ್ದರು ಎಂಬ ಅಂಶಗಳನ್ನು ಶಾಸನಗಳ ಆಧಾರದಿಂದಲೇ ಅರಿಯಬಹುದು.

ಅಂದಿನ ಜನತೆಯು ಕೆರೆಗಳನ್ನು ಸಂಪೂರ್ಣವಾಗಿ ನಿರ್ಮಿಸುತ್ತಿದ್ದರು. ಕೆಲವೊಂದು ನಿದರ್ಶನಗಳಲ್ಲಿ ಕೆರೆಯ ಕೆಲವು ಭಾಗಗಳನ್ನು ನಿರ್ಮಿಸಿ ತಮ್ಮ ಯಥಾಶಕ್ತಿ ಕೊಡುಗೆಯನ್ನು ನೀಡಿದ ಉದಾಹರಣೆಗಳು ಲಭ್ಯವಿದೆ. ಕೆರೆಯ ತೂಬು, ಏರಿ, ಕೋಡಿ, ನಾಲೆಗಳ ನಿರ್ಮಾಣ ಮುಂತಾದವುಗಳು ಸಹ ಕೆರೆಯನ್ನು ನಿರ್ಮಿಸುವಷ್ಟೇ ಮುಖ್ಯತ್ವವನ್ನು ಪಡೆದಿತ್ತು ಎಂಬ ವಿಷಯವು ಶಾಸನಗಳ ಅಧ್ಯಯನದಿಂದ ತಿಳಿದುಬರುವ ವಿಷಯ.

ಕೆರೆಯನ್ನು ಕಟ್ಟಿದವರಿಗೆ ವಿಜಯನಗರ ಕಾಲದಲ್ಲಿ 'ಕಟ್ಟುಕೊಡಿಗೆ', 'ಕಟ್ಟುಮಾನ್ಯ', 'ಕೆರೆ ಬಿತ್ತುನಾಟ', 'ಬಿತ್ತುವಟ್ಟ', 'ದಸವಂದ' ಎಂಬ ಉಂಬಳಿ ಮತ್ತು ದಾನಗಳನ್ನು ನೀಡುತ್ತಿದ್ದರು. ಇವುಗಳು ಕೆರೆಗಳ ದುರಸ್ತಿ ಮತ್ತು ನಿರ್ವಹಣೆಗಾಗಿಯೂ ನೀಡಲಾಗುತ್ತಿತ್ತು.[24] ಸಾಮಾನ್ಯವಾಗಿ ಕೆರೆಗಳ ಉಸ್ತುವಾರಿಯನ್ನು ಸ್ಥಳೀಯ ಅಧಿಕಾರಿಗಳು, ಸ್ಥಳೀಯರೊಂದಿಗೆ ಒಡಗೂಡಿ ಗಮನಿಸುತ್ತಿದ್ದರು. ಕೆರೆಗಳ ಮೇಲೆ ತೆರಿಗೆಗಳನ್ನು ವಿಧಿಸುವುದು, ತೆರಿಗೆ ವಿನಾಯ್ತಿ ನೀಡುವುದು ಸಹ ಸ್ಥಳೀಯ ಅಧಿಕಾರಿಗಳೇ ಮಾಡುತ್ತಿದ್ದರು. ಇದು ಅವರಿಗೆ ಇದ್ದ ದತ್ತವಾದ ಅಧಿಕಾರ. ಸಾಮಾನ್ಯವಾಗಿ ಒಡ್ಡರು ಮತ್ತು ಉಪ್ಪಾರ ಜನಾಂಗಕ್ಕೆ ಸೇರಿದವರು ಕೆರೆಗಳನ್ನು ಕಟ್ಟುತ್ತಿದ್ದರು. ಈ ಜನಾಂಗದವರಿಗೆ, ಅದರಲ್ಲಿಯೂ ಕೆರೆ ನಿರ್ಮಿಸಿದವರಿಗೆ ಭೂಮಿ, ತೆರಿಗೆ ವಿನಾಯ್ತಿ ನೀಡುವುದರ ಮೂಲಕ ಅವರನ್ನು ಈ ಕಾರ್ಯದಲ್ಲಿ ತೊಡಗಿರುವಂತೆ ನೋಡಿಕೊಳ್ಳುತ್ತಿದ್ದರು. ಇದರೊಂದಿಗೆ ಇಂತಹ ಕೆಲಸಗಳನ್ನು ಮಾಡುವುದರಿಂದ ಪುಣ್ಯವು ಪ್ರಾಪ್ತವಾಗುತ್ತದೆಂಬ ನಂಬಿಕೆಯ ಅಂದಿನ ಜನರನ್ನು ಈ ಕೆಲಸಗಳಲ್ಲಿ ತೊಡಗಿಕೊಳ್ಳುವಂತೆ ಮಾಡುತ್ತಿತ್ತು.

ಕೆರೆಗಳನ್ನು ವೈಯಕ್ತಿಕವಾಗಿಯೂ ಜನರು ನಿರ್ವಹಿಸುತ್ತಿದ್ದರು. ಆದರೆ ಕೆರೆಗಳ ಉಸ್ತುವಾರಿ ಸಮಿತಿಯನ್ನು ಸ್ಥಳೀಯರೊಡಗೂಡಿ ರಚಿಸಿಕೊಂಡು ನಿರ್ವಹಿಸುತ್ತಿದ್ದ ಉದಾಹರಣೆಗಳೇ ಅಧಿಕವಾಗಿ ದೊರಕುತ್ತವೆ. ಈ ನಿಟ್ಟಿನಲ್ಲಿ ತಮಿಳುನಾಡಿನ ಕೆಲವು ಶಾಸನಗಳು ಉಸ್ತುವಾರಿ ಸಮಿತಿಯ ಬಗೆಗೆ ಬೆಳಕನ್ನು ಚೆಲ್ಲುತ್ತವೆ. ಚೋಳರ ಕಾಲಕ್ಕೆ ಸೇರಿದ ಉತ್ತರಮೇರೂರಿನ ಶಾಸನವು ಮುಖ್ಯತ್ವವನ್ನು ಪಡೆದಿದೆ. ಚೋಳರ 'ಏರಿವಾರಿಯಂ' ಎಂಬ ಸಮಿತಿಗಳು ಕೆರೆಗಳನ್ನು ನಿರ್ವಹಿಸುತ್ತಿದ್ದವು. ಮೇಲೆ ಉಲ್ಲೇಖಿಸಿದ ಶಾಸನದಲ್ಲಿ ಕೆರೆಗಳ ಉಸ್ತುವಾರಿ ಸಮಿತಿಯಾದ 'ಏರಿವಾರಿಯಂ' ಅಸ್ಥಿತ್ವದಲ್ಲಿತ್ತೆಂದು, ಅದರಲ್ಲಿ ಆರು ಜನ ಸದಸ್ಯರುಗಳನ್ನು ಹೊಂದಿದ್ದರು ಎಂಬುದಾಗಿ ಉಲ್ಲೇಖಿಸಿದೆ.

ಅವರ ಕಾಲಾವಧಿಯು ೩೬೦ ದಿನಗಳಾಗಿದ್ದು, ಕೆರೆಯ ಸಂಪೂರ್ಣ ಜವಾಬ್ದಾರಿ ಅವರ ಮೇಲೆ ಇರುತ್ತಿತ್ತು. ಸದಸ್ಯರು ಕೆರೆಗಳ ವಿಷಯದಲ್ಲಿ ಅಪರಾಧ ಮಾಡಿದರೆ, ಅವರನ್ನು ಸಮಿತಿಯಿಂದ ಹೊರಹಾಕಲಾಗುತ್ತಿತ್ತು ಮತ್ತು ಕೆರೆಯ ನೀರಿನಿಂದ ಸಾಗುವಳಿ ಮಾಡಿಸುವುದು ಸಹ ಅವರ ಕರ್ತವ್ಯಗಳಲ್ಲಿ ಒಂದಾಗಿತ್ತು.[25] ಇಂತಹ ಸಮಿತಿಯಲ್ಲದೆ, ಹಲವಾರು ನಿದರ್ಶನಗಳಲ್ಲಿ ಸಭೇ ಮಹಾಜನರು, ಮುಂತಾದ ಸಮಿತಿಯವರು ಸಹ ಕೆರೆಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು. ವಿಜಯನಗರ ಕಾಲದಲ್ಲಿ ಅಂತಹ ಸಮಿತಿಯ ಉಲ್ಲೇಖಗಳು ಅಷ್ಟಾಗಿ ಕಂಡುಬರುವುದಿಲ್ಲ. ಇವರ ಕಾಲದಲ್ಲಿ 'ನಾಯಕ' ಅಥವಾ 'ಅಮರನಾಯಕ' ಪದ್ಧತಿಯು ಜಾರಿಯಲ್ಲಿದ್ದು, ಅವರೇ ಈ ಜವಾಬ್ದಾರಿಯನ್ನು ಹೊರುತ್ತಿದ್ದರು.

ಒಂದು ಕುತೂಹಲಕಾರಿಯಾದ ಶಾಸನವು ತಮಿಳುನಾಡಿನ ತಿರುಪ್ಪಂಗಾಡು ಗ್ರಾಮದಲ್ಲಿ ದೊರೆತಿದ್ದು, ಅದರಂತೆ ಆ ಗ್ರಾಮದ ದೇವಸ್ಥಾನದ ಅಧಿಕಾರಿಗಳು ದೇವಾಲಯಕ್ಕೆ ಸೇರಿದ ಭೂಮಿಗಳನ್ನು ಮಾರಿ ಕೆರೆಯ ದುರಸ್ತಿಯ ಕಾರ್ಯವನ್ನು ಕೈಗೊಂಡರು.[26] ಮತ್ತೊಂದು ನಿದರ್ಶನದಲ್ಲಿ ಇರುಂಬಳ್ಳಿ ಊರಿನವರು ತಿರುವೆಂಗವಾಸಲ್ ಊರಿನವರ ಮತ್ತು ದೇವಾಲಯದ ಅಧಿಕಾರಿಗಳ ಮಧ್ಯೆ ಒಂದು ಒಪ್ಪಂದವಾಯಿತು. ತಿರುವೆಂಗವಾಸಲ್ ಗ್ರಾಮಸ್ಥರು ಅವರ ಊರಿನ ಕೆರೆಯ ಕೋಡಿ ದುರಸ್ತಿ ಮಾಡಿದಕ್ಕೆ ಪ್ರತಿಫಲವಾಗಿ ಇರುಂಬಳ್ಳಿ ಗ್ರಾಮಸ್ಥರಿಗೆ ಪಡಿಕಾವಲ್ ಅಧಿಕಾರವನ್ನು ನೀಡಿದರು.[27] ಈ ನಿದರ್ಶನದಲ್ಲಿ ಮೊದಲು ಉಲ್ಲೇಖಿಸಿರುವ ಗ್ರಾಮದಲ್ಲಿ ಆರ್ಥಿಕ ಸ್ಥಿತಿಯು ಸುಭದ್ರವಾಗಿಲ್ಲದೇ ಇದ್ದಿರಬಹುದು ಅಥವಾ ಕೆರೆಗಳ ದುರಸ್ತಿ ಮಾಡುವವರ ಕೊರತೆ ಇದ್ದಿರುವ ಕಾರಣದಿಂದ ಇನ್ನೊಂದು ಹಳ್ಳಿಯ ಜನರಿಗೆ ಈ ನಿರ್ವಹಣಾ ಕಾರ್ಯವನ್ನು ವಹಿಸಿದರೆಂದು ಅಭಿಪ್ರಾಯಪಡಬಹುದು.

ಕ್ರಿ.ಶ. ೧೩೭೭ ರಲ್ಲಿ ಮಾಂಡಲಿಕನಾದ ಲಕ್ಕನ್ನ ಒಡೆಯನು, ವಿರುಪಣ್ಣ ಒಡೆಯನ ಆದೇಶದಂತೆ, ಶೃಂಗೇರಿಯ ವಿದ್ಯಾರಣ್ಯ ಶ್ರೀಪಾದರ ಸಮ್ಮುಖದಲ್ಲಿ ೧೦೦ ಹೊನ್ನು ಬಂಗಾರ ನಾಣ್ಯಗಳನ್ನು ಮತ್ತು ದೇವಾಲಯದ ಕೆರೆಯ ದುರಸ್ತಿಗಾಗಿಯೇ ನೂಗೂರು ಅಗ್ರಹಾರದ ಮಹಾಜನರಿಗೆ ದಾನ ನೀಡಿದನೆಂದು ಒಂದು ಶಾಸನ ಹೇಳುತ್ತದೆ.[28] ಕ್ರಿ.ಶ.೧೩೮೧ರಲ್ಲಿ ವಿರೂಪಾಕ್ಷನ ಆಳ್ವಿಕೆಯ ಕಾಲದಲ್ಲಿ ದೇವಾಲಯದ ಅಧಿಕಾರಿಗಳು, ತಮ್ಮ ಹಳ್ಳಿಯ ಕೆರೆ ಒಡೆದು ಹೋದುದನ್ನು ಸರಿಪಡಿಸಲು ತಮ್ಮ ಜಮೀನನ್ನು ಮಾರಾಟ ಮಾಡಿ, ಅದರ ಹಣದಿಂದಲೇ ಕೆರೆಯನ್ನು ಸರಿಪಡಿಸಿದರೆಂದು ಇನ್ನೊಂದು ಶಾಸನ ತಿಳಿಸುತ್ತದೆ.[29] ಕಡಪಾ ಜಿಲ್ಲೆಯ ಪಾಡ್ಲಿಮಾರಿ ಹಳ್ಳಿಯ ಕೆರೆಗಳ ದುರಸ್ತಿಗೆಂದು ಮಲ್ಲನಯನಿಂಗಾರು ಎಂಬ ವ್ಯಕ್ತಿಯು 'ದಾಸವಂದ' ಪದ್ಧತಿಯಂತೆ ಭೂಮಿಯನ್ನು ಮಾಲನಗಾರ ಓಬಳ ಓಜಿಯಲು ಎಂಬಾತನಿಗೆ ದಾನ ನೀಡಿದನು. ದಾನ ಪಡೆದಾತ ಮತ್ತು ಅವನ ಸಂಗಡಿಗರು ಕೆರೆಯ ಏರಿಯನ್ನು ಭದ್ರಪಡಿಸಿ, ಅದು ಹಾಳಾಗದಂತೆ ನೋಡಿಕೊಳ್ಳುವುದು ಅವರ ಮುಖ್ಯ ಜವಾಬ್ದಾರಿಯಾಗಿತ್ತು.[30]

ಕ್ರಿ.ಶ. ೧೪೨೩ ರಲ್ಲಿ ದೇವರಾಯನ ಕಾಲಕ್ಕೆ ಸೇರಿದ ತಮಿಳು ಶಾಸನವು ನೆರ್‌ಗುಣಂ ಎಂಬಲ್ಲಿ ಕೆರೆ ತೋಡಲು ಅನುಮತಿ ನೀಡುವುದರೊಂದಿಗೆ ಆಳವನ್ನು ಹೆಚ್ಚಿಸಿ, ಹೂಳನ್ನು ತೆಗೆಸಿ, ಅದರ ಮಣ್ಣನ್ನು ಏರಿಗೆ ಉಪಯೋಗಿಸಬೇಕೆಂದು ನಿಬಂಧನೆ ವಿಧಿಸಲಾಯಿತೆಂದು ತಿಳಿಸುತ್ತದೆ.[31] ಹಾಸನ ಜಿಲ್ಲೆಯ ತಿಮ್ಮನಹಳ್ಳಿಯ ಎರಡು ಶಾಸನಗಳಂತೆ ನೇರಲಿಗೆ ಹಳ್ಳಿಯ ಕೆರೆಯನ್ನು ಕ್ರಿ.ಶ. ೧೪೨೯ರಲ್ಲಿ ಜಯಪನಾಯಕನ ಅಪ್ಪಣೆಯಂತೆ, ವಿರುಪಣ್ಣನು ಕೆರೆಯನ್ನು ಸ್ವಚ್ಛಗೊಳಿಸಿ, ಹೂಳನ್ನು ತೆಗೆದು, ಏರಿಯನ್ನು ಭದ್ರಪಡಿಸಿದಕ್ಕೆ ಭೂಮಿಯನ್ನು ದಾನವಾಗಿ ಪಡೆದನು;[32] ಆದರೆ ಈ ಕೆಲಸವು ಅಪೂರ್ಣವಾದ್ದರಿಂದ ಮುಂದಿನ ಮೂರು ವರ್ಷಗಳಲ್ಲಿ ಇದೇ ಕೆಲಸವನ್ನು ಕ್ರಿ.ಶ.೧೪೩೨ರಲ್ಲಿ ಬಸವಶಂಕರಶೆಟ್ಟಿ ಎಂಬ ವ್ಯಾಪಾರಿ ಕೈಗೊಂಡು ಅದರ ದುರಸ್ತಿಗಾಗಿ ದಾನ ನೀಡಿದನೆಂದು ತಿಳಿಸುತ್ತದೆ.[33]

ತಿರುವಾಮತ್ತೂರು ಗ್ರಾಮದ ಕೆರೆಯು ಒಡೆದ ಕಾರಣದಿಂದ ಹಾಳು ಬಿದ್ದಿತ್ತು. ಸ್ಥಳೀಯ ಅಧಿಕಾರಿಯು ಅಲ್ಲಿ ಸಂಗ್ರಹಿಸಿದ ತೆರಿಗೆಗಳಾದ ವಿಭೂತಿ ಕಾಣಿಕೆ, ಜೋಡಿ, ಸೂಲವರಿ, ರೇಕೈಗಳಿಂದ ಹಳ್ಳಿಯನ್ನು ಪುನನಿರ್ಮಾಣ ಮಾಡಿ ಕೆರೆಯನ್ನು ದುರಸ್ತಿಗೊಳಿಸಿದನೆಂದು ಕ್ರಿ.ಶ.೧೪೭೧ರ ಶಾಸನವು ಹೇಳುತ್ತದೆ.[34] ಬಳ್ಳಾರಿ ಜಿಲ್ಲೆಯ ದೊಂಡಾವತಿ ಗ್ರಾಮಸ್ಥರು ನೀರಾವರಿ ವ್ಯವಸ್ಥೆಯಿಲ್ಲದಿರುವಾಗ ಸ್ಥಳೀಯ ಅಧಿಕಾರಿಯೊಂದಿಗೆ ಅಹವಾಲು ನೀಡಿದರು. ಆ ಅಧಿಕಾರಿಯು ಭೂಮಿಯನ್ನು ನೀಡಿ, ಮೆಲಸಾನಿ ಎಂಬುವವನಿಗೆ ಕೆರೆಯ ದುರಸ್ತಿಗೆಂದು

ಹಣವನ್ನು ನೀಡಿದನೆಂದು ಕ್ರಿ.ಶ.೧೫೨೯ರ ಶಾಸನವು ಈ ವಿಷಯವನ್ನು ದಾಖಲಿಸಿದೆ.[35] ಅನಂತಪುರ ಜಿಲ್ಲೆಯ ಭೂಪಸಮುದ್ರದ ಮಹಾಜನರು ಒಡಗೂಡಿ ಗಡಾದ ಬಸವಿರೆಡ್ಡಿಗೆ ಕ್ರಿ.ಶ. ೧೫೩೪ರಲ್ಲಿ ಭೂಮಿಯನ್ನು ನೀಡಿ ಕೆರೆಯ ದುರಸ್ತಿಯನ್ನು ಮಾಡಿದರೆಂದು ಇನ್ನೊಂದು ಶಾಸನವು ಉಲ್ಲೇಖಿಸಿದೆ.[36]ಅಚ್ಯುತದೇವರಾಯನ ಕಾಲದಲ್ಲಿ ಮೇಲು ಕೋಟೆಯ ಬಳಿಯ ಎರಡು ಕೆರೆಗಳು ಕ್ರಿ.ಶ. ೧೫೩೪ರಲ್ಲಿ ಮಳೆಯಿಂದ ಒಡೆದುಹೋಯಿತು. ಪೆರಿರಾಜನೆಂಬ ಶ್ರೀವೈಷ್ಣವನು ಒಂದು ನೂರು ಗಟ್ಟಿವರಾಹವನ್ನು, ಪ್ರತಿ ಕೆರೆಗೆ ತಲಾ ಐವತ್ತು ವರಾಹದಂತೆ ಖರ್ಚು ಮಾಡಲು ನೀಡಿದನು.[37] ಕ್ರಿ.ಶ. ೧೫೪೧ ರಲ್ಲಿ ತಿರುಮದಿ ಗ್ರಾಮಸ್ಥರು ತಮ್ಮ ಊರ ಕೆರೆಯು ಮೂರು ಕಡೆಯಲ್ಲಿ ಒಡೆದು ಹೋದುದನ್ನು ತಾವೇ ದುರಸ್ತಿ ಮಾಡಿದರು ಮತ್ತು ಅದಕ್ಕೆ ಪ್ರತಿಫಲವಾಗಿ ಅವರು ಒಂದು ಖಂಡುಗಕಾಳು ಬೆಳೆಯಬಲ್ಲ ಭೂಮಿಯನ್ನು ಕಟ್ಟುಕೊಡಿಗೆಯಾಗಿ ಪಡೆದದ್ದು ಶಾಸನೋಕ್ತ ವಿಷಯ.[38]

ಕೊನೆಯ ದೇವಮಹಾ ಅರಸು ಎಂಬ ಅಧಿಕಾರಿಯು ಕೆರೆಗಳ ಹೂಳು ತೆಗೆಸಲು ಹಾಗೂ ಆಳವನ್ನು ಹೆಚ್ಚಿಸಲು, ಕುಣಿಗಳು ೩ ಚದುರ ಅಡಿ ಮತ್ತು ೨ ಅಡಿ ಆಳ ಎಂದು ನಿಗದಿಪಡಿಸಿ ಕುಣಿಗಳ ಮಣ್ಣನ್ನು ಕೆರೆಯ ಒಡ್ಡಿಗೆ ಹರಡುವಂತೆ ಏರ್ಪಾಡು ಮಾಡಿ ದಾನವನ್ನು ನೀಡಿದನೆಂದು ಚಿತ್ರದುರ್ಗ ಜಿಲ್ಲೆಯ ಸಿದ್ಧಾಪುರ ಹಳ್ಳಿಯ ಕ್ರಿ.ಶ. ೧೫೫೧ರ ಒಂದು ಶಾಸನ ತಿಳಿಸುತ್ತದೆ.[39]ಕುಣಿಗಳ ಆಧಾರದ ಮೇಲೆ ಹಣವನ್ನು ನೀಡಲಾಗುತ್ತಿತ್ತು ಎಂಬ ವಿಷಯವು ಸಹ ಅದರಲ್ಲಿ ಉಲ್ಲೇಖಿತವಾಗಿದೆ. ಸಿಡಾಲಯದ ಕೋಟೆಯ ಕೆರೆಯು ಕ್ರಿ.ಶ. ೧೫೫೪ರಲ್ಲಿ ಬಿರುಕು ಬಿಟ್ಟಿದ್ದರಿಂದ ಸ್ಥಳೀಯ ಅಧಿಕಾರಿಗಳು, ಗೌಡರು ಮತ್ತು ಶಾನುಭೋಗರು ಇತರರೊಂದಿಗೆ ಸೇರಿ ಸ್ಥಳೀಯ ಅಧಿಕಾರಿ ಮಹಾನಾಯಕಾಚಾರ್ಯನಿಗೆ ಮನವಿ ಸಲ್ಲಿಸಿದರು. ಅದರಂತೆ ಕೆರೆಯ ತೂಬಿನ ಬಳಿಯ ಜಮೀನು ನೀಡಿದರೆ ತಾವುಗಳು ಕೆರೆಯ ನಿರ್ಮಾಣ ಕಾರ್ಯವನ್ನು ಆರಂಭಿಸುವುದಾಗಿ ಸೂಚಿಸಿ, ಕೆಲಸವನ್ನು ಪೂರೈಸಿ, ಜಮೀನುಗಳನ್ನು ಪಡೆದುದಾಗಿ ಶಾಸನವು ಹೇಳುತ್ತದೆ.[40] ತೂಬಿನ ಸಮೀಪದ ಜಮೀನಿಗೆ ಅಧಿಕ ಮೌಲ್ಯವಿರುತ್ತದೆ. ಈ ಭಾಗದ ಜಮೀನುಗಳಿಗೆ ನೀರು ಬೇಗ ಪೂರೈಕೆಯಾಗುತ್ತದೆ ಎಂಬುದೇ ಮುಖ್ಯ ಕಾರಣ.

ಕ್ರಿ.ಶ. ೧೫೫೬ ಸದಾಶಿವರಾಯನ ಕಾಲದ ರಾಯದುರ್ಗ ತಾಲೂಕಿನ ಯಲಹಂಜಿ ಹಳ್ಳಿಯಲ್ಲಿನ ಶಾಸನದಂತೆ, ಆ ಭಾಗದ ಆಡಳಿತಾಧಿಕಾರಿಯು ಯಲಹಂಜಿ, ಸೋಮಲಾಪುರ ಮತ್ತು ಇತರ ಹಳ್ಳಿಗಳಲ್ಲಿ ಅಕ್ರಮವಾಗಿ ತೆರಿಗೆಗಳನ್ನು ಪಡೆದನೆಂದು ಯಲಹಂಜಿ ಗ್ರಾಮಸ್ಥರು, ಸ್ಥಳೀಯ ಆಡಳಿತಾಧಿಕಾರಿ ತಿರುಮಲರಾಜಯ್ಯ ದೇವನಿಗೆ ದೂರನ್ನು ನೀಡದರು. ಈ ರೀತಿಯಾಗಿ ಅಕ್ರಮವಾಗಿ ಸಂಗ್ರಹಿಸಿದ ತೆರಿಗೆಗಳನ್ನು ಕೆರೆಯ ದುರಸ್ತಿ ಮತ್ತಿತರ ನೀರಾವರಿ ಕೆಲಸಗಳಿಗೆ ಬಳಸಬೇಕೆಂದು ಸಂಗ್ರಹಿಸಿದ ತೆರಿಗೆಗಳನ್ನು ಕೆರೆಯ ದುರಸ್ತಿ ಮತ್ತಿತರ ನೀರಾವರಿ ಕೆಲಸಗಳಿಗೆ ಬಳಸಬೇಕೆಂದು ತಿರುಮಲರಾಜಯ್ಯ ದೇವರು ಆಜ್ಞಾಪಿಸಿದನೆಂದು ಶಾಸನದಿಂದ ತಿಳಿಯಬರುತ್ತದೆ.[41] ಇದರಂತೆಯೇ, ಚಿತ್ರದುರ್ಗ ಜಿಲ್ಲೆಯ ಕರಡಿಹಳ್ಳಿಯನ್ನು ಹರಿಹರ ರಾಯನಪುರವೆಂದು ಹೆಸರಿಸಿ ಬ್ರಾಹ್ಮಣರಿಗೆ ಕ್ರಿ.ಶ.೧೫೫೬ ರಲ್ಲಿ ದಾನ ನೀಡಲಾಯಿತು. ಆದರೆ ಸ್ಥಳೀಯ ಅಧಿಕಾರಿಯು ಅಕ್ರಮವಾಗಿ ತೆರಿಗೆಗಳನ್ನು ಸಂಗ್ರಹಿಸಿದರು. ಆದರೆ ಸ್ಥಳೀಯ ಅಧಿಕಾರಿಯು ಅಕ್ರಮವಾಗಿ ಸಂಗ್ರಹಿಸಿದ್ದ ತೆರಿಗೆಗಳನ್ನು ದೇವಾಲಯ ಮತ್ತು ಕೆರೆಗಳ ಕಾರ್ಯಕ್ಕೆ ವಿನಿಯೋಗಿಸಬೇಕೆಂದು ಆಜ್ಞಾಪಿಸಿದನೆಂದು ಶಾಸನವು ದಾಖಲಿಸಿದೆ.[42]ಈ ಜಿಲ್ಲೆಗೆ ಸೇರಿದ ಇನ್ನೊಂದು ಶಾಸನವು ಕುತೂಹಲಕಾರಿಯಾದ ಅಂಶವನ್ನು ತಿಳಿಸುತ್ತದೆ. ಕ್ರಿ.ಶ.೧೩೭೫ರಲ್ಲಿ ಯಾದವನಾರಾಯಣ ಎಂಬ ವ್ಯಕ್ತಿಯು ಲಕ್ಷ್ಮೀನಾರಾಯಣಪುರ ಅಗ್ರಹಾರದಲ್ಲಿ ವಾರಿಸುದಾರರು ಇರದೇ ತೀರಿಕೊಂಡವರ ಆಸ್ತಿಯನ್ನು ಹಳ್ಳಿಯ ಬ್ರಾಹ್ಮಣರಿಗೆ ದಾನ ನೀಡಿ, ಅದನ್ನು ಕೆರೆಯ ಉಸ್ತುವಾರಿಗೆ ಬಳಸಿಕೊಳ್ಳಬೇಕೆಂದು ತಿಳಿಸಿದನೆಂದು ಉಲ್ಲೇಖಿಸಿದೆ.[43] ‘ಕೂಡಿ ಮರಾಮತ್’ ‘ಆಳಮಂಜಿ’ ಪದ್ಧತಿಯಂತೆ ಕೆರೆಯನ್ನು ಜನರು ಸಾಮೂಹಿಕ ಪ್ರಯತ್ನದಿಂದ ಸಂರಕ್ಷಿಸಿ ಅವುಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು ಎಂಬುದು ಶಾಸನಗಳ ಅಧ್ಯಯನದಿಂದ ತಿಳದು ಬರುವ ವಿಷಯ.[44]

ಕೆರೆಯನ್ನು ಕಟ್ಟುವುದಕ್ಕೆ ಮತ್ತು ಅವುಗಳನ್ನು ಸಂರಕ್ಷಿಸುವುದಕ್ಕೆ ಅರಸರು, ಸ್ಥಳೀಯ ಅಧಿಕಾರಿಗಳು ಜನರಿಗೆ ಹಲವು ವಿಧಗಳಿಂದ ಪ್ರೋತ್ಸಾಹಿಸುತ್ತಿದ್ದರು. ಭೂಮಿ, ಹಣ, ಮನೆ, ತೆರಿಗೆಗಳಿಂದ ವಿನಾಯ್ತಿ, ಮುಂತಾದವುಗಳ ಮೂಲಕ ನೀರಾವರಿ, ಕೆಲಸಗಳನ್ನು

ಸಮರ್ಪಕವಾಗಿ ನಿಭಾಯಿಸುತ್ತಿದ್ದರು. ಅಂತಹ ಒಂದು ಪದ್ಧತಿಯು 'ದಸವಂದ' ಈ ಪದದ ಬಳಕೆಯು ತಮಿಳುನಾಡು ಮತ್ತು ಆಂಧ್ರಪ್ರದೇಶದ ಶಾಸನಗಳಲ್ಲಿ ಕಾಣಬಹುದು. ಕನ್ನಡ ಶಾಸನಗಳಲ್ಲಿ 'ಕಟ್ಟುಕೊಡಿಗೆ' ಎಂದು ದಸವಂದ ಪದ್ಧತಿಗೆ ಬಳಸಲಾಗಿದೆ. ದಸವಂದ ಪದಕ್ಕೆ ಹಲವಾರು ಅರ್ಥಗಳಿದ್ದರೂ, ಕೆರೆ ನೀರಾವರಿ ವ್ಯವಸ್ಥೆಗೆ ಸಂಬಂಧಪಟ್ಟಂತೆ ೧/೧೦ ಭಾಗವೆಂದಾಗಿದೆ. ಸಾಗುವಳಿ ಮಾಡಿದವರಿಗೆ ಅಥವಾ ಕೂಲಿಯವರಿಗೆ ಹತ್ತನೇ ಒಂದು ಭಾಗದಷ್ಟು ಉತ್ಪನ್ನ ಅಥವಾ ಹಣ ನೀಡುವ ಭಾಗವಾಗಿದೆ. ಕಾಲಕಾಲಕ್ಕೆ ಹತ್ತನೆಯ ಒಂದು ಭಾಗವಾಗಿರದೆ ಹತ್ತನೆಯ ಎರಡು ಭಾಗಗಳಾಗಿಯೂ ಇದ್ದವು ಎಂಬುದಕ್ಕೆ ಶಾಸನಾಧರಗಳಿವೆ.[45]

ಕೃಷ್ಣದೇವರಾಯನ ಕಾಲದ ಒಂದು ಶಾಸನವು ಬೆಂಗಳೂರು ಜಿಲ್ಲೆಯಲ್ಲಿ ದೊರಕಿದ್ದು 'ಕಟ್ಟುಗುತ್ತಿಗೆ' ಮತ್ತು 'ಗೌಂಡಗೊಡಿಕೆ' ಎಂಬ ಪದಗಳ ಉಲ್ಲೇಖವಿದೆ. ಕೇತಗೌಂಡನು ಸ್ಥಳೀಯದ ಅಧಿಕಾರಿಯಾಗಿದ್ದ ಗೋಪನಾಯಕನ ಹೆಸರಿನಲ್ಲಿ ಕಟ್ಟಿದ ಗೋಪಸಮುದ್ರ ಕೆರೆಯನ್ನು ನೀಡಿದಕ್ಕೆ ಮೇಲೆ ಉಲ್ಲೇಖಿಸಿದ ಎರಡು ದಾನಗಳನ್ನು ನೀಡಲಾಗಿತ್ತು. ಪ್ರಸ್ತುತ ದಾನವನ್ನು ದಾನಿಯು ತನ್ನ ಹೆಂಡತಿ ಹಾಗೂ ಮಕ್ಕಳ ಒಪ್ಪಿಗೆಯನ್ನು ಪಡೆದು ನಂತರ ದಾನ ಮಾಡಿದನೆಂದು ಶಾಸನ ಹೇಳುವುದು ಗಮನಾರ್ಹ.[46]

ಬಳ್ಳಾರಿ ಜಿಲ್ಲೆಯ ಹಾವಿನಹಾಳು ಹಳ್ಳಿಯ ಶಾಸನದ ತೇದಿ ಕ್ರಿ.ಶ.೧೫೨೯. ದೊಂಡವತಿ ಕೆರೆಯ ನಿರ್ಮಾಣಕ್ಕೆ ಮುದ್ದಣ ನಾಯಕನ ಸಮ್ಮತಿಯ ಮೇರೆಗೆ ಗ್ರಾಮಸ್ಥರೆಲ್ಲರೂ ಸೇರಿ ಸ್ಥಿರವಾದ ದಸವಂದದ ದಾನವನ್ನು ಮಲೆಸಾನಿ ಎಂಬ ವ್ಯಕ್ತಿಗೆ ನೀಡಿದರು. ಮಲೆಸಾನಿಯು ಕೆರೆಯನ್ನು ಕಟ್ಟಿ, ನೀರಾವರಿ ಸೌಕರ್ಯವನ್ನು ಏರ್ಪಡಿಸಿಕೊಟ್ಟ ಕಾರಣಕ್ಕೆ ಅವನು ದಸವಂದವನ್ನು ಪಡೆದನೆಂದು ಶಾಸನವು ದಾಖಲಿಸಿದೆ.[47] ಇಂತಹ ಅನೇಕ ಉಲ್ಲೇಖಗಳನ್ನು ಶಾಸನಗಳಿಂದ ತಿಳಿಯಬಹುದು.

ಕೆರೆಗಳ ನಿರ್ವಹಣೆಯಲ್ಲಿ ಕೆರೆಬಂಡಿಗಳು ಮುಖ್ಯ ಪಾತ್ರವನ್ನು ಮಹಿಸಿತ್ತೆಂದು ಶಾಸನಗಳ ಆಧಾರದಿಂದ ಹೇಳಬಹುದು. ಕೆರೆಯನ್ನು ಸುಸ್ಥಿತಿಯಲ್ಲಿಡಲು, ಕೆರೆಯ ಹೂಳನ್ನು ಎತ್ತಿ ಸಾಗಿಸಲು ಎತ್ತಿನ ಬಂಡಿಗಳನ್ನು ಬಳಸಲಾಗುತ್ತಿದ್ದು, ಅವುಗಳಿಗೆ ಕೆರೆ ಬಂಡಿಗಳೆಂದು ಕರೆಯಲಾಗಿದೆ. ಕೆರೆಬಂಡಿಗಳಿಗೆ, ಅವುಗಳನ್ನು ನಿರ್ವಹಿಸುವವರಿಗೆ ಸಹ ದಾನ ದತ್ತಿಗಳನ್ನು ನೀಡಿ ವ್ಯವಸ್ಥೆಯು ಸುಗಮವಾಗಿರುವಂತೆ ನೋಡಿಕೊಳ್ಳುತ್ತಿದ್ದರು. ದಾನ ಪಡೆದವರು ನಿಯತವಾಗಿ ಕೆರೆಯಲ್ಲಿ ಸಂಗ್ರಹಗೊಂಡ ಹೂಳು, ಕಸ, ಕಲ್ಮಶಗಳನ್ನು ಎತ್ತಿ ಕೆರಗೆ ಮತ್ತು ತೂಬಿಗೆ ಯಾವುದೇ ವಿಧದ ದಕ್ಕೆ ಉಂಟಾಗದಂತೆ ನೋಡಿಕೊಳ್ಳುವುದು ಅವರ ಕರ್ತವ್ಯವಾಗಿತ್ತು.

ಕ್ರಿ.ಶ. ೧೩೬೭ರ ಮೊದಲನೆಯ ಬುಕ್ಕರಾಯನ ಶಾಸನವು ಹಾಸನ ಜಿಲ್ಲೆಯ ಕೆಲ್ಲಂಗೆರಿಯ ಶಾಸನದಂತೆ, ವಿಜಯನಗರ ಕಾಲದ ಪೂರ್ವದಲ್ಲಿಯೇ ಇದ್ದ ಕೆರೆಯ ವ್ಯವಸ್ಥೆಯನ್ನು ಗಮನಿಸಲು ಅಗ್ರಹಾರದ ಮಹಾಜನರಿಗೆ, ನೋಟದ ಚಂದಪ್ಪ ಎಂಬ ವ್ಯಕ್ತಿಯು ಹತ್ತು ಬಂಡಿಗಳನ್ನು ಮತ್ತು ಎತ್ತುಗಳನ್ನು ನೀಡಿದ್ದರೂ, ವ್ಯವಸ್ಥೆಯು ಸಮರ್ಪಕವಾಗಿ ಸಾಗದ ಕಾರಣದಿಂದ ಅಗ್ರಹಾರದ ಮಹಾಜನರು ಹಣವನ್ನು ಒದಗಿಸಿದರು. ಈ ಹಣವನ್ನು ಒಂದು ಹೇರಿನ ದವಸಕ್ಕೆ ಎರಡು ತಾರಾಗಳನ್ನು (ಬೆಳ್ಳಿನಾಣ್ಯ) ಸಂಗ್ರಹಿಸುತ್ತಿದ್ದರು. ಜೊತೆಗೆ ಆಯಕಟ್ಟು ಪ್ರದೇಶದಲ್ಲಿ ಬೆಳೆಯಲಾದ ಅಡಿಕೆ, ತೆಂಗು, ವೀಳೆ ಮತ್ತು ಹಣ್ಣುಗಳ ಮೇಲೆ ತೆರಿಗೆ ವಿಧಿಸಿ ಸಂಗ್ರಹಿಸುತ್ತಿದ್ದರು. ಸಂಗ್ರಹಗೊಂಡ ಹಣವನ್ನು ಕೆರೆಬಂಡಿಗೆ, ಕಬ್ಬಿಣದ ಹಾರೆ, ಕೀಲೆಣ್ಣೆ, ಮುಂತಾದವುಗಳಿಗೆ ಬಳಸುತ್ತಿದ್ದರು ಎಂದು ಶಾಸನವು ತಿಳಿಸುತ್ತದೆ.[48]

ಕ್ರಿ.ಶ.೧೫೧೩ರ ಕೃಷ್ಣದೇವರಾಯನ ಕಾಲದ ಶಾಸನದಂತೆ ಬೆಂಗಳೂರು ಜಿಲ್ಲೆಯ ಕಡ್ಲೂರು ಗ್ರಾಮದ ಹಿರಿಯ ಕೆರೆಯು ನಿರುಪಯುಕ್ತವಾದಾಗ ಅದರ ದುರಸ್ತಿಗೆ ಮತ್ತು ಕೆರೆಬಂಡಿಗಳಿಗಾಗಿ ಹೊಸಹಳ್ಳಿ ಗ್ರಾಮವನ್ನು ದಾನ ನೀಡಲಾಯಿತು.[49] ಇದರಂತೆಯೇ ಚೆನ್ನಪಟ್ಟಣ ತಾಲೂಕಿನ ಕಡಲೂರು ಮತ್ತು ಮೊಗೆಹಳ್ಳಿಗಳ ಎರಡೂ ಕೆರೆಗಳನ್ನು ಕ್ರಿ.ಶ. ೧೫೧೩ರಲ್ಲಿ ದುರಸ್ತಿ ಮಾಡಲಾಯಿತು. ಈ ಕೆಲಸಕ್ಕೆಂದು ಆರು ಕೆರೆಬಂಡಿಗಳನ್ನು ನಿಯೋಜಿಸಲಾಯಿತೆಂದು ಶಾಸನವು ಉಲ್ಲೇಖಿಸಿದೆ.[50] ಇಂತಹ ವ್ಯವಸ್ಥೆಯು ಕೆರೆಯ ಸಂರಕ್ಷಣೆಯಲ್ಲಿ ಉಪಯೋಗವಾಗುತ್ತಿತ್ತು ಎಂಬುದರಲ್ಲಿ ಸಂಶಯವಿಲ್ಲ.

ಕೆರೆಬಂಡಿಯಷ್ಟೇ ಮುಖ್ಯತ್ವವನ್ನು ಪಡೆದಿರುವುದು ಮೀನುಗುತ್ತಿಗೆ. ಕೆರೆಯಲ್ಲಿನ ಮೀನುಗಳನ್ನು ಹಿಡಿಯಲು ಗುತ್ತಿಗೆಯನ್ನು ವಿಜಯನಗರ ಕಾಲದಲ್ಲಿ ನೀಡಲಾಗುತ್ತಿತ್ತು. ಗುತ್ತಿಗೆ ಪಡೆದವರು ಮೀನು ಹಿಡಿಯುವುದರೊಂದಿಗೆ ಕೆರೆಯ ರಕ್ಷಣಾ ಕಾರ್ಯವನ್ನು ಸಹ ಮಾಡಬೇಕಾಗುತ್ತಿತ್ತು. ಇದಕ್ಕೆ ನಿದರ್ಶನವೆಂಬಂತೆ ಮಹಾಮಂಡಲೇಶ್ವರ ಮಾಚೆರೆಡ್ಡಿ ಗಣಪತಿರೆಡ್ಡಿಯಾರ್ ಸೀಯಪಾಡಿ ಕೆರೆಗೆ ತೂಬನ್ನು ನಿರ್ಮಿಸಿ ಅದರ ಮೇಲ್ವಿಚಾರಣೆಗೆ ತಲಗುವ ವೆಚ್ಚವನ್ನು ಮೀನುಗಾರಿಕೆಯ ಗುತ್ತಿಗೆಯನ್ನು ಪಡೆದ ಮೀನುಗಾರರಿಂದ ಸಂಗ್ರಹಿಸುವ ವ್ಯವಸ್ಥೆ ಮಾಡಿದನೆಂದು ಒಂದು ಶಾಸನವು ತಿಳಿಸುತ್ತದೆ.[51] ಇನ್ನೊಂದು ಶಾಸನದಂತೆ ಅಕ್ಕದೇವಿ ಎಂಬಾಕೆ ಕ್ರಿ.ಶ.೧೪೬೯ರಲ್ಲಿ ತೆನ್ನಮಹಾದೇವಿ ಮಂಗಳಂ ಕೆರೆಯ ಹೂಳನ್ನು ತೆಗೆಸಲು ಹಳ್ಳಿಯ ಜನರಿಂದ ಅಲ್ಪಪ್ರಮಾಣದ ಭತ್ತ, ಏರಿಮೀನು ವಿಲೈಪ್ಪಣಂ (ಮೀನು ಮಾರಾಟದಿಂದ ಸಂಗ್ರಹಗೊಂಡ ಹಣ) ಮತ್ತು ಮೀನುಗುತ್ತಿಗೆಯ ಹಣವನ್ನು ಸಂಗ್ರಹಿಸದಳೆಂದು ತಿಳಿಸುವುದು ಗಮನಾರ್ಹ.[52] ಕ್ರಿ.ಶ. ೧೪೪೯ರಲ್ಲಿ ತಿಮ್ಮನಾಯಕರು ಕೆರೆಯ ಹೂಳನ್ನು ತೆಗೆಸುವ ಖರ್ಚನ್ನು ಮೀನುಗಾರರಿಂದ ಪಡೆದನೆಂದು ಇಂದಿರಾವನಮ್ ಶಾಸನವು ಉಲ್ಲೇಖಿಸಿದೆ.[53] ತಮಿಳುನಾಡಿನ ಶಾಸನಗಳು ಏರಿವಿಲೈಪ್ಪಣಂ, ಏರಿಮೀನ್ ಪಾಸಂ ಎಂಬ ಪದಗಳು ಉಲ್ಲೇಖಿಸುತ್ತವೆ. ಇವುಗಳ ಮುಖ್ಯವಾಗಿ ಕೆರೆ ಮೀನುಗುತ್ತಿಗೆ ಮೀನು ಮಾರಾಟದಿಂದ ಸಂಗ್ರಹಗೊಳ್ಳುವ ಹಣಗಳಾಗಿದ್ದು, ಅವುಗಳಿಂದ ಕೆರೆಯನ್ನು ರಕ್ಷಿಸುತ್ತಿದ್ದರು. ಮೇಲೆ ವಿವರಿಸಿದ ಏರ್ಪಾಡುಗಳೊಂದಿಗೆ ಕೆರೆಗಳಿಗೆ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು. ಶಾಸನಗಳು ಅನೇಕ ಬಗೆಯ ತೆರಿಗೆಗಳನ್ನು ಉಲ್ಲೇಖಿಸುತ್ತವೆ. ಈ ತೆರಿಗೆಗಳು 'ಏರಿ ಆಯಂ', 'ಚೆರುವು ಕುಂಚಾಲು', 'ನೀರಬಿರಾಡ', 'ವಿಭೂತಿ', 'ಕಾಣಿಕೆ ಜೋಡಿ', 'ಸೂಲವರಿ', 'ರೇಖಿ' ಮುಂತಾದವುಗಳಾಗಿವೆ. ತಮಿಳು, ತೆಲುಗು ಮತ್ತು ಕನ್ನಡ ಶಾಸನಗಳಲ್ಲಿ ಈ ಪದಗಳನ್ನು ಬಳಸಿರುವುದು ಕಂಡುಬರುತ್ತದೆ. ತಮಿಳು ಪ್ರದೇಶಗಳಲ್ಲಿ 'ಏರಿಂ ಆಯಂ' ಮತ್ತು 'ನೀರುಕೂಲಿ' ಎಂಬ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು.[54] ಕ್ರಿ.ಶ. ೧೫೧೩ರ ಹಂಪಿಯ ಕೃಷ್ಣದೇವರಾಯನ ಕಾಲಕ್ಕೆ ಸೇರಿದ ಒಂದು ಶಾಸನವು ವಿರೂಪಾಕ್ಷ ದೇವರ ಹೆಸರಲ್ಲಿ 'ನೀರು ಕಂದಾಯ' ವಿಧಿಸಿದ್ದನ್ನು ದಾಖಲಿಸಿದೆ.[55] ಇದನ್ನು 'ಕಾಲುವೆ ನೀರಿನ ಬಿರಾಡ' ಎಂದಿದ್ದು, ಬಹುಶಃ ತುರ್ತು ಕಾಲುವೆಯನ್ನು ಕುರಿತು ಉಲ್ಲೇಖಿಸುತ್ತದೆಯೆಂದು ಊಹಿಸಬಹುದು. ಕೆಲವೊಮ್ಮೆ ಅಧಿಕಾರಿಗಳು ಅಕ್ರಮ ತೆರಿಗೆಗಳನ್ನು ಸಂಗ್ರಹಿಸುತ್ತಿದ್ದರೆಂದು ಹಾಗೂ ಈ ವಿಷಯ ಅವರ ಉನ್ನತ ಅಧಿಕಾರಿಗಳ ಗಮನಕ್ಕೆ ಬಂದಾಗ ಅವರು ಕೈಗೊಳ್ಳುತ್ತಿದ್ದ ಕ್ರಮಗಳನ್ನು ಕುರಿತು ಈಗಾಗಲೇ ಉಲ್ಲೇಖಿಸಲಾಗಿದೆ.

ಮೇಲಿನ ವ್ಯವಸ್ಥೆಗಳಿಂದ ಜನರು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೆರೆಗಳ ನಿರ್ಮಾಣ ಕಾರ್ಯಗಳಲ್ಲಿ ಮತ್ತು ಅವುಗಳ ಸಂರಕ್ಷಣೆ, ನಿರ್ವಹಣಾ ಕಾರ್ಯಗಳಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಂಡಿದ್ದರೆಂಬುದನ್ನು ವಿಜಯನಗರ ಕಾಲದ ಕೆರೆ ನೀರಾವರಿ ವ್ಯವಸ್ಥೆಯನ್ನು ಅಧ್ಯಯನ ಮಾಡಿದಾಗ ತಿಳಿದು ಬರುವ ವಿಷಯವಾಗಿದೆ. ಇಂದು ಪ್ರಚಲಿತವಾಗಿರುವ ಸಮಸ್ಯೆಗಳು, ವಿಜಯನಗರ ಕಾಲದಲ್ಲಿಯೂ ಇತ್ತೆಂದು ಕಂಡುಬರುತ್ತದೆ. ಅದರೊಂದಿಗೆ ಜನರ ಸಾಮೂಹಿಕ ಮತ್ತು ವೈಯಕ್ತಿಕ ಪ್ರಯತ್ನಗಳಿಂದ ಸಮಸ್ಯೆಗಳನ್ನು ಬಗೆಹರಿಸಿಕೊಂಡಿರುವ ಉದಾಹರಣೆಗಳನ್ನು ಮೇಲೆ ನೀಡಲಾಗಿದೆ. ಈ ನಿಟ್ಟಿನಲ್ಲಿ ಅಂದಿನ ಜನರು, ಅಧಿಕಾರಿಗಳು ಅನುಸರಿಸಿದ ಮಾರ್ಗಗಳನ್ನು ನಾವು ಇಂದಿನ ಸಮಸ್ಯೆಗಳಿಗೆ ಅಳವಡಿಸಿಕೊಂಡರೆ, ಕರ್ನಾಟಕದಲ್ಲಿರುವ ಸಹಸ್ರಾರು ಕೆರೆಗಳನ್ನು ಉತ್ತಮ ರೀತಿಯಲ್ಲಿ ಸಂರಕ್ಷಿಸಿ ಉಪಯೋಗಿಸಿಕೊಳ್ಳಬಹುದು.

---

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

[1]ಕೊಟ್ರಯ್ಯ, ಸಿ.ಟಿ.ಎಂ. (ಮೂಲ), ಧ್ರುವನಾರಾಯಣ, ಎಂ. (ಅನು). ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ಪು.೨-೭; ವಾಸುದೇವನ್, ಸಿ.ಎಸ್., ಹಂಪಿ ಪರಿಸರದ ಕೆರೆಗಳು, ಪು.೪-೧೯.

[2]ಅದೇ, ಪು. ೭-೯

[3]ಎಪಿಗ್ರಾಫಿಯ ಇಂಡಿಕಾ (ಎಫ್.ಇಂಡ್.), ಸಂ. VIII, ಪು.೪೦-೪೯; ಇಂಡಿಯನ್ ಆಂಟಿಕ್ವೇರಿ, ಸಂ. VII, ಪು. ೨೫೯-೨೬೧
[4]ಕೊಟ್ರಯ್ಯ ಸಿ.ಟಿ.ಎಂ. (ಮೂಲ), ಧ್ರುವನಾರಾಯಣ, ಎಂ. (ಅನು.), ಪೂರ್ವೋಕ್ತ, ಪು.೯-೨೮
[5]ಎಂ.ಎ.ಆರ್.೧೯೨೯,ಪು. ೫೦ ಮತ್ತು ಶಾಸನ ಸಂ.I, ಪು. ೧೦
[6]ಶಾಸ್ತ್ರೀ, ಕೆ.ಎ.ಎನ್., ದಿ ಚೋಳಾಸ್, ಪು.೫೮೩-೫೮೪; ಎ ಆರ್ ಎಸ್ ಐ ಇ ೧೯೨೩,ಪು. ೧೨೩
[7]ಪಂಪಭಾರತ, ೧೪, ೫೬-೫೭; ಚಿದಾನಂದಮೂರ್ತಿ, ಎಂ. "ಜಿನವಲ್ಲಭನ ಕುರಿಕ್ಯಾಲ ಶಾಸನ: ಹೆಚ್ಚಿನ ಶೋಧಗಳು ಮತ್ತು ವ್ಯಾಖ್ಯಾನಗಳು" ಹೊಸತು ಹೊಸತು, ಪು.೯೭-೧೨೦; ವಾಸುದೇವನ್, ಸಿ.ಎಸ್.(ಸಂ.), ಕನ್ನಡ ಇನ್ಸ್‌ಕ್ರಿಪ್ಶನ್ಸ್ ಆಫ್ ಆಂದ್ರಪ್ರದೇಶ್, ಪೀಠಿಕೆ, ಪು.XL ಮತ್ತು ಸಂ. ೪೨೮ಮತ್ತು ೪೨೯
[8]ವಾಸುದೇವನ್, ಸಿ.ಎಸ್. ಪೂರ್ವೋಕ್ತ. ಪು.೧ ಮತ್ತು ಸೌತ್ ಇಂಡಿಯನ್ ಇನ್ಸ್ ಕ್ರಿಪ್ಶನ್ಸ್, (ಎಸ್.ಐ.ಐ) ಸಂ. IV, ಸಂ ೨೬೭
[9]ಅದೇ, ಪು. ೨೦-೨೧ ಮತ್ತು ಕೊಟ್ರಯ್ಯ, ಸಿ.ಟಿ.ಎಂ. (ಮೂಲ), ಧ್ರುವನಾರಾಯಣ, ಎಂ. (ಅನು), ಪೂರ್ವೋಕ್ತ, ಪು. ೭೧-೭೨
[10]ಎಪಿಗ್ರಾಫಿಯ ಕರ್ನಾಟಿಕ (ಹಳೆಯ ಸಂಪುಟ: ಇನ್ನು ಮುಂದೆ ಎಫ್.ಕಾರ್ನ್). ಸಂ. XI, ಸಂ. ಡಿಜಿ ೬೭
[11]ಎಫ್.ಇಂಡ್.ಸಂ. XIV, ಸಂ.೪, ಪು. ೯೭ರಿಂದ ; ಕೊಟ್ರಯ್ಯ, ಸಿ.ಟಿ.ಎಂ. (ಮೂಲ), ಪೂರ್ವೋಕ್ತ, ಪು. ೭೨-೭೩
[12]ಎಆರ್ ಎಸ್ ಐಇ, ೧೯೩೫-೩೬, ಸಂ. ೩೧೨
[13]ಅದೇ, ೧೯೪೯-೫೦, ಸಂ.೨೭೮
[14]ಅದೇ, ೧೯೩೪-೩೫, ಸಂ. ೩೫೧
[15]ಎಫ್.ಕಾರ್ನ್ (ಹಳೆಯ), ಸಂ. V, ಸಂ.ಬಿಜಿ ೧೦
[16]ಅದೇ, ಸಂ X,ಸಂ. ಕೆಎಲ್ ೭೩
[17]ಅದೇ, ಸಂ.IX, ಸಂ ಸಿಪಿ ೧೬೯
[18]ಎಸ್ ಐಐ, ಸಂ. IX, ಭಾಗ II, ಸಂ. ೪೪೦
[19]ತಿರುಮಲ ತಿರುಪತಿ ದೇವಸ್ಥಾನಂ ಇನ್ಸ್ ಕ್ರಿಪ್ಶನ್ಸ್, ಸಂ. I, ಸಂ. ೨೨೩
[20]ಅದೇ, ಸಂ. III, ಸಂ. ೧೧: ಈ ವಿಷಯವನ್ನು ಕುರಿತು ಹಲವಾರು ಶಾಸನಗಳು ಉಲ್ಲೇಖವನ್ನು ಮಾಡುತ್ತವೆ.
[21]ಟೋಪೋಗ್ರಾಫಿಕಲ್ ಲಿಸ್ಟ್, ಸಂ. I, ಸಂ. ೪೪೮
[22]ಎಫ್. ಕಾರ್ನ್ (ಹಳೆಯ), ಸಂ. VI, ಸಂ. ೨೦
[23]ಎಸ್ ಐಐ, ಸಂ. XXIV, ಸಂ. ೩೭೮
[24]ಕೊಟ್ರಯ್ಯ ಸಿ.ಟಿ.ಎಂ. (ಮೂಲ), ಪೂರ್ವೋಕ್ತ, ಪು. ೧೪೨-೧೪೩
[25]ಶಾಸ್ತ್ರಿ, ಕೆ.ಎ.ಎನ್., ಪೂರ್ವೋಕ್ತ. ಪು. ೫೮೩ -೫೮೪,
[26]ಮಹಾಲಿಂಗಂ, ಟಿ.ವಿ., ಎಕನಾಮಿಕ್ ಲೈಫ್ ಇನ್ ದಿ ವಿಜಯನಗರ ಎಂಪೈರ್, ಪು. ೮೯
[27]ಟೋಪೋಗ್ರಾಫಿಕಲ್ ಲಿಸ್ಟ್, ಸಂ. III, ಪುದುಕೊಟ್ಟೈ, ಸಂ. ೩೮೦
[28]ಎಫ್.ಕಾರ್ನ್ (ಹಳೆಯ), ಸಂ. VI, ಸಂ. ಕೆಪಿ. ೧೯
[29]ಟೋಪೋಗ್ರಾಫಿಕಲ್ ಲಿಸ್ಟ್, ಸಂ. I, ನಾರ್ತ್ ಆರ್ಕಾಟ್, ಪು.೬೪
[30]ಹೈದರಾಬಾದ್ ಎಪಿಗ್ರಾಫಿಕಲ್ ಸೀರೀಸ್, ಸಂ. III, ಸಂ. ೩೪
[31]ಎಆರ್ ಎಸ್ ಐ ಇ ೧೯೯೦೯, ಸಂ. ೮೭
[32]ಗೋಪಾಲ್, ಬಿ.ಆರ್., ವಿಜಯನಗರ ಇನ್ಸ್ ಕ್ರಿಪ್ಶನ್ಸ್, ಸಂ. II,ಸಂ. ೭೫೧ ಮತ್ತು ಎಫ್.ಕಾರ್ನ್, ಸಂ. XV, ಸಂ. ಎಕೆ ೨೩೮
[33]ಅದೇ, ಸಂ. ೭೫೨ ಮತ್ತು ಅದೇ, ಸಂ. ೨೩೯

[34]ಆನ್ಯುಯಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಾಫಿ (ಎಆರ್ಎಪ್), ೧೯೨೨, ಸಂ. ೮ ಮತ್ತು ಪ್ಯಾರ ೪೯

[35]ಎಸ್ ಐಐ, ಸಂ. IX, ಭಾಗ II, ಸಂ. ೫೨೮

[36]ರಾಮರಾವ್, ಇನ್ಸ್‌ಕ್ರಿಪ್ಶನ್ಸ್ ಆಫ್ ಆಂಧ್ರಪ್ರದೇಶ, ತಿರುಪತಿ, ಸಂ. ೧೫೭

[37]ಎಫ್. ಕಾರ್ನ್ (ಹಳೆಯ), ಸಂ. VI, ಸಂ. ಪಿಪುರ. ೧೩೮

[38]ಮಹಾಲಿಂಗಂ, ಟಿ.ವಿ.,ಪೂರ್ವೋಕ್ತ, ಪು.೮೯

[39]ಎಫ್.ಕಾರ್ನ್, ಸಂ. XI, ಸಂ. ಎಂಕೆ. ೮

[40]ಅದೇ, ಸಂ. ಹೆಚ್ ಆರ್. ೨೨

[41]ಎಸ್ ಐಐ, ಸಂ. XVI, ಸಂ. ೨೧೩

[42]ಎಫ್.ಕಾರ್ನ್, ಸಂ. XI, ಸಂ. ಎಂಕೆ. ೫

[43]ಎಫ್. ಕಾರ್ನ್, ಸಂ. XI, ಸಂ. ಡಿವಿ ೭೦ ಮತ್ತು ಮಹಾಲಿಂಗಂ, ಟಿ.ವಿ. ಪೂರ್ವೋಕ್ತ, ಪು. ೫೫

[44]ಕೊಟ್ರಯ್ಯ, ಸಿ.ಟಿ.ಎಂ. (ಮೂಲ), ಪೂರ್ವೋಕ್ತ, ಪು. ೧೫೩-೫೫

[45]ಅದೇ, ಪು. ೧೫೫

[46]ಎಫ್.ಕಾರ್ನ್ (ಹಳೆಯ), ಸಂ. XI, ಸಂ. ಸಿಪಿ. ೧೬೯

[47]ಎಸ್ ಐಐ, ಸಂ. IX, ಭಾಗ II, ಸಂ. ೫೨೮

[48]ಎಫ್.ಕಾರ್ನ್ (ಹಳೆಯ), ಸಂ. V, ಸಂ. ಎಕೆ ೧೧೫ ಮತ್ತು ಮಹಾಲಿಂಗಂ, ಟಿ.ವಿ., ಪೂರ್ವೋಕ್ತ, ಪು.೫೪

[49]ಎಫ್, ಕಾರ್ನ್ (ಹಳೆಯ), ಸಂ. IX, ಸಂ.ಸಿಪಿ ೧೫೬

[50]ಮಹಾಲಿಂಗಂ, ಟಿ.ವಿ., ಪೂರ್ವೋಕ್ತ, ಪು.೫೪

[51]ಎಆರ್ ಎಸ್ ಐಇ, ೧೯೪೨-೪೩, ಸಂ. ೧೬೪

[52]ಅದೇ, ೧೯೩೩-೩೪, ಸಂ. ೪೭ ಮತ್ತು ಮಹಾಲಿಂಗಂ, ಟಿ.ವಿ. ಅಡ್ ಮಿನಿಸ್ಟ್ರೇಟಿವ್ ಆಂಡ್ ಸೋಶಿಯಲ್ ಲೈಫ್ ಅಂಡರ್ ವಿಜಯನಗರ, ಪು.೮೭

[53]ಎ ಆರ್ ಎಸ್ ಐಇ, ೧೯೨೩, ಸಂ. ಬಿ ೪೨೪

[54]ಅದೇ, ೧೯೩೪-೩೫, ಸಂ. ೫೪

[55]ಎಸ್ ಐಐ, ಸಂ. IX, ಭಾಗ II, ಸಂ. ೪೯೩

## (೨)

**ಇಂದಿನ ಬಳಕೆದಾರರ ದೃಷ್ಟಿಯಲ್ಲಿ ಹಿಂದಿನ ವ್ಯವಸ್ಥೆ**

ಕಮಲಾಪುರ, ತಿಮ್ಮಲಾಪುರ ಮತ್ತು ಕಲ್‌ತಾವರೆಗೆರೆ ಊರಿನಲ್ಲಿರುವ ಕೆರೆ ನೀರಾವರಿ ಬಳಕೆದಾರರನ್ನು ಭೇಟಿಯಾಗಿ ಹಿಂದಿನ ಸಹಭಾಗಿತ್ವ ಕುರಿತು ಕೇಳಲಾಯಿತು. ಸಹಭಾಗಿತ್ವಕ್ಕೆ ಸಂಬಂಧಿಸಿದ ಸುಮಾರು ಇಪ್ಪತ್ತು ಅಂಶಗಳ ಕುರಿತು ಅವರ ಅಭಿಪ್ರಾಯ ಸಂಗ್ರಹಿಸಲಾಯಿತು. ಅವುಗಳನ್ನು ಸ್ಥೂಲವಾಗಿ ಆರು ಗುಂಪುಗಳಾಗಿ ವಿಂಗಡಿಸಿಕೊಳ್ಳಬಹುದು. ಒಂದು, ಬಳಕೆದಾರರ ಸಂಘಟನೆ ಕುರಿತು. ಇಲ್ಲಿ ಮುಖ್ಯವಾಗಿ ಸಂಘಟನೆಯ ಸದಸ್ಯರು, ಅವರು ನೀಡಬೇಕಾದ ಸದಸ್ಯತನ ಮತ್ತು ನಡೆಸಬೇಕಾದ ಸದಸ್ಯರ ಸಭೆ ಕುರಿತು ವಿಚಾರಿಸಲಾಗಿದೆ. ಹಿಂದೆ ಇದ್ದ ಕೆರೆ ನೀರಿನ ನಿರ್ವಹಣೆ ಮತ್ತು ಕೆರೆ ಸಂರಕ್ಷಣೆ ಕುರಿತು ರೈತರಲ್ಲಿ ವಿವಿಧ ನಿಲುವುಗಳಿವೆ. ಕೆಲವರು ಹಿಂದೆ ಸಹಭಾಗಿತ್ವ ಇತ್ತು ಎಂದರೆ ಇನ್ನು ಕೆಲವರು ಇಲ್ಲ ಮತ್ತು ಕೆಲವರು ಗೊತ್ತಿಲ್ಲ ಎಂದಿದ್ದಾರೆ. ಇಲ್ಲ ಮತ್ತು ಗೊತ್ತಿಲ್ಲ ಎನ್ನುವವರನ್ನು ಒಟ್ಟು ಸೇರಿಸಿದರೆ ಅವರ ಸಂಖ್ಯೆ ಸರಿ

ಸುಮಾರು ಮೂರನೆ ಒಂದರಷ್ಟಿದೆ. ಕಮಲಾಪುರದಲ್ಲಿ ಭೇಟಿಯಾದ ರೈತರಲ್ಲಿ ಮೂರನೆ ಎರಡರಷ್ಟು ರೈತರು ಹಿಂದಿನ ವ್ಯವಸ್ಥೆ ಬಗ್ಗೆ ತಿಳುವಳಿಕೆ ಸೂಚಿಸಿದ್ದಾರೆ. ಜತೆಗೆ ಅರಿವಿದೆ ಎನ್ನುವವರಲ್ಲಿ ಹಿರಿಯರ ಸಂಖ್ಯೆ ಹೆಚ್ಚಿದೆ. ತಿಮ್ಮಲಾಪುರದ ಸುಮಾರು ಅರ್ಧದಷ್ಟು ಮಂದಿ ಹಿಂದಿನ ವ್ಯವಸ್ಥೆ ಬಗ್ಗೆ ಖಚಿತವಾಗಿ ಹೇಳಲು ಹಿಂದೆ ಮುಂದೆ ನೋಡಿದರು. ಅದಕ್ಕೆ ಕಾರಣವನ್ನು ಅವರೆ ನೀಡಿದರು. ಈಗ ಅವರು ವಾಸವಾಗಿರುವ ಊರು ಅವರ ಹಿರಿಯರು ಹುಟ್ಟಿ ಬೆಳೆದ ಊರಲ್ಲ. ಅವರ ಹಿರಿಯರು ಹುಟ್ಟಿ ಬೆಳದ ಊರು ಮರಿಯಮ್ಮನ ಹಳ್ಳಿ ಪಕ್ಕ ಒಂದೂರು. ಅದು ಐವತ್ತರ ದಶಕದಲ್ಲಿ ತುಂಗಭದ್ರಾ ಆಣೆಕಟ್ಟಿನ ನೀರು ನಿಂತು ಮುಳುಗಡೆಯಾಯಿತು. ಆವಾಗ ಸರಕಾರ ಅವರಿಗೆ ತಿಮ್ಮಲಾಪುರದಲ್ಲಿ ಭೂಮಿ ಕೊಟ್ಟು ಹೊಸ ಜೀವನಕ್ಕೆ ಅವಕಾಶ ಮಾಡಿಕೊಟ್ಟಿತು. ತಿಮ್ಮಲಾಪುರ ಊರವರ ಪ್ರಕಾರ ಹಿಂದೆ ಹಳ್ಳಿಯೇ ಆಗಿರಲಿಲ್ಲ. ಅದು ವಿಜಯನಗರ ಹೊರಹೊಲಯದಲ್ಲಿ ಇದ್ದ ಯಾವುದೋ ಒಂದು ಹಳ್ಳಿಯ ಸ್ಮಶಾನವಾಗಿತ್ತು. ಆದುದರಿಂದ ಅವರಿಗೆ ಆ ಹಳ್ಳಿ ಮತ್ತು ಅದರ ಮೇಲ್‌ಗಡೆ ಇರುವ ಕೆರೆಯ ಚರಿತ್ರೆ ಬಗ್ಗೆ ವಿಶೇಷ ಮಾಹಿತಿ ಇಲ್ಲ ಎಂದು ಅಭಿಪ್ರಾಯಪಡುತ್ತಾರೆ. ಕಲ್‌ತಾವರೆಗೆರೆಯಲ್ಲಿ ಈ ಸಮಸ್ಯೆ ಇಲ್ಲ. ಅದು ಕಮಲಾಪುರದಂತೆ ಹಳೇ ಕೆರೆ ಮತ್ತು ಹಳೇ ತಲೆಮಾರಿನ ಜನ ಇಂದು ಇದ್ದಾರೆ. ಅಲ್ಲಿಯ ಹಿರಿಯರು ಕೂಡ ಕೆರೆ ನೀರಿನ ಉಸ್ತುವಾರಿಯನ್ನು ಹಿಂದೆ ಊರವರೆ ನೋಡಿಕೊಳ್ಳುತ್ತಿದ್ದರು ಎನ್ನುತ್ತಾರೆ. ಸಹಭಾಗಿತ್ವವನ್ನು ಪುನರ್ ಜೀವಗೊಳಿಸುವಲ್ಲಿ ಜನ ಸಾಮಾನ್ಯರ ಕಲ್ಪನೆಯಲ್ಲಿರುವ ಹಿಂದಿನ ವ್ಯವಸ್ಥೆ ಚರಿತ್ರೆಯಲ್ಲಿ ಬರುವ ಹಿಂದಿನ ವ್ಯವಸ್ಥೆಗಿಂತ ಗಟ್ಟಿ. ಯಾಕೆಂದರೆ ಚರಿತ್ರೆಯಲ್ಲಿನ ಹಿಂದಿನ ವ್ಯವಸ್ಥೆ ಬಗ್ಗೆ ಜನರಿಗೆ ಮನವರಿಕೆ ಮಾಡುವುದು ಕಷ್ಟ. ಆದರೆ ಅವರ ಕಲ್ಪನೆಯಲ್ಲಿರುವ ಸಹಭಾಗಿತ್ವಕ್ಕೆ ವಿಶೇಷ ಶ್ರಮ ಇಲ್ಲವೆ ಪುನರ್ ಜೀವ ನೀಡಬಹುದು. ಆದುದರಿಂದ ಹಿಂದೆ ಸಹಭಾಗಿತ್ವ ಇತ್ತು ಎನ್ನುವುದು ಇಂದಿನ ಸಹಭಾಗಿತ್ವದ ಸಾಧ್ಯತೆಯನ್ನು ಗಣನೀಯವಾಗಿ ಹೆಚ್ಚಿಸುತ್ತದೆ. ಆದರೆ ಈ ಕುರಿತು ಯಾವುದೇ ತೀರ್ಮಾನಕ್ಕೆ ಬರುವ ಮುನ್ನ ಮತ್ತೊಂದು ವಿಚಾರದತ್ತ ಗಮನ ಹರಿಸಬೇಕಾಗಿದೆ. ಆ ಹಿಂದಿನ ವ್ಯವಸ್ಥೆಯ ರೂಪುರೇಶೆ ಬಗ್ಗೆ ವಿಚಾರಿಸಿದರೆ ತುಂಬಾ ನಿರಾಶದಾಯಕ ಉತ್ತರ ಬಂತು. ಬಳಕೆದಾರರ ಸಂಘಟನೆ ಅಥವಾ ನೀರು ಪಂಚಾಯತ್ ಹಿಂದೆ ಇದ್ದುದರ ಬಗ್ಗೆ ತಮಗೆ ಅರಿವಿಲ್ಲ ಎಂದು ಬಹುತೇಕ ಎಲ್ಲ ಹಳ್ಳಿಯ ಎಲ್ಲ ರೈತರು ಅಭಿಪ್ರಾಯ ಪಡುತ್ತಾರೆ. ಬಳಕೆದಾರರ ಸಂಘಟನೆ ಬಗ್ಗೆಯೇ ಅರಿವಿಲ್ಲ ಎಂದ ಮೇಲೆ ಸದಸ್ಯರು, ಸದಸ್ಯತನ, ಸದಸ್ಯರ ಸಭೆ ಇತ್ಯಾದಿಗಳ ಬಗ್ಗೆ ಮಾಹಿತಿ ಸಿಗುವುದು ದುರ್ಲಭ.

ಎರಡು, ಬಳಕೆದಾರರು ಪಾವತಿಸಬೇಕಾದ ತೆರಿಗೆಗೆ ಸಂಬಂಧಿಸಿದ ಪ್ರಶ್ನೆಗಳು. ಇಲ್ಲಿ ನೀರು ತೆರಿಗೆಯ ಇರುವಿಕೆ, ತೆರಿಗೆ ದರ ಅಥವಾ ಮೊತ್ತ ಮತ್ತು ತೆರಿಗೆ ಪಾವತಿ ಕುರಿತು ಜನರ ಅಭಿಪ್ರಾಯಗಳನ್ನು ಕೇಳಲಾಗಿತ್ತು. ಹಿಂದೆ ನೀರಿಗೆ ತೆರಿಗೆ ಕೊಡುವ ಕ್ರಮ ಇತ್ತೇ ಎಂದರೆ ಕಮಲಾಪುರ ಮತ್ತು ತಿಮ್ಮಲಾಪುರದ ಹೆಚ್ಚು ಕಡಿಮೆ ಎಲ್ಲ ರೈತರು ಇತ್ತು ಎಂದು ಹೇಳಿದ್ದಾರೆ. ಇಲ್ಲಿ ಹಿಂದೆ ಎನ್ನುವುದನ್ನು ನಿರ್ದಿಷ್ಟವಾಗಿ ವ್ಯಾಖ್ಯಾನಿಸಿಲ್ಲ. ಹಿಂದೆ ಎಂದರೆ ಕೆಲವರಿಗೆ ಕೆಲವು ವರ್ಷಗಳ ಹಿಂದೆ. ಇನ್ನು ಕೆಲವರಿಗೆ ಅವರ ಹಿರಿಯರ ಕಾಲದಲ್ಲಿ ಮತ್ತು ಕೆಲವರಿಗೆ ವಿಜಯನಗರ ಕಾಲದಲ್ಲಿ. ಸಂದರ್ಶನದ ಸಂದರ್ಭದಲ್ಲಿ ಹಿಂದೆ ಅಂದರೆ ತಮ್ಮ ಹಿರಿಯರ ಕಾಲದಲ್ಲಿ ಎನ್ನುವುದನ್ನು ಮನದಟ್ಟು ಮಾಡಲು ಪ್ರಯತ್ನಿಸಲಾಗಿತ್ತು. ಆದರೂ ತಿಮ್ಮಲಾಪುರದ ಎಲ್ಲ ರೈತರು ಹಿಂದೆ ತೆರಿಗೆ ಕೊಡುವ ಕ್ರಮ ಇತ್ತು ಎನ್ನುವಾಗ ಅವರು ತಿಮ್ಮಲಾಪುರಕ್ಕೆ ಬಂದ ನಂತರ ಇದ್ದಿರಬಹುದೋ ಏನೋ ಎಂದು ಕೇಳಲಾಯಿತು. ಅವರ ಪ್ರಕಾರ ನೀರಿಗೆ ತೆರಿಗೆ ಕೊಡುವ ಕ್ರಮ ಒಂದು ಸಾಮಾನ್ಯ ವಿಚಾರ. ಅದು ಎಲ್ಲರಿಗೂ ತಿಳಿದ ವಿಚಾರ ಮತ್ತು ಯಾವ ಊರಿಗೂ ಹೋದರೂ ಇದೆ ಎಂದು ಹೇಳುತ್ತಾರೆ. ಆದರೆ ವಿಚಿತ್ರವೆಂದರೆ ಕಲ್‌ತಾವರೆಗೆರೆ ಬಹುತೇಕ ಎಲ್ಲ ರೈತರು ಹಿಂದೆ ತೆರಿಗೆ ಕೊಡುವ ಕ್ರಮ ಇರಲಿಲ್ಲ ಎನ್ನುತ್ತಾರೆ. ತುಂಬಾ ಹಳೇ ಕೆರೆ ಮತ್ತು ಹಳೇ ತಲೆಮಾರಿನ ಜನರ ಅಭಿಪ್ರಾಯ ಅದು. ಬಹಳ ಅಭಿಪ್ರಾಯವನ್ನು ಹೇಗೆ ಅರ್ಥಮಾಡಿಕೊಳ್ಳುವುದು?

ತೆರಿಗೆ ದರ ಕುರಿತು ಕಮಲಾಪುರ ಮತ್ತು ತಿಮ್ಮಲಾಪುರದ ರೈತರ ಅಭಿಪ್ರಾಯ ಒಂದೇ ಇಲ್ಲ. ಕಮಲಾಪುರದ ಬಹುತೇಕ ರೈತರು ಹಿಂದೆ ತೆರಿಗೆ ದರ ಅಥವಾ ಮೊತ್ತ ಸರಿಯಾಗಿತ್ತು ಎಂದಿದ್ದಾರೆ. ಹಾಗೆ ಹೇಳುವಾಗ ಅವರ ಮನಸ್ಸಲ್ಲಿ ಯಾವ ಹಿಂದೆ ಇತ್ತು ಎನ್ನುವುದು ಕಷ್ಟ. ಕಮಲಾಪುರ ಕೆರೆ ಬೃಹತ್ ನೀರಾವರಿ ಇಲಾಖೆ ವ್ಯಾಪ್ತಿಗೆ ಬರುತ್ತದೆ. ತುಂಗಾಭದ್ರಾ ಆಣೆಕಟ್ಟಿನ ನೀರು ಕೆರೆಗೆ ಮುಖ್ಯ ಆಧಾರ. ಕಬ್ಬು, ಭತ್ತ, ಬಾಳೆ ಇಲ್ಲಿನ ರೈತರ ಮುಖ್ಯ ಬೆಳೆಗಳು. ೨೦೦೦ ಇಸವಿಯವರೆಗೆ ಒಂದು ಎಕ್ರೆ ಕಬ್ಬಿನ ಬೆಳೆಗೆ ವಾರ್ಷಿಕ ನೀರಿನ ತೆರಿಗೆ ರೂ.೨೭೫ ಆಗಿತ್ತು. ೨೦೦೧ರಲ್ಲ ನೀರಿನ ತೆರಿಗೆಯನ್ನು ರೂ.೪೫೦ಕ್ಕೆ ಏರಿಸಲಾಗಿತ್ತು. ಆದುದರಿಂದ ಅಲ್ಲಿನ ಎಲ್ಲ ರೈತರು ಹಿಂದೆ ತೆರಿಗೆ ಸರಿ ಎತ್ತು

ಎನ್ನುವಾಗ ಅವರ ಹಿಂದೆಯನ್ನು ಅವರ ಹಿರಿಯರ ಅಥವಾ ವಿಜಯನಗರ ಕಾಲದ ತೆರಿಗೆಗೆ ಹೋಲಿಸುವುದು ಕಷ್ಟ. ಇಲ್ಲಿ ಹಿಂದೆ ಸರಿ ಇತ್ತು ಎನ್ನುವಾಗ ಈಗ ಸರಿ ಇಲ್ಲ ಎನ್ನುವ ಧ್ವನಿ ಇದೆ. ತಿಮ್ಮಲಾಪುರದ ಮೂರನೆ ಒಂದಕ್ಕಿಂತ ಹೆಚ್ಚು ರೈತರು ಹಿಂದೆ ತೆರಿಗೆ ಮೊತ್ತ ಸರಿ ಇತ್ತು ಎಂದಿದ್ದಾರೆ. ಅವರಲ್ಲಿ ಈಗ ವಾರ್ಷಿಕ ತೆರಿಗೆ ದರ ಕೇವಲ ರೂ.೪೦. ಒಬ್ಬಳು ಅಜ್ಜಿ ಜತೆ, 'ಅಲ್ಲ ನೀನು ರೂ.೪೦ನ್ನು ಕೂಡ ಜಾಸ್ತಿ ಎಂದರೆ ಹೇಗೆ?' ಎಂದೆ. ಅದಕ್ಕೆ ಅವಳು, 'ನನಗೆ ಇರುವುದು ಎರಡು ಎಕರೆ ಭೂಮಿ. ಅದರಲ್ಲಿ ವರ್ಷವಿಡೀ ಕೃಷಿ ಮಾಡಿದರೂ ನನ್ನ ಸಂಸಾರದ ಹೊಟ್ಟೆ ತುಂಬುವುದಿಲ್ಲ. ಕೆರೆ ನೀರು ಒಂದು ಕೃಷಿಗೂ ಸರಿಯಾಗಿ ಬರುವುದಿಲ್ಲ. ಅದಕ್ಕೆ ನಾನ್ಯಾಕೆ ನಲ್ವತ್ತು ರೂಪಾಯಿ ಕೊಡಬೇಕು' ಎಂದು ಉತ್ತರಿಸಿದಳು. ಹಿಂದೆ ತೆರಿಗೆ ಕಡಿಮೆ ಇತ್ತು ಎನ್ನುವ ಅಜ್ಜಿಯ ವಾದದ ಹಿಂದೆ ಈಗ ಜಾಸ್ತಿ ಇದೆ ಎನ್ನುವ ಗೃಹಿಕೆ ಇದೆ. ಜತೆಗೆ ಅದು ಜಾಸ್ತಿ ಆದುದು ಮೊತ್ತದ ದೃಷ್ಟಿಯಿಂದ ಅಲ್ಲ; ಬದಲಿಗೆ ಪೂರೈಕೆಯಾಗುವ ನೀರಿನ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಅಜ್ಜಿ ಆ ತೀರ್ಮಾನಕ್ಕೆ ಬಂದಿರುವುದು. ತೆರಿಗೆ ಪಾವತಿ ಬಗ್ಗೆ ವಿಚಾರಿಸಿದರೆ ಮಿಶ್ರ ಅಭಿಪ್ರಾಯ ವ್ಯಕ್ತವಾಗಿದೆ. ಕಮಲಾಪುರದ ಕೇವಲ ೭ ರೈತರು (ಭೇಟಿಯಾದ ೨೫ರಲ್ಲಿ) ಹಿಂದೆ ತೆರಿಗೆ ಕ್ರಮ ಪ್ರಕಾರ ಪಾವತಿ ಆಗುತ್ತಿತ್ತು ಎಂದು ಹೇಳುತ್ತಾರೆ. ಉಳಿದವರು ಆಗುತ್ತಿರಲಿಲ್ಲ ಅಥವಾ ಗೊತ್ತಿಲ್ಲ ಅಂದಿದ್ದಾರೆ. ಇಲ್ಲೂ ಕೂಡ ವರ್ತಮಾನ ಅವರ ಭೂತಕ್ಕೆ ಸಂಬಂಧಿಸಿದ ಅಭಿಪ್ರಾಯವನ್ನು ಪ್ರಭಾವಿಸಿರಬಹುದು. ವರ್ತಮಾನದಲ್ಲಿ ಕಮಲಾಪುರದಲ್ಲಿ ನೀರಿನ ತೆರಿಗೆ ಕ್ರಮ ಪ್ರಕಾರ ವಸೂಲಿಯಾಗುತ್ತಿದೆ. ತಿಮ್ಮಲಾಪುರದ ಅರ್ಧಕ್ಕಿಂತ ಹೆಚ್ಚು ರೈತರು ಅದೇ ಅಭಿಪ್ರಾಯ (ಹಿಂದೆ ಕ್ರಮ ಪ್ರಕಾರ ತೆರಿಗೆ ಸಂದಾಯವಾಗುತ್ತಿತ್ತು) ನೀಡುತ್ತಾರೆ. ಇಲ್ಲೂ ಕೂಡ ಹಿಂದೆ ಅನ್ನುವಾಗ ವರ್ತಮಾನಕ್ಕೆ ಹೋಲಿಸಿಕೊಂಡು ಆ ತೀರ್ಮಾನಕ್ಕೆ ಬಂದಿರಲೂಬಹುದು.

ಮೂರು, ಕೆರೆ ಪಾತ್ರ ಒತ್ತುವರಿ ಕುರಿತಂತೆ ರೈತರ ಅಭಿಪ್ರಾಯ. ಕಮಲಾಪುರ ಕೆರೆಯ ಸುಮಾರು ನೂರು ಎಕ್ರೆಗಳಿಗಿಂತಲೂ ಹೆಚ್ಚು ಕೆರೆ ಪಾತ್ರ ಒತ್ತುವರಿ ಆಗಿದೆ. ಅಲ್ಲಿ ಸುಮಾರು ಐವತ್ತು ಕುಟುಂಬಗಳು ಕೃಷಿ ಮಾಡುತ್ತಿವೆ. ಈ ಹಿನ್ನೆಲೆಯಲ್ಲಿ ಹಿಂದೆ ಕೆರೆ ಪಾತ್ರ ಒತ್ತುವರಿ ಸಮಸ್ಯೆ ಇತ್ತೇ? ಎಂದು ವಿಚಾರಿಸಿದರೆ ಕಮಲಾಪುರದ ಬಹುತೇಕ ರೈತರು ಇತ್ತು ಎಂದು ಅಭಿಪ್ರಾಯಪಡುತ್ತಾರೆ. ಪುನಃ ಇಲ್ಲಿ ಹಿಂದೆ ಎಂದರೆ ಎಷ್ಟು ಹಿಂದೆ ಎನ್ನುವ ಪ್ರಶ್ನೆ ಕೇಳಬೇಕಾಗುತ್ತದೆ. ಕೆಲವು ಹಿರಿಯರ ಪ್ರಕಾರ ಹಿಂದೆ ಕೆರೆ ಪಾತ್ರ ಒತ್ತುವರಿ ಸಮಸ್ಯೆ ಇರಲಿಲ್ಲ. ಈ ಸಮಸ್ಯೆ ಇರಲಿಲ್ಲ. ಹಾಗೆ ಹೇಳುವಾಗ ಪುನಃ ವರ್ತಮಾನವೇ ಅವರ ಮುಂದೆ ಇದ್ದಂತೆ ಕಾಣುತ್ತದೆ. ತಿಮ್ಮಲಾಪುರದ ನಾಲ್ಕು ಕೆರೆಗಳು ಕೂಡ ರಕ್ಷಿತ ಅರಣ್ಯ ಪ್ರದೇಶದಲ್ಲಿವೆ. ಆದುದರಿಂದ ಆ ಸ್ಥಳದಲ್ಲಿ ಒತ್ತುವರಿ ಮಾಡುವುದು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿದಂತೆ ಆಗುತ್ತದೆ. ಅದಕ್ಕೆ ಅರಣ್ಯ ಇಲಾಖೆಯವರು ಅವಕಾಶ ಕೊಡುವುದಿಲ್ಲ. ಹಾಗೆ ಅಲ್ಲಿ ಇಂದು ಒತ್ತುವರಿ ಆಗಿಲ್ಲ. ಇಂದು ಒತ್ತುವರಿ ಇಲ್ಲದಿರುವುದು ಹಿಂದೆ ಕೂಡ ಒತ್ತುವರಿ ಇರಲಿಲ್ಲ ಎಂದು ರೈತರು ಅಭಿಪ್ರಾಯಪಡಲು ಕಾರಣವಾಗಿರಬಹುದು. ಕಲ್ ತಾವರೆಗೆರೆಯಲ್ಲಿ ಹಿಂದೆ ಒತ್ತುವರಿ ಇರಲಿಲ್ಲ ಎಂದು ಬಹುತೇಕ ಎಲ್ಲ ರೈತರು ಅಭಿಪ್ರಾಯ ಪಡುತ್ತಾರೆ. ವರ್ತಮಾನದಲ್ಲೂ ಅಲ್ಲಿನ ಕೆರೆ ಪಾತ್ರ ಒತ್ತುವರಿ ಆಗಿಲ್ಲ. ಒತ್ತುವರಿ ತಡೆಯುವ ಅಗತ್ಯ ಕುರಿತು ಬಹುತೇಕ ಎಲ್ಲ ರೈತರಲ್ಲೂ ಸಹಮತವಿದೆ. ಹಿಂದೆ ಒತ್ತುವರಿ ಇಲ್ಲದಿರುವಲ್ಲಿ (ಆ ಹಿಂದೆ ಹೇಗೆ ವರ್ತಮಾನದ ಬೆಳವಣಿಗೆ ಮೇಲೆ ಆಧಾರಿತ ಎನ್ನುವುದನ್ನು ನಾವು ನೋಡಿದ್ದೇವೆ) ಅದನ್ನು ತಡೆಯುವ ಅಗತ್ಯದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ವರ್ತಮಾನದಲ್ಲಿ ಒತ್ತುವರಿ ಸಮಸ್ಯೆ ಇರುವ ಪ್ರದೇಶದ ರೈತರು ಹಿಂದೆ ಕೂಡ ಆ ಸಮಸ್ಯೆ ಇತ್ತು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಹಿಂದೆ ಆ ಸಮಸ್ಯೆ ಇದ್ದುದರಿಂದ ಹಿಂದೆ ಕೂಡ ಅದನ್ನು ತಡೆಯುವ ಅಗತ್ಯವಿತ್ತು ಎಂದು ಅಭಿಪ್ರಾಯ ಪಡುವುದು ಸಹಜವಾಗುತ್ತದೆ. ಒತ್ತುವರಿ ಕುರಿತಂತೆ ಇನ್ನೊಂದು ಬಹುಮುಖ್ಯ ಪ್ರಶ್ನೆ- ಒತ್ತುವರಿ ತಡೆಯುವ ಕೆಲಸ ಯಾರು ಮಾಡಬೇಕು? ಕಮಲಾಪುರ ಎಲ್ಲ ರೈತರು, ತಿಮ್ಮಲಾಪುರದ ಮೂರನೆ ಒಂದರಷ್ಟು ರೈತರು ಮತ್ತು ಕಲ್‌ತಾವರೆಗೆರೆಯ ಅರ್ಧದಷ್ಟು ರೈತರು ಒತ್ತುವರಿ ತಡೆಯುವುದು ಸರಕಾರದ ಕೆಲಸ ಎಂದು ಅಭಿಪ್ರಾಯ ಪಡುತ್ತಾರೆ. ತಿಮ್ಮಲಾಪುರದಲ್ಲಿ ಆ ಸಮಸ್ಯೆಯೇ ಇಲ್ಲದಿರುವುದುದರಿಂದ ಅದರ ಪರಿಹಾರಕ್ಕೆ ಯಾರನ್ನು ಹೊಣೆಯಾಗಿಸಬೇಕು ಎನ್ನುವ ಪ್ರಶ್ನೆ ರೈತರನ್ನು ಅಷ್ಟಾಗಿ ಕಾಡಿದಂತೆ ಕಾಣುವುದಿಲ್ಲ. ಒಂದು ವೇಳೆ ಅವರಲ್ಲೂ ಕಮಲಾಪುರದಷ್ಟೆ ಗಾಢವಾಗಿ ಒತ್ತುವರಿ ಸಮಸ್ಯೆ ಇರುತ್ತಿದ್ದರೆ ಅವರು ಇತರ ರೈತರಿಗಿಂತ ಭಿನ್ನವಾದ ಉತ್ತರ ಕೊಡುತ್ತಿದ್ದನು ಎಂದು ಊಹಿಸುವುದು ಕಷ್ಟ.

ನಾಲ್ಕು, ಕೆರೆ ಕಾಲುವೆ ಇತ್ಯಾದಿಗಳಿಗೆ ರಿಪೇರಿಗೆ ಶ್ರಮದಾನ ಮಾಡುವ ಕ್ರಮ ಹಿಂದೆ ಇತ್ತೇ ಎಂದು ಕೇಳಲು ಎಲ್ಲ ಹಳ್ಳಿಯ ಹೆಚ್ಚಿನ ರೈತರು ಇತ್ತೆಂದು ಉತ್ತರಿಸಿದ್ದಾರೆ. ಅದೇ ರೀತಿ ವರ್ತಮಾನದಲ್ಲೂ ಶ್ರಮದಾನ ಮಾಡುವ ಕ್ರಮ ಇದೆ ಎಂದು ಒಪ್ಪಿಕೊಂಡಿದ್ದಾರೆ. ಆದರೆ ಆಶ್ಚರ್ಯದ ಸಂಗತಿಯೆಂದರೆ ಕೆರೆ ಕಾಲುವೆ ಇತ್ಯಾದಿಗಳ ರಿಪೇರಿಗೆ ವಂತಿಗೆ ನೀಡುವ ಕ್ರಮ ಹಿಂದೆ ಅಥವಾ ವರ್ತಮಾನದಲ್ಲಿ ಇರಲಿಲ್ಲವೆಂದು ಎಲ್ಲ ರೈತರು ಹೇಳುತ್ತಾರೆ. ಹಣದ ವ್ಯವಹಾರ ತುಂಬಾ ಸೀಮಿತವಾಗಿದ್ದ ಕಾಲದಲ್ಲಿ ಕೆರೆ ಕಾಲುವೆ ಇತ್ಯಾದಿಗಳ ರಿಪೇರಿಗೆ ಹಣ ಕೊಡುವ ಸಂಪ್ರದಾಯ ದುಬಾರಿಯಾಗಿರಬಹುದು. ಆದರೆ ವಾಣಿಜ್ಯ ಬೆಳೆ ಬೆಳೆಯುವ ಇಂದಿನ ದಿನಗಳಲ್ಲಿ ಹಣ ಕೊಡುವ ಕ್ರಮ ಇಲ್ಲ ಎನ್ನುವ ರೈತರ ಅಭಿಪ್ರಾಯವನ್ನು ಜೀರ್ಣಿಸಿಕೊಳ್ಳುವುದು ಸ್ವಲ್ಪ ಕಷ್ಟ. ಕಮಲಾಪುರದ ಹೆಚ್ಚಿನ ರೈತರು ವಾಣಿಜ್ಯ ಬೆಳೆಗಾರರು. ಆದರೆ ಅವರಲ್ಲಿ ಹತ್ತು ಎಕ್ರೆಗಿಂತ ಭೂ ಹಿಡುವಳಿ ಇರುವವರ ಸಂಖ್ಯೆ ಸ್ವಲ್ಪ ಕಡಿಮೆ ಇದೆ. ಹೆಚ್ಚಿನ ರೈತರು ಎರಡರಿಂದ ಮೂರು ಎಕ್ರೆ ಹಿಡುವಳಿ ಇರುವವರು. ಇವರು ವಾಣಿಜ್ಯ ಬೆಳೆ ಬೆಳೆದರು ಅದರಿಂದ ಬರುವ ಆದಾಯ ಅವರ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಸಾಕಾಗುವಷ್ಟು ಮಾತ್ರ. ತಿಮ್ಮಲಾಪುರ ಅಥವಾ ಕಲ್‌ತಾವರೆಗಳಲ್ಲಿ ಒಂದು ವಿಧದ ಒಣ ಭೂಮಿ ವ್ಯವಸಾಯವೇ. ಯಾಕೆಂದರೆ ಅಲ್ಲಿನ ಕೆರೆಗಳು ಮಳೆ ಬಂದರೆ ತುಂಬುತ್ತವೆ; ಇಲ್ಲವಾದರೆ ಖಾಲಿ ಇರುತ್ತವೆ. ಉತ್ತರ ಕರ್ನಾಟಕದಲ್ಲಿ ಮಳೆ ಬರುವುದು ಗ್ಯಾರಂಟಿಯೇನಲ್ಲ. ಜತೆಗೆ ಬಹುತೇಕ ರೈತರ ಭೂಹಿಡುವಳಿ ಎರಡರಿಂದ ಮೂರು ಎಕ್ರೆಗಳು. ನೀರಾವರಿ ಇರುವಲ್ಲಿ ಇದೇನು ಕಡಿಮೆ ಹಿಡುವಳಿ ಅಲ್ಲ. ಆದರೆ ನೀರಾವರಿ ವ್ಯವಸ್ಥೆ ಇಲ್ಲದ ಕಡೆ ಮೂರು ಎಕ್ರೆ ಭೂ ಹಿಡುವಳಿ ಇರುವ ರೈತರು ಮೂರು ಹೊತ್ತಿನ ಊಟಕ್ಕೆ ಪರದಾಡುವ ಸ್ಥಿತಿ ಇದೆ. ಆದುದರಿಂದ ಇಂದು ಕೂಡ ರೈತರು ಶ್ರಮದಾನ ಮಾಡಲು ತೋರುವ ಉತ್ಸಾಹವನ್ನು ವಂತಿಗೆ ನೀಡಲು ತೋರಿಸುತ್ತಿಲ್ಲ.

ಐದು, ಕೆರೆ ಹೂಳಿನ ಸಮಸ್ಯೆ. ಕೆರೆ ಹೂಳಿನ ಸಮಸ್ಯೆ ಹಿಂದೆ ಕೂಡ ಇತ್ತೆಂದು ಕಮಲಾಪುರದ ೧೮ ಮತ್ತು ತಿಮ್ಮಲಾಪುರದ ೪ ರೈತರು ಅಭಿಪ್ರಾಯ ಪಡುತ್ತಾರೆ. ಆದರೆ ಕಲ್‌ತಾವರೆಗೆರೆಯ ಇಬ್ಬರು (ಮಾತಾಡಿಸಿದ ೧೫ ರೈತರಲ್ಲಿ) ರೈತರು ಮಾತ್ರ ಕೆರೆ ಹೂಳಿನ ಸಮಸ್ಯೆ ಹಿಂದೆ ಇತ್ತೆಂದು ಹೇಳುತ್ತಾರೆ. ವರ್ತಮಾನದ ಬೆಳವಣಿಗೆಯ ಆಧಾರದಲ್ಲಿ ಹಿಂದಿನ ಸಮಸ್ಯೆ ಕುರಿತು ರೈತರು ತಮ್ಮ ಅಭಿಪ್ರಾಯಗಳನ್ನು ನೀಡುತ್ತಾರೆಂದು ನೀರಿನ ತೆರಿಗೆ ಕುರಿತು ಚರ್ಚಿಸುವಾಗ ನೋಡಿದ್ದೇವೆ. ಆ ಥಿಸಿಸ್ ಇಲ್ಲೂ ಕೆಲಸ ಮಾಡುತ್ತಿದೆ. ಅದಕ್ಕೆ ಉದಾಹರಣೆಯೆಂದರೆ ಕಮಲಾಪುರ ಕೆರೆ ಹೂಳಿನ ಸಮಸ್ಯೆ. ಆ ಕೆರೆಯಲ್ಲಿ ತುಂಬಿದ ಹೂಳಿನ ಲೆಕ್ಕಚಾರವನ್ನು ಮುಂದೆ ಕೊಡಲಾಗಿದೆ. ಕೆರೆಯ ಸರಿ ಅರ್ಧ ಪಾತ್ರ ಹೂಳು ತುಂಬಿದೆ. ಅದುದರಿಂದಲೇ ಅಲ್ಲಿ ಮಾತಾಡಿಸಿದ ಎಲ್ಲ ರೈತರು ಕೆರೆ ಹೂಳಿನ ಸಮಸ್ಯೆ ಬಹು ದೊಡ್ಡ ಸಮಸ್ಯೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಕಮಲಾಪುರ ಕೆರೆಗೆ ಹೋಲಿಸಿದರೆ ತಿಮ್ಮಲಾಪುರದಲ್ಲಿ ಹೂಳಿನ ಸಮಸ್ಯೆ ಅಷ್ಟು ಬೃಹತ್ ಪ್ರಮಾಣದಲ್ಲಿ ಇಲ್ಲ. ಕಲ್‌ತಾವರೆಗೆರೆಯಲ್ಲಿನ ಕೆರೆಯಲ್ಲಿ ಸ್ವಲ್ಪ ಮಟ್ಟಿಗೆ ಹೂಳಿನ ಸಮಸ್ಯೆ ಇದೆ. ಆದಾಗ್ಯೂ ಹಿಂದೆ ಕೂಡ ಹೂಳಿನ ಸಮಸ್ಯೆ ಇತ್ತೆಂದು ಅಭಿಪ್ರಾಯ ಪಟ್ಟವರಲ್ಲಿ ಕಮಲಾಪುರ ರೈತರ ಸಂಖ್ಯೆ ಜಾಸ್ತಿ ಇದೆ. ಕೆರೆ ಹೂಳೆತ್ತಲು ಶ್ರಮದಾನ ಮಾಡುವ ಕ್ರಮ ಹಿಂದೆ ಇತ್ತೆಂದು ಹೇಳುವ ರೈತರ ಸಂಖ್ಯೆ ತುಂಬಾ ಕಡಿಮೆ. ಕಮಲಾಪುರದ ನಾಲ್ವರು, ತಿಮ್ಮಲಾಪುರದ ಮೂವರು ಮತ್ತು ಕಲ್‌ತಾವರೆಗೆರೆಯ ಒಬ್ಬ ರೈತ ಮಾತ್ರ ಹಿಂದೆ ಕೆರೆ ಹೂಳೆತ್ತಲು ಶ್ರಮದಾನ ಮಾಡುವ ಕ್ರಮ ಇತ್ತೆಂದು ಹೇಳುತ್ತಾರೆ. ಹಿಂದೆ ಹೂಳಿನ ಸಮಸ್ಯೆ ಇತ್ತೆಂದು ಶ್ರಮದಾನ ಮಾಡುವ ಕ್ರಮ ಇತ್ತೆಂದು ಹೇಳುತ್ತಾರೆ. ಹಿಂದೆ ಹೂಳಿನ ಸಮಸ್ಯೆ ಇತ್ತೆಂದು ಹೇಳುವವರಲ್ಲಿ ಕಮಲಾಪುರದಲ್ಲಿ ರೈತರ ಸಂಖ್ಯೆ ಹೆಚ್ಚಿದೆ. ಆದರೆ ಹಿಂದೆ ಅಥವಾ ಈಗ ಹೂಳೆತ್ತಲು ಶ್ರಮದಾನ ಮಾಡುವ ಕುರಿತು ಕೇಳಿದರೆ ಇದೆ ಎನ್ನುವವರ ಸಂಖ್ಯೆ ಕಮಲಾಪುರದಲ್ಲಿ ಕಡಿಮೆ ಇದೆ. ತಿಮ್ಮಲಾಪುರದ ಬಹುತೇಕ ರೈತರು ಹೂಳೆತ್ತಲು ಶ್ರಮದಾನ ಮಾಡುವ ಕ್ರಮ ಕುರಿತು ಇಲ್ಲ ಅಥವಾ ಗೊತ್ತಿಲ್ಲ ಎಂದಿದ್ದಾರೆ. ಅದಕ್ಕೆ ಕಾರಣ ಅಲ್ಲಿ ಹೂಳಿನ ಸಮಸ್ಯೆ ಇಲ್ಲದಿರುವುದಿರಬಹುದು. ಅದೇ ರೀತಿ ಹೂಳೆತ್ತಲು ವಂತಿಗೆ ನೀಡುವ ಕ್ರಮ ಹಿಂದೆ ಇರಲಿಲ್ಲವೆಂದು ಎಲ್ಲ ಹಳ್ಳಿಯ ಎಲ್ಲಾ ರೈತರು ಅಭಿಪ್ರಾಯ ಪಡುತ್ತಾರೆ. ಹಿಂದೆ ಮಾತ್ರವಲ್ಲ ಈಗಲೂ ಇಲ್ಲವೆಂದು ಅವರೆಲ್ಲರ ಅಭಿಪ್ರಾಯ. ಕೆರೆ ಹೂಳೆತ್ತುವ ಜವಾಬ್ದಾರಿ ಕೂಡ ರೈತರದಲ್ಲ; ಸರಕಾರದ್ದೆಂದು ಬಹುತೇಕ ಎಲ್ಲ ರೈತರ ಅಂಬೋಣ. ಕೆರೆ ಹೂಳಿನ ಕುರಿತು ರೈತರ ಅಭಿಪ್ರಾಯಗಳು ಚರಿತ್ರೆಯಲ್ಲಿನ ನಡಾವಳಿಕೆಗೆ ಸಂಪೂರ್ಣ ಭಿನ್ನ. ಯಾಕೆ ಹೀಗಾಯಿತು? ಇದನ್ನು ಹೇಗೆ ಅರ್ಥಮಾಡಿಕೊಳ್ಳಬಹುದು?

ಆರು, ನೀರು ಹಂಚಿಕೆ ಕ್ರಮ ಹಿಂದೆ ಸಮರ್ಪಕವಾಗಿತ್ತೆಂದು ಕಮಲಾಪುರ ಮತ್ತು ತಿಮ್ಮಲಾಪುರದ ಬಹುತೇಕ ಎಲ್ಲ ರೈತರ ಅಭಿಪ್ರಾಯ. ಕಲ್‌ತಾವರೆಗೆರೆಯ ಹನ್ನೆರಡು ರೈತರು ಸಮರ್ಪಕವಾಗಿತ್ತೆಂದರೆ ಮೂರು ಮಂದಿ ರೈತರು (ಗೊತ್ತಿಲ್ಲವೆಂದು ಹೇಳಿದವರನ್ನು ಸೇರಿಸಿಕೊಂಡು) ಸಮರ್ಪಕವಾಗಿರಲಿಲ್ಲವೆಂದು ಹೇಳುತ್ತಾರೆ. ಅದೇ ರೀತಿ ಎಲ್ಲ ರೈತರು ಹಿಂದೆ ನೀರು ಹಂಚಿಕೆ ನಿಯಮವನ್ನು ಎಲ್ಲ ರೈತರು ಪಾಲಿಸುತ್ತಿದ್ದರೆಂದು ಅಭಿಪ್ರಾಯ ಪಡುತ್ತಾರೆ. ಆದರೆ ನೀರು ಹಂಚಿಕೆ ಕುರಿತು ರೈತರ ಮಧ್ಯೆ ಜಗಳ ಇತ್ತೇ ಎಂದರೆ ಕಮಲಾಪುರದ ಬಹುತೇಕ ರೈತರು ಇತ್ತೆಂದು ಒಪ್ಪಿಕೊಳ್ಳುತ್ತಾರೆ. ಇದೊಂದು ರೀತಿಯ ವಿರೋಧಭಾಸ. ಎಲ್ಲ ರೈತರು ನೀರು ಹಂಚಿಕೆಯ ನಿಯಮ ಅನುಸರಿಸಿದರೆ ಜಗಳ ಆಗುವ ಸಾಧ್ಯತೆಗಳು ಕಡಿಮೆ. ಜಗಳ ಇದೆ ಎಂದು ಹೇಳಿದ ರೈತರಲ್ಲಿ ಹೆಚ್ಚಿನವರು ಕಮಲಾಪುರ ಕೆರೆ ನೀರು ಬಳಕೆದಾರರು. ಅಲ್ಲಿನ ರೈತರಿಗೆ ವರ್ಷವಿಡೀ ನೀರಿನ ಪೂರೈಕೆ ಇದೆ. ಹಾಗಿದ್ದರೂ ಏಪ್ರಿಲ್‌ನಿಂದ ಜುಲೈ ತನಕ ಕೆರೆಯಲ್ಲಿ ನೀರು ಕಡಿಮೆಯಾಗುತ್ತದೆ. ಆವಾಗ ಅಚ್ಚುಕಟ್ಟು ಪ್ರದೇಶದ ಕೊನೆಗೆ ಬರುವ ಹೊಲಗಳಿಗೆ ನೀರು ತಲುಪುವ ಸಾಧ್ಯತೆಗಳು ಕಡಿಮೆ. ಆ ಸಂದರ್ಭದಲ್ಲಿ ಜಗಳ ಆಗುವ ಸಾಧ್ಯತೆಗಳು ಹೆಚ್ಚು.

**ಸಹಭಾಗಿತ್ವದ ಸಾಧ್ಯತೆಗಳು**

ಸಹಭಾಗಿತ್ವದ ಸಾಧ್ಯತೆಗಳನ್ನು ಗುರುತಿಸಲು ಎರಡು ವಿಧಾನಗಳನ್ನು ಅನುಸರಿಸಲಾಗಿದೆ. ಒಂದು, ಸಹಭಾಗಿತ್ವ ಕುರಿತು ಬಳಕೆದಾರರ ಅಭಿಪ್ರಾಯ. ಎರಡು, ಒಟ್ಟು ಸಾಮಾಜಿಕ ಪರಿಸರದ ಹಿನ್ನೆಲೆಯಲ್ಲಿ ಸಹಭಾಗಿತ್ವದ ಸಾಧ್ಯತೆಯನ್ನು ವಿಶ್ಲೇಷಿಸುವುದು. ರೈತರು ಹೇಗೆ? ಯಾವ ರೂಪದಲ್ಲಿ? ಮತ್ತು ಎಷ್ಟರ ಮಟ್ಟಿಗೆ ನೀರಾವರಿ ನಿರ್ವಹಣೆಯಲ್ಲಿ ಪಾಲುಗೊಳ್ಳಲು ಸಿದ್ದರಿದ್ದಾರೆ? ಎನ್ನುವುದರ ಕುರಿತು ಅಭಿಪ್ರಾಯ ಸಂಗ್ರಹಿಸಲಾಗಿದೆ. ತುಂಬಾ ಸಂತೋಷದ ಸಂಗತಿಯೆಂದರೆ ಸಂದರ್ಶಿಸಿದ ಎಲ್ಲ ಹಳ್ಳಿಯ ಎಲ್ಲ ರೈತರು ಬಳಕೆದಾರರ ಸಂಘಟನೆ ಬೇಕು ಎಂದಿದ್ದಾರೆ. ಅಷ್ಟು ಮಾತ್ರವಲ್ಲ ಸಂಘಟನೆಯಲ್ಲಿ ಸದಸ್ಯರು, ಸದಸ್ಯತನ ಇರಬೇಕು, ಜತೆಗೆ ಕಾಲಕಾಲಕ್ಕೆ ಸದಸ್ಯರ ಸಭೆ ನಡೆಯಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಅದೇ ರೀತಿ ಸದಸ್ಯತನವನ್ನು ಕೇವಲ ನೀರು ಬಳಕೆದಾರರಿಗೆ ಸೀಮಿತಗೊಳಿಸಬೇಕು ಎನ್ನುವ ವಿಚಾರದಲ್ಲೂ ತಕ್ಕಮಟ್ಟಿನ ಸಹಮತವಿದೆ. ನೀರಿನ ಮೇಲೆ ತೆರಿಗೆ ವಿಧಿಸುವ ಕುರಿತು ರೈತರ ಆಕ್ಷೇಪವಿಲ್ಲ. ಆದರೆ ಅದು ಒಂದು ಮಿತಿಯೊಳಗೆ ಇರಬೇಕು. ಎಲ್ಲ ರೈತರು ತೆರಿಗೆ ಪಾವತಿ ಮಾಡಬೇಕು ಮತ್ತು ಪಾವತಿ ಮಾಡದವರ ವಿರುದ್ಧ ಕ್ರಮ ಇರಬೇಕೆಂದು ವಾದಿಸುತ್ತಾರೆ. ಇದು ಯಾಕೆಂದರೆ ಇಂದು ತೆರಿಗೆ ಕಟ್ಟಿದವನಿಗೂ ಬಾಕಿ ಇಟ್ಟವನಿಗೂ ವಿಶೇಷ ವ್ಯತ್ಯಾಸವಿಲ್ಲ. ಕೆರೆ ತುಂಬಿರುವಷ್ಟು ಕಾಲ ಇಬ್ಬರಿಗೂ ನೀರು ದೊರೆಯುತ್ತದೆ ಹಾಗಿದ್ದರೆ ತೆರಿಗೆ ಕಟ್ಟುವುದಾದರೂ ಯಾಕೆಂದು ಕೆಲ ರೈತರು ಪ್ರಶ್ನೆ ಕೇಳುತ್ತಾರೆ.

ಕೆರೆ ಪಾತ್ರ ಒತ್ತುವರಿ ತಡೆಯುವ ಅಗತ್ಯವಿದೆ ಎಂದು ಎಲ್ಲ ರೈತರು ಒಪ್ಪುತ್ತಾರೆ. ಆದರೆ ಆ ಜವಾಬ್ದಾರಿಯನ್ನು ಹೊರಲು ಅವರು ಸಿದ್ದರಿಲ್ಲ. ಅದನ್ನು ಸರಕಾರವೇ ಹೊರಬೇಕೆಂದು ಅವರು ಬಯಸುತ್ತಾರೆ. 'ನಿಮ್ಮ ಊರಿನ ಜನ, ನಿಮ್ಮ ಕಣ್ಣೆದುರೆ ಊರಿನ ಕೆರೆ ಪಾತ್ರ ಒತ್ತುವರಿ ಮಾಡುವಾಗ ಸುಮ್ಮನಿದ್ದು, ಈಗ ಅದನ್ನು ತಡೆಯುವ ಅಥವಾ ಖಾಲಿ ಮಾಡಿಸುವ ಜವಾಬ್ದಾರಿ ಸರಕಾರದ್ದು ಎನ್ನುವುದು ಸರಿಯೇ?, ಎಂದು ಕೇಳಿದೆ. ಕಮಲಾಪುರದ ಕೆಲವು ಹಿರಿಯರ ಪ್ರಕಾರ ಸ್ಥಳೀಯ ರಾಜಕಾರಿಣಿಗಳೇ ಈ ಸಮಸ್ಯೆಗೆ ಕಾರಣ. ಪಾರ್ಟಿ ರಾಜಕೀಯದಿಂದ ಒತ್ತುವರಿ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲು ಆಗುತ್ತಿಲ್ಲ. ಯಾವ ರಾಜಕೀಯ ಪಕ್ಷದವರೂ ಕೂಡ ಒತ್ತುವರಿ ಮಾಡುವವರ ವಿರುದ್ಧ ಮಾತಾಡುತ್ತಿಲ್ಲ. ಮಾತಾಡಿದರೆ ಎಲ್ಲಿ ತಮ್ಮ ಓಟಿಗೆ ತೊಂದರೆಯಾಗುತ್ತದೋ ಎನ್ನುವ ನಿಲುವು ಅವರದ್ದು ಎಂದು ಸ್ಥಳೀಯ ಹಿರಿಯರು ಹೇಳುತ್ತಾರೆ. ಒಬ್ಬ ಸ್ಥಳೀಯ ನಾಯಕರಂತೂ ಒತ್ತುವರಿ ಮಾಡುವುದು ತಮ್ಮ ಹಕ್ಕು ಎನ್ನುವ ರೀತಿಯಲ್ಲಿ ವಾದಿಸಿದರು. ಒತ್ತುವರಿ ಮಾಡಿದವರು ಭೂಮಿ ಇಲ್ಲದ ನಿರ್ಗತಿಕರು., ಸರಕಾರ ಅವರಿಗೆ ಬೇರೆ ಭೂಮಿ ಕೊಡಲಿ ಅವರು ಅಲ್ಲಿಗೆ ಹೋಗುತ್ತಾರೆ. ಜನರಿಗೆ ಬದುಕಲು ಅವಕಾಶ ಮಾಡಿಕೊಡದೆ ಕೆರೆ ಪಾತ್ರ ಒತ್ತುವರಿ ಆಯಿತೆಂದು ಯಾಕೆ ಗೋಳಿಡುತ್ತೀರಾ? ಎಂದು ವಾದಿಸಿದರು. ಹೀಗೆ ಒತ್ತುವರಿ ಸ್ವಲ್ಪ ಸಂಕೀರ್ಣವಾದ ಸಮಸ್ಯೆ. ಕೆರೆ ಕಾಲುವೆಗಳ ರಿಪೇರಿಗೆ ಶ್ರಮದಾನ ಮಾಡುವ ಕ್ರಮ ಹಿಂದೆ ಇತ್ತು. ಮುಂದೆಯೂ ಇರಬೇಕೆಂದು ಹೇಳುತ್ತಾರೆ. ಆದರೆ ಕಮಲಾಪುರದ ೧೭(ಒಟ್ಟು ೨೫) ಮತ್ತು ಕಲ್ ತಾವರೆಗೆರೆಯ ೧೪ (ಒಟ್ಟು ೧೫) ರೈತರು ಕೆರೆ ಕಾಲುವೆ ರಿಪೇರಿಗೆ

ವಂತಿಗೆ ನೀಡುವ ಕ್ರಮ ಬೇಡವೆನ್ನುವ ಅಭಿಪ್ರಾಯ ಹೊಂದಿದ್ದಾರೆ. ಕೆರೆ ಹೂಳೆತ್ತಲು ಶ್ರಮದಾನ ಮಾಡುವ ಬಗ್ಗೆ ರೈತರು ಮಿಶ್ರ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕಮಲಾಪುರದ ೧೭ ಮತ್ತು ತಿಮ್ಮಲಾಪುರದ ೭ ಮಂದಿ ಶ್ರಮದಾನ ಮಾಡಲು ರೈತರು ಸಿದ್ಧರಿದ್ದಾರೆ ಎಂದಿದ್ದಾರೆ. ಕಲ್ ತಾವರೆಗೆರೆಯ ಮುಕ್ಕಾಲಂಶ ಮತ್ತು ತಿಮ್ಮಲಾಪುರದ ಅರ್ಧಕ್ಕಿಂತ ಸ್ವಲ್ಪ ಕಡಿಮೆ ರೈತರು ಹೂಳೆತ್ತಲು ಶ್ರಮದಾನ ಮಾಡುವ ಕುರಿತು ಉತ್ಸುಕರಾಗಿಲ್ಲ. ಅದೇ ರೀತಿ ಹೂಳೆತ್ತಲು ವಂತಿಗೆ ನೀಡಲು ಮುಂದೆ ಬರುವ ರೈತರ ಸಂಖ್ಯೆ ಅಷ್ಟು ಆಶಾದಾಯಕವಾಗಿಲ್ಲ. ಕಮಲಾಪುರದ ಮೂರನೆ ಒಂದಕ್ಕಿಂತ ಸ್ವಲ್ಪ ಹೆಚ್ಚಿನ, ತಿಮ್ಮಲಾಪುರದ ಮೂರನೇ ಒಂದರಷ್ಟು ಮತ್ತು ಕಲ್ ತಾವರೆಗೆರೆಯ ಕೇವಲ ಒಬ್ಬ ಬಳಕೆದಾರರು ಮಾತ್ರ ಕೆರೆ ಹೂಳೆತ್ತಲು ವಂತಿಗೆ ನೀಡಲು ಸಿದ್ಧರಿದ್ದಾರೆ. ಉಳಿದವರು ಆ ಬಗ್ಗೆ ಅಷ್ಟು ಉತ್ಸುಕರಾಗಿಲ್ಲ.

ಇಷ್ಟಾಗಿಯೂ ಕೆರೆ ಹೂಳೆತ್ತುವ ಜಬಾಬ್ದಾರಿ ಪ್ರಶ್ನೆ ಬಂದಾಗ ಎಲ್ಲ ಹಳ್ಳಿಯ ಎಲ್ಲ ರೈತರು ಅದು ಸರಕಾರದ್ದು ಎಂದು ಅಭಿಪ್ರಾಯ ಸೂಚಿಸಿದ್ದಾರೆ. ಇದನ್ನು ಹೇಗೆ ಅರ್ಥಮಾಡಿಕೊಳ್ಳುವುದು? ಇದಕ್ಕೆ ಮೂರು ರೀತಿಯ ವಿವರಣೆ ಸಾಧ್ಯ. ಒಂದು ಸಮಸ್ಯೆಯ ಅಗಾಧತೆ. ಸಮಸ್ಯೆಯ ಆಗಾಧತೆಯ ವಿವರಣೆಯನ್ನು ಅರ್ಥಮಾಡಿಕೊಳ್ಳಲು ಕಮಲಾಪುರ ಕೆರೆಯ ಹೂಳಿನ ಸಮಸ್ಯೆ ಒಳ್ಳೆಯ ಉದಾಹರಣೆಯಾಗಬಹುದು. ನೀರಾವರಿ ಇಲಾಖೆ ಸರ್ವೇ ರಿಪೋರ್ಟು ಪ್ರಕಾರ ೧೯೬೦ರಲ್ಲಿ ೧೦ ರಿಂದ ೧೨ ಅಡಿ ಹೂಳು ಕೆರೆ ಪಾತ್ರ ಸೇರಿದೆ. ಇದರಿಂದಾಗಿ ನೀರಿನ ಸಂಗ್ರಹ ಪ್ರಮಾಣ ೮೫ ಎಂ.ಸಿ.ಎಫ್.ಟಿ.ಯಿಂದ ೬೫ ಎಂ.ಸಿ. ಎಫ್.ಟಿ.ಗೆ ಇಳಿದಿದೆ. ೧೯೬೦ರಿಂದ ೨೦೦೧ರ ವರೆಗೆ ಇನ್ನಷ್ಟು ಹೆಚ್ಚು ಪ್ರಮಾಣದಲ್ಲಿ ಹೂಳು ತುಂಬಿ ನೀರಿನ ಸಂಗ್ರಹ ಪ್ರಮಾಣವನ್ನು ಗಣನೀಯವಾಗಿ ಕಡಿಮೆಗೊಳಿಸಿರುವ ಸಾಧ್ಯತೆ ಇದೆ. ಇಷ್ಟೊಂದು ಬೃಹತ್ ಪ್ರಮಾಣದ ಹೂಳಿನ ಸಮಸ್ಯೆಗೆ ಅಪರೂಪಕ್ಕೆ ಬರುವ ಮಳೆ ಗಣಿಗಾರಿಕೆ ಹುಟ್ಟು ಹಾಕುವ ಧೂಳುಮಣ್ಣನ್ನು ಸುತ್ತಲಿನ ಹೊಲಗಳಲ್ಲಿ, ಕೆರೆಗಳಲ್ಲಿ ಪುಕ್ಸಟ್ಟೆಯಾಗಿ ತುಂಬಿ ಕೆರೆಗಳ ನೀರನ್ನು ಕೆಂಪಾಗಿಸುತ್ತಿದೆ. ಕೆರೆಯಲ್ಲಿನ ಹೂಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಭಾಗ ಈ ಗಣಿಗಳು ಹೊರಹಾಕಿದ ಧೂಳುಮಣ್ಣೆ ತುಂಬಿದೆ. ಈ ಹೂಳನ್ನು ಎತ್ತಲು ಕೆಲವು ಕೋಟಿ ರೂಪಾಯಿಗಳು ಬೇಕು. ಯಂತ್ರಗಳನ್ನು ಬಳಸಿದರೂ ಕೆಲವು ತಿಂಗಳುಗಳು ಬೇಕು. ಇಷ್ಟೊಂದು ಆಗಾಧ ಪ್ರಮಾಣದ ಕೆಲಸವನ್ನು ಮಾಡಲು ಸಾಧ್ಯವೆಂದು ಯಾವ ರೈತ ಹೇಳಲು ಸಾಧ್ಯ. ಎರಡು ಹಲವಾರು ದಶಕಗಳ ಆಧುನೀಕರಣದ ಸಂದರ್ಭದಲ್ಲಿ ಕೆರೆ ಸಂರಕ್ಷಣೆಯ ಜಬಾಬ್ದಾರಿಯನ್ನು ಸರಕಾರ ಹೊತ್ತದ್ದು ಮತ್ತೊಂದು ಕಾರಣ. ನೀರು ಬಳಕೆದಾರ ತನ್ನ ಪಾಲಿನ ತೆರಿಗೆ ನೀಡಿದರೆ ಆಯಿತು. ಕೆರೆ ರಿಪೇರಿ, ಹೂಳೆತ್ತುವುದು ಇತ್ಯಾದಿಗಳು ನೀರಾವರಿ ಇಲಾಖೆಯ ಹೊಣೆಯೆಂದು ರೈತರು ತಿಳಿಯುವಂತಾಯಿತು. ಇದರಿಂದಾಗಿ ಹೂಳಿನ ಸಮಸ್ಯೆ ಪರಿಹಾರಕ್ಕೆ ವಂತಿಗೆ ನೀಡುವ ಅಥವಾ ಶ್ರಮದಾನ ಮಾಡುವ ಕುರಿತು ರೈತ ಆಲೋಚನೆಯೇ ಮಾಡಿಲ್ಲ. ಮೂರು, ಕಮಲಾಪುರದ ಬಹುತೇಕ ರೈತರು ಇಂದು ಮಾರುಕಟ್ಟೆಗಾಗಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ. ಜತೆಗೆ ಹಲವಾರು ವರ್ಷಗಳಿಂದ ಮಾರುಕಟ್ಟೆಯಲ್ಲಿ ವ್ಯವಹರಿಸಿ ಅವರಿಗೆ ವೆಚ್ಚ, ಲಾಭ, ನಷ್ಟ, ಇತ್ಯಾದಿಗಳ ಖಚಿತ ಅರಿವಿದೆ. ಇಷ್ಟೊಂದು ಅಗಾಧ ಪ್ರಮಾಣದ ಹೂಳೆತ್ತಲು ತಗಲುವ ವೆಚ್ಚದ ಹಣ ಅಥವಾ ಶ್ರಮ ರೂಪದಲ್ಲಿ ಕನಿಷ್ಠ ತಿಳುವಳಿಕೆ ಇದೆ. ಇದು ಅವರ ಒಟ್ಟು ವ್ಯವಹಾರವನ್ನು ಹೇಗೆ ಪ್ರಭಾವಿಸಬಹುದೆಂಬ ಆಲೋಚನೆ ಕೂಡ ತಮ್ಮ ಕೆರೆಯ ಹೂಳಿನ ಸಮಸ್ಯೆಯನ್ನು ಸಾರ್ವಜನಿಕ ನಿಧಿಗೆ ವರ್ಗಾಯಿಸಲು ಕಾರಣವಾಗಿರಬಹುದು. ಇನ್ನು ನೀರು ಹಂಚಿಕೆ ನಿಯಮ ಪಾಲನೆ ಕುರಿತು ಪರಸ್ಪರ ವಿರುದ್ಧ ನಿಲುವುಗಳು ವ್ಯಕ್ತವಾಗಿವೆ. ನೀರು ಹಂಚಿಕೆ ಕ್ರಮ ಸಮರ್ಪಕವಾಗಿದೆಯೇ ಎಂದರೆ ಬಹುತೇಕ ರೈತರು ಹಿಂದೆ ಮತ್ತು ಈಗ ಸಮರ್ಪಕವಾಗಿದೆ ಎಂದು ಉತ್ತರಿಸಿದ್ದಾರೆ. ಅದೇ ರೀತಿ ಹಂಚಿಕೆಯ ವಿಚಾರದಲ್ಲಿ ಎಲ್ಲರೂ ನಿಯಮ ಅನುಸರಿಸುತ್ತಾರೋ ಎನ್ನುವ ಪ್ರಶ್ನೆಗೆ ಹೌದು ಎನ್ನುವ ಉತ್ತರ ಬಂದಿದೆ. ಆದರೆ ನೀರು ಹಂಚಿಕೆಯ ವಿಚಾರದಲ್ಲಿ ಜಗಳಗಳು ಇಲ್ಲವೇ ಎಂದರೆ ಹೆಚ್ಚು ಕಡಿಮೆ ಅರ್ಧದಷ್ಟು ಮಂದಿ ನೀರಾವರಿ ಹಂಚಿಕೆಯಲ್ಲಿ ಜಗಳಗಳು ಇವೆ ಎಂದಿದ್ದಾರೆ. ಇದು ಅವರ ಹಿಂದಿನ ಅಭಿಪ್ರಾಯಗಳಿಗೆ ಭಿನ್ನವಾದ ನಿಲುವು. ನೀರು ಹಂಚಿಕೆ ಸಮರ್ಪಕವಾಗಿದ್ದರೆ ಅಥವಾ ಎಲ್ಲರೂ ನಿಯಮ ಪಾಲನೆ ಮಾಡುತ್ತಿದ್ದರೆ ಜಗಳಗಳು ಆಗುವ ಸಾಧ್ಯತೆ ಕಡಿಮೆ. ಆದರೆ ಇಲ್ಲಿ ಜಗಳಗಳು ಆಗುತ್ತಿವೆ. ಅಂದರೆ ನಿಯಮ ಪಾಲನೆ ಆಗುತ್ತಿಲ್ಲ ಅಥವಾ ಸಮರ್ಪಕವಾದ ಹಂಚಿಕೆ ಆಗುತ್ತಿಲ್ಲ. ಇದು ಹಿಂದಿನ ವ್ಯವಸ್ಥೆ ಸಮಸ್ಯೆ. ಮುಂದಿನ ವ್ಯವಸ್ಥೆ ಬಗ್ಗೆ ಸ್ವಲ್ಪ ಸಕರಾತ್ಮಕ ನಿಲುವು ತಾಳಬಹುದು. ಯಾಕೆಂದರೆ ಮುಂದಿನ ವ್ಯವಸ್ಥೆಯಲ್ಲಿ ನೀರು ಹಂಚಿಕೆ ಸಕರಾತ್ಮಕ ನಿಲುವು ತಾಳಬಹುದು. ಯಾಕೆಂದರೆ ಮುಂದಿನ ವ್ಯವಸ್ಥೆಯಲ್ಲಿ ನೀರು ಹಂಚಿಕೆ ನಿಯಮ ಇರಬೇಕು ಮತ್ತು ಅದರ ಪಾಲನೆ ಆಗಬೇಕು ಎನ್ನುವುದರ ಕುರಿತು ಎಲ್ಲ ರೈತರು ತಮ್ಮ ಸಹಮತ ಸೂಚಿಸಿದ್ದಾರೆ.

(೩)

**ಒಟ್ಟು ಪರಿಸರದ ಹಿನ್ನೆಲೆಯಲ್ಲಿ ಸಹಭಾಗಿತ್ವದ ಸಾಧ್ಯತೆಗಳು**

ಸಹಭಾಗಿತ್ವ ಒಂದು ಸಾಮಾಜಿಕ ಪರಿಸರದಲ್ಲಿ ಕಾರ್ಯರೂಪಕ್ಕೆ ಬರಬೇಕಾಗಿದೆ. ಆ ಪರಿಸರದಲ್ಲಿ ಚಾರಿತ್ರಿಕವಾಗಿ ರೂಪುಗೊಂಡ ಸಂಸ್ಥೆಗಳು ಮತ್ತು ಮೌಲ್ಯಗಳು ಸಹಭಾಗಿತ್ವವನ್ನು ಪ್ರಭಾವಿಸುತ್ತದೆ. ಇಂತಹ ಸಂಸ್ಥೆಗಳು ಮತ್ತು ಮೌಲ್ಯಗಳು ಆಧುನಿಕ ಸಹಭಾಗಿತ್ವವನ್ನು ಹೇಗೆ ಪ್ರಭಾವಿಸಬಹುದು ಎನ್ನುವುದರ ಕಿರು ಪರಿಚಯ ಮುಂದೆ ಇದೆ. ಇಲ್ಲಿ ನಾಲ್ಕೈದು ವಿಚಾರಗಳ ಕಡೆಗೆ ಗಮನ ಹರಿಸಲಾಗಿದೆ. ಒಂದು, ನಮ್ಮಲ್ಲಿ ಕಾರ್ಯರೂಪಕ್ಕೆ ಬಂದ ಆಧುನೀಕರಣ. ಐದು ದಶಕಗಳ ಆಧುನೀಕರಣ ಅಥವಾ ಸರಕಾರದ ನೇತೃತ್ವದಲ್ಲಿ ನಡೆದ ಅಭಿವೃದ್ಧಿ ಪ್ರಕ್ರಿಯೆ ನಮ್ಮ ಸಾಂಪ್ರದಾಯಿಕ ಆರ್ಥಿಕ, ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ಮೂಲಭೂತವಾಗಿ ಬದಲಾಯಿಸದಿದ್ದರೂ ಗಾಢವಾಗಿ ಪ್ರಭಾವಿಸಿದೆ. ಹಿಂದೆ ಕೃಷಿಕರಲ್ಲದ ಎಷ್ಟೋ ಜಾತಿ ಮತ್ತು ಕುಟುಂಬಗಳು ಇಂದು ಕೃಷಿಕರಾಗಿದ್ದಾರೆ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ತಕ್ಕ ಮಟ್ಟಿನ ಮುಂದುವರಿಕೆ ಇದ್ದರೂ ಆರ್ಥಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಗಣನೀಯವಾದ ಬದಲಾವಣೆಯನ್ನು ಗಮನಿಸಬೇಕಾಗಿದೆ. ಒಂದು ಕಾಲದಲ್ಲಿ ಗ್ರಾಮವೊಂದರ ಅಧಿಕಾರ ಕೇಂದ್ರ ಪಟೇಲ ಅಥವಾ ಗೌಡನಾದರೆ ಇಂದು ಆ ಸ್ಥಿತಿ ಉಳಿದಿಲ್ಲ. ಪಂಚಾಯತ್ ವ್ಯವಸ್ಥೆ ಜಾರಿ ಬರುವುದರೊಂದಿಗೆ ಒಂದೇ ಹಳ್ಳಿಯಲ್ಲಿ ಹಲವಾರು ಅಧಿಕಾರ ಕೇಂದ್ರಗಳು ರೂಪುಗೊಂಡಿದೆ. ಇದು ಒಳ್ಳೆಯದು ಕೆಟ್ಟದು ಎನ್ನುವ ತೀರ್ಮಾನಕ್ಕಿಂತ ಆ ವಾಸ್ತವಿಕತೆಯನ್ನು ಅರ್ಥಮಾಡಿಕೊಳ್ಳುವುದು ಇಂತಹ ಪರಿಸರದಲ್ಲಿ ಸಾಧ್ಯವಾಗಬಹುದಾದ ಸಂಘಟಿತ ಕಾರ್ಯಕ್ರಮಗಳ ಬಗ್ಗೆ ಆಲೋಚಿಸಲು ಸಾಧ್ಯ. ಜಾತಿ ನೆಲೆಯಲ್ಲಿ ರಾಜಕೀಯ ಸಂಘಟನೆ ಮತ್ತು ಆ ಮೂಲಕ ಸಮುದಾಯದ ಸಂಪನ್ಮೂಲ ವಿತರಣೆಯ ನಿರ್ಣಯದಲ್ಲಿ ಪಾಳುಗೊಳ್ಳುವುದು ಇಂದು ಸಹಜವಾಗಿದೆ. ಇಂತಹ ವಾತಾವರಣದಲ್ಲಿ ಸಹಕಾರಿ ಸಂಘಟನೆಗಳು ರೂಪುಗೊಳ್ಳಬೇಕಾಗಿದೆ.

ಹೊಸ ಮಾನದಂಡ ಪ್ರಕಾರ ಕೆರೆ ನೀರು ಬಳಸುವ ಪ್ರತಿಯೊಬ್ಬರು ಸಹಕಾರಿ ಸಂಘದ ಸದಸ್ಯರಾಗಲು ಅರ್ಹರು. ಎಲ್ಲ ಜಾತಿಗಳಿಂದಲೂ ಸದಸ್ಯರನ್ನು ಮಾಡಿ ಸಂಘಟನೆ ಸ್ಥಾಪಿಸುವುದು ಕಷ್ಟವಾಗುವುದಿಲ್ಲ. ಇದರ ಜತೆಗೆ ಅವರು ಒಂದು ಸಮುದಾಯವಾಗಿ ಕಾರ್ಯ ನಿರ್ವಹಿಸುವ ಮೌಲ್ಯ ನಿರ್ಮಾನವಾಗಬೇಕಾಗಿದೆ. ಪ್ರತ್ಯೇಕಿತ ಗುಂಪಾಗಿ ಅಥವಾ ಸಮುದಾಯವಾಗಿ (ಜಾತಿ ನೆಲೆಯಲ್ಲಿ) ಕಾರ್ಯಕ್ರಮ ಹಮ್ಮಿಕೊಳ್ಳುವ ಪರಿಪಾಠ ನಮಗಿದೆ. ಈಗ ಪ್ರತ್ಯೇಕಿತ ಸಮುದಾಯಗಳು ಒಂದಾಗಬೇಕಾಗಿದೆ. ತಾಂತ್ರಿಕವಾಗಿ ಒಂದಾಗುವುದು ಕಷ್ಟವಲ್ಲ. ಆದರೆ ಇವರೆಲ್ಲ ಒಟ್ಟು ಕಲೆತು ವ್ಯವಹರಿಸಲು ಅಗತ್ಯವಾದ ಮೌಲ್ಯ ನಿರ್ಮಾಣವಾಗಬೇಕಾಗಿದೆ. ಪ್ರಶ್ನೆ ಇರುವುದು ಇದು ಈಗಾಗಲೇ ಇರುವ ಯಾವುದಾದರೂ ಒಂದು ಸಮುದಾಯದ ಮೌಲ್ಯ ಆಗಬೇಕೇ? ಅಥವಾ ಎಲ್ಲರಿಗೂ ಅನುಕೂಲವಾಗುವ ಒಂದು ಹೊಸ ಮೌಲ್ಯ ನಿರ್ಮಾಣವಾಗಬೇಕೇ? ಐದು ದಶಕಗಳ ಆಧುನೀಕರಣದ ಇತಿಹಾಸ ನೋಡಿದರೆ ಪ್ರತ್ಯೇಕಿತ ಅಥವಾ ಯಾವುದಾದರು ಒಂದು ಅಥವಾ ಯಜಮಾನಿಕೆಯಲ್ಲಿ ಭಾಗವಹಿಸುವ ಕೆಲವು ಜಾತಿ ಜನರು ಸಮುದಾಯದ ಸಂಪನ್ಮೂಲಗಳ ವಿತರಣೆಯನ್ನು ನಿರ್ಧರಿಸುವ ಪರಿಪಾಠವಿದೆ. ಪ್ರತಿಯೊಂದನ್ನು ಪ್ರತ್ಯೇಕ ಜಾತಿ ಅಥವಾ ಗುಂಪಿನ ಹಿತಾಸಕ್ತಿಯ ನೆಲೆಯಿಂದ ನೋಡುವ ಅಭ್ಯಾಸವನ್ನು ಇಲ್ಲಿ ಬದಲಾಯಿಸಿಕೊಳ್ಳಬೇಕಾಗಿದೆ. ಇದು ಒಂದೆರಡು ವರ್ಷಗಳಲ್ಲಿ ಆಗುವಂತಹ ಕೆಲಸವಲ್ಲ. ಹಲವಾರು ವರ್ಷಗಳ ಪ್ರಯೋಗದ ಅಗತ್ಯವಿದೆ.

ಎರಡು, ಸಾಮಾಜಿಕ ಪರಿವರ್ತನೆಗೆ ರೂಢಿಸಿಕೊಳ್ಳುವ ನಮ್ಮ ಕ್ರಮ. ಚಾರಿತ್ರಿಕವಾಗಿ ನಾವು ಸಾಮಾಜಿಕ ಅಥವಾ ಸಾಂಸ್ಕೃತಿಕ ಚಳವಳಿಗಳ ಮೂಲಕ ಇತರ ಕ್ಷೇತ್ರಗಳಲ್ಲಿನ ಮುಖ್ಯವಾಗಿ ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿನ ಬದಲಾವಣೆಗಳನ್ನು ರೂಢಿಸಿ ಕೊಳ್ಳಲು ಪ್ರಯತ್ನಿಸುತ್ತೇವೆ. ಈಗ ಅದಕ್ಕೆ ವಿರುದ್ಧ ಪ್ರಕ್ರಿಯೆ ಅಗತ್ಯವಿದೆ. ಅಂದರೆ ಆರ್ಥಿಕ ಹಾಗೂ ರಾಜಕೀಯ ಸಂಪನ್ಮೂಲ ವಿತರಣೆಯ ಪ್ರಶ್ನೆ ಪರಿಹರಿಸಲು ಸಂಘಟನೆಗಳು ರೂಪುಗೊಳ್ಳಬೇಕಾಗಿದೆ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಾಮರಸ್ಯವನ್ನು ಆರ್ಥಿಕ ಹಾಗು ರಾಜಕೀಯ ವಿತರಣೆಯ ಅಂಶಗಳಿಗೆ ವಿಸ್ತರಿಸಲು ಸಾಧ್ಯವಾಗಬೇಕು. ಇಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಾಮರಸ್ಯ ಎನ್ನುವುದನ್ನು

ನಾನು ತುಂಬಾ ಸೀಮಿತ ನೆಲೆಯಲ್ಲಿ ಬಳಸುತ್ತಿದ್ದೇನೆ. ವಿವಿಧ ಜಾತಿ/ಸಮುದಾಯಕ್ಕೆ ಸೇರಿದ ಜನರು ಒಂದು ಕಡೆ ಸೇರುವ ಮತ್ತು ಕಾರ್ಯಕ್ರಮಗಳಲ್ಲಿ ಭಾಗವಹಿಸುವ ದೃಷ್ಟಿಯಿಂದ ಬಳಸಿದ್ದೇನೆ. ಜತೆಗೆ ಇದನ್ನು ನಾನು ಗ್ರಾಮೀಣ ಪರಿಸರವನ್ನು ಗಮನದಲ್ಲಿಟ್ಟುಕೊಂಡು ಹೇಳುತ್ತಿದ್ದೇನೆ. ಇಲ್ಲೊಂದು ತೋರಿಕೆಯ ಒಗ್ಗಟ್ಟಿದೆ. ತೋರಿಕೆ ಯಾಕೆಂದರೆ ಈ ಸಾಂಸ್ಕೃತಿಕ ಆಚರಣೆಗಳಲ್ಲೂ ಸಾಕಷ್ಟು ಸೇರಿಸಿಕೊಳ್ಳುವ ಮತ್ತು ದೂರ ಇಡುವ ಪ್ರಕ್ರಿಯೆ ನಡೆದೆ ಇರುತ್ತದೆ. ಜತೆಗೆ ದಿನ ನಿತ್ಯದ ಬದುಕಿನ ಏಣಿಶ್ರೇಣಿಗಳನ್ನು ಸೂಕ್ಷ್ಮವಾಗಿ ಇಲ್ಲಿ ಕೂಡ ಕಾಪಾಡಲಾಗುತ್ತದೆ. ಆದಾಗ್ಯೂ ನಮ್ಮಲ್ಲೊಂದು ನಂಬಿಕೆಯಿದೆ. ಅದೇನೆಂದರೆ ಸಾಂಸ್ಕೃತಿಕ ಕ್ಷೇತ್ರದಲ್ಲಿ ಏಣಿಶ್ರೇಣಿಯ ಪ್ರಶ್ನೆಯೇ ಇಲ್ಲ. ದೇವರು ದಿಂಡರುಗಳ ವಿಚಾರ ಬಂದರೆ ತಕ್ಕ ಮಟ್ಟಿನ ಸಹಮತ ನಮ್ಮಲ್ಲಿದೆ ಎನ್ನುವ ನಂಬಿಕೆ ಇದೆ. ಊರ ಜಾತ್ರೆ ಅಥವಾ ಊರಿಗೆ ಸಂಬಂಧಿಸಿದ ಸಾಂಸ್ಕೃತಿಕ ಆಚರಣೆಯಲ್ಲಿ ಸಮುದಾಯವಾಗಿ ಭಾಗವಹಿಸುವುದು ಚಾರಿತ್ರಿಕವಾಗಿ ರೂಪುಗೊಂಡ ನಮ್ಮ ಸಮಾಜದ ಗುಣ. ಊರಿನ ಬಹುತೇಕರು ಊರ ಜಾತ್ರೆಯಲ್ಲಿ, ಸತ್ಯನಾರಾಯಣ ಪೂಜೆಗಳಲ್ಲಿ, ಮೊಹರಂ ಹಬ್ಬದಲ್ಲಿ ಪಾಲುಗೊಳ್ಳುವುದನ್ನು ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಕಾಣಬಹುದು. ಇಲ್ಲಿ ಕೂಡ ಸಮಾಜದ ಕೆಳ ಸ್ತರದಲ್ಲಿರುವ ದಲಿತರನ್ನು ಸೂಕ್ಷ್ಮವಾಗಿ ದೂರ ಇಡಲಾಗುತ್ತಿದೆ.

ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಕನಿಷ್ಠ ಒಂದಾದರೂ ಸಂಘ ಸಂಸ್ಥೆಯನ್ನು ಪ್ರತಿ ಹಳ್ಳಿಯಲ್ಲೂ ಕಾಣಬಹುದು. ವಿಚಿತ್ರವೆಂದರೆ ಇದು ಯಾವುದು ಕೂಡ ಸರಕಾರ ಅಥವಾ ಹೊರಗಿನ ಪ್ರೋತ್ಸಾಹದಿಂದ ಹುಟ್ಟಿಕೊಂಡವಲ್ಲ. ನಾನು ಕ್ಷೇತ್ರ ಕಾರ್ಯ ಮಾಡಿದ ಹಳ್ಳಿಗಳಲ್ಲಿ ಇರುವ ಸಂಘ ಸಂಸ್ಥೆಗಳ ಪಟ್ಟಿ ಮಾಡಿದ್ದೇನೆ. ಪ್ರತಿ ಹಳ್ಳಿಯಲ್ಲಿ ಇರುವ ಸಂಘ ಸಂಸ್ಥೆಗಳಲ್ಲಿ ಶೇಕಡಾ ೯೦ರಷ್ಟು ಸಂಘಗಳ ಮುಖ್ಯ ಕಾರ್ಯಕ್ರಮಗಳು ಸಾಮಾಜಿಕ ಅಥವಾ ಸಾಂಸ್ಕೃತಿಕ ಉದ್ದೇಶಗಳಿಗಾಗಿ ರೂಪುಗೊಂಡಿವೆ. ಅವು ಬೇರೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಿಲ್ಲವೆಂದಲ್ಲ. ಆದರೆ ಅವುಗಳು ಮುಖ್ಯ ಉದ್ದೇಶವಾಗಿ ಅಲ್ಲ; ಒಂದು ಉಪ ಕಾರ್ಯಕ್ರಮವಾಗಿ. ಅದೇನೆ ಇರಲಿ ಇಲ್ಲಿ ನಾವು ಗಮನಿಸಬೇಕಾದ ವಿಚಾರ ಅಂದರೆ ಸಂಘ ಸಂಸ್ಥೆಗಳನ್ನು ರೂಪಿಸುವ ಮತ್ತು ಅವುಗಳ ಮೂಲಕ ಸಮುದಾಯದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳೂವ ಅಭ್ಯಾಸ ಈಗಾಗಲೇ ಇದೆ ಎನ್ನುವ ಅಂಶ ಮುಖ್ಯ. ಇದು ಜನರಿಗೆ ಸಮುದಾಯವಾಗಿ ಕಾರ್ಯನಿರ್ವಹಿಸಲು ಅಗತ್ಯವಿರುವ ಕೆಲವೊಂದು ಮೂಲಭೂತ ಪಾಠಗಳನ್ನು ಕಲಿಸಿಕೊಟ್ಟಿದೆ. ಮುಖ್ಯವಾಗಿ ಮೂರು ವಿಚಾರಗಳನ್ನು ಇಲ್ಲಿ ಕಾಣಬಹುದು. ಸಂಘಟನೆಯಲ್ಲಿ ಬರುವ ಇತರ ಸದಸ್ಯರ ಸಂಕಷ್ಟದ ಬಗ್ಗೆ ಸಹಾನುಭೂತಿ, ಒಂದು ಸಂಸ್ಥೆಯ ನಿಯಮಕ್ಕೆ ಅನುಸಾರ ಕಾರ್ಯನಿರ್ವಹಿಸುವ ಅಭ್ಯಾಸ, ಇತರ ಸದಸ್ಯರು ಮತ್ತು ಸಂಸ್ಥೆಯ ವ್ಯಾಪ್ತಿಯೊಳಗೆ ಬರುವ ಇತರರ ಬಗ್ಗೆ ನಂಬಿಕೆ ಇತ್ಯಾದಿಗಳು ಈಗಾಗಲೇ ಇರುವ ಸಂಘಗಳಿಂದ ಕಲಿಯಬಹುದಾದ ಮೂಲಭೂತ ಪಾಠ. ಈ ಗುಣಗಳನ್ನು ಆರ್ಥಿಕ ವಿಚಾರಕ್ಕೆ ರೂಪುಗೊಳ್ಳುವ ಸಂಘಟನೆಗಳಿಗೆ ವರ್ಗಾಯಿಸಲು ಸಾಧ್ಯವಾದರೆ ಕೆರೆ ನೀರಾವರಿ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವವನ್ನು ರೂಪುಗೊಳಿಸುವ ಕೆಲಸ ಸ್ವಲ್ಪಮಟ್ಟಿಗೆ ಸುಲಭವಾಗಬಹುದು.

ಮೂರು, ತಳಮಟ್ಟದಲ್ಲಿ ಪ್ರಜಾಪ್ರಭುತ್ವ ಮೀಡಿಯೇಟ್ ಆಗುವ ವಿಧ. ತಳ ಮಟ್ಟದಲ್ಲಿ ಈಗಾಗಲೇ ಹಲವಾರು ಸಂಸ್ಥೆಗಳು ಕಾರ್ಯರೂಪದಲ್ಲಿವೆ. ಕೃಷಿಕರ ಸಹಕಾರಿ ಸೊಸೈಟಿಗಳು, ಪಂಚಾಯತ್ ಸಂಸ್ಥೆಗಳು, ಸಮುದಾಯ ಅರಣ್ಯ ಸಮಿತಿಗಳು ಅವುಗಳಲ್ಲಿ ಮುಖ್ಯ. ಅವುಗಳು ಕೆಲವು ಕೃಷಿಕರ ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿವೆ ಮತ್ತೆ ಕೆಲವು ಕೃಷಿಗೆ ಅವಶ್ಯವಾದ ಹಣಕಾಸು ವ್ಯವಸ್ಥೆ ಮಾಡುತ್ತಿವೆ. ಗ್ರಾಮದ ಸಮಗ್ರ ಅಭಿವೃದ್ಧಿಗಾಗಿ ಪಂಚಾಯತ್ ವ್ಯವಸ್ಥೆ ಜಾರಿಯಲ್ಲಿದೆ. ಇವೆಲ್ಲ ತಕ್ಕಮಟ್ಟಿಗೆ ಗ್ರಾಮೀಣ ಸಮಸ್ಯೆಗಳನ್ನು ಪರಿಹರಿಸಲು ಸಹಕಾರಿಯಾಗಿವೆ. ಆದರೆ ಇವುಗಳಿಗೆ ಸಂಬಂಧಿಸಿದಂತೆ ಕೆಲವು ನ್ಯೂನತೆಗಳು ಇಂದಿಗೂ ಮುಂದುವರಿಯುತ್ತಿವೆ. ಇವುಗಳು ತಾಂತ್ರಿಕ ಬದ್ಧತೆಗಳನ್ನು ಸರಿಯಾಗಿ ಅನುಸರಿಸುತ್ತಿವೆ. ಅಂದರೆ ಕನಿಷ್ಠ ಸಂಖ್ಯೆಯ ಸದಸ್ಯರು ಇಲ್ಲದಿದ್ದರೂ ಇದ್ದಾರೆ ಎಂದು ಪ್ರಮಾಣ ಪತ್ರ ನೀಡುವುದು ಸದಸ್ಯರ ಸಭೆ ನಡೆಯದಿದ್ದರೂ ನಡೆದಿದೆ ಎಂದು ವರದಿ ಮಾಡುವುದು ಇತ್ಯಾದಿಗಳನ್ನು ತಾಂತ್ರಿಕ ಬದ್ದತೆ ಎನ್ನಬಹುದು. ಆದರೆ ಇವುಗಳ ಮೂಲ ಉದ್ದೇಶಕ್ಕೆ ಅಗತ್ಯವಾದ ಪ್ರಜಾಪ್ರಭುತ್ವ ಮಾದರಿಯಲ್ಲಿ ನಿರ್ಣಯ ಕೈಗೊಳ್ಳುವುದು ಮತ್ತು ಕೈಗೊಂಡ ನಿರ್ಣಯಗಳನ್ನು ಜಾರಿ ತರುವುದರಲ್ಲಿ ಇಂದಿಗೂ ಸಫಲವಾಗಿಲ್ಲ. ಪ್ರತಿಯೊಂದು ಸಂಸ್ಥೆಯಲ್ಲೂ ಸ್ಥಳೀಯ ಸಾಂಪ್ರದಾಯಿಕ ಅಥವಾ ಆಧುನಿಕ ಯಜಮಾನಿಕೆಯ ಗುಂಪುಗಳು ತಮ್ಮ ಹಿತಾಸಕ್ತಿಗಳಿಗೆ ಅನುಸಾರವಾಗಿ ನಿರ್ಣಯ ಕೈಗೊಳ್ಳುವುದು ನಡೆಯುತ್ತಿದೆ. ಜತೆಗೆ ನಿರ್ಣಯಗಳನ್ನು

ಜಾರಿ ತರುವಾಗ ಸ್ಥಳೀಯ ಪ್ರಭಾವಿ ಕುಲಗಳು ಸಮುದಾಯದ ನಿರ್ಣಯಗಳನ್ನು ಮುರಿಯುವುದರಲ್ಲಿ ಪ್ರಮುಖರು. ಎಲ್ಲರಿಗೂ ಅನ್ವಯವಾಗುವ ನಿಯಮಗಳನ್ನು ಪಾಲಿಸುವುದೇ ಮರ್ಯಾದೆಗೆ ಕಡಿಮೆ ಎನ್ನುವುದು ನಮ್ಮಲ್ಲಿ ಮೇಲಿನಿಂದ ಕೆಳಗಿನ ತನಕ ಇರುವ ಒಂದು ದೊಡ್ಡ ರೋಗ. ಒಂದು ಕಾಲದಲ್ಲಿ ಸಮಾಜದ ಮೇಲ್ ವರ್ಗಗಳು ನಿಯಮಗಳನ್ನು ಮುರಿಯುವುದನ್ನು ನೋಡುತ್ತಿದ್ದೆವು. ಇಂದು ಬಹುತೇಕ ಸಂಸ್ಥೆಗಳಲ್ಲಿ ಸಮಾಜದ ಕೆಳವರ್ಗದವರು ಸ್ಥಾನ ಪಡೆದಿದ್ದಾರೆ. ಆದರೆ ಅವರು ಕೂಡ ನಿಯಮಗಳನ್ನು ಅನುಸರಿಸಿ ಇತರರಿಗೆ ಮಾದರಿಯಾಗುವುದರತ್ತ ಗಮನ ಹರಿಸಿಲ್ಲ. ಬದಲಿಗೆ ಬಹುತೇಕ ಸಂದರ್ಭದಲ್ಲಿ ತಮ್ಮ ಮೇಲ್ ವರ್ಗದ ಚಾಳಿಯನ್ನು ಮುಂದುವರಿಸುವುದೇ ತಾವು ಯಜಮಾನರದ್ದನ್ನು ತೋರಿಸಲು ಸರಿಯಾದ ಮಾರ್ಗ ಎಂದು ತಿಳಿದಂತಿದೆ. ನಿಯಮ ಅನುಸರಿಸಿದರೆ ಸಾಮಾನ್ಯ, ಅನುಸರಿಸದಿದ್ದರೆ ಅಸಮಾನ್ಯ ಎನ್ನುವ ಅಭ್ಯಾಸ ನಮ್ಮ ಸಾರ್ವಜನಿಕ ಬದುಕಿನಲ್ಲಿ ಸಾಕಷ್ಟು ಪ್ರಚಲಿತದಲ್ಲಿದೆ. ಇದು ಬದಲಾಗಬೇಕಾಗಿದೆ.

ನಾಲ್ಕು, ಸಮುದಾಯದ ಸಂಪನ್ಮೂಲದ ವೆಚ್ಚ ಭರಿಸುವ ಕ್ರಮ. ನಾವು ಬಳಸುವ ಪ್ರತಿಯೊಂದಕ್ಕು ವೆಚ್ಚವಿದೆ. ಯಾವುದು ಕೂಡ ಪುಕ್ಸಟ್ಟೆಯಾಗಿ ಸಿಗುವುದಿಲ್ಲ. ಹಿಂದಿನ ಕಾಲದಲ್ಲಿ ಕೆರೆ ನೀರು ಬಳಸುವವರು ಅದರ ವೆಚ್ಚ ಬರಿಸುತ್ತಿದ್ದರು. ಕೆರೆ ಕಟ್ಟಿಸುವವರಿಗೆ ಅವರಿಗೆ ಕೆರೆ ರಿಪೇರಿ ಮಾಡುವವರಿಗೆ ಭೂಮಿ ದಾನವಾಗಿ ಕೊಡುವ ಅಥವಾ ಕಡಿಮೆ ಕಂದಾಯಕ್ಕೆ ಕೊಡುವ ಕ್ರಮವಿತ್ತು. ಕೆರೆ ರಿಪೇರಿ ಅಥವಾ ಹೂಳೆತ್ತುವುದಕ್ಕೆ ರೈತರಿಂದ ಹಣ ಅಥವಾ ಧಾನ್ಯ ಅಥವಾ ಶ್ರಮ ರೂಪದಲ್ಲಿ ದೇಣಿಗೆ ಪಡೆಯುತ್ತಿದ್ದರು. ಹೀಗೆ ಹಿಂದೆ ಕೂಡ ಕೆರೆ ನೀರಾವರಿ ಪುಕ್ಸಟ್ಟೆಯಾಗಿ ಬರುತ್ತಿರಲಿಲ್ಲ. ಇಂದು ಅದರಲ್ಲೂ ೧೯೪೭ರ ನಂತರ ಕೆರೆ ನಿರ್ಮಾಣ, ರಿಪೇರಿ ಇತ್ಯಾದಿಗಳನ್ನು ಸರಕಾರವೇ ಮಾಡಲು ಹೊರಟಿದೆ. ಇದರಿಂದಾಗಿ ನಮ್ಮಲ್ಲೊಂದು ಮುಗ್ಧ ದೋರಣೆ ಬೆಳೆದಿದೆ. ಅದೇನೆಂದರೆ ಕೆರೆ ರಿಪೇರಿ ಅಥವಾ ಹೂಳೆತ್ತುವುದು ಇತ್ಯಾದಿಗಳು ಸರಕಾರದ ಜವಾಬ್ದಾರಿ. ಇದರ ಅರ್ಥ ರೈತರು ಕೆರೆ ನೀರಾವರಿಗೆ ಯಾವುದೇ ತೆರಿಗೆ ನೀಡುತ್ತಿಲ್ಲ ಎಂದು ನಾನು ವಾದಿಸುತ್ತಿಲ್ಲ ಈಗಲೂ ಸಣ್ಣ ಮತ್ತು ಬೃಹತ್ ನೀರಾವರಿ ವ್ಯಾಪ್ತಿಯಲ್ಲಿ ಬರುವ ಕೆರೆ ನೀರಾವರಿಗೆ ರೈತರು ನಿಗದಿತ ತೆರಿಗೆ ಸಂದಾಯ ಮಾಡುತ್ತಿದ್ದಾರೆ. ಆದರೆ ಅವರು ಕಟ್ಟುವ ತೆರಿಗೆ, ಮುಖ್ಯವಾಗಿ ಬೃಹತ್ ನೀರಾವರಿ ವ್ಯಾಪ್ತಿಯೊಳಗೆ ಬರುವ ಕೆರೆ ನೀರಾವರಿ ವ್ಯವಸ್ಥೆಯ ವೆಚ್ಚಕ್ಕೆ ಅನುಗುಣವಾಗಿಲ್ಲ. ಒಂದು ಎಕರೆಗೆ ಕನಿಷ್ಠ ರೂ.೨೫೦೦ ವೆಚ್ಚ ಬರುತ್ತದೆ. ಆದರೆ ರೈತರು ಸಂದಾಯ ಮಾಡುವುದು ಕೇವಲ ರೂ.೪೫೦. ಇನ್ನು ಸಣ್ಣ ನೀರಾವರಿ ವ್ಯಾಪ್ತಿಯೊಳಗೆ ಬರುವ ಕೆರೆಗಳ ಸ್ಥಿತಿಯು ಬೇರೆಯೇ ಇದೆ. ಎಷ್ಟೋ ಸಂದರ್ಭದಲ್ಲಿ ಇಲಾಖೆ ಹೆಸರಿಗೆ ಮಾತ್ರ ಇದೆ. ಕೆರೆ ರಿಪೇರಿ ಇಲ್ಲದೆ ಸೊರಗಿದೆ. ಸರಿ ಇದ್ದ ಕಡೆ ತುಂಬಾ ಕಡಿಮೆ ತೆರಿಗೆ ವಸೂಲಾಗುತ್ತಿದೆ. ವರ್ಷಕ್ಕೆ ರೂ ೨೦ ರಿಂದ ೪೦. ಇದು ಕೂಡ ಜಾಸ್ತಿ ಎನ್ನುವ ಅಭಿಪ್ರಾಯವಿದೆ. ಎರಡನೇ ಸಮಸ್ಯೆ ನಿಗದಿಯಾದ ತೆರಿಗೆ ಸಂದಾಯ ಮಾಡಿದಿರುವು. ಸುಮಾರು ಮೂರನೇ ಒಂದರಷ್ಟು ಜನ ತೆರಿಗೆ ಸರಿಯಾಗಿ ಪಾವತಿ ಆಗುತ್ತಿಲ್ಲ ಎಂದಿದ್ದಾರೆ. ಇದು ಕೆರೆ ನೀರಾವರಿ ಸಂಬಂಧಿಸಿ ಮಾತ್ರವಲ್ಲ. ಮನೆ ತೆರಿಗೆಯಿಂದ ಹಿಡಿದು ಎಲ್ಲ ತೆರಿಗೆಯನ್ನು ಕಟ್ಟದಿರುವ ಅಭ್ಯಾಸ ನಮಗಿದೆ. ನೀರಾವರಿ ತೆರಿಗೆ ಮತ್ತು ವೆಚ್ಚ ಭರಿಸುವುದರ ಮೂಲಕ ಪಾಲುದಾರರಾಗುವ ಕುರಿತ ಪ್ರಶ್ನೆಗಳಿಗೆ ತೃಪ್ತಿಕರ ಉತ್ತರ ಸಿಕ್ಕಿಲ್ಲ. ಕೆರೆ, ಕಾಲುವೆ ರಿಪೇರಿಗೆ ಅಥವಾ ಹೂಳೆತ್ತಲು ಶ್ರಮದಾನ ಮಾಡಲು ರೈತರು ಸಿದ್ಧರಿದ್ದಾರೆ. ಆದರೆ ವಂತಿಗೆ ನೀಡುವ ವಿಚಾರದಲ್ಲಿ ಬಳಕೆದಾರರು ಧಾರಾಳತನ ಪ್ರದರ್ಶಿಸುವುದಿಲ್ಲ. ಕೆರೆ ಹೂಳೆತ್ತುವುದು ಸರಕಾರದ ಜವಾಬ್ದಾರಿಯಾಗಬೇಕೆಂದು ಸಂದರ್ಶಿಸಿದ ಬಹುತೇಕರ ಅಭಿಪ್ರಾಯ.

ಐದು, ಖಾಸಗಿ ಮತ್ತು ಸಮುದಾಯದ ಸಂಪನ್ಮೂಲ ಬಳಸುವಲ್ಲಿ ಮಾಡುವ ವ್ಯತ್ಯಾಸ. ಖಾಸಗಿ ಸಂಪನ್ಮೂಲದ ಬಳಕೆಯಲ್ಲಿ ಸಾಕಷ್ಟು ಜಾಗ್ರತೆ ವಹಿಸುವುದನ್ನು ಎಲ್ಲರಲ್ಲೂ ಕಾಣುತ್ತೇವೆ. ಆದರೆ ಸಾರ್ವಜನಿಕ ಸಂಪನ್ಮೂಲ ಬಳಕೆಯಲ್ಲಿ ಅದೇ ನಿಯಮವನ್ನು ಪಾಲಿಸುವುದಿಲ್ಲ. ಅದು ಸಾರ್ವಜನಿಕ ಹಣ ಇರಬಹುದು, ಕೆರೆ ನೀರು ಇರಬಹುದು, ಸಮುದಾಯದ ಅರಣ್ಯ ಇರಬಹುದು, ರಸ್ತೆ ಇರಬಹುದು, ವಿದ್ಯುತ್ ಇರಬಹುದು ಅಥವಾ ಇನ್ಯಾವುದೋ ಸಾರ್ವಜನಿಕ ಆಸ್ತಿ ಇರಬಹುದು. ಅದು ಸಾರ್ವಜನಿಕ ಎಂದ ಕೂಡಲೇ ನಮ್ಮದಲ್ಲ ಎನ್ನುವ ಧೋರಣೆ. ಆದುದರಿಂದ ಅದನ್ನು ಹೇಗೆ ಬೇಕೆಂದಾಗ ಉಪಯೋಗಿಸುವುದು ನಮ್ಮ ಹಕ್ಕು ಎಂದು ತಿಳಿದುಕೊಂಡಂತಿದೆ. ತನ್ನ ಸ್ವಂತ ದುಡ್ಡಿನ ಬಗ್ಗೆ ನೂರು ಬಾರಿ ಯೋಚಿಸಿ ಖರ್ಚು ಮಾಡುವವರು ಪಂಚಾಯತ್ ದುಡ್ಡು ಅಥವಾ ಇನ್ಯಾವುದೋ ಸಾರ್ವಜನಿಕ ದುಡ್ಡಿನ ಪ್ರಶ್ನೆ ಬಂದರೆ ತುಂಬಾ ಧಾರಾಳವಾಗಿ ಖರ್ಚು ಮಾಡುವುದು ಸಾಮಾನ್ಯವಾಗಿದೆ. ಕೆರೆ ಸಂರಕ್ಷಣೆ ಮತ್ತು ನೀರು ಬಳಕೆಯಲ್ಲೂ ಇದೇ ರೀತಿಯ ಧೋರಣೆಯನ್ನು

ಕಾಣಬಹುದು. ಅದು ಎಲ್ಲರ ಆಸ್ತಿ ಆದುದರಿಂದ ಯಾರ ಆಸ್ತಿನೂ ಅಲ್ಲ. ಕೆರೆ ಪಾತ್ರ ಒತ್ತುವರಿ, ಕೆರೆ ಜಲಾನಯನ ಪ್ರದೇಶದ ಒತ್ತುವರಿ, ಕೆರೆ ನೀರು ಬರುವ ಕಾಲುವೆ ಹಾನಿಯಾಗುವಂತೆ ತಮ್ಮ ಹೊಲದ ಕೆಲಸ ಮಾಡುವುದು ಇತ್ಯಾದಿಗಳು ಈ ಸಾಲಿನಲ್ಲಿ ಬರುವಂತಹ ಸಂಗತಿಗಳು. ತಮ್ಮ ಕಣ್ಣೆದುರೆ ಕೆರೆ ಹೂಳು ತುಂಬಿ ನಿರುಪಯುಕ್ತ ಸ್ಥಿತಿ ತಲುಪುವಾಗಲು ಅದರ ರಿಪೇರಿಗಿಂತ ಈ ವರ್ಷದ ಕೃಷಿ ಮುಖ್ಯ ಎಂದು ತಿಳಿಯುವುದು ದೂರದೃಷ್ಟಿಯ ಕೊರತೆ ಹೊರತು ಬುದ್ಧಿವಂತಿಕೆಯಲ್ಲ. ಇದೊಂದು ರೀತಿ ಕೊಂಬೆಯಲ್ಲಿ ಕುಳಿತು ಬುಡ ಕಡಿದಂತೆ. ಕೆಲವೊಂದು ಕೆರೆಗಳ ವಿಚಾರದಲ್ಲಿ ಖಾಸಗಿ ಮತ್ತು ಸಾರ್ವಜನಿಕ ವಿಂಗಡಣೆಯ ಚರ್ಚೆ ಆಯಾಯ ಊರಿಗೆ ಸೀಮಿತಗೊಂಡರೆ ಸಾಲುವುದಿಲ್ಲ. ಉದಾಹರಣೆಗೆ ಪಾಪಿನಾಯಕನ ಹಳ್ಳಿಯ ಸೆಟ್ಟಿಕೆರೆ, ವಡ್ಡರಹಳ್ಳಿ ಕೆರೆ, ಕಮಲಾಪುರ ಕೆರೆ ಮುಂತಾದವು ಕೇವಲ ಆ ಊರಿನವರ ಅನಾಸಕ್ತಿಯಿಂದ ಈ ಸ್ಥಿತಿ ತಲುಪಿದೆ ಎನ್ನಲಾಗುವುದಿಲ್ಲ. ಅಲ್ಲಿನ ಕೆರೆಗಳ ಬಹುಪಾಲು ಸಮಸ್ಯೆಗೆ ಊರಿನಿಂದ ಹೊರಗೆ ನಡೆಯುವ ಗಣಿಗಾರಿಕೆ ಕಾರಣ. ಕೆರೆಯ ಜಲಾನಯನ ಪ್ರದೇಶವೆಲ್ಲ ಇಂದು ಗಣಿಗಾರಿಕೆಯ ಮುಖ್ಯ ಪ್ರದೇಶಗಳಾಗಿವೆ. ಗಣಿಗಾರಿಕೆಯಿಂದ ಹೊರಬೀಳುವ ಬಿಡಿ ಮಣ್ಣು ಮಳೆಗಾಲದಲ್ಲಿ ಕೆರೆಗೆ ಸೇರುತ್ತಿದೆ. ಕಮಲಾಪುರ ಕೆರೆಯ ಸರಿ ಅರ್ಧಕ್ಕಿಂತಲೂ ಹೆಚ್ಚು ಭಾಗ ಹೂಳು ತುಂಬಿದೆ. ಇದನ್ನು ತೆಗೆಯಲು ಕನಿಷ್ಠ ಕೆಲವು ಕೋಟಿ ರೂಪಾಯಿಗಳು ಹೆಚ್ಚು ಭಾಗ ಹೂಳು ತುಂಬಿದೆ. ಇದನ್ನು ತೆಗೆಯಲು ಕನಿಷ್ಠ ಕೆಲವು ಕೋಟಿ ರೂಪಾಯಿಗಳು ಬೇಕು. ಇದನ್ನು ಭರಿಸುವವರು ಯಾರು? ಅಥವಾ ಭರಿಸಬೇಕದವರು ಯಾರು? ಗಣಿಗಾರಿಕೆಯಿಂದ ನಾಶವಾಗುವ ಅರಣ್ಯ ಪ್ರದೇಶವನ್ನು ಸರಿಗಟ್ಟಿಸುವಷ್ಟು ಅರಣ್ಯ ಬೆಳಸಬೇಕು ಅಥವಾ ಅರಣ್ಯ ಬೆಳೆಸಲು ಒಂದು ನಿರ್ದಿಷ್ಟ ಕರ ಸಂದಾಯ ಮಾಡಬೇಕೆಂಬ ನಿಯಮ ಇದೆ. ಆದರೆ ಎಲ್ಲೂ ಗಣಿಗಾರಿಕೆಯಿಂದಲೇ ತುಂಬಿದ ಹೂಳನ್ನು ತೆಗೆಯಲು ಗಣಿಮಾಲಿಕರು ವಂತಿಗೆ ನೀಡಬೇಕೆಂದಿಲ್ಲ. ಆದುದರಿಂದ ಸಾರ್ವಜನಿಕ ಆಸ್ತಿಯ ದುರುಪಯೋಗ ನೇರ ಹಾನಿ ಮಾಡುವುದರ ಜೊತೆಗೆ ಪರೋಕ್ಷ ಹಾನಿಗೂ ಕಾರಣವಾಗುತ್ತದೆ. ನೇರ ಹಾನಿ ಮಾಡುವವರನ್ನು ಕಾನೂನು ಪ್ರಕಾರ ಜವಾಬ್ದಾರರನ್ನಾಗಿಸಬಹುದು. ಆದರೆ ಈ ರೀತಿ ಪರೋಕ್ಷವಾಗಿ ಸಮುದಾಯದ ಆಸ್ತಿಗೆ ಹಾನಿ ತರುವವರನ್ನು ಹೇಗೆ ಜವಾಬ್ದಾರರನ್ನಾಗಿಸುವುದು? ಇಷ್ಟೇ ಪ್ರಾಮುಖ್ಯವಾದ ವಿಚಾರವೆಂದರೆ ಕೆರೆ ಪಾತ್ರದ ಒತ್ತುವರಿ, ಜಲಾನಯನ ಪ್ರದೇಶದ ಒತ್ತುವರಿ ಅಥವಾ ದುರುಪಯೋಗ, ಕೆರೆ ಕಾಲುವೆಗಳಿಗೆ ಅಥವಾ ಏರಿಗೆ ಹಾನಿ ತರುವಂತಹ ಕೆಲಸ ಇತ್ಯಾದಿಗಳನ್ನು ಸರಿಪಡಿಸುವುದು ಹೇಗೆ? ಕಮಲಾಪುರ ಕೆರೆಯ ಹಲವಾರು ಎಕ್ರೆಗಳಷ್ಟು ಪಾತ್ರ ಒತ್ತುವರಿಯಾಗಿದೆ. ಇವೆಲ್ಲವನ್ನು ಯಾವ ರೀತಿಯಲ್ಲಿ ಪರಿಹರಿಸುವುದು. ಸುಮಾರು ಶೇಕಡಾ ೭೫ರಷ್ಟು ಮಂದಿ ಒತ್ತುವರಿ ತಡೆಯುವ ಅವಶ್ಯಕತೆ ಇದೆ ಎಂದು ಒಪ್ಪುತ್ತಾರೆ. ಆದರೆ ಅಷ್ಟೇ ಮಂದಿ ಒತ್ತುವರಿ ತಡೆಯುವುದು ಸರಕಾರದ ಕೆಲಸ ಎನ್ನುತ್ತಾರೆ. ಅಂದರೆ ನಮ್ಮ ಕಣ್ಣೆದುರೇ ನಮ್ಮವರೇ ಸಮುದಾಯದ ಸಂಪನ್ಮೂಲಗಳನ್ನು ತಮ್ಮ ಖಾಸಗಿ ಉಪಯೋಗಕ್ಕೆ ಬಳಸುವಾಗ ಸುಮ್ಮನಿದ್ದು ಅದನ್ನು ತೆರವು ಗೊಳಿಸುವ ಪ್ರಶ್ನೆ ಬಂದಾಗ ಸರಕಾರದ ಜವಾಬ್ದಾರಿ ಎಂದರೆ ಜೀರ್ಣಿಸಿಕೊಳ್ಳುವುದು ಕಷ್ಟ. ಸಹಭಾಗಿತ್ವ ಪರಿಣಾಮಕಾರಿಯಾಗಬೇಕಾದರೆ ಸರಕಾರದ ಜವಾಬ್ದಾರಿ ಎನ್ನುವಲ್ಲಿ ನಮ್ಮ ಜವಾಬ್ದಾರಿ ಎನ್ನುವುದು ಜಾಗ್ರತವಾಗಬೇಕು. ಇಲ್ಲೊಂದು ಬಹು ದೊಡ್ಡ ದ್ವಂದ್ವಂತೆ ಇದೆ. ಸಮಾನತೆ ಇಲ್ಲದ ಒಂದು ಸಮಾಜದಲ್ಲಿ ಸಮಾಜದ ಕೆಳವರ್ಗ ಸಮುದಾಯದ ಸಂಪನ್ಮೂಲವನ್ನು ಒತ್ತುವರಿ ಮಾಡಿದರೆ ತಪ್ಪೇನು ಎನ್ನುವ ಧೋರಣೆ ಇದೆ. ಆ ರೀತಿ ಮಾಡುವುದರಿಂದ ಕೆಳವರ್ಗದ ಎಲ್ಲ ಸಮಸ್ಯೆಗಳು ಪರಿಹಾರಗೊಂಡು ಸಮಾನತೆ ಸಾಧ್ಯವಾಗುವುದಾದರೆ ತಪ್ಪಿಲ್ಲ ಎನ್ನಬಹುದು. ಆದರೆ ಆ ರೀತಿ ಆಗುವುದಿಲ್ಲ. ಜತೆಗೆ ಒಂದು ವೇಳೆ ಇಂತ ಕ್ರಮಗಳಿಂದ ಹೆಚ್ಚು ಕಡಿಮೆ ಸಮಾನತೆಯುಳ್ಳ ಒಂದು ಸಮಾಜ ರೂಪುಗೊಂಡಿತು ಎಂದು ಊಹಿಸುವ ಅಲ್ಲಿ ಕೂಡ ಊರ ಎಲ್ಲರು ಬಳಸುವ ಹಲವಾರು ವ್ಯವಸ್ಥೆಗಳು ಬೇಕಲ್ಲ. ಆ ಸಂದರ್ಭದಲ್ಲಿ ಸಮುದಾಯದ ಸಂಪನ್ಮೂಲವನ್ನು ಖಾಸಗಿ ಆಸಕ್ತಿಗಾಗಿ ಬಳಸುವ ಈ ಅಭ್ಯಾಸವನ್ನು ಯಾವ ರೀತಿಯಲ್ಲಿ ಅರ್ಥೈಸಿಕೊಳ್ಳುವುದು.

**ಕೆಲವು ತಾತ್ಕಾಲಿಕ ತೀರ್ಮಾನಗಳು**

ಸ್ಥಳೀಯ ಸಂಪನ್ಮೂಲ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವ ನಮಗೇನು ಹೊಸತಲ್ಲ. ಅದು ನಮ್ಮ ಸಂಸ್ಕೃತಿಯ ಭಾಗವಾಗಿಯೇ ಇತ್ತು. ಆದುದರಿಂದ ಅದನ್ನು ಪುನರುಜ್ಜೀವನ ಗೊಳಿಸುವುದು ವಿಶೇಷ ಕಷ್ಟವಲ್ಲ ಎನ್ನುವ ವಾದ ಪ್ರಚಲಿತದಲ್ಲಿದೆ. ಹಿಂದಿನ ಪುಟಗಳಲ್ಲಿ ನಮ್ಮ ಸಂಸ್ಕೃತಿಯಲ್ಲಿ ಚಾರಿತ್ರಿಕವಾಗಿ ರೂಪುಗೊಂಡ ಸಹಭಾಗಿತ್ವದ ಗುಣ ಲಕ್ಷಣಗಳನ್ನು ನೋಡಿದ್ದೇವೆ. ಅಂದಿನ ಪ್ರಭುತ್ವ ಮತ್ತು ಅದು ತನ್ನ

ಜವಾಬ್ದಾರಿಯನ್ನು ವ್ಯಾಖ್ಯಾನಿಸಿಕೊಂಡ ಬಗೆ ಹೇಗೆ ಅಂದಿನ ಸಹಭಾಗಿತ್ವವನ್ನು ಪ್ರಭಾವಿಸಿದೆ ಎನ್ನುವುದರ ಕಿರು ಪರಿಚಯ ಆಗಿರಬಹುದು. ಪ್ರಭುತ್ವಕ್ಕೆ ಆದಾಯ ಹೆಚ್ಚಿಸಿಕೊಳ್ಳುವುದು ಮುಖ್ಯವಾಗಿತ್ತು. ಚಾರಿತ್ರಿಕವಾಗಿ ರೂಪುಗೊಂಡ ಅಂದಿನ ಸಾಮಾಜಿಕ ಸಂಬಂಧಗಳನ್ನು ಬಳಸಿಕೊಂಡು ಉತ್ಪಾದನೆ ಹೆಚ್ಚಿಸುವ ಕೆಲಸವನ್ನು ಅಂದಿನ ಪ್ರಭುತ್ವ ಮಾಡಿದೆ. ಕೆರೆಗಳ ನಿರ್ಮಾಣ, ಸಂರಕ್ಷಣೆ ಇತ್ಯಾದಿಗಳಿಗೆ ಒಂದು ಧಾರ್ಮಿಕ ಚಟುವಟಿಕೆಯ ರೂಪ ಕೊಟ್ಟದ್ದು ಕೂಡ ಅದರಲ್ಲಿ ಸೇರುತ್ತದೆ. ಜತೆಗೆ ಅಲ್ಲಿ ದಲಿತರ, ಕೆಳಜಾತಿ ಜನರ, ಮಹಿಳೆ ಮುಂತಾದವರ ಶೋಷಣೆ ಅಸಹಜವಾಗಿರಲಿಲ್ಲ. ಇವೆಲ್ಲ ಅಂದಿನ ಸಹಭಾಗಿತ್ವದ ರೂಪುರೇಷೆಗಳನ್ನು ಪ್ರಭಾವಿಸಿದೆ. ಸಣ್ಣ ಕೃಷಿಕರು, ದಲಿತರು, ಮಹಿಳೆಯರು, ಕೆರೆ ನೀರು ಬಳಸುವ ಅಗಸರು ಮತ್ತು ಇತರ ಸಾಂಪ್ರದಾಯಿಕ ಕಸುಬುದಾರರು ಅಂದಿನ ಸಹಭಾಗಿತ್ವದ ಭಾಗವಾಗಿರಲಿಲ್ಲ. ಅದೇ ಸಂದರ್ಭದಲ್ಲಿ ಅಂದಿನ ವ್ಯವಸ್ಥೆಯಲ್ಲಿನ ಕೆಲವೊಂದು ಒಳ್ಳೆಯ ಅಂಶಗಳನ್ನು ಅಲ್ಲಗೆಳೆಯಲಾಗುವುದಿಲ್ಲ. ದೊಡ್ಡ ಕೃಷಿಕರನ್ನು ಮತ್ತು ಕೆರೆ ನೀರಾವರಿಯಿಂದ ಪರೋಕ್ಷ ಲಾಭ ಗಳಸುತ್ತಿದ್ದ ಸಮಾಜದ ಇತರ ಅನುಕೂಲಸ್ಥರನ್ನು ಕೆರೆಗಳ ಸಂರಕ್ಷಣೆಯ ಹೊಣೆಗಾರರನ್ನಾಗಿಸಿದ್ದು ಅದರಲ್ಲಿ ಬಹು ಮುಖ್ಯವಾದ ಅಂಶ. ಇಂದಿನ ಬಳಕೆದಾರರಿಗೆ ಅಂದಿನ ವ್ಯವಸ್ಥೆ ಬಗ್ಗೆ ಒಂದು ಸಾಮಾನ್ಯ ಅರಿವಿದೆ. ಆದರೆ ಅಂದಿನ ವ್ಯವಸ್ಥೆಯ ನಿಖರವಾದ ಮಾಹಿತಿ ಇಲ್ಲ. ಆದಾಗ್ಯೂ ಸಹಭಾಗಿತ್ವವನ್ನು ಪುನರ್ ಜೀವಗೊಳಿಸುವಲ್ಲಿ ಜನ ಸಾಮಾನ್ಯರ ಕಲ್ಪನೆಯಲ್ಲಿರುವ ಹಿಂದಿನ ವ್ಯವಸ್ಥೆ ಚರಿತ್ರೆಯಲ್ಲಿ ಬರುವ ಹಿಂದಿನ ವ್ಯವಸ್ಥೆಗಿಂಗ ಗಟ್ಟಿ. ಯಾಕೆಂದರೆ ಚರಿತ್ರೆಯಲ್ಲಿನ ಹಿಂದಿನ ವ್ಯವಸ್ಥೆ ಬಗ್ಗೆ ಜನರಿಗೆ ಮನವರಿಗೆ ಮಾಡುವುದು ಕಷ್ಟ. ಆದರೆ ಅವರ ಕಲ್ಪನೆಯಲ್ಲಿರುವ ಸಹಭಾಗಿತ್ವಕ್ಕೆ ವಿಶೇಷ ಶ್ರಮ ಇಲ್ಲದೆ ಪುನರ್ ಜೀವ ನೀಡಬಹುದು. ಆದುದರಿಂದ ಹಿಂದೆ ಸಹಭಾಗಿತ್ವ ಇತ್ತು ಎನ್ನುವುದು ಇಂದಿನ ಸಹಭಾಗಿತ್ವದ ಸಾಧ್ಯತೆಯನ್ನು ಗಣನೀಯವಾಗಿ ಹೆಚ್ಚಿಸುತ್ತದೆ.

ಆಧುನಿಕ ಸಹಭಾಗಿತ್ವಕ್ಕೆ ಪೂರಕವಾಗುವ ಹಲವಾರು ವಿಚಾರಗಳ ಕುರಿತು ರೈತರು ಸಹಮತ ವ್ಯಕ್ತ ಪಡಿಸಿದ್ದಾರೆ. ನೀರು ಬಳಕೆದಾರರ ಸಂಘಟನೆ, ಸದಸ್ಯತ್ವ, ಸದಸ್ಯತನ ಮತ್ತು ಸದಸ್ಯರ ಸಭೆ ಇತ್ಯಾದಿಗಳು ಇರಬೇಕೆಂದು ರೈತರು ಬಯಸುತ್ತಾರೆ. ನೀರಿಗೆ ತೆರಿಗೆ ಕೊಡುವ ಕುರಿತು ರೈತರ ತಕರಾರು ಇಲ್ಲ. ತೆರಿಗೆ ದರ ನಿರ್ಧರಿಸುವಾಗ ಅವರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳುವ ಅಗತ್ಯವಿದೆ. ಇದನ್ನು ಅವರು ನೇರವಾಗಿ ಹೇಳಿಲ್ಲ. ತೆರಿಗೆ ದರ ತಮ್ಮ ಇತಿಮಿತಿಯೊಳಗೆ ಇರಬೇಕು ಎಂದು ಸೂಚಿಸುವುದರ ಮೂಲಕ ದರ ನಿರ್ಧಾರದಲ್ಲಿ ತಮ್ಮ ಸಹಭಾಗಿತ್ವವನ್ನು ಪರೋಕ್ಷವಾಗಿ ವ್ಯಕ್ತ ಪಡಿಸಿದ್ದಾರೆ. ಅದಕ್ಕಿಂತಲೂ ಮುಖ್ಯವಾಗಿ ತಮ್ಮ ಸಹಭಾಗಿತ್ವವನ್ನು ಪರೋಕ್ಷವಾಗಿ ವ್ಯಕ್ತಿ ಪಡಿಸಿದ್ದಾರೆ. ಅದಕ್ಕಿಂತಲೂ ಮುಖ್ಯವಾಗಿ ತೆರಿಗೆ ಸಂಗ್ರಹ ಕಟ್ಟುನಿಟ್ಟಾಗಿ ಆಗಬೇಕೆಂದು ಎಲ್ಲ ರೈತರು ಅಭಿಪ್ರಾಯ ಪಡುತ್ತಾರೆ. ಕೆರೆ, ಕಾಲುವೆ,ಇತ್ಯಾದಿಗಳ ಸಣ್ಣ ಮಟ್ಟಿನ ರಿಪೇರಿಗೆ ಶ್ರಮದಾನ ಮಾಡುವ ಬಗ್ಗೆ ರೈತರ ಆಕ್ಷೇಪವಿಲ್ಲ. ಹೂಳಿನ ಸಮಸ್ಯೆಯನ್ನು ಅವರಿಗೆ ಮನದಟ್ಟು ಮಾಡಿ ಸರಿಯಾದ ನಾಯಕತ್ವ ದೊರೆತರೆ ಹೂಳೆತ್ತಲು ಕೂಡ ಶ್ರಮದಾನ ಮಾಡಲು ಅವರು ಮುಂದೆ ಬರಬಹುದು. ಕೆಲವು ಹಳ್ಳಿಗಳಲ್ಲಿ ಹೂಳೆತ್ತಲು ಆಸಕ್ತಿ ತೋರಿಸದಿರಲು ಕಾರಣವನ್ನು ಮೇಲೆ ವಿವರಿಸಿದ್ದೇನೆ. ಅದರಲ್ಲಿ ಬಹು ಮುಖ್ಯವಾದುದು ಸಮಸ್ಯೆಯ ಅಗಾಧತೆ. ಕಮಲಾಪುರದ ಕೆರೆಯ ಹೂಳೆತ್ತಲು ಕೆಲವು ಕೋಟಿ ರೂಪಾಯಿಗಳ ವಿನಿಯೋಜನೆ ಬೇಕು. ರೈತರ ಶ್ರಮ ಬಳಸಿ ಹೂಳೆತ್ತಲು ಕನಿಷ್ಠ ಎರಡು ವರ್ಷಗಳು ಬೇಕು. ಹೀಗಿರುವಾಗ ರೈತರು ಹೂಳೆತ್ತಲು ಮುಂದೆ ಬರುವುದಾದರೂ ಹೇಗೆ? ಇನ್ನು ಒತ್ತುವರಿ ತಡೆಯಬೇಕೆಂದು ಹೆಚ್ಚಿನ ಎಲ್ಲ ರೈತರ ಆಶಯ. ಆದರೆ ಸ್ಥಳೀಯ ರಾಜಕಾರಣ ಅದಕ್ಕೆ ಅವಕಾಶ ಕೊಡುತ್ತಿಲ್ಲ ಎನ್ನುವುದು ಅವರ ಕೊರಗು. ಒತ್ತುವರಿಯನ್ನು ತಡೆಯುವ ಕಾನೂನು ತಂದು ಪರಿಣಾಮಕಾರಿಯಾಗಿ ಜಾರಿ ತಂದರೆ ಒತ್ತುವರಿ ಸಮಸ್ಯೆ ಪರಿಹಾರವಾಗಬಹುದು. ಇಲ್ಲಿ ಕೇವಲ ರೈತರ ಪಾತ್ರ ಮಾತ್ರ ಮುಖ್ಯವಲ್ಲ. ಕಾನೂನನ್ನು ಜಾರಿ ತರುವವರ ಪಾತ್ರ ಕೂಡ ಮುಖ್ಯ. ಜತೆಗೆ ಒತ್ತುವರಿ ಮಾಡಿದವರು ಸ್ಥಳೀಯ ಭೂರಹಿತರಾಗಿದ್ದರೆ ಅವರಿಗೆ ಬದಲಿ ವ್ಯವಸ್ಥೆ ಮಾಡುವ ಹೊಣೆಯೂ ಇದೆ. ಈ ಸಮಸ್ಯೆ ಸ್ಥಳೀಯ ಸಮುದಾಯಗಳ ಪ್ರಯತ್ನದಿಂದ ಮಾತ್ರ ಪರಿಹಾರ ಆಗಲಿಕ್ಕಿಲ್ಲ. ಇನ್ನು ನೀರು ಹಂಚಿಕೆ ನಿಯಮ ಪಾಲಿಸುವುದರ ಕುರಿತು ಯಾವ ರೈತನೂ ವಿರೋಧ ಸೂಚಿಸಿಲ್ಲ. ಬದಲಾಗಿ ನೀರು ಹಂಚಿಕೆ ಕುರಿತು ಕಟ್ಟುನಿಟ್ಟಾದ ನೀತಿ ನಿಯಮ ಬೇಕು ಮತ್ತು ಅದನ್ನು ಸಂಬಂಧಪಟ್ಟವರೆಲ್ಲ ಚಾಚೂ ತಪ್ಪದೆ ಅನುಸರಿಸಬೇಕೆಂದು ಬಹುತೇಕ ರೈತರು ಅಭಿಪ್ರಾಯ ಪಡುತ್ತಾರೆ. ಇಡೀ ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ನಾನು ಕಂಡು ಕೊಂಡ ಒಂದು ಬಹು ಮುಖ್ಯ ಅಂಶವೆಂದರೆ ರೈತರು ಎಲ್ಲೂ ಕೂಡ ಸರಕಾರ ತರುವ ಬದಲಾವಣೆಗಳಿಗೆ ತಾವು ವಿರುದ್ಧ ಎನ್ನುವ ನಿಲುವು ವ್ಯಕ್ತ ಪಡಿಸಿಲ್ಲ. ಬದಲಿಗೆ ಹಲವಾರು ವಿಚಾರಗಳ ಕುರಿತು ತಮ್ಮ ಸಹಮತ ಸೂಚಿಸಿದ್ದಾರೆ. ರೈತರನ್ನು ಉದ್ದಾರ ಮಾಡುವ ಕಾನೂನು ತರುವ ಮುನ್ನ ರೈತರನ್ನು

ಭೇಟಿಯಾಗಿ ಆ ಕುರಿತು ಅವರ ಅಭಿಪ್ರಾಯವೇನೆಂದು ವಿಚಾರಿಸುವ ಗೋಜಿಗೆ ಯಾರು ಹೋಗದಿರುವುದೇ ಬಹು ದೊಡ್ಡ ದುರಂತ. ತಳ ಮಟ್ಟದ ವಸ್ತವಿಕತೆಯನ್ನು ಅರ್ಥಮಾಡಿಕೊಳ್ಳದೆ ಕಾನೂನು ತರುವುದು. ನಂತರ ಅದನ್ನು ಬೇಕಾಬಿಟ್ಟಿಯಾಗಿ ಜಾರಿ ತರುವುದು ನಮ್ಮ ಆಧುನೀಕರಣದ ಬಹು ದೊಡ್ಡ ದುರಂತ.

ಇದೇ ಸಂದರ್ಭದಲ್ಲಿ ಸಹಭಾಗಿತ್ವ ಕಾರ್ಯರೂಪಕ್ಕೆ ಬರಬೇಕಾದ ಒಟ್ಟು ಪರಿಸರದ ಬಗ್ಗೆಯೂ ತಕ್ಕಮಟ್ಟಿನ ತಿಳುವಳಿಕೆ ಅಗತ್ಯ. ಅವುಗಳಲ್ಲಿ ಎರಡು ಮುಖ್ಯ ವಿಚಾರಗಳನ್ನು ಇಲ್ಲಿ ಪರಿಗಣಿಸಬೇಕಾಗಿದೆ. ಒಂದು, ಹೆಪ್ಪುಗಟ್ಟಿರುವ ಅಸಮಾನ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾನತೆಯ ಕನಸು. ನಮ್ಮ ಸಮಾಜದಲ್ಲಿ ಹಿಂದೆ ಮತ್ತು ಈಗ ಸಮಾನತೆ ಇಲ್ಲ. ಆದಾಗ್ಯೂ ಪ್ರತಿಯೊಂದು ಯೋಜನೆಯಲ್ಲೂ ಸಮಾನತೆಯ ಕುರಿತು ಧಾರಾಳಿಗಳಾಗುವುದರಲ್ಲಿ ನಾವು ಹಿಂದೆ ಬಿದ್ದಿಲ್ಲ. ಅಂದ ಮಾತ್ರಕ್ಕೆ ಸಮಾನತೆಯ ಅಂಶ ಇರಬಾರದೆಂದಲ್ಲ. ಆದರೆ ಸಮಾನತೆಯನ್ನು ಗಮನಕ್ಕೆ ತೆಗೆದುಕೊಳ್ಳದೆ ಸಮಾನತೆಯ ಬಗ್ಗೆ ಧಾರಾಳಿಗಳಾಗುವುದರಿಂದ ಸಮಾಜದ ಕೆಳ ವರ್ಗಕ್ಕೆ ವಿಶೇಷ ಉಪಯೋಗವಿಲ್ಲ. ಯಾಕೆಂದರೆ ಎಷ್ಟೋ ಬಾರಿ ಅಂತಹ ಯೋಜನೆಗಳು ಕೇವಲ ನಾಮಕಾವಸ್ಥೆ ರೂಪದಲ್ಲಿ ಜಾರಿ ಬರುತ್ತವೆ. ಅದರ ಮೂಲ ತತ್ತ್ವಕ್ಕೆ ಅನುಸಾರ ಜಾರಿ ತರುವ ಇಚ್ಛೆ ಯೋಜನೆಗಳನ್ನು ಕಾರ್ಯರೂಪಕ್ಕೆ ಇಳಿಸುವವರಿಗೆ ಇರುವುದಿಲ್ಲ. ಅದರ ನಿಜರೂಪದಲ್ಲಿ ಜಾರಿ ತರುವಂತೆ ಒತ್ತಡ ಏರುವಷ್ಟು ಅರಿವು ಅಥವಾ ಸಂಘಟನಾ ಶಕ್ತಿ ಅದರಿಂದ ಲಾಭ ಪಡೆಯಬೇಕಾದ ವರ್ಗಕ್ಕೆ ಇಲ್ಲ. ಐದು ದಶಕಗಳ ಆಧುನೀಕರಣದಿಂದ ನಮ್ಮ ಮೇಲ್ ವರ್ಗಕ್ಕೆ ಒಂದಂತು ಸ್ಪಷ್ಟವಾಗಿದೆ. ಅದೇನೆಂದರೆ ಎಷ್ಟೇ ಕ್ರಾಂತಿಕಾರಿ ಕಾನೂನು ಅಥವಾ ಯೋಜನೆಯನ್ನು ಯಾವುದೇ ಭಯವಿಲ್ಲದ ರೂಪಿಸಬಹುದು. ಯಾಕೆಂದರೆ ಅದು ಖಂಡಿತವಾಗಿಯೂ ಅದರ ಯಥಾ ರೂಪದಲ್ಲಿ ಜಾರಿ ಬರುವುದಿಲ್ಲ ಎನ್ನುವ ವಿಶ್ವಾಸ ಮೇಲ್ ವರ್ಗಕ್ಕೆ ಇದೆ. ಆದುದರಿಂದಲೇ ನಮ್ಮಲ್ಲಿ ಇಡೀ ಸಮಾಜವನ್ನು ಅಡಿಮೇಲು ಮಾಡುವ ಕಾನೂನು ಅಥವಾ ಯೋಜನೆ ತರುವಾಗಲೂ ಯಾರು ಕೂಡ ವಿರೋಧಿಸುವುದಿಲ್ಲ. ಹಾಗೆಂದು ಸಮಾನತೆಯ ಕನಸನ್ನು ಬಿಟ್ಟು ಬಿಡಬೇಕೆಂದು ವಾದಿಸುತ್ತಿಲ್ಲ. ಅದೊಂದು ಆದರ್ಶ ಎನ್ನುವುದನ್ನು ಗಮನದಲ್ಲಿರಿಸಿ ಕೊಳ್ಳುವುದು ಮುಖ್ಯ. ಅದು ಕಾರ್ಯ ರೂಪಕ್ಕೆ ಬರಬೇಕಾದ ಸಾಮಾಜಿಕ ಪರಿಸರದ ಕನಿಷ್ಠ ತಿಳುವಳಿಕೆ ಇದ್ದರೆ ನಾವು ಚರ್ಚಿಸುವ ವಿಚಾರಗಳು ಸ್ವಲ್ಪ ಮಟ್ಟಿಗೆ ರಿಲೆವೆಂಟ್ ಆಗಬಹುದು. ಅಂದರೆ ಸಾಮಾಜಿಕ ಹಾಗೂ ಆರ್ಥಿಕ ಏಣಿಶ್ರೇಣಿಗಳನ್ನು ಗಣನೆಗೆ ತೆಗೆದುಕೊಳ್ಳುವ ನಡೆಯುವ ಕಾರ್ಯಕ್ರಮಗಳು ಆದರ್ಶವಾಗಿರಬಹುದು. ಆದರೆ ಅವು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬರಬೇಕಾದರೆ ಸಾಮಾಜಿಕ ವಾಸ್ತವಿಕತೆಯನ್ನು ಗಣನೆಗೆ ತೆಗೆದುಕೊಳ್ಳುವುದು ಅಗತ್ಯ.

ಎರಡನೇ ವಿಚಾರ ಮೂಲೆ ಮೂಲೆಗೆ ಹಬ್ಬುತ್ತಿರುವ ಮಾರುಕಟ್ಟೆ ನೀತಿ. ಕೆರೆ ನೀರಾವರಿ ನಿರ್ವಹಣೆಗೆ ಜನರ ಸಹಭಾಗಿತ್ವ ಅಥವಾ ನಮ್ಮ ಸಾಂಪ್ರದಾಯಿಕ ಸಮಾಜದ ಸಮುದಾಯ ಪ್ರಜ್ಞೆಯನ್ನು ಪುನರುಜ್ಜಿವನಗೊಳಿಸುವ ಬಗ್ಗೆ ಚರ್ಚಿಸಿದ್ದೇವೆ. ಒಂದು ಕಾಲದಲ್ಲಿ ಮಾರುಕಟ್ಟೆ ನೀತಿಯ ಪಸರಿಸುವಿಕೆಗೆ ಸಮುದಾಯ ಪ್ರಜ್ಞೆ ಅಡ್ಡಿ ಎನ್ನುವ ಧೋರಣೆ ಇತ್ತು. ಆದರೆ ಇಂದು ಒಂದು ಕಡೆಯಿಂದ ಮುಕ್ತ ಮಾರುಕಟ್ಟೆಯ ಬಗ್ಗೆ ಭರದಿಂದ ಚರ್ಚೆ ನಡೆಯುವಾಗಲೇ ಸಮುದಾಯ ಪ್ರಜ್ಞೆಯನ್ನು ಜಾಗೃತಗೊಳಿಸುವ ಅಗತ್ಯದ ಚರ್ಚೆಯೂ ನಡೆಯುತ್ತಿದೆ. ಇದೊಂದು ರೀತಿಯ ದ್ವಂದ್ವತೆ ಅನ್ನುವುದಕ್ಕಿಂತ ವಾಸ್ತವಿಕತೆ ಎನ್ನುವುದು ಉತ್ತಮ. ಯಾಕೆಂದರೆ ಮಾರುಕಟ್ಟೆ ಸಮಾಜದ ಅಸಮಾನತೆಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅದು ಬಡವ ಶ್ರೀಮಂತ, ಮೇಲ್ ಕೆಳ ಜಾತಿ ಎಲ್ಲರನ್ನೂ ಒಂದೇ ಮಾನದಂಡದಿಂದ ಅಳೆಯುತ್ತದೆ. ಇದೊಂದು ರೀತಿ ಬಲವಾಗಿ ಬೀಸುವ ಬಿರುಗಾಳಿ ಇದ್ದಂತೆ. ಇದರಿಂದ ಬಹುಬೇಗ ಕುಸಿದು ಬೀಳುವುದು ಜೋಪಡಿ ಪಟ್ಟಿಗಳು ಮತ್ತು ಮುರುಕಲು ಗುಡಿಸಲುಗಳು. ಇಂತಹ ಸಂದರ್ಭದಲ್ಲಿ ಪ್ರಭುತ್ವ ಕೆಳವರ್ಗದ ಪರವಾಗಿ ಕಾರ್ಯ ನಿರ್ವಹಿಸಬೇಕಿತ್ತು. ಆದರೆ ಪ್ರಭುತ್ವ ತನ್ನ ಜವಾಬ್ದಾರಿಯಿಂದ ಹಿಂದಕ್ಕೆ ಸರಿಯುತ್ತಿದೆ. ಅಂದ ಮಾತ್ರಕ್ಕೆ ಅದು ಕೋಟಿಗಟ್ಟಲೆ ಜನರ ಬದುಕಿಗೆ ಕನಿಷ್ಠ ವ್ಯವಸ್ಥೆ ಮಾಡದಿರಲು ಸಾಧ್ಯವಿಲ್ಲ. ಆದುದರಿಂದ ಮಾರುಕಟ್ಟೆಯಲ್ಲಿ ಎಲ್ಲ ರೀತಿಯಿಂದಲೂ ಭಾಗವಹಿಸಲು ಸಾಧ್ಯವಿಲ್ಲದವರು ತಮ್ಮ ಸಮುದಾಯ ಪ್ರಜ್ಞೆಯ ಮೊರೆ ಹೋಗಬೇಕಾಗಿದೆ. ಆದರೆ ಇಲ್ಲೂ ಸಾಕಷ್ಟು ವಿರೋಧಾ ಭಾಸಗಳಿವೆ. ಹೊರ ಪರಿಸರವೆಲ್ಲ ಮಾರುಕಟ್ಟೆ ನೀತಿಗನುಗುಣವಾಗಿ ಕಾರ್ಯನಿರ್ವಹಿಸುವಾಗ ಅದರಿಂದ ಯಾರಿಗೂ ಸಂಪೂರ್ಣ ಹೊರಗಿರಲು ಸಾಧ್ಯವಿಲ್ಲ. ಅದರ ಆಕರ್ಷಣೆ ರೈತರನ್ನು ಮಾರುಕಟ್ಟೆಗಾಗಿ ಬೆಳೆಯುವುದಕ್ಕೆ ಪ್ರೇರೆಪಿಸುತ್ತದೆ. ಮಾರುಕಟ್ಟೆಗೆ ಬೆಳೆಯುವುದೆಂದರೆ ಲಾಭ ನಷ್ಟದ ಪ್ರಶ್ನೆ ಇದ್ದೇ ಇರುತ್ತದೆ. ಲಾಭ ನಷ್ಟದ ಪ್ರಶ್ನೆ ಬಂದಾಗ

ವೆಚ್ಚ ಕಡಿಮೆಗೊಳಿಸುವ ದಾರಿ ಹುಡುಕಬೇಕಾಗುತ್ತದೆ. ವೆಚ್ಚ ಹಲವು ರೀತಿಯಲ್ಲಿ ಕಡಿಮೆಗೊಳಿಸಬಹುದು. ಅವುಗಳಲ್ಲಿ ಸುಲಭದ ದಾರಿಯೆಂದರೆ ಸಮುದಾಯದ ಸಂಪನ್ಮೂಲವನ್ನು ಖಾಸಗಿ ಲಾಭಕ್ಕೆ ಬಳಸುವುದು. ಅದರಿಂದ ಲಾಭ ಖಾಸಗಿಯವರಿಗೆ ಆದರೆ ನಷ್ಟ ಸಮುದಾಯಕ್ಕೆ ವರ್ಗಾವಣೆ ಆಗುತ್ತದೆ. ಅದು ಸಮುದಾಯ ಪ್ರಜ್ಞೆಯಿಂದ ಸಂಪನ್ಮೂಲ ಬಳಸುವ ಕ್ರಮವನ್ನು ಖಂಡಿತವಾಗಿಯೂ ಪ್ರಭಾವಿಸುತ್ತದೆ.

(೪)

**ಪರಾಮರ್ಶನ ಬರಹಗಳು**

(ಈ ಅಧ್ಯಯನಕ್ಕೆ ಸಂಬಂಧಿಸಿದ ಕ್ಷೇತ್ರಕಾರ್ಯ ಮಾಡಿರುವ ಜನಾರ್ದನ, ಸಿದ್ದಪ್ಪ ಮತ್ತು ಝಾಕೀರ್ ಹುಸೇನ್ ಅವರಿಗೆ ಕೃತಜ್ಞತೆಗಳು)

೧. ಸಿ.ಎಸ್. *ವಾಸುದೇವನ್, ಹಂಪಿ ಪರಿಸರದ ಕೆರೆಗಳು,*ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೧.

೨. ಜೇಮ್ಸ ಎಸ್ ಕೊಲ್‌ಮನ್, *ಫೌಂಡೇಶನ್ ಆಫ್ ಸೋಶಿಯಲ್ ಥಿಯರಿ,*ಕೇಂಬ್ರಿಡ್ಜ್: ಹಾರ್‌ವರ್ಡ್ ಯುನಿರ್ವಸಿಟಿ ಪ್ರೆಸ್,೧೯೯೦.

೩. ರಾಬರ್ಟ್ ಪುನಮ್, *ಮೇಕಿಂಗ್ ಡೆಮಾಕ್ರಸಿ ವರ್ಕ್: ಸಿವಿಕ್ ಟ್ರೆಡಿಶನ್ಸ್ ಇನ್ ಇಟಲಿ,*ಪ್ರಿನ್ಸಟನ್: ಪ್ರಿನ್ಸಟನ್ ಯುನಿರ್ವಸಿಟಿ ಪ್ರೆಸ್, ೧೯೯೩.

೪. ಅಲೆಕ್ಸಿ ಡಿ ತೊವಿಲ್ಲೆ, *ಡೆಮಾಕ್ರಸಿ ಇನ್ ಅಮೇರಿಕ,*ನ್ಯೂಯಾರ್ಕ್: ಡೇಂಕರ್ ಬುಕ್ಸ್, ೧೯೬೯.

೫. ಜೋನ್ ಹೇರಿಸ್, *ಡಿಪೊಲಿಟಿಸೈಜಿಂಗ್ ಡೆವಲಪ್‌ಮೆಂಟ್: ದಿ ವರ್ಲ್ಡ್ ಬೇಂಕ್ ಆಂಡ್ ಸೋಶಿಯಲ್ ಕ್ಯಾಪಿಟಲ್,*ನ್ಯೂಡೆಲ್ಲಿ: ಲೆಫ್ಟ್ ವರ್ಡ್‌ಬುಕ್ಸ್, ೨೦೦೧.

೬. ಅಶಿಸ್ ನಂದಿ, ಕಲ್ಚರ್, ಸ್ಟೇಟ್ ಆಂಡ್ ರೀಡಿಸ್ಕವರಿ ಆಫ್ ಇಂಡಿಯನ್ ಪೊಲಿಟಿಕ್ಸ್," *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ,*ವಾ.೧೯, ೧೯೮೪, ಪು.೨೦೭೮-೮೩.

೭. ಮಾಧವ ಗಾಡ್ಗಿಲ ಅಂಡ್ ರಾಮಚಂದ್ರ ಗುಹ, *ಇಕಲಾಜಿ ಆಂಡ್ ಇಕ್ವಿಟಿ ದಿ ಯೂಸ್ ಆಂಡ್ ಎಬ್ಯೂಸ್ ಆಫ್ ನೇಚರ್ ಇನ್ನ ಕಾಂಟೆಂಪರರಿ ಇಂಡಿಯಾ,*ನ್ಯೂಡೆಲ್ಲಿ : ಪೆಂಗ್ವಿನ್ ಬುಕ್ಸ್, ೧೯೯೫.

೮. ಕರ್ನಾಟಕ ಸರಕಾರ, ದಿ ಕರ್ನಾಟಕ ಇರಿಗೇಶನ್ ಅಂಡ್ ಸರ್ಟೆಯಿನ್ ಅದರ್ ಲಾ (ಎಮೆಂಡ್‌ಮೆಂಟ್) ಬಿಲ್, ೨೦೦೦.

೯. *ಕೌಟಿಲ್ಯನ ಅರ್ಥಶಾಸ್ತ್ರ,*ಅನು: ಕೆ.ಕೃಷ್ಣಭಟ್ಟ, ಧಾರವಾಡ: ಮುನೋಹರ ಘಾಣೇಕರ, (ತೃತೀಯ ಮುದ್ರಣ) ೨೦೦೦.

೧೦. ಜಿ.ಎಸ್. ದೀಕ್ಷಿತ್ ಮತ್ತು ಇತರರು, *ಕರ್ನಾಟಕದಲ್ಲಿ ಕೆರೆ ನೀರಾವರಿ,*ಕನ್ನಡಕ್ಕೆ ಅನುವಾದ ನೀಲತ್ತ ಹಳ್ಳಿ ಕಸ್ತೂರಿ, ಹಂಪಿ: ಕನ್ನಡ ವಿಶ್ವ ವಿದ್ಯಾಲಯ ಪ್ರಸಾರಾಂಗ, ೨೦೦೦.

೧೧. ಮೈಸೂರು ಸರಕಾರ, ಮೈಸೂರು ಆಕ್ಟ್, ನಂಬರ್ ೧ ಆಫ್ ೧೯೧೧, ದಿ ಟೇಂಕ್ ಪಂಚಾಯಿತ್ ಆಕ್ಟ್, ೧೯೧೧.

೧೨. ಸಿ.ಟಿ.ಎಂ. ಕೊಟ್ರಯ್ಯ, *ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ,* ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೧.

**ಕ್ಷೇತ್ರ ಕಾರ್ಯದಿಂದ ಬಂದ ಅಂಕಿ ಅಂಶಗಳು**

| ವಿಷಯ | ಕಾಲ | ಊರವರ ಅಭಿಪ್ರಾಯ | ಕ.ಪುರ | ತಿ.ಪುರ | ಕ.ತಾವರೆಗೆರೆ | ಒಟ್ಟು (%) |
|---|---|---|---|---|---|---|
| ೧. ಸಹಭಾಗಿತ್ವ | ಹಿಂದೆ | ಇತ್ತು | ೧೯ | ೦೭ | ೧೧ | ೩೭ |
| | | ಇಲ್ಲ / ಗೊತ್ತಿಲ್ಲ | ೦೬ | ೦೫ | ೦೪ | ೧೫ |

| | | | | | | |
|---|---|---|---|---|---|---|
| | ಹಿಂದೆ | ಇತ್ತು | ೦೨ | ೦೧ | ೦೦ | ೦೩ |
| | | ಇಲ್ಲ / ಗೊತ್ತಿಲ್ಲ | ೨೩ | ೧೧ | ೧೫ | ೪೯ |
| | ಈಗ | ಇದೆ | ೦೬ | ೦೦ | ೦೦ | ೦೬ |
| | | ಇಲ್ಲ / ಗೊತ್ತಿಲ್ಲ | ೧೯ | ೦೨ | ೧೫ | ೪೬ |
| ೨. ಬಳಕೆದಾರರ ಸಂಘಟನೆ | ಮುಂದೆ | ಇರಬೇಕು | ೨೨ | ೧೦ | ೧೪ | ೪೬ |
| | | ಬೇಡ / ಗೊತ್ತಿಲ್ಲ | ೦೩ | ೦೨ | ೦೧ | ೦೬ |
| | ಹಿಂದೆ | ಊ / ಕೆ.ನಿ.ಬಳಸುವವರು[೧] | ೦೨ | ೦೧ | ೦೦ | ೦೩ |
| | | ಗೊತ್ತಿಲ್ಲ | ೨೩ | ೧೧ | ೧೫ | ೪೯ |
| | ಈಗ | ಊ / ಕೆ.ನಿ.ಬಳಸುವವರು | ೦೬ | ೦೦ | ೦೦ | ೦೬ |
| | | ಗೊತ್ತಿಲ್ಲ | ೧೯ | ೧೨ | ೧೫ | ೪೬ |
| | ಮುಂದೆ | ಊರವರು | ೦೬ | ೦೩ | ೦೫ | ೧೪ |
| ೩. ಸದಸ್ಯರು | | ಕೆ.ನಿ.ಬಳಕೆದಾರರು | ೧೫ | ೦೭ | ೦೮ | ೩೦ |
| | | ಗೊತ್ತಿಲ್ಲ | ೦೪ | ೦೨ | ೦೨ | ೦೮ |
| | ಹಿಂದೆ | ಇತ್ತು | ೦೨ | ೦೧ | ೦೦ | ೦೩ |
| | | ಇಲ್ಲ / ಗೊತ್ತಿಲ್ಲ | ೦೪ | ೦೨ | ೦೨ | ೦೮ |
| | ಈಗ | ಇದೆ | ೦೬ | ೦೦ | ೦೦ | ೦೬ |
| | | ಇಲ್ಲ / ಗೊತ್ತಿಲ್ಲ | ೧೯ | ೧೨ | ೧೫ | ೪೬ |
| ೪. ಸದಸ್ಯತನ | ಮುಂದೆ | ಇರಬೇಕು | ೨೧ | ೧೦ | ೧೩ | ೪೪ |
| | | ಬೇಡ / ಗೊತ್ತಿಲ್ಲ | ೦೪ | ೦೨ | ೦೨ | ೦೮ |
| | ಹಿಂದೆ | ನಡೆಯುತ್ತಿತ್ತು | ೦೦ | ೦೦ | ೦೦ | ೦೦ |
| | | ಇಲ್ಲ / ಗೊತ್ತಿಲ್ಲ | ೨೫ | ೧೨ | ೧೫ | ೫೨ |
| | ಈಗ | ನಡೆಯುತ್ತಿದೆ | ೦೪ | ೦೦ | ೦೦ | ೦೪ |
| | | ಇಲ್ಲ / ಗೊತ್ತಿಲ್ಲ | ೨೧ | ೧೨ | ೧೫ | ೪೮ |
| ೫. ಸದಸ್ಯರ ಸಭೆ | ಮುಂದೆ | ನಡೆಯಬೇಕು | ೨೧ | ೧೦ | ೧೩ | ೪೪ |
| | | ಬೇಡ / ಗೊತ್ತಿಲ್ಲ | ೦೪ | ೦೨ | ೦೨ | ೦೮ |
| | ಹಿಂದೆ | ಇತ್ತು | ೨೧ | ೧೧ | ೦೨ | ೩೪ |
| | | ಇಲ್ಲ / ಗೊತ್ತಿಲ್ಲ | ೦೪ | ೦೧ | ೧೩ | ೧೮ |
| | ಈಗ | ಇದೆ | ೨೫ | ೧೨ | ೦೨ | ೩೯ |
| ೬. ನೀರು ತೆರಿಗೆ | | ಇಲ್ಲ / ಗೊತ್ತಿಲ್ಲ | ೦೦ | ೦೦ | ೧೩ | ೧೩ |
| | ಮುಂದೆ | ಇರಬೇಕು | ೨೫ | ೧೨ | ೧೩ | ೫೦ |
| | | ಬೇಡ / ಗೊತ್ತಿಲ್ಲ | ೦೦ | ೦೦ | ೦೨ | ೦೨ |

| | | | | | | |
|---|---|---|---|---|---|---|
| | ಹಿಂದೆ | ಸರಿ ಇತ್ತು | ೨೧ | ೧೧ | ೦೨ | ೩೪ |
| | | ಜಾಸ್ತಿ ಇತ್ತು | ೦೦ | ೦೦ | ೦೦ | ೦೦ |
| | | ಕಡಿಮೆ ಇತ್ತು / ಗೊತ್ತಿಲ್ಲ | ೦೪ | ೦೧ | ೦೩ | ೧೮ |
| | ಈಗ | ಸರಿ ಇದೆ | ೦೪ | ೦೧ | ೦೩ | ೧೮ |
| | | ಜಾಸ್ತಿ ಇದೆ | ೨೧ | ೧೧ | ೦೦ | ೩೨ |
| | | ಕಡಿಮೆ ಇದೆ / ಗೊತ್ತಿಲ್ಲ | ೦೦ | ೦೦ | ೧೪ | ೧೪ |
| ೭. ತೆರಿಗೆ ದರ | ಮುಂದೆ | ಸರಿ ಇರಬೇಕು | ೨೫ | ೧೦ | ೧೪ | ೪೯ |
| | | ಗೊತ್ತಿಲ್ಲ | ೦೦ | ೦೨ | ೦೧ | ೦೩ |
| | ಹಿಂದೆ | ಕ್ರ.ಪ್ರ.ಆಗುತ್ತಿಲ್ಲ[೨] | ೦೭ | ೦೯ | ೦೧ | ೧೭ |
| | | ಇಲ್ಲ / ಗೊತ್ತಿಲ್ಲ | ೦೮ | ೦೩ | ೧೪ | ೩೫ |
| ೮. ತೆರಿಗೆ ಪಾವತಿ | ಈಗ | ಕ್ರ.ಪ್ರ.ಆಗುತ್ತಿದೆ | ೨೨ | ೦೯ | ೦೧ | ೩೨ |
| | | ಇಲ್ಲ / ಗೊತ್ತಿಲ್ಲ | ೦೩ | ೦೩ | ೧೪ | ೨೦ |
| | ಮುಂದೆ | ಆಗಬೇಕು | ೨೨ | ೦೯ | ೧೩ | ೪೪ |
| | | ಇಲ್ಲ / ಗೊತ್ತಿಲ್ಲ | ೦೩ | ೦೩ | ೦೨ | ೦೮ |
| | ಹಿಂದೆ | ಇತ್ತು | ೨೨ | ೦೦ | ೦೦ | ೨೨ |
| | | ಇಲ್ಲ / ಗೊತ್ತಿಲ್ಲ | ೦೩ | ೧೨ | ೧೫ | ೩೦ |
| | ಈಗ | ಇದೆ | ೨೫ | ೦೦ | ೦೦ | ೨೫ |
| | | ಇಲ್ಲ / ಗೊತ್ತಿಲ್ಲ | ೦೦ | ೧೨ | ೧೫ | ೨೭ |
| ೯. ಕೆರೆ ಪಾತ್ರ ಒತ್ತುವರಿ | ಮುಂದೆ | ಇರಬಹುದು | ೨೩ | ೦೦ | ೦೦ | ೨೩ |
| | | ಇಲ್ಲ / ಗೊತ್ತಿಲ್ಲ | ೦೨ | ೧೨ | ೧೫ | ೨೯ |
| | ಹಿಂದೆ | ಅಗತ್ಯವಿತ್ತು | ೨೩ | ೦೦ | ೦೦ | ೨೩ |
| | | ಇರಲಿಲ್ಲ / ಗೊತ್ತಿಲ್ಲ | ೦೨ | ೧೨ | ೧೫ | ೨೯ |
| | ಈಗ | ಅಗತ್ಯವಿದೆ | ೨೩ | ೦೦ | ೦೦ | ೨೩ |
| | | ಇಲ್ಲ / ಗೊತ್ತಿಲ್ಲ | ೦೨ | ೧೨ | ೧೫ | ೨೯ |
| ೧೦. ಒತ್ತುವರಿ ತಡೆಯುವುದು | ಮುಂದೆ | ಅಗತ್ಯವಿದೆ | ೨೩ | ೦೦ | ೦೦ | ೨೩ |
| | | ಇಲ್ಲ / ಗೊತ್ತಿಲ್ಲ | ೦೨ | ೧೨ | ೧೫ | ೨೯ |
| | ಹಿಂದೆ | ಸರಕಾರದ್ದು | ೨೪ | ೦೪ | ೦೭ | ೩೫ |
| | | ಬಳಸುವವರದ್ದು / ಗೊತ್ತಿಲ್ಲ | ೦೧ | ೦೮ | ೦೮ | ೧೭ |
| ೧೧. ಒತ್ತುವರಿ ತಡೆಯುವ | ಈಗ | ಸರಕಾರದ್ದು | ೨೪ | ೦೪ | ೦೭ | ೩೫ |
| | | ಬಳಸುವವರದ್ದು / ಗೊತ್ತಿಲ್ಲ | ೦೧ | ೦೮ | ೦೮ | ೧೭ |
| | ಮುಂದೆ | ಸರಕಾರದ್ದು ಬಳಸುವವರದ್ದು / | ೦೧ | ೦೮ | ೦೮ | ೧೭ |

| | | | | | | |
|---|---|---|---|---|---|---|
| ಹೊಣೆ | | ಗೊತ್ತಿಲ್ಲ | | | | |
| | ಹಿಂದೆ | ಇತ್ತು | ೨೩ | ೦೮ | ೧೧ | ೪೨ |
| | | ಇಲ್ಲ / ಗೊತ್ತಿಲ್ಲ | ೦೨ | ೦೪ | ೦೪ | ೧೦ |
| | ಈಗ | ಇದೆ | ೨೩ | ೦೮ | ೧೧ | ೪೨ |
| | | ಇಲ್ಲ / ಗೊತ್ತಿಲ್ಲ | ೦೨ | ೦೪ | ೦೪ | ೧೦ |
| ೧೨. ಕೆರೆ, ಕಾಲುವೆ | ಮುಂದೆ | ಇರಬೇಕು | ೨೩ | ೦೮ | ೧೧ | ೪೨ |
| ರಿಪೇರಿಗೆ ಶ್ರಮದಾನ | | ಬೇಡ / ಗೊತ್ತಿಲ್ಲ | ೦೨ | ೦೪ | ೦೪ | ೧೦ |
| | ಹಿಂದೆ | ಇತ್ತು | ೦೨ | ೦೧ | ೦೧ | ೦೪ |
| | | ಇಲ್ಲ / ಗೊತ್ತಿಲ್ಲ | ೨೩ | ೧೧ | ೧೪ | ೪೧ |
| | ಈಗ | ಇದೆ | ೦೨ | ೦೧ | ೦೧ | ೦೪ |
| | | ಇಲ್ಲ / ಗೊತ್ತಿಲ್ಲ | ೨೩ | ೧೧ | ೧೪ | ೪೮ |
| ೧೩. ಕೆರೆ ಕಾಲುವೆಗಳ | ಮುಂದೆ | ಇರಬೇಕು | ೦೮ | ೦೨ | ೦೧ | ೧೧ |
| ರಿಪೇರಿಗೆ ವಂತಿಗೆ | | ಬೇಡ / ಗೊತ್ತಿಲ್ಲ | ೧೭ | ೧೦ | ೧೪ | ೪೧ |
| | ಹಿಂದೆ | ಇತ್ತು | ೧೮ | ೦೪ | ೦೨ | ೨೪ |
| | | ಇಲ್ಲ / ಗೊತ್ತಿಲ್ಲ | ೦೭ | ೦೮ | ೧೩ | ೨೮ |
| | ಈಗ | ಇದೆ | ೨೪ | ೦೪ | ೦೨ | ೩೦ |
| | | ಇಲ್ಲ / ಗೊತ್ತಿಲ್ಲ | ೦೧ | ೦೮ | ೧೩ | ೨೨ |
| ೧೪. ಕೆರೆ ಹೂಳಿನ | ಮುಂದೆ | ಇರಬಹುದು | ೧೮ | ೦೪ | ೦೨ | ೨೪ |
| ಸಮಸ್ಯೆ | | ಇಲ್ಲ / ಗೊತ್ತಿಲ್ಲ | ೦೭ | ೦೮ | ೧೩ | ೨೮ |
| | ಹಿಂದೆ | ಇತ್ತು | ೦೪ | ೦೩ | ೦೧ | ೦೮ |
| | | ಇಲ್ಲ / ಗೊತ್ತಿಲ್ಲ | ೨೧ | ೦೯ | ೧೪ | ೪೪ |
| | ಈಗ | ಇದೆ | ೦೧ | ೦೦ | ೦೧ | ೦೨ |
| | | ಇಲ್ಲ / ಗೊತ್ತಿಲ್ಲ | ೨೪ | ೧೨ | ೧೪ | ೫೦ |
| ೧೫. ಕೆರೆ ಹೂಳೆತ್ತಲು | ಮುಂದೆ | ಇರಬೇಕು | ೧೭ | ೦೭ | ೦೪ | ೨೮ |
| ಶ್ರಮದಾನ | | ಬೇಡ / ಗೊತ್ತಿಲ್ಲ | ೦೮ | ೧೫ | ೧೧ | ೧೪ |
| | ಹಿಂದೆ | ಇತ್ತು | ೦೧ | ೦೦ | ೦೦ | ೦೨ |
| | | ಇಲ್ಲ / ಗೊತ್ತಿಲ್ಲ | ೨೪ | ೧೨ | ೧೪ | ೫೦ |
| | ಈಗ | ಇದೆ | ೦೧ | ೦೦ | ೦೧ | ೦೨ |
| ೧೬. ಕೆರೆ ಹೂಳೆತ್ತಲು | | ಇಲ್ಲ / ಗೊತ್ತಿಲ್ಲ | ೨೪ | ೧೨ | ೧೪ | ೫೦ |
| ವಂತಿಗೆ | ಮುಂದೆ | ಇರಬೇಕು | ೦೯ | ೦೩ | ೦೧ | ೧೩ |
| | | ಬೇಡ / ಗೊತ್ತಿಲ್ಲ | ೧೬ | ೦೯ | ೧೪ | ೩೯ |

| | | | | | | |
|---|---|---|---|---|---|---|
| ೧೭. ಕೆರೆ ಹೂಳೆತ್ತುವ ಹೊಣೆ | ಹಿಂದೆ | ಸರಕಾರದ್ದು | ೨೧ | ೦೯ | ೧೨ | ೪೨ |
| | | ಬಳಕೆದಾರರದ್ದು | ೦೪ | ೦೩ | ೦೩ | ೧೦ |
| | ಈಗ | ಸರಕಾರದ್ದು | ೨೧ | ೦೯ | ೧೨ | ೪೨ |
| | | ಬಳಕೆದಾರರದ್ದು | ೦೪ | ೦೩ | ೦೩ | ೧೦ |
| | ಮುಂದೆ | ಸರಕಾರದ್ದು | ೨೪ | ೧೦ | ೧೫ | ೪೯ |
| | | ಬಳಕೆದಾರರದ್ದು | ೦೧ | ೦೨ | ೦೦ | ೦೩ |
| ೧೮. ನೀರು ಹಂಚಿಕೆ ಕ್ರಮ | ಹಿಂದೆ | ಸರಿಯಾಗಿತ್ತು | ೨೩ | ೦೮ | ೧೨ | ೪೩ |
| | | ಇಲ್ಲ / ಗೊತ್ತಿಲ್ಲ | ೦೨ | ೦೪ | ೦೩ | ೦೯ |
| | ಈಗ | ಸರಿಯಾಗಿದೆ | ೧೯ | ೦೮ | ೧೨ | ೩೯ |
| | | ಇಲ್ಲ / ಗೊತ್ತಿಲ್ಲ | ೦೬ | ೦೪ | ೦೩ | ೧೩ |
| | ಮುಂದೆ | ಸರಿ ಇರಬೇಕು | ೨೫ | ೧೨ | ೧೫ | ೫೨ |
| | | ಬೇಡ / ಗೊತ್ತಿಲ್ಲ | ೦೦ | ೦೦ | ೦೦ | ೦೦ |
| ೧೯. ನೀರು ಹಂಚಿಕೆ ಕುರಿತ ಜಗಳ | ಹಿಂದೆ | ಇತ್ತು | ೧೮ | ೦೧ | ೦೨ | ೨೧ |
| | | ಇಲ್ಲ / ಗೊತ್ತಿಲ್ಲ | ೦೭ | ೧೧ | ೧೩ | ೩೧ |
| | ಈಗ | ಇದೆ | ೧೮ | ೦೨ | ೦೨ | ೨೨ |
| | | ಇಲ್ಲ / ಗೊತ್ತಿಲ್ಲ | ೦೭ | ೧೦ | ೧೩ | ೩೦ |
| | ಮುಂದೆ | ಇರಬಹುದು | ೧೯ | ೦೯ | ೧೦ | ೩೮ |
| | | ಇಲ್ಲ / ಗೊತ್ತಿಲ್ಲ | ೦೬ | ೦೩ | ೦೫ | ೧೪ |
| ೨೦. ನೀರು ಹಂಚಿಕೆ ನಿಯಮ ಪಾಲನೆ | ಹಿಂದೆ | ಆಗುತ್ತಿತ್ತು | ೨೩ | ೧೦ | ೧೨ | ೪೫ |
| | | ಇಲ್ಲ / ಗೊತ್ತಿಲ್ಲ | ೦೨ | ೦೨ | ೦೩ | ೦೭ |
| | ಈಗ | ಆಗುತ್ತಿದೆ | ೨೩ | ೦೭ | ೦೯ | ೩೯ |
| | | ಇಲ್ಲ / ಗೊತ್ತಿಲ್ಲ | ೦೨ | ೦೫ | ೦೬ | ೦೩ |
| | ಮುಂದೆ | ಆಗಬಹುದು | ೨೩ | ೦೯ | ೧೨ | ೪೪ |
| | | ಇಲ್ಲ / ಗೊತ್ತಿಲ್ಲ | ೦೨ | ೦೩ | ೦೩ | ೦೮ |

ಮೂಲ: ಕ್ಷೇತ್ರ ಕಾರ್ಯದಿಂದ ದೊರೆತ ಅಂಕಿ ಅಂಶಗಳು.

ಕ.ಪುರ – ಕಮಲಾಪುರ, ತಿ.ಪುರ – ತಿಮ್ಮಲಾಪುರ, ಕ.ತಾವರೆಗೆರೆ – ಕಲ್‌ತಾವರೆಗೆರೆ

೧. ಊ/ಕೆ.ನಿ.ಬಳಸುವವರು-ಊರವರು ಅಥವಾ ಕೆರೆ ನೀರು ಬಳಸುವವರು,

೨.ಕ್ರ.ಪ್ರ.ಆಗುತ್ತಿತ್ತು -ಕ್ರಮ ಪ್ರಕಾರ ಆಗುತ್ತಿತ್ತು.

# ಕೆರೆ ನೀರಾವರಿ ವ್ಯವಸ್ಥೆ : ಒಂದು ಚಾರಿತ್ರಿಕ ವಿಶ್ಲೇಷಣೆ

## (೧)

ಕರ್ನಾಟಕದಲ್ಲಿನ ಚಾರಿತ್ರಿಕ ಕಾಲದ ಕೆರೆ ನೀರಾವರಿ ವ್ಯವಸ್ಥೆಯ ಕುರಿತು ಸಾಕಷ್ಟು ವಿವರಗಳು ಹಾಗೂ ಚರ್ಚೆಗಳು ಈಗಾಗಲೇ ಬಂದಿವೆ. ಜಿ.ಎಸ್. ದೀಕ್ಷಿತ, ಜಿ.ಆರ್. ಕುಪ್ಪುಸ್ವಾಮಿ ಮತ್ತು ಎಸ್.ಕೆ. ಮೋಹನ್ ಅವರ ಟ್ಯಾಂಕ್ ಇರಿಗೇಶನ್ ಇನ್ ಕರ್ನಾಟಕ ಗ್ರಂಥವು ಈ ನಿಟ್ಟಿನಲ್ಲಿ ಒಂದು ಸಮಗ್ರವಾದ ಅಧ್ಯಯನವಾಗಿದೆ[1]**.**ಜೊತೆಗೆ ಸಿ.ಟಿ.ಎಂ. ಕೊಟ್ರಯ್ಯ.[2]ಜಿ.ಆರ್. ಕುಪ್ಪುಸ್ವಾಮಿ, ಎಂ.ಎಲ್. ಸರಸ್ವತಿ ಮುಂತಾದವರೂ ಈ ಕುರಿತು ಸಾಕಷ್ಟು ಚರ್ಚಿಸಿದ್ದಾರೆ. ಕುಪ್ಪುಸ್ವಾಮಿಯವರು ತಮ್ಮ ಅನೇಕ ಬಿಡಿ ಲೇಖನಗಳಲ್ಲಿ ನೀರಾವರಿ ವಿಧಾನಗಳು, ತಂತ್ರಜ್ಞಾನ, ಆಶ್ರಯದಾತರು, ನಿರ್ವಹಣೆ, ಆಕರಗಳು ಮುಂತಾದ ವಿಷಯಗಳನ್ನು ಪರಿಶೀಲಿಸಿದ್ದಾರೆ**.**[3]ಈ ಎಲ್ಲ ಅಧ್ಯಯನಗಳಲ್ಲಿ ರಾಜಮನೆತನಗಳ ಚೌಕಟ್ಟು ಪ್ರಧಾನವಾಗಿ ಕಾಣಿಸಿಕೊಂಡರೂ ಕೆರೆ ನೀರಾವರಿಗೂ ಪ್ರಭುತ್ವಕ್ಕೂ ಇದ್ದ ಸಂಬಂಧ ವಿಶೇಷ ಚರ್ಚೆಗೊಳಗಾಗಿಲ್ಲ. ಅಂದಿನ ರಾಜ್ಯಗಳಿಗೆ ಒಂದು ನೀರಾವರಿ ನೀತಿ ಅಥವಾ ಕಾರ್ಯಕ್ರಮ ಇದ್ದಿದ್ದರೆ ಅದರ ಸ್ವರೂಪ ಹೇಗಿತ್ತು ಹಾಗೂ ಅದರ ನಿರೀಕ್ಷೆಗಳು ಏನಿದ್ದವು? ಆಧುನಿಕ ಪ್ರಭುತ್ವಕ್ಕೆ ಅವು ಎಷ್ಟರಮಟ್ಟಿಗೆ ಪ್ರಾಯೋಗಿಕವಾಗಬಲ್ಲವು ಎಂಬುದು ಇದರ ಸ್ವರೂಪ ಮತ್ತು ನಿರೀಕ್ಷೆಗಳು ಎಲ್ಲೆಲ್ಲಿ ಒಂದಾಗುತ್ತವೆ ಹಾಗೂ ಬೇರೆಯಾಗುತ್ತವೆ ಎಂಬುದನ್ನು ಅವಲಂಬಿಸಿದೆ.

**ಆಧುನಿಕ ಪ್ರಯೋಗಗಳು ಮತ್ತು ನಿರೀಕ್ಷೆಗಳು :**

ಟ್ಯಾಂಕ್ ಇರಿಗೇಶನ್ ಇನ್ ಕರ್ನಾಟಕ ಗ್ರಂಥದಲ್ಲಿ ಹಿಂದಿನ ಮತ್ತು ಇಂದಿನ ವ್ಯವಸ್ಥೆಗಳಲ್ಲಿ ಆಗಿರಬಹುದಾದ ವ್ಯತ್ಯಾಸಗಳ ಕುರಿತು ಕೆಲ ಮಹತ್ವಪೂರ್ಣ ಅಂಶಗಳನ್ನು ಗುರುತಿಸಲಾಗಿದೆ ಹಾಗೂ ಈ ನಿಟ್ಟಿನಲ್ಲಿ ಕೆಲ ಸೂಚನೆಗಳನ್ನೂ ಅಲ್ಲಿ ಕಾಣಬಹುದು. ಮೊದಲು ಹಳ್ಳಿ ಸಮಾಜಗಳು ಸಾಮುದಾಯಿಕ ಗುಂಪುಗಳಾಗಿದ್ದು ಕೆರೆ ಕೆಳಗಿನ ನೀರಾವರಿ ಭೂಮಿಯಲ್ಲಿ ಅವರಲ್ಲಿ ಹಲವರಿಗೆ ಪಾಲು ಇತ್ತು. ಈ ಕೆರೆಗಳಲ್ಲಿ ಸುಸ್ಥಿತಿಯಲ್ಲಿ ಇಡುವುದು ಅವರಿಗೆ ಒಂದು ಖಾಸಗಿ ಆಸ್ತಿಯಾಗಿತ್ತು. ಆದರೆ ಕಾಲಕ್ರಮೇಣ ಈ ಕೆರೆಗಳ ಒಡ್ಡುಗಳು ಒಡೆದವು; ರಾಜರು ಅತಿಯಾದ ತೆರಿಗೆ ಹೇರಿದರು ಹಾಗೂ ಹಳ್ಳಿ ಸಮುದಾಯಗಳು ವಲಸೆ ಹೋದವು. ಬಹುಶಃ ಇವು ಕೆರೆ ನೀರಾವರಿ ಅವನತಿ ಹೊಂದಲು ಕಾರಣವಾದವು**.**[4]ಯಾವ ಕಾಲದವರೆಗೆ ಈ ಮೇಲಿನ ವ್ಯವಸ್ಥೆ ಇತ್ತು, ಎಂದು ಹಳ್ಳಿ ಸಮುದಾಯಗಳು ಅದನ್ನು ಉಪೇಕ್ಷಿಸತೊಡಗಿದವು, ಹಾಗೂ ಅದಕ್ಕೆ ಈ ಮೇಲೆ ವಿವರಿಸಿದ ಕಾರಣ ಸರಿಯೆ? ಎಂಬೆಲ್ಲ ಪ್ರಶ್ನೆಗಳು ಎದುರಾಗುತ್ತವೆ. ಬಹುಶಃ ಇವೆಲ್ಲ ಬ್ರಿಟಿಷ್ ರಾಜ್ಯ ಸ್ಥಾಪನೆಯಾಗುವ ಸ್ವಲ್ಪ ಪೂರ್ವದಲ್ಲಿ ನಡೆದಂತೆ ಗ್ರಹಿಸಲಾಗಿದೆ. ಇನ್ನೊಂದೆಡೆ ಸ್ವಲ್ಪ ಸ್ಪಷ್ಟವಾಗಿ ಈ ಕುರಿತು ತಿಳಿಸಲಾಗಿದೆ. ಸರ್ಕಾರವು ಭೂ ಕಂದಾಯದ ನೇರ ವಸೂಲಿ ಮಾಡಲು ತೊಡಗಿದನಂತರ ಹಳ್ಳಿಯ ಪಟೇಲರು, ಶಾನುಭೋಗರ ಇನಾಂ ಭೂಮಿಯನ್ನು ರದ್ದು ಮಾಡಲಾಯಿತು. ಈ ಕೆಲಸ ದಿವಾನ್ ಪೂರ್ಣಯ್ಯನವರ ಕಾಲಕ್ಕೇ ನಡೆದಿತ್ತು. ಇದು ಹಳೇ ದಬ್ಬಾಳಿಕೆಗಳನ್ನು ನಿಲ್ಲಿಸಿದರೂ ಅದರ ಜೊತೆಗೇ ಕೆರೆಗಳ ನಿರ್ವಹಣೆಯ ಸ್ಥಾನಿಕ ವ್ಯವಸ್ಥೆಯೂ ನಿರ್ಮೂಲವಾಯಿತು. ಬ್ರಿಟಿಷರಿಗೆ ಈ ವ್ಯವಸ್ಥೆಗೆ ಪ್ರತಿಯಾದ ಸಮರ್ಥ ವ್ಯವಸ್ಥೆಯನ್ನು ಬೆಳೆಸಲಾಗಲಿಲ್ಲ. ಬ್ರಿಟಿಷರಿಗೆ ಈ ವ್ಯವಸ್ಥೆಗೆ ಪ್ರತಿಯಾದ ಸಮರ್ಥ ವ್ಯವಸ್ಥೆಯನ್ನು ಬೆಳೆಸಲಾಗಲಿಲ್ಲ. ಇಂದಿನ ಹಳ್ಳಿ ಸಮುದಾಯಗಳಿಗೆ ಕೆರೆಗಳು ತಮಗೆ ಸೇರಿದ ಸಂಪನ್ಮೂಲವೆಂಬ ಭಾವನೆ ಹೊರಟುಹೋಗಿದೆ. ಅದು ಸರ್ಕಾರಕ್ಕೆ ಸೇರಿದ್ದು ಎಂಬ ಭಾವನೆ ಬಂದಿದೆ[5]ಎಂದು ಇಲ್ಲಿ ಅಭಿಪ್ರಾಯ ಪಡಲಾಗಿದೆಯಲ್ಲದೇ ಬಿತ್ತುವಟ್ಟ, ದಶವಂದ, ಕಟ್ಟುಕೊಡಿಗೆ ಮುಂತಾದ ಹಳೆ ಪದ್ಧತಿಗಳಲ್ಲಿ ಖಾಸಗಿ ಆಸಕ್ತಿ ಹಾಗೂ ಜವಾಬ್ದಾರಿಗಳಿದ್ದು ಅಂಥ ವಿಧಾನಗಳನ್ನು ಪರಿಶೀಲಿಸುವ ಕುರಿತು ಸೂಚನೆಯೂ ಇದೆ ಮತ್ತು ಕೆರೆ ಪಂಚಾಯತಿ ಕೂಡ ಸಾಮುದಾಯಿಕ ನಿರ್ವಹಣೆಗೆ ಉಜಪಾಯವಾಗಬಲ್ಲದು ಎಂಬ ಸಲಹೆಯೂ ಇದೆ.

ಸರ್ಕಾರ ನೇರವಾಗಿ ರೈತರ ಜೊತೆ ಕಂದಾಯ ಹೊಂದಾಣಿಕೆ ಎಂಬ ಸಲಹೆಯೂ ಇದೆ. ವ್ಯವಸ್ಥೆ ಕೆರೆಯನ್ನು ಪೋಷಿಸಿದ ಸಾಂಪ್ರದಾಯಿಕ ಸ್ಥಾನಿಕ ವ್ಯವಸ್ಥೆಯನ್ನು ಪಲ್ಲಟಮಾಡಿತು ಎಂಬ ವಾದವನ್ನು ಇಲ್ಲಿ ಸಕಾರಣವಾಗಿ ಸಮರ್ಥಿಸಲಾಗಿದೆ. ಆದರೆ ಈ ಸ್ಥಾನಿಕ ವ್ಯವಸ್ಥೆ ಮೇಲೆ ಹೇಳಿದಂತೆ ಚಾರಿತ್ರಿಕವಾಗಿ ಖಾಸಗಿ ಹಿತಾಸಕ್ತಿಯಿಂದ ಉಳಿದುಕೊಂಡು ಬಂದಿದ್ದಲ್ಲಿ ಇಂದು ಬದಲಾದ ಸಮಾಜ ಕಲ್ಪನೆಯಲ್ಲಿ ಸಾಮುದಾಯಿಕ ನಿರ್ವಹಣೆಗಾಗಿ ನಾವು ಅದರಿಂದ ಏನನ್ನು ಅಳವಡಿಸಿಕೊಳ್ಳಬಹುದು ಎಂಬ ಪ್ರಶ್ನೆ ಉಳಿಯುತ್ತದೆ. ಅಥವಾ ಕೆರೆಯ ಸಂಬಂಧಿಸಿ ಇಂದಿನ ರಾಜ್ಯದ ಕಾರ್ಯಕ್ರಮ ಇಂಥ ಹಿತಾಸಕ್ತಿಯ ವರ್ಗಗಳ ಮೂಲಕವೇ ಆದಲ್ಲಿ ಮಾತ್ರ ವ್ಯವಸ್ಥೆ ಹಳೆಯ ರೀತಿ ನಡೆಯಲು ಸಾಧ್ಯ ಎಂದಾಗುವುದು. ಈ ಸಮಸ್ಯೆಯನ್ನು ಬಗೆಹರಿಸುವುದು ಈ ಲೇಖನದ ಉದ್ದೇಶವಲ್ಲ. ಕೆರೆ ನೀರಾವರಿ ನಡೆದುಕೊಂಡು ಬಂದ ಹಿಂದಿನ ಪ್ರಭುತ್ವಕ್ಕೂ ಇಂದಿನದಕ್ಕೂ ಇರುವ ವ್ಯತ್ಯಾಸಗಳನ್ನು ಗ್ರಹಿಸುವುದು ಅಗತ್ಯವಾಗಿದೆ. ಕಲ್ಪಿಸಿಕೊಳ್ಳುತ್ತಿದ್ದೇವೆ. ಅಂದರೆ ಒಂದು ಕೇಂದ್ರಿಕೃತ ಪ್ರಭುತ್ವ ಕಾಲಕ್ರಮದಲ್ಲಿ ಬೆಳಸಿಕೊಂಡ ಒಂದು ತಂತ್ರ ಇದಾಗಿದೆ. ಅದು ಸ್ಥಳೀಯ ಘಟಕಗಳಿಗೆ ಕಾರ್ಯಕ್ರಮಗಳನ್ನು ನೀಡುತ್ತದೆ. ಕೆರೆ ನೀರಾವರಿ ಚಾರಿತ್ರಿಕವಾಗಿ ಇಂಥ ಬಾಹ್ಯ ನಿರ್ದೇಶನ ವ್ಯವಸ್ಥೆಯನ್ನು ಅವಲಂಬಿಸಿ ಬೆಳೆದುಕೊಂಡು ಬಂದದ್ದಲ್ಲ. ಕೆರೆಗಳನ್ನು ಉಳಿಸುವಲ್ಲಿ ನಮ್ಮ ಆಧುನಿಕ ತಾತ್ವಿಕತೆ ಕೂಡ ಬೇರೆಯೇ ಆಗಿದೆ; ಅಂತರ್ಜಲ ಅಭಿವೃದ್ಧಿ, ಪರಿಸರ ವಾದ ಹಾಗೂ ಸಣ್ಣ ನೀರಾವರಿಯ ದೃಷ್ಟಿಯಿಂದ ನಾವು ಇಂದು ಕೆರೆಗಳ ಮಹತ್ವವನ್ನು ಅರಿಯುತ್ತಿದ್ದೇವೆ. ನೀರಾವರಿಗೆ ಇಂದು ಬೃಹತ್ ಯೋಜನೆಗಳಿವೆ, ಕೊಳವೆ ಬಾವಿಗಳಿವೆ. ಚಾರಿತ್ರಿಕ ಕಾಲದಲ್ಲಿ ಕೆರೆನೀರಾವರಿ ಸಣ್ಣ ನೀರಾವರಿಯಾಗಿರಲಿಲ್ಲ. ಒಂದು ಹಳ್ಳಿಗೆ ಮನುಷ್ಯರಿಗೆ ಹಾಗೂ ಪ್ರಾಣಿಗಳಿಗೆ ಕುಡಿಯುವುದಕ್ಕೆ ಹಲವು ಹಳ್ಳಿಗಳಲ್ಲಿ ಅವೇ ಆಧಾರಗಳಾಗಿದ್ದವು. ಹಾಗೂ ಕರ್ನಾಟಕದ ಅರೆಮಲೆನಾಡು ಮತ್ತು ಒಳನಾಡಿನಲ್ಲಿ (ಬಹುಶಃ ನದೀತೀರಗಳನ್ನು ಬಿಟ್ಟು) ಕೆರೆಗಳಿಲ್ಲದೇ ವಸತಿಗಳೂ ಹುಟ್ಟಿಕೊಳ್ಳಲಿಕ್ಕೆ ಸಾಧ್ಯವಿರಲಿಲ್ಲ.

ಬ್ರಿಟಿಷರು ಭಾರತದಲ್ಲಿ ತಮ್ಮ ಸರ್ಕಾರವನ್ನು ಸ್ಥಾಪಿಸಿದಾಗ ಯುರೋಪಿನ ಸ್ಟೇಟ್ ಎಂಬರ್ಥದ ಪ್ರಭುತ್ವವನ್ನು ಇಲ್ಲಿ ನೆಲೆಗೊಳಿಸಲು ಉದ್ಯುಕ್ತರಾದರು. ಡೇವಿಡ್ ಲಡ್ಡನ್ ಅವರ ಹೇಳಿಕೆಯನ್ನು ಉದ್ಧರಿಸುವುದಾದರೆ, ಕಂಪನಿ ಮತ್ತು ಕೃಷಿಕರ ಮಧ್ಯದ ಮಧ್ಯವರ್ತಿಗಳನ್ನು ತೆಗೆದುಹಾಕಿ ತನ್ನ ಪ್ರಭುತ್ವವನ್ನು ಹೆಚ್ಚಿಸಿಗೊಳ್ಳವುದಕ್ಕೆ ಇಲ್ಲಿನ ಮಾಹಿತಿಯನ್ನು ಕೂಲಂಕಷವಾಗಿ ಸಂಗ್ರಹಿಸುವುದು ಅವರ ಕಾರ್ಯವಾಯಿತು. ಇಲ್ಲಿನ ಕೃಷಿ ಸಂಪತ್ತನ್ನು ನೇರವಾಗಿ ವಸೂಲಿ ಮಾಡುವ ಪ್ರಯತ್ನದಲ್ಲಿ ಅವರ ಭೂ ಹಿಡುವಳಿ ನೀತಿಗಳು ರೂಪಿತವಾದುವು. ಕೃಷಿಯನ್ನು ಅವರು ಒಂದು ಉದ್ಯಮ ಎಂದು ಪರಿಗಣಿಸಿ ಅದರ ವೆಚ್ಚ ಹಾಗೂ ಲಾಭವನ್ನು ಅವರು ಲೆಕ್ಕ ಹಾಕಿದರು. ಕಂಪೆನಿಯು ತಾನೊಬ್ಬ ಜಮೀನ್ದಾರನಾಗಿ ಕೃಷಿಕರ ತೆರಿಗೆಯನ್ನು ಬಾಡಿಗೆ ಎಂದು ಪರಿಭಾವಿಸಿತು. ಲಾರ್ಡ್ ಮೇಯೋ ೧೮೬೯ರಲ್ಲಿ ಈ ಕಾರಣಕ್ಕಾಗಿ ಅವರು ವ್ಯವಸಾಯ ವಿಭಾಗವನ್ನು ಪ್ರಾರಂಭಿಸಿದರು. ಆಗ ಅವರು ನೀಡಿದ ಹೇಳಿಕೆ ಹೀಗಿದೆ, ಇಂಗ್ಲೆಂಡಿನಲ್ಲಿ ಒಬ್ಬ ಒಳ್ಳೇ ಜಮೀನ್ದಾರನ ಕರ್ತವ್ಯಗಳನ್ನು ಭಾರತದಲ್ಲಿ ಬ್ರಿಟಿಶ್ ಸರ್ಕಾರ ನಡೆಸಬೇಕಾಗಿದೆ. ಇದಕ್ಕಾಗಿ ಸರ್ಕಾರ ದೊಡ್ಡ ನೀರಾವರಿಯ ಜವಾಬ್ದಾರಿಯನ್ನು ಕೈಗೆ ತೆಗೆದುಕೊಂಡಿತು. ಸರ್ಕಾರದ ಮೊದಲ ಆದ್ಯತೆ ಯುರೋಪಿನ ವೈಜ್ಞಾನಿಕ ವಿಧಾನಗಳನ್ನು ಇಲ್ಲಿ ಅಳವಡಿಸುವುದು. ಎಲ್ಲಕ್ಕಿಂತ ಹೆಚ್ಚಾಗಿ ನೀರಾವರಿ ವ್ಯವಸ್ಥೆ ಆಧುನಿಕ ರಾಜ್‌ನ ಲಕ್ಷಣವಾಯಿತು.[6]

ಬ್ರಿಟಿಷರು ತಮ್ಮ ಈ ರೀತಿಯ ರಾಜ್ಯ ಸ್ಥಾಪನೆಗಾಗಿ ವ್ಯವಸ್ಥಿತವಾಗಿ ಸರ್ವೇಕ್ಷಣೆ ನಡೆಸಿ ಅಂಕಿ ಅಂಶಗಳ ಮಾಹಿತಿ ಸಂಗ್ರಹಿಸಿದರು. ೧೮೦೦ರ ಪ್ರಾರಂಭದಲ್ಲಿ ಅರ್ಥರ್ ವೆಲ್ಲೆಸ್ಲಿಯ ಆದೇಶದ ಮೇರೆಗೆ ಕರ್ನಾಟಕದಲ್ಲಿ ಸಂಚರಿಸಿದ ಫ್ರಾನ್ಸಿಸ್ ಬುಕಾನನ್ ಇಂಥ ಮಾಹಿತಿಗಳನ್ನು ದಾಖಲಿಸಿದ್ದು ಕಂಡುಬರುತ್ತದೆ. ಆತನು ಇಲ್ಲಿ ಏನೇನಿದೆ ಎಂಬುದಷ್ಟೇ ಅಲ್ಲ, ಅದರಲ್ಲಿ ಯಾವ ಸುಧಾರಣೆಯನ್ನು ತರಬೇಕು, ಆದಾಯ ಹೆಚ್ಚಿಸುವ ಸಾಧ್ಯತೆ ಎಲ್ಲೆಲ್ಲಿದೆ ಎಂಬ ಲೆಕ್ಕವನ್ನು ಉದ್ದಕ್ಕೂ ಮಾಡಿದ್ದಾನೆ. ಹಾಗಾಗಿ ಸ್ಥಾನಿಕ ಪದ್ಧತಿಗಳನ್ನು ಅವರು ಉದ್ದೇಶಪೂರ್ವಕವಾಗಿಯೇ ಮಾನ್ಯ ಮಾಡಲಿಲ್ಲ. ಏಕೆಂದರೆ ಲಾಭ ನಷ್ಟಗಳ ಲೆಕ್ಕ ಹಾಕುವ ಈ ಹೊಸ ಪ್ರಭುತ್ವಕ್ಕೆ ಮಧ್ಯಯುಗದ ಈ ಸ್ಥಾನಿಕ ವ್ಯವಸ್ಥೆಗಳು ಅಪ್ರಸ್ತುತವಾಗಿದ್ದವು. ಮೈಸೂರು ಸಂಸ್ಥಾನದಲ್ಲೂ ಕೂಡ ಅವರ ನೀತಿ ಪ್ರಯೋಗಕ್ಕೆ ಬಂದಿತು ಹಾಗೂ ಅದರ ದುಷ್ಪರಿಣಾಮಗಳೂ ಕಾಣಿಸಿಕೊಂಡವು. ೧೮೯೦ಳರಲ್ಲಿ ದಿವಾನ್ ಶೇಷಾದ್ರಿ ಐಯರ್ ಅವರು ಇಡೀ ಪ್ರಾಂತ್ಯದ ಎಲ್ಲ ಕೆರೆಗಳ ರಿಪೇರಿ ಮತ್ತು ನಿರ್ವಹಣೆ ಸರ್ಕಾರದ ಶಕ್ತಿಗೆ ಮೀರಿದ್ದು ಹಾಗೂ ಅಂತಿಮವಾಗಿ ಇದರಿಂದ ಕಂದಾಯದ ಲಾಭವೂ ಸಿಗದು. ಕೆರೆಗಳ ನಿರ್ವಹಣೆಯಲ್ಲಿ

ಸರ್ಕಾರದ ಪಾತ್ರಕ್ಕೆ ಅನಗತ್ಯ ಮಹತ್ವವನ್ನು ನೀಡಲಾಗಿದೆ. ರೈತರ ಜವಾಬ್ದಾರಿಯನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ರೈತರಿಗೆ ನೀಡುತ್ತಿದ್ದ ಇನಾಂ ಹಾಗೂ ಇತರ ಸವಲತ್ತುಗಳನ್ನು ಕಸಿದುಕೊಂಡು ಸರ್ಕಾರ ಅವರ ಕೆಲಸ ಮಾಡಬಹುದೆಂದು ರೈತರಿಗೆ ತೆರಿಗೆ ವಿಧಿಸಲಾಗಿದೆ. ಇದರಿಂದ ರೈತರ ಜವಾಬ್ದಾರಿ ತಪ್ಪಿದೆ ಎಂದು ವಿಷಾದಿಸಿದ್ದು ಕಂಡು ಬರುತ್ತದೆ.[7]ಅಂದರೆ ಬ್ರಿಟಿಷ್ ರಾಜ್ಯದ ಲೆಕ್ಕಾಚಾರ ಕೆರೆಗಳ ಸಂದರ್ಭದಲ್ಲಿ ಕೈಕೊಟ್ಟಿತ್ತು. ಕಂದಾಯವನ್ನೇ ದೃಷ್ಟಿಯಲ್ಲಿಟ್ಟಿದ್ದ ಪ್ರಭುತ್ವಕ್ಕೆ ನಷ್ಟ ತರಬಹುದಾದ ಬಹುಸಂಖ್ಯಾತ ಸಣ್ಣ ಪುಟ್ಟ ಕೆರೆಗಳ ಕೂಡ ಅಪ್ರಸ್ತುತವಾದವು. ಹಾಗೂ ಇದರಿಂದ ವೇದ್ಯವಾಗುವ ವಿಷಯವೆಂದರೆ ಬ್ರಿಟಿಷರಷ್ಟೂ ಲೆಕ್ಕ ಹಾಕದೆ ಹಿಂದಿನ ಯಾವದೇ ರಾಜ್ಯಗಳಿಗೂ ಈ ಬಹುಸಂಖ್ಯಾತ ಕೆರೆಗಳ ಕೇಂದ್ರೀಕೃತ ನಿರ್ವಹಣೆ ಲಾಭದ ಉದ್ಯಮವಾಗಿರಲಿಲ್ಲ. ಲಾಭದಾಸೆಗೆ ಅತಿಯಾದ ತೆರಿಗೆ ಹಾಕಿದರೆ ಭೂಮಿಗಳು ಬೀಳುಬೀಳುತ್ತಿದ್ದವು ಎಂಬುದು ಶಾಸನಗಳಲ್ಲೂ ವ್ಯಕ್ತವಾಗಿದೆ. ಹಾಗಾಗಿ ರಾಜ್ಯ, ಭೂ ಮಾಲಿಕರು ಮತ್ತು ಕೃಷಿಕರು ಇವರೆಲ್ಲರ ಹಿತಾಸಕ್ತಿಗೆ ಹೊಂದಾಣಿಕೆಯಾಗುವ ಒಂದು ವ್ಯವಸ್ಥೆ ಈ ಸಂಬಂಧಿಸಿ ಸಾಧ್ಯವಾಗಿರದಿದ್ದರೆ ಈ ಕೆರೆಗಳೆಲ್ಲ ಮುಂದು ವರಿದುಕೊಂಡು ಬರುತ್ತಿರಲಿಲ್ಲ. ಇದಕ್ಕೆ ಮಧ್ಯಕಾಲೀನ ವ್ಯವಸ್ಥೆ ಹಾಗೂ ಅದು ಪೋಷಿಸಿಕೊಂಡು ಬಂದು ನಂಬಿಕೆಗಳು ಮತ್ತು ಅದರಲ್ಲಿನ ಹಿತಾಸಕ್ತಿಗಳನ್ನು ಗಮನಿಸಬೇಕಾಗುತ್ತದೆ. ಕೊಂಡು ಬಂದು ನಂಬಿಕೆಗಳು ಮತ್ತು ಅದರಲ್ಲಿನ ಹಿತಾಸಕ್ತಿಗಳನ್ನು ಗಮನಿಸಬೇಕಾಗುತ್ತದೆ.

**ಚಾರಿತ್ರಿಕ ರಾಜ್ಯ ವ್ಯವಸ್ಥೆಯ ಕುರಿತ ವಾದಗಳು ಮತ್ತು ಕೆರೆ ನೀರಾವರಿ**

ಭಾರತದ ಚಾರಿತ್ರಿಕ ವ್ಯವಸ್ಥೆಯ ಕುರಿತು ೧೯ನೇ ಶತಮಾನದಲ್ಲಿ ಬ್ರಿಟಿಷರಾದಿಯಾಗಿ ಎಲ್ಲ ಐರೋಪ್ಯರಿಗೆ ಇದ್ದ ಕಲ್ಪನೆಗಳಿಗೆ ಅನುಗುಣವಾಗಿ ಅಂದಿನ ಅವರ ಕೇಂದ್ರೀಕೃತ ನೀರಾವರಿ ನೀತಿ ರೂಪು ತಳೆದಂತೆ ಕಾಣುತ್ತದೆ. ಅದೆಂದರೆ ಓರಿಯೆಂಟಲ್ ಡೆಸ್ಪಾಟಿಸಂ ಕಲ್ಪನೆ. ೧೯ನೇ ಶತಮಾನದ ಪ್ರಾರಂಭದಲ್ಲಿ ಬ್ರಿಟಿಷ್ ಭಾರತದ ಪ್ರಪ್ರಥಮ ಇತಿಹಾಸ ಬರೆದ ಜೇಮ್ಸ್ ಮಿಲ್ ಈ ಕಲ್ಪನೆಯನ್ನು ಬಳಸಿಕೊಂಡನು. ಬ್ರಿಟಿಷ್ ಆಡಳಿತಗಾರರಿಗೆ ಈ ಇತಿಹಾಸ ಬಹುಕಾಲ ಗತ ಭಾರತದ ಕಲ್ಪನೆಯನ್ನು ನೀಡಿತು. ೧೯ನೇ ಶತಮಾನದ ಉತ್ತರಾರ್ಧ ಭಾಗದಲ್ಲಿ ಪ್ರಚಲಿತದಲ್ಲಿ ಬಂದ ಮಾರ್ಕ್ಸ್ ಮತ್ತು ಎಂಗೆಲ್ಸವರ ಏಶಿಯಾಟಿಕ್ ಉತ್ಪಾದನಾ ವಿಧಾನದ ಪರಿಕಲ್ಪನೆ ಕೂಡ ಇದೇ ಕಲ್ಪನೆಯಿಂದಲೇ ರೂಪುಗೊಂಡಿತ್ತು.[8] ಮಳೆಯ ಪ್ರಮಾಣ ಕೂಡ ಸಾಕಷ್ಟಿಲ್ಲ. ಇಲ್ಲಿ ನೀರಾವರಿಗೆ ಜಲಮೂಲಗಳು ವಸತಿಗಳಿಗೆ ಸಾಮರ್ಥ್ಯಕ್ಕೆ ಮೀರಿದ್ದು. ಒಂದು ಬಲವಾದ ಆಶ್ರಯದಾತ ಕೇಂದ್ರ ಪ್ರಭುತ್ವ ಮಾತ್ರ ಅಂಥ ಯೋಜನೆಗಳನ್ನು ಹಮ್ಮಿಕೊಳ್ಳಬಹುದಿತ್ತು. ಹಾಗಾಗಿ ರಾಜ್ಯವು ಇಲ್ಲಿ ಜನರಿಂದ ನೀರಾವರಿ ತೆರಿಗೆಯನ್ನು ಸಂಗ್ರಹಿಸಿ ನೀರನ್ನು ಹಂಚುವ ಏಕೈಕ ಅಧಿಕಾರಿಯಾಗಿತ್ತು. ಕೃಷಿಕರು ಈ ವ್ಯವಸ್ಥೆಯಲ್ಲಿ ಬದ್ಧರಾಗಿದ್ದರು. ಹಾಗೂ ಈ ಹಳ್ಳಿ ಸಮಾಜಗಳು ಹೇಗಿದ್ದವೆಂದರೆ ಇಲ್ಲಿ ಖಾಸಗಿ ಆಸ್ತಿಯ ಕಲ್ಪನೆ ಇರಲಿಲ್ಲ. ಹಳ್ಳಿಯ ಜಮೀನೆಲ್ಲವೂ ಸಾಮುದಾಯಿಕ ವಹಿವಾಟಿಗೆ ಒಳಪಟ್ಟಿದ್ದು ನೀರಾವರಿ ಭೂಮಿಯನ್ನು ಕುಟುಂಬಗಳಿಗೆ ಹಂಚಲಾಗುತ್ತಿತ್ತು. ಕಾಲಕಾಲಕ್ಕೆ ಹಂಚಿಕೆಯನ್ನು ಬದಲಿಸಲಾಗುತ್ತಿತ್ತು. ಈ ಹಳ್ಳಿಗಳು ಹೆಚ್ಚೂ ಕಡಿಮೆ ಸ್ವಾವಲಂಬಿಗಳಾಗಿದ್ದವು. ಜಾತಿಪದ್ಧತಿಯು ಈ ಜನರಲ್ಲಿ ಸಾಮಾಜಿಕ ಚಲನೆಯನ್ನು ಅಸಾಧ್ಯವಾಗಿಸಿದ್ದು, ಪ್ರತೀ ಕುಟುಂಬಗಳಿಗೂ ಅವರ ಜೀವನವನ್ನು ಸುರಕ್ಷಿತವಾಗಿ ಮಾಡಿತ್ತಾದ್ದರಿಂದ ಸಾಮಾಜಿಕ ಬದಲಾವಣೆ ಉಂಟಾಗಲಿಲ್ಲ.

ಈ ವ್ಯವಸ್ಥೆ ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ಒಡೆಯಿತು. ಬ್ರಿಟಿಷರು ಇಲ್ಲಿನ ನೀರಾವರಿ ವ್ಯವಸ್ಥೆಯನ್ನು ಕಡೆಗಣಿಸಿದರು ಹಾಗೂ ಹಳ್ಳಿ ಸಮುದಾಯಗಳು ಶಿಥಿಲವಾದವು. ಜಮೀನ್ದಾರಿ, ರೈತವಾರಿ ಪದ್ಧತಿಗಳ ಮೂಲಕ ಈ ಸಮಾಜದಲ್ಲಿ ಪರಿವರ್ತನೆಶೀಲತೆಯ ಮದ್ದನ್ನು ಚುಚ್ಚಿದರು ಎಂದು ಮಾರ್ಕ್ಸ್ ಅಭಿಪ್ರಾಯಪಟ್ಟಿದ್ದನು. ಹಳ್ಳಿ ಸಮುದಾಯಗಳನ್ನು ಚರಿತ್ರೆಗೂ ಪೂರ್ವದ ಒಂದು ಅವಸ್ಥೆ ಎಂದು ಗ್ರಹಿಸಿ ಅವುಗಳನ್ನು ಶಿಥಿಲಗೊಳಿಸುವುದು ಇಲ್ಲಿನ ಸಾಮಾಜಿಕ ಪ್ರಗತಿಯ ಸೂಚನೆ ಎಂಬ ಒಂದು ಸಾಮಾನ್ಯ ನಂಬಿಕೆ ಬ್ರಿಟಿಷ್ ರಾಜ್ಯಕ್ಕೂ ಇತ್ತು. ಮಾರ್ಕ್ಸ್‌ನ ಚಿಂತನೆ ಈ ನಂಬಿಕೆಯನ್ನು ಹಂಚಿಕೊಳ್ಳುತ್ತದೆ. ಪೌರಾತ್ಯ ವಿದ್ವಾಂಸರಲ್ಲಿ ಒಂದು ಗುಂಪು ಈ ಹಳ್ಳಿ ಸಮುದಾಯಗಳನ್ನು ಪಾಶ್ಚಾತ್ಯ ವ್ಯಕ್ತಿವಾದಕ್ಕೆ ಪ್ರತಿಯಾಗಿ ಪೂರ್ವದ ಅಮೂಲ್ಯ ಪರಂಪರೆ ಎಂದು ಗ್ರಹಿಸಿತು. ಭಾರತೀಯ ರಾಷ್ಟ್ರೀಯ ಇತಿಹಾಸದಲ್ಲಿ ಕೂಡ ಈ ಹಳ್ಳಿಯ ಸಮುದಾಯಗಳ ಕಲ್ಪನೆ ಅದೊಂದು ರಾಷ್ಟ್ರೀಯ ಇತಿಹಾಸದಲ್ಲಿ ಕೂಡ ಈ ಹಳ್ಳಿಯ ಸಮುದಾಯಗಳ ಕಲ್ಪನೆ ಅದೊಂದು

ರಾಷ್ಟ್ರೀಯ ಹೆಗ್ಗಳಿಕೆಯಾಗಿ ಮುಂದುವರಿಯಿತು ಎಂಬುದು ಗಮನಾರ್ಹ. ಆ ಮೂಲಕ ಭಾರತೀಯ ಹಳ್ಳಿ ಸಮುದಾಯಗಳಲ್ಲಿನ ವಾಸ್ತವಿಕ ಶ್ರೇಣೀಕರಣ ಇವರ ಚರ್ಚೆಯಿಂದ ಹಿನ್ನೆಲೆಗೆ ಸರಿಯುತ್ತದೆ.

೧೯ನೇ ಶತಮಾನದ ಸಿದ್ಧಾಂತಗಳ ಅಸಂಗತತೆಯನ್ನು ನಂತರದ ವಿದ್ವಾಂಸರು ಗುರುತಿಸಿ ವಿಮರ್ಶಿಸಿದ್ದಾರೆ. ಭಾರತದಲ್ಲಿ ೨೦೦೦ ವರ್ಷಗಳಷ್ಟು ಹಿಂದೆಯೇ ಖಾಸಗಿ ಆಸ್ತಿ ಕಲ್ಪನೆ ಬೆಳೆದಿತ್ತು. ನೀರಾವರಿಗಾಗಿ ಹಳ್ಳಿ ಸಮುದಾಯಗಳು ನಿರಂಕುಶ ಪ್ರಭುತ್ವದ ಪರಾಧೀನರಾಗಿದ್ದವು ಎಂಬುದು ನಿರಾಧಾರ ಹೇಳಿಕೆ. ಇದಕ್ಕೆ ವ್ಯತಿರಿಕ್ತವಾಗಿ ಮಧ್ಯಕಾಲೀನ ನೀರಾವರಿ ವ್ಯವಸ್ಥೆಯಲ್ಲಿ ಒಂದು ಪ್ರಭುತ್ವ ಕೇಂದ್ರೀಕೃತ ಪ್ರಯತ್ನಗಳನ್ನೇ ಮಧ್ಯಕಾಲೀನ ನೀರಾವರಿ ವ್ಯವಸ್ಥೆಯಲ್ಲಿ ಒಂದು ಪ್ರಭುತ್ವ ಕೇಂದ್ರೀಕೃತ ಪ್ರಯತ್ನಗಳೇ ಕಾಣುವುದು ದುಸ್ತರ. ರಾಷ್ಟ್ರೀಯ ಇತಿಹಾಸಕಾರರು ಅಗ್ರಹಾರ, ನಾಡು, ವ್ಯಾಪಾರಿ, ಹಾಗೂ ವೃತ್ತಿಕಾರರ ಸಂಘಗಳು, ದೇವಾಲಯಗಳು ಮುಂತಾದ ಸ್ಥಾನಿಕ ಸ್ವಾಯುತ್ತ ಆಡಳಿತ ಘಟಕಗಳ ಕುರಿತು ಮಾಹಿತಿಯ ಮಹಾಪೂರವನ್ನೇ ಹರಿಸಿದ್ದಾರೆ.[9] ಆದರೆ ಅಂಥ ಆಡಳಿತ ವ್ಯವಸ್ಥೆ ಒಂದು ವಿಕೇಂದ್ರೀಕೃತ ರಾಜ್ಯ ವ್ಯವಸ್ಥೆ ಎಂಬ ಅಭಿಪ್ರಾಯ ಅವರದ್ದು. ಈಗಾಗಲೇ ಉಲ್ಲೇಖಿಸಿದಂತೇ ವಿಕೇಂದ್ರೀಕೃತ ವ್ಯವಸ್ಥೆ ಕೂಡ ಒಂದು ಕೇಂದ್ರೀಕೃತ ಪ್ರಭುತ್ವದ ತಂತ್ರವೇ ಆಗಿದೆ. ಹಾಗಾಗಿ ವಿಭಿನ್ನ ಸಾಮ್ರಾಜ್ಯಗಳು ಇಂಥ ಕೇಂದ್ರಗಳನ್ನು ಅಲಂಕರಿಸುತ್ತದೆ. ಆದರೆ ಇಂಥ ಕೇಂದ್ರೀಕೃತ ಪ್ರಭುತ್ವಗಳು ಅಂದು ಇದ್ದವೇ? ಎಂಬ ಜಿಜ್ಞಾಸೆ ಇಂದು ನಮ್ಮ ಚರಿತ್ರೆಯಲ್ಲಿ ಪ್ರಧಾನ ಸ್ಥಾನ ಪಡೆದಿವೆ.

ಇಂಥ ಚರ್ಚೆಗಳಲ್ಲಿ ಬರ್ಟನ್ ಸ್ಟೈನ್ ಎಂಬವರು ದಕ್ಷಿಣ ಭಾರತದಲ್ಲಿನ ರಾಜ್ಯಗಳದು ಸಂಪೂರ್ಣವಾಗಿ ರೂಪು ತಳೆದ ಕೇಂದ್ರ ಪ್ರಭುತ್ವವಾಗರದೇ ಇಂಥ ತುಂಡು ತುಂಡು ಸ್ಥಾನಿಕ ಪ್ರಭುತ್ವಗಳನ್ನು (ಸೆಗ್ಮೆಂಟರಿ ಸ್ಟೇಟ್) ಒಟ್ಟಿಗೇ ಸೇರಿಸಿ ಆದುದ್ದಾಗಿತ್ತು ಎಂದು ವಾದಿಸಿದರು. ಇಂಥ ಪ್ರಭುತ್ವಗಳಲ್ಲಿ ನಾವು ಕೇಂದ್ರ ರಾಜ್ಯವೆಂದು ಕರೆಯುವ ಪ್ರಭುತ್ವವು ಭೌತಿಕ ಉಪಸ್ಥಿತಿಯನ್ನು ಪಡೆದಿರಲಿಲ್ಲ. ಈ ರಾಜ್ಯದ ಲಕ್ಷಣವನ್ನು ಬರ್ಟನ್ ಸ್ಟೈನ್ ಅವರು ಈ ರೀತಿ ವಿವರಿಸುತ್ತಾರೆ.[10]೧) ಈ ರಾಜ್ಯದಲ್ಲಿ ಹಲವಾರು ಪ್ರಭುತ್ವ ಕೇಂದ್ರಗಳಿರುತ್ತವೆ. ೨) ಈ ವಿಭಿನ್ನ ಕೇಂದ್ರಗಳಿಗೆಲ್ಲ ಸ್ವಾಯತ್ತ ಆಡಳಿತ ಶಕ್ತಿ ಮತ್ತು ದಂಡ ಶಕ್ತಿಗಳಿರುತ್ತವೆ. ೩) ಇವೆಲ್ಲ ಅಭಿಷಿಕ್ತ ರಾಜನೊಬ್ಬನನ್ನು ತಮ್ಮ ಕೇಂದ್ರವೆಂದು ಸಾಂಪ್ರದಾಯಿಕ ವಿಧಿಗಳ ಮೂಲಕ ಒಪ್ಪಿಕೊಂಡಿರುತ್ತವೆಯಾದ್ದರಿಂದ ಒಂದು ರಾಜ್ಯ ಅಸ್ತಿತ್ವದಲ್ಲಿರುತ್ತದೆ. ಈ ಎಲ್ಲ ಪ್ರಭುತ್ವಗಳ ಸಂಪನ್ಮೂಲಗಳನ್ನು ಕೇಂದ್ರೀಕರಿಸುವ ಪ್ರಯತ್ನವನ್ನು ಕೂಡ ಈ ರಾಜರು ತಮ್ಮ ಆಳ್ವಿಕೆಯ ಕೇಂದ್ರ ಭಾಗದಲ್ಲಿ ನಡೆಸಿದ್ದರು. ವಿಜಯನಗರ ರಾಯರ ಕಾಲದಲ್ಲಿದ್ದ ಪ್ರಾದೇಶಿಕ ನಾಯಕರು ತಂತಮ್ಮ ಆಳ್ವಿಕೆಯ ಪ್ರದೇಶದಲ್ಲಿನ ವಿಭಿನ್ನ ಸಂಸ್ಥೆಗಳ ಮೇಲೆ ಈ ರೀತಿಯ ಹತೋಟಿಯನ್ನು ಸ್ಥಾಪಿಸಿದ್ದರು. ಆದರೆ ಇಂಥ ರಾಜ್ಯಗಳನ್ನು ೧೮ನೇ ಶತಮಾನದ ಯುರೋಪಿನ ಕೇಂದ್ರೀಕೃತ ಪ್ರಭುತ್ವಗಳಿಗೆ ಹೋಲಿಸುವಂತಿಲ್ಲ. ಏಕೆಂದರೆ ಇವುಗಳಲ್ಲಿ ಯಾವುದೇ ರಾಜ್ಯದ ಆಳ್ವಿಕೆಯಲ್ಲಿ ಕೂಡ ಸ್ಥಾನಿಕ ಗುಂಪುಗಳು ಸಂಪನ್ಮೂಲದ ಮೇಲೆ ತಮ್ಮ ಸಾಮುದಾಯಿಕ ಹಕ್ಕನ್ನು ಬಿಟ್ಟುಕೊಡಲಿಲ್ಲ. ರಾಜ್ಯವೂ ಅದನ್ನು ಮನ್ನಿಸಿದ್ದವು. ಬ್ರಿಟಿಷರು ಬಂದ ಮೇಲೆ ಈ ಹಕ್ಕುಗಳನ್ನು ನಾಶಮಾಡುವ ಪ್ರಯತ್ನಗಳು ಗಂಭೀರವಾಗಿ ನಡೆದವು. ಇಂಥದೊಂದು ರಾಜ್ಯಕ್ಕೆ ಕೃಷಿವಿಸ್ತರಣೆ ಮತ್ತು ನೀರಾವರಿಯ ಕಾರ್ಯಕ್ರಮದ ಸ್ವರೂಪ ಹೇಗೆ ಇದ್ದರಿಬಹುದು ಎಂಬ ಕುರಿತೂ ಸ್ಟೈನ್ ಅವರು ಸಾಂದರ್ಭಿಕವಾಗಿ ಚರ್ಚಿಸುತ್ತಾರೆ. ತಿರುಪತಿ ದೇವಾಲಯದ ಸಂದರ್ಭದಲ್ಲಿ ದೇವಾಲಯಗಳನ್ನು ಹೇಗೆ ವಿಜಯನಗರ ರಾಜರು ದಾನ ನೀಡಿ ಪೋಷಿಸಿದ್ದರು ಮತ್ತು ಇವು ನೀರಾವರಿ ಯೋಜನೆಯನ್ನು ಹಮ್ಮಿಕೊಂಡು ಸಂಪನ್ಮೂಲಗಳನ್ನು ಅಭಿವೃದ್ಧಿಗೊಳಿಸಿದವು ಎಂದು ಚರ್ಚಿಸುತ್ತಾ ಇಂಥ ನೀರಾವರಿ ಹಾಗೂ ಕೃಷಿ ಅಭಿವೃದ್ಧಿ ರಾಜ್ಯದ ಕಾರ್ಯಕ್ರಮ ಅಥವಾ ರಾಜ್ಯ ಕೃಷಿ ಅಭಿವೃದ್ಧಿಗಾಗಿ ದಾನ ನೀಡಿತು ಎಂದು ಭಾವಿಸಬಹುದೆ? ಎಂಬ ಪ್ರಶ್ನೆಯನ್ನು ಎನ್ನುತ್ತಾರೆ.[11] ಅವರ ಪ್ರಕಾರ ಇದನ್ನು ಹೀಗೆ ಗ್ರಹಿಸಬಹುದು: ರಾಜ್ಯದ ನೇರ ಮತ್ತು ಪ್ರಕಟ ಕಾರ್ಯಕ್ರಮದಲ್ಲಿ ಇದನ್ನು ಸೇರಿಸುವಂತಿಲ್ಲ. ಆದರೆ ಅದು ರಾಜ್ಯದ ಅಂತಸ್ಥ ಕಾರ್ಯಕ್ರಮವಾಗಿ ಪರಿಣಮಿಸುತ್ತದೆ. ದೇವಾಲಯ ಮತ್ತು ಕೆರೆ ಕೊಡಿಗೆಗಳ ದಾನಗಳ ಪ್ರಕಟ ಉದ್ದೇಶ ಪುಣ್ಯ ಸಂಪಾದಿಸುವುದು. ಇದರ ಪರಿಣಾಮ ಕೃಷಿ ಅಭಿವೃದ್ಧಿಯಾಯಿತು. ಅಂದ ಮಾತ್ರಕ್ಕೇ ರಾಜ್ಯದ ದಾನಕ್ಕೆ ಆರ್ಥಿಕ ಉದ್ದೇಶ ಇತ್ತು ಎನ್ನುವುದು ಸರಿಯಲ್ಲ ಎನ್ನುವ ಅವರು ವಿಜಯನಗರ ಕಾಲದಲ್ಲಿ ದೇವಾಲಯಗಳ ಪಾರುಪತ್ಯಕ್ಕೆ ರಾಜ್ಯದ ಆಧಿಕಾರಿಗಳಿದ್ದರು. ಆದರೆ ಕೃಷಿ, ನೀರಾವರಿ ಮುಂತಾದವುಗಳಿಗೆ

ಇರಲಿಲ್ಲ ಎಂಬ ಸಂಗತಿಯತ್ತ ನಮ್ಮ ಗಮನ ಸೆಳೆಯುತ್ತಾರೆ. ಅಂದಿನ ರಾಜ್ಯಕ್ಕೆ ಇಂದಿನ ರಾಜ್ಯಗಳ ಹಾಗೇ ನೇರ ಗುರಿಗಳು ಹಾಗೂ ಉದ್ದೇಶಗಳತ್ತ ಹೆಚ್ಚು ಪರಿಶೀಲನೆಗಳ ಕಾರ್ಯಕ್ರಮ ಇರಲಿಲ್ಲ ಎನ್ನುತ್ತಾರೆ.

ಮಧ್ಯಕಾಲದಲ್ಲಿ ಫ್ಯೂಡಲ್ ಪ್ರಭುತ್ವ ಭಾರತದಲ್ಲಿ ಇತ್ತೆಂದು ಗ್ರಹಿಸುವ ಇತಿಹಾಸಕಾರರು ಈ ಮೇಲಿನ ಅಂಶಗಳು ಒಂದು ಪ್ರಭುತ್ವ ತನ್ನ ಅಧಿಕಾರವನ್ನು ಪಾಲುಮಾಡಿ ಕೊಡುವ ಪ್ರಕ್ರಿಯೆಯಲ್ಲಿ ರೂಪುಗೊಂಡವುಗಳೆಂದು ವಾದಿಸುತ್ತಾರೆ. ಕ್ರಿಸ್ತಾಬ್ದ ೫ನೇ ಶತಮಾನದ ನಂತರ ಪ್ರಾಚೀನ ಭಾರತದ ನಗರ ಸಮಾಜವು ಅವನತಿ ಹೊಂದಿ ಫ್ಯೂಡಲ್ ರಾಜ್ಯ ವ್ಯವಸ್ಥೆ ನಿರ್ಮಾಣವಾಯಿತು. ಇದು ಪ್ರಧಾನವಾಗಿ ಭೂ ಒಡೆತನ ಹಾಗೂ ಕೃಷಿ ಉತ್ಪಾದನೆಯನ್ನವಲಂಬಿಸಿದ ವ್ಯವಸ್ಥೆಯಾಗಿತ್ತು. ವ್ಯಾಪಾರ ಅವನತಿಹೊಂದಿದ ಪರಿಣಾಮವಾಗಿ ನಾಣ್ಯಗಳ ಬಳಕೆ ಮಿತವಾಗಿ ಭೂಮಿಯ ಉಂಬಳಿ ಮತ್ತು ಮಾನ್ಯದ ರೂಪದಲ್ಲೇ ಅಧೀನ ಅಧಿಕಾರಿಗಳಿಗೆ ಪ್ರತಿಫಲವನ್ನು ನೀಡುವ ಪದ್ಧತಿ ಬೆಳೆದುಕೊಂಡುಬಂದಿತು. ಕೃಷಿ ವಿಸ್ತರಣೆ ಈ ರೀತಿಯಗಿ ರಾಜರ, ಸಾಮಂತರ, ಸ್ಥಾನಿಕ ಆಳುವರ್ಗಗಳ ಹಾಗೂ ಹಳ್ಳಿಗಳಿಗೆ ವಲಸೆಹೋದ ಕುಶಲ ಕರ್ಮಿಗಳ ವಿಶೇಷ ಕಾಳಜಿಯಾಯಿತು. ಸುಮಾರು ೫೦ರಷ್ಟು ವ್ಯವಸಾಯ ರಾಜ್ಯಗಳು ಈ ಕಾಲದಲ್ಲಿ ಆಗಿಹೋದವು. ಇವೆಲ್ಲ ಭೂಮಾಲಿಕರ ಪ್ರಾಬಲ್ಯ ಹಾಗೂ ಕೃಷಿಕರ ಪರಾಧೀನತೆಯನ್ನಾಧರಿಸಿ ನಿಂತಿದ್ದವು. ಈ ಕಾಲದಲ್ಲಿ ಈ ಮೇಲಿನ ವರ್ಗದಿಂದ ನೀರಾವರಿಗೆ ವಿಶೇಷ ಮಹತ್ವ ಸಿಕ್ಕು ಕೆರೆ ಕಾಲುವೆಗಳು ನಿರ್ಮಾಣವಾದವು. ಈ ಕಾಲದ ಧರ್ಮಶಾಸ್ತ್ರಗಳು ಪ್ರತಿಬಿಂಬಿಸುವಂತೇ ಕೆರೆ ಕಟ್ಟೆಗಳನ್ನು ನಿರ್ಮಿಸುವುದು ಪುಣ್ಯಕಾರ್ಯ ಎಂಬ ಶ್ರದ್ಧೆ ಬೆಳೆದಿದ್ದಲ್ಲದೇ ಅವುಗಳನ್ನು ಹಾಳುಮಾಡುವವರಿಗೆ ಕಠಿಣ ಶಿಕ್ಷೆ ವಿಧಿಸಲಾಗಿದೆ. ಕೃಷಿ ಉತ್ಪಾದನೆಯ ಮೇಲೇ ಆಧರಿಸಿದ್ದ ಈ ರಾಜ್ಯವು ತನ್ನ ತಾತ್ವಿಕತೆಯನ್ನು ನೆಲೆನಿಲ್ಲಿಸುವ ದೇವಾಲಯ, ಅಗ್ರಹಾರಗಳಂಥ ಸಂಸ್ಥೆಗಳನ್ನು ಮತ್ತು ಆಡಳಿತ ನಡೆಸುವ ಅಧಿಕಾರಿಗಳನ್ನು ಭೂ ದಾನಗಳನ್ನು ನೀಡಿ ಪೋಷಿಸಿತು. ಇವರೆಲ್ಲ ಅಧಿಕಾರದ ಮಧ್ಯವರ್ತಿಗಳಾದುದಲ್ಲದೇ ಭೂಮಾಲಿಕರಾಗಿ ಬೆಳೆದರು. ಹಳ್ಳಿಯ ಕೃಷಿ ಸಮುದಾಯಗಳ ಸಾಮುದಾಯಿಕ ಆಸ್ತಿಯಲ್ಲಿ ಖಾಸಗಿ ಆಸ್ತಿಯ ನಿರ್ಮಾಣವಾದ ಪರಿಣಾಮ ಕೃಷಿಕರು ಗೇಣಿದಾರರಾಗಿ ಪರಿವರ್ತಿತರಾದರು. ನೀರಾವರಿ ವ್ಯವಸ್ಥೆ ಈ ಪ್ರಕ್ರಿತೆಯ ಒಂದು ಭಾಗವಾಗಿದೆ.[12] ಅನೇಕ ಪ್ರಾದೇಶಿಕ ಅಧ್ಯಯನಗಳು ಈ ನಿಟ್ಟಿನಲ್ಲಿ ಬಂದಿವೆ.[13] ನೀರಾವರಿಯು ಭೂಮಿಯ ಉತ್ಪಾದಕತೆಯನ್ನು ಹೆಚ್ಚಿಸಿದ್ದು ಖಾಸಗಿ ಒಡೆಯರು ಪ್ರಬಲರಾಗಿ ಬೆಳೆಯಲು ಒಂದು ಕಾರಣವಾಯಿತು. ಇಂಥವರು ಹೆಚ್ಚೆಚ್ಚು ಭೂಮಿಯನ್ನು ಖರೀದಿಸಿದರು. ಇಲ್ಲ ತಮ್ಮ ಭೂಮಿಯನ್ನು ನೀರಾವರಿಗೆ ಒಳಪಡಿಸಿ ಉತ್ಪಾದನೆಯನ್ನು ಜಾಸ್ತಿ ಮಾಡಿದರು. ಇದು ಸ್ಥಾನಿಕವಾಗಿ ಕೃಷಿಕರ ಮತ್ತು ಭೂ ಒಡೆಯರ ಮಧ್ಯದ ಸಂಘರ್ಷಕ್ಕೂ ಎಡೆಮಾಡಿಕೊಟ್ಟಿತು.

ರಾಜ್ಯಕ್ಕೂ ಕೆರೆನೀರಾವರಿಗೂ ಇರಬಹುದಾದ ಸಂಬಂಧದ ಸ್ವರೂಪವನ್ನು ಕುರಿತು ಈ ಮೇಲಿನ ಚರ್ಚೆ ಇದ್ದರೂ ಕೆಲ ಸಾಮಾನ್ಯ ವಿಷಯಗಳು ಇದರಿಂದ ತಿಳಿದು ಬರುತ್ತವೆ: ೧) ಕೆರೆ ನೀರಾವರಿಯ ನಿರ್ವಹಣೆ ಸ್ಥಾನಿಕ ಜವಾಬ್ದಾರಿಯಾಗಿತ್ತು. ಖಾಸಗಿ ಆಸ್ತಿ ಹಾಗೂ ಆಸಕ್ತಿಗಳೊಂದೇ ಇಲ್ಲಿ ನಿರ್ಣಾಯಕವಾಗಬೇಕೆಂದೇನೂ ಇಲ್ಲವಾದರೂ ಅವೂ ಮಹತ್ವದ ಅಂಶಗಳೇ ಆಗಿದ್ದವು. ೨) ಕೆರೆ ನೀರಾವರಿ ವ್ಯವಸ್ಥೆಯ ಮಧ್ಯಕಾಲದಲ್ಲಿ ಆರ್ಥಿಕ ಸಮೃದ್ಧಿಯನ್ನು ಉಂಟುಮಾಡಿದ್ದು ಅಧ್ಯಯನಗಳಿಂದ ಸ್ಪಷ್ಟವಾಗುತ್ತದೆ. ಇಂದು ಆರ್ಥಿಕವಾಗಿ ಹಿಂದುಳಿದಿರುವ ಕರ್ನಾಟಕದ ಅರೆಮಲೆನಾಡಿನ ಭಾಗಗಳು ೧೧-೧೨ನೇ ಶತಮಾನದಲ್ಲಿ ಉಳಿದೆಲ್ಲ ಭಾಗಗಳಿಗಿಂತ ಸಮೃದ್ಧ ಭಾಗಗಳಾಗಿದ್ದವು. ರಾಜಸ್ಥಾನದಂಥ ಒಣ ಪ್ರದೇಶವೂ ನೀರಾವರಿಯಿಂದ ಆರ್ಥಿಕ ಪ್ರಗತಿಯನ್ನು ಸಾಧಿಸಿದ್ದೂ ವೇದ್ಯವಾಗುತ್ತದೆ. ಬಹುಶಃ ಹೆಚ್ಚು ಇಳುವರಿ, ವರ್ಷಾದ್ಯಂತ ಬೆಳೆ, ನೀರಾವರಿ ವಾಣಿಜ್ಯ ಬೆಳೆಗಳ ಉತ್ಪಾದನೆ ಮುಂತಾದವುಗಳು ಮಧ್ಯಕಾಲದಲ್ಲಿ ಕೃಷಿಯನ್ನೇ ಆಧರಿಸಿದ್ದ ಉದ್ಯಮ ಹಾಗೂ ವ್ಯಾಪಾರಿಗಳಿಗೆ ನಿರ್ಣಾಯಕವಾಗಿದ್ದಿರಬಹುದು. ೩) ಹಾಗಾಗಿ ನೀರಾವರಿ ಆ ಕಾಲದಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಬಲವನ್ನು ಸಂವರ್ಧಿಸುವ ಶಕ್ತಿಯಾಗಿತ್ತು ಎಂಬುದರಲ್ಲಿ ಸಂಶಯವಿಲ್ಲ.[14] ಆ ಕಾಲದ ಶ್ರೀಮಂತ ಹಾಗೂ ಆಳುವ ವರ್ಗಕ್ಕೆ ಈ ರೀತಿ ಅದು ಆಧಾರವಾಗಿತ್ತು. ಹಾಗೂ ಇವರನ್ನಾಶ್ರಯಸಿದ ರಾಜ್ಯಗಳಿಗೂ ಅದು ಮಹತ್ವದ್ದಾಗಿತ್ತು.

**ಕೆರೆ ನೀರಾವರಿಗೆ ಆಶ್ರಯ: ಮೇಲ್ಮಟ್ಟದ ಪ್ರಭುತ್ವಗಳು**

ಕೆರೆಗಳ ಸಂಬಂಧಿಸಿ ನಮಗೆ ಅಂಕಿ ಅಂಶಗಳು ಸಿಗುವುದೇ ಆಧುನಿಕ ಕಾಲದ ನಂತರ. ಹಿಂದಿನ ಪ್ರಭುತ್ವಗಳಿಗೆ ಅಂಥ ಅಂಕಿ ಅಂಶಗಳನ್ನು ಕಾಪಾಡುವ ಅಗತ್ಯ ಇರಲಿಲ್ಲ. ಆದರೆ ಅವುಗಳಿಗೆ ಕೆಲ ಕೆರೆಗಳ ಸಂಬಂಧಿಸಿ ಶಾಸನಗಳನ್ನು ನಡೆಸುವ ಜರೂರು ಬಂದಿದ್ದು ಕುತೂಹಲಕಾರಿಯಾಗಿದೆ. ಇಂಥ ಶಾಸನಗಳು ಕೆರೆ ಕಟ್ಟಿಸಿದ, ರಿಪೇರಿ ಮಾಡಿದ, ನಿರ್ವಹಣೆಗೆ ಸಂಬಂಧಿಸಿ ಕೊಟ್ಟ ಕೊಡುಗೆಗಳನ್ನು ಅಥವಾ ಏರ್ಪಡಿಸಿದ ವ್ಯವಸ್ಥೆಯನ್ನು ಶಾಶ್ವತವಾಗಿ ದಾಖಲಿಸುವ ಕೆಲಸ ಮಾಡುತ್ತವೆ. ಹಾಗೆಂದು ಕೆರೆನೀರಾವರಿಯ ಅಸ್ತಿತ್ವ ಇಂಥ ದಾಖಲೆಗಳನ್ನು ಅವಲಂಬಿಸಿರಲಿಲ್ಲ. ಕರ್ನಾಟಕದ ಕೆರೆಗಳ ಒಟ್ಟೂ ಸಂಖ್ಯೆಗೆ ಹೋಲಿಸಿದರೆ ಇಂಥ ದಾಖಲೆಗಳು ಅತ್ಯಲ್ಪ ಹಾಗೂ ಅವುಗಳ ಹಿಂದೆ ಯಾವುದೆ ಥರದ ತಾರತಮ್ಯಗಳು ಇದ್ದಂತೆ ಕಾಣಿಸುವುದಿಲ್ಲ. ಅನೇಕ ಶಾಸನಗಳಲ್ಲಿ ಕೆರೆ ಕಟ್ಟಿಸಿದ ವಿಷಯ ಧರ್ಮಕಾರ್ಯದ ಅಥವಾ ಸಾಧನೆಯ ದಾಖಲೆಯಾಗಿ ಬರುತ್ತದೆಯೇ ಹೊರತೂ ಅದರ ನಿರ್ವಹಣೆಗೆ ಶಿಲಾಶಾಸನದ ಅಗತ್ಯ ಇರಲಿಲ್ಲ. ಕೆರೆಯ ಗಾತ್ರ ಹಾಗೂ ನೀರಾವರಿ ಮಹತ್ವವಂತೂ ಇಂಥ ಶಾಶ್ವತ ದಾಖಲೆಗಳ ಪರಿಗಣನೆಯಲ್ಲಿರಲಿಲ್ಲ. ಬಹುಶಃ ಅವುಗಳಿಗೆಲ್ಲ ತಾತ್ಕಾಲಿಕ ದಾಖಲೆಗಳಿದ್ದಿರಬಹುದು ಅಥವಾ ದಾಖಲೆಯೇ ಇಲ್ಲದೇ ರೂಢಿಯ ಮೇಲೇ ನಡೆದಿರಬಹುದು. ಹಾಗಾಗಿ ಶಾಸನಗಳ ಅಭಾವ ಮತ್ತು ಸಿಕ್ಕ ಶಾಸನಗಳ ಸ್ವರೂಪ ತಿಳಿಸುವಂತೆ ಅಂದಿನ ಕೆರೆ ಕಾರಣಗಳೇ ನಿರ್ಧರಿಸಿದ್ದವು. ಅದೇನೇ ಇದ್ದರೂ ಅವುಗಳಿಂದ ಸ್ಥಾನಿಕ ನಿದರ್ಶನಗಳನ್ನು ನಾವು ಪಡೆಯುತ್ತೇವೆ. ಚಾರಿತ್ರಿಕ ಧರ್ಮ, ಅರ್ಥ ಮತ್ತು ನೀತಿ ಶಾಸ್ತ್ರಗಳಿಂದ ಈ ಕುರಿತು ಅಂದಿನ ಪ್ರಭುತ್ವದ ಕೆಲ ನೀತಿ ಹಾಗೂ ಧರ್ಮ ನಿರ್ದೇಶನಗಳು ಏನಿದ್ದವು ಎಂಬುದನ್ನು ತಿಳಿಯಬಹುದು.

ಶಾಸನಗಳಲ್ಲಿ ಕೆರೆಗಳಿಗೆ ಸಂಬಂಧಿಸಿದ ದಾನಗಳನ್ನು ವಿಶ್ಲೇಷಿಸುವಾಗ ಯಾರು ಇದರಲ್ಲಿ ಆಸಕ್ತಿ ವಹಿಸಿದರು, ಏಕೆ ಆಸಕ್ತಿ ವಹಿಸಿದರು ಎಂಬುದನ್ನು ಗಮನಿಸುವುದು ಬಹುಮುಖ್ಯ ವಾಗುತ್ತದೆ. ಬಹುತೇಕ ಶಾಸನಗಳಲ್ಲಿ ರಾಜ-ಮಹಾರಾಜರ ಹೆಸರುಗಳು ಬಂದರೂ ಅವು ಸ್ಥಾನಿಕ ನಿರ್ಣಯಗಳ ಅಥವಾ ಖಾಸಗಿ ಸಾಧನೆಗಲ ದಾಖಲೆಗಳಾಗಿದ್ದವು. ಕುಪ್ಪುಸ್ವಾಮಿಯವರು ಹಳೆ ಮೈಸೂರಿನ ಶಾಸನ ದಾಖಲೆಗಳ ಮೂಲಕ ಕೆರೆ ಕಟ್ಟಿಸಿದವರ ಕುರಿತ ಅಂಕಿ ಅಂಶಗಳನ್ನು ನೀಡುತ್ತಾರೆ.[15] ರಾಜ್ಯದ ಯಾವುದೇ ಅಧಿಕಾರದಲ್ಲಿ ಗುರುತಿಸಲ್ಪಡುವ ನಿರ್ಮಾತೃಗಳು ಒಟ್ಟೂ ದಾಖಲೆಗಳ ೨೮.೫೬ ಸಾಮಂತರು ಮತ್ತು ಸ್ಥಾನಿಕ ಅಧಿಕಾರಿಗಳು ೫೦%ರಷ್ಟು, ರಾಜ್ಯದ ಅಧಿಕಾರಿಗಳು ೧೬% ರಷ್ಟು. ಆದರೆ ರಾಜ ಮತ್ತು ಆತನ ಪರಿವಾರ ಶೇ. ೫ರಷ್ಟಿದ್ದಾರೆ. ಅಂದರೆ, ಈ ಶಾಶ್ವತ ದಾಖಲೆಯ ಸಂಬಂಧಿಸಿದ ಖಾಸಗಿ ಹಿತಾಸಕ್ತಿ ರಾಜನಿಗಂತೂ ಮಹತ್ವದ್ದಾಗಿರಲಿಲ್ಲ. ಮಧ್ಯಕಾಳದ ಪ್ರಭುತ್ವವನ್ನು ಸ್ಥೂಲವಾಗಿ ಅನೇಕ ಪ್ರಾದೇಶಿಕ, ಸ್ಥಾನಿಕ ಪ್ರಭುತ್ವಗಳನ್ನು (ರಾಜ್ಯಗಳನ್ನು) ಒಳಗೊಂಡ ಒಂದು ಮೇಲ್ಮಟ್ಟದ ವ್ಯವಸ್ಥೆ (ಸಾಮ್ರಾಜ್ಯ) ಎಂದು ಗುರುತಿಸಬಹುದು. ಇಂಥ ರಾಜರನ್ನು ಮಹಾರಾಜಾಧಿರಾಜ ಎಂದು ಕರೆಯಲಾಗಿದೆ. ಇವನು ಪ್ರಾದೇಶಿಕ ರಾಜರನ್ನೂ, ಇಂಥ ರಾಜರನ್ನು ಅದಾಗಲೇ ಅಂಕೆಯಲ್ಲಿ ತಂದುಕೊಂಡ ಮಹಾರಾಜರನ್ನೂ ತನ್ನ ಪ್ರಭುತ್ವದಲ್ಲಿ ಒಳಗೊಂಡಿರುತ್ತಿದ್ದನು. ಈ ಮೇಲ್ಮಟ್ಟದ ಪ್ರಭುತ್ವವು ತಾನೇ ಅಂಥದೊಂದು ಹಂತದಿಂದ ಮೇಲೇರಿ ಕೆಳಮಟ್ಟದ ಪ್ರಭುತ್ವಗಳನ್ನು ಆವರಿಸಿಕೊಳ್ಳುವ ಪ್ರಯತ್ನ ಸುಪ್ರಸಿದ್ಧ ರಾಜವಂಶಗಳ ನೇತೃತ್ವದಲ್ಲಿ ನಡೆದವು. ಇಂಥ ರಾಜವಂಶಗಳು ಒಮ್ಮೊಮ್ಮೆ ಒಂದು ಕೇಂದ್ರೀಕೃತ ಆಡಳಿತಕ್ಕೆ ಪ್ರಯತ್ನಿಸಿದರೂ ಅದು ರಾಜ್ಯದ ಹುಟ್ಟುವಳಿಯುತ್ತಲೇ ಕೇಂದ್ರಿತವಾಗಿತ್ತೇ ಹೊರತೂ ಉತ್ಪಾದನಾ ವಿಧಾನ ಮತ್ತು ಸಾಧನದ ಮೇಲಿನ ನೇರ ಹಿಡಿತವಾಗಿರಲಿಲ್ಲ. ಅದು ಸ್ಥಾನಿಕ ಹಿತಾಸಕ್ತಿಗಳ ಜವಾಬ್ದಾರಿಯಾಗಿತ್ತು. ಈ ಸ್ಥಾನಿಕ ಘಟಕಗಳು ತಮ್ಮ ಸಾಮರ್ಥ್ಯ ಮತ್ತು ವ್ಯಾಪ್ತಿಗೆ ಮೀರಿದ ಕೆಲಸಕ್ಕಾಗಿ ತಮಗಿಂತಲೂ ಮೇಲಿನ ಶಕ್ತಿಗಳನ್ನು ಸಂಪರ್ಕಿಸುತ್ತಿದ್ದರು. ಹೀಗೆ ತೀರ ಮೇಲ್ಮಟ್ಟದ ಪ್ರಭುತ್ವಕ್ಕೂ ಸ್ಥಾನಿಕ ಕೃಷಿ ಮತ್ತು ನೀರಾವರಿಯಲ್ಲಿ ಪ್ರವೇಶಿಸುವ ಅವಕಾಶ ನಿರ್ಮಾಣವಾಗುತ್ತಿತ್ತು. ಈ ಮೇಲ್ಮಟ್ಟದ ಪ್ರಭುತ್ವಕ್ಕೆ ಸ್ಥಾನಿಕ ಅಭಿವೃದ್ಧಿ ಹಾಗೂ ಕೃಷಿ ವಿಸ್ತರಣೆ ಒಂದು ನಿರೀಕ್ಷೆಯೇ ಆಗಿತ್ತು. ಆದರೆ ರಾಜ್ಯದ ಹುಟ್ಟುವಳಿಯಲ್ಲಿ ಸ್ಥಾನಿಕ ಘಟಕಗಳು ಮಧ್ಯವರ್ತಿಗಳಾದ್ದರಿಂದ ಅವುಗಳನ್ನು ಮಾನ್ಯಮಾಡುವುದು ಅದರ ನೇರ ಜವಾಬ್ದಾರಿಯಾಗಿತ್ತು. ಅದರಾಚೆಗೆ ಅಗತ್ಯ ಇಲ್ಲದಿದ್ದಾಗ ಅದು ಪ್ರವೇಶಿಸದಿದ್ದುದ್ದು ಕಂಡುಬರುತ್ತದೆ. ತಮ್ಮ ನಿರೀಕ್ಷೆ ಆ ವ್ಯವಸ್ಥೆಗೆ ಪ್ರತಿಕೂಲವಾದರೆ ಅದು ತನ್ನ ಪಾಲನ್ನು ಬಿಟ್ಟು ಔದಾರ್ಯ ತೋರಿದ ರಾಜರೂ ಇದ್ದರು. ಎಲ್ಲೆಲ್ಲಿ ರಾಜರಿಗೆ ಈ ಮಧ್ಯವರ್ತಿಗಳಿಲ್ಲವೋ, ಅಲ್ಲಿ ರಾಜ್ಯ ನೀರಾವರಿಯ ಕುರಿತು ನೇರ ಕಾರ್ಯವಹಿಸಿತ್ತೆಂದು ತೋರುತ್ತದೆ. ಉದಾಹರಣೆಗೆ ಒಂದು ಶಾಸನದಲ್ಲಿ ವಿವರಿಸಿದಂತೆಯೇ ಸ್ಥಾನಿಕ ಅಧಿಕಾರಿ ಕೆರೆಯ ನಿರ್ಮಾಣದ ಸಲುವಾಗಿ ಕೃಷಿಕರಿಗೆ

ಅತಿಯಾದ ತೆರಿಗೆ ಹಾಕಿದಾಗ ಅಲ್ಲಿ ಕೃಷಿ ನಿಂತುಹೋದಾಗ ರಾಜ್ಯ ತೆರಿಗೆಗಳನ್ನು ಕಡಿಮೆ ಮಾಡಿಸಿದ್ದಲ್ಲದೆ ಕೆರೆಯನ್ನೂ ರಿಪೇರಿಮಾಡುತ್ತದೆ.[16]

ಅರ್ಥಶಾಸ್ತ್ರವು ರಾಜನು ಜನಪದಗಳಲ್ಲಿ ಆಣೆಕಟ್ಟುಗಳನ್ನು, ಕೆರೆಗಳನ್ನು ಕಟ್ಟಿಸಬೇಕು, ಇಲ್ಲಿ ಕಟ್ಟಿಸುವವರಿಗೆ ಸ್ಥಳ, ಉಪಕರಣ ಮುಂತಾದವನ್ನು ಕೊಟ್ಟು ಸಹಕರಿಸಬೇಕು, ಆದರೆ ನೀರಿನಲ್ಲಿರುವ ವಿಕ್ರಯ ವಸ್ತುಗಳ ಮೇಲೆ ಮಾತ್ರ ಅವನಿಗೆ ಅಧಿಕಾರ ಎನ್ನುತ್ತದೆ.[17] ರಾಜನು ತನ್ನ ರಾಜ್ಯವು ಕೇವಲ ದೇವಮಾತೃಕೆ (ಮಳೆನೀರನ್ನಾಶ್ರಯಸಿದ ಭೂಮಿ) ಯಾಗದಂತೇ ನೋಡಿಕೊಳ್ಳಬೇಕು, ಅದಕ್ಕಾಗಿ ತಟಾಗಗಳನ್ನು ಕಟ್ಟಿಸಿ ನದೀಮಾತೃಕೆ (ನೀರಾವರಿಯನ್ನಾಶ್ರಯಿಸಿದ ಭೂಮಿ) ಯನ್ನಾಗಿ ಮಾಡಬೇಕು ಎಂಬ ನಿರ್ದೇಶನಗಳೂ ಇವೆ.[18] ಇವೆಲ್ಲ ಪ್ರಾಚೀನ ಕಾಲದವಾದರೆ ಮಧ್ಯಕಾಲದಲ್ಲಿನ ಸ್ಮೃತಿಗಳು ರಾಜನು ನದೀಮಾತೃಕೆಯಾದ ಭೂಮಿಯುಳ್ಳ ರಾಜ್ಯವನ್ನೇ ಆಯ್ದುಕೊಳ್ಳಬೇಕೆನ್ನುತ್ತವೆ.

ಚಾರಿತ್ರಿಕ ಕಾಲದಲ್ಲಿ ಅನೇಕ ಮಹಾರಾಜರು ಹಾಗೂ ಮಹಾರಾಜಾಧಿರಾಜರೂ ಅಲ್ಲಲ್ಲಿ ನೇರವಾಗಿ ಕೆರೆಗಳ ದಾನದಲ್ಲಿ ತೊಡಗಿಸಿಕೊಂಡಿದ್ದು ಕಂಡುಬರುತ್ತದೆ. ಆದರೆ ಇಂಥ ಪ್ರಯತ್ನಗಳನ್ನು ಒಂದು ಆಶ್ರಯದಾತರಂತೇ ಕೆರೆಕಟ್ಟಿಸಿ ಅಥವಾ ರಿಪೇರಿ ಮಾಡಿಸಿ ದಾನ ನೀಡಿದ್ದರೇ ವಿನಃ ಅದರ ನಿರ್ವಹಣೆಯ ಜವಾಬ್ದಾರಿಯನ್ನು ನೇರವಾಗಿ ರಾಜ್ಯಾಧಿಕಾರಿ ಇಲಾಖೆಯ ಮೂಲಕ ಹೊತ್ತಿರಲಿಲ್ಲ. ಮಹಾರಾಜರಂತೇ ಅವರ ಕುಟುಂಬದ ಸದಸ್ಯರೂ ಇಂಥ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದುದನ್ನು ಗಮನಿಸಿದರೆ ಅದಕ್ಕಿರುವ ಖಾಸಗಿ ಆಯಾಮಗಳು ಸ್ಪಷ್ಟವಾಗುತ್ತವೆ. ಇಂಥ ಕಾರ್ಯಗಳು ಮಹಾರಾಜರ ಪ್ರತಿಷ್ಠೆಯನ್ನು ಹೆಚ್ಚಿಸಿದ್ದವೆಂಬುದು ಅವರ ಶಾಸನಗಳಿಂದ ತಿಳಿದು ಬರುತ್ತದೆ. ಈ ಮಹತ್ಕಾರ್ಯವನ್ನು ಆಚಂದ್ರಾರ್ಕವಾಗಿ ದಾಖಲಿಸಲೆಂದೇ ಶಿಲಾಶಾಸನಗಳನ್ನು ನಡೆಸಿದರು. ಜುನಾಗಢದಲ್ಲಿ ಇಂಥದೊಂದು ಕೆರೆಯನ್ನು ಅಶೋಕನ ಕಾಲದಲ್ಲಿ ಕಟ್ಟಿಸಿದ್ದು ಅದು ಒಡೆದು ಹೋದ ನಂತರ ಶಕ ಕ್ಷಾತ್ರಪ ರುದ್ರದಾಮನ್ ಅದನ್ನು ಇನ್ನೂ ವಿಸ್ತರಿಸಿ ಕಟ್ಟಿಸುತ್ತಾನೆ. ಅದು ಪುನಃ ಒಡೆದು ಹೋಗಲಾಗಿ ಸ್ಕಂಧಗುಪ್ತನು ಅದನ್ನುಇನ್ನೂ ದೃಢಗೊಳಿಸಿ ಕಟ್ಟಿಸಿದನು. ಈ ಸಂಬಂಧಿಸಿ ಅವರು ನಡೆಸಿದ ಶಾಸನಗಳು ಇದನ್ನೊಂದು ಹೆಗ್ಗಳಿಕೆ ಎಂಬಂತೆ ಸಾರುತ್ತವೆ. ಇದೇ ರೀತಿ ಕದಂಬ ಅರಸರಾದ ಮಯೂರವರ್ಮನ ಚಂದ್ರವಳ್ಳಿ ಕೆರೆ, ರವಿವರ್ಮನ ಗುಡ್ನಾಪುರ ಕೆರೆಗಳೂ ಸುಪ್ರಸಿದ್ದವಾಗಿವೆ. ಈ ಸಂಪ್ರದಾಯವನ್ನು ನಂತರದ ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ರಾಜರೂ ಮುಂದುವರಿಸಿದರು. ಬುಕ್ಕರಾಯನ ೧೩೮೮ರ ಕಲ್ಲೂಡಿಯ ಶಾಸನದಲ್ಲಿ ಆತನು ಸಿರುವರ ಕೆರೆಗೆ ಹೆನ್ನೆ ನದಿಯಿಂದ ನೀರು ಬರುವ ವ್ಯವಸ್ಥೆ ಮಾಡಿದ್ದಾಗಿ ಹೇಳಿದೆ.[19] ವಿಜಯನಗರದ ಕಾಲದಲ್ಲಿ ಕೆರೆಗಳು ಸಂಖ್ಯೆಯಲ್ಲೂ, ಗಾತ್ರದಲ್ಲೂ, ಹೆಚ್ಚಿದವು. ಆದರೆ ಈ ಬೆಳವಣಿಗೆಯಲ್ಲಿ ರಾಯರ ನೇರವಾದ ಪಾತ್ರ ಅತ್ಯಲ್ಪ. ರಾಯರ ಆಶ್ರಯ ಹಾಗೂ ಸಮ್ಮತಿಯನ್ನು ಪಡೆದು ಆತನ ಕೆಳಗಿನವರು ಹಾಗೂ ಸ್ಥಾನಿಕ ವ್ಯಕ್ತಿ ಮತ್ತು ಸಂಸ್ಥೆಗಳು ಈ ಕೆಲಸವನ್ನು ಸಾಧಿಸಿದರು. ಇಂಥ ಕಾರ್ಯಗಳಿಂದ ಸಾಮ್ರಾಜ್ಯದ ಕೃಷಿ ವಿಸ್ತರಣೆಯಾದರೂ ರಾಜ್ಯಕ್ಕೆ ಅದರ ನೇರ ಪ್ರಯೋಜನವೇನೂ ಇರಲೇಬೇಕೆಂದಿರಲಿಲ್ಲ. ಏಕೆಂದರೆ ಖಾಸಗಿ ಜವಾಬ್ದಾರಿ ಸಂಸ್ಥೆಗಳಾದ ದೇವಾಲಯ, ಅಗ್ರಹಾರ ಮುಂತಾದವುಗಳು ಇದರ ಫಲಾನುಭವಿಗಳಾಗಿದ್ದರು. ಸಾಮ್ರಾಜ್ಯಕ್ಕೆ ಇವರನ್ನು ಪೋಷಿಸಿದ ಪುಣ್ಯ ಹಾಗೂ ಅದರಿಂದ ಸಿಗಬಹುದಾದ ಮಾನ್ಯತೆಯೇ ಬಹುಮುಖ್ಯವಾಗಿತ್ತು.

ಅಂದಿನ ಸಾಮ್ರಾಜ್ಯವು ನೀರಾವರಿ ಹಾಗು ಕೃಷಿ ವ್ಯವಸ್ಥೆಗಳ ಸಂಬಂಧಿಸಿ ಇಂದಿನ ರೀತಿಯ ಒಂದು ಕೇಂದ್ರೀಕೃತ ಕಾರ್ಯಕ್ರಮವನ್ನು ಹೊಂದಿರಲಿಲ್ಲ. ಅಂದ ಮಾತ್ರಕ್ಕೇ ಈ ಕುರಿತು ಅದಕ್ಕೊಂದು ಕಾರ್ಯಕ್ರಮವೇ ಇರಲಿಲ್ಲ ಎಂದರೆ ತಪ್ಪಾಗುತ್ತದೆ. ರಾಜ್ಯದ ತುಂಬೆಲ್ಲ ನಾನಾ ರೀತಿಯ ಕರಗಳನ್ನು, ಸುಂಕಗಳನ್ನು ವ್ಯವಸ್ಥಿತವಾಗಿದ ಎತ್ತುತ್ತಿದ್ದ ಮಹಾರಾಜರಿಗೆ ರಾಜ್ಯದ ಸಮೃದ್ಧಿಯ ಕುರಿತು ನಿರೀಕ್ಷೆಗಳೇ ಇರಲಿಲ್ಲ ಎಂದರೆ ಸರಿಯಾಗಲಾರದು. ಆದರೆ ಮಧ್ಯಕಾಲದಲ್ಲಿ ಈ ನಿರೀಕ್ಷೆಗಳೇ ಇರಲಿಲ್ಲ ಎಂದರೆ ಸರಿಯಾಗಲಾರದು. ಆದರೆ ಮಧ್ಯಕಾಲದಲ್ಲಿ ಈ ನಿರೀಕ್ಷೆಗಳು ಈಡೇರುತ್ತಿದ್ದ ರೀತಿ ವಿಶಿಷ್ಟವಾಗಿತ್ತು. ಅದನ್ನು ಕೇಂದ್ರೀಕರಣ ಅಥವಾ ವಿಕೇಂದ್ರೀಕರಣ ಎಂಬ ಪರಿಭಾಷೆಗಳ ಮೂಲಕವೇ ಅರ್ಥೈಸುವುದು ಸಮಂಜಸವಾಗಲಾರದು. ಸಾಮ್ರಾಜ್ಯಗಳು ಮೇಲ್ಮಟ್ಟದ ಪ್ರಭುತ್ವಗಳಾಗಿದ್ದವೇ ಹೊರತೂ ಪರಿಪೂರ್ಣ ಅಧಿಕಾರ

ಕೇಂದ್ರಗಳಾಗಿರಲಿಲ್ಲ. ಮಹಾರಾಜರು ಸ್ಥಾನಿಕ ರಾಜ್ಯಗಳನ್ನು ತಮ್ಮ ಆಳ್ವಿಕೆಯಲ್ಲಿ ನೆಲೆಗೊಳಿಸುವಾಗ ಅವುಗಳ ಆಳ್ವಿಕೆಯನ್ನೂ ನಾಶಮಾಡಲಿಲ್ಲ. ಬದಲಾಗಿ ಅವುಗಳ ಆಳ್ವಿಕೆಯಲ್ಲಿ ತಾವೊಂದು ಮೇಲ್ಮಟ್ಟದ ಶಾಸನಾಧಿಕಾರಿಗಳಾಗಿ ತಮ್ಮ ಮಾನ್ಯತೆಯನ್ನು ಸ್ಥಾಪಿಸಿದವು. ಸ್ಥಾನಿಕ ರಾಜರನ್ನು ಇವರ ಅಧಿಕಾರಿಗಳೆಂದಾಗಲೀ, ಆಡಳಿತ ಘಟಕಗಳನ್ನು ವಿಕೇಂದ್ರಿಕೃತ ವ್ಯವಸ್ಥೆ ಎಂದಾಗಲೀ ಕೆರಯುವಷ್ಟರ ಮಟ್ಟಿಗ ಸಾಮ್ರಾಜ್ಯಗಳ ನಿರ್ದೇಶನ ಇವುಗಳಲ್ಲಿ ಇದ್ದಂತೆ ತೋರುವುದಿಲ್ಲ. ಪ್ರಾದೇಶಿಕವಾಗಿ ನಿರ್ಮಾಣವಾದ ಈ ವ್ಯವಸ್ಥೆಗಳು ಮೇಲ್ಮಟ್ಟದ ಒಂದು ಪ್ರಭುತ್ವ ಇಲ್ಲದೆಯೂ ನಡೆದುಕೊಂಡು ಬರುವ ತಂತ್ರವನ್ನು ಹೊಂದಿದ್ದವು. ಮೇಲ್ಮಟ್ಟದ ಪ್ರಭುತ್ವದೊಳಗೆ ಅವು ಬಂದಾಗ ಪ್ರಾದೇಶಿಕ ಕೃಷಿ ಸಮಾಜಕ್ಕೆ ಹೊಸ ಆರ್ಥಿಕ ಮತ್ತು ಆಡಳಿತಾತ್ಮಕ ಆಯಾಮಗಳು ಸಿಕ್ಕು ಅದು ಬೆಳೆಯುತ್ತಿತ್ತು ಹಾಗೂ ರಾಜ್ಯಗಲ ನಿರಂತರ ಪೋಷಣೆಯೂ ಅವುಗಳು ಉಳಿದುಕೊಂಡು ಬರಲು ಕಾರಣವಾಯಿತು ಎಂಬುದೂ ಗಮನಿಸಬೇಕಾದ ವಿಷಯ. ಮೇಲ್ಮಟ್ಟದ ಪ್ರಭುತ್ವಗಳು ಕೂಡ ಈ ವ್ಯವಸ್ಥೆಗಳನ್ನು ಪೋಷಿಸಿ ತಮ್ಮ ಹಿತಾಸಕ್ತಿಯನ್ನು ಕಂಡುಕೊಂಡವು. ಮಧ್ಯಕಾಳದ ರಾಜ್ಯವೇ ಹೀಗೆ ವ್ಯವಸ್ಥಿತವಾಗಿದ್ದಾಗ ರಾಜ್ಯಕ್ಕೇ ಆರ್ಥಿಕ ಉತ್ಪಾದನೆಯಷ್ಟೇ ತಮ್ಮ ಅಧಿಕಾರಕ್ಕೆ ಮಾನ್ಯತೆ ಒದಗಿಸುವ ದಾನಗಳೂ ಮುಖ್ಯವಾಗಿದ್ದವು.

ಸಾಮ್ರಾಜ್ಯಗಳಲ್ಲಿ ಎರಡು ಪ್ರಕಾರದ ಆಡಳಿತಗಾರರಿದ್ದರು. ಮೊದಲನೆಯ ಪ್ರಕಾರದವರು ಮಹಾರಾಜರಿಂದ ನೇಮಕವಾದವರಾದರೆ ಎರಡನೆಯ ಪ್ರಕಾರದವರು ಮಹಾರಾಜರು ತಮ್ಮ ರಾಜ್ಯ ವಿಸ್ತರಣೆಯಲ್ಲಿ ಒಳಗೊಂಡ ಅಧೀನ ರಾಜರಾಗಿದ್ದರು. ಮೊದಲನೆಯವರು ಕೇಂದ್ರ ನಿರ್ದೇಶಿತ ಅಧಿಕಾರಿಗಳೆಂದು ಗುರುತಿಸಬಹುದು. ಅವರಲ್ಲಿ ಅಧ್ಯಕ್ಷ ಅಧಿಕಾರ, ಪಸಾಯಿತ, ಕರಣ, ದಂಡನಾಯಕ ಮುಂತಾದವರು ೧೩ನೇ ಶತಮಾನದವರೆಗೆ ಕಾಣಿಸಿಕೊಳ್ಳುತ್ತಾರೆ. ಎರಡನೆಯ ಪ್ರಕಾರದವರನ್ನು ಬಿಗುವಾದ ಆಡಳಿತ ಮಾಡಬಯಸಿದ ಮಹಾರಾಜರು ಕೇಂದ್ರದ ಅಧಿಕಾರಿಗಳೆಂದು ನಿಯಮಿಸಿ ಅವರನ್ನು ಸಾಮಂತರೆಂದು ಕರೆದಿದ್ದು ಕಂಡುಬರುತ್ತದೆ. ಅದಿಲ್ಲದಿದ್ದಲ್ಲಿ ಅವರಿಗೇ ಪಂಚಮಹಾಶಬ್ದ (ರಾಜತ್ವದ) ಮಾನ್ಯತೆ ನೀಡಿ ಅವರ ವಿಧೇಯತೆಯನ್ನು ಗಟ್ಟಿಮಾಡಿದ್ದರು. ವಿಜಯನಗರ ಅರಸರು ನಾಯಕ ಪದ್ಧತಿಯನ್ನು ಅಳವಡಿಸಿ ಎರಡನೆಯ ಪ್ರಕಾರದವನ್ನು ಅಳಿಸಿದರೂ ನಾಯಕರು ಸಾಮಂತ ಪದ್ಧತಿಯ ಮುಂದುವರಿಕೆಗಳಾಗಿದ್ದರು. ಹಾಗಾಗಿ ಈ ಸಾಮ್ರಾಜ್ಯಗಳಲ್ಲಿ ಪ್ರಾದೇಶಿಕ ಅರಸರೇ ನೇರ ಆಳ್ವಿಕೆ ನಡೆಸುವವರಾಗಿದ್ದರು ಎಂಬುಸು ಸ್ಪಷ್ಟ. ಈ ಎರಡು ಪ್ರಕಾರದ ಆಡಳಿತಗಾರರೂ ಕೆರೆಗಳನ್ನು ಕಟ್ಟಿಸುವಲ್ಲಿ ಆಸಕ್ತಿವಹಿಸಿದ್ದು ಶಾಸನಗಳಲ್ಲಿ ಬಿಂಬಿತವಾಗಿದೆ.

ಮೊದಲ ಪ್ರಕಾರದ ಅಧಿಕಾರಿಗಳು ಸ್ವ ಇಚ್ಛೆಯಿಂದಲೇ ಇಲ್ಲ ಮೇಲಿನವರ ನಿರ್ದೇಶನದ ಮೇರೆಗೋ ಕೆರೆ ಕಟ್ಟಿಸಿದ್ದರು. ಕಲ್ಯಾಣ ಚಾಲುಕ್ಯರ ಮೊದಲನೆಯ ಸೋಮೇಶ್ವರನ ಕಾಲದಲ್ಲಿ ಒಬ್ಬ ಅಧಿಕಾರಿಯು ಉತ್ತರ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ೧೩ ಕೆರೆಗಳನ್ನು ಕಟ್ಟಿಸಿದನು.[20] ವೀರದೇವನೆಂಬ ಹೊಯ್ಸಳ ಅಧಿಕಾರಿ ೧೧೮೬ರಲ್ಲಿ ಒಂದು ಪಟ್ಟಣವನ್ನು ಕಟ್ಟಿಸಿ ಅದರ ಸುತ್ತಮುತ್ತ ನಾಲ್ಕು ಕೆರೆಗಳನ್ನು ಕಟ್ಟಿಸಿದನು ಹಾಗೂ ಕೆರೆಗಳನ್ನು ಕಟ್ಟಿಸಬಯಸುವ ವ್ಯಕ್ತಿಗಳಿಗೆ ಕೊಡುಗೆಗಳನ್ನು ನೀಡುವುದಾಗಿ ಸಾರಿದನು.[21] ಕೆರೆ ಕಟ್ಟುವ ವ್ಯಕ್ತಿಗಳಿಗೆ ಕೊಡುಗೆಗಳನ್ನು ನೀಡುವ ಪದ್ಧತಿಯನ್ನು ಖಾಸಗಿ ನಿರ್ಮಾತೃಗಳ ಪ್ರೋತ್ಸಾಹಕ್ಕಾಗಿ ರಾಜ್ಯ ಅಳವಡಿಸಿಕೊಂಡಿದ್ದು ಈ ಶಾಸನದಿಂದ ವಿದಿತವಾಗುತ್ತದೆ. ೧೫೨೭ ರ ಒಂದು ಶಾಸನದ ಪ್ರಕಾರ ತಿಮ್ಮರಸ ಎಂಬವನು ನಾಗರಸ ಎಂಬ ತನ್ನ ಮೇಲಧಿಕಾರಿಯ ಆದೇಶದ ಮೇರೆಗೆ ಅರಸಿಕೆರೆ ಕೆರೆಯ ತೂಬನ್ನು ರಿಪೇರಿ ಮಾಡಿಸಿದನು.[22] ಬಾಗಳಿಯ ಹಿರಿಯ ಕೆರೆಯ ರಿಪೇರಿಗೆ ಎರಡು ದಂಡನಾಯಕರು ನೂರು ವರ್ಷದ ಅಂತರದಲ್ಲಿ ರಾಜ್ಯದ ತೆರಿಗೆಯ ಒಂದು ಭಾಗವನ್ನು ನೀಡಿದ್ದರು.[23]ಒಮ್ಮೆ ಎರಡು ಹಳ್ಳಿಗಳಲ್ಲಿ ಹಳ್ಳಿಗರಿಂದ ವಸೂಲಾದ ಅನಧಿಕೃತ ತೆರಿಗೆಯನ್ನು ಅಲ್ಲಿನ ಕೆರೆಗೇ ರಾಜ್ಯವು ವೆಚ್ಚಮಾಡಿದ್ದು ಕಂಡುಬರುತ್ತದೆ.[24]ಮಹಾರಾಜನನ್ನೋ ಇಲ್ಲ ಇಂಥ ಅಧಿಕಾರಿಗಳನ್ನೋ ಸ್ಥಾನಿಕ ಜನರು ವಿನಂತಿಸಿಕೊಂಡೂ ಅವರು ಈ ಕಾರ್ಯಗಳನ್ನು ಮಾಡಿದ್ದಿದೆ. ೧೦೮೦ರ ಶಾಸನವೊಂದು ತಿಳಿಸುವಂತೇ ಬನ್ನೂರಿನ ಮಹಾಜನರು ತಂಬರಸನೆಂಬ ಅಧಿಕಾರಿಯಲ್ಲಿ ಬಂದು ತಮ್ಮ ಊರಿನ ಕೆರೆ ಯಾರು ಕಟ್ಟಿದರೂ ನಿಲ್ಲುತ್ತಿಲ್ಲ, ತಂಬರಸನ ಹೆಸರಲ್ಲಿ ಕಟ್ಟಿದರೆ ನಿಲ್ಲಬಹುದು ಎಂದು ಕೇಳಿಕೊಂಡಾಗ ಆತನು ಜಕ್ಕಿಗೋಸಿ ಎಂಬವನನ್ನು ಈ ಕೆಲಸಕ್ಕೆ ನೇಮಿಸಿ ತನ್ನ ಹೆಸರಿನಲ್ಲಿ ತಂಬಸಮುದ್ರ ಎಂಬ ಕೆರೆ ಕಟ್ಟಿಸಿ ಅದರ ಹೂಳೆತ್ತಿ ಸುಸ್ಥಿತಿಯಲ್ಲಿಡುವ ವ್ಯವಸ್ಥೆಯನ್ನೂ ಮಾಡುತ್ತಾನೆ.[25] ಅಂದರೆ ಸ್ಥಾನಿಕವಾಗಿ ಆ ಹಳ್ಳಕ್ಕೆ ಕಟ್ಟೆ ಕಟ್ಟಿ ನಿಲ್ಲಿಸುವುದು ಅಸಾಧ್ಯವಾದಾಗ ರಾಜ್ಯದ ಅಧಿಕಾರಿಗಳು ಸಹಾಯ ಮಾಡಿದ್ದು ಕಂಡು ಬರುತ್ತದೆ.

[1]ದಿಕ್ಷತ ಜಿ.ಎಸ್ ಕುಪ್ಪಸ್ವಾಮಿ ಜಿ.ಆರ್ ಮತ್ತು ಮೋಹನ್ ಎಸ್.ಕೆ. (*Tank Irrigation in Karnataka* ಬೆಂಗಳೂರು, ೧೯೯೩.

[2]ಕೊಟ್ರಯ್ಯ ಸಿ.ಏ.ಎಂ.ಏ *Irrigation Systrms Under vijayangara Empire* ಮೈಸೂರು, ೧೯೯೫.

[3]ಕುಪ್ಪಸ್ವಾಮಿ ಜಿ.ಆರ್.ಅವರು Quarterluy Journal of Mythic Society (QJMS) ನಿಯತಕಾಲಿಕೆಯಲ್ಲಿ LXXIV, NO. ೧;LXXVII, No.೪; LCCCI, NO.೩ &೪; LXXXII, NO. ೩&೪; LXXXIII, NO.೧ ಇವುಗಳಲ್ಲಿ ತಮ್ಮ ಲೇಖನಗಳನ್ನು ಪ್ರಕಟಿಸಿದ್ದಾರೆ.

[4]ದೀಕ್ಷಿತ ಜಿ.ಎಸ್. ಮುಂತಾದವರು, ಪೂರ್ವೋಕ್ಷ, ಪು.೧೬೬

[5]ಅದೇ, ಪು.೧೮೨-೮೪

[6]ಡೇವಿಡ್ ಲಡ್ಡನ್, (Ed) Argicultural Production and Indian History, OUP, Delhi, ೧೯೯೪, ವು ೩-೫.

[7]ದೀಕ್ಷಿತ ಜಿ.ಎಸ್.ಎ.ಮುಂತಾದವರು, ಪೂರ್ವೋಕ್ಷ. ಪು.೧೬೬-೬೭.

[8]ನಖ್ವಿ ಎಸ್. "Marx on Pre British Indian Society and Econovy" in *Science and Human Progress,* Popular Prakashan, ೧೯೭೪, ಪು.೪೮-೭೬.

[9]ದೀಕ್ಷಿತ ಜಿ.ಎಸ್. *Local Self -Government in Medieval Karnataka* ಧಾರವಾಡ, ೧೯೬೪ ಹಾಗೂ ವೆಂಕಟರತ್ನಂ

[10]ಬರ್ಟನ್ ಸ್ಟೈನ್, "The Segmantary State: Intereem Reflections" in *The State in India ೧೦೦–೧೭೦೦ ಸಂ. ಹರ್ಮನ್ ಕುಲ್ಕೆ,* OUT ದೆಹಲಿ ೧೯೯೭, ಪು. ೧೩೪-೬೨.

[11]ಬರ್ಟನ್ ಸ್ಟೈನ್, *All the Kings Mana*, ಮದ್ರಾಸ್ ೧೯೮೪, ಪು.೧೭೩-೧೭೮.

[12]ಶರ್ಮ ಆರ್.ಎಸ್. *Urban Decay* ದೆಹಲಿ, ೧೯೮೭, ಪು.೧೭೩.

[13]ಉದಾಹರಣೆಗೆ ನೋಡಿ ಝಾ ಡಿ.ಎನ್.. (ed) *Feuddal Social Formation* ೧೯೮೭, ರಲ್ಲಿ ನಂದಿ ಆರ್.ಎನ್. "Agrarian Growth and Social Conflict in Early India" ಚೆ.೨೩೯-೮೧ ಹಾಗೂ ಕಾರಾಶಿಮಾ ನೊಬೊರು, "The Prevlence of Private Land Holding in the Lower Kaveri Valley" ಪು.೧೨೧-೧೩೯.

[14]ಚಟ್ಟೋಪಾಧ್ಯಾಯ ಬಿ.ಡಿ. *The Making of Early Medieval India* OUP ದೆಹಲಿ, ೧೯೯೪, ಪು.೪೨-೫೭ ರಲ್ಲಿ ಮಧ್ಯಕಾಲೀನ ರಾಜಸ್ಥಾನದ ನೀರಾವರಿಯ ಕುರಿತು ನೀಡುವ ವಿವರಗಳು ವಿಶೇಷವಾಗಿ ಭಾವಿ ಮತ್ತು ಅರಘಟ್ಟಗಳನ್ನು ಕುರಿತು ಇದ್ದರೂ ಅವರು ಕೃತಕ ನೀರಾವರಿಯ ಸಾಮಾಜಿಕ ಸಂಘಟನೆಯ ಬಗ್ಗೆ ಕೂಡ ಚರ್ಚಿಸುತ್ತಾರೆ. ಯಾರು ಇವುಗಳಿಗೆ ದಾನ ನೀಡಿದರು ಮತ್ತು ಯಾರು ಅವುಗಳ ಲಾಭ ಪಡೆದರು ಎಂಬುದು ನೀರಾವರಿ ವ್ಯವಸ್ಥೆಯ ಸಾಮಾಜಿಕ ಮುಖವನ್ನು ಅರಿಯಲು ಬಹಳ ಮುಖ್ಯವಾದ ಪ್ರಶ್ನೆಗಳು ಎನ್ನುತ್ತಾರೆ. ಹಾಗೂ ತೀರ ಸ್ಥಾನಿಕ ಮಟ್ಟದಲ್ಲಾದರೂ ನೀರಾವರಿ ಆರ್ಥಿಕ ಮತ್ತು ಸಾಮಾಜಿಕ ಶಕ್ತಿಯನ್ನು ಉತ್ಪಾದಿಸಿತ್ತು ಎಂಬುದನ್ನು ತೋರಿಸುತ್ತಾರೆ.

[15]ಕುಪ್ಪಸ್ವಾಮಿ ಜಿ.ಆರ್. "Some Aspects of Irrigation System in Karnataka" QJMS ಸಂ.೪, ಪು.೪೦೪-೪೨೦.

[16]ಗೋಪಾಲ್ ಬಿ.ಆರ್. Vijayanagar Inscriptions Vol II Karnataka ೫೯೨.

[17]ಅರ್ಥಶಾಸ್ತ್ರ ೨.೨೨.೧೯ ಜನಪದ ನಿವೇಶ: ಅರ್ಥಶಾಸ್ತ್ರವು ಬೇರೆ ಬೇರೆ ಪ್ರಮಾಣದಲ್ಲಿ ನೀರಾವರಿಗೆ ಒಳಪಟ್ಟ ಭೂಮಿಗೆ ಬೇರೆ ಬೇರೆ ತೆರಿಗೆಗಳನ್ನು ನಿರ್ಧರಿಸುತ್ತದೆ.

[18]ಕಾಣೆ ಪಿ.ವಿ. History of Dharmasastras Vol III Poona ೧೯೯೩ ಪು.೧೬೨.

[19] Epigraphia Carnatika (EC) Vol X ಗೌರಿಬಿದನೂರು, ೬.

[20] South Indian Inscriptions (SII) no XI ಸಂ.೧೦೩, ನಂದವಾಡಿಗೆ, ಬಿಜಾಪುರ ಜಿಲ್ಲೆ. ಸೋಮೇಶ್ವರನ ಅಧಿಕಾರಿ ಭಾವನ ಗಂಧವಾರಣ ಎಂಬ ಬಿರುದು ಉಳ್ಳವನೊಬ್ಬ ವ್ಯಕ್ತಿ.

[21] ECV ಬೇಲೂರು, ಸಂ.೭-೧೭೫.

[22] SII IX, ii ಸಂ. ೭-೧೭೫.

[23] SII, IX,I, ಸಂ.೧೭೩, ೧೯೨,ಕ್ರಿ.೧೧೦೭ ರಲ್ಲಿ ದಂಡನಾಯಕ ಬಮರರಸ ಬಾಗಳಿಯ ಪನ್ನಾಯದ ಸುಂಕದಲ್ಲಿ ತಿಂಗಳಿಗೊಂದು ಗದ್ಯಾಣವನ್ನು ಕೆರೆ ರಿಪೇರಿಗೆ ನೀಡಿದರು. ಕ್ರಿ.೧೧೧೫ ದಂಡನಾಯಕ ತಿಕ್ಕಭಟ್ಟನು ಹಿರಿಯ ಕೆರೆಯ ರಿಪೇರಿಗೆ ಸುಂಕವನ್ನು ಬಿಟ್ಟನು.

[24] EC, XI, ಮೊಳಕಾಲ್ಮುರು, ೪ ಮತ್ತು ೫ ಮುರಡಿ ಮತ್ತು ಕರಡಿಹಳ್ಳಿ.

[25] Mysore Archaeological Reports, ೧೯೩೦, ಸಂ.೭೮.

(೨)

**ಕೆರೆ ನೀರಾವರಿ ವ್ಯವಸ್ಥೆಯ ಪ್ರಾದೇಶಿಕ ನೆಲೆಗಳು**

ಬಹುಶಃ ಎರಡನೆಯ ಪ್ರಕಾರದ ಆಡಳಿತಗಾರರು ಈ ಮೇಲಿನ ಎಲ್ಲರಿಗಿಂತ ಹೆಚ್ಚಿನ ಹಿತಾಸಕ್ತಿಯನ್ನು ಕೆರೆಗಳ ಸಂಬಂಧಿಸಿ ಹೊಂದಿದ್ದರುಲ. ಏಕೆಂದರೆ ಪ್ರಾದೇಶಿಕವಾಗಿ ರಾಜ್ಯ ನಿರ್ಮಾಣದ ನೇತೃತ್ವ ವಹಿಸಿದವರೇ ಅವರು. ಇವರು ಪ್ರಾದೇಶಿಕ ಆಳುವ ಮನೆತನಗಳಾಗಿದ್ದು ಪ್ರಾದೇಶಿಕ ಕೃಷಿ ಸಮೃದ್ಧಿ ಹಾಗೂ ಸ್ಥಾನಿಕ ಮುಂದಾಳತ್ವದ ಆಳುವ ವರ್ಗವನ್ನು ಬೆಳೆಸುತ್ತ ತಾವೂ ತಮ್ಮ ಪ್ರಭುತ್ವವನ್ನು ಬೆಳೆಸಿಕೊಂಡರು. ಮಧ್ಯಕಾಲದ ಮೇಲ್ಮಟ್ಟದ ಪ್ರಭುತ್ವವನ್ನು ಸ್ಥಾಪಿಸಿದ ಕದಂಬರಾದಿಯಾಗಿ ಎಲ್ಲ ಮನೆತನಗಳೂ ಮೂಲತಃ ಈ ಅವಸ್ಥೆಯಿಂದಲೇ ಮೇಲೇರಿ ಬಂದವರಾಗಿದ್ದರು. ಇವರು ತಾವು ಆಳಿದ ಪ್ರದೇಶದಲ್ಲಿ ಸ್ವತಃ ಕೆರೆಗಳನ್ನು ಕಟ್ಟಿ ನಿರ್ವಹಣೆಗಳಿಗಾಗಿ ತಮ್ಮ ಸಂಪನ್ಮೂಲದಿಂದಲೇ ಕೊಡುಗೆಗಳನ್ನು ನೀಡಿದರು ಅಥವಾ ಅವುಗಳನ್ನು ‘ಕಟ್ಟಿದವರಿಗೆ ಸಹಾರ ಮಾಡಿ ಕೊಡುಗೆಗಳನ್ನು ಮಂಜೂರು ಮಾಡಿದರು. ಈ ನೀತಿ ಅವರು ಸಾಮ್ರಾಟರಾಗಿ ಬೆಳೆದ ಮೇಲೂ ಒಂದು ವಿಸ್ತೃತ ರೂಪವನ್ನು ಪಡೆದ ಪರಿಣಾಮವಾಗಿಯೇ ಇಂಥ ಸ್ಥಾನಿಕ ಹಿತಾಸಕ್ತಿ ಇಲ್ಲದ ಅವರ ಅಧಿಕಾರಿ ವರ್ಗವನ್ನೂ ಕೆರೆಗಳ ನಿರ್ಮಾಣದಲ್ಲಿ ತೊಡಗಿಸಿದರು. ಕರ್ನಾಟಕದಲ್ಲಿ ಮಹಾರಾಜರು ಹಾಗೂ ಅವರ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಂಡಿದ್ದೇ ಹೊಯ್ಸಳರ ಕೇಂದ್ರಭಾಗವಾದ ಇಂದಿನ ಹಾಸನ ಜಿಲ್ಲೆಯಲ್ಲಿ, ಹೊಯ್ಸಳರ ರಾಜ್ಯ ನಿರ್ಮಾಣ ಈ ಪ್ರದೇಶದಲ್ಲೇ ನಡೆಯಿತೆಂದನ್ನು ಗಮನಿಸಿದರೆ ಈ ಮೇಲಿನ ಪ್ರಕ್ರಿಯೆ ಹೊಲಬಾಗುತ್ತದೆ.

ಕೆರೆಗಳ ಸಂಬಂಧಿಸಿ ಮೇಲ್ಮಟ್ಟದಿಂದ ಸ್ಥಾನಿಕ ಹಂತಕ್ಕೆ ಬಂದಂತೇ ಜನರ ತೊಡಗುವಿಕೆಯ ಸ್ವರೂಪದಲ್ಲಿ ಬದಲಾವಣೆಯಾಗುವುದನ್ನೂ ಗುರುತಿಸಬಹುದು. ಮೂಲತಃ ಕೆರೆನೀರಾವರಿ ಸ್ಥಾನಿಕ ಜನರ ಹಿತಾಸಕ್ತಿಯಾಗಿತ್ತು. ಮೇಲ್ಮಟ್ಟದ ಆಡಳಿತಗಾರನೂ ಹೆಚ್ಚಿನ ಸಂದರ್ಭಗಳಲ್ಲಲಿ ತಮ್ಮ ಊರು ಅಥವಾ ಪ್ರದೇಶಗಳಲ್ಲೇ ಇಂಥ ಕೆರೆಗಳನ್ನು ಕಟ್ಟಿಸಿದ್ದರು. ಊರಿನಲ್ಲಿ ಅಥವಾ ನಾಡಿನಲ್ಲಿಯ ಗಾವುಂಡರ ಸಮೂಹಗಳು, ಅಗ್ರಹಾರಗಳು, ದೇವಾಲಯ ಸಂಸ್ಥೆಗಳು, ವ್ಯಾಪಾರಿ ಶ್ರೇಣಿಗಳು ಮುಂತಾದವು ಬಹುತೇಕ ಕೆರೆಗಳ ನಿರ್ಮಾಣ ಮತ್ತು ನಿರ್ವಹಣೆ ಮಾಡುತ್ತಿದ್ದರು. ಕೆರೆಗಳ ನಿರ್ಮಾಣಕ್ಕೆ ಮೇಲಿನ ಅಧಿಕಾರಿಗಳು ಅಥವಾ ಶ್ರೀಮಂತರನ್ನೂ ಈ ಹಿಂದೆ ಕೆಲವೊಮ್ಮೆ ಪಡೆದರೂ ಅದನ್ನು ನಿರ್ವಹಿಸುವ ಸಂಪೂರ್ಣ ಕರ್ತವ್ಯ ಇಂಥ ಸ್ಥಾನಿಕ ಸಮೂಹಗಳೇ ನಿಭಾಯಿಸುತ್ತಿದ್ದವು. ಈ ಹಂತದಲ್ಲಿ ಕೃಷಿ ಉತ್ಪಾದನೆಯ ಸಂಬಂಧಿಸಿ ಸ್ಥಳೀಯ ಸಾಮೂಹಿಕ ಅಥವಾ ಖಾಸಗಿ ಆಸಕ್ತಿಯೇ ನಿರ್ಣಾಯಕವಾಗಿತ್ತು. ಹಳ್ಳಿಗಳಲ್ಲಿ ಕೆರೆ ಕಟ್ಟಿದ ನಂತರ ಇಂಥ ಕೃಷಿಕರು ಸಾಮೂಹಿಕವಾಗಿ ಕೊಡುಗೆಗಳನ್ನು ನೀಡಿದ ಉದಾಹರಣೆಗಳು ಶಾಶನಗಳಲ್ಲಿ ಸಿಗುತ್ತವೆ. ಬಹುಶಃ ಸಾಮುದಾಯಿಕವಾಗಿ ಕೃಷಿ ಭೂಮಿಯ

ಮೇಲೆ ಒಡೆತನ ಹೊಂದಿದ ಗರುಡ ಪ್ರಜೆಗಳು ಅಥವಾ ಮಹಾಜನರು ಹೊಸ ಭೂಮಿಯನ್ನು ನೀರಾವರಿಗೆ ಅಳವಡಿಸಿ ತಮ್ಮ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದರು. ಬಹುಶಃ ಇಂಥ ಸಮುದಾಯಗಳಲ್ಲೇ ಕೆಲ ವ್ಯಕ್ತಿಗತ ಪ್ರಯತ್ನಗಳು ಶಾಸನಗಳಲ್ಲಿ ದಾಖಲಾಗಿವೆ. ಏಕೆಂದರೆ ನಮಗೆ ಸಿಗುವ ಶಾಸನಗಳಲ್ಲಿ ಇಂಥವೇ ಉದಾಹರಣೆಗಳು ಸಾಕಷ್ಟಿವೆ. ಇಂಥ ವ್ಯಕ್ತಿಗಳು ಊರಿನವರೇ ಆಗಿರುತ್ತಿದ್ದು ಅವರಿಗೆ ಕೆರೆಕೆಳಗಿನ ಗದ್ದೆಯಲ್ಲಿ ಪಾಲುನೀಡಿ ಅಥವಾ ದಶವಂದದಂಥ ಆದಾಯವನ್ನು ನೀಡಿ ಊರಿನ ಸಮುದಾಯಗಳು ಗೌರವಿಸುತ್ತಿದ್ದವು. ಒಂದು ಉದಾಹರಣೆಯಲ್ಲಿ ಕೆರೆಕಟ್ಟಿಸಿ ಕಾಡುಕಡಿದು ಗದ್ದೆ ಮಾಡಿದ ದೇವಸೆಟ್ಟಿ ಎಂಬ ವ್ಯಕ್ತಿಗೇ ಆ ಗದ್ದೆಯನ್ನು ಬಿಟ್ಟು ಕೆರೆಯ ನಿರ್ವಹಣೆಯ ಭಾರವನ್ನೂ ಆತನಿಗೇ ಮಹಾಜನರು ವಹಿಸುತ್ತಾರೆ.[1] ಇಲ್ಲಿ ಮಹಾಜನರಿಗೆ ಏನು ಲಾಭವಾಯಿತು ಎಂಬುದು ತಿಳಿಯುವುದಿಲ್ಲ. ಆದರೆ ವಿಜಯನಗರೋತ್ತರ ಕಾಲದಲ್ಲಿ ಅಗ್ರಹಾರಗಳು ಹಾಗೂ ದೇವಾಲಯಗಳು ತಮ್ಮ ಉತ್ಪಾದನೆಯ ಹೆಚ್ಚಳಕ್ಕಾಗಿ ನೀರಾವರಿ ಕಾರ್ಯವನ್ನು ಹಮ್ಮಿಕೊಂಡಿದ್ದು ಅನೇಕ ಶಾಸನಗಳಲ್ಲಿ ವ್ಯಕ್ತವಾಗಿದೆ. ಕೆಲ ವ್ಯಕ್ತಿಗಳು ಇದನ್ನು ನಡೆಸಿಕೊಟ್ಟು ಕೊಡುಗೆಗಳನ್ನು ಪಡೆದ ಉದಾಹರಣೆಗೂ ಇವೆ. ವ್ಯಕ್ತಿಗತ ಪ್ರತಿಫಲಗಳನ್ನು ಪಡೆದ ಕಾರಣಕ್ಕಾಗಿ ಅವರು ಆ ಕೆರೆಗಳನ್ನು ನಿರ್ವಹಿಸಬೇಕಾಗಿತ್ತು. ತಮಿಳ್ನಾಡಿನಲ್ಲಿ ಹಳ್ಳಿಗಳ ಮಟ್ಟದಲ್ಲಿ ನೀರಾವರಿಯ ಉಸ್ತುವಾರಿ ನೋಡಿಕೊಳ್ಳುವ ಒಂದು ವಿಭಾಗ ಹಲವೆಡೆ ಇತ್ತು. ಆದರೆ ಕರ್ನಾಟಕದಲ್ಲಿ ಈ ಮೇಲಿನ ವ್ಯವಸ್ಥೆಯ ಕುರಿತು ಮಾತ್ರ ಶಾಸನಗಳು ತಿಳಿಸುತ್ತವೆ. ವಿಜಯನಗರ ಕಾಲದ ನಂತರ ಬೆಳೆದುಬಂದ ಆಯಗಾರ ಪದ್ಧತಿಯಲ್ಲಿ ನೀರ್ಗಂಟಿ ಎಂಬೊಬ್ಬ ಅಧಿಕಾರಿ ನೀರಿನ ಹಂಚಿಕೆಗಾಗಿ ಹಳ್ಳಿಗಳಲ್ಲಿ ಇದ್ದುದು ಕಂಡುಬರುತ್ತದೆ. ಆದರೆ ಕೆರೆಗಳ ಹೂಳೆತ್ತುವುದು, ರಿಪೇರಿ ಮುಂತಾದ ಖರ್ಚಿನ ಕೆಲಸಗಳನ್ನೆಲ್ಲ ವ್ಯಕ್ತಿಗಳಿಗೆ ಹಣ, ಭೂಮಿ, ಅಥವಾ ಕರಗಳನ್ನು ನೀಡಿ ವಹಿಸಿಕೊಟ್ಟಿದ್ದರು.

ಈ ರೀತಿ ಕೆರೆಗಳ ನಿರ್ಮಾಣ ಮತ್ತು ನಿರ್ವಹಣೆಯನ್ನು ಹಳ್ಳಿಗಳ ಸಮುದಾಯಗಳು ವ್ಯಕ್ತಿಗಳ ಹಾಗೂ ಖಾಸಗಿ ಆಸ್ತಿಯ ಕಲ್ಪನೆಯ ಮೂಲಕ ಸಾಧಿಸಿದ್ದು ಶಾಸನಗಳಲ್ಲಿ ದಾಖಲಾಗಿದೆ. ಬಹುಶಃ ವ್ಯಕ್ತಿಯೋರ್ವನಿಗೆ ಈ ಜವಾಬ್ದಾರಿಯನ್ನು ವಹಿಸಿಕೊಟ್ಟಾದ ಮೇಲೆ ಈ ಒಪ್ಪಂದವನ್ನು ವ್ಯಕ್ತಿಯಾಗಲೀ, ಸಮುದಾಯವಾಗಲೀ ಮುರಿಯುವಂತಿರಲಿಲ್ಲ. ಈ ವ್ಯವಸ್ಥೆ ೧೯ನೇ ಶತಮಾನದ ವರೆಗೂ ಹಳ್ಳಿಗಳಲ್ಲಿ ಮುಂದುವರಿದುಕೊಂಡು ಬಂದಿತ್ತು. ಕೆರೆಯನ್ನು ನಿರ್ವಹಿಸದಿದ್ದರೆ ವ್ಯಕ್ತಿಗೂ ಕೊಡುಗೆಯನ್ನು ಅನುಭವಿಸುವ ಅಧಿಕಾರ ಹೊರಟುಹೋಗುತ್ತಿತ್ತು. ಬಹುಶಃ ಇದೇ ವಾಸ್ತವದಲ್ಲೇ ರೂಪುಗೊಂಡ ಮಧ್ಯಕಾಲದ ಸ್ಮೃತಿಗಳು ಒಂದು ಗ್ರಾಮದ ಸಭಾಲಯ, ದೇವಾಲಯ, ಕೆರೆ, ಆರಾಮ, ಅರವಟ್ಟಿಗೆ ಮುಂತಾದವನ್ನು ನೋಡಿಕೊಳ್ಳುವುದು ಗ್ರಾಮದ ಕುಲ, ಶ್ರೇಣಿ, ಗಣಗಳ ಧರ್ಮ ಎನ್ನುತ್ತವೆ. ಇಂಥ ಸಮೂಹಗಳು ಒಪ್ಪಿಕೊಂಡ ನಿಯಮಗಳನ್ನು ಸಮಯ ಎಂದು ಕರೆಯಲಾಗಿತ್ತು. ಇವನ್ನು ಲಿಖಿತರೂಪದಲ್ಲಿ ಬರೆದಿಡಬೇಕು, ಇವುಗಳನ್ನು ಪಾಲಿಸದಿದ್ದವರ ಸರ್ವಸ್ವವನ್ನೂ ಕಸಿದುಕೊಂಡು ಗ್ರಾಮದಿಂದ ಓಡಿಸುವ ಹಕ್ಕು ಈ ಸಮೂಹಗಳಿಗಿದೆ, ಸಹಾ ಮಾಡಿದವರಿಗೆ ಪ್ರತಿಫಲ ನೀಡುವ ಹಕ್ಕೂ ಅವರಿಗಿದೆ, ಈ ಕುಲ, ಗಣ, ಶ್ರೇಣಿಗಳ ಕ್ರಮಗಳನ್ನು ರಾಜನೂ ಮನ್ನಿಸಬೇಕು. ಏಕೆಂದರೆ ಸ್ಮೃತಿಗಳು ಅವುಗಳಿಗೆ ಆ ಹಕ್ಕನ್ನು ನೀಡಿವೆ ಎಂದು ಬೃಹಸ್ಪತಿ ನಿರ್ದೇಶಿಸುತ್ತಾನೆ.[2] ಈ ಗಣ, ಕುಲ, ಶ್ರೇಣಿಗಳ ಧರ್ಮವನ್ನು ಶಾಸನಗಳು ಕೂಡ ಈ ಸ್ಮೃತಿ ನಿರ್ದೇಶನಗಳು ಸಮೂಹಗಳ ಸಂಬಂಧಿಸಿ ವ್ಯತಿರಿಕ್ತವಾಗೇನೂ ಇರಲಿಲ್ಲ ಎಂಬುದನ್ನು ಸೂಚಿಸುತ್ತವೆ. ಆದರೂ ಸ್ಮೃತಿಗಳು ದಾಖಲಿಸದ ತೀರ ಮುಖ್ಯವಾದ ವಿಷಯ ಶಾಸನಗಳಲ್ಲಿ ಪ್ರಕಟವಾಗುತ್ತದೆ. ಅದೆಂದರೆ ಈ ಮೇಲಿನ ಸ್ಥಾನಿಕ ಸಮುದಾಯಗಳು ರಾಜ್ಯಗಳಲ್ಲಿ ಮುಚ್ಚಿಕೊಂಡ ಅಥವಾ ತಟಸ್ಥ ಅಂಶಗಳಾಗಿರಲಿಲ್ಲ ಹಾಗೂ ಹಾಗಿದ್ದಿದ್ದರೆ ಮೇಲ್ಮಟ್ಟದ ಪ್ರಭುತ್ವಗಳಿಗೆ ಸ್ಥಾನಿಕ ಮಟ್ಟದಲ್ಲಿ ಪ್ರಸ್ತುತತಯೇ ನಿರ್ಮಾಣವಾಗುತ್ತಿರಲಿಲ್ಲ. ಶಾಸನಗಳಲ್ಲಿ ಇಂತಹ ಸಮೂಹ ಧರ್ಮಗಳಲ್ಲಿ ಒಂದಾದ ಕೆರೆ ನೀರಾವರಿಯ ಸಂದರ್ಭದಲ್ಲಿ ವ್ಯಕ್ತಿಗಳು ಸಮೂಹದಲ್ಲಿ ವಿಶೇಷವಾಗಿ ಮುಂದೊತ್ತಿಕೊಳ್ಳುವ ಮೂಲಕ ಅಥವಾ ವಿಶೇಷ ಪ್ರಭಾವವನ್ನು ಗಳಿಸಿಕೊಳ್ಳುವುದರ ಮೂಲಕ ಈ ವ್ಯವಹಾರ ನಡೆದಿದ್ದು ಕಂಡುಬರುತ್ತದೆ. ಇಂಥ ಕುಲ, ಗಣ ಮುಂತಾದ ಸಮೂಹಗಳ ಮುಂದಾಳುಗಳು ರಾಜ್ಯದ ಜೊತೆ ಸಂವಾದಿಸುತ್ತ ಸ್ಥಾನಿಕ ಆಳುವ ವರ್ಗವೊಂದು ಮುಂಚೂಣಿಗೆ ಅದಾಗಲೇ ಬಂದಿದ್ದು ಕೂಡ ವಿದಿತವಾಗಿದೆ ಹಾಗೂ ಶಾಸನಗಳಲ್ಲಿ ನೀರಾವರಿಗೆ ಸಂಬಂಧಿಸಿ ಇಂಥವರ ಖಾಸಗಿ ಪ್ರಯತ್ನಗಳೇ ಸಾಮಾನ್ಯವಾಗಿ ದಾಖಲಾಗಿವೆ ಎಂಬುದು ಕುತೂಹಲಕಾರಿಯಾಗಿದೆ. ಶಾಸನಗಳ ಮೂಲಕವೇ ಕೆರೆ ನೀರಾವರಿಯ ಇತಿಹಾಸವನ್ನು ಕಟ್ಟುವುದಾದರೆ ಈ ಅಂಶವನ್ನು ಗಮನಿಸದಿರುವುದು ಸಾಧ್ಯವಿಲ್ಲ.

ಮಧ್ಯಕಾಲದ ರಾಜ್ಯಗಳಲ್ಲಿ ಸಾಮ್ರಾಜ್ಯದಿಂದ ನಿಯಮಿತವಾದ ಅಧಿಕಾರಿಗಳ ಜೊತೆಗೇ ಪ್ರಾದೇಶಿಕ ಹಾಗೂ ಸ್ಥಾನಿಕ ಮಟ್ಟದಲ್ಲಿ ಬೆಳೆದು ಬಂದ ನಾಳ್ಪ್ರಭು, ಮಾಂಡಲಿಕ, ಮಹಾಮಂಡಲೇಶ್ವರ, ಅರಸ, ಒಡೆಯ, ನಾಯಕ ಮುಂತಾದವರೂ ಕಾಣಿಸಿಕೊಳ್ಳುತ್ತಾರೆ. ಇವರ ಜೊತೆಗೇ ಅಗ್ರಹಾರ, ದೇವಾಲಯ ಮತ್ತು ಮಠಗಳೂ ಪ್ರಬಲವಾಗಿದ್ದವು. ಸಾಮ್ರಾಟರು ಈ ಮೇಲಿನ ಸ್ಥಾನಿಕ ವರ್ಗದವರ ಮಧ್ಯವರ್ತಿತ್ವವನ್ನು ಆಧರಿಸಿ ಪ್ರಾದೇಶಿಕವಾಗಿ ಆಳ್ವಿಕೆಯನ್ನು ರಚಿಸುತ್ತಿದ್ದರು. ಏಕೆಂದರೆ ಸ್ಥಾನಿಕ ಸಮೂಹಗಳ ಹಿತಾಸಕ್ತಿಯ ಸಂಬಂಧಿಸಿ ಬೆಳೆದುಕೊಂಡ ಈ ಆಳುವ ವರ್ಗ ಮೇಲಿನ ಪ್ರಭುತ್ವಗಳ ನೆಲೆಗಳಾಗುತ್ತಾ ಪ್ರಬಲರಾದರು. ಸ್ಥಾನಿಕ ಕೃಷಿ ಸಮೃದ್ಧಿ ಈ ಆಳುವ ವರ್ಗಕ್ಕೆ ನಿರ್ಣಾಯಕವಾಗಿತ್ತು. ಅಂದಿನ ಪ್ರಾದೇಶಿಕ ರಾಜ್ಯಗಳ ನಿರ್ಮಾಣದಲ್ಲಿ ಕೆರೆ ನೀರಾವರಿ ಹಾಗೂ ವ್ಯವಸಾಯ ವಿಸ್ತರಣೆ ವಹಿಸಿದ ಪಾತ್ರವು ಇತಿಹಾಸಕಾರರು ಒಂದು ಒಪ್ಪಿಕೊಂಡ ವಿಚಾರವಾಗಿದೆ. ಹಾಗೂ ನೀರಾವರಿ ವ್ಯವಸ್ಥೆಯನ್ನು ನಿರ್ವಹಿಸಲು ಇಂಥ ಸ್ಥಳೀಯ ಶಕ್ತಿಗಳು ತಮ್ಮ ಅಧಿಕಾರ ಮತ್ತು ಸಂಪನ್ಮೂಲಗಳನ್ನೇ ಬಳಸಿಕೊಂಡಿದ್ದು ಕಂಡುಬರುತ್ತದೆ. ಈ ಪ್ರಾದೇಶಿಕ ವ್ಯವಸ್ಥೆಯೊಳಗೆ ತಮ್ಮ ಪ್ರಭುತ್ವವನ್ನು ಪ್ರವರ್ತಿಸುವ ಮೇಲ್ಮಟ್ಟದ ರಾಜರು ತಮ್ಮದೇ ಅಧಿಕಾರಿ ವರ್ಗವನ್ನೂ ಹೊಂದಿದ್ದರು. ಕೇಂದ್ರೀಕರಣದ ಪ್ರವೃತ್ತಿ ಜಾಸ್ತಿಯಾದಾಗ ಅಧಿಕಾರಿ ವರ್ಗ ಪ್ರಧಾನವಾಗಿ ಶಾಸನಗಳಲ್ಲಿ ಬರುತ್ತದೆ. ವಿಜಯನಗರ ಅರಸರು ಇಂಥ ಪ್ರಯತ್ನದಲ್ಲಿ ನಾಯಕ ವ್ಯವಸ್ಥೆಯನ್ನು ಉಪಯೋಗಿಸಿಕೊಂಡರು. ಅದಕ್ಕೂ ಮೊದಲು ಮಹಾಸಾಮಂತರನ್ನು ಕಾಣುತ್ತೇವೆ. ಅಂಥ ಪ್ರಯತ್ನಗಳಿಲ್ಲದಿದ್ದಾಗ ಪ್ರಾದೇಶಿಕ ಅರಸರೇ ಮಹಾಮಂಡಲೇಶ್ವರರೇ ರಾಜನಿಂದ ಪ್ರಭುತ್ವದ ಬಿರುದನ್ನು ಪಡೆದು ಆಳುತ್ತಿದ್ದರು. ಇಷ್ಟಾಗಿಯೂ ಸಾಮ್ರಾಜ್ಯದ ವಸೂಲಿ ಅಧಿಕಾರಿಗಳಾದ ದಂಡನಾಯಕರು, ಹೆರ್ಗಡೆಗಳು, ಕರಣಗಳು ಮುಂತಾದವರು ಇದ್ದೇ ಇರುತ್ತಿದ್ದರು. ಆದರೆ ಸ್ಥಾನಿಕ ಉತ್ಪಾದನೆ ಪ್ರಾದೇಶಿಕ ಶಕ್ತಿಗಳಿಗೇ ನೇರವಾದ ಕಾಳಜಿಯಾಗಿತ್ತು. ವಿಜಯನಗರ ಕಾಲದ ನಂತರ ಅಗ್ರಹಾರಗಳು ಮತ್ತು ದೇವಾಲಯಗಳು ತಮ್ಮ ಖಾಸಗಿ ಆಸಕ್ತಿಯಿಂದ ನೀರಾವರಿ ಯೋಜನೆಗಳನ್ನು ಭರಿಸಿದ ಉದಾಹರಣೆಗಳು ಶಾಸನಗಳಲ್ಲಿ ಸಿಗುತ್ತವೆ.

**ಕೆರೆ ನೀರಾವರಿಯ ಪೋಷಕರು: ಕೀರ್ತಿ ಮತ್ತು ಪುಣ್ಯ**

ಇಂಥ ನೇರ ಹಿತಾಸಕ್ತಿಯನ್ನೂ ಗುರುತಿಸಲಾಗದ ಹಲವಾರು ವ್ಯಕ್ತಿಗಳೂ ಕೆರೆಗಾಗಿ ವೆಚ್ಚ ಮಾಡಿದ್ದು ಮತ್ತೂ ಕುತೂಹಲಕಾರಿಯಾಗಿದೆ. ವ್ಯಾಪಾರಿಗಳು, ವಿರಕ್ತರು, ಪ್ರತಿಷ್ಠಿತರು ಹಾಗೂ ವಿಭಿನ್ನ ಹಿನ್ನೆಲೆಯ ಪುರುಷರು, ಸ್ತ್ರೀಯರು ಮುಂತಾದವರು ಧರ್ಮಕಾರ್ಯ ಎಂಬಂತೇ ಈ ಕೆಲಸವನ್ನು ಮಾಡಿದ್ದರು. ಕೆಲ ಸುಪ್ರಸಿದ್ಧ ಉದಾಹರಣೆಗಳೆಂದರೆ ಹೊಂಬುಚದ ಪಟ್ಟಣಸ್ವಾಮಿ ನೊಕ್ಕಯ್ಯ, ಕೆರೆಸಂತೆಯ ಅಲ್ಲಾಳದೇವ, ಕೆರೆಯ ಪದ್ಮರಸ ಮುಂತಾದವರು. ನೊಕ್ಕಯ್ಯನು ನಾಲ್ಕು ಕೆರೆಗಳನ್ನು ಕಟ್ಟಿಸಿದ್ದನು.[3] ೧೫೩೮ರ ಶಾಸನವೊಂದರ ಪ್ರಕಾರ ಬಯಕರ ರಾಮಪ್ಪಯ್ಯನೆಂಬವನು ಹದಿನಾರು ದೊಡ್ಡ ಕೆರೆಗಳನ್ನು ಕಟ್ಟಿಸಿದ್ದನು.[4] ವಿಜಯನಗರ ರಾಜರು ಶ್ರೀಮಂತ ವ್ಯಾಪಾರಿಗಳಿಗೆ ಪುರಗಳನ್ನು ಸ್ಥಾಪಿಸಲು ಹಳ್ಳಿಗಳನ್ನು ನೀಡುತ್ತಿದ್ದರು ಹಾಗೂ ಅಂಥ ಶ್ರೀಮಂತರು ಕೆರೆಗಳನ್ನೂ ಆ ಪಟ್ಟಣಗಳ ಆಸುಪಾಸಿನಲ್ಲಿ ನಿರ್ಮಿಸುತ್ತಿದ್ದರು. ಅಳಗಿಸೆಟ್ಟಿಯೆಂಬವನು ಈ ರೀತಿ ಬೆಟ್ಟಹಳ್ಳಿ ಎಂಬಲ್ಲಿ ಎರಡು ಕೆರೆಗಳನ್ನು ಕಟ್ಟಿಸಿದನು.[5] ಕೆರೆಯನ್ನು ಕಟ್ಟಿದವರ ಪಟ್ಟಿಯಲ್ಲಿ ತಳವಾರ, ಮಾವುತ, ನಟಿ, ವೇಶ್ಯೆ, ಮುಂತಾದವರಲ್ಲದೇ ವಿರಾಗಿಗಗಳು ಮತ್ತು ಶರಣರೂ ಸೇರಿದ್ದಾರೆ. ಅಂದರೆ ಕೆರೆ ಕಟ್ಟುವ ವೆಚ್ಚವನ್ನು ಕೃಷಿಕರಲ್ಲದ ವರ್ಗದಿಂದ ಹರಿಸುವ ಒಂದು ತಾತ್ವಿಕತೆ ಕೂಡ ಪ್ರಚಲಿತದಲ್ಲಿತ್ತು.

ಕೆರೆ ನೀರಾವರಿಗೆ ಸಂಬಂಧಿಸಿ ಆರ್ಥಿಕತೆಗೆ ಸಂಬಂಧಿಸಿದ ದೃಷ್ಟಿ ಅದರ ಹುಟ್ಟುವಳಿಯನ್ನು ನೇರವಾಗಿ ಅನುಭವಿಸಿದವರಿಗೆ ಪ್ರಧಾನವಾಗಿತ್ತು. ಆದರೆ ಇದರಲ್ಲಿ ತೊಡಗಿಸಿಕೊಂಡ ದಾತರಿಗೆ ಇನ್ನಿತರ ಕೆಲ ಅಂಶಗಳೇ ಪ್ರಧಾನವಾಗಿದ್ದವು. ಅದರಲ್ಲಿ ಸಾಮಾಜಿಕ ಪ್ರತಿಷ್ಠೆಯನ್ನುಮ ಕೀರ್ತಿಯನ್ನು ಗಳಿಸುವುದು ಹಾಗೂ ಧರ್ಮವನ್ನು ಆಚರಿಸುವುದು ಮುಖ್ಯವಾಗಿದ್ದವು. ಕೆರೆಕಟ್ಟಿಸುವುದು ಒಂದು ಹೆಗ್ಗಳಿಕೆಯಾಗಿತ್ತು ಎಂಬುದು ಆ ಸಂಬಂಧಿಸಿ ಶಾಸನಗಳಲ್ಲಿ ನೀಡಿದ ವಿಶೇಷ ವಿವರಣೆಗಳಿಂದ ವ್ಯಕ್ತವಾಗುತ್ತದೆ. ಅಂದರೆ ಕೆರೆ ಕಟ್ಟಿದ್ದನ್ನು ದಾಖಲಿಸಲೆಂದೇ ದಾತರು ತಮ್ಮ ಖಾಸಗಿ ಹೆಸರುಗಳನ್ನು ಹಾಗೂ ಬಂಧುಗಳ ಹೆಸರುಗಳನ್ನೂ ಇಂಥ ಕೆರೆಗಳಿಗೆ ಇಡುತ್ತಿದ್ದರು. ಶಾಸನಗಳಲ್ಲಿ ಪರೋಕ್ಷವಾಗಿ ಬರುವ ಕೆರೆಯ ಹೆಸರುಗಳಲ್ಲಿ ಕೂಡ ಅನೇಕವು ವ್ಯಕ್ತಿ ನಾಮದಿಂದ ಗುರುತಿಸಲ್ಪಟ್ಟಿವೆ. ಕಟ್ಟಿದವರ ಹೆಸರು

ಅಥವಾ ಅದಕ್ಕೆ ಆಶ್ರಯ ನೀಡಿದ ರಾಜರ ಹೆಸರನ್ನು ಅವುಗಳಿಗೆ ಇಡುವುದು ಹೆಚ್ಚು ಪ್ರಚಲಿತದಲ್ಲಿತ್ತೆಂದು ತೋರುತ್ತದೆ. ಹಿಂದೆ ಉಲ್ಲೇಖಿಸಿದ ರಾಮಪ್ಪಯ್ಯನು ಕಟ್ಟಿಸಿದ ೧೯ ಕೆರೆಗಳೂ ಆತನ ಹೆಸರು, ರಾಜನ ಹೆಸರು ಹಾಗೂ ಆತನ ಬಂಧುಗಳ ಹೆಸರನ್ನು ಹೊತ್ತಿದ್ದವು. ಕರ್ನಾಟಕದಲ್ಲಿ ಕೆರೆಗಳನ್ನು ಸಮುದ್ರ ಎಂದು ಕರೆದಿರುವುದೂ ಅವುಗಳ ಕುರಿತ ಅವಾಸ್ತವ ಹೆಗ್ಗಳಿಕೆಯನ್ನು ಎತ್ತಿ ತೋರಿಸುತ್ತದೆ. ಅದರಲ್ಲೂ ರಾಜರು ಇದನ್ನೊಂದು ರಾಜತ್ವದ ಘನತೆಯನ್ನೂ, ಔದಾರ್ಯವನ್ನೂ ಎತ್ತಿ ಹಿಡಿಯುವ ಕಾರ್ಯವನ್ನಾಗಿ ಗ್ರಹಿಸಿದ್ದು ಕಂಡುಬರುತ್ತದೆ.

ಕೆರೆ ಕಟ್ಟಿಸುವುದು ಹಾಗೂ ರಿಪೇರಿ ಮಾಡುವುದನ್ನು ಸದ್ಗತಿಯನ್ನು ನೀಡುವ ಧರ್ಮಕಾರ್ಯ ಎಂದು ಶಾಸನಗಳೂ, ಧರ್ಮಶಾಸ್ತ್ರಗಳೂ ಪ್ರತಿಪಾದಿಸುತ್ತವೆ. ಕೆರೆಗಳು ಜೀವನಾಧಾರ ಹಾಗೂ ಸಮೃದ್ಧಿಗೆ ಕಾರಣ ಎಂಬ ತಿಳುವಳಿಕೆಯೇ ಈ ತಾತ್ವಿಕತೆಯ ಹಿಂದಿದ್ದುದೂ ಶಿವ ಶರಣ ಸಿದ್ಧರಾಮನ ಪ್ರಸಂಗದಿಂದ ವಿದಿತವಾಗುತ್ತದೆ.[6] ಆತನು ದೇವಾಲಯವನ್ನು ಕಟ್ಟಿಸುವುದಕ್ಕಿಂತ ಕೆರೆ ಕಟ್ಟಿಸುವುದೇ ನಿಜವಾದ ಧರ್ಮ ಎಂದು ಪ್ರತಿಪಾದಿಸಿದನು. ಆದರೆ ಸಾಮಾನ್ಯವಾಗಿ ಜನರು ಇದನ್ನೊಂದು ಪುಣ್ಯಕಾರ್ಯ ಎಂಬಂತೇ ಆಚರಿಸಿದ್ದರು. ಹಾಗಾಗಿ ಕೆರೆ ಹಾಗೂ ದೇವಾಲಯಗಳನ್ನು ತಾವು ಕಟ್ಟಿಸಿದ್ದೇವೆಂದು ಒಟ್ಟೊಟ್ಟಿಗೇ ಶಾಸನಗಳಲ್ಲಿ ಹೇಳಿಕೊಳ್ಳುತ್ತಿದ್ದರು. ಕೆರೆಯನ್ನು ಕಟ್ಟಿಸಿ ಅದರ ಮಗ್ಗುಲಲ್ಲೊಂದು ದೇವಾಲಯವನ್ನು ಕಟ್ಟಿಸಿದ ಉದಾಹರಣೆಗಳ ಜೊತೆಗೇ ದೇವಾಲಯದ ವಿಧಿಗಳಿಗಾಗಿ ಹಾಗೂ ನಿರ್ವಹಣೆಗಾಗಿ ರಾಜರಲ್ಲಿ ನಿವೇದಿಸಿ ದಾನ ಪಡೆದು ಕೆರೆ ಕಟ್ಟಿಸಿದ ಪ್ರಸಂಗಗಳೂ ಇದ್ದವು.[7] ಈ ಕೆಲಸಗಳೆಲ್ಲ ದೇವಾಲಯವನ್ನೋ, ಕೆರೆಯನ್ನೋ ಕಟ್ಟಿಸುವಷ್ಟಕ್ಕೇ ಉದ್ದೇಶಿತವಾಗದೇ ಅಂತಿಮವಾಗಿ ತಮಗೆ, ತಮ್ಮ ಬಂಧುಗಳಿಗೆ, ಸ್ವಾಮಿಗಳಿಗೆ ಸದ್ಗತಿ ಪಡೆಯುವುದಕ್ಕಾಗಿದ್ದವು. ದೇವಾಳಯ ಸಂಸ್ಥೆಗಳಿಂದ ಕೆರೆಗಳಿಗೆ ಭೌತಿಕವಾಗಿ ಇದ್ದ ಪ್ರಯೋಜನಕ್ಕಿಂತ ದೇವಾಳಯಗಳಿಗೇ ಕೆರೆಗಳ ಪ್ರಯೋಜನವಿತ್ತು. ಮಧ್ಯಕಾಳದ ಕೆರೆಗಳ ನೀರಾವರಿಯನ್ನು ಆಧರಿಸಿ ದೇವಾಳಯ ಸಂಸ್ಥೆಗಳು ಬೆಳೆದವು. ರಾಜ್ಯದ ದಾನದಿಂದ ಭೂ ಒಡೆಯರಾದ ಅವು ತಮ್ಮ ಭೂಮಿಯ ಅಭಿವೃದ್ಧಿಗಾಗಿ ನೀರಾವರಿ ಯೋಜನೆಗಳನ್ನು ಹಮ್ಮಿಕೊಂಡವು. ಅವು ಅದನ್ನೊಂದು ಧರ್ಮಕಾರ್ಯ ಎಂಬ ಪಾರಮಾರ್ಥಿಕತೆಯಲ್ಲಿ ನೋಡುವ ಅಗತ್ಯ ಇರಲಿಲ್ಲ.

ದೇವಾಲಯ ಮತ್ತು ಕೆರೆಗಳನ್ನು ದಾತರು ಒಂದೇ ರೀತಿಯ ಧರ್ಮಕಾರ್ಯ ಎಂದು ಗ್ರಹಿಸಿದ್ದರು. ಇಂಥ ದಾತರಿಂದ ಒಟ್ಟಾರೆ ಎಷ್ಟು ಪ್ರಮಾಣದ ಪ್ರಯೋಜನವಾಯಿತು ಎಂಬುದು ಗೊತ್ತಾಗುವುದಿಲ್ಲ. ಆದರೆ ಧರ್ಮ ಕಲ್ಪನೆ ಕೆರೆಗಳ ಸಂಬಂಧಿಸಿ ರಚನಾತ್ಮಕ ವಾಗಿದ್ದದ್ದು ಸ್ಪಷ್ಟ. ಧರ್ಮ ಶಾಸ್ತ್ರಗಳು ಈ ಧರ್ಮವನ್ನು ಎಲ್ಲರಿಗೂ ನಿರ್ದೇಶಿಸುತ್ತವೆ ಯಾದರೂ, ಅನ್ಯ ಸದ್ಗತಿಯ ಮಾರ್ಗಗಳು ವರ್ಣಧರ್ಮದಲ್ಲಿ ಕಡಿಮೆ ಇರುವ ಶೂದ್ರ ವರ್ಣಕ್ಕೆ ಇದೊಂದು ಸವಲತ್ತು ಎಂಬ ವಿಶೇಷ ಸೂಚನೆಯೂ ಅವುಗಳಲ್ಲಿದೆ. ಕೆರೆಗಳನ್ನು ಕಟ್ಟುವುದು ಧರ್ಮಶಾಸ್ತ್ರಗಲ್ಲಿ ರಾಜ ಧರ್ಮ, ಶ್ರೇಣಿ ಧರ್ಮ, ಕುಲ, ಗಣಗಳ ಧರ್ಮಗಳಲ್ಲಿ ಸೇರಿಸಲ್ಪಟ್ಟಿವೆ. ಈ ಧರ್ಮವು ಪೂರ್ತಧರ್ಮ ಎಂದು ಕರೆಯಲ್ಪಟ್ಟಿದೆ.[8] ಪೂರ್ತದಲ್ಲಿ ವಾಪಿ, ಕೂಪ, ತಟಾಕ, ದೇವಾಲಯ, ಆರಾಮ, ಬಡವರಿಗೆ, ಬ್ರಾಹ್ಮಣರಿಗೆ ಮನೆ ಕಟ್ಟಿಸುವುದು, ಅನ್ನದಾನ ಮಾಡುವುದು ಮುಂತಾದವು ಸೇರಿವೆ. ಪೂರ್ತವು ವೇದಾಧಿಕಾರವಿಲ್ಲದ ಶೂದ್ರರಿಗೆ ಧರ್ಮಸಾಧನ; ಯಜ್ಞ ಯಾಗಾದಿ ಮುಂತಾದವು ಇಷ್ಟಧರ್ಮಗಳಾಗಿದ್ದುದರಿಂದ ಅವುಗಳಿಂದ ಕೇವಲ ಸ್ವರ್ಗ ಸಿಗುತ್ತದೆಯಾದರೆ ಪೂರ್ತದಿಂದ ಮೋಕ್ಷವೇ ಸಿಗುತ್ತವೆ ಎಂದು ಕೆಲ ಸ್ಮೃತಿಗಳು ಸಾರುತ್ತವೆ. ಶ್ರೇಣಿಗಳಿಗೂ ದೇವಾಲಯ, ಭಾವಿ, ಕೆರೆಗಳನ್ನು ಕಟ್ಟಿಸಿದ್ದಂತೂ ಶಾಸನಗಳಲ್ಲಿ ನಿದರ್ಶಿತವಾಗಿದೆ. ಇವೆಲ್ಲ ಸೂಚಿಸುವಂತೇ ವ್ಯಕ್ತಿಗಳಿಗೆ ಧಾರ್ಮಿಕ ಸ್ಥಾನಮಾನಗಳನ್ನು ಗಳಿಸಲು ಇಂಥ ಕಾರ್ಯಗಳು ಸಾಧನವಾಗಿದ್ದವು.

ಹೀಗೆ ಮಧ್ಯಕಾಲದ ತಾತ್ವಿಕತೆ ಪ್ರಯೋಜನದ ತೀರ ಅಮೂರ್ತ ಕಲ್ಪನೆಗಳನ್ನು ಆವಿಷ್ಕರಿಸಿ ಅವನ್ನು ಕೂಡ ಭೌತಿಕ ಅಗತ್ಯಗಳನ್ನಾಗಿ ಪರಿವರ್ತಿಸಿ ಕೆರೆಕಟ್ಟುವ ಕೆಲಸವನ್ನು ನೇರವಾಗಿ ಪ್ರಯೋಜನದ ದೃಷ್ಟಿ ಕೆರೆ ಕಟ್ಟುವುದರಲ್ಲಿ ಮಹತ್ವದ ಪಾತ್ರ ವಹಿಸಿರಲಿಲ್ಲ ಎಂದಲ್ಲ. ಅನೇಕ ದೃಷ್ಟಾಂತಗಳಲ್ಲಿ ಕೆರೆಯ ಕೆಳಗಿನ ಭೂಮಿ ಅಥವಾ ಕೊಡುಗೆಗಾಗಿ ಕೆರೆಗಳನ್ನ ವ್ಯಕ್ತಿಗಳು ನಿರ್ಮಿಸಿದ್ದರು. ಬಹುಶಃ ದಾಖಲೆಯೇ ಇಲ್ಲದ ಅಸಂಖ್ಯಾತ ಕೆರೆಗಳನ್ನು ಆರ್ಥಿಕ ಪ್ರಯೋಜನಕ್ಕಾಗೇ ಕಟ್ಟಿಸಿದ್ದರಬಹುದು. ಅದರಲ್ಲಿ ದಾಖಲಿಸಬಹುದಾದಂಥ ಧರ್ಮ ಇಲ್ಲದ್ದರಿಂದ ಅವುಗಳ ದಾಖಲೆ ಇಲ್ಲ. ಹಾಗೂ ಅಂಥ ಕಾರ್ಯಗಳಿಗೆ ಕಾರಣಗಳೂ ಸ್ಪಷ್ಟವಾಗಿವೆ. ಕೆರೆಗಳ ಸಂಬಂಧಿಸಿ ಕೇಂದ್ರ ನಿರ್ದೇಶಿತ ಕಾರ್ಯಕ್ರಮವೊಂದು ಇಲ್ಲದ ಪ್ರಭುತ್ವದಲ್ಲಿ ಅವುಗಳು ಹೇಗೆ ಕಟ್ಟಿ ಉಳಿದು ಬಂದವು ಎಂಬ ಕುರಿತು ಇವೆಲ್ಲ ವಿವರಣೆಗಳಾಗಬಹುದಷ್ಟೆ. ಕ್ರಿ.ಶ.೧೮೦೦ ರಲ್ಲಿ

ಬುಕಾನನ್ ಕರ್ನಾಟಕದಲ್ಲಿ ಪ್ರವಾಸಮಾಡುವಾಗ ಕೆರೆ ಕಟ್ಟಿಸಿದ ಶ್ರೀಮಂತರಿಗೆ ಕೆರೆ ಕೆಳಗಿನ ಭೂಮಿಯನ್ನು ಅನುವಂಶಿಕವಾಗಿ ನೀಡುವ ಪರಿಪಾಠ ಇದ್ದುದನ್ನು ತಿಳಿಸುತ್ತಾನೆ.[9]ಸಾಂಪ್ರದಾಯಿಕವಾಗಿ ನೀರ್ಗಂಟಿ ಎಂಬ ಆಯಗಾರನೊಬ್ಬ ನೀರಿನ ಹಂಚಿಕೆಗಾಗಿ ಹಳ್ಳಿಗಳಲ್ಲಿ ಇರುತ್ತಿದ್ದನು.

**ಉಪಸಂಹಾರ**

ಈ ಮೇಲಿನ ವಿವರಗಳಿಂದ ಸ್ಪಷ್ಟವಾಗುವುದೆಂದರೆ ಚಾರಿತ್ರಿಕವಾಗಿ ಕೆರೆ ನೀರಾವರಿ ಸ್ಥಳೀಯ ಹಿತಾಸಕ್ತಿಯ ಗುಂಪುಗಳ ಪಾಲ್ಗೊಳ್ಳುವಿಕೆಯಲ್ಲಿ ಉಳಿದು ಬಂದ ಒಂದು ವ್ಯವಸ್ಥೆ. ರಾಜ್ಯಗಳು ಈ ವ್ಯವಸ್ಥೆಯನ್ನು ಮಾನ್ಯ ಮಾಡಿ ಪೋಷಕರಾಗುವ ಮೂಲಕ ಕರವಸೂಲಿಯ ಅಧಿಕಾರವನ್ನು ಹೊಂದುತ್ತಿದ್ದವು. ವೈಯಕ್ತಿಕವಾಗಿ ಕೆರೆಗಳ ನಿರ್ಮಾಣವನ್ನು ಕೆಲವೊಮ್ಮೆ ಮಾಡುವುದು ಹಾಗೂ ಇತರ ನಿರ್ಮಾತೃಗಳನ್ನು ಪೋಷಿಸಿ ಕೊಡುಗೆಗಳನ್ನು ಮಾನ್ಯ ಮಾಡುವುದು ಇವುಗಳನ್ನು ಬಿಟ್ಟರೆ ಅದರಾಚೆಗೆ ಒಂದು ಪ್ರತ್ಯೇಕ ನೀರಾವರಿ ಕಾಮಗಾರಿ ಹಾಗೂ ಆಡಳಿತ ರಾಜ್ಯಕ್ಕೆ ಇದ್ದುದು ಕಂಡುಬರುವುದಿಲ್ಲ. ರಾಜ್ಯದ ಕರದಲ್ಲೂ ಒಂದು ಭಾಗ ಕೆರೆಗಳ ರಿಪೇರಿಗೆ ಬಳಕೆಯಾಗುವ ಉದಾಹರಣೆಗಳು ಸೂಚಿಸುವಂತೇ ರಾಜ್ಯವು ಈ ರೂಪದಲ್ಲಿ ಕೆರೆಗಳ ಸಲುವಾಗಿ ತನ್ನ ಪಾಲನ್ನೂ ಕಡಿತಗೊಳಿಸಲು ತಯಾರಿತ್ತು. ಆದರೆ ಇದಕ್ಕೆ ಪ್ರೇರಣೆ ಸ್ಥಳೀಯರಿಂದಲೇ ಬರುತ್ತಿಲ್ಲದೇ ಕೆರೆಗಳ ನಿರ್ವಹಣೆಯನ್ನು ಸಂಬಂಧಪಟ್ಟವರೇ ನಡೆಸುತ್ತಿದ್ದರು. ಅದರೆ ಇಲ್ಲಿ ಸಂಬಂಧಪಟ್ಟವರು ರಾಜ್ಯವನ್ನು ಕೆರೆ ನೀರಾವರಿಯಲ್ಲಿ ತೊಡಗಿಸುತ್ತಿದ್ದರು ಹಾಗೂ ರಾಜ್ಯ ತನ್ನದೇ ಆದ ಲಾಭಗಳಿಗಾಗಿ ಅದರಲ್ಲಿ ತೊಡಗಿಕೊಂಡಿತ್ತು. ಇತಿಹಾಸದುದ್ದಕ್ಕೂ ರಾಜ್ಯ, ಸಾಮ್ರಾಜ್ಯಗಳ ಆಳ್ವಿಕೆಗಳು ಮನೆತನಗಳ ಮೂಲಕ ಬದಲಾದಂತೆ ಕೆರೆ ನೀರಾವರಿ ವ್ಯವಸ್ಥೆ ಬದಲಾಗಲಿಲ್ಲ. ಬದಲಾಗಿ ಕೆರೆಗಳ ನಿರ್ವಹಣೆಯ ವ್ಯವಸ್ಥೆ ಸ್ಥಳೀಯ ಗ್ರಾಮಾಡಳಿತ ವ್ಯವಸ್ಥೆಯ ಸ್ವರೂಪ ಬದಲಾದಂತೆ ಬದಲಾಗುತ್ತ ಬಂದಿವೆ. ಕೆಲ ಮಹತ್ವಾಕಾಂಕ್ಷೀ ರಾಜರ ಕಾಲದಲ್ಲಿ ಹೆಚ್ಚು ಕೇಂದ್ರೀಕರಣದ ಪ್ರಯತ್ನಗಳು ನಡೆದರೂ ಸ್ಥಳೀಯ ವ್ಯವಸ್ಥೆಗಳು ಅವರ ಆಡಳಿತ ಮಧ್ಯವರ್ತಿಗಳಾಗಿ ಪರಿವರ್ತಿತವಾಗುತ್ತಿದ್ದವು. ಈ ಸ್ಥಳೀಯ ಘಟಕಗಳ ಮುಂದಾಳತ್ವ ಪ್ರಭುತ್ವಕ್ಕೆ ತಕ್ಕಂತೇ ಬದಲಾಗಿರಬಹುದು, ಆದರೆ ಅವುಗಳ ಕಾರ್ಯವೈಖರಿಯ ಬದಲಾವಣೆಗೆ ಅದೊಂದು ಮಾಧ್ಯಮವಾಗಲಿಲ್ಲ.

೧೯ನೇ ಶತಮಾನದಲ್ಲಿ ಇಂಥ ಸ್ಥಾನಿಕ ಮಧ್ಯವರ್ತಿಗಳನ್ನು ಹಾಗೂ ಹಿತಾಸಕ್ತಿಯನ್ನು ಕಡೆಗಣಿಸಿದ್ದು ಕೆರೆಗಳ ಅವನತಿಗೆ ಕಾರಣವಾಯಿತು ಎಂಬ ವಾದ ಅಂಕಿ ಅಂಶಗಳ ವಿವರಗಳಿಂದ ಸಿದ್ಧವಾಗುವುದಿಲ್ಲ. ಆದರೆ ಕೆರೆಗಳ ಸಂಖ್ಯೆಯನ್ನು ಬೆಳೆಸಿದ ಮಾತ್ರಕ್ಕೇ ತನ್ನ ಅಭಿವೃದ್ಧಿ ಕಾರ್ಯಕ್ರಮ ಸಫಲವಾದ ಹಾಗಲ್ಲ ಎಂಬ ಸತ್ಯ ಕೇಂದ್ರೀಕೃತ ಪ್ರಭುತ್ವಕ್ಕೆ ಹೊಲಬಾಯಿತು. ಆಧುನಿಕ ಮೈಸೂರಿನಲ್ಲಿ ನಮಗೆ ಸಿಗುವ ಲೆಕ್ಕದ ಪ್ರಕಾರ ೧೮೪೯ ರಿಂದ ೧೯೦೫ರ ಅವಧಿಯಲ್ಲಿ ಕೆರೆಗಳ ಸಂಖ್ಯೆ ಹಾಗೂ ಒಟ್ಟು ನೀರಾವರಿ ಕ್ಷೇತ್ರ ದ್ವಿಗುಣವಾದವು. ೧೮೪೯ರಲ್ಲಿ ೨೦,೦೦೦ ಇದ್ದ ಕೆರೆಗಳು ೧೯೦೭ರಲ್ಲಿ ೩೯,೦೦೦ ಆದವು ಹಾಗೂ ಕೃಷಿಕ್ಷೇತ್ರ ೧೮೩೭-೩೮ ರಲ್ಲಿ, ೩,೪೧, ೦೩೦ ಎಕರೆ ಇದ್ದದ್ದು ೧೯೦೫-೬ ರಲ್ಲಿ ೫,೦೬,೮೮ ಎಕರೆ ಇತ್ತು.[10] ೧೯ನೇ ಶತಮಾನದಲ್ಲಿ ಕೇಂದ್ರೀಕರಣದಿಂದ ಉಂಟಾದ ಮುಖ್ಯ ಸಮಸ್ಯೆ ರಾಜ್ಯದ ಎಲ್ಲ ಕೆರೆಗಳನ್ನೂ ನಿರ್ವಹಿಸುವುದು ನಷ್ಟದ ಉದ್ದಿಮೆ ಎಂಬುದಾಗಿತ್ತು. ಶೇಷಾದ್ರಿ ಐಯರ್ ಅವರೂ ಜನರ ಸಹಭಾಗಿತ್ವ ರಾಜ್ಯದ ಈ ಹೊರೆಯನ್ನು ಕಡಿಮೆ ಮಾಡಲು ಒಂದು ಸಾಂಪ್ರದಾಯಿಕ ಪರಿಹಾರ ಎಂಬರ್ಥದಲ್ಲಿ ಈ ವಿಷಯವನ್ನು ಪ್ರಸ್ತಾಪಿಸುತ್ತಾರೆ. ಆದರೆ ಅದಾಗಲೇ ಕೆರೆ ನೀರಾವರಿ ೧೯೦೦ ರಲ್ಲಿದ್ದುದಕ್ಕಿಂತ ದುಪ್ಪಟ್ಟು ವಿಸ್ತಾರವಾಗಿತ್ತು. ಅವುಗಳನ್ನು ರಿಪೇರಿ ಮಾಡಿ ನಿರ್ವಹಿಸುವುದು ರಾಜ್ಯಕ್ಕೆ ಅಸಾಧ್ಯವಾದಂತೆ ಅವು ರಾಜ್ಯಕ್ಕೆ ಆರ್ಥಿಕ ಲಾಭಗಳಲ್ಲ ಎಂಬ ತಿಳುವಳಿಕೆಯೂ ಬಂದಿತು. ಅಂದರೆ ಕೆರೆಗಳ ಸಂಖ್ಯೆ ಜಾಸ್ತಿಯಾದರೆ ಅವುಗಳನ್ನು ರಿಪೇರಿ ಮಾಡಿ ನಿರ್ವಹಿಸುವ ರಾಜ್ಯಕ್ಕೆ ಅದು ಲಾಭದಾಯಕವಾಗುವುದರ ಬದಲು ಹೆಚ್ಚೆಚ್ಚು ಹೊರೆಯಾಗುತ್ತದೆ. ಕೇಂದ್ರೀಕೃತವಾಗಿ ಅವನ್ನು ನಿರ್ವಹಿಸಬಹುದೆಂಬ ಆಧುನಿಕ ಲೆಕ್ಕಾಚಾರ ವಿಫಲವಾಗಿದ್ದಂತೂ ಸ್ಪಷ್ಟ. ಕೆರೆ ನೀರಾವರಿಯಲ್ಲಿ ಸ್ಥಳೀಯ ನಿರ್ಣಯ ಹಾಗೂ ನಿರ್ವಹಣೆಯ ವ್ಯವಸ್ಥೆ ಇಲ್ಲದಿದ್ದರೆ ಅದು ಬಾಳುವಂತೇ ಮಾಡಲು ಕೇಂದ್ರೀಕೃತ ಪ್ರಭುತ್ವಕ್ಕೆ ಅಂಥ ಆಮಿಷಗಳೂ ಇಲ್ಲ ಹಾಗೂ ಅದರ ಶೈಲಿಗೆ ಅದು ಸಾಧ್ಯವೂ ಇಲ್ಲ ಎಂಬುದು ರಾಜ್ಯ ವ್ಯವಸ್ಥೆಗೂ ಅನುಭವ ವೇದ್ಯವಾಗಿದೆ.

ಪ್ರಭುತ್ವವು ೧೯ನೇ ಶತಮಾನದ ಅಂತ್ಯ ಭಾಗದಲ್ಲಿ ಸ್ಥಳೀಯರನ್ನು ಒಳಗೊಳ್ಳಲು ಅನೇಕ ಪ್ರಯೋಗಗಳನ್ನು ಕೂಡ ನಡೆಸಿತು. ಅದರಲ್ಲಿ ೩೦೦ ರೂಪಾಯಿಗಿಂತ ಕಡಿಮೆ ಕಂದಾಯವನ್ನು ನೀಡುವ ಕೆರೆಗಳನ್ನು ರೈತರ ಉಸ್ತುವಾರಿಗೆ ವಹಿಸಲಾಯಿತು. ೩೦೦ ರೂಪಾಯಿಗಳಿಗಿಂತ ಹೆಚ್ಚಿನವುಗಳನ್ನು ಸರ್ಕಾರದ ಲೋಕೋಪಯೋಗಿ ವಿಭಾಗಕ್ಕೆ ತೆಗೆದುಕೊಳ್ಳಲಾಯಿತು.[11] ಇಲ್ಲಿ ಸಣ್ಣ ಕೆರೆಗಳು ಸರ್ಕಾರಕ್ಕೆ ಆರ್ಥಿಕ ಹೊರೆ ಎಂಬ ಲೆಕ್ಕಾಚಾರವೇ ಪ್ರಧಾನವಾಗಿರುವುದನ್ನು ಗಮನಿಸಬಹುದು. ಆದರೆ ಕೇಂದ್ರೀಕೃತ ಸರ್ಕಾರದ ಉದ್ದೇಶಕ್ಕೆ ತಕ್ಕಂತೆ ಸ್ಥಳೀಯ ಜನರನ್ನು ತೊಡಗಿಸಲು ಅದು ವಿಫಲವಾಯಿತು. ಕೆರೆ ನೀರಾವರಿಗೆ ಹಾಗೂ ಅದರ ಅಭಿವೃದ್ಧಿಯ ಕಾರ್ಯಕ್ರಮದ ಮಿತಿಗಳನ್ನು ಕೂಲಂಕಷವಾಗಿ ಅರಿಯುವ ಪ್ರಯತ್ನಗಳು ಇನ್ನೂ ನಡೆಯಬೇಕಿತ್ತು. ಬದಲಾಗಿ ಸರ್ಕಾರಕ್ಕೆ ಅಂಥ ಪ್ರಯೋಗಗಳೇ ಅಪ್ರಸ್ತುತವೆನ್ನಿಸಿತು. ಇದರ ಪರಿಣಾಮವಾಗಿ ೧೯ನೇ ಶತಮಾನದ ಅದಿಭಾಗದಲ್ಲಿ ಸಣ್ಣ ಕೆರೆಗಳನ್ನು ಉಪೇಕ್ಷಿಸಿ ದೊಡ್ಡ ಕೆರೆಗಳು ಹಾಗೂ ಬೃಹತ್ ನೀರಾವರಿಯತ್ತ ತಮ್ಮ ಲಕ್ಷ್ಯವನ್ನು ಕೇಂದ್ರೀಕರಿಸಿದರು. ಬಹುಶಃ ಸಣ್ಣ ಕೆರೆಗಳ ಅವನತಿ ಅಷ್ಟರ ನಂತರ ಪ್ರಾರಂಭವಾಯಿತು. ಅಂದರೆ ಅವನ್ನು ಉಳಿಸಿಕೊಂಡು ಬಂದ ಸ್ಥಳೀಯ ವ್ಯವಸ್ಥೆಯನ್ನು ಆಕ್ರಮಿಸಿದ ಸರ್ಕಾರ ಪರಿಣಾಮಕಾರೀ ಬದಲೀ ವ್ಯವಸ್ಥೆಯನ್ನು ರೂಪಿಸಲು ವಿಫಲವಾಗಿ ನಿರಾಸಕ್ತಿ ತಳೆಯಿತು. ಈ ಕಾರ್ಯಕ್ರಮ ಈಗ ಎಲ್ಲಿಗಿ ಬಂದು ಮುಟ್ಟಿದೆಯೆಂದರೆ ಇಂದು ಕೆರೆಗಳಿಗಿಂತ ಅದನ್ನು ನಿರ್ವಹಿಸುವ ಸರ್ಕಾರೀ ಯಂತ್ರವೇ ಸರ್ಕಾರಕ್ಕೆ ಒಂದು ದೊಡ್ಡ ಹೊರೆಯಾಗಿದೆ.

ಇಂಥ ಪ್ರಯೋಗಗಳು ಪ್ರಾರಂಭವಾಗಿ ಹೆಚ್ಚು ಕಡಿಮೆ ೧೦೦ ವರ್ಷಗಳೇ ಗತಿಸಿವೆ. ೧೯೮೮-೮೯ರಲ್ಲಿ ಕೆರೆ ನೀರಾವರಿ ಕೃಷಿ ಕ್ಷೇತ್ರ ೬,೨೪,೭೦೭ ಎಕರೆ ಇತ್ತು. ಅಂದರೆ ೧೯೦೫ ರಿಗಿಂತ ಒಂದು ಲಕ್ಷ ಎಕರೆಗೂ ಜಾಸ್ತಿ. ಆದರೆ ಅದೇ ವೇಳೆಗೆ ಕಾಲುವೆ ನೀರಾವರಿ ಬೃಹತ್ ಯೋಜನೆಗಳಿಂದಾಗಿ ೪೦೦% ಹೆಚ್ಚಾಗುತ್ತದೆ. ಅಂದರೆ ಇಂದು ನೀರಾವರಿಗೆ ಒಳಪಟ್ಟ ಭೂಮಿಯ ವಿಸ್ತಾರವನ್ನು ಯಾವ ಐತಿಹಾಸಿಕ ಕಾಲದಲ್ಲೂ ಕಾಣಲು ಸಾಧ್ಯವಿಲ್ಲ ಎಂಬುದನ್ನು ಕೂಡ ಗಮನಿಸಬೇಕು. ಇದರ ಜೊತೆಗೇ ಕಾಲುವೆ ನೀರಾವರಿಗೆ ಒಳಪಡದ ಭಾಗದಲ್ಲಿ ಕೊಳವೆ ಭಾವಿಗಳ ಮೂಲಕ ಅಂತರ್ಜಲದ ಉಪಯೋಗ ಪರಿಣಾಮಕಾರಿಯಾಗಿ ಆಗುವುದರಿಂದ ಇದ್ದ ಕೆರೆಗಳೂ ಕೃಷಿಕರ ಹಿತಾಸಕ್ತಿಗೆ ಅಪ್ರಸ್ತುತವಾಗುತ್ತಿವೆ. ಬಹುಶಃ ಕೆರೆಗಳ ಅವನತಿಗೆ ಕೊಳವೆ ಭಾವಿಗಳೇ ನಿರ್ಣಾಯಕವಾಗಿವೆ. ಇವೆಲ್ಲದರ ಜೊತೆಗೇ ಜನಸಂಖ್ಯೆಯ ಹೆಚ್ಚಳದಿಂದ ಹಾಗೂ ಸರ್ಕಾರಿ ನೀತಿಗಳಿಂದ ಕೆರೆಗಳ ಅಂಗಳಗಳು ಕೃಷಿ ಭೂಮಿಗಳೋ ಇಲ್ಲ ಸೈಟುಗಳೋ ಆಗಿ ಪರಿವರ್ತನೆಯಾಗಿವೆ. ಇಂದಿನ ಮಾರುಕಟ್ಟೆ ಪ್ರೋತ್ಸಾಹದಾಯಕವಾಗಿಲ್ಲ. ನಗರಗಳ ಪ್ರದೇಶದಲ್ಲಿ ಹಾಗೂ ಕೃಷಿ ಪ್ರದೇಶದಲ್ಲಿ ಹೀಗೆ ಕೆರೆಗಳು ಜನರ ಬದಲಾದ ಹಿತಾಸಕ್ತಿಯಿಂದಲೇ ಮಾಯವಾಗುತ್ತಿವೆ. ಇವೆಲ್ಲ ತೀರ ಈಚೆಗಿನ ಫಲಾನುಭವಿಗಳ ಸಮಸ್ಯೆಗಳು. ಈ ಕೆರೆಗಳನ್ನೆಲ್ಲ ಉಳಿಸಿಕೊಂಡು ಬರುವುದು ಸರ್ಕಾರಕ್ಕೆ ಆರ್ಥಿಕ ಹೊರೆಯಾಗಿದೆ ಹಾಗೂ ಸರ್ಕಾರದ ವೆಚ್ಚಗಳನ್ನು ಜನರಿಗೆ ತಲುಪಿಸುವಲ್ಲಿ ಸರ್ಕಾರಿ ಯಂತ್ರ ವಿಫಲವಾಗುತ್ತಿರುವುದೂ ಅದಕ್ಕೊಂದು ಪ್ರಮುಖ ಕಾರಣವಾಗಿದೆ. ಅದಕ್ಕಿಂತ ಇಂದಿನ ಪ್ರಭುತ್ವ ರಚನೆಗೆ ಮಧ್ಯಕಾಲದಂತೇ ಕೆರೆಗಳು ಪ್ರಸ್ತುತವಾಗಿಲ್ಲ. ಅವು ರಾಜಕೀಯ ಸಾಮಾಜಿಕ ಶಕ್ತಿಯನ್ನು ಸಂವರ್ಧಿಸುವ ಅಂಶಗಳೂ ಆಗಿಲ್ಲ. ಹೊಸ ವ್ಯವಸ್ಥೆಗೆ ಜನರನ್ನು ತೊಡಗಿಸುವ ರಾಜಕೀಯ ಸಾಮಾಜೀಕರಣವೂ ಆಗಿಲ್ಲ. ಕೆರೆಗಳು ಅಂತರ್ಜಲ ಕಾಪಾಡುವ ಹಾಗೂ ಜೀವ ವೈವಿಧ್ಯವನ್ನು ಪೋಷಿಸುವ, ಹಾಗೂ ದೊಡ್ಡ ನೀರಾವರಿ ತಲುಪದ ಪ್ರದೇಶಗಳಲ್ಲಿ ತೀವ್ರವಾದ ಕೃಷಿಗೆ ಇಂದೂ ಅತ್ಯಗತ್ಯ ಎಂಬ ಸತ್ಯವನ್ನು ಈ ೨೧ನೇ ಶತಮಾನದ ಹೊಸ ಸಮಸ್ಯೆಗಳ ಮಧ್ಯೆ ಅರಿತು ಕಾರ್ಯಕ್ರಮ ರೂಪಿಸುವ ಜರೂರಂತೂ ಇದ್ದೇ ಇದೆ.

[1] EC, VIII (Rice ed)ಸೊರಬ, ೩೧೭

[2]ಕಾಣೆ ಪಿ.ವಿ.ಸಂಪುಟ ೩, (೧೯೯೩ ಮುದ್ರಣ) ಪು.೧೫೩.

[3] EC, VIII,(Rice ed) ನಗರ ೫೮.

[4] SII, IX, ಕೂಡ್ಲಿಗಿ ತಾಲೂಕು, ಚಿಕ್ಕಕಿರೆಯಾಗಿನಹಳ್ಳಿ, ಸಂ,೫೯೩.

[5] EC IX ಚನ್ನಪಟ್ಟಣ ೨ ಮತ್ತು ೪, ಕೃಷ್ಣಾಪುರ ಕ್ರಿ.೧೪೩-೪೦ ವರಹ ನೀಡುವ ಬೆಟ್ಟಹಳ್ಳಿ ಹಾಳಾಗಲು ಚಿಕ್ಕ ಪರುಮಾಳೆದೇವನು ಅಲಗಿಸೆಟ್ಟಿಗೆ ಅದನ್ನು ಸರ್ವಮಾನ್ಯವಾಗಿ ನೀಡಿದ್ದನು.

[6]ದೀಕ್ಷಿತ ಜಿ.ಎಸ್., ಪೂರ್ವೋಕ್ತ, ಪು.೪೯.

[7] ECI ಸಂ. ೫೫೪, ವಿಷ್ಣುವರ್ಧನನ ದಂಡನಾಯಕ ಗಂಗಪಯ್ಯನು ಯುದ್ಧದಲ್ಲಿ ಗೆದ್ದಾಗ ಏನು ಬೇಕೆಂದು ಕೇಳಲು ತನ್ನ ಕುಲದೈವದ ಪೂಜೆಗಾಗಿ ಎರೆ ಕಟ್ಟಿಸಲು ಒಂದು ಹಳ್ಳಿಯನ್ನು ಕೇಳಿದನು.

[8]ಕಾಣೆ ಪಿ.ವಿ., ಪೂರ್ವೋಕ್ತ, ಸಂಪುಟ ೫ ಭಾಗ ೨(೧೯೭೭ ಮುದ್ರಣ) ಪು. ೯೪೮-೪೯.

[9]ದೀಕ್ಷಿತ ಜಿ.ಎಸ್., ಪೂರ್ವೋಕ್ತ, ಪು.೧೬೩,೧೯೫.

[10]ಅದೇ, ಪು.೯೦-೯೯.

[11]ಅದೇ, ಪು.೧೦೨-೧೦೩.

## ಪ್ರಭುತ್ವ, ಸಮುದಾಯ ಮತ್ತು ಸಹಭಾಗಿತ್ವ – ಎರಡು ಹಳ್ಳಿಗಳ ಕತೆ

### (೧)

ಸಮಾನತೆ ಸಾಧ್ಯತೆಯುಳ್ಳ ಸಮಾಜ ನಿರ್ಮಾಣಕ್ಕಾಗಿ ಸ್ವತಂತ್ರ ಭಾರತ ಆಧುನೀಕರಣ ಪ್ರಕ್ರಿಯೆ ಆರಂಭಿಸಿತು. ನಾಲ್ಕು ದಶಕಗಳ ಆಧುನೀಕರಣದ ನಂತರವು ಶತಮಾನಗಳ ಅಸಮಾನತೆ ಕಡಿಮೆಯಾಗಲಿಲ್ಲ. ಇದಕ್ಕೆ ವಿವಿಧ ಕಾರಣಗಳನ್ನು ಮುಂದಿಡಲಾಗುತ್ತಿದೆ. ಎಲ್ಲ ಕ್ಷೇತ್ರಗಳಲ್ಲೂ ಪ್ರಭುತ್ವದ ಅತಿಯಾದ ಮೂಗು ತೂರಿಸುವಿಕೆ ಅದರಲ್ಲಿ ತುಂಬಾ ಪ್ರಚಾರದಲ್ಲಿರುವ ಅಂಶ ಪ್ರಭುತ್ವವನ್ನು ಹೊರತು ಪಡಿಸಿದ ಪ್ರಯತ್ನಗಳಿಗೆ ಪ್ರಾಮುಖ್ಯತೆ ಕೊಡುವುದೆ ಈ ಸಮಸ್ಯೆಗಳಿಗೆ ಸರಿಯಾದ ಪರಿಹಾರವೆಂದು ಮನಗಾಣಲಾಗಿದೆ (ರಜನಿ ಕೊಥಾರಿ, ೧೯೯೫). ಹೀಗೆ ಇಂದು ಎಲ್ಲ ಕ್ಷೇತ್ರಗಳಲ್ಲು ಖಾಸಗಿ ಮತ್ತು ಸಮುದಾಯ ಪ್ರಯತ್ನಗಳ ಬಗ್ಗೆ ಹಿಂದೆ ಕೇಳರಿಯದ ಒಳ್ಳೆಯ ಮಾತುಗಳು ಕೇಳಿ ಬರುತ್ತಿವೆ. ಪ್ರಭುತ್ವ ಬಲಯುತವಾಗಿ ಇದ್ದುದರಿಂದಲೇ ಖಾಸಗಿ ಮತ್ತು ಸಮುದಾಯ ಪ್ರಯತ್ನಗಳು ನಮ್ಮಲ್ಲಿ ಸರಿಯಾಗಿ ಬೇರೂರಲು ಆಗಿಲ್ಲ. ಖಾಸಗಿ ಮತ್ತು ಸಮುದಾಯ ಪ್ರಯತ್ನಗಳು ಸರಿಯಾಗಿ ಬೇರೂರಬೇಕಾದರೆ ಪ್ರಭುತ್ವ ಹಿಂದಕ್ಕೆ ಸರಿಯಲೇ ಬೇಕು ಎನ್ನುವ ನಿಲುವು ದಿನೇ ದಿನೇ ಬಲಗೊಳ್ಳುತ್ತಿದೆ (ಡಿ.ಎಲ್.ಸೇತ್, ೧೯೪೮). ಈ ನಿಲುವು ಯಾವ ಹಂತಕ್ಕೆ ತಲುಪಿದೆಯೆಂದರೆ ಕೆಲವರು ಪ್ರಭುತ್ವದ ಇರುವಿಕೆಯೇ ಅನಾವಶ್ಯ ಎನ್ನುವ ವಾದವನ್ನೂ ಮಂಡಿಸುತ್ತಿತಿದ್ದಾರೆ. ಇದರ ಜತೆಗೆ ಸಮುದಾಯ ಪ್ರಯತ್ನಗಳು ನಮ್ಮಲ್ಲಿ ಅತಿ ಸುಲಭದಲ್ಲಿ ಬೇರೂರಬಹುದು ಎನ್ನುವ ಗ್ರಹಿಕೆನೂ ಇದೆ. ಯಾಕೆಂದರೆ ನಮ್ಮದು ಮೂಲತಃ ಒಂದು ಸಮುದಾಯದ ನೆಲೆಯಲ್ಲಿ ಗುರುತಿಸಿಕೊಳ್ಳುವ ಸಮಾಜ. ಇಲ್ಲಿ ಪಶ್ಚಿಮದಲ್ಲಿ ಇದ್ದಂತೆ ವ್ಯಕ್ತಿಗಳು ಇಲ್ಲ; ಸಮುದಾಯಗಳು ಮಾತ್ರ ಇರುವುದು (ಪಾರ್ಥ ಚಟರ್ಜಿ, ೧೯೯೮). ಈ ಹಿನ್ನೆಲೆಯಲ್ಲಿ ಸಮುದಾಯಗಳನ್ನು ರೂಪಿಸುವ ಮತ್ತು ಆ ಮೂಲಕ ಅವುಗಳನ್ನು ಆಧುನಿಕ ಅವಶ್ಯಕತೆಗಳಿಗೆ ತಯಾರುಗೊಳಿಸುವ ಪ್ರಶ್ನೆಯೇ ಇಲ್ಲ. ಚಾರಿತ್ರಿಕವಾಗಿ ನಮ್ಮ ಸಂಸ್ಕೃತಿಯಲ್ಲಿ ರೂಪುಗೊಂಡ ನಮ್ಮ ಸಮುದಾಯಗಳು ವಿಶೇಷ ಬದಲಾವಣೆ ಇಲ್ಲದೆ ಇಂದಿನ ಅಗತ್ಯಗಳಿಗೆ ಧಾರಾಳ ಸ್ಪಂದಿಸಬಹುದು ಎನ್ನುವ ಗ್ರಹಿತವೂ ಇದೆ. ಇಲ್ಲಿ ಸಮುದಾಯವನ್ನು ಒಂದು ಘರ್ಷಣೆ ಇಲ್ಲದ, ಸಮಸ್ಯೆರಹಿತ ಸ್ಪೇಸ್ ಆಗಿ ನೋಡಲಾಗುತ್ತಿದೆ. ಇಂತಹ ಸಮುದಾಯಗಳು ಸ್ವತಂತ್ರ್ಯಾಗಿ ಒಟ್ಟು ಸೇರಿ ತಮ್ಮ ಸಮಸ್ಯೆಗಳಿಗೆ ತಾವೇ ಪರಿಹಾರ ಕಂಡುಕೊಳ್ಳುತ್ತಾರೆ. ಎನ್ನುವ ನಂಬಿಕೆ ಇದೆ. ಅವುಗಳು ಒಟ್ಟು ಸೇರಿ ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಲು ಹೆಚ್ಚೆಂದರೆ ಕೆಲವು ಸರಕಾರೇತರ ಸಂಸ್ಥೆಗಳ (ಎನ್.ಜಿ.ಓ.) ಸಹಕಾರ ಇದ್ದರೆ ಸಾಕು ಅನ್ನುವವರು ಇದ್ದಾರೆ (ದಾಂಟೆವಾಲ, ೧೯೯೮). ಪ್ರಭುತ್ವ ಮತ್ತು ಸಮುದಾಯ ಕುರಿತ ಈ ಗ್ರಹಿತಗಳು ಎಷ್ಟರಮಟ್ಟಿಗೆ ನಿಜ ಎನ್ನುವುದನ್ನು ವಿಶ್ಲೇಷಿಸುವುದು ಈ ಅಧ್ಯಾಯದ ಉದ್ದೇಶ.

ಎರಡು ಹಳ್ಳಿಗಳಲ್ಲಿ ಸಣ್ಣ ನೀರಾವರಿ ನಿರ್ವಹಣೆ ಸಂಬಂಧಿಸಿದಂತೆ ನಡೆದ ಸಮುದಾಯ ಪ್ರಯತ್ನಗಳನ್ನು ಅಧ್ಯಯನ ಮಾಡುವ ಮೂಲಕ ಮೇಲಿನ ಗ್ರಹಿತಗಳನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಮಹಮ್ಮದ್ ನಗರ ಬೇಸಾಯ ಸಹಕಾರಿ ಸಂಘದವರು ನಡೆಸುತ್ತಿರುವ ಏತ ನೀರಾವರಿ ತಮ್ಮ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಪಾಪಿನಾಯಕನ ಹಳ್ಳಿ ಗ್ರಾಮಸ್ಥರು ತಮ್ಮ ಊರಿನ ಕೆರೆ ನಿರ್ಮಾಣ ಮತ್ತು ರಿಪೇರಿಗೆ ಕಟ್ಟಿಕೊಂಡ ಸಂಘಗಳೇ ಈ ಅಧ್ಯಯನದ ಮುಖ್ಯ ವಸ್ತುಗಳು. ಈ ಸಂಘಗಳ ಚರಿತ್ರೆ, ಹಿಂದಿನ ಮತ್ತು ಇಂದಿನ ವ್ಯವಹಾರ ಕುರಿತು ಮಾಹಿತಿಯನ್ನು ಎರಡು ಮೂಲಗಳಿಂದ ಸಂಗ್ರಹಿಸಲಾಗಿದೆ. ಒಂದು, ನೇರ ಸಂದರ್ಶನದ ಮೂಲಕ. ಆಡಳಿತ ಮಂಡಳಿ ಸದಸ್ಯರನ್ನು, ಪದಾಧಿಕಾರಿಗಳನ್ನು ಮತ್ತು ಸಾಮಾನ್ಯ ಸದಸ್ಯರನ್ನು ಸಂದರ್ಶನ ಮಾಡಿ ಮಾಹಿತಿ ಸಂಗ್ರಹಿಸಿಲಾಗಿದೆ. ಕಾರ್ಯಕಾರಿ ಸಭೆಗಳಿಗೆ ಹಾಜರಾಗಿ ಅದು ನಡೆಯುವ ವಿಧಾನ ಕುರತು ತಿಳಿದುಕೊಳ್ಳಲಾಗಿದೆ. ಎರಡು, ಸಂಘದ ಚರಿತ್ರೆ, ಹಿಂದಿನ ಮತ್ತು ಇಂದಿನ ವ್ಯವಹಾರ ಬಗ್ಗೆ ಸೆಕೆಂಡರಿ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಕಾರ್ಯಕಾರಿ ಸಮಿತಿ ಮೀಟಿಂಗ್ ವರದಿ, ವಾರ್ಷಿಕ ಮಹಾಸಭೆ ವರದಿ, ಲೆಕ್ಕ ಪರಿಶೋಧಕರ ವರದಿ ಮತ್ತು ಸಂಘ ಹೊರಗಿನವರ ಜತೆ ಮಾಡಿದ ಪತ್ರ ವ್ಯವಹಾರಗಳು ಇಲ್ಲಿ ಬಳಸಿದ ಮುಖ್ಯ ಸೆಕೆಂಡರಿ ಮಾಹಿತಿ ಮೂಲಗಳು. ಈ ಅಧ್ಯಾಯ ಮೂರು ಭಾಗಗಳಲ್ಲಿ ಇದೆ. ಮೊದಲ ಭಾಗದಲ್ಲಿ ಮಹಮ್ಮದ್ ನಗರ ಬೇಸಾಯ ಸಹಕಾರಿ ಸಂಘದವರು ನಡೆಸುತ್ತಿರುವ ಏತ ನೀರಾವರಿಯನ್ನು ವಿವರಿಸಿದ್ದೇನೆ. ಎರಡನೆ ಭಾಗದಲ್ಲಿ ಪಾಪಿನಾಯಕನ ಹಳ್ಳಿ ಗ್ರಾಮಸ್ಥರು ತಮ್ಮ ಊರಿನ ಕೆರೆ ನಿರ್ಮಾಣ ಮತ್ತು ರಿಪೇರಿಗೆ ನಡೆಸಿದ ಪ್ರಯತ್ನಗಳು ವಿವರ ಇದೆ. ಈ ಎರಡು ಪ್ರಯತ್ನಗಳ ವಿಶ್ಲೇಷಣೆ ಮತ್ತು ಕೆಲವು ತೀರ್ಮಾನಗಳನ್ನು ಅಧ್ಯಾಯನ ಕೊನೆ ಭಾಗದಲ್ಲಿ ಕೊಟ್ಟಿದ್ದೇನೆ.

ಭಾಗ–೧

ಬೃಹತ್ ಕೈಗಾರಿಕೆಗಳು, ಬೃಹತ್ ಆಣೆಕಟ್ಟು ಇತ್ಯಾದಿಗಳಂತೆ ಸಹಕಾರಿ ಚಳವಳಿ ಕೂಡ ನೆಹರೂರವರ ಆಧುನೀಕರಣದ ಮುಖ್ಯ ಲಕ್ಷಣ. ಎಷ್ಟೋ ಸಂದರ್ಭಗಳಲ್ಲಿ ಇಂತಹ ಬೃಹತ್ ಯೋಜನೆಗಳು ಸಾವಿರಾರು ಎಕರೆ ಭೂಮಿಯನ್ನು ಕಬಳಿಸುವ ಜತೆಗೆ ಸಾವಿರಾರು ಕುಟುಂಬಗಳನ್ನು ಬೀದಿ ಪಾಲು ಮಾಡಿವೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನಲ್ಲಿ ತುಂಗಭದ್ರಾ ಅಣೆಕಟ್ಟು ಆದಾಗಲೂ ಇದೇ ಸ್ಥಿತಿ ನಿರ್ಮಾಣವಾಗಿತ್ತು. ಆದರೆ ಅಂದು ಉಚ್ಛ್ರಾಯ ಸ್ಥಿತಿಯಲ್ಲಿ ಇದ್ದ ಸಹಕಾರಿ ಚಳವಳಿ ಕೆಲವರಿಗಂತೂ ಸ್ವಲ್ಪ ಭಿನ್ನವಾದ ಬದುಕನ್ನು ಸಾಧ್ಯವಾಗಿಸಿತು. ಅಣೆಕಟ್ಟಿನಿಂದ ಮುಳುಗಡೆಯಾದ ಪ್ರದೇಶದ ಜನರಿಗೆ ಹೊಸಪೇಟೆ, ಕೊಪ್ಪಳ ಮತ್ತು ಹಡಗಲಿ ತಾಲ್ಲೂಕುಗಳಲ್ಲಿ ಭೂಮಿ ಕೊಟ್ಟ ಹೊಸ ಬದುಕಿಗೆ ಅವಕಾಶ ಮಾಡಿಕೊಡಲಾಯಿತು. ಹಾಗೆ ಸಂತ್ರಸ್ತರಾದ ೨೭ ಕುಟುಂಬಗಳಿಗೆ ಕೊಪ್ಪಳ ಜಿಲ್ಲೆಯ (ಮೊದಲು ರಾಯಚೂರು ಜಿಲ್ಲೆ) ಕೊಪ್ಪಳ ತಾಲ್ಲೂಕಿನ ಶಿವಪುರ ಪಂಚಾಯತ್‌ನ ಮಹಮ್ಮದ್ ನಗರ ಗ್ರಾಮದ ಕವಳಿಯಲ್ಲಿ ಮರು ವಸತಿ ಮಾಡಲಾಯಿತು. ಐದರಿಂದ ಇಪ್ಪತ್ತು ಸಾವಿರಗಳಷ್ಟು ಪರಿಹಾರ ಧನ ನೀಡುವುದರ ಜತೆಗೆ ಸರಕಾರ ಅವರಿಗೆ ೧೦೫ ಎಕರೆ ಭೂಮಿ ಕೊಟ್ಟಿತು. ಪರಿಹಾರ ಹಣದ ಬಹುಭಾಗ ಹೊಸ ಊರಿನಲ್ಲಿ (ಶಿವಪುರದಲ್ಲಿ)ಮನೆ ನಿರ್ಮಾಣಕ್ಕೆ ಹೋಯಿತು. ಇನ್ನು ದಿನನಿತ್ಯದ ಊಟದ ಚಿಂತೆ ಶುರು. ಕೃಷಿ ಮಾಡುವ ಎಂದರೆ ಭೂಮಿ ಸಮತಟ್ಟಾಗಿ ಇಲ್ಲ, ನೀರಿಲ್ಲ, ಉಳುಮೆಗೆ ಎತ್ತುಗಳು ಇಲ್ಲ. ಆಗಾಧವಾದ ಸಮಸ್ಯೆ ಒಂದು ಕಡೆಯಾದರೆ ಪರಿಹಾರಕ್ಕೆ ವೈಯಕ್ತಿಕವಾಗಿ ಯಾರಲ್ಲೂ ಬಂಡವಾಳ ಉಳಿದಿಲ್ಲ. ಇಂತಹ ಸಂದರ್ಭದಲ್ಲಿ ಅಂದಿನ ಸರಕಾರ ಸಹಕಾರಿ ಚಳವಳಿಗೆ ಕೊಟ್ಟ ಮಹತ್ವ ಅವರಿಗೆ ಉಪಯೋಗಕ್ಕೆ ಬಂತು. ಸಹಕಾರಿ ಸಂಘ ಮಾಡಿಕೊಂಡರೆ ಅನುಕೂಲವಾದಿತೆಂದು ನಿರ್ವಸತಿಗರಿಗೆ ಸಲಹೆ ಇತ್ತರು.

ಅದರಂತೆ ೧೯೬೦ರಲ್ಲಿ ಮಹಮ್ಮದ ನಗರ ಸಹಕಾರಿ ಸಾಮೂಹಿಕ ಬೇಸಾಯ ಸಂಘ ಹುಟ್ಟಿಕೊಂಡಿತು. ಸಾಮೂಹಿಕ ಬೇಸಾಯ ಆರಂಭಿಸಲು ಹಳ್ಳ ದಿನ್ನೆಗಳನ್ನು ಸಮತಟ್ಟುಗೊಳಿಸಬೇಕಿತ್ತು, ನೀರಿನ ವ್ಯವಸ್ಥೆ ಆಗಬೇಕಿತ್ತು ಮತ್ತು ಉಳುಮೆಗೆ ಎತ್ತುಗಳ ವ್ಯವಸ್ಥೆ ಆಗಬೇಕಿತ್ತು. ಸಮಸ್ಯೆ ಪರಿಹಾರಕ್ಕೆ ಸಹಕಾರಿ ಅಧಿಕಾರಿಗಳ ಸಲಹೆ ಕೇಳಿದರು. ಸಹಕಾರಿ ನಿಯಮ ಪ್ರಕಾರ ಪ್ರತಿಯೊಂದಕ್ಕು ಅಧಿಕಾರಿಗಳ ಅನುಮತಿಯ ಅಗತ್ಯನೂ ಇತ್ತು. ಸಂಘದ ಹೊಲಗಳು ನದಿ ಪಾತ್ರದಿಂದ ಸುಮಾರು ಮೂವತ್ತು ಅಡಿ ಎತ್ತರದಲ್ಲಿ ಇದ್ದವು. ನದಿ ದಂಡೆಯಲ್ಲಿ

ಒಂದು ಬಾವಿ ತೋಡಿಸಿ ಏತ ನೀರಾವರಿ (ಲಿಫ್ಟ್ ಇರಿಗೇಶನ್) ಮಾಡಲು ಅಧಿಕಾರಿಗಳು ಸಲಹೆ ಇತ್ತರು. ಅದರಂತೆ ಇಪ್ಪತ್ತು ಅಡಿ ಆಳ ಮತ್ತು ಆರು ಅಡಿ ಅಗಲದ ಬಾವಿ ತೋಡಿಸಿ ಕಲ್ಲು ಕಟ್ಟಿಸಿದರು. ಬಾವಿಗೆ ತಾಗಿಕೊಂಡಂತೆ ಪಂಪ್ ಶೆಡ್ ಕೂಡ ಕಟ್ಟಿಸಿದರು. ಲಿಫ್ಟ್ ಆದ ನೀರು ಎಲ್ಲ ಹೊಲಗಳಿಗೆ ಹರಿದು ಹರಿದು ಹೋಗಲು ಶೆಡ್ ನಿಂದ ಸುಮಾರು ಹತ್ತು ಅಡಿ ಎತ್ತರದಲ್ಲಿ ನೂರು ಮೀಟರು ಉದ್ದದ ಕಾಲುವೆ ನಿರ್ಮಿಸಿದರು. ಒಂದು ಹತ್ತು ಹೆಚ್.ಪಿ.ಪಂಪ್ ಖರೀದಿಸಿ ನೀರಿನ ವ್ಯವಸ್ಥೆ ಮಾಡಿಕೊಂಡರು. ಬುಲ್ ಡೋಜರ್ ಕಳುಹಿಸಿ ಸರಕಾರವೇ ಭೂಮಿ ಸಮತಟ್ಟುಗೊಳಿಸಿಕೊಟ್ಟಿತು. ಹೀಗೆ ಅವರ ಸಮಸ್ಯೆಗಳು ತಕ್ಕಮಟ್ಟಿಗೆ ಪರಿಹಾರವಾಗಿ ಸಾಮೂಹಿಕ ಕೃಷಿ ಆರಂಭವಾಯಿತು. ಮೊದಲ ಕೆಲವು ವರ್ಷ ಹುರುಳಿ, ನವಣೆ, ಸಜ್ಜೆ ಇತ್ಯಾದಿಗಳನ್ನು ಮಾತ್ರ ಬೆಳೆಯುತ್ತಿದ್ದರು. ನಂತರ ಭತ್ತ ಬೆಳೆಯಲು ಆರಂಭಿಸಿದರು. ತಾವು ಹುಟ್ಟಿ ಬೆಳೆದ ಮನೆ, ಪರಿಸರ, ತಮ್ಮ ಸ್ವಂತ ಭೂಮಿ ಇತ್ಯಾದಿಗಳನ್ನು ಕಳಕೊಂಡು ನೋವುಂಡ ಸಂಸಾರಗಳಿಗೆ ಪುನಃ ಇಲ್ಲಿನ ಬದುಕಿಗೆ ಒಗ್ಗಿಕೊಳ್ಳುವುದು ಕಷ್ಟವೇ ಆಯಿತು. ಕೆಲವು ಸದಸ್ಯರು ಸಾಮೂಹಿಕ ಬೇಸಾಯಕ್ಕೆ ಒಗ್ಗಿಕೊಳ್ಳಲು ಆಗದೆ ಬಿಟ್ಟು ಹೋದರು. ಕೆಲವರು ಹೋದರೇನು ಭೂಮಿ ಇಲ್ಲದವರನ್ನು ಹುಡುಕುವುದು ಕಷ್ಟವಾಗಲಿಲ್ಲ. ಹೋದವರ ಬದಲಿಗೆ ಹೊಸಬರನ್ನು ಸೇರಿಸಿಕೊಳ್ಳಲಾಯಿತು. ಇಷ್ಟಾದರೂ ಕ್ರಮ ಪ್ರಕಾರ ಬೇಸಾಯವಾಗಿ ಎಲ್ಲರ ಮೂಲಭೂತ ಅಗತ್ಯಗಳನ್ನು ಪೂರೈಸುವಷ್ಟು ಬೆಳೆ ಬರುತ್ತಿರಲಿಲ್ಲ. ಅದಕ್ಕೆ ಮುಖ್ಯ ಕಾರಣ ಉಳುಮೆಗೆ ಸರಿಯಾದ ವ್ಯವಸ್ಥೆ ಇಲ್ಲದಿರುವುದು. ಇದ್ದ ಒಂದೆರಡು ಜೋಡು ಎತ್ತುಗಳಿಂದ ಎಷ್ಟು ಬೇಸಾಯ ಮಾಡಬಹುದು? ಉಳುಮೆಗೆ ವ್ಯವಸ್ಥೆ ಮಾಡುವ ಕುರಿತು ಚರ್ಚಿಸುವಾಗ ಟ್ರ್ಯಾಕ್ಟರ್ ಖರೀದಿಸುವ ವಿಚಾರ ಬಂತು. ಹೆಚ್ಚು ಕಡಿಮೆ ಎಲ್ಲ ಸದಸ್ಯರು ಆ ಕುರಿತು ಸಹಮತ ತೋರಿದರು. ಅದರ ಖರೀದಿಗೆ ಮತ್ತು ಇತರ ವಿನಿಯೋಜನೆಗಳಿಗೆ ಹೆಚ್ಚಿನ ಬಂಡವಾಳದ ಅಗತ್ಯ ಬಿತ್ತು. ಸಂಘ ಶುರು ಮಾಡಿದ ೧೭ ಸದಸ್ಯರು ಹೆಚ್ಚು ಶೇರು ಬಂಡವಾಳ ಹಾಕುವ ಸ್ಥಿತಿಯಲ್ಲಿ ಇರಲಿಲ್ಲ. ಆದುದರಿಂದ ಹೊಸ ಸದಸ್ಯರನ್ನು ಸೇರಿಸಿಕೊಳ್ಳುವ ಅನಿವಾರ್ಯತೆ ಬಂತು. ೧೭ ಹೊಸ ಸದಸ್ಯರನ್ನು ಸೇರಿಸಿಕೊಳ್ಳಲಾಯಿತು. ನಂತರ ಕೊಪ್ಪಳದ ಸಹಕಾರಿ ಅಧಿಕಾರಿಗಳಿಗೆ ಟ್ರ್ಯಾಕ್ಟರ್ ಖರೀದಿ ಬಗ್ಗೆ ಮನವಿ ಸಲ್ಲಿಸಿದರು. ಅವರು, 'ಹೊಸ ಟ್ರ್ಯಾಕ್ಟರ್ ಖರೀದಿಸುವುದು ಬೇಡ. ಕೊಪ್ಪಳ ತಾಲ್ಲೂಕಿನ ಮತ್ತೊಂದು ಸಹಕಾರಿ ಸಂಘದವರು ತಮ್ಮ ಟ್ರ್ಯಾಕ್ಟರ್ ಮಾರಲು ಅನುಮತಿ ಕೋರಿದ್ದಾರೆ. ಅದು ನಿಮಗೆ ಆಗುವುದಾದರೆ ನಿಮ್ಮ ಹೆಸರಿಗೆ ವರ್ಗಾಯಿಸಲು ವ್ಯವಸ್ಥೆ ಮಾಡುತ್ತೇನೆ. ಅವರು ಖರೀದಿಸಿ ಒಂದು ವರ್ಷ ಆಗಿದೆ, ಸುಸ್ಥಿತಿಯಲ್ಲಿ ಇದೆ. ಅವರು ಕಟ್ಟಿ ಬಾಕಿ ಉಳಿದಿರುವ ಸಾಲವನ್ನು ನೀವು ಸಂದಾಯ ಮಾಡಿದರೆ ಟ್ರ್ಯಾಕ್ಟರ್ ನಿಮ್ಮದಾಗುತ್ತದೆ', ಎಂದು ಟ್ರ್ಯಾಕ್ಟರ್ ಖರೀದಿ ಸಮಸ್ಯೆಯನ್ನು ಪರಿಹರಿಸಿದರು (ಆಡಳಿತ ಮಂಡಳಿ ವರದಿ, ೧೯೭೪).

ಟ್ರ್ಯಾಕ್ಟರ್ ಬಂತು. ಸದಸ್ಯರ ಸಂಖ್ಯೆ ಹೆಚ್ಚಿತು. ನೀರಿನ ವ್ಯವಸ್ಥೆ ಹಿಂದೆಯೇ ಆಗಿತ್ತು. ಸಾಮೂಹಿಕ ಬೇಸಾಯಕ್ಕೆ ಹೊಸ ಕಳೆ ಬಂತು. ಕವಳಿಯಲ್ಲಿ ಸಂಘದ ಕಚೇರಿ ಕಟ್ಟಿಸಿಕೊಂಡರು. ಮನೆ ಇಲ್ಲದವರಿಗೆ ಉಳಕೊಳ್ಳಲು ಕಚೇರಿ ಹತ್ತಿರವೇ ಎಂಟು ಕೊಠಡಿಗಳಿರುವ ಒಂದು ಕಟ್ಟಡ ಕಟ್ಟಿಸಿದರು. ಹೀಗೆ ಸಾಮೂಹಿಕ ಬೇಸಾಯ ಅವರ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಆರಂಭಿಸಿತು. ಆದರೆ ಅದೇ ಸಂದರ್ಭದಲ್ಲಿ ಹೊಸ ಸಮಸ್ಯೆಗಳೂ ಬಂದವು. ಎಪ್ಪತ್ತರ ದಶಕದಲ್ಲಿ ಮುನಿರಾಬಾದ್‌ನಲ್ಲಿ ಸಲಾರ್‌ಜಂಗ್ ಶುಗರ್ ಮಿಲ್ ಎನ್ನುವ ಸಕ್ಕರೆ ಕಾರ್ಖಾನೆ ಶುರುವಾಯಿತು. ಶುಗರ್ ಮಿಲ್‌ಗೆ ಕಬ್ಬು ಬೆಳೆಯಲು ಮಿಲ್ಲಿನ ಸುತ್ತಮುತ್ತಲಿರುವ ಹಳ್ಳಿಗಳಲ್ಲಿ ಭೂಮಿ ಬೇಕಿತ್ತು. ಬೀಳು ಬಿದ್ದ ಬಹುತೇಕ ಸರಕಾರಿ ಭೂಮಿ ಸಿಗಲಿಲ್ಲ. ನಿವೃತ್ತಿ ಹೊಂದಿದ ಡೆಪ್ಯುಟಿ ತಹಸಿಲ್ದಾರರೊಬ್ಬರನ್ನು ತಮ್ಮ ಮಿಲ್‌ನಲ್ಲಿ ಮೇನೇಜರ್ ಆಗಿ ನೇಮಿಸಿಕೊಂಡಿದ್ದರು. ಆತ, ಸೊಸೈಟಿಯವರ ಪ್ರಕಾರ, ನಿರ್ವಸತಿಗರಿಗೆ ಕೊಟ್ಟ ಜಮೀನುಗಳಿಗೆ ಸಂಬಂಧಿಸಿದ ಕಾಗದ ಪತ್ರಗಳನ್ನು ನಾಶ ಪಡಿಸಿ ಸರಕಾರಿ ಭೂಮಿ ಪಟ್ಟಾ ಭೂಮಿ ಎಂಬ ಗುರುತು ಹತ್ತದಂತೆ ಮಾಡಿದ. ಸೊಸೈಟಿಗೆ ಹಂಚಿಕೆಯಾದ ಭೂಮಿಯನ್ನು ಖಾಲಿ ಭೂಮಿ ಎಂದು ತೋರಿಸಿ ಶುಗರ್ ಮಿಲ್ಲಿನವರು ಸಂಘದ ಮೂವತ್ತು ಎಕರೆ ಭೂಮಿಯನ್ನು ಕಬಳಿಸಲು ಸಹಕರಿಸಿದ (ಸಂಘದ ಪತ್ರ,೧೯೮೭). ಸೊಸೈಟಿಯವರು ಎಷ್ಟೇ ಪ್ರಯತ್ನ ಪಟ್ಟರು ಆ ಭೂಮಿಯನ್ನು ಪುನರ್ ವಶ ಪಡಿಸಿಕೊಳ್ಳಲಾಗಲಿಲ್ಲ. ಹೊರಗಿನ ಈ ಸಮಸ್ಯೆ ಸಾಲದೆಂಬಂತೆ ಆಂತರಿಕವಾಗಿ ಹಲವು ಸಮಸ್ಯೆಗಳು ಹುಟ್ಟಿಕೊಂಡವು. ಒಂದು ಸಂಘದ ಜಮೀನು ವಿತರಣೆ ಕುರಿತ ತಕರಾರು. ತಕರಾರು ತೀರ್ಮಾನಕ್ಕಾಗಿ ಕೆಲವು ಸದಸ್ಯರು ಕೋರ್ಟ್ ಮೆಟ್ಟಲು ಹತ್ತಿದರು. ಸಂಘದ ಕೆಲವು ಸದಸ್ಯರ ಪ್ರಕಾರ ಅವರು ಕೋರ್ಟ್ ಮೆಟ್ಟಲು ಹತ್ತಲು ಕೇವಲ ಜಮೀನಿನ ಪ್ರಶ್ನೆ ಮಾತ್ರ ಕಾರಣವಲ್ಲ. ಕೋರ್ಟ್‌ಗೆ ಹೋದವರಲ್ಲಿ ಒಬ್ಬರು ಹಿಂದೆ ಸಂಘದ ಅಧ್ಯಕ್ಷರಾಗಿದ್ದರು. ಸಂಘದ ವ್ಯವಹಾರವನ್ನು ಅವರ ಇಚ್ಛೆಗೆ ಅನುಸಾರ ನಡೆಸಿದ್ದರು. ಸಂಘ ಅವರಿಂದಾಗಿ ತುಂಬ ನಷ್ಟ ಅನುಭವಿಸಿತು. ಅವರ ಕೆಟ್ಟ ಆಡಳಿತವನ್ನು ಇಷ್ಟ ಪಡದ ಸದಸ್ಯರು ಒಟ್ಟು ಸೇರಿ

ಅವರನ್ನು ಅಧಿಕಾರದಿಂದ ಇಳಿಸಿದರು. ಇದರಿಂದ ಅವಮಾನಗೊಂಡ ಅವರು ತನ್ನ ಸಂಗಡಿಗರನ್ನು(ನಾಲ್ಕು ಮಂದಿ ಸದಸ್ಯರು)ಸೇಖುಇಕೊಂಡು, 'ನಮ್ಮ ಪಾಲಿನ ಭೂಮಿ ನಮಗೆ ಕೊಟ್ಟು ಬಿಡಿ (ಆರಂಭದಲ್ಲಿ ಹಂಚಿಕೆಯಾದ ನಾಲ್ಕು ಎಕರೆ),ನಾವು ಸಂಘ ಬಿಟ್ಟು ಪ್ರತ್ಯೇಕ ಬೇಸಾಯ ಮಾಡಿಕೊಳ್ಳುತ್ತೇವೆ', ಎಂಬ ಬೇಡಿಕೆ ಮುಂದಿಟ್ಟರು. ಅದಕ್ಕೆ ಸಂಘದ ಇತರ ಸದಸ್ಯರು ಒಪ್ಪಲಿಲ್ಲ. ಜಗಳ ಕೋರ್ಟ್‌ಗೆ ಹೋಯಿತು. ಕೇಸ್ ಜಿಲ್ಲಾ ಮಟ್ಟದಿಂದ ಹೈಕೋರ್ಟ್ ತನಕ ಹೋಗಿ ಕೊನೆಗೆ ಸಂಘದ ಪರ ತೀರ್ಪು ಬಂತು.

ಇದರ ಜತೆಗೆ ಸಂಘದ ಸಾಮೂಹಿಕ ಬೇಸಾಯ ಕೂಡ ಅದರ ಉದ್ದೇಶಿತ ರೂಪದಲ್ಲಿ ಕಾರ್ಯರೂಪಕ್ಕೆ ಬರಲಿಲ್ಲ. ಸಾಮೂಹಿಕ ಬೇಸಾಯದಲ್ಲಿ ಪ್ರತಿಯೊಂದು ಮನೆಯಿಂದಲೂ ನಿರ್ದಿಷ್ಟ ಸಂಖ್ಯೆಯ ಆಳುಗಳು ಬೇಸಾಯದಲ್ಲಿ ಪಾಲುಗೊಳ್ಳಬೇಕೆಂದಿದೆ. ಆರಂಭದಲ್ಲಿ ಅಧಿಕಾರದಲ್ಲಿ ಇದ್ದ ಕೆಲವರು ಉಡಾಫೆ ಕಾರಣಗಳನ್ನು ಕೊಟ್ಟು ಬೇಸಾಯದ ಕೆಲಸದಿಂದ ತಪ್ಪಿಸಿಕೊಳ್ಳುತ್ತಿದ್ದರು. ಅವರ ಉದಾಹರಣೆಯನ್ನು ಇತರರು ಅನುಸರಿಸಲು ಆರಂಭಿಸಿದರು. ಕೇಳಿದರೆ ಮತ್ತೊಬ್ಬನ ಉದಾಹರಣೆ ತೋರಿಸಿ, 'ಅವನು ನಿನ್ನೆ ಬಂದಿಲ್ಲ; ಯಾಕೆ ಅವನ್ನ ಕೇಳಿಲ್ಲ. ಅವನಿಗೊಂದು ನ್ಯಾಯ ನನಗೊಂದು ನ್ಯಾಯವೇ?' ಎಂದು ಕೇಳಿ ಪ್ರಶ್ನಿಸಿದವರ ಬಾಯಿ ಮುಚ್ಚಿಸುತ್ತಿದ್ದರು. ಸಂಘದ ಜಮೀನಿನ ಉಳುಮೆಗೆ ಖರೀದಿಸಿ ಟ್ರಾಕ್ಟರ್ ದುರುಪಯೋಗವಾಗಿ ನಷ್ಟ ಅನುಭವಿಸಬೇಕಾಯಿತು. ಸಾಮೂಹಿಕ ಬೇಸಾಯದಲ್ಲಿ ಬೀಜ, ರಸ ಗೊಬ್ಬರ, ಕ್ರಿಮಿನಾಶಕ, ನೀರು ಪೂರೈಕೆಗೆ ಅಗತ್ಯವಿರುವ ಸಾಮಗ್ರಿ ಇತ್ಯಾದಿಗಳನ್ನು ಮಾರುಕಟ್ಟೆಯಿಂದ ಖರೀದಿಸಬೇಕು. ಆ ಜವಾಬ್ದಾರಿಯನ್ನು ಸಂಘದ ನಿರ್ದೇಶಕರು ಅಥವಾ ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳು ನಿರ್ವಹಿಸುತ್ತಿದ್ದರು. ಎಷ್ಟೋ ಸಂದರ್ಭಗಳಲ್ಲಿ ಇವರು ಸಂಘದ ಆಸಕ್ತಿಗಿಂತ ತಮ್ಮ ಸ್ವಂತದ ಆಸಕ್ತಿಗೆ ಪೂರಕವಾಗಿ ನಿರ್ಧಾರ ತಳೆದು ಸಂಘ ನಷ್ಟ ಅನುಭವಿಸುವಂತೆ ಮಾಡಿದರು. ಸಂಘದ ಉತ್ಪನ್ನಗಳನ್ನು ಮಾರುವಾಗ ವ್ಯಾಪಾರಿಗಳ ಜತೆ ಶಾಮೀಲಾಗಿ ಬಿಲ್ಲಿನಲ್ಲಿ ಕಡಿಮೆ ಬೆಲೆ ನಮೂದಿಸಿ ನಿಜ ಬೆಲೆಯನ್ನು ತಮ್ಮ ಜೇಬಿಗೆ ಸೇರಿಸಿದರು. ಹೀಗೆ ಸಾಮೂಹಿಕ ಬೇಸಾಯ ವರ್ಷದಿಂದ ವರ್ಷಕ್ಕೆ ನಷ್ಟ ಅನುಭವಿಸುತ್ತಾ ಬಂತು. ಈ ಸಮಸ್ಯೆಯಿಂದ ಹೊರಬರಲು ಹಿರಿಯ ಸದಸ್ಯರು ಅನ್ಯಮಾರ್ಗದ ಕುರಿತು ಆಲೋಚಿಸಿದರು. ಸಾಮೂಹಿಕ ಬೇಸಾಯ ಮಾಡುವುದರಿಂದ ಸದಸ್ಯರು ವೈಯಕ್ತಿಕ ಜವಾಬ್ದಾರಿ ತೆಗೆದುಕೊಳ್ಳುತ್ತಿಲ್ಲ. ಲಾಭವನ್ನು ತಮ್ಮ ಸ್ವಂತಕ್ಕೆ ಬಳಸಿ ನಷ್ಟವನ್ನು ಸಂಘದ ಹೆಸರಿಗೆ ವರ್ಗಾಯಿಸುತ್ತಿದ್ದರು. ಈ ಸಮಸ್ಯೆ ಪರಿಹಾರಕ್ಕೆ ಬೇಸಾಯ ಮತ್ತು ಅದರಿಂದ ಬರುವ ಲಾಭ ನಷ್ಟಕ್ಕೆ ಸದಸ್ಯರನ್ನೇ ಹೊಣೆ ಮಾಡಬೇಕೆಂಬ ತೀರ್ಮಾನಕ್ಕೆ ಬಂದರು (ತಿದ್ದುಪಡಿಯಾದ ಬೈಲಾ, ೧೯೮೦). ಅದಕ್ಕಾಗಿ ಸಂಘದ ಬೈಲಾದಲ್ಲಿ ಈ ಕೆಳಗಿನ ಬದಲಾವಣೆಗಳನ್ನು ಮಾಡಿಕೊಂಡರು.

೧. ಸಹಕಾರಿ ಸಾಮೂಹಿಕ ಬೇಸಾಯ ಸಂಘವನ್ನು ಸಹಕಾರಿ, ಬೇಸಾಯ ಸಂಘ ಎಂದು ಬದಲಾಯಿಸಿಕೊಳ್ಳುವುದು.

೨. ಜಮೀನು ಸಂಘದ ಹೆಸರಲ್ಲೇ ಮುಂದುವರಿಯುವುದು, ಸದಸ್ಯರ ವ್ಯಕ್ತಿಗತ ಜಮೀನಿನ ಪ್ರಮಾಣ (೧ ಎಕರೆ ೧೦ ಗುಂಟೆ) ಈಗಾಗಲೇ ನಿರ್ಧರಿತವಾದಂತೆ ಮುಂದುವರಿಯುವುದು.

೩. ಸಂಘದಿಂದ ಹಂಚಿಕೆಯಾದ ಜಮೀನುಗಳನ್ನು ಆಯಾ ಸದಸ್ಯರುಗಳೇ ಸಾಗುವಳಿ ಮಾಡುವುದು.

೪. ಸಂಘದ ಜಮೀನು ಬೇಸಾಯ ಮಾಡುವುದಕ್ಕೆ ಪ್ರತಿಫಲವಾಗಿ ಪ್ರತಿ ಸದಸ್ಯನೂ ಸಂಘವು ನಿರ್ಧರಿಸುವ ಲಾವಣಿಯನ್ನು ಪ್ರತಿ ಬೆಳೆಗೆ (ಈಗ ರೂ.೮೦೦)ಸಂಘಕ್ಕೆ ಕಟ್ಟಬೇಕು.

೫. ಆಯಾ ಸದಸ್ಯರ ಪಾಲಿನ ಸಂಘದ ಜಮೀನಿನ ಕೃಷಿಗೆ ಅಗತ್ಯವಿರುವ ನೀರಿನ ಪೂರೈಕೆಯ ನಿರ್ವಹಣೆ ಮತ್ತು ಜವಾಬ್ದಾರಿ ಸಂಘದ್ದು.

**ನೀರಾವರಿ ನಿರ್ವಹಣೆಯಲ್ಲಿ ಸಹಭಾಗಿತ್ವ**

ಹೊಸ ವ್ಯವಸ್ಥೆ ೧೯೮೨ರಿಂದ ಜಾರಿ ಬಂತು. ಕೂಡ ಬೇಸಾಯ ಕೈಬಿಟ್ಟು ವ್ಯಕ್ತಿಗತ ಬೇಸಾಯ ಆರಂಭವಾಯಿತು. ಸದಸ್ಯರ ಕಬ್ಜಾದಲ್ಲಿರುವ ಸಂಘದ ಜಮೀನನ್ನು ಆಯಾಸದಸ್ಯರು ಬೇಸಾಯ ಮಾಡಲು ಕೊಡಬೇಕಾದ ಲಾವಣಿಯನ್ನು ಆಡಳಿತ ಮಂಡಳಿ ನಿರ್ಧರಿಸುತ್ತದೆ ಮತ್ತು ವಸೂಲಿ ಮಾಡುತ್ತದೆ. ಸದ್ಯಕ್ಕೆ ಸಂಘದ ಮುಖ್ಯ ಕೆಲಸ ಸದಸ್ಯರ ಹೊಲಗಳಿಗೆ ನೀರು ಪೂರೈಕೆ ಮಾಡುವುದು. ಅದಕ್ಕೆ ಬೇಕಾಗಿರುವ ಮೂಲಭೂತ ವಿನಿಯೋಜನೆ ಹಿಂದೆಯೇ ನಡೆದಿದೆ. ಇಂದು ಅವುಗಳ ರಿಪೇರಿ ಮತ್ತು ಉಸ್ತುವಾರಿ ನೋಡಿಕೊಳ್ಳುವುದು ಸಂಘದ ಜವಾಬ್ದಾರಿಯಾಗಿದೆ. ಸಂಘದ ವ್ಯವಹಾರವನ್ನು ನೋಡಿಕೊಳ್ಳಲು ಆಡಳಿತ ಮಂಡಳಿ ಅಥವಾ ಕಾರ್ಯಕಾರಿ ಸಮಿತಿ ಇದೆ. ಇದನ್ನು ವರ್ಷಕ್ಕೊಮ್ಮೆ ಸರ್ವ ಸದಸ್ಯರ ಸಭೆಯಲ್ಲಿ ಆಯ್ಕೆ ಮಾಡುತ್ತಾರೆ. ಕಾರ್ಯಕಾರಿ ಸಮಿತಿ ತಿಂಗಳಿಗೊಮ್ಮೆ ಸಭೆ ಸೇರಿ ಸಂಘದ ನಿರ್ವಹಣೆಗೆ ಸಂಬಂಧಿಸಿದ ನಿರ್ಣಯ ಕೈಗೊಳ್ಳುತ್ತಿದೆ. ಒಂದು ಸಭೆಗೆ ಹಾಜರಾಗಿ ಕಂಡುಕೊಂಡ ಕೆಲವು ವಿಚಾರಗಳನ್ನು ಮುಂದೆ ಕೊಟ್ಟಿದ್ದೇನೆ. ಅವತ್ತು ನಾನು ಹೋದದ್ದು ಸೊಸೈಟಿಯ ಕೆಲವು ಹಿರಿಯ ಸದಸ್ಯರನ್ನು ಭೇಟಿಯಾಗಿ ಅವರ ಅನುಭವಗಳನ್ನು ಸಂಗ್ರಹಿಸಲು. ಸೊಸೈಟಿಯ ಫೌಂಡರ್ ಅಧ್ಯಕ್ಷರಾದ ಕುರುಗೋಡಪ್ಪನವರನ್ನು ಅವರ ಶಿವಪುರದ ಮನೆಯಲ್ಲಿ ಮಾತಾಡಿಸುತ್ತಿದ್ದೆ. ಅಷ್ಟೊತ್ತಿಗೆ ಅವರ ತಂಗಿ ಮಗ ಅವರ ಮನೆಗೆ ಬಂದು ನಮ್ಮ ಜತೆ ಸೇರಿ ಕೊಂಡರು. ಸ್ವಲ್ಪ ಹೊತ್ತಿನ ನಂತರ ಕುರುಗೋಡಪ್ಪನ ತಂಗಿ ಮಗ, 'ನನಗೆ ಮೀಟಿಂಗ್‌ಗೆ ಹೋಗಬೇಕು ತಡವಾಯಿತು, ನಾನು ಹೋಗುತ್ತೇನೆ' ಎಂದು ಎದ್ದರು. ನಾನು, 'ಯಾವ ಮೀಟಿಂಗ್?' ಎಂದು ವಿಚಾರಿಸಿದಾಗ ಸೊಸೈಟಿಯ ನಿರ್ದೇಶಕರ ಮೀಟಿಂಗ್ ಕವಳಿಯ ಸೊಸೈಟಿ ಕಟ್ಟಡದಲ್ಲಿ ನಡೆಯುವ ವಿಚಾರ ತಿಳಿಸಿದರು. 'ಕುರು ಗೋಡಪ್ಪನವರ ಜತೆ ನಾನು ಇನ್ನೊಂದಿನ ಮಾತಾಡುತ್ತೇನೆ, ಇವತ್ತು ನಿಮ್ಮ ಜತೆ ಮೀಟಿಂಗ್‌ಗೆ ಬರುತ್ತೇನೆ,' ಎಂದೆ. 'ಆಯಿತು,' ಎಂದು ಕುರುಗೋಡಪ್ಪನ ಕಡೆಗೆ ತಿರುಗಿ, 'ನೀವು ಬರುತ್ತೀರಾ?' ಎಂದು ವಿಚಾರಿಸಿದರು. ಕುರುಗೋಡಪ್ಪ, ಸುಮಾರು ಎಂಬತ್ತೆರಡು ವರ್ಷ ಪ್ರಾಯದ ವ್ಯಕ್ತಿ. ಕೋಲು ಹಿಡಿದೇ ಓಡಾಡೇಕು. ಬರುವುದಿಲ್ಲ ನೀವು ಹೋಗಿ ಎನ್ನಬಹುದು ಎಂದು ನಾನು ಆಲೋಚಿಸುತ್ತಿರುವಾಗಲೇ, 'ನಾನು ಬರುತ್ತೇನೆ,' ಎಂದು ರೆಡಿಯಾಗಬೇಕೆ! ಬಸಪ್ಪ, ಕುರುಗೊಡಪ್ಪನ ತಂಗಿ ಮಗ ತನ್ನ ಸೈಕಲ್ಲಲ್ಲಿ ಮುಂದೆ ಹೋರಟನು. ನಾನು ಕುರುಗೋಡಪ್ಪನವರನ್ನು ಬೈಕಲ್ಲಿ ಕೂರಿಸಿಕೊಂಡು ಸೊಸೈಟಿಗೆ ಹೊರಟೆ.

ಶಿವಪುರದಿಂದ ಸುಮಾರು ಎರಡು ಕಿ.ಮೀ.ದೂರ ಕವಳಿ. ನಾವು ಸಂಘದ ಕಚೇರಿ ತಲುಪುವಾಗ ೧೧ ಗಂಟೆ. ಸಂಘದ ಕಚೇರಿಗಾಗಿ ಕಟ್ಟಿಸಿದ ಕಟ್ಟಡದಲ್ಲಿ ಎರಡು ಕೋಣೆಗಳಿವೆ. ಮೊದಲ ಕೊಠಡಿ ಹದಿನೈದು ಅಡಿ ಉದ್ದ ಮತ್ತು ಹತ್ತು ಅಡಿ ಅಗಲವಿರಬಹುದು. ಅದು ಸಂಘದ ಕಚೇರಿಯಾಗಿ ಕೆಲಸ ಮಾಡುತ್ತಿದೆ. ಅದಕ್ಕೆ ತಾಗಿಕೊಂಡಂತೆ ಕಚೇರಿಗಿಂತ ಸ್ವಲ್ಪ ವಿಶಾಲವಾಗಿರುವ ಮತ್ತೊಂದು ಕೋಣೆ ಇದೆ. ಅದು ಸಂಘದ ಗೋದಾಮು. ಈಗ ಅಲ್ಲಿ ನ್ಯಾಯ ಬೆಲೆ ಅಂಗಡಿ ಇದೆ. ಎಲ್ಲ ನಿರ್ದೇಶಕರು ಬಂದಿದ್ದರು. ಎರಡು ಉದ್ದದ ಬೆಂಚು. ಒಂದು ಟೇಬಲ್ ಅದರ ಒಂದು ಕಡೆ ಮೂರು ಬಾಟ ಚೇಯರ್, ಮತ್ತೊಂದು ಕಡೆ ಎರಡು ಬಾಟ ಚೇಯರ್ ಮತ್ತು ಒಂದು ಪ್ಲಾಸ್ಟಿಕ್ ಚೇಯರ್ ಇತ್ತು. ಗೋದಾಮು ಬದಿಯ ಗೋಡೆ ಮೇಲೆ ಅಧ್ಯಕ್ಷರು ಎಂದು ಬರೆದಿತ್ತು. ಈಗಿನ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಆ ಗೋಡೆ ಬದಿಯ ಬಾಟ ಚೇಯರ್‌ಗಳಲ್ಲಿ ಕೂತಿದ್ದರು. ಅವರ ಎದುರುಗಡೆ ಹಿಂದಿನ ವರ್ಷದ ಅಧ್ಯಕ್ಷರು ಮತ್ತು ಮತ್ತೊಬ್ಬ ನಿರ್ದೇಶಕರು ಕುಳಿತಿದ್ದರು. ಅಧ್ಯಕ್ಷರದ ಹತ್ತಿರ ಒಂದು ಚೇಯರ್ ಮತ್ತು ಮಾಜಿ ಅಧ್ಯಕ್ಷರ ಪಕ್ಕದಲ್ಲಿದ್ದ ಪ್ಲಾಸ್ಟಿಕ್ ಚೇಯರ್ ಖಾಲಿ ಇತ್ತು. ಹಾಲಿ ಅಧ್ಯಕ್ಷರ ಪಕ್ಕದ ಚೇಯರಲ್ಲಿ ಕರುಗೋಡಪ್ಪನವರನ್ನು ಕುಳ್ಳಿರಿಸಿ ಮಾಜಿ ಅಧ್ಯಕ್ಷರ ಪಕ್ಕದ ಪ್ಲಾಸ್ಟಿಕ್ ಚೇಯರನ್ನು ನನಗೆ ತೋರಿಸಿದರು. ಟೇಬಲ್ ಮತ್ತೊಂದು ಬದಿಗೆ ಐದು ಜನ ಕುಳಿತುಕೊಳ್ಳಬಹುದಾದ ಒಂದು ಬೇಂಚ್ ಇತ್ತು. ಅದರಲ್ಲಿ ಮಾಜಿ ಕಾರ್ಯದರ್ಶಿಯವರು, ಬಸಪ್ಪ ಮತ್ತು ಒಬ್ಬ ಮಹಿಳಾ ನಿರ್ದೇಶಕಿ ಇದ್ದರು. ನನ್ನ ಹಿಂದುಗಡೆ ಇದ್ದ ಉದ್ದನೆಯ ಬೇಂಚ್ ಮೇಲೆ ಇತರ ನಿರ್ದೇಶಕರು ಇದ್ದರು.

ಮೀಟಿಂಗ್ ಆರಂಭಿಸುವ ಲಕ್ಷಣ ಕಾಣಲಿಲ್ಲ. ನಾನು ಇರುವುದರಿಂದ ಇವರಿಗೆ ಮೀಟಿಂಗ್ ಆರಂಭಿಸಲು ಸಮಸ್ಯೆ ಆಗುತ್ತದೋ ಏನೋ ಎಂದು, 'ನಾನು ಇಲ್ಲಿ ಇರುವುದು ನಿಮಗೆ ಇರುಸು ಮುರುಸು ಆಗುವುದಾದರೆ ಹೊರಗೆ ಇರುತ್ತೇನೆ,' ಎಂದೆ. ಹಾಗೆ ಹೇಳುವಾಗ ಇವರು ಖಂಡಿತವಾಗಿಯೂ ನನ್ನನ್ನು ಹೊರಗೆ ಹೋಗಿ ಎನ್ನುವುದಿಲ್ಲ ಎನ್ನುವ ವಿಶ್ವಾಸವಿತ್ತು. ನನ್ನ ಮಾತಿಗೆ ಯಾರು ವಿಶೇಷ ಗಮನ ಕೊಟ್ಟಂತೆ ಕಾಣಲಿಲ್ಲ. ನನ್ನ ಮಾತನ್ನು ಪುನಃ ಉಚ್ಚರಿಸಿದೆ. 'ಇವರಿಗೆ ನಮ್ಮ ಪಂಪ್ ಶೆಡ್ ಪಕ್ಕ ಸ್ವಲ್ಪ ಸಮಯ ಇರಲು ವ್ಯವಸ್ಥೆ ಮಾಡಿ,' ಎಂದು

ಮಾಜಿ ಕಾರ್ಯದರ್ಶಿಯವರು ಹಾಲಿ ಕಾರ್ಯದರ್ಶಿಯವರಿಗೆ ಹೇಳಿದರು (ಹಾಲಿಯವರು ಮಾಜಿಯವರ ಮಗ) ಅವರಿಂದ ಆ ಉತ್ತರವನ್ನು ನಾನು ನಿರೀಕ್ಷಿಸಿರಲಿಲ್ಲ. ನನ್ನ ಉದ್ದೇಶ ಹೆಚ್ಚೆಂದರೆ ಮೀಟಿಂಗ್ ನಡೆಯುವ ಕೊಠಡಿಯ ಹೊರಗಿರುವುದಾಗಿತ್ತು. ಅವರು ಸೂಚಿಸಿದ ಪಂಪ್ ಶೆಡ್ ಅಲ್ಲಿಂದ ಸುಮಾರು ನೂರು ಮೀಟರು ದೂರ ಇದೆ. ನಾನು ಅಂದು ಹೋದದ್ದೇ ಮೀಟಿಂಗ್ ಹೇಗೆ ನಡೆಯುತ್ತದೆ ಎಂದು ನೋಡಲು. ಒಂದು ವೇಳೆ ಅದಕ್ಕೆ ಅವಕಾಶ ಸಿಗದಿದ್ದರೆ ಕನಿಷ್ಠ ಕೊಠಡಿಯ ಹೊರಗೆ ಇದ್ದು ಏನು ಚರ್ಚೆ ಆಗುತ್ತಿದೆ ಎಂದು ತಿಳಿದುಕೊಳ್ಳುವ ಉದ್ದೇಶವಿತ್ತು. ಮಾಜಿ ಕಾರ್ಯದರ್ಶಿಯ ಸೂಚನೆ ನನ್ನ ಇಡಿ ಯೋಜನೆಯನ್ನೇ ಬುಡಮೇಲು ಮಾಡಿತು. ಈ ಸಂದಿಗ್ಧ ಪರಿಸ್ಥಿತಿಯಿಂದ ಹೇಗೆ ಹೊರಬರುವುದೆಂದು ಯೋಚಿಸುತ್ತಿರುವಾಗ, 'ಇಲ್ಲೇ ಇರಿ ನೀವು;ನೀವು ಕೇಳಬಾರದಂತಹ ಚರ್ಚೆ ನಾವೇನು ಮಾಡುತ್ತಿಲ್ಲ,' ಎಂದು ಹೇಳಿ ಒಬ್ಬ ಸದಸ್ಯರು ನನ್ನ ಸಮಸ್ಯೆ ಪರಿಹರಿಸಿದರು. ಅಂದಿನ ಮೀಟಿಂಗ್‌ಗೆ ನಾಲ್ಕು ವಿಚಾರಗಳಿದ್ದವು- ಹಿಂದಿನ ಎರಡು ತಿಂಗಳ ಆಯಾ ವ್ಯಯ ಅಥವಾ ಲೆಕ್ಕ ಪತ್ರದ ಮಂಡನೆ, ಸೊಸ್ಶೈಟಿಯ ಗೊದಾಮಿನ ಸಣ್ಣಪುಟ್ಟ ರಿಪೇರಿ, ಸೊಸ್ಶೈಟಿ ತೋಟದ ಸುತ್ತ ಇರುವ ಬೇಲಿ ರಿಪೇರಿ ಮತ್ತು ಕರೆಂಟ್ ಕಡಿತದಿಂದ ಹುಟ್ಟಿಕೊಂಡ ನೀರು ಪೂರೈಕೆ ಸಮಸ್ಯೆ. ಲೆಕ್ಕ ಪತ್ರ ಕುರಿತು ಚರ್ಚೆ ಮೊದಲಿಗೆ ಎತ್ತಿಕೊಂಡರು. ಹಾಲಿ ಕಾರ್ಯದರ್ಶಿಯವರು ಸ್ವಲ್ಪ ಮಂದಗತಿಯವರಂತೆ ಕಂಡರು. ಅವರು ಕರ್ಚೆಗೆ ಸಂಬಂಧಿಸಿ ಮಂಡಿಸಿದ ಬಿಲ್ಲುಗಳನ್ನು ಒಂದೊಂದಾಗಿ ಮಾಜಿ ಅಧ್ಯಕ್ಷ ತಿಪ್ಪಣ್ಣನವರು ಪರೀಕ್ಷಿಸುತ್ತಿದ್ದರು. ಆನ್ನೂರ ಐವತ್ತು ರೂಪಾಯಿಗಳ ಒಂದು ಬಿಲ್ಲು ದೊಡ್ಡ ಕಗ್ಗಂಟಾಗಿ ಪರಿಣಮಿಸಿತು. ಅದರಲ್ಲಿ ಬರೆದ ಅಕ್ಷರದಿಂದ ಅದು ಯಾವ ವಸ್ತುಗಳ ಖರೀದಿಗೆಂದು ಯಾರಿಗೂ ಓದಲು ಸಾಧ್ಯವಾಗಲಿಲ್ಲ.

ಕಾರ್ಯದರ್ಶಿಯವರಲ್ಲಿ ಕೇಳಿದರೆ ಅವರಿಗೂ ಅದನ್ನು ಓದಿ ವಸ್ತುಗಳ ವಿವರ ಕೊಡಲು ಸಾಧ್ಯವಾಗಲಿಲ್ಲ. 'ಅಲ್ಮಾರೀ ಯಾವುದೋ ವಸ್ತು ಖರೀದಿಸಿ ಬಿಲ್ಲು ತಂದಿದ್ದೀರಾ, ಆ ವಸ್ತುಗಳು ಯಾವುವು ಎಂದು ಹೇಳಲು ನಿಮ್ಮಿಂದ ಸಾಧ್ಯವಾಗದಿದ್ದರೆ ನಾವು ಏನೂಂತ ತಿಳಿದುಕೊಳ್ಳಬೇಕೆಂದು,' ಸ್ವಲ್ಪ ಏರು ಸ್ವರದಲ್ಲೇ ತಿಪ್ಪಣ್ಣನವರು ಗದರಿಸಿದರು. ಅಲ್ಲೇ ಇದ್ದ ಕಾರ್ಯದರ್ಶಿಯವರ ತಂದೆಗೆ ಅದು ಇಷ್ಟವಾದಂತೆ ತೋರಲಿಲ್ಲ. 'ಅವ ತಂದ ಬಿಲ್ಲಿನ ಬಗ್ಗೆ ಸಂಶಯವಿದ್ದರೆ ನೇರ ಅಂಗಡಿಯಲ್ಲಿ ಹೋಗಿ ವಿಚಾರಿಸಬಹುದು; ಬಿಲ್ಲಿನಲ್ಲಿ ಅಂಗಡಿಯ ಹೆಸರಂತು ಇದೆಯಲ್ಲ,' ಎಂದು ಸ್ವಲ್ಪ ನೊಂದುಕೊಂಡೆ ನುಡಿದಂತಿತ್ತು. 'ನೋಡಿ ಇದು ಸಂಶಯ ಪಡುವ ಅಥವಾ ಬಿಡುವ ವಿಚಾರವಲ್ಲ. ಆತ ಬಿಲ್ಲು ತಂದರೆ ಅದು ಏತಕ್ಕೆಂದು ಕನಿಷ್ಠ ಅರಿವು ಆತನಿಗೆ ಇರಬೇಕು; ನೀವು ಸುಮ್ಮನಿರಿ. ನೀವು ಕಾರ್ಯದರ್ಶಿ ಆಗಿರುವಾಗ ನಾವು ಯಾರು ಇಂತಹ ಪ್ರಶ್ನೆ ಕೇಳಿಲ್ಲ,' ಎಂದು ತಿಪ್ಪಣ್ಣ ಸ್ವಲ್ಪ ಖಾರವಾಗಿಯೇ ಉತ್ತರಿಸಿದರು. ಆತನನ್ನು ಈ ರೀತಿ ತಿದ್ದದಿದ್ದರೆ ಆತ ಯಾವಾಗ ಕೆಲಸ ಕಲಿಯುವುದೆಂದು ಇತರ ಸದಸ್ಯರು ತಿಪ್ಪಣ್ಣನ ವಾದಕ್ಕೆ ಧ್ವನಿಗೂಡಿಸಿದರು. ಪಂಪ್ ಆಪರೇಟರ್‌ಗೆ ಬುಲಾವ್ ಹೋಯಿತು. ಆತನಲ್ಲಿ ಆ ಬಿಲ್ಲು ಕುರಿತು ವಿಚಾರಿಸಲಾಯಿತು. ನೀರು ಸೆಳೆಯುವ ಪಂಪಿನ ಫುಟ್ ಬಾಲ್ ರಿಪೇರಿ, ಡಿಸೆಂಬರ್ ತಿಂಗಳಲ್ಲಿ, ಆದ ಕುರಿತು ತಿಳಿಸಿದ. ಹೊಸ ಫುಟ್ ಬಾಲ್ ಮತ್ತು ಅದರ ಜೋಡಣೆಗೆ ಬೇಕಾದ ನೆಟ್ ಬೋಲ್ಟ್ ವಿವರ ಆ ಬಿಲ್ಲೆಂದು ತೀರ್ಮಾನಕ್ಕೆ ಬರಲಾಯಿತು. ಸೊಸ್ಶೈಟಿ ತೋಟದಲ್ಲಿ ತೆಂಗಿನ ಜೆತೆಗೆ ಸಾಕಷ್ಟು ಸಂಖ್ಯೆಯಲ್ಲಿ ಮಾವಿನ ಮರ ಹಾಗೂ ಸಪೋಟ ಮರಗಳನ್ನು ಹಾಕಿದ್ದಾರೆ. ಪ್ರತಿ ವರ್ಷ ಅದು ಕಡಿಮೆ ಅಂದರೆ ಹದಿನೈದು ಸಾವಿರಕ್ಕೆ ಹರಾಜು ಆಗುತ್ತದೆ. ಈ ವರ್ಷ ಇಪ್ಪತ್ತೈದು ಸಾವಿರಕ್ಕೆ ಹರಾಜು ಆಗಿದೆ. ಅದರ ಬಾಬ್ತು ಹತ್ತು ಸಾವಿರ ರೂಪಾಯಿಗಳನ್ನು ಕಾರ್ಯದರ್ಶಿಯವರು ಪಡಕೊಂಡಿದ್ದರು. ಆ ಹತ್ತು ಸಾವಿರದಿಂದಲೇ ಸೊಸ್ಶೈಟಿ ಭೂ ಕಂದಾಯ ರೂ.೮೯.೨೨ನ್ನು ಕಾರ್ಯದರ್ಶಿ ಕಟ್ಟಿದ್ದರು. ಬಂದ ಹಣವನ್ನು ಬ್ಯಾಂಕಿಗೆ ಜಮಾ ಮಾಡದೆ ನೇರ ಬಳಸಿದ ಕುರಿತು ತಕರಾರು ಬಂತು. ಮುಂದೆ ಆ ರೀತಿ ಆಗುವುದಿಲ್ಲವೆಂದು ಕಾರ್ಯದರ್ಶಿ ಭರವಸೆ ನೀಡಿದ ನಂತರ ಒಪ್ಪಿಕೊಳ್ಳಲಾಯಿತು.

ನಂತರ ಅಧ್ಯಕ್ಷರ ಪ್ರಮಾಣ ಭತ್ಯೆ ಬಗ್ಗೆ ಸ್ವಲ್ಪ ಮಾತುಕತೆ ಆಯಿತು. ಕೆಲವು ಅಡಿ ಪೈಪು ತರಲು ಅಧ್ಯಕ್ಷರು ಕೊಪ್ಪಳಕ್ಕೆ ಹೋಗಿದ್ದರು. ಹೋಗುವಾಗ ಕಾರ್ಯದರ್ಶಿಯವರಿಂದ ರೂ.೪೦೦ ಮುಂಗಡವಾಗಿ ತೆಗೆದುಕೊಂಡಿದ್ದರು. ರೂ.೩೨೫ ಪೈಪು ಖರೀದಿ ಬಿಲ್ಲು ಕೊಟ್ಟು, ಐವತ್ತು ರೂಪಾಯಿ ಪ್ರಯಾಣ ಭತ್ಯೆ, ಇಪ್ಪತ್ತು ರುಪಾಯಿ ಉಳಿದಿದೆ ಎಂದು ಕಾರ್ಯದರ್ಶಿಗೆ ಇತ್ತರು. ಇಪ್ಪತ್ತು ಅಲ್ಲ ನೀವು ಮೂವತ್ತೈದು ರೂಪಾಯಿ ಕೊಡಬೇಕೆಂದು ಕಾರ್ಯದರ್ಶಿಯ ವಾದ. ನನಗೆ ಐವತ್ತೈದು ರೂಪಾಯಿ ಒಟ್ಟು ಕರ್ಚೆ ಆಗಿದೆ. ನಾನೆಲ್ಲಿಂದ ಮೂವತ್ತೈದು ರೂಪಾಯಿ ಕೊಡುವುದೆಂದು ಅಧ್ಯಕ್ಷರ ಪ್ರತಿವಾದ. ಕಾರ್ಯದರ್ಶಿ ಪ್ರಕಾರ ಪ್ರಯಾಣ ಭತ್ಯೆ ಕೇವಲ ನಲ್ವತ್ತು ಕೊಡಬಹುದು; ಅದಕ್ಕಿಂತ ಹೆಚ್ಚು ಕರ್ಚು

ಆದರೆ ಅದನ್ನು ಸದಸ್ಯರೆ ತೆರಬೇಕೆಂದು ಕಾರ್ಯದರ್ಶಿ ಕಾನೂನು ಮಾಹಿತಿ ನೀಡಿದರು. ಸ್ವಲ್ಪ ಹೊತ್ತಿನ ನಂತರ ತಿಪ್ಪಣ್ಣನವರು ಕಾರ್ಯದರ್ಶಿಯವರನ್ನು ಪ್ರಯಾಣ ಭತ್ಯೆ ಕುರಿತು ಸಿಕ್ಕಿಸಿ ಹಾಕಿದರು. ಕಾರ್ಯದರ್ಶಿ ನಾಲ್ಕು ಪ್ರಯಾಣ ಭತ್ಯೆ ಎಂದು ರೂ.೧೯೦ಲೆಕ್ಕ ದಾಖಲಿಸಿದ್ದರು. ಇದು ಹೇಗೆ ಸಾಧ್ಯ ಎಂದು ಎಲ್ಲರು ಪ್ರಶ್ನಿಸಿದರು. ಕಾರ್ಯದರ್ಶಿ ಎಷ್ಟು ಹುಡುಕಿದರು ಮೂವತ್ತು ರೂಪಾಯಿಗೆ ಓಚರ್ ಸಿಗಲಿಲ್ಲ. 'ಕಾನೂನು ತಿಳಿದ ನೀವೇ ಹೀಗೆ ಮಾಡಿದರೆ ಹೇಗೆ?' ಎಂದು ತಿಪ್ಪಣ್ಣ ಮತ್ತು ಇತರ ಸದಸ್ಯರು ಕಾರ್ಯದರ್ಶಿಯನ್ನು ಹಂಗಿಸಿದರು. ಅಂದಿನ ಮೀಟಿಂಗ್‌ನ ಎರಡನೆ ಎಜಂಡಾ ತೋಟದ ಬೇಲಿ ರಿಪೇರಿ. ಬೇಲಿ ರಿಪೇರಿ ಮಾಡಿಸಿ ಎಂದು ತಿಪ್ಪಣ್ಣ ಮತ್ತು ಕೆಲವು ಸದಸ್ಯರು ಒಪ್ಪಿಗೆ ಇತ್ತರು. ಅದರ ಒಟ್ಟು ಕರ್ಚು, ಯಾರು ಮಾಡಿಸುವುದು, ಇತ್ಯಾದಿಗಳ ಕುರಿತು ಚರ್ಚೆಯೇ ಆಗಲಿಲ್ಲ. ಅದೇ ರೀತಿ ಗೊದಾಮು ರಿಪೇರಿ ಕೂಡ ಚರ್ಚೆಯೇ ಇಲ್ಲದೆ ಒಪ್ಪಿಗೆ ಪಡೆಯಿತು. ಕೊನೆಗೆ ವಿಚಾರ ಕರೆಂಟ್ ಕಡಿತದಿಂದ ಉಂಟಾಗಿರುವ ನೀರಿನ ಸಮಸ್ಯೆ. ದಿನಕ್ಕೆ ಆರು ಗಂಟೆ ಕರೆಂಟ್ ಇದೆ. ಅದೂ ಸರಿಯಾಗಿ ಬರುತ್ತಿಲ್ಲ. ಹಾಗಾಗಿ ನೀರು ಸರಿಯಾಗಿ ಪೂರೈಕೆ ಆಗುತ್ತಿಲ್ಲ. ಕೆಲವರು ಸಿಂಗಲ್ ಫೇಸ್ ಕರೆಂಟ್ ನಲ್ಲಿ ಸ್ಟಾರ್ಟರ್ ಉಪಯೋಗಿಸಿಕೊಂಡು ಪಂಪ್ ರನ್ ಮಾಡಲು ಸೂಚಿಸಿದರು. ಡಬ್ಬಲ್ ಫೇಸ್‌ಲ್ಲಿ ಕರೆಂಟ್ ಯಾವಾಗ ಬರುತ್ತದೆ ಎಂದು ನಮಗೆ ತಿಳಿಯುವುದಿಲ್ಲ. ಒಮ್ಮಲೆ ಕರೆಂಟ್ ಬಂದರೆ ಎಂಜಿನ್ ಸುಟ್ಟು ಹೋಗುತ್ತದೆ. ಆದುದರಿಂದ ಸಿಂಗಲ್ ಫೇಸ್ ನಲ್ಲಿ ಪಂಪ್ ಚಾಲು ಮಾಡುವುದು ಬೇಡ ಎಂದಾಯಿತು.

'ಫೆಬ್ರವರಿ ತಿಂಗಳಿನಿಂದ ಎಂಟು ಗಂಟೆ ಕರೆಂಟ್ ಇದೆ. ನಮ್ಮ ನೀರು ಬಳಕೆದಾರರು ಸ್ವಲ್ಪ ಹೊಂದಾಣಿಕೆ ಮಾಡಿಕೊಂಡರೆ ಸಮಸ್ಯೆ ಪರಿಹರಿಸಬಹುದೆಂದು', ತಿಪ್ಪಣ್ಣನವರು ಅಭಿಪ್ರಾಯ ಸೂಚಿಸಿದರು. 'ಏನು ಹೊಂದಾಣಿಕೆ ಮಾಡಿಕೊಳ್ಳುವುದು. ಈಗಾಗಲೇ ಹೊಂದಾಣಿಕೆ ಮಾಡಿಕೊಂಡು ನಮ್ಮ ನೆಲ್ಲು ಹೊಲಗಳು ಒಣಗುತ್ತಿವೆ,' ಎಂದು ಕೆಲವು. ಸದಸ್ಯರು ಗೊಣಗಾಡಿದರು. 'ನೀವು ನೆಲ್ಲು ಬಗ್ಗೆ ಮಾತಾಡುತ್ತೀರಿ ಸರಿ. ಆದರೆ ಶೇಂಗಾಕ್ಕೆ ನೀರು ಬಿಟ್ಟದ್ದನ್ನು ಅರ್ಧಕ್ಕೆ ನಿಲ್ಲಿಸಿ ನೆಲ್ಲಿಗೆ ಬಿಡಬೇಕೆಂದು ಜಗಳ ಮಾಡುವುದು ಯಾವ ನ್ಯಾಯ?' ಎಂದು ಮತ್ತೆ ಕೆಲವು ಸದಸ್ಯರು ಪ್ರಶ್ನಿಸಿದರು. ನೆಲ್ಲು ಮತ್ತು ಶೇಂಗಾ ಬೆಳೆಗಾರರ ನಡುವೆ ಜಟಾಪಟಿ ಶುರುವಾಯಿತು. ಶೇಂಗಾ ಬೆಳೆಗೆ ಬಿಟ್ಟ ನಂತರವೇ ನೆಲ್ಲು ಬೆಳೆಗಾರರು ತಮ್ಮ ಹೊಲಗಳಿಗೆ ನೀರು ಒಯ್ಯಬೇಕೆಂದು ತಿಪ್ಪಣ್ಣನವರ ವಾದ. ಕೆಲವರು ಶೇಂಗಾ ನೆಲ್ಲು ಎಂಬ ವರ್ಗೀಕರಣ ಬೇಡ ಒಂದು ಪಂಪಿನ ನೀರನ್ನು ಒಂದು ಕಡೆಯ ಹೊಲಕ್ಕೆ ಬಿಡುವ ಮತ್ತೊಂದು ಪಂಪಿನ ನೀರು ಮತ್ತೊಂದು ಕಡೆಗೆ ಹೋಗಲಿ ಎಂದು ವಾದಿಸಿದರು. ಆದರೆ ಅಲ್ಲೂ ಶೇಂಗಾ ಮತ್ತು ನೆಲ್ಲು ಬೆಳೆಗಾರರಿದ್ದಾರೆ. ಅಲ್ಲಿ ಪುನಃದ ಯಾರಿಗೆ ಆದ್ಯತೆ ಎನ್ನುವ ಪ್ರಶ್ನೆ ಬರುತ್ತದೆ ಎಂದು ಆ ಅಭಿಪ್ರಾಯಕ್ಕೆ ಮನ್ನಣೆ ಸಿಗಲಿಲ್ಲ. ಮತ್ತೆ ಕೆಲವರು ಬೆಳೆ ಮೇಲೆ ನಿರ್ಧರಿಸುವುದೇ ಬೇಡ. ಸರದಿ ಪ್ರಕಾರ ಬಿಡುವ ಎಂದು ಸಲಹೆ ಇತ್ತರು. ಅಂದರೆ ಶೆಡ್ ಪಕ್ಕದ ಹೊಲದಿಂದ ಸರದಿ ಆರಂಭವಾಗುತ್ತದೆ. ಅದು ತುಂಬಿದ ನಂತರ ಅದರ ಪಕ್ಕದ ಹೊಲಕ್ಕೆ ಹೀಗೆ ತುಂಬುತ್ತ ಕಡೇ ಹೊಲ ತನಕ ಹೋಗುತ್ತದೆ. ಕರೆಂಟ್ ಇರುವುದೇ ಆರು ಗಂಟೆ. ಅದು ಬಂದರೆ ಬಂತು ಇಲ್ಲದಿದ್ದರೆ ಇಲ್ಲ. ಇಂತಹ ಸ್ಥಿತಿಯಲ್ಲಿ ಸರದಿ ಪ್ರಕಾರ ನೀರು ಕೊಟ್ಟರೆ ಕಡೇ ರೈತ ಕೃಷಿ ಮಾಡಿದ ಹಾಗೆ ಎಂದು ಸರದಿಗೆ ವಿರೋಧ ಬಂತು. ತಿಪ್ಪಣ್ಣನವರು ಸೂಚಿಸಿದ ಶೇಂಗಾ ಫಸ್ಟ್ ಸಲಹೆ ಕಡೆಗೆ ಒಪ್ಪಿತವಾಯಿತು. ಮೀಟಿಂಗ್ ನಂತರ ಅದ್ಯಾಕೆ ಶೇಂಗಾಕ್ಕೆ ಆದ್ಯತೆ ಕೊಡುವ ತೀರ್ಮಾನ ಕೈಗೊಂಡಿರಿ ಎಂದು ಒಬ್ಬ ಸದಸ್ಯರನ್ನು ಕೇಳಿದೆ. ಶೇಂಗಾಕ್ಕೆ ಹದಿನೈದು ಅಥವಾ ಇಪ್ಪತ್ತು ದಿನಕ್ಕೆ ಒಂದು ಬಾರಿ ನೀರು ಬಿಟ್ಟರೆ ಸಾಕು. ಆದರೆ ನೆಲ್ಲಿಗೆ ಕನಿಷ್ಟ ನಾಲ್ಕು ಅಥವಾ ಐದು ದಿನಕ್ಕೊಮ್ಮೆ ನೀರು ಬೇಕು. ಶೇಂಗಾ ಹೊಲ ಭರ್ತಿಯಾಗುವ ಮುನ್ನವೇ ನೀರು ನಿಲ್ಲಿಸಿದರೆ ಇಡಿ ಬೆಳೆಯೇ ನಷ್ಟವಾಗುತ್ತದೆ. ಆದುದರಿಂದ ಶೇಂಗಾ ಬೆಳೆಗಾರರಿಗೆ ನೀರು ಬಳಸುವ ಆದ್ಯತೆ ಎಂದು ವಿವರಿಸಿ ನನ್ನ ಸಂದೇಹ ಪರಿಹರಿಸಿದರು. ಸೊಸೈಟಿ ಹೊಲಗಳ ಅಂಚಿನಲ್ಲಿ ಇರುವ ಕೆಲ ಸದಸ್ಯ ರೈತರ ಹೊಲಗಳನ್ನು ಒತ್ತುವರಿ ಮಾಡಿಕೊಂಡು ಅಥವಾ ಲೀಸ್‌ಗೆ ತೆಗೆದುಕೊಂಡು ಕೃಷಿ ಮಾಡುವ ವಿಚಾರ ಚರ್ಚೆಯಾಯಿತು. ಅವರು ಸೊಸೈಟಿ ನೀರನ್ನು ತಮ್ಮ ಇತರ ಹೊಲಗಳ (ಸೊಸೈಟಿಗೆ ಸೇರಿರದ) ಕೃಷಿಗೆ ಬಳಸುವುದು ಸರಿಯಲ್ಲ. ಅದನ್ನು ನಿಲ್ಲಿಸಬೇಕೆಂದು ಕಾರ್ಯದರ್ಶಿಗೆ ಸೂಚನೆ ನೀಡಲಾಯಿತು. ನೀರು ಮತ್ತು ಲೆಕ್ಕ ಪತ್ರ ಮೀಟಿಂಗ್‌ನ ಶೇಕಡಾ ತೊಂಬತ್ತು ಸಮಯ ತೆಗೆದುಕೊಂಡರೆ ಇತರ ವಿಚಾರಗಳು ಏನೇನೂ ಚರ್ಚೆ ಇಲ್ಲದೆ ಒಪ್ಪಿತವಾದವು.

**ಅನುಭವದಿಂದ ಕಲಿತ ಪಾಠ**

ಮರು ದಿವಸ ಸಂಘದ ಹಾಲಿ ಅಧ್ಯಕ್ಷರ ಜತೆ ಮಾತಾಡುತ್ತಾ 'ನಿನ್ನೆ ಮೀಟಿಂಗ್‌ನಲ್ಲಿ ಲೆಕ್ಕಪತ್ರದ ಬಗ್ಗೆ ಚರ್ಚೆಯಾದಷ್ಟು ಉಳಿದ ಚರ್ಚೆ ಆಗಿಲ್ಲ. ಯಾಕೆ?' ಎಂದು ವಿಚಾರಿಸಿದೆ. ಅದಕ್ಕೆ ಕಾರಣ ಇದೆ ಎಂದು ಸಂಘದ ಚರಿತ್ರೆ ಶುರು ಮಾಡಿದರು. 'ಸುಮಾರು ಮೂವತ್ತು ವರ್ಷಗಳಿಂದ ನಾನು ಈ ಸಂಘದಲ್ಲಿ ಇದ್ದೇನೆ. ಇತ್ತೀಚಿನ ಕೆಲವು ವರ್ಷಗಳಿಂದ ದುಡ್ಡಿನ ಸಮಸ್ಯೆ ಇಲ್ಲದೆ ಸಂಘ ನಡೆಯುತ್ತಿದೆ. ಹಿಂದೆ ನಮಗೆ ಪ್ರತಿ ವರ್ಷ ಹಿಂದಿನ ವರ್ಷದ ಸಾಲ ಕಟ್ಟುವುದೇ ಆಗುತ್ತಿತ್ತು.' ಅಷ್ಟೊಂದು ದೊಡ್ಡ ವ್ಯವಹಾರ ಏನಿತ್ತು ಸಂಘಕ್ಕೆ ಎಂದು ಕೆದಕಿದೆ. ೧೯೬೫ರಲ್ಲಿ ಸಂಘದ ಜಮೀನಿನ ಉಳುಮೆ ಸಮಸ್ಯೆ, ಅಂದಿನ ಸಹಕಾರಿ ಸಂಘಗಳ ರಿಜಿಸ್ಟಾರ್ ಟ್ರ್ಯಾಕ್ಟರ್ ಖರೀದಿಸುವ ಸಲಹೆ ನೀಡಿದ್ದು ಇತ್ಯಾದಿಗಳನ್ನು ವಿವರಿಸಿದರು. ಎಲ್ಲ ಸದಸ್ಯರಿಗೂ ಅಧಿಕಾರಿಯ ಸಲಹೆ ಸರಿ ಬಂದು ರೂ.೩೪೦೦೦ ಸಾಲದೊಂದಿಗೆ ಟ್ರ್ಯಾಕ್ಟರ್ ಸಂಘಕ್ಕೆ ಬಂದ ನಂತರದ ಬೆಳವಣಿಗೆಯನ್ನು ಅವರು ವಿವರಿಸಿದರು. ಬಂದ ಕೆಲವು ದಿನ ಟ್ರ್ಯಾಕ್ಟರ್ ಸರಿಯಾಗಿಯೇ ಬಳಕೆ ಯಾಯಿತು. ನಮ್ಮ ೭೦ ಎಕರೆ ಉಳುಮೆ ಕೆಲವೇ ದಿನಗಳಲ್ಲಿ ಮುಗಿಯಿತು. ಉಳಿದ ದಿನಗಳಲ್ಲಿ ಟ್ರಾಕ್ಟರನ್ನು ಹೇಗೆ ಉಪಯೋಗಿಸುವುದೆಂದು ನಿರ್ಧರಿಸಲು ಸಭೆ ಕರೆದರು. ಅದನ್ನು ಸುತ್ತ ಮುತ್ತಲಿನ ರೈತರಿಗೆ ಬಾಡಿಗೆ ಕೊಡಬಹುದೆಂಬ ಸಲಹೆ ಬಂತು. ಅದರಂತೆ ಅದನ್ನು ಬಾಡಿಗೆಗೆ ಓಡಿಸುವ ಜವಾಬ್ದಾರಿಯನ್ನು ಸಂಘದ ನಿರ್ದೇಶಕರೊಬ್ಬರಿಗೆ ವಹಿಸಲಾಯಿತು. ಅವರು ದಿನ ನಿತ್ಯ ಟ್ರಾಕ್ಟರ್ ಬಾಡಿಗೆಗೆಂದು ಕೊಂಡು ಒಯ್ಯುತ್ತಿದ್ದರು. ಆದರೆ ತಿಂಗಳ ಕೊನೆಗೆ ಬಾಡಿಗೆ ಮಾತ್ರ ಒಂದು ಸಾವಿರ ರುಪಾಯಿ ಕೂಡ ಸಿಗುತ್ತಿರಲಿಲ್ಲ. ಕಡಿಮೆ ಬಾಡಿಗೆ, ಬಾಡಿಗೆ ಇಲ್ಲ, ಅಥವಾ ರಿಪೇರಿ ಬಂತು ಹೀಗೆ ಕೆಲವು ರೆಡಿ ಉತ್ತರಗಳು ಸಿಗುತ್ತಿದ್ದವು. ನೂರು ರೂಪಾಯಿ ಬಾಡಿಗೆ ಪಡೆದರೆ ಐವತ್ತು ರೂಪಾಯಿ ಮಾತ್ರ ರಸೀದಿಯಲ್ಲಿ ನಮೂದಿಸಿ ಉಳಿದುದ್ದನ್ನು ತನ್ನ ಜೇಬಿಗೆ ಇಳಿಸುತ್ತಿದ್ದರು. ಅಷ್ಟು ಸಾಲದೆಂದು ರಿಪೇರಿ ಬಿಲ್ಲು, ಅದು ಬಾಡಿಗೆ ರೀತಿ ಕಡಿಮೆ ಬರುತ್ತಿರಲಿಲ್ಲ. ನೂರು ರೂಪಾಯಿ ರಿಪೇರಿ ಆದರೆ ನೂರೈವತ್ತು ಬರೆಸಿ ತರುತ್ತಿದ್ದರು. ಒಂದು ಕಡೆ ಟ್ರಾಕ್ಟರ್ ನಿಂದ ಆದಾಯ ಇಲ್ಲ ಮತ್ತೊಂದು ಕಡೆಯಿಂದ ಅದರ ನಿರ್ವಹಣಾ ಖರ್ಚು ಹೆಚ್ಚುತ್ತಾ ಹೋಯಿತು. ಇದರಿಂದ ಬೇಸತ್ತ ರೈತರು ಅದನ್ನು ಮಾರುವುದೇ ಒಳಿತೆಂಬ ನಿರ್ಧಾರಕ್ಕೆ ಬಂದರು. ಇದು ಮಾತ್ರವಲ್ಲ ಸಾಮೂಹಿಕ ಬೇಸಾಯ ಮಾಡುತ್ತಿದ್ದ ಕಾಲದಲ್ಲಿ ಗೊಬ್ಬರ, ಬೀಜ, ಕೀಟನಾಶಕ, ಇತ್ಯಾದಿಗಳ ಖರೀದಿ ಆಗಬೇಕಿತ್ತು. ಅಲ್ಲೂ ಇದೇ ರೀತಿ ನಿಜ ಬೆಲೆಗಿಂತ ಹೆಚ್ಚು ಬರಿಸಿ ತರುತ್ತಿದ್ದರು. ಸಂಘ ಬೆಳೆದ ಉತ್ಪನ್ನಗಳನ್ನು ಮಾರುವಾಗ ಕಡಿಮೆ ಬೆಳೆ ನಮೂದಿಸಿ ವ್ಯಾಪಾರಿ ಕೊಡುವ ನಿಜ ಬೆಲೆಯನ್ನು ತಮ್ಮ ಸ್ವಂತಕ್ಕೆ ಬಳಸುತ್ತಿದ್ದರು. ಇಂತಹ ಅಡ್ಡ ವ್ಯವಹಾರಗಳಿಂದ ಸಂಘ ಸಾಕಷ್ಟು ನಷ್ಟ ಅನುಭವಿಸಿದೆ (ಸಂಘದ ಪತ್ರ,೧೯೮೭). ಅದರಿಂದ ಪಾಠ ಕಲಿತ ಸದಸ್ಯರು ಇಂದು ಪ್ರತಿಯೊಂದು ಬಿಲ್ಲನ್ನು ಕೂಲಂಕಷವಾಗಿ ಪರೀಕ್ಷಿಸಿದ ನಂತರವೇ ಒಪ್ಪಿಕೊಳ್ಳುವ ಸ್ಥಿತಿಗೆ ಬಂದಿದ್ದಾರೆ ಎಂದು ಅಧ್ಯಕ್ಷರು ಸಂಘದ ಹಿಂದಿನ ಅನುಭವದ ಕಿರು ಪರಿಚಯ ಮಾಡಿಸಿದರು.

'ಅದೆಲ್ಲ ಸರಿ, ನೀವು ಬೇಲಿ ರಿಪೇರಿ ಅಥವಾ ಗೊಡೌನ್ ರಿಪೇರಿ ಬಗ್ಗೆ ಯಾಕೆ ಚರ್ಚೆ ಮಾಡದೆ ಒಪ್ಪಿಕೊಂಡಿರಿ ಎನ್ನುವುದು ನನಗೆ ಇನ್ನೂ ಅರ್ಥವಾಗಿಲ್ಲ,' ಎಂದೆ. 'ಅವುಗಳ ಕುರಿತು ಚರ್ಚಿಸಲು ಏನಿದೆ?', ಎಂದು ಅಧ್ಯಕ್ಷರು ನನಗೆ ಮರು ಪ್ರಶ್ನೆ ಕೇಳಿದರು. ಯಾರು ರಿಪೇರಿ ಮಾಡಿಸುವುದು?, ಅಂದಾಜು ವೆಚ್ಚ ಎಷ್ಟು?, ಎಷ್ಟು ಸಮಯದಲ್ಲಿ ಕೆಲಸ ಆಗಬೇಕು? ಇತ್ಯಾದಿಗಳ ಚರ್ಚೆ ಎಂದೆ. 'ಬೇಲಿ ರಿಪೇರಿ ತುಂಬಾ ಸರಳ. ಕಲ್ಲಿನ ಕಂಬಗಳಿಗೆ ಮೆಶ್ ವೈರ್ ಹಾಕಿದೆ. ಕಂಬಗಳ ಕೆಲವು ಕಡೆ ವಾಲಿವೆ. ಹೊಂಡ ತೋಡಿ ಅವುಗಳನ್ನು ನೇರ ನಿಲ್ಲಿಸಬೇಕು. ಅಷ್ಟೆ ಗೊಡೌನ್ ಒಳಭಾಗದಲ್ಲಿ ಗೆದ್ದಲು ಹತ್ತಿದೆ. ಗೆದ್ದಲು ಬರದಂತೆ ಮಾಡಬೇಕು ಇದೆಲ್ಲ ನಾವೇ ಮಾಡಿಸುತ್ತೇವೆ. ದಿನ ನಿತ್ಯ ನಾವೆಲ್ಲ ನಮ್ಮ ಹೊಲಗಳನ್ನು ನೋಡಲು ಇಲ್ಲಿಗೆ ಬಂದೇ ಬರಬೇಕು. ಅದೇ ಸಂದರ್ಭದಲ್ಲಿ ಇಲ್ಲಿ ಕೆಲಸ ನಡೆಯುತ್ತಿರುತ್ತದೆ. ನಮ್ಮಲ್ಲಿ ಕೆಲವರಾದರೂ ಕೆಲಸ ನಡೆಯುವಲ್ಲಿ ಇರುತ್ತೇವೆ. ಇನ್ನು ಕೆಲಸಕ್ಕೆ ಬೇಕಾದ ಸಣ್ಣ ಪುಟ್ಟ ಸಾಮಾನು ಬೇಕಾದರೆ ನಮ್ಮಲ್ಲಿ ಯಾರಾದರೊಬ್ಬರನ್ನು ಹೊಸಪೇಟೆಗೋ ಕೊಪ್ಪಳಕ್ಕೋ ಕಳುಹಿಸಿ ತರಿಸುತ್ತೇವೆ. ಇದಕ್ಕೆಲ್ಲ ಚರ್ಚೆ ಏನು?', ಎಂದು ನನ್ನ ಮುಖ ನೋಡಿದರು.

**ನೀರು ಹಂಚಿಕೆ ನಿಯಮ ಪಾಲನೆ**

ನೀರು ಹಂಚಿಕೆ ಕುರಿತು ವಿಚಾರಿಸಿದರೆ ಪ್ರತಿಯೊಬ್ಬ ಸದಸ್ಯ ಕೂಡ ಯಾವುದೇ ಸಮಸ್ಯೆ ಇಲ್ಲ. ಎಲ್ಲರೂ ಸುಧಾರಿಸಿಕೊಂಡು ಹೋಗುತ್ತಿದ್ದಾರೆ ಎನ್ನುತ್ತಿದ್ದರು. ಸದಸ್ಯರ ಮಧ್ಯೆ ಜಗಳವೇ ಇರಲಿಲ್ಲವೇ ಎಂದರೆ ಇಲ್ಲ ಎನ್ನುತ್ತಿದ್ದರು. ಎಲ್ಲರೂ ಅನುಸರಿಸಿಕೊಂಡು ಹೋಗುತ್ತಾರೆ ಎನ್ನುವುದು ನಾನು ಹಲವಾರು ಬಾರಿ ಕೇಳಿದ ಮಾತು. ತಕರಾರು ಇದ್ದರೆ ಮನುಷ್ಯರಲ್ಲಿ ಕೇಳುವ ಪದ್ಧತಿ ಇಲ್ಲ; ಭೂಮಿಯನ್ನೇ ಕೇಳುವುದು ಎಂದು ಹಿಂದಿನ ಒಬ್ಬ ಕಾರ್ಯದರ್ಶಿ ಹೇಳುತ್ತಿದ್ದರು. ನನಗೆ ಅರ್ಥವಾಗಿಲ್ಲ ಎಂದೆ. ಭೂಮಿಯನ್ನು ಕೇಳುವುದು ಎಂದರೆ ತಕರಾರು ಇರುವ ರೈತರ ಹೊಲಗಳನ್ನು ಹೋಗಿ ನೋಡುವುದು. ಯಾವುದು ಹೆಚ್ಚು ಒಣಗಿರುತ್ತದೋ ಅದಕ್ಕೆ ಮೊದಲು ನೀರು ಬಿಡುವುದು ಎಂದು ವಿವರಿಸಿ ನನ್ನ ಮೌಢ್ಯವನ್ನು ದೂರಗೊಳಿಸಿದರು. ಒಂದು ವಿಧದಲ್ಲಿ ಅವರ ಅಭಿಪ್ರಾಯ ಸರಿಯಾಗಿಯೇ ಇತ್ತು. ಅದಕ್ಕೆ ಕಾರಣ ಯಾವುದೇ ಅಡೆತಡೆ ಇಲ್ಲದೆ ನೀರು ಪೂರೈಕೆ ಆಗುವುದು. ಎರಡು ಹತ್ತು ಹೆಚ್.ಪಿ.ಪಂಪ್‌ಗಳು ದಿನದ ಹದಿನೆಂಟು ಗಂಟೆ ಓಡುತ್ತಿದ್ದವು. ಕರೆಂಟ್ ಅಥವಾ ನೀರಿನ ಕೊರತೆ ಇರಲಿಲ್ಲ. ವರ್ಷದ ಒಂಭತ್ತು ತಿಂಗಳು ನದಿಯಲ್ಲಿ ನೀರು ಹರಿಯುತ್ತದೆ. ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳಲ್ಲಿ ನದಿ ಪಾತ್ರದಲ್ಲಿ ಸಣ್ಣ ಸಣ್ಣ ಅಡ್ಡಗಳನ್ನು ನಿರ್ಮಿಸಿ ನೀರು ಏತ ನೀರವರಿಯ ಬಾವಿ ಕಡೆ ಬರುವಂತೆ ಮಾಡಬೇಕಿತ್ತು. ಉಳಿದ ದಿನಗಳಲ್ಲಿ ಆ ಸಮಸ್ಯೆನೂ ಇಲ್ಲ. ಧಾರಾಳ ಇರುವಾಗ ರೈತ ನಡವಳಿಕೆಯಲ್ಲೂ ಧಾರಾಳತೆ ಇತ್ತು. ನೆಂಟರ ಮನೆಗೆ ಹೋಗಿರುವುದರಿಂದಲೋ ಅಥವಾ ಇನ್ನಿತರ ಕಾರಣದಿಂದಲೇ ರೈತನೊಬ್ಬನಿಗೆ ಆತನಿಗೆ ನಿಗದಿ ಪಡಿಸಿದ ದಿನದಂದು ನೀರು ಬಿಡಲು ಸಾಧ್ಯವಾಗದ್ದಿರೆ ಚಿಂತಿಸುವ ಅಗತ್ಯವಿರಲಿಲ್ಲ. ಮರು ದಿವಸ ಬಂದು ನೆರೆಯ ರೈತನಲ್ಲಿ ಹೇಳಿಕೊಂಡರೆ ಯಾರು ಬೇಡ ಎನ್ನುತ್ತಿರಲಿಲ್ಲ.

ಆದರೆ ಈ ವರ್ಷ ಪರಿಸ್ಥಿತಿ ಸ್ವಲ್ಪ ಭಿನ್ನವಾಗಿದೆ. ನದಿಯಲ್ಲಿ ನೀರು ಕಡಿಮೆ ಆಗಿಲ್ಲ ಆದರೆ ಕರೆಂಟ್ ಪೂರೈಕೆ ಕಡಿತವಾಗಿದೆ. ದಿನಕ್ಕೆ ಕೇವಲ ಆರೇ ಗಂಟೆ ಪೂರೈಕೆ ಇದೆ. ಸೊಸೈಟಿಯ ಒಟ್ಟ ಕೃಷಿ ಭೂಮಿ ಎಪ್ಪತ್ತು ಎಕರೆಗಳು. ಎಲ್ಲ ಹೊಲಗಳ ಕೃಷಿಗೆ ೧೦ ಹೆಚ್.ಪಿ.ಯ ಎರಡು ಪಂಪ್‌ಗಳು ದಿನದ ಹದಿನೆಂಟು ಗಂಟೆ ಓಡುತ್ತಿರಬೇಕಾಗುತ್ತದೆ. ಕರೆಂಟ್ ಕಡಿತ ಆಗುತ್ತದೆ ಎಂದು ತಿಳಿದ ಕೂಡಲೇ ಸೊಸೈಟಿತಯವರು ರೈತರಿಗೆ ಶೇಂಗಾ ಹಾಕಲು ಸೂಚಿಸಿದ್ದಾರೆ. ಆದರೆ ಕೆಲವು ಹೊಲಗಳು ಮುಖ್ಯವಾಗಿ ಶೆಡ್ ಪಕ್ಕಕಿರುವವು ಮತ್ತು ನೀರಿನ ಕಾಲುವೆಗಿಂತ ಕೆಳಮಟ್ಟದಲ್ಲಿರುವ ಹೊಲಗಳಲ್ಲಿ ಶೇಂಗಾ ಹಾಕಲು ಸಾಧ್ಯವಿಲ್ಲ. ಅವುಗಳಲ್ಲಿ ನೀರಿನ ತೇವಾಂಶ ಜಾಸ್ತಿ. ಶೇಂಗಾಕ್ಕೆ ಸ್ವಲ್ಪ ಒಣಭೂಮಿ ಬೇಕು. ಮತ್ತೆ ಕೆಲವು ರೈತರಿಗೆ ಶೇಂಗಾ ಅಷ್ಟು ಲಾಭದಾಯಕವಲ್ಲ. ಆದುದರಿಂದ ಸೊಸೈಟಿಯ ಸೂಚನೆ ಪ್ರಕಾರ ರೈತರು ಭಿತ್ತನೆ ಮಾಡುವುದಿಲ್ಲ. ಇದನ್ನು ಸೊಸೈಟಿಯ ನಿರ್ದೇಶಕರುಗಳ ಜತೆ ಮತ್ತು ರೈತರ ಜತೆ ಚರ್ಚಿಸಿದರೆ ವಿವಿಧ ಅಭಿಪ್ರಾಯಗಳು ಸಿಗುತ್ತವೆ. ‘ಶೇಂಗಾಕ್ಕೆ ಹದಿನೈದು ಅಥವಾ ಇಪ್ಪತ್ತು ದಿನಕ್ಕೊಮ್ಮೆ ನೀರು ಬಿಟ್ಟರೆ ಸಾಕು. ಆದರೆ ನೆಲ್ಲಿಗಾದರೆ ನಾಲ್ಕು ಅಥವಾ ಐದು ದಿನಕ್ಕೊಮ್ಮೆ ನೀರು ಬಿಡಬೇಕು. ಈ ಆರು ಗಂಟೆ ಕರೆಂಟ್‌ನಲ್ಲಿ ನೆಲ್ಲಿಗೆ ಬೇಕಾಗುವಷ್ಟು ನೀರು ಕೊಡಲು ಸಾಧ್ಯವಿಲ್ಲ. ಅದಕ್ಕೆ ಶೇಂಗಾ ಬೆಳೆಯಿರಿ ಎಂದು ಹೇಳಿದ್ದೇನೆ. ನಮ್ಮ ಕರ್ತವ್ಯ ನಾವು ಮಾಡಿದ್ದೇವೆ. ಅವರು ಏನು ಬೇಕಾದರು ಬೆಳೆಯಲಿ. ಆದರೆ ನೀರಿಲ್ಲ ಎಂದು ನಮ್ಮನ್ನು ದೂರುವ ಹಾಗಿಲ್ಲ’ ಎಂದು ನಿರ್ದೇಶಕರ ಅಭಿಪ್ರಾಯ. ಒಂದೋ ನಮ್ಮ ಜಮೀನು ಶೇಂಗಾಕ್ಕೆ ಸರಿಯಲ್ಲ ಅಥವಾ ಅದರಿಂದ ಲಾಭವಿಲ್ಲ ಎಂದೋ ರೈತರ ಅಭಿಪ್ರಾಯ. ಹೀಗೆ ಸೊಸೈಟಿಯವರ ಸೂಚನೆಯ ನಡುವೆಯೂ ಶೇಂಗಾಕ್ಕಿಂತ ನೆಲ್ಲು (ಭತ್ತ) ಹಾಕಿದವರ ಸಂಖ್ಯೆ ಹೆಚ್ಚು.

ಒಂದು ದಿನ ಕಾರ್ಯದರ್ಶಿಯವರನ್ನು ಕಂಡು ಮಾತಾನಾಡಿಸುವ ಎಂದು ಸೊಸೈಟಿ ಕಚೇರಿ ಹತ್ತಿರ ಹೋದೆ. ಸೊಸೈಟಿ ಬಾಗಿಲು ತೆರೆದಿತ್ತು. ಒಳ ಹೋಗಿ ನೋಡಿದರೆ ಕಾರ್ಯದರ್ಶಿ ಇರಲಿಲ್ಲ. ಸೊಸೈಟಿ ಕಚೇರಿ ಕೊಠಡಿಗೆ ಸೇರಿದಂತೆ ಗೊದಾಮು ಇದೆ. ಅದರ ಬಾಗಿಲು ತೆರೆದಿತ್ತು. ಅಲ್ಲಿ ನ್ಯಾಯ ಬೆಲೆ ಸರಕುಗಳನ್ನು ಮಾರಲು ವ್ಯವಸ್ಥೆ ಆಗಿದೆ. ಹಿಂದೆ ನ್ಯಾಯ ಬೆಲೆ ಅಂಗಡಿಯನ್ನು ಸೊಸೈಟಿಯವರೆಗೆ ನಡೆಸುತ್ತಿದ್ದರು. ಅಧಿಕಾರಿಗಳ ಉಪದ್ರ ತಾಳಲಾರದೆ ಸೊಸೈಟಿಯವರು ಆ ವ್ಯವಹಾರವನ್ನು ಕೈಬಿಟ್ಟಿದ್ದಾರೆ. ಅದನ್ನು ಈಗ ನೆರೆಯ ಹಳ್ಳಿಯವರೊಬ್ಬರು ನಡೆಸುತ್ತಿದ್ದಾರೆ. ಅವರಲ್ಲಿ ಕಾರ್ಯದರ್ಶಿ ಬಗ್ಗೆ ವಿಚಾರಿಸಿದೆ. ಪಂಪ್ ಶೆಡ್ ಬಳಿ ಇರಬಹುದು ನೋಡಿ ಅಂದ್ರು ಅವರು. ಹಾಗೆ ನಾನು ಪಂಪ್ ಶೆಡ್ ಬಳಿ ಹೋದೆ. ನೀರು ಶೇಖರಣ ಬಾವಿಗೆ ತಾಗಿಕೊಂಡಂತೆ ಎರಡು ಪಂಪ್‌ಗಳನ್ನು ಇಡಲು ಒಂದು ಕೋಣೆ ಕಟ್ಟಿಸಿದ್ದರು. ರಾತ್ರಿ ಎಲ್ಲ

ಪಂಪ್ ರನ್ ಮಾಡಲು, ಪಂಪ್ ಕೆಟ್ಟರೆ ರಿಪೇರಿ ಮಾಡಲು ಆಪರೇಟರ್ ಸ್ಥಳದಲ್ಲೇ ಇರಲು ಅನುಕೂಲವಾಗುತ್ತದೆ ಎಂದು ೧೯೯೬ರಲ್ಲಿ ಪಂಪ್‌ಶೆಡ್‌ನ್ನು ವಿಸ್ತಿರಿಸಿ ಒಂದು ಕೋಣೆ ಕಟ್ಟಿಸಿದ್ದಾರೆ. ಆ ಕೋಣೆ ಹಗಲು ಹೊತ್ತಂತು ಅದರ ಮೂಲ ಉದ್ದೇಶಕ್ಕಿಂತ ಭಿನ್ನವಾಗಿಯೇ ಉಪಯೋಗವಾಗುತ್ತಿದೆ. ಸೊಸೈಟಿ ರೈತರು ಸೇರಿಕೊಂಡು ಇಸ್ಪೀಟ್ ಎಲೆ ಆಟ ಆಡುವುದು ಸಾಮಾನ್ಯ. ಈ ಬಾರಿಯು ಹಾಗೆ ಆಯಿತು. ಅಧ್ಯಕ್ಷರು, ಇಬ್ಬರು ನಿರ್ದೇಶಕರು ಮತ್ತು ಕೆಲವು ರೈತರು ಸೇರಿಕೊಂಡು ಆಟವಾಡುತ್ತಿದ್ದರು. ನನ್ನನ್ನು ಅಲ್ಲಿ ನೋಡಿ ಅಧ್ಯಕ್ಷರಿಗೆ ಸ್ವಲ್ಪ ಇರುಸು ಮುರುಸಾಯಿತು. 'ಕರೆಂಟ್ ಇಲ್ಲ. ಹನ್ನೆರಡು ಗಂಟೆಗೆ ಬರುತ್ತದೆ ಎಂದು ಆಪರೇಟರ್ ಹೇಳಿದ. ಹಾಗೆ ಸಮಯ ಕಳೆಯಲ್ಲಿಕ್ಕಾಗಿ ಆಟ ಶುರು ಹಚ್ಚಿದ್ದೇವೆ,' ಎಂದು ಅಧ್ಯಕ್ಷರು ಸಮಜಾಯಿಸಿ ನೀಡಿದರು. 'ಅದಕ್ಕೇನಂತೆ, ದುಡ್ಡಿಗಲ್ಲದಿದ್ದರೆ ನಾನು ನಿಮ್ಮ ಜತೆ ಸೇರಿಕೊಳ್ಳುತ್ತೇನೆ' ಎಂದು ಅಧ್ಯಕ್ಷರ ಪಕ್ಕ ಇದ್ದ ಖಾಲಿ ಸಿಮೆಂಟ್ ತಾಟಿನ ಮೇಲೆ ನಾನು ಕುಳಿತೆ. ಆದರೆ ಆಟ ಶುರು ಮಾಡುವ ಲಕ್ಷಣ ಕಾಣಲಿಲ್ಲ. ಅಷ್ಟೊತ್ತಿಗೆ ರೈತರೊಬ್ಬರು ಅಧ್ಯಕ್ಷರನ್ನು ಹುಡುಕಿಕೊಂಡು ಶೆಡ್ ಬಳಿ ಬಂದರು. ಬಂದವರೆ, 'ನೀವು ಮೀಟಿಂಗ್‌ನಲ್ಲಿ ತೆಗೆದುಕೊಂಡು ತೀರ್ಮಾನ ಏನಾಯಿತು ನೋಡಿ. ಲಮಾಣಿ (ಲಂಬಾಣಿ) ರಾಮಣ್ಣ ನಿನ್ನೇನೂ ನೀರು ಬಿಟ್ಟುಕೊಂಡಿದ್ದ. ಇವತ್ತು ನಾನು ಕಿತ್ತುಕೊಳ್ಳಲು (ಬಿಡಲು) ಹೋದರೆ ಹೊಲಕ್ಕೆ ಉಪ್ಪು (ರಾಸಾಯನಿಕ ಗೊಬ್ಬರ) ಹಾಕುತ್ತಿದ್ದೇನೆ ನಾಳೆ ನೀನು ಬಿಟ್ಟುಕೋ ಅನ್ನುತ್ತಾನೆ,' ಎಂದು ಒಂದೆ ಉಸಿರಿಗೆ ತಮ್ಮ ಅಹವಾಲನ್ನು ಹೇಳಿ ಅಧ್ಯಕ್ಷರು ಪ್ರತಿಕ್ರಿಯೆಗಾಗಿ ಕಾದರು. ನನಗೂ ಇ ಪ್ರಸಂಗ ಸ್ವಲ್ಪ ಆಸಕ್ತಿ ಕುದುರಿಸಿತು. ನೀರು ಹಂಚುವಿಕೆಯಲ್ಲಿ ಜಗಳವೇ ಇಲ್ಲ ಎಂದು ನನ್ನನ್ನು ನಂಬಿಸಿದ್ದಾರೆ. ಈಗ ನೋಡಿದರೆ ಜಗಳದ ಒಂದು ಹಸಿ ಹಸಿ ಪ್ರಸಂಗ ನಮ್ಮೆದುರು ನಿಂತಿದೆ. ಅಧ್ಯಕ್ಷರು ಇದನ್ನು ಹೇಗೆ ಪರಿಹರಿಸುತ್ತಾರೆ ಎಂದು ನೋಡುವ ಕುತೂಹಲ ನನ್ನದು. ತಕರಾರು ಇರುವ ಎರಡು ಪಕ್ಷದವರನ್ನು ಕರೆಸಿ, ಇಬ್ಬರ ವಾದಗಳನ್ನು ಆಳಿಸಿ ಒಂದು ತೀರ್ಮಾನಕ್ಕೆ ಅಧ್ಯಕ್ಷರು ಬರಬಹುದೆಂದು ನಾನು ಆಲೋಚಿಸುತ್ತಿದೆ. ಆದರೆ ಈ ರೀತಿ ಆಗಲಿಲ್ಲ.'ಸ್ವಲ್ಪ ಸುಧಾರಿಸಿಕೊಂಡು ಹೋಗಿ, ನಾಳೆ ಬಿಟ್ಟುಕೊಳ್ಳಲು ಅವನಿಗೆ ಹೇಳಿ; ನೀನು ಬಿಟ್ಟುಕೊ' ಎಂದು ಅಧ್ಯಕ್ಷರು ದೂರು ತಂದ. ರೈತನಿಗೆ ಸಮಧಾನ ಹೇಳಿ ಕಳುಹಿಸಿದರು. ಆತ ಹೋದ. ಆತನ ಹಿಂದಿನಿಂದಲೇ ನಾವು ಸೊಸೈಟಿ ಕಚೇರಿ ಹತ್ತಿರ ಬಂದೆವು. ನ್ಯಾಯ ಬೆಲೆ ಅಂಗಡಿ ನಡೆಸುತ್ತಿದ್ದವ ಒಬ್ಬ ಮುಸ್ಲಿಂ ಯುವಕ. ಅಂದು ಶುಕ್ರವಾರ. ಮಧ್ಯಾಹ್ನ ಸೊಸೈಟಿ ಕಚೇರಿ ಬೀಗ ಹಾಕಿಕೊಂಡು ಆತ ಹೋಗಿದ್ದ.

ಕಚೇರಿ ಅಂಗಳದಲ್ಲಿದ್ದ ತೆಂಗಿನ ಮರದ ನೆರಳಲ್ಲಿ ನಾವು ನಿಂತು ಸೊಸೈಟಿ ಬಗ್ಗೆ ಚರ್ಚಿಸುತ್ತಿದ್ದೆವು. ದೂರು ತಂದ ರೈತ ಪುನಃ ನಾವಿದ್ದಲ್ಲಿ ಬಂದು, 'ಆತ ನೀರು ಬಿಡುತ್ತಿಲ್ಲ, ನೀವೇ ಬಂದುಹೇಳಿ,' ಎಂದು ಅಧ್ಯಕ್ಷರಿಗೆ ದುಂಬಾಲು ಬಿದ್ದ. ಆತನ ನಿವೇದನೆ ಅಧ್ಯಕ್ಷರಿಗೆ ಅಷ್ಟೊಂದು ಹಿತವಾದಂತೆ ಕಾಣಲಿಲ್ಲ. 'ನಿಂದೊಳ್ಳೆ ಸಮಸ್ಯೆ ಆಯಿತಲ್ಲ. ಅನುಸರಿಸಿಕೊಂಡು ಹೋಗ್ ಬೇಕಪ್ಪ. ನೀವು ರೈತರೇ ಹೊಂದಾಣಿಕೆ ಮಾಡಿಕೊಂಡು ಹೋಗದಿದ್ದರೆ ನಾವೇನು ಮಾಡಬಹುದು,' ಎಂದು ಸ್ವಲ್ಪ ಖಾರವಾಗಿಯೇ ಹೇಳಿದರು. ಅಧ್ಯಕ್ಷರ ಮಾತುಗಳನ್ನು ನನಗೆ ಜೀರ್ಣಿಸಿಕೊಳ್ಳವುದು ಸ್ವಲ್ಪ ಕಷ್ಟವಾಯಿತು. 'ಸದಸ್ಯರು ನಿಮ್ಮ ಮುಂದೆ ಸಮಸ್ಯೆ ಹೇಳಿಕೊಳ್ಳುವುದಾದರೂ ಯಾಕೆ? ನಿಮ್ಮಿಂದ ಪರಿಹಾರ ಸಿಗಬಹುದೆಂದು, ನೀವು ಪರಿಹಾರ ಸೂಚಿಸದಿದ್ದರೆ ಅವರು ಎಲ್ಲಿಗೆ ಹೋಗಬೇಕು?' ಎಂದು ಕೇಳಿದೆ. 'ಇಷ್ಟರವರೆಗೆ ನಮಗೆ ನೀರಿನ ಸಮಸ್ಯೆ ಬಂದಿಲ್ಲ. ಎಲ್ಲರು ಅನುಸರಿಸಿಕೊಂಡು ಹೋಗುತ್ತಿದ್ದರು. ಶೇಂಗಾ ಹಾಕಿ ಅಂದ್ರು ನೆಲ್ಲು ಹಾಕಿದ್ದಾರೆ. ಎಲ್ಲರಿಗೂ ಒಂದೇ ದಿನ ಹೊಲ ತುಂಬಬೇಕು ಅಂದ್ರೆ ಈ ಆರು ಗಂಟೆ ಕರೆಂಟ್‌ನಲ್ಲಿ ಹೇಗೆ ನೀರು ಕೊಡುವುದು', ಎಂದು ಅಧ್ಯಕ್ಷರು ತಮ್ಮ ಹಳೇ ರಾಗ ಹಾಡಿದರು. 'ಅವರ ಹೊಲಕ್ಕೆ ಹೋಗಿ ನೋಡಿ ಒಂದ ಪರಿಹಾರ ಸೂಚಿಸಿ'. ಎಂದು ಅಲ್ಲೆ ಇದ್ದ ಒಬ್ಬ ನಿರ್ದೇಶಕರು ಅಧ್ಯಕ್ಷರಿಗೆ ಸಲಹೆ ಇತ್ತರು. 'ಹೊಲಕ್ಕೆ ಹೋದರೆ ಇಬ್ಬರೂ ನೀರಿನ ಪಸೆ(ತೇವಾಂಶ) ಕಾಣದ ಭಾಗ ತೋರಿಸುತ್ತಾರೆ. ಏನೂಂತ ನ್ಯಾಯ ಹೇಳುತ್ತಿರಿ?' ಎಂದು ಅಧ್ಯಕ್ಷರು ಸವಾಲು ಹಾಕಿದರು. ಹಿಂದೆ ಒಂದು ಬಾರಿ ನೀರು ಹಂಚಿಕೆ ತಕರಾರು ಪರಿಹಾರ ಕುರಿತು ಮಾಜಿ ಕಾರ್ಯದರ್ಶಿಯವರೊಬ್ಬರು 'ನೀರು ಕುರಿತು ಎರಡು ರೈತರ ನಡುವೆ ಜಗಳ ಆದರೆ ನಾನು ರೈತರ ಮಾತು ಕೇಳುವುದಿಲ್ಲ; ಹೊಲಗಳ ಮಾತು ಕೇಳುತ್ತೇನೆ,' ಎಂದು ಹೇಳಿದ್ದು ನೆನಪಿಗೆ ಬಂತು. ಅದನ್ನು ಅಧ್ಯಕ್ಷರಿಗೆ ಜ್ಞಾಪಿಸಿ ಪುನಃ ಅವರನ್ನು ಪೇಚಿಗೆ ಸಿಕ್ಕಿಸುವುದು ಬೇಡ ಎಂದು ಸುಮ್ಮನಾದೆ. ದೂರು ತಂದ ರೈತನಿಗೆ ಈ ಅಧ್ಯಕ್ಷರಿಂದ ಏನೂ ಉಪಯೋಗವಿಲ್ಲವೆಂದು ಮನವರಿಕೆಯಾಗಿರಬೇಕು. ವಾಪಸ್ಸು ತನ್ನ ಹೊಲಕ್ಕೆ ಹೋಗಿ ನೆರೆಯ ರೈತನನ್ನು (ರಾಮಣ್ಣನನ್ನು) ಎತ್ತರದಲ್ಲಿ ಸ್ವರದಲ್ಲಿ ಬೈಯ್ಯಲು ಆರಂಭಿಸಿದೆ. ನಾವು ನಿಂತು ಮಾತಾಡುವ ಜಾಗದಿಂದ ಕೇವಲ ಐವತ್ತು ಮೀಟರು ದೂರದಲ್ಲಿ ಅವರಿಬ್ಬರ ಜಗಳ ಸಾಗಿತ್ತು. 'ಬನ್ನಿ ನಾವು ಹೊಲಕ್ಕೆ ಹೋಗಿ ನೋಡುವ,' ಎಂದು ಅಲ್ಲೆ ಇದ್ದ ನಿರ್ದೇಶಕರೊಬ್ಬರನ್ನು ಕೇಳಿಕೊಂಡೆ. ಮನಸಿಲ್ಲದ

ಮನಸ್ಸಿನಿಂದ ಅವರು ನನ್ನ ಜತೆ ಬಂದರು. ದೂರು ತಂದ ರೈತನ ಹೊಲ ನಿಜವಾಗಿಯೂ ಒಣಗುತ್ತಿತ್ತು. ನೆರೆಯ ರೈತನ ಎರಡು ಹೊಲಗಳೂ ತುಂಬಿ ಮೂರನೆಯದ್ದು ಅರ್ಧ ತುಂಬಿತ್ತು. ಕೊನೆಯ ಹೊಲಕ್ಕೆ ಆತ ಉಪ್ಪು (ಗೊಬ್ಬರ) ಹಾಕುತ್ತಿದ್ದ. ರಾಮಣ್ಣನ ಅಣ್ಣ ಮೂರನೇ ಹೊಲದ ಬದುವಿನಲ್ಲಿ ನಿಂತು ನೀರು ಬಿಡುತ್ತಿದ್ದ. ನಮ್ಮನ್ನೆಲ್ಲ ಕಂಡು ದೂರು ತಂದ ರೈತರ ಧ್ವನಿ ಇನ್ನೂ ಜೋರಾಯಿತು. ನೀರು ಬಿಡುತ್ತಿದ್ದವನಿಗೆ ಸಮಸ್ಯೆ ಬಿಗಡಾಯಿಸುವ ಲಕ್ಷಣ ಕಂಡುಬಂದಿರಬೇಕು ಅಂತ, 'ಅದ್ಯಾಕಪ್ಪ ಅಷ್ಟು ಮಾತಾಡುತ್ತಿ; ಸ್ವಲ್ಪ ಹೊತ್ತಿಗೆ ಹೊಲ ತುಂಬುತ್ತದೆ, ನಂತರ ನೀನು ಕಿತ್ತುಕೋ,' ಎಂದು ಸಮಾಧಾನ ಪಡಿಸಿದ. ಆದರೆ ರಾಮಣ್ಣ ಮಾತ್ರ ಯಾವುದಕ್ಕೂ ಸೊಪ್ಪು ಹಾಕದೆ ತನ್ನ ಗೊಬ್ಬರ ಹಾಕುವ ಕೆಲಸ ಮುಂದುವರಿಸಿದ್ದ. ಸ್ವಲ್ಪ ಹೊತ್ತು ಬಿಟ್ಟ ನಂತರ ಅಧ್ಯಕ್ಷರ ಮತ್ತು ಮಾಜಿ ಕಾರ್ಯದರ್ಶಿಯವರು ನಾವಿದ್ದಲ್ಲಿ ಬಂದರು. ಅವರನ್ನೆಲ್ಲ ಕಂಡೋ ಅಥವಾ ಆತನ ಹೊಲ ತುಂಬಿತ್ತೋ ರಾಮಣ್ಣನ ಅಣ್ಣ, ದೂರು ನೀಡಿದ ರೈತನನ್ನು ಉದ್ದೇಶಿಸಿ, 'ಆಯಿತಪ್ಪ, ನೀನು ಕಿತ್ತುಕೊ (ಬಿಟ್ಟುಕೊ),' ಎಂದು ಈ ಕಡೆಗೆ ಬಂದ. ಅಧ್ಯಕ್ಷರು ಮತ್ತು ಮಾಜಿ ಕಾರ್ಯದರ್ಶಿಯವರು ದೂರು ನೀಡಿದ ರೈತನಿಗೆ ನೀರು ಬಿಟ್ಟುಕೊಳ್ಳಲು ಸೂಚಿಸಿ ಈ ಕಡೆ ಬಂದರು. ಹೀಗೆ ನೀರಿನ ಜಗಳ ಪರಿಹಾರ ಕಂಡಿತು.

**ಸಂಘದ ತೀರ್ಮಾನ ಅಂತಿಮ**

ನೀರಿನ ಜಗಳ ಪರಿಹಾರದಲ್ಲಿ ಸೊಸೈಟಿ ಪದಾಧಿಕಾರಿಗಳ ಪಾತ್ರ ನೋಡಿ ಅವರ ಮಾತೇನು ನಡೆಯುವುದಿಲ್ಲ ಎಂದು ತೀರ್ಮಾನಕ್ಕೆ ಬರುವುದು ಸರಿಯಲ್ಲ. ಸೊಸೈಟಿ ತನ್ನ ಹಕ್ಕು ಸ್ಥಾಪನೆಗಾಗಿ ಹೈಕೋರ್ಟ್ ತನಕ ಹೋದ ಉದಾಹರಣೆಯು ಇದೆ. ಇದು ಸ್ವಲ್ಪ ದೊಡ್ಡ ಕತೆಯೇ. ಆದಷ್ಟು ಸಂಕ್ಷಿಪ್ತವಾಗಿ ಹೇಳಲು ಪ್ರಯತ್ನಿಸುತ್ತೇನೆ. ೧೯೬೦ರಲ್ಲಿ ಸಾಮೂಹಿಕ ಬೇಸಾಯ ಸಹಕಾರಿ ಸಂಘ ನೋಂದಣಿ ಆದಾಗ ೭೨ ಜನ ಸದಸ್ಯರಿದ್ದರು. ಕೆಲವು ವರ್ಷ ೭೨ ಮಂದಿ ಸಾಮೂಹಿಕ ಬೇಸಾಯ ಮಾಡಿದರು. ಅದರಿಂದ ಅವರ ಮೂರು ಹೊತ್ತಿನ ಊಟ ಬರುವುದು ಸಮಸ್ಯೆಯಾಯಿತು. ನೀರಿನ ವ್ಯವಸ್ಥೆ ಇಲ್ಲ, ಉಳುಮೆ ಮಾಡಲು ಸಾಕಷ್ಟು ಸಂಖ್ಯೆಯಲ್ಲಿ ಎತ್ತುಗಳು ಇಲ್ಲ, ಇವೆಲ್ಲಕ್ಕಿಂತ ಹೆಚ್ಚಾಗಿ ಇವುಗಳನ್ನು ಕೊಳ್ಳುವಷ್ಟು ಸಂಘದಲ್ಲಿ ಬಂಡವಾಳ ಇರಲಿಲ್ಲ. ಸಂಘದ ಪಾಲು ಬಂಡವಾಳ ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಹೊಸ ಸದಸ್ಯರನ್ನು ಸೇರಿಸಿಕೊಳ್ಳುವುದು ಅನಿವಾರ್ಯವಾಯಿತು. ಹಾಗೆ ೧೯೭೦ರಲ್ಲಿ ೭೨ ಮಂದಿ ಹೊಸ ಸದಸ್ಯರನ್ನು ಸೇರಿಸಿಕೊಳ್ಳಲಾಯಿತು. ಹೊಸ ಸದಸ್ಯರು ಬಂದ ನಂತರ ಜಮೀನು ಪುನರ್ವಿಂಗಡನೆಯಾಯಿತು. ಹಿಂದೆ ಪ್ರತಿಯೊಬ್ಬರ ಕಬ್ಜಾದಲ್ಲೂ ನಾಲ್ಕು ಎಕರೆ ಜಮೀನು ಇತ್ತು. ಮರುವಿಂಗಡಣೆಯ ನಂತರ ಪ್ರತಿ ಸದಸ್ಯನಿಗೂ ಒಂದು ಎಕರೆ ೧೦ ಗುಂಟೆ ಜಮೀನು ಬಂತು. ಇದನ್ನು ವಿರೋಧಿಸಿ (ಅವರ ಜಗಳಕ್ಕೆ ಬೇರೆ ಕಾರಣಗಳೂ ಇವೆ) ಕೆಲವು ಸದಸ್ಯರು ಕೋರ್ಟ್ ಮೆಟ್ಟಿಲು ಹತ್ತಿದರು. ನಮಗೆ ನಮ್ಮ ಹಿಂದಿನ ನಾಲ್ಕು ಎಕರೆ ಜಮೀನು ಕೊಡಬೇಕು. ನಾವು ಸ್ವಂತ ಕೃಷಿ ಮಾಡಿಕೊಳ್ಳುತ್ತೇವೆ ಎಂದು ಐದು ಜನ ರೈತರು ಕೊಪ್ಪಳ ಕೋರ್ಟಿನಲ್ಲಿ ಸಿವಿಲ್ ಕೇಸ್ ದಾಖಲಿಸಿದರು. ಅಲ್ಲಿ ಅವರಿಗೆ ಸೋಲಾಯಿತು. ನಂತರ ಅದು ಜಿಲ್ಲಾ ಕೋರ್ಟಿಗೆ ಹೋಯಿತು. ಅಲ್ಲೂ ಅವರು ಸೋತರು. ಕಡೆಗೆ ಆ ಕೇಸ್ ಹೈಕೋರ್ಟಿಗೂ ಹೋಯಿತು. ಅಲ್ಲೂ ಸಂಘಕ್ಕೆ ಜಯವಾಯಿತು. ಹೀಗೆ ಸಂಘ ತನ್ ನಿರ್ಧಾರವನ್ನು ಉಳಿಸಿಕೊಳ್ಳಲು ಸಾಕಷ್ಟು ಹೋರಾಟ ಮಾಡಿದೆ. ಹಲವಾರು ಸಾವಿರ ರೂಪಾಯಿ ಖರ್ಚು ಕೂಡ ಆಗಿದೆ. ಅದನ್ನು ಎಲ್ಲ ಸದಸ್ಯರು ಸಮನಾಗಿ ಭರಿಸಿದ್ದಾರೆ (ಸಹಕಾರಿ ಉಪ ನಿಬಂಧಕರ ಪತ್ರ, ೧೯೮೭)

ನೀರಿನ ಸಮಸ್ಯೆ ಇಲ್ಲದಿರುವುದರಿಂದ ನೀರು ಹಂಚಿಕೆ ಜಗಳ ಅವರಿಗೆ ದೊಡ್ಡ ಸಮಸ್ಯೆ ಆಗಿ ಪರಿಣಮಿಸಿಲ್ಲ. ಆದುದರಿಂದ ಅದರ ಪರಿಹಾರ ಕುರಿತು ಅವರು ವಿಶೇಷ ತಲೆ ಕೆಡಿಸಿಕೊಂಡಿಲ್ಲ. ಇದನ್ನು ಒಪ್ಪುವ. ಆದರೆ ಇತರ ಕೆಲವು ವಿಚಾರಗಳಲ್ಲೂ ಕೂಡ ಸೊಸೈಟಿ ತನ್ನ ನಿರ್ಧಾರವನ್ನು ಕಾರ್ಯರೂಪಕ್ಕೆ ತಂದಿಲ್ಲ. ಅದರಲ್ಲಿ ಮುಖ್ಯವಾಗಿ ಕಾಣವುದು ಮನೆ ಬಾಡಿಗೆ ಸಮಸ್ಯೆ. ಬಹು ಹಿಂದೆಯೇ ಸೊಸೈಟಿ ಕವಳಿಯಲ್ಲಿ (ಸೊಸೈಟಿ ಕಚೇರಿ ಮತ್ತು ಜಮೀನು ಇರುವ ಸ್ಥಳ) ಎಂಟು ಮನೆ ಕಟ್ಟಿಸಿತ್ತು. ಕೆಲವು ವರ್ಷಗಳ ಹಿಂದೆ ಹದಿಮೂರು ಜನತಾ ಮನೆ ಕಟ್ಟಿಸಿ ತನ್ನ ಸದಸ್ಯರಿಗೆ ಇರಲು ವ್ಯವಸ್ಥೆ ಮಾಡಿದೆ. ಆ ಮನೆಗಳಿಗೆ ತಿಂಗಳಿಗೆ ರೂ.೧೦ ಬಾಡಿಗೆ ನಿರ್ಧಾರವಾಗಿದೆ. ಕೆಲವರು ಆ ಹತ್ತು ರೂಪಾಯಿಗಳನ್ನು ಕೂಡ ಸಂದಾಯ ಮಾಡಿಲ್ಲ (ಲೆಕ್ಕ ಪರಿಶೀಲನಾ ವರದಿ, ೧೯೮೩). ಇವತ್ತು ಕೊಡುತ್ತೇವೆ ನಾಳೆ ಕೊಡುತ್ತೇವೆ ಎಂದು ಕಾಲ ದೂಡುತ್ತಿದ್ದಾರೆ. ಸಂಘದ ಪದಾಧಿಕಾರಿಗಳಲ್ಲಿ ಯಾಕೆ ನೀವು ಈ ಕುರಿತು ಕಟ್ಟು ನಿಟ್ಟಿನ ಕ್ರಮ ಕೈಗೊಂಡಿಲ್ಲ ಎಂದು ಕೇಳಿದೆ. 'ಆ

ಮನೆಗಳು ಸೊಸೈಟಿ ಮನೆಗಳೆಂದು ಕಾನೂನು ಪ್ರಕಾರ ಇರಬೇಕಾದರೆ ಅವರಿಂದ ಬಾಡಿಗೆ ವಸೂಲು ಆಗಲೇ ಬೇಕು. ಹಾಗೆಂದೆ ನಾವು ತುಂಬಾ ಕಡಿಮೆ ಬಾಡಿಗೆ ಇಟ್ಟಿದ್ದೇವೆ. ಹಾಗೆಂದು ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳವಷ್ಟು ಸ್ಥಿತಿ ಹದಗೆಟ್ಟಿಲ್ಲ. ಸೊಸೈಟಿ ಕಾನೂನು ಸಮಸ್ಯೆಯನ್ನು ವಾರ್ಷಿಕ ಮಹಾಸಭೆಯಲ್ಲಿ ಚರ್ಚಿಸಿದರೆ ಅವರನ್ನು ಒಪ್ಪಿಸಬಹುದು,' ಎಂದು ಪದಾಧಿಕಾರಿಗಳು ಅಭಿಪ್ರಾಯ ಪಡುತ್ತಾರೆ. ಮನೆಯಲ್ಲಿ ಇರುವವರನ್ನು ಕೇಳಿದರೆ ಬೇರೆಯೆ ಉತ್ತರ ಸಿಗುತ್ತದೆ. ಕವಳಿ ಮಹಮ್ಮದ್ ನಗರ ಮತ್ತು ಶಿವಪುರಗಳ ನಡುವೆ ಇದೆ. ಅಲ್ಲಿ ಸೊಸೈಟಿಯವರು ಇಪ್ಪತ್ತೊಂದು ಮನೆಗಳನ್ನು ಬಿಟ್ಟರೆ ಬೇರ ಮನೆಗಳು ಇಲ್ಲ. ಕವಳಿಯಲ್ಲಿ ಸೊಸೈಟಿಯ ಮೂರುವರೆ ಎಕರೆ ತೋಟ ಇದೆ. ಅದರಲ್ಲಿ ಸುಮಾರು ೯೦ ತೆಂಗಿನ ಮರಗಳು, ೭೦ ಮಾವಿನ ಮರಗಳು ಮತ್ತು ಅಷ್ಟೇ ಸಂಖ್ಯೆಯ ಸಪೋಟ ಮರಗಳಿವೆ. ಪ್ರತಿ ವರ್ಷ ಆ ತೋಟದ ಹರಾಜಿನಿಂದ ಸೊಸೈಟಿಗೆ ಕನಿಷ್ಠ ಹದಿನೈದು ಸಾವಿರ ಆದಾಯ ಬರುತ್ತದೆ. ಈ ವರ್ಷ ಇಪ್ಪತ್ತೈದು ಸಾವಿರಕ್ಕೆ ಅಂದಾಜು ಆಗಿದೆ. ನಾವಿಲ್ಲದಿದ್ದರೆ ಆ ತೋಟವನ್ನು ಕಾಯುವುದು ಯಾರು? ಹೆಚ್ಚಿನ ಸದಸ್ಯರಿಗೆ ಶಿವಪುರದಲ್ಲಿ ಜಮೀನು ಇದೆ ಮನೆನೂ ಇದೆ. ನಮಗೆ ಬೇರೆ ಕಡೆ ಮನೆ ಇಲ್ಲ. ಮನೆ ಕಟ್ಟಿಸಿಕೊಳ್ಳುವಷ್ಟು ಆದಾಯವೂ ಇಲ್ಲ. ಹೀಗಿರುವಾಗ ನಾವು ಅಲ್ಲಿಗೆ ಹೋಗುವುದು? ಸೊಸೈಟಿಯೇ ನಮ್ಮ ವಸತಿ ವ್ಯವಸ್ಥೆ ಮಾಡಬೇಕೆಂದು ಮನೆಯಲ್ಲಿ ವಾಸ ಇರುವವರ ನಿಲುವುಗಳು.

ಮತ್ತೊಂದು ಸಮಸ್ಯೆ ಸೊಸೈಟಿ ಜಮೀನಿನ ಅಂಚಿನಲ್ಲಿರುವ ರೈತರು ಇತರ (ಸೊಸೈಟಿಗೆ ಸೇರಿರದ) ಜಮೀನು ಕೃಷಿ ಮಾಡುವ ಕುರಿತು. ಕೆಲವು ರೈತರು ತಮ್ಮ ಹೊಲಗಳಿಗೆ ತಾಗಿಕೊಂಡಿರುವ ಜಮೀನನ್ನು ಲೀಸ್ ಪಡಕೊಂಡು ಬೇಸಾಯ ಮಾಡುತ್ತಾರೆ. ಬೇಸಾಯ ಮಾಡುವುದರ ಬಗ್ಗೆ ಸೊಸೈಟಿ ಚಿಂತಿತವಾಗಿಲ್ಲ. ಆದರೆ ಅವರು ಆ ಬೇಸಾಯಕ್ಕೆ ಸೊಸೈಟಿ ಮಾಡುವುದರ ಬಗ್ಗೆ ಸೊಸೈಟಿ ಚಿಂತಿತವಾಗಿಲ್ಲ. ಆದರೆ ಅವರು ಆ ಬೇಸಾಯಕ್ಕೆ ಸೊಸೈಟಿ ನೀರನ್ನು ಬಳಸುವುದು ಸಭೆಗಳಲ್ಲಿ ಆಕ್ಷೇಪಕ್ಕೆ ಒಳಗಾಗಿದೆ. ಹಿಂದಿನ ಸಭೆಯಲ್ಲೂ ಆ ವಿಚಾರ ಚರ್ಚೆಗೆ ಬಂದುದರ ಕುರಿತು ಮೇಲೆ ತಿಳಿಸಿದ್ದೇನೆ. ಇದು ಕೆಲವು ವರ್ಷಗಳಿಂದ ನಡೆಯುತ್ತಾ ಬಂದಿದೆ. ಕೆಲವು ನಿರ್ದೇಶಕರ ಪ್ರಕಾರ ಇದೇನೂ ಅಷ್ಟು ದೊಡ್ಡ ಸಮಸ್ಯೆ ಅಲ್ಲ. ಅವರು ಕೆಲವು ಗುಂಟೆ ಬೇಸಾಯ ಮಾಡುವುದರಿಂದ ತಮ್ಮ ಆದಾಯ ಹೆಚ್ಚಿಸಿಕೊಳ್ಳಲು ಏನೋ ಸ್ವಲ್ಪ ಸೊಸೈಟಿ ನೀರನ್ನು ಬಳಸುತ್ತಿದ್ದಾರೆ. ಅದಕ್ಕೆ ಒಂದು ಫೀಸು ತೀರ್ಮಾನ ಮಾಡಿ ಅವರಿಂದ ವಸೂಲು ಮಾಡಿದರೆ ಆಯಿತು. ಇನ್ನು ಕೆಲವರ ಪ್ರಕಾರ ನಾವು ಹಲವಾರು ವರ್ಷದಿಂದ ಅವರನ್ನು ಈ ರೀತಿ ಬೇಸಾಯ ಮಾಡಲು ಬಿಟ್ಟು ಈಗ ಒಮ್ಮಿಂದೊಮ್ಮೆಲೆ ನೀರು ನಿಲ್ಲಿಸಿದರೆ ಹೇಗೆ? ಹೂವಿನ ತೋಟ ಮಾಡಿಕೊಂಡ ಒಬ್ಬ ರೈತನ ಉದಾಹರಣೆ ಕೊಟ್ಟರು. ಆತ ಮೂರು ವರ್ಷಗದಿಂದ ಹೂವಿನ ಗಿಡ ಬೆಳೆಯುತ್ತಿದ್ದಾನೆ. ಆ ಗಿಡಗಳು ಬೆಳೆದು ಹೂ ಬಿಡುತ್ತಿವೆ. ಈಗ ನಾವು ನೀರು ನಿಲ್ಲಿಸಿದರೆ ಆ ಗಿಡಗಳೇನಾಗಬೇಕು, ಆತ ಎಲ್ಲಿಗೆ ಹೋಗಬೇಕು? ಹೀಗೆ ನೀರು ಕೊಡುವುದರ ಪರ ಕೆಲವರು ವಾದ ಮಂಡಿಸುತ್ತಾರೆ. ಅದನ್ನು ವಿರೋಧಿಸುವವರು ಕೂಡ ಅಷ್ಟೆ ಬಲವಾಗಿ ಮರಗಳನ್ನು ಮಂಡಿಸುತ್ತಾರೆ. ಅವರು ಯಾರನ್ನು ಕೇಳಿ ಹೆಚ್ಚಿನ ಬೇಸಾಯ ಶುರು ಮಾಡಿದ್ದಾರೆ? ನಮ್ಮಲ್ಲಿ ಅಂದರೆ ಸಂಘದಲ್ಲಿ ಆ ಕುರಿತು ಚರ್ಚೆ ಆಗಿಲ್ಲ. ನಾವು ಅವರಿಗೆ ನೀರು ಕೊಡುತ್ತೇವೆ ಎಂದು ಎಲ್ಲೂ ಭರವಸೆ ನೀಡಿಲ್ಲ. ಸಂಘದ ಕರ್ತವ್ಯ ಅದರ ಸದಸ್ಯರಿಗೆ ಸಂಘದ ಜಮೀನು ಬೇಸಾಯ ಮಾಡಲು ನೀರು ಕೊಡುವುದು. ಊರಲ್ಲಿ ಇರುವ ಎಲ್ಲ ಜಮೀನು ಬೇಸಾಯ ಮಾಡಲು ನೀರು ಕೊಡುತ್ತೇವೆ ಎಂದು ನಾವು ಎಲ್ಲೂ ಹೇಳಿಕೊಂಡು ಬಂದಿಲ್ಲ. ಸಂಘದ ಜಮೀನಿಗೆ ಉಪಯೋಗವಾಗಿ ನೀರು ಉಳಿದರೆ ನಾವು ನಿರ್ಧರಿಸಿದ ಫೀಸು ತೆತ್ತು ಬೇಸಾಯ ಮಾಡಬೇಕು. ಈ ವರ್ಷವಂತೂ ಕರೆಂಟ್ ಕಡಿತದಿಂದ ಸಂಘದ ಹೊಲಗಳಿಗೆ ನೀರಿಲ್ಲ. ಹೀಗಿರುವಾಗ ಸೊಸೈಟಿಗೆ ಸೇರಿರದ ಜಮೀನಿಗೆ ಬೇಸಾಯಕ್ಕೆ ನೀರು ಕೊಡಬೇಕೆಂದು ವಾದಿಸುವುದು ಸರಿಯಲ್ಲ ಎಂದು ಇತರ ಜಮೀನು ಬೇಸಾಯ ಮಾಡುವವರಿಗೆ ನೀರು ಕೊಡುವುದನ್ನು ವಿರೋಧಿಸುವವರು ಹೇಳುತ್ತಾರೆ. ಆ ರೀತಿ ಬೇಸಾಯ ಮಾಡುವವರು ತಮ್ಮ ಕೆಲಸವನ್ನು ಸಮರ್ಥಿಕೊಳ್ಳುತ್ತಿಲ್ಲ. ಅವರ ಪ್ರಕಾರ ಇಷ್ಟರವರೆಗೆ ಇದೊಂದು ಸಮಸ್ಯೆ ಎಂದು ಯಾರು ಪರಿಗಣಿಸಿಲ್ಲ. ಸಂಘದವರು ನೀರಿಗೆ ದರ ನಿರ್ಧರಿಸಿದರೆ ನಾವು ಕೊಡಲು ರೆಡಿ ಇದ್ದೇವೆ. ಸಂಘದ ಜಮೀನಿಗೆ ನಾವು ನೀರಿನ ದರ ತೆತ್ತೇ ಉಪಯೋಗಿಸುತ್ತಿರುವುದು; ಯಾವುದು ಪುಕ್ಸಟ್ಟೆಯಾಗಿ ಇಲ್ಲ. ಹೆಚ್ಚಿನ ಬೇಸಾಯಕ್ಕೆ ಕೇಳಿದರೆ ನಾವು ಕೊಡುತ್ತೇವೆ ಎನ್ನುತ್ತಾರೆ.

ಮೇಲಿನ ವಿವರಗಳು ಮಹಮ್ಮದ್ ನಗರ ಬೇಸಾಯ ಸಹಕಾರ ಸಂಘದ ಕಿರು ಪರಿಚಯ ಮಾಡಿಸಬಹುದು. ತುಂಗಭದ್ರಾ ಆಣೆಕಟ್ಟಿನಿಂದ ಭೂಮಿ ಕಳಕೊಂಡವರಿಗೆ ಪುನರ್ ವಸತಿ ಕಲ್ಪಿಸಲು ಭೂಮಿ ನೀಡಲಾಗಿತ್ತು. ಈ ೫೪ ರೈತರು ಮಾತ್ರ ರೀತಿ ಭೂಮಿ ಪಡೆದವರಲ್ಲ. ಹಳ್ಳಿಗೆ ಹಳ್ಳಿಯೇ ನೀರಿನಿಂದ ಮುಳುಗಿ ಸ್ಥಳಾಂತರವಾದ ಉದಾಹರಣೆಗಳು ತುಂಬ ಇವೆ. ಆ ರೀತಿ ಸ್ಥಳಾಂತರವಾದವರೆಲ್ಲ ಹೊಸ ಜಾಗದಲ್ಲಿ ಸಹಕಾರಿ ಬೇಸಾಯ ಆರಂಭಿಸಿಲ್ಲ. ಹಿಂದಿನ ರೀತಿಯಲ್ಲಿ ಖಾಸಗಿ ಒಡೆತನದಲ್ಲಿ ಬೇಸಾಯ ಮುಂದುವರಿಸಿದ್ದಾರೆ. ಕೆಲವರು ಮಾತ್ರ ಸಹಕಾರಿ ಬೇಸಾಯಕ್ಕೆ ಒಪ್ಪಿಕೊಂಡಿರುವುದು. ಮಹಮ್ಮದ್ ನಗರದ ಸಹಕಾರಿ ಬೇಸಾಯ ಸಂಘ ಅವುಗಳಲ್ಲಿ ಒಂದು. ಮಹಮ್ಮದ್ ನಗರದಲ್ಲಿ ಸಹಕಾರಿ ಬೇಸಾಯ ಆರಂಭವಾಗುವುದರ ಹಿಂದೆ ಅಂದಿನ ಸರಕಾರದ ಸಹಕಾರಿ ನೀತಿ ಮತ್ತು ಸಾಮೂಹಿಕ ಬೇಸಾಯಕ್ಕೆ ಅದು ಕೊಡುತ್ತಿದ್ದ ಬೆಂಬಲದ ಪಾತ್ರ ಇದೆ. ಇದರ ಜತೆಗೆ ಶುರುವಾದ ಇನ್ನು ಕೆಲವು ಸಹಕಾರಿ ಸಂಘಗಳು ಮುಚ್ಚಿ ರೈತರು ಜಮೀನನ್ನು ಖಾಸಗಿ ಒಡೆತನದಲ್ಲಿ ಕೃಷಿ ಮಾಡುತ್ತಿದ್ದಾರೆ. ಇಲ್ಲಿ ಸಂಘ ಇದೆ. ಜತೆಗೆ ಹೊರಗಿನ ಬದಲಾವಣೆಗಳಿವೆ ಹೊಂದಾಣಿಕೆ ಮಾಡಿಕೊಳ್ಳಲು ಸಂಘ ಆಂತರಿಕ ಬದಲಾವಣೆಗಳನ್ನು ಮಾಡುತ್ತಲೇ ಬಂದಿವೆ. ಸಾಮೂಹಿಕ ಬೇಸಾಯ ಬದಲು ಲಾವಣಿ ಆಧಾರಿತ ಖಾಸಗಿ ಬೇಸಾಯ ಮಾಡಿಕೊಂಡರು. ಹೊಸ ವ್ಯವಸ್ಥೆಯಲ್ಲಿ ರೈತರಿಂದ ಲಾವಣಿ ಸಂಗ್ರಹಿಸಿ ನೀರು ಪೂರೈಸುವುದು ಸಂಘದ ಮುಖ್ಯ ಜವಾಬ್ದಾರಿ ಇದನ್ನು ಸಂಘ ತುಂಬ ಕ್ರಮ ಪ್ರಕಾರ ಮಾಡುತ್ತಿದೆ. ದಿನದಿಂದ ದಿನಕ್ಕೆ ಸಂಘ ಬಲಗೊಳ್ಳುತ್ತಿದೆ.

## (೩)

ಭಾಗ-೧

ಪಾಪಿನಾಯಕನಹಳ್ಳಿ (ಪಿ.ಕೆ.ಹಳ್ಳಿ) ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನಲ್ಲಿದೆ. ಹೊಸಪೇಟೆಯಿಂದ ಬಳ್ಳಾರಿಗೆ ಹೋಗುವ ಹೆದ್ದಾರಿಯಲ್ಲಿ ಹೊಸಪೇಟೆಯಿಂದ ಸುಮಾರು ೧೨ಕಿ.ಮೀ.ದೂರದಲ್ಲಿ ಈ ಹಳ್ಳಿ ಸಿಗುತ್ತವೆ. ಒಂದು ಲೆಕ್ಕಾಚಾರ ಪ್ರಕಾರ ಇಲ್ಲಿನ ಜನ ಸಂಖ್ಯೆ ಐದು ಸಾವಿರ ಹತ್ತಿರವಿದೆ. ಹಳ್ಳಿಯಲ್ಲಿರುವ ಒಟ್ಟು ಕುಟುಂಬಗಳು ೮೫೫. ಅವುಗಳ ಜಾತಿವಾರು ವಿಂಗಡನೆ ಇಂತಿದೆ. ೧೦೬ ನಾಯಕ, ೧೧೦ ಹರಿಜನ, ೧೫೩ ಲಿಂಗಾಯತ, ೮೮ ವಡ್ಡ, ೮೦ ಕುರುಬ, ೬೯ ಮುಸ್ಲಿಂ, ೩೨ ಕ್ರಿಶ್ಚಿಯನ್ ಮತ್ತು ಇತರ ಜಾತಿಗೆ ಸೇರಿದ ೨೧೭ ಕುಟುಂಬಳಿಗೆ (ಮನೆ ತೆರಿಗೆ ರಿಜಿಸ್ಟರ್, ೧೯೯೯). ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರ ಸಂಖ್ಯೆ ಇಂತಿದೆ. ಕೃಷಿಕರು ೪೭೧, ಕೃಷಿ ಕಾರ್ಮಿಕರು ೪೫೮, ಪಶು ಸಂಗೋಪನೆ, ಮೀನುಗಾರಿಕೆ ಇತ್ಯಾದಿ ೧೧, ಗಣಿಗಾರಿಕೆ ಇತ್ಯಾದಿ ೧೧, ಗಣಿಗಾರಿಕೆ ೩೧೪, ಗುಡಿ ಕೈಗಾರಿಕೆ ೩, ಆಧುನಿಕ ಕೈಗಾರಿಕೆ ೧೭ ಕಟ್ಟೋಣ ಕೆಲಸ ೩೪, ವಾಣಿಜ್ಯ/ವ್ಯಾಪಾರ ೪೨ ಮತ್ತು ಸಾರಿಗೆ ಸಂಪರ್ಕ ೧೫೭ (ಸೆನ್ಸಸ್, ೧೯೯೧). ಹಳ್ಳಿಯ ಒಟ್ಟು ಕೃಷಿ ಭೂಮಿಯಲ್ಲಿ ಬಹು ಪಾಲು ಇಲ್ಲಿನ ಲಿಂಗಾಯತರ ಒಡೆತನದಲ್ಲಿದೆ. ಉಳಿದ ಜಾತಿಯವರಲ್ಲೂ ಜಮೀನು ಇದೆ. ಆದರೆ ಅದರ ಪ್ರಮಾಣ ಕಡಿಮೆ(ಅರುಣೋದಯ,೧೯೯೯). ಐವತ್ತರ ದಶಕದಲ್ಲೇ ಡಾಲ್ಮಿಯಾ ಕಂಪೆನಿಯವರು ಹಳ್ಳಿಯ ಸರಹದ್ದಿಯಲ್ಲಿ ಗಣಿಗಾರಿಕೆ ಶುರುಮಾಡಿದ್ದರು. ಹಲವಾರು ಕಾರಣಗಳಿಂದ ಹಳ್ಳಿಯ ಕೆಳ ವರ್ಗ ಆರಂಭದ ದಿನಗಳಲ್ಲಿ ಗಣಿ ಕೆಲಸಕ್ಕೆ ಹೋಗಿರಲಿಲ್ಲ. ಆದರೆ ೧೯೭೦ರ ನಂತರ ಕೃಷಿ ಕಾರ್ಮಿಕರು ಮತ್ತು ಸಣ್ಣ ರೈತರು ಗಣಿ ಕೆಲಸಕ್ಕೆ ಹೋಗಲು ಆರಂಭಿಸಿದರು. ಇಂದು ಅಲ್ಲಿ ಕೃಷಿಯೇತರ ಚಟುವಟಿಕೆಯಲ್ಲಿ ತೊಡಗಿಸಿಕೊಂಡವರ ಸಂಖ್ಯೆ ಶೇಕಡಾ ೬೦ ದಾಟಿದೆ. ಅದರಲ್ಲಿ ಶೇಕಡಾ ತೊಂಬತ್ತರಷ್ಟು ಗಣಿ ಕೆಲಸ. ಇದು ಉತ್ತರ ಕರ್ನಾಟಕದ ಇತರ ಹಳ್ಳಿಗಳಿಗೆ ಹೋಲಿಸಿದರೆ ತುಂಬ ಭಿನ್ನವಾದ ಚಿತ್ರಣ. ಅದಕ್ಕೆ ಗಣಿ ಕೆಲಸ ಕೊಡುವ ಸ್ವಲ್ಪ ಹೆಚ್ಚಿನ ಸಂಬಳ ಒಂದು ಕಾರಣವಾದರೆ ಕೃಷಿಗೆ ಅಗತ್ಯವಿರುವ ನೀರಾವರಿ ಕೊರತೆ ಮತ್ತೊಂದು ಕಾರಣ. ಹೊಸಪೇಟೆಯಲ್ಲಿ ತುಂಗಭದ್ರಾ ಆಣೆಕಟ್ಟು ಆದಾಗ ಊರಿನ ನೀರಿನ ಸಮಸ್ಯೆ ಪರಿಹಾರವಾದೀತೆಂಬ ದೂರದ ಕನಸು ಊರವರಿಗಿತ್ತು. ಆಣೆಕಟ್ಟಿನ ಕೆಲಸ ನಡಿಯುತ್ತಿದ್ದಾಗ ಊರೆಲ್ಲಾ ಅದೇ ಸುದ್ದಿಯಂತೆ. ತುಂಗಭದ್ರಾ ಅಣೆಕಟ್ಟೆಯ ಮೇಲ್ದಂಡೆ ಕಾಲುವೆ (ಆಂಧ್ರಕ್ಕೆ ಹೋಗುವ ಕಾಲುವೆ) ಕಾರಿಗನೂರು, ವಡ್ಡರಹಳ್ಳಿ, ಪಾಪಿನಾಯಕನ ಹಳ್ಳಿಗಾಗಿ ಹೋಗುವ ಸಾಧ್ಯತೆ ಇತ್ತೆಂದು ಊರವರ ಅಭಿಪ್ರಾಯ. ಆದರೆ ಆ ರೀತಿ ಆಗಲಿಲ್ಲ. ಆಂಧ್ರಕ್ಕೆ ಹೋಗುವ ಕಾಲುವೆ ಇವರ ಊರ ಸಮೀಪನೂ ಬರಲಿಲ್ಲ.

**ಊರ ಕೆರೆಗಳು**

ಇತರ ಊರುಗಳಂತೆ ಇಲ್ಲಿ ಕೂಡಾ ಕೆರೆಗಳಿವೆ. ಒಂದು ಆಂಜನೇಯ ಗುಡಿ ಹಿಂದಿರುವ ಈಶ್ವರನ ಕೆರೆ ಮತ್ತೊಂದು ಡಾಲ್ಮಿಯಾ ಗಣಿಗೆ ಹೋಗುವ ದಾರಿಯಲ್ಲಿರುವ ಸೆಟ್ಟಿ ಕೆರೆ. ಈಶ್ವರನ ಕೆರೆ ಮಳೆಗಾಲದಲ್ಲಿ ತುಂಬುತ್ತದೆ. ಅದರ ಪಾತ್ರ ಚಿಕ್ಕದು. ಕೆರೆಗೆ ನೀರುಣಿಸುವ ಮೂಲಗಳು ಕಡಿಮೆ. ಜನರ, ದನಕರುಗಳ ಸ್ನಾನಕ್ಕೆ ಮತ್ತು ಊರವರ ಬಟ್ಟೆ ಒಗೆತಕ್ಕೆ ಈ ಕೆರೆ ಸೀಮಿತ. ಈ ಕೆರೆಯ ಕೆಳಭಾಗದಲ್ಲಿ ಕೆಲವು ಹೊಳಗಳಿವೆ. ಮುಸ್ಲಿಮರಿಗೆ ಸೇರಿದ್ದು. ಆದಾಗ್ಯೂ ಈ ಕೆರೆಯ ನೀರು ಕೃಷಿಗೆ ಬಳಕೆಯಾಗುತ್ತಿಲ್ಲ. ಜನವರಿ-ಫೆಬ್ರವರಿ ತಿಂಗಳಿಗಾಗುವ ನೀರು ಖಾಲಿಯಾಗಿ ಕೆರೆ ಬತ್ತಿರುತ್ತದೆ. ಮತ್ತೊಂದು ಸೆಟ್ಟಿಕೆರೆ. ಇದು ಡಾಲ್ಮಿಯಾ ಗಣಿಗೆ ಹೋಗುವ ರಸ್ತೆಯಲ್ಲಿದೆ. ಜಿಜಿ.ಬ್ರದರ್ಸ್ ಫ್ಯಾಕ್ಟರಿಯ ಎದುರು ಭಾಗದ ರಸ್ತೆಯಲ್ಲಿ ಸುಮಾರು ಎರಡು ಕಿ.ಮೀ.ಸಾಗಿದರೆ ಗುಡ್ಡಗಳ ಸಾಲುಗಳು ಆರಂಭವಾಗುತ್ತದೆ. ಅಲ್ಲೆ ಎರಡು ಗುಡ್ಡಗಳು ಪರಸ್ಪರ ಮುಖ ಮಾಡಿ ನಿಂತಿವೆ. ಆ ಗುಡ್ಡಗಳ ನಡುವೆ ಒಳ ಹೋಗಲು ಕಣಿವೆಯಿದೆ. ಆ ಕಣಿವೆಯ ಮೂಲಕ ಒಳ ಹೊಕ್ಕರೆ ಹಲವಾರು ಎಕ್ರೆಗಳಷ್ಟು ಸಮತಟ್ಟಾದ ಭೂಮಿ ನಂತರ ಪುನಃ ಗುಡ್ಡಗಳ ಸಾಲುಗಳು. ಪರಸ್ಪರ ಮುಖ ಮಾಡಿ ನಿಂತಿರುವ ಎರಡು ಗುಡ್ಡಗಳನ್ನು -ಸ್ವಲ್ಪ ಒಳ ಭಾಗದಲ್ಲಿ -ಸೇರಿಸಿ ವಿಜಯನಗರ ಕಾಲದಲ್ಲೆ ಸೆಟ್ಟಿಕೆರೆ ನಿರ್ಮಾಣವಾಗಿತ್ತು. ಸುಮಾರು ಐವತ್ತು ಎಕ್ರೆಗಳಷ್ಟು ಸಮತಟ್ಟಾದ ಭೂಮಿ ಕೆರೆಯ ಪಾತ್ರವಾಗಿದೆ. ಮಳೆಗಾಲದಲ್ಲಿ ಗುಡ್ಡಗಳ ಮೇಲೆ ಸುರಿಯುವ ನೀರು ಹರಿದು ಈ ಕೆರೆ ಸೇರುತ್ತದೆ. ಹಿಂದಿನ ಕಾಲದಲ್ಲಿ ಈ ಕೆರೆ ಒಂದು ತಡೆ ಕೆರೆ (ಚೆಕ್ ಡ್ಯಾಮ್) ಇದ್ದಂತೆ. ಇದರ ಕೆಳಭಾಗದಲ್ಲಿ ವಡ್ಡರ ಹಳ್ಳಿ ಕೆರೆ ನಂತರ ಕಮಲಾಪುರ ಕೆರೆಗಳಿವೆ. ಮಳೆಗಾಲದಲ್ಲಿ ಸುರಿಯುವ ನೀರನ್ನು ಹಲವಾರು ಹಂತಗಳಲ್ಲಿ ತಡೆ ಹಿಡಿದು ಆಯಾಯ ಪ್ರದೇಶದ ಜನರ ಉಪಯೋಗಕ್ಕೆ ಬಳಸುವ ಕಲೆ ಹಿಂದಿನಿಂದಲೇ ಕರಗತವಾಗಿತ್ತು.

ಆದರೆ ಈಗ ಸ್ಥಿತಿ ತೀರಾ ಭಿನ್ನವಾಗಿದೆ. ಸುಮಾರು ಎಪ್ಪತ್ತು ವರ್ಷಗಳ ಹಿಂದೆ ಈ ಕೆರೆಯ ಕಟ್ಟೆ ಹರಿಯಿತು. ಆರಂಭದಲ್ಲಿ ತುಂಬಾ ಚಿಕ್ಕ ಪ್ರಮಾಣದ ಬಿರುಕಿತ್ತಂತೆ, ನಂತರ ಅದು ಬೆಳೆಯಿತು. ಈಗ ಅದು ಚಿಕ್ಕ ಪ್ರಮಾಣದ ನದಿಯಷ್ಟು ವಿಶಾಲವಾಗಿದೆ. ಇದೆಲ್ಲಾ ಊರವರ ಕಣ್ಣ ಮುಂದೆಯೇ ಆಗಿದೆ. ಜಾಸ್ತಿ ಮಳೆಯಾದಾಗ ಈ ನದಿ ತುಂಬಿ ಹರಿಯುತ್ತದೆ. ಗಣಿ ಪ್ರದೇಶದ ಕಲ್ಲು, ಬಿಡಿ ಮಣ್ಣುಗಳನ್ನು ಕೆಳಭಾಗದ ಹೊಲಗಳಲ್ಲಿ ಇದು ತುಂಬುತ್ತದೆ. ವಿಚಿತ್ರವೆಂದರೆ ಕೋಡಿ ಹರಿದು ಕಲ್ಲು ಮಣ್ಣಿಂದ ತುಂಬಿರುವ ಹೊಲಗಳಲ್ಲಿ ಬಹುತೇಕ ಹೊಲಗಳು ಹಿಂದೆ ಸ್ಥಳೀಯ ರಾಜಕೀಯದಲ್ಲಿ ಪ್ರಬಲರಾಗಿದ್ದ ಮೇಟಿ ಲಿಂಗಾಯತ ಕುಟುಂಬಳಿಗೆ ಸೇರಿದ್ದು. ಊರ ಪ್ರಮುಖರು ಈ ಕೆರೆಯ ರಿಪೇರಿಗೆ ಪ್ರಯತ್ನಿಸಿಲ್ಲ. ಕೆಲವು ಬಾರಿ ಕೆರೆ ರಿಪೇರಿಗಾಗಿ ಸರಕಾರಕ್ಕೆ ಅರ್ಜಿ ಸಲ್ಲಿಸುವುದನ್ನು ಬಿಟ್ಟು ಬೇರೇನೂ ಮಾಡಿಲ್ಲ. ಹಿಂದೊಂದು ಬಾರಿ ಘೋರ್ಪಡೆಯವರು ಗ್ರಾಮೀಣ ಅಭಿವೃದ್ಧಿ ಮಂತ್ರಿಯಾಗಿದ್ದಾಗ ಕೆರೆ ರಿಪೇರಿ ಮಾಡಿಸುವ ಭರವಸೆ ಇತ್ತಿದ್ದಾರಂತೆ. ಆದರೆ ಡಾಲ್ಮಿಯ ಗಣಿ ಮಾಲಿಕರು ಅಡ್ಡಗಾಲು ಹಾಕಿದುದರಿಂದ ಕೆಲಸ ಮುಂದುವರಿಯಲಿಲ್ಲ ಎಂದು ಸ್ಥಳೀಯರ ಅಭಿಪ್ರಾಯ. ಘೋರ್ಪಡೆಯವರು ಪುನಃ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳಾಗಿದ್ದಾರೆ. ೧೯೯೯ರಲ್ಲಿ ಪುನಃ ಈ ಕೆರೆಗೆ ಪುನರ್ ಜೀವ ಕೊಡುವ ಮಾತುಕತೆ ಕೇಳಿಬಂತು. ಈ ಕೆರೆಗೆ ಮತ್ತು ಇದರ ಕೆಳಭಾಗದಲ್ಲಿ ಬರುವ ವಡ್ಡರ ಹಳ್ಳಿ ಕೆರೆಗೆ ಚೆಕ್ ಡ್ಯಾಮ್ ಕಟ್ಟಿಸಲು ಒಂದೊಂದು ಕೋಟಿ ರೂಪಾಯಿ ಮಂಜೂರು ಮಾಡಿದ್ದಾರೆ ಎಂಬ ಸುದ್ಧಿಯಾಯಿತು. ಆದರೆ ಯಾವುದು ಕಾರ್ಯರೂಪಕ್ಕೆ ಬರಲಿಲ್ಲ. ಈ ಕೆರೆಗೆ ಪುನರ್ ಜೀವ ಬಂದರೆ ಎರಡು ಅನುಕೂಲಗಳಿವೆ. ಒಂದು, ೨೦೦ ರಿಂದ ೩೦೦ ಎಕ್ರೆ ಭೂಮಿಗೆ ನೀರಾವರಿ ಸಾಧ್ಯತೆ ಇದೆ. ಭೂಗರ್ಭದಲ್ಲಿ ನೀರಿನ ಮಟ್ಟ ಏರುವುದರಿಂದ ಬೋರ್‌ವೆಲ್ ಹಾಕಿ ಕೃತಕ ನೀರಾವರಿ ಮಾಡಿಕೊಳ್ಳಲು ಅನುಕೂಲವಾಗುತ್ತದೆ.

**ಸಂಘಟಿತ ಪ್ರಯತ್ನ**

ಊರಿನ ಹಿರಿಯರು, ಸ್ಥಳೀಯ ರಾಜಕಾರಣಿಗಳು, ಮಂತ್ರಿಗಳು ಇವರೆಲ್ಲ ಕೆರೆ ನಿರ್ಮಾಣದ ಮಾತುಗಳನ್ನು ಹಲವಾರು ವರ್ಷಗಳಿಂದ ಆಡುತ್ತಲೇ ಬಂದಿದ್ದಾರೆ. ಆದರೆ ವಾಸ್ತವದಲ್ಲಿ ಕೆರೆ ನಿರ್ಮಾಣದ ಒಂದಿಂಚು ಕೆಲಸ ಕೂಡ ನಡೆದಿಲ್ಲ. ಅರ್ಜಿ ಕೊಡುವುದರಿಂದ ಅಥವಾ ಮಂತ್ರಿಗಳು ಬಂದಾಗ ಅವರ ಗಮನಕ್ಕೆ ತರುವುದರಿಂದ ಈ ಕೆಲಸ ಆಗುವುದಿಲ್ಲ ಎಂಬ ಸತ್ಯ ಹಳ್ಳಿಯ ಯುವಕರ ಗಮನಕ್ಕೆ ಬಂತು.

ಆದುದರಿಂದ ತಾವೇ ಮುಂಚೂಣಿಗೆ ಬಂದು ಜವಾಬ್ದಾರಿ ತೆಗೆದುಕೊಳ್ಳದಿದ್ದರೆ ಕೆರೆ ನಿರ್ಮಾಣವಾಗಲಿ ರಿಪೇರಿ ಆಗಲಿ ಆಗುವುದಿಲ್ಲ ಎಂಬ ತೀರ್ಮಾನಕ್ಕೆ ಬಂದರು. ಈ ಯುವಕರ ಬಗ್ಗೆ ಸ್ವಲ್ಪ ಹೇಳಬೇಕು. ಸುಮಾರು ಐದು ಮಂದಿ ಯುವಕರು ತಮ್ಮ ಕಾಲೇಜು ಓದಿನ ಸಂದರ್ಭದಲ್ಲಿ ಊರಲ್ಲೊಂದು ಯುವಕ ಮಂಡಲ ಆರಂಭಿಸಿದ್ದರು. ಅದು ತುಂಬ ಸಕ್ರಿಯವಾಗಿ ಹಲವಾರು ಕಾರ್ಯಕ್ರಮಗಳನ್ನು ಮಾಡಿತ್ತು. ಓದು ಮುಗಿಸಿ ಕೆಲವರು ಕೆಲಸ ಸೇರಿಕೊಂಡರು. ಇನ್ನು ಕೆಲವರು ಸ್ನಾತಕೋತ್ತರ ಶಿಕ್ಷಣಕ್ಕಾಗಿ ಬೇರೆ ಕಡೆ ಹೋದರು. ಹೀಗೆ ಆ ಯುವಕ ಮಂಡಲ ನಿಂತು ಹೋಯಿತು. ಸ್ನಾತಕೋತ್ತರ ಪದವಿ ಮುಗಿಸಿ ಒಬ್ಬರು ಸರಕಾರಿ ಕಾಲೇಜಲ್ಲಿ ತಾತ್ಕಾಲಿಕ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ಮತ್ತೊಬ್ಬರು ಕೆಲಸ ಸಿಗದೆ ಊರಲ್ಲಿ ತಮ್ಮ ಕೃಷಿ ನೋಡುತ್ತಿದ್ದಾರೆ. ಎಲ್ಲರಿಗೂ ಮದುವೆ ಆಗಿ ಎರಡು ಮೂರು ಮಕ್ಕಳು ಇವೆ. ಹಲವಾರು ವರ್ಷಗಳ ನಂತರ ಹಿಂದೆ ಯುವಕ ಮಂಡಲದಲ್ಲಿ ಸಕ್ರಿಯರಾಗಿದ್ದ ಹೆಚ್ಚಿನ ಯುವಕರು ಪುನಃ ಊರಿಗೆ ಬಂದಿದ್ದಾರೆ. ಊರಲ್ಲಿ ನೀರಾವರಿ ಸಮಸ್ಯೆ ಬಿಗಡಾಯಿಸಿದೆ. ಪರಿಹಾರ ಸಿಗುವ ಲಕ್ಷಣವೇ ಕಾಣುತ್ತಿಲ್ಲ. ಯುವಕರಿಗೆ ಊರಿನ ಸ್ಥಿತಿಯಲ್ಲಿ ಸುಧಾರಣೆ ತರಬೇಕೆಂಬ ಇಚ್ಛೆ. ಅದಕ್ಕಾಗಿ ಗ್ರಾಮಪಂಚಾಯತ್ ಚುನಾವಣೆಗೂ ನಿಲ್ಲುವ ಆಲೋಚನೆ ಮಾಡಿದ್ದರು. ಆದರ ಹಲವಾರು ಕಾರಣಗಳಿಂದ ಅದು ಸಾಧ್ಯವಾಗಲಿಲ್ಲ. ಊರವರನ್ನೆಲ್ಲ ಒಟ್ಟು ಮಾಡಿಯಾದರೂ ಕೆರೆ ನೀರಾವರಿ ಸಮಸ್ಯೆ ಪರಿಹರಿಸಬೇಕೆಂಬ ಬಯಕೆ ಅವರದ್ದು. ಇದಕ್ಕಾಗಿ ಹಳ್ಳಿಯವರು ಅದರಲ್ಲೂ ಮುಖ್ಯವಾಗಿ ಕೆರೆ ನೀರು ಬಳಕೆದಾರರು ಸಂಘಟಿತ ಪ್ರಯತ್ನ ಮಾಡಬೇಕೆಂಬ ತೀರ್ಮಾನಕ್ಕೆ ಬಂದರು.

ಸಂಘಟಿತ ಪ್ರಯತ್ನಕ್ಕೊಂದು ಸಮಿತಿ ರಚಿಸುವ ಉದ್ದೇಶದಿಂದ ನೀರು ಬಳಕೆದಾರರ ಸಭೆಯೊಂದನ್ನು ಕಳೆದ ವರ್ಷ ಜೂನ್ ತಿಂಗಳಲ್ಲಿ ಪಂಚಾಯತ್ ಆವರಣದಲ್ಲಿ ಕರೆದರು. ಸಭೆಗೆ ಎಲ್ಲ ಜಾತಿಯಿಂದಲೂ ಪ್ರತಿನಿಧಿಗಳು ಬರುವಂತೆ ನೋಡಿಕೊಂಡರು. ಐದು ಗಂಟೆಗೆ ಆರಂಭವಾಗಬೇಕಾದರೆ ಸಭೆ ಸುಮಾರು ಆರು ಗಂಟೆಗೆ ಆರಂಭವಾಯಿತು. ಬಂದವರಲ್ಲಿ ಯುವಕರ ಸಂಖ್ಯೆಯೇ ಹೆಚ್ಚಿತ್ತು. ಊರಿನ ಪ್ರಮುಖರೆಂದು ಗುರುತಿಸಬಹುದಾದ ಕೆಲವು ಹಿರಿಯರು ಬಂದಿದ್ದರು. ಹಲವಾರು ವರ್ಷಗಳಿಂದ ಊರವರ ಕೆರೆ ಆದೀತೆಂಬ ನಂಬಿಕೆಯಿಂದ ಕಾದಿರುವುದು, ಆದರೆ ಆ ನಂಬಿಕೆ ಸುಳ್ಳಾಗುತ್ತಾ ಬಂದಿರುವುದು, ಈ ನಿಟ್ಟಿನಲ್ಲಿ ಊರವರೆಲ್ಲ ಒಟ್ಟು ಸೇರಿ ಸಂಘಟಿತವಾಗಿ ಸೆಟ್ಟಿಕೆರೆ ನಿರ್ಮಾಣ ಮತ್ತು ಈಶ್ವರನ ಕೆರೆ ರಿಪೇರಿಗೆ ಪ್ರಯತ್ನಿಸಬೇಕಾದ ಅನಿವಾರ್ಯತೆ ಬಂದಿರುವುದು ಮತ್ತು ಅದಕ್ಕಾಗಿ ಒಂದು ಸಮಿತಿ ರಚಿಸುವ ಉದ್ದೇಶದಿಂದ ಈ ಸಭೆ ಕರೆಯಲಾಗಿದೆ ಎಂದು ಸಭೆಯ ಉದ್ದೇಶವನ್ನು ಯುವಕರಲ್ಲೊಬ್ಬರು ವಿವರಿಸಿದರು. ಉದ್ದೇಶ ವಿವರಣೆಯನ್ನು ಕೇಳಿದ ಸಭೆ ಸ್ವಲ್ಪ ಹೊತ್ತು ಮೌನ ಇತ್ತು. ಯಾರು ಏನೂ ಮಾತಾಡಿಲ್ಲ. ಏನಾದರೂ ಹೇಳಿ ಎಂದು ಯುವಕರು ಹಿರಿಯರ ಮುಖ ನೋಡಿದರು. ಸಭೆಗೆ ಬಂದಿದ್ದ ಮಾಜಿ ಮಂಡಲ ಅಧ್ಯಕ್ಷರು, 'ಕೆರೆ ಕುರಿತು ಜಿಲ್ಲಾ ಪಂಚಾಯತ್ ಸದಸ್ಯರಲ್ಲಿ ನಾವು ಕೇಳಿದ್ದೇವೆ. ಅವರು ಈ ವರ್ಷದ ಯೋಜನೆಯಲ್ಲಿ ಸೇರಿಸುತ್ತೇವೆ ಎಂದು ಭರವಸೆ ಇತ್ತಿದ್ದಾರೆ. ಸೇರಿಸದಿದ್ದರೆ ನಾವು ಪ್ರತಿಭಟಿಸುವ ಅದಕ್ಕೆ ಮುನ್ನವೇ ನಾವು ಸಂಘ, ಪ್ರತಿಭಟನೆ ಎಂದು ಮಾತಾಡಿದರೆ ಸರಿಯಾಗುವುದಿಲ್ಲ,' ಎಂದರು. ಅದಕ್ಕೆ ಹಾಲಿ ಪಂಚಾಯತ್ ಅಧ್ಯಕ್ಷರು ಧ್ವನಿ ಸೇರಿಸಿದರು. 'ನಾವು ಎಷ್ಟು ಸಮಯ ಇದೇ ರೀತಿ ಕಾಯುವುದು. ಒಂದು ವೇಳೆ ಹಿರಿಯರು ಹೇಳಿದಂತೆ ಈ ಬಾರಿಯ ಜಿಲ್ಲಾ ಪಂಚಾಯತ್ ಯೋಜನೆಯಲ್ಲಿ ಸೇರಿದರೆ ಒಳ್ಳೆಯದೆ ಆಯಿತು. ನಾವು ಸಂಘ ರಚಿಸಿಕೊಂಡರೆ ವೇಸ್ಟ್ ಆಗುವುದಿಲ್ಲ. ಈಶ್ವರನ ಕೆರೆ ರಿಪೇರಿ ಮಾಡಲು ಒಟ್ಟು ಸೇರಬಹುದು ಅಥವಾ ಹಳ್ಳಿಯಲ್ಲಿ ನಡೆಯುವ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸಬಹುದು,' ಎಂದು ಮತ್ತೊಬ್ಬ ಯುವಕರು ವಾದಿಸಿದರು.

ಇದರಿಂದ ಪ್ರೇರಿತವಾದ ಮತ್ತೊಬ್ಬರು ಹಾಲಿ ಪಂಚಾಯತ್ ಅಧ್ಯಕ್ಷರನ್ನು ಉದ್ಧೇಶಿಸಿ, 'ನೀವು ಅಧಿಕಾರಕ್ಕೆ ಬಂದು ಒಂದು ವರ್ಷ ಆಗುತ್ತಾ ಬಂತು. ಕೆರೆ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ? ಕೇಳಿದರೆ ಬಳ್ಳಾರಿಗೆ ಹೋದೆ, ಹೊಸಪೇಟೆಗೆ ಹೋದೆ, ಅವರನ್ನು ಕಂಡೆ, ಇವರನ್ನು ಕಂಡೆ ಎಂದು ಹೇಳುವುದು ಬಿಟ್ಟರೆ ನೀವು ಏನನ್ನಾದರು ಸಾಧಿಸಿದ್ದೀರಾ?,' ಎಂದು ಸ್ವಲ್ಪ ಕಟುವಾಗಿಯೇ ಟೀಕಿಸಿದರು. ಇದು ಸ್ವಲ್ಪ ವಿಕೋಪಕ್ಕೆ ಹೋಗುವ ಲಕ್ಷಣ ನೋಡಿ ಸಭೆ ಸಂಯೋಜಿಸಿದ ಯುವ ನಾಯಕರಲ್ಲೊಬ್ಬರು, 'ನಾವು ಸಭೆ ಸೇರಿದ ಮುಖ್ಯ ಉದ್ದೇಶ ಬಗ್ಗೆ ಸಂಯೋಜಿಸಿದ ಯುವ ನಾಯಕರಲ್ಲೊಬ್ಬರು, 'ನಾವು ಸಭೆ ಸೇರಿದ ಮುಖ್ಯ ಉದ್ದೇಶ ಬಗ್ಗೆ ಆಲೋಚಿಸುವ. ನಾವು ಸಂಘಟಿತರಾಗಿ ಪ್ರಯತ್ನಿಸುವ ಅಗತ್ಯ ಇದೆಯೇ? ಇದ್ದರೆ ಒಂದು ಸಮಿತಿ ರಚಿಸುವ ಬಗ್ಗೆ ಚರ್ಚಿಸುವ,' ಎಂದರು. ಅದಕ್ಕೆ ಸೇರಿದ ಹಿರಿಯರು ಮತ್ತು ಯುವಕರು ಸಮಿತಿ ರಚಿಸಬಹುದು ಎಂದು ಒಪ್ಪಿಗೆ ಇತ್ತರು. ಸಮಿತಿಯ ಸದಸ್ಯರಾಗಲು ಆಸಕ್ತಿ ಇರುವವರು ಕೈ ಎತ್ತಿ ತಮ್ಮ ಒಪ್ಪಿಗೆ ನೀಡಿ ಎಂದರು

ಸಂಯೋಜಕರು. ಯಾರು ಕೈ ಎತ್ತಲಿಲ್ಲ. ಯಾರ್ಯಾರು ಸಮಿತಿಯ ಸದಸ್ಯರು ಆಗಬಹುದೆಂದು ಹೆಸರು ಸೂಚಿಸಲು ಸಭಿಕರಿಗೆ ಕೇಳಲಾಯಿತು. ಆಗ ಸಭಿಕರು ಅಲ್ಲಿ ಸೇರಿದವರ ಕೆಲವರ ಹೆಸರನ್ನು ಹೇಳಲು ಆರಂಭಿಸಿದರು. ಆರಂಭದಲ್ಲಿ ನಿಧಾನವಾಗಿ ಒಂದೊಂದು ಹೆಸರು ಬಂದವು. ನಂತರ ಅಲ್ಲಿದ್ದವರು ಯಾವುದೋ ಅಧಿಕಾರ ಹಂಚಿಕೆಯಲ್ಲಿ ತಮ್ಮ ಅವಕಾಶ ಎಲ್ಲಿ ತಪ್ಪಿ ಹೋಗುತ್ತದೋ ಎನ್ನುವ ರೀತಿಯಲ್ಲಿ ಅಥವಾ ತಮ್ಮ ಪೈಕಿ ಯಾರದರೊಬ್ಬರು ಸಮಿತಿಯಲ್ಲಿರಬೇಕು ಎನ್ನುವ ರೀತಿಯಲ್ಲಿ ಹೆಸರನ್ನು ಸೂಚಿಸಲು ಆರಂಭಿಸಿದರು. ಸಂಯೋಜಕರು ಪುನಃ ತಡೆದು, 'ನೋಡಿ ಈ ಸಮಿತಿ ಮಾಡುವುದು ಯಾವುದೇ ಅಧಿಕಾರ ಹಂಚಿಕೊಳ್ಳಲು ಅಲ್ಲ; ಜವಾಬ್ದಾರಿ ಹೊರಲು, ಕೆಲಸ ಮಾಡಲು ಆಸಕ್ತಿ ಇದ್ದವರ ಹೆಸರು ಮಾತ್ರ ಸೂಚಿಸಿ,' ಎಂದರು ಆದರೂ ಸದಸ್ಯರ ಸಂಖ್ಯೆ ಮೂವತ್ತು ದಾಟಿತು. ಹೇಳಿದವರಿಗೆ ಬೇಸರ ಮಾಡುವುದು ಬೇಡ ಎಂದು ಹೆಸರುಗಳನ್ನು ಪಟ್ಟಿ ಮಾಡಿಕೊಂಡರು. ಇನ್ನು ಪದಾಧಿಕಾರಿಗಳ ಆಯ್ಕೆ ಆಗಬೇಕೆಂದಾಯಿತು. ಅದನ್ನು ಮುಂದಿನ ಮೀಟಿಂಗ್‌ನಲ್ಲಿ ಮಾಡುವ ಅದರ ದಿನ ನಿರ್ಧರಿಸುವ ಎಂದು ಮತ್ತೊಬ್ಬರು ಸಲಹೆ ಇತ್ತರು. ಅದರಂತೆ ಮೂರು ದಿನ ಬಿಟ್ಟು ಮುಂದಿನ ಸಭೆ ಇದೆ ಎಲ್ಲರು ತಮ್ಮ ಜತೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಆಸಕ್ತರನ್ನು ಕರೆದುಕೊಂಡು ಬರಬೇಕೆಂದು ತಿಳಿಸಿ ಅಂದಿನ ಸಭೆಯನ್ನು ಬರ್ಕಾಸ್ತುಗೊಳಿಸಿದರು.

ಮೂರು ದಿನ ಬಿಟ್ಟು ಸಭೆಯ ಸಂಯೋಜಕರು ಐದು ಗಂಟೆಗೆ ಪಂಚಾಯತ್ ಆವರಣದಲ್ಲಿ ಬಂದು ಕಾದರು. ಗಂಟೆ ಐದೂವರೆ ಆದರು ಒಂದು ನರಪಿಳ್ಳೆಯೂ ಪಂಚಾಯತ್ ಕಟ್ಟಡದತ್ತ ಬರುವುದು ಕಾಣಲಿಲ್ಲ. ಎಲ್ಲರು ಸಭೆಯ ಬಗ್ಗೆ ಮರೆತಿರಬಹುದೋ ಏನೋ ಎಂದು ಸಂಯೋಜಕರು ಊರಿನ ಮಧ್ಯ ಇರುವ ಲಿಂಗಾಯತರ ಹೊಟೇಲ ಹತ್ತಿರ ಬಂದರು. ಊರ ಪ್ರಮುಖರು ಸಂಜೆ ಹೊತ್ತು ಸೇರುವ ಜಾಗ ಅದು. ನೋಡಿದರೆ ಹಿಂದಿನ ಸಭೆಗೆ ಹಾಜರಾದ ಬಹುತೇಕ ಹಿರಿಯರು ಅಲ್ಲಿದ್ದರು. ಅವರನ್ನು ಕಂಡು ಬನ್ನಿ ಸಭೆ ಶುರು ಮಾಡುವ ಎಂದರು ಸಂಯೋಜಕರು. ಅಲ್ಲಿ ಸೇರಿದವರಲ್ಲಿ ಒಂದು ಗುಂಪು, 'ನೀವು ಸಭೆ ಶುರು ಮಾಡಿ ನಾವು ಅರ್ಜೆಂಟಾಗಿ ಅಂಗಡಿಯವರು ಬಾಳೆ ತೋಟ ನೋಡಿ ಬರುತ್ತೇವೆ,' ಎಂದು ಮಾಜಿ ಮಂಡಲ ಅಧ್ಯಕ್ಷೆ ನೇತೃತ್ವದಲ್ಲಿ ಹೊಲದ ಕಡೆಗೆ ಹೊರಟೇ ಬಿಟ್ಟಿತು. ಸಂಯೋಜಕರಲ್ಲಿ ಒಬ್ಬರು ಅವರನ್ನು ತಡೆದು ಸಭೆ ಮುಗಿಸಿಕೊಂಡು ಹೋಗಿ ಎಂದು ಕೇಳಿಕೊಂಡರೂ ಅವರು ಕೇಳಲಿಲ್ಲ. ಸುಮಾರು ಹತ್ತು ಮಂದಿಯ ಗುಂಪು ಹೊಲದ ಕಡೆಗೆ ಹೋಗಿಯೇ ಬಿಟ್ಟಿತು. ಹಾಲಿ ತಾಲ್ಲೂಕು ಪಂಚಾಯತ್ ಸದಸ್ಯರು ಮತ್ತು ಅವರ ಸಂಗಡಿಗರನ್ನು ಕರೆದುಕೊಂಡು ಸಂಯೋಜಕರು ಪಂಚಾಯತ್ ಆವರಣಕ್ಕೆ ಬಂದರು. ಅಲ್ಲಿ ಸೇರಿದರು. ಏಳೆಂಟು ಜನ ಆಗಲಿಲ್ಲ. ಅಷ್ಟು ಜನ ಸೇರಿಸಿಕೊಂಡು ಮೀಟಿಂಗ್ ಮಾಡುವುದು ಸರಿಯಲ್ಲ ಎಂದು ಹೊಲಕ್ಕೆ ಹೋದ ಸದಸ್ಯರಿಗಾಗಿ ಕಾದರು.

ಅದೇನು ಅವರು ಈಗ ಹೊಲಕ್ಕೆ ಹೋಗುವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಎಂದು ಸಂಯೋಜಕರಲ್ಲೊಬ್ಬರು ತಾ.ಪ.ಸದಸ್ಯರ ಗುಂಪಿನವರಲ್ಲಿ ಕೇಳಿದರು. 'ಅಂಗಡಿಯವರು ಬಾಳೆ ಗಿಡ ಹಾಕಲು ತುಂಗಭದ್ರಾ ಸಹಕಾರಿ ಬ್ಯಾಂಕಿನಿಂದ ಸಾಲ ಮಾಡಿದ್ದಾನೆ. ಬ್ಯಾಂಕ್ ಮೇನೇಜರ್ ನಮ್ಮ ವೀರಭದ್ರಪ್ಪನವರ (ಹಳ್ಳಿಯ ಶ್ರೀಮಂತ ಕುಳಗಳಲ್ಲಿ ಒಬ್ಬರು) ಅಳಿಯ ಸಾಲ ಕೊಟ್ಟ ಬ್ಯಾಂಕಿನವರು ತೋಟ ನೋಡುವ ಕ್ರಮ ಇದೆಯಂತೆ. ಬ್ಯಾಂಕ್ ಮೆನೇಜರ್, 'ನನ್ನ ಪರವಾಗಿ ನೀವೆ ತೋಟ ನೋಡಿ ಎಂದು ಮಾವ ವೀರಭದ್ರಪ್ಪನವರಿಗೆ ಹೇಳಿದ್ದಾರೆ.' ಹಾಗೆ ಅವರೆಲ್ಲ ಹೋಗಿದ್ದಾರೆ', ಎಂದರು. ಅದಕ್ಕೆ ಅವರ ಪಕ್ಕದಲ್ಲಿ ಇದ್ದ ಮತ್ತೊಬ್ಬರು, 'ಅದು ಹಾಗಲ್ಲ. ಅವರು ಹೋದುದರ ಹಿಂದೆ ಬೇರೆಯೇ ಕತೆ ಇದೆ, ಎಂದು ಹೇಳಲು ಆರಂಭಿಸಿದರು. ನಿನ್ನೆ ಸಂಜೆ ಹೊಟೇಲ್ ಬಳಿ ಮಾಜಿ ಮಂಡಲ ಅಧ್ಯಕ್ಷರಿಗೂ ಹಾಲಿ ಪಂಚಾಯತ್ ಅಧ್ಯಕ್ಷರಿಗೂ ಯಾವುದೇ ಕಾಮಗಾರಿಯಲ್ಲಿ ದುಡ್ಡು ದುರುಪಯೋಗ ಆದ ಬಗ್ಗೆ ಜಗಳ ಆಯಿತು. ಮಾತಿಗೆ ಮಾತು ಬೆಳೆದು ಹಾಲಿ ಅಧ್ಯಕ್ಷರೇ ಪಂಚಾಯತ್ ಹಣ ತಿಂದಿದ್ದಾರೆಂದು ಮಾಜಿ ಅಧ್ಯಕ್ಷರು ಆರೋಪಿಸಿದರು. ಅವರ ಜತೆ ಇದ್ದ ತಾ.ಪ. ಸದಸ್ಯರು ಹಾಲಿ ಅಧ್ಯಕ್ಷರ ಪರ ವಹಿಸಿ ಮಾತಾಡಲು ಆರಂಭಿಸಿದರು. ಮಂಡಲ ಪಂಚಾಯತ್ ಇರುವಾಗಲೂ ಬೇಕಾದಷ್ಟು ಹಣ ದುರುಪಯೋಗ ಆಗಿದೆ. ಅದನ್ನು ನೀವೇ ಮಾಡಿರಬಹುದ್ದಲ್ಲ ಎಂದು ಮಾಜಿ ಅಧ್ಯಕ್ಷರನ್ನು ತಾ.ಪ.ಸದಸ್ಯರು ಪ್ರಶ್ನಿಸಿದರು. ಅದನ್ನು ಮಾಜಿ ಅಧ್ಯಕ್ಷರಿಗೆ ಸಹಿಸಲಾಗಲಿಲ್ಲ. ಇತ್ತೀಚೆನವರೆಗೂ ಸ್ನೇಹಿತರಾಗಿದ್ದ ತಾ.ಪ.ಸದಸ್ಯರು ಈ ರೀತಿ ತಿರುಗಿ ಬಿದ್ದದ್ದು ಮಾಜಿ ಅಧ್ಯಕ್ಷರಿಗೆ ನುಂಗಲಾರದ ತುತ್ತಾಯಿತು. ಹೆಚ್ಚು ಮಾತು ಬೆಳಸದೆ

ಅವರು ಅಲ್ಲಿಂದ ಜಾಗ ಖಾಲಿ ಮಾಡಿದರು. ಹೀಗೆ ಅವರ ಸ್ನೇಹ ಹಿಂದಿನ ದಿನ ಕೆಟ್ಟು ಅಂದು ನಡೆಯಬೇಕಾದ ನೀರಿನ ಸಭೆಗೆ ತ್ರಿಶಂಕು ಸ್ಥಿತಿ ಬಂತು.

ಹಲವಾರು ವರ್ಷಗಳಿಂದ ಸ್ನೇಹಿತರಾಗಿದ್ದ ಮಾಜಿ ಅಧ್ಯಕ್ಷರು ಮತ್ತು ತಾ.ಪ.ಸದಸ್ಯರು ಅದ್ಯಾಕೆ ಒಮ್ಮೊಂದೊಮ್ಮೆಲೆ ವೈರಿಗಳಾಗಿ ಬಿಟ್ಟರು ಎಂದು ಅಲ್ಲೇ ಇದ್ದ ಇನ್ನೊಬ್ಬರು ಪ್ರಶ್ನಿಸಿದರು. ಅವರ ಸ್ನೇಹಕ್ಕೆ ತಿಲಾಂಜಲಿ ಇತ್ತ ಕಾರಣವನ್ನು ಮತ್ತೊಬ್ಬರು ವಿವರಿಸಿದರು. ಮಾಜಿ ಅಧ್ಯಕ್ಷರು ತಮ್ಮ ಅಧಿಕಾರ ಅವಧಿಯಲ್ಲಿ ಈಗಿನ ತಾ.ಪ.ಸದಸ್ಯರ ಮಗನಿಗೆ ಹಳ್ಳಿಯ ಸರಹದ್ದಿನಲ್ಲೇ ಬಂದಿದ ಆಯುರ್ವೇದಿಕ್ ಮೆಡಿಕಲ್ ಕಾಲೇಜಲ್ಲಿ ಗುಮಾಸ್ತನ ಕೆಲಸ ಕೊಡಿಸುತ್ತೇನೆಂದು ಸ್ವಲ್ಪ ಹಣ ಪಡಕೊಂಡಿದ್ದರು. ಮಾಜಿ ಅಧ್ಯಕ್ಷರು ತಮ್ಮ ಅಧಿಕಾರ ಅವಧಿಯಲ್ಲಿ ಮಂಡಲದ ವ್ಯಾಪ್ತಿಯಲ್ಲಿ ಇದ್ದ ಐದು ಎಕರೆ ಭೂಮಿಯನ್ನು ಮೆಡಿಕಲ್ ಕಾಲೇಜಿಗೆ ಕೊಡಿಸಿದ್ದರು. ಆ ವ್ಯವಹಾರದಿಂದ ಅವರ ಮತ್ತು ಕಾಲೇಜು ಆಡಳಿತ ಮಂಡಳಿ ಮಧ್ಯೆ ಪರಿಚಯ ಉಂಟಾಯಿತು. ಆ ಪರಿಚಯದ ಆಧಾರದಲ್ಲಿ ಅವರು ತಾ.ಪ.ಸದಸ್ಯರ ಮಗನಿಗೆ ಕಾಲೇಜಲ್ಲಿ ಗುಮಾಸ್ತನ ಹುದ್ದೆ ಕೊಡಿಸುತ್ತೇನೆ ಎಂದು ಭರವಸೆ ನೀಡಿದ್ದರು. ಆದರೆ ಆ ಭರವಸೆಯನ್ನು ಅವರಿಗೆ ಈಡೇರಿಸಲಾಗಲಿಲ್ಲ. ಇದರಿಂದ ಬೇಸತ್ತ ತಾ.ಪ. ಸದಸ್ಯರು ಮಾಜಿ ಅಧ್ಯಕ್ಷರಿಂದ ಸ್ವಲ್ಪ ದೂರವೇ ಇದ್ದರು. ಹಾಲಿ ಪಂಚಾಯತ್ ಅಧ್ಯಕ್ಷರಿಗಂತೂ ತಾ.ಪ.ಸದಸ್ಯರ ಕೆಲಸ ಮಾಡಿ ಸ್ನೇಹ ಸುಧಾರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಇವೆಲ್ಲದರ ಪರಿಣಾಮವಾಗಿ ತಾ.ಪ.ಸದಸ್ಯರು ಸಾರ್ವಜನಿಕವಾಗಿ ಹಾಲಿ ಅಧ್ಯಕ್ಷರ ಪರ ನಿಲ್ಲುವಂತಾಯಿತು. ಹೀಗೆ ಊರ ಪ್ರಮುಖರ ಸಂಬಂಧಗಳ ವಿಶ್ಲೇಷಣೆ ಮಾಡುತ್ತಾ ಒಂದೂವರೆ ಗಂಟೆ ಕಳೆಯಿತು. ಅಷ್ಟೊತ್ತಿಗೆ ಬಾಳೆ ತೋಟ ನೋಡಲು ಹೋಗಿದ್ದ ಮಾಜಿ ಅಧ್ಯಕ್ಷರ ಗುಂಪು ಪಂಚಾಯತ್ ಆವರಣಕ್ಕೆ ಬಂತು. ಅವರನ್ನು ಕಂಡು ಸಂಯೋಜಕರು ಸಭೆ ಆರಂಭಿಸಿದರು. ಅಂದಿನ ಸಭೆಯಲ್ಲಿ ಸಮಿತಿಯ ಪದಾಧಿಕಾರಿಗಳ ಆಯ್ಕೆ ಆಗಬೇಕಿತ್ತು. ಆ ವಿಚಾರವನ್ನು ಸಭೆಯ ಮುಂದಿಟ್ಟಾಗ ಮಾಜಿ ಅಧ್ಯಕ್ಷರು, ಬಳ್ಳಾರಿಗೆ ಹೋಗಿ ನಮ್ಮ ಕೆರೆ ಯೋಜನೆಯಲ್ಲಿ ಸೇರಿದೆಯೇ ಇಲ್ಲವೇ ಎಂದು ನೋಡಿ ಬರುವುದು ಒಳ್ಳೆಯದೆಂದು, ಪುನಃ ತಮ್ಮ ಹಳೇ ರಾಗ ತೆಗೆದರು. ಅದಕ್ಕೆ ಸಭೆ ಒಪ್ಪಿ ಯಾರು ಹೋಗುವುದೆಂದು ತೀರ್ಮಾನಿಸಲು ಸೂಚಿಸಿತು. ಪಂಚಾಯತ್ ಅಧ್ಯಕ್ಷರು ಹೋಗಿ ಬರಲಿ ಎಂದು ಮಾಜಿ ಅಧ್ಯಕ್ಷರು ಹೇಳಿದರು. ಕೆಲವರು ಮಾಜಿ ಅಧ್ಯಕ್ಷರು ಹಾಗೂ ತಾ.ಪ.ಸದಸ್ಯರು ಜತೆಗೆ ಹೋಗಲಿ ಎಂದರು. ತಾ.ಪ.ಸದಸ್ಯರು ತನಗೆ ಆಗುವುದಿಲ್ಲ. ತನ್ನ ಬದಲಿಗೆ ತಮ್ಮ ಸಂಬಂಧಿ ಯುವಕನ ಹೆಸರನ್ನು ಸೂಚಿಸಿ ಆತ ಬರುತ್ತಾನೆ ಎಂದು ಹೇಳಿ ಜಾರಿಕೊಂಡರು. ಸಭೆ ಅದಕ್ಕೆ ಒಪ್ಪಿಗೆ ನೀಡಿ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಕೆಲಸವನ್ನು ಪುನಃ ಮುಂದೂಡಿತು.

**ಅರಿವು ಮೂಡಿಸುವುದು**

ಒಂದು ತಿಂಗಳ ನಂತರ ಸಭೆ ಸೇರಿ ಪದಾಧಿಕಾರಿಗಳ ಆಯ್ಕೆ ಆಯಿತು. ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಸಹ ಕಾರ್ಯದರ್ಶಿ ಮತ್ತು ಖಜಾಂಚಿ ಸೇರಿ ಒಟ್ಟು ಐದು ಪದಾಧಿಕಾರಿಗಳನ್ನು ಆರಿಸಲಾಯಿತು. ಅಲ್ಲೂ ಪದಾಧಿಕಾರಿಗಳಾಗಲು ಯಾರು ಮುಂದೆ ಬಂದಿಲ್ಲ. ಕೆಲವರನ್ನು ಒತ್ತಾಯದಿಂದಲೇ ಒಪ್ಪಿಸಬೇಕಾಯಿತು. ಸಂಘಕ್ಕೆ ಜನ ಜಾಗೃತಿ ಸಮಿತಿ-ಪಾಪಿನಾಯಕನ ಹಳ್ಳಿ ಎಂದು ಹೆಸರಿಟ್ಟರು. ಪದಾಧಿಕಾರಿಗಳು ಬೇರ ಸಂಘ ಸಂಸ್ಥೆಗಳ ಬೈಲಾಗಳನ್ನು ನೋಡಿ ಸಂಘಕ್ಕೆ ಒಂದು ಬೈಲಾ ತಯಾರು ಮಾಡಿ ಆದಷ್ಟು ಬೇಗ ಸಂಘವನ್ನು ಸೊಸೈಟಿ ಕಾಯಿದೆ ಪ್ರಕಾರ ನೋಂದಾಯಿಸಬೇಕೆಂದು ತೀರ್ಮಾನಿಸಿದರು. ಹಿಂದೆ ಆಯ್ಕೆ ಆದ ಜಂಬೋ ಸಮಿತಿಯನ್ನು ಕಟ್ ಮಾಡಿ ಒಟ್ಟ ಕಾರ್ಯಕಾರಿ ಸಮಿತಿ ಸದಸ್ಯರ ಸಂಖ್ಯೆಯನ್ನು ಹದಿನೈದಕ್ಕೆ (ಪದಾಧಿಕಾರಿಗಳನ್ನು ಸೇರಿಸಿ) ಮಿತಿಗೊಳಿಸಲಾಯಿತು. ಅದಕ್ಕೆ ಕಾರಣವೂ ಇತ್ತು. ಅಂದು ಪಟ್ಟಿ ಮಾಡುವಾಗ ಆಸಕ್ತಿ ಇದ್ದವರು ಇಲ್ಲದವರು ಎಲ್ಲರ ಹೆಸರುಗಳನ್ನು ಸೇರಿಸಲಾಗಿತ್ತು. ಅವರಲ್ಲಿ ಕೆಲವರಂತು ಹಿಂದೆ ನಡೆದ ಯಾವುದೇ ಸಭೆಗೂ ಹಾಜರಾಗಿಲ್ಲ. ಅಂತವರನ್ನು ಯಾಕೆ ಮುಂದುವರಿಸಬೇಕೆಂದು ಕಾರ್ಯಕಾರಿ ಸಮಿತಿ ಸದಸ್ಯರ ಸಂಖ್ಯೆಯನ್ನು ಹದಿನೈದಕ್ಕೆ ಇಳಿಸಿತು.

ಕಾರ್ಯಕಾರಿ ಸಮಿತಿಯ ಪ್ರಥಮ ಮೀಟಿಂಗ್‌ನಲ್ಲಿ ಸೆಟ್ಟಿಕೆರೆ ನಿರ್ಮಾಣ ಮತ್ತು ಈಶ್ವರನ ಕೆರೆ ರಿಪೇರಿ ಕುರಿತು ಜನರಲ್ಲಿ ಅರಿವು ಮೂಡಿಸಲು ಕಾರ್ಯಕ್ರಮ ಹಾಕಿಕೊಳ್ಳುವ ಬಗ್ಗೆ ಚರ್ಚೆ ನಡೆಯಿತು. ಅದಕ್ಕೊಂದು ಹೊಸ ಕಾರ್ಯಕ್ರಮ ಹಾಕಿಕೊಳ್ಳುವ ಬದಲು ಈಗಾಗಲೇ ಹಳ್ಳಿಯಲ್ಲಿ

ನಡೆಯುವ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸಲು ಪ್ರಯತ್ನಿಸಬೇಕೆಂದು ತೀರ್ಮಾನವಾಯಿತು. ಅವರ ಆಶಯಕ್ಕೆ ಪೂರಕವೇ ಎಂಬಂತೆ ಕೆಲವೇ ದಿನಗಳಲ್ಲಿ ಊರಲ್ಲಿ ನಡೆಯಲಿರುವ ವಾರ್ಷಿಕ ಸತ್ಯ ನಾರಾಯಣ ಪೂಜೆ ಸುದ್ದಿಯನ್ನು ಸದಸ್ಯರೊಬ್ಬರು ತಿಳಿಸಿದರು. ಅದು ಯಾವಾಗಲೂ ಊರ ಮಧ್ಯ ಇರುವ ಗುಡಿಯಲ್ಲಿ ನಡೆಯುತ್ತದೆ. ಊರ ಪ್ರಮುಖರನ್ನು ಒಪ್ಪಿಸಿ ಈ ಬಾರಿ ಅದನ್ನು ಸೆಟ್ಟಿಕೆರೆ ಪಾತ್ರದಲ್ಲಿ ಏರ್ಪಡಿಸಬೇಕೆಂದು ತೀರ್ಮಾನವಾಯಿತು. ಅದೇ ಸಂದರ್ಭದಲ್ಲಿ ಕೆರೆ ನಿರ್ಮಾಣ ಮತ್ತು ರಿಪೇರಿ ಬಗ್ಗೆ ಊರವರಿಗೆ ಮನವರಿಗೆ ಮಾಡಬಹುದೆಂಬ ಆಲೋಚನೆ ಸಂಘದ್ದು. ಊರಲ್ಲಿ ನಡೆಯುವ ಎಲ್ಲ ಸಾಂಸ್ಕೃತಿಕ ಕಾರ್ಯಕ್ರಮಗಳ ಉಸ್ತುವಾರಿಯನ್ನು ಊರ ಪ್ರಮುಖರು ವಹಿಸುತ್ತಾರೆ. ಪ್ರಮುಖರ ಪಟ್ಟಿಯಲ್ಲಿ ಊರಿನ ಪ್ರಮುಖ ಜಾತಿಗಳಿಂದ ಪ್ರತಿನಿಧಿಗಳಿದ್ದಾರೆ. ಹಿಂದೆ ಪಂಚಾಯತ್ ಅಧ್ಯಕ್ಷರು ಮೇಲ್ ಜಾತಿಯವರಿದ್ದಾಗ ಅವರು ಪ್ರಮುಖರ ಪಟ್ಟಿಯಲ್ಲಿ ಅನಿವಾರ್ಯವಾಗಿ ಇರುತ್ತಿದ್ದರು. ಯಾವಾಗ ಅಧ್ಯಕ್ಷಗಿರಿ ಕೆಳ ಜಾತಿಗೆ ಬಂತೋ ಅಂದಿನಿಂದ ಅಧ್ಯಕ್ಷರು ಊರ ಪ್ರಮುಖರ ಪಟ್ಟಿಯಲ್ಲಿ ಇರುವುದು ಗ್ಯಾರಂಟಿ ಇಲ್ಲ. ಕೆರೆ ಪಾತ್ರದಲ್ಲಿ ಸತ್ಯ ನಾರಾಯಣ ಪೂಜೆಯನ್ನು ಮಾಡಬೇಕೆಂಬ ಸಂಘದವರ ಸಲಹೆಯನ್ನು ಊರ ಪ್ರಮುಖರಿಗೆ ಜೀರ್ಣಿಸಿಕೊಳ್ಳಲು ಆಗಲಿಲ್ಲ. ಗುಡಿಯಲ್ಲಿ ಮಾಡಬೇಕಾದನ್ನು ಆ ನೀರಿಲ್ಲದ ಕೆರೆ ಪಾತ್ರದಲ್ಲಿ ಮಾಡಬೇಕೆಂದು ಹೇಳುವವರನ್ನು ತಲೆ ಕೆಟ್ಟವರೆಂದು ನೇರ ಹೇಳಲಿಲ್ಲ. ಆದರೆ ಅದೇ ಅರ್ಥ ಬರುವ ರೀತಿಯಲ್ಲಿ ವರ್ತಿಸಿದರು. ಸಂಘದವರ ಸಲಹೆಯನ್ನು ಖಡಾಖಂಡಿತವಾಗಿ ವಿರೋಧಿಸಿದರು. ಪ್ರಮುಖರು ವಿರೋಧಿಸಿದರೆ ಪರವಾಗಿಲ್ಲ. ಊರಿನವರನ್ನು ಒಪ್ಪಿಸಿದರೆ ಆ ಕೆಲಸ ಮಾಡಿಸಬಹುದೆಂದು ಮತ್ತೆ ಕೆಲವರು ಸಲಹೆ ನೀಡಿದರು. ಅದರಂತೆ ಊರಿನವರನ್ನು ವಿಚಾರಿಸಿದರೆ ಕೆಲವರು ನಂಬಿಕೆಯ ದೃಷ್ಟಿಯಿಂದ ವಿರೋಧಿಸಿದರೆ ಮತ್ತೆ ಕೆಲವರು ಅಷ್ಟು ದೂರ (ಕೆರೆ ಊರಿಂದ ಸುಮಾರು ಎರಡು ಕಿ.ಮೀ.ದೂರದಲ್ಲಿದೆ)ಯಾರು ಹೋಗುತ್ತಾರೆ ಎಂದು ಸಂಘದ ಸಲಹೆಯನ್ನು ತಿರಸ್ಕರಿಸಿದರು. ಈ ಜನರಿಗೆ ನೀರು ಮತ್ತು ಕೆರೆಯ ಮಹತ್ವನ್ನು ಅರ್ಥ ಮಾಡಿಸುವುದಾದರೂ ಹೇಗೆ? ವ್ಯಕ್ತಿಗತವಾಗಿ ಮಾತಾಡಿಸಿದರೆ ಪ್ರತಿಯೊಬ್ಬರೂ ಕೆರೆ ರಿಪೇರಿ ಆಗಬೇಕು ಅಥವಾ ನಿರ್ಮಾಣ ಆಗಬೇಕೆಂದು ಹೇಳುತ್ತಾರೆ. ಅದನ್ನು ಯಾರೂ ಮಾಡಬೇಕು? ಊರವರ ಪ್ರಕಾರ ಅದು ನಾಯಕರ ಕರ್ತವ್ಯ. ಊರಿನ ಹಿರಿಯ ನಾಯಕರ ಪ್ರಕಾರ ಅದು ಜಿಲ್ಲಾ ಅಥವಾ ರಾಜ್ಯ ಮಟ್ಟದ ನಾಯಕರ ತೀರ್ಮಾನಕ್ಕೆ ಬಿಟ್ಟ ವಿಚಾರ. ಹೀಗೆ ಇದೊಂದು ರೀತಿ ಕೊನೆಯೇ ಇಲ್ಲದ ಕತೆಯಾಯಿತು.

ಈ ರೀತಿ ಇತರ ಕಾರ್ಯಕ್ರಮಗಳಲ್ಲಿ ತೂರಿಕೊಂಡು ಅರಿವು ಮೂಡಿಸುತ್ತೇವೆ ಎಂದರೆ ನಮ್ಮ ಕೆಲಸ ಆಗಲಿಕ್ಕಿಲ್ಲ; ಇದಕ್ಕಾಗಿ ಪ್ರತ್ಯೇಕ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಸಂಘದ ಸದಸ್ಯರು ತೀರ್ಮಾನಿಸಿದರು. ಕಾರ್ಯಕಾರಿ ಸಮಿತ ಸಭೆ ಕರೆತು ಪ್ರತಿ ಸದಸ್ಯರೂ ಕನಿಷ್ಠ ಹತ್ತು ನೀರು ಬಳಕೆದಾರರನ್ನು ಒಟ್ಟು ಸೇರಿಸಬೇಕು. ಹಾಗೆ ಸೇರಿಸಿದ ನೀರು ಬಳಕೆದಾರರ ಸಣ್ಣ ಸಣ್ಣ ಗುಂಪು ಮಾಡಿ ಅವರಿಗೆ ಸಹಭಾಗಿತ್ವ ಕುರಿತ ಕಾರ್ಯಗಾರ ಮಾಡುವುದೆಂದು ನಿರ್ಧರಿಸಲಾಯಿತು. ಪ್ರತಿಯೊಬ್ಬರು ಹತ್ತು ನೀರು ಬಳಕೆದಾರರನ್ನು ಒಟ್ಟು ಸೇರಿಸಬೇಕು. ಹಾಗೆ ಸೇರಿಸಿದ ನೀರು ಬಳಕೆದಾರರ ಸಣ್ಣ ಸಣ್ಣ ಗುಂಪು ಮಾಡಿ ಅವರಿಗೆ ಸಹಾಭಾಗಿತ್ವ ಕುರಿತ ಕಾರ್ಯಗಾರ ಮಾಡುವುದೆಂದು ನಿರ್ಧರಿಸಲಾಯಿತು. ಪ್ರತಿಯೊಬ್ಬರು ಹತ್ತು ನೀರು ಬಳಕೆದಾರರನ್ನು (ಸದಸ್ಯತನದ ಜತೆಗೆ) ಗುರುತಿಸಿದರೆ ಕನಿಷ್ಠ ನೂರೈವತ್ತು ಬಳಕೆದಾರರನ್ನು ಸೇರಿಸಬಹುದು. ಆದರೆ ನಿರ್ದಿಷ್ಟ ದಿನದಂದು ನಾಲ್ವತ್ತು ಬಳಕೆದಾರರನ್ನೂ ಸೇರಿಸಲಾಗಲಿಲ್ಲ. ಸದಸ್ಯರಲ್ಲಿ ಕೇಳಿದರೆ ಅವರು ಗುರುತಿಸಿದ ಬಳಕೆದಾರರು ಬರುತ್ತೇವೆ ಎಂದು ಒಪ್ಪಿದ್ದಾರೆ; ಆದರೆ ಬಂದಿಲ್ಲ. ಯಾಕೆ ಬಂದಿಲ್ಲವೆಂದು ಅವರಿಗೂ ಗೊತ್ತಿಲ್ಲ. ಸ್ಥಳೀಯ ಸರಕಾರೇತರ ಸಂಸ್ಥೆಯ ಸಹಕಾರದಿಂದ ಬಂದ ಬಳಕೆದಾರರಿಂದ ಸಹಭಾಗಿತ್ವ ವಿಧಾನದಲ್ಲಿ ಕೆರೆ ನಿರ್ಮಾಣ ಮತ್ತು ರಿಪೇರಿ ಕುರಿತು ಮಾಹಿತಿ ಸಂಗ್ರಹಿಸಲಾಯಿತು. ಎಂಟು ಜನರ ಐದು ಗುಂಪು ಮಾಡಿ ಪ್ರತಿ ಗುಂಪು ಕೂಡ ಮೇಲಿನ ಸಮಸ್ಯೆಯ ಕುರಿತು ಚರ್ಚಿಸಿ ಅದರ ಪರಿಹಾರ ಬಗ್ಗೆ ತಮ್ಮ ಅಭಿಪ್ರಾಯವನ್ನು ಮಂಡಿಸಲು ತಿಳಿಸಲಾಯಿತು. ಮೊದಮೊದಲು ಬಂದ ರೈತರಿಗೆ ಏನು ಮಾಡಬೇಕೆಂದು ತಿಳಿಯಲಿಲ್ಲ. ಬಂದಿದ್ದ ಪರಿಣಿತರು ರೈತರಿಗೆ ಅವರೇನು ಮಾಡಬೇಕೆಂದು ಮತ್ತೊಂದು ಬಾರಿ ಮನವರಿಕೆ ಮಾಡಿದರು. ನಂತರ ಪ್ರತಿ ಗುಂಪು ಚದರಿ ಬೇರೆ ಬೇರ ಸ್ಥಳದಲ್ಲಿ ಕುಳಿತು ಸುಮಾರು ಅರ್ಧ ಗಂಟೆ ಹೊತ್ತು ಚರ್ಚಿಸಿತು. ಒಂದು ಗುಂಪು ತಮ್ಮ ಅಭಿಪ್ರಾಯಗಳನ್ನು ಮಂಡಿಸುವಾಗ ಉಳಿದ ಗುಂಪುಗಳು ಅದರ ವಿಮರ್ಶೆ ಮಾಡಬೇಕಿತ್ತು. ಮೊದಲ ಗುಂಪು ಕೆರೆ ನಿರ್ಮಾಣವಾಗಬೇಕು, ಅದಕ್ಕಾಗಿ ಜಿಲ್ಲಾ ಪಂಚಾಯತಿನಿಂದ ಹಿಡಿದು ಮಂತ್ರಿಗಳವರೆಗೆ ರೈತರು ಹೋಗಿ ಅಧಿಕಾರಿಗಳ ಮೇಲೆ ಒತ್ತಡ ಹೇರಬೇಕೆಂದು ಸೂಚಿಸಿತು. ಸಾಧ್ಯವಾದಷ್ಟು ಧನ ಸಹಾಯ ನೀಡುವುದು ಮತ್ತು ಕೆರೆ ರಿಪೇರಿಗೆ ಶ್ರಮದಾನ ಮಾಡುವುದು ಮಾತ್ರ ತಮ್ಮಿಂದ ಆಗಬಹುದಾದ ನೇರ ಭಾಗವಹಿಸುವಿಕೆ

ಎಂದರು. ಉಳಿದ ಒಂದು ಗುಂಪನ್ನು ಹೊರತು ಪಡಿಸಿ ಎಲ್ಲ ಗುಂಪುಗಳು ಹೆಚ್ಚು ಕಡಿಮೆ ಅದೇ ಅಭಿಪ್ರಾಯವನ್ನು ಬೇರೆ ಬೇರೆ ರೂಪದಲ್ಲಿ ತಿಳಿಸಿದವು.

ಸಂಘದ ಅಧ್ಯಕ್ಷರು ಮತ್ತು ಕೆಲವು ಓದಿದ ಸದಸ್ಯರಿದ್ದ ಗುಂಪು ತುಂಬ ಉಪಯುಕ್ತ ಮಾಹಿತಿ ನೀಡಿತು. ಆ ಗುಂಪಿನ ಪ್ರಕಾರ ಕೆರೆ ನಿರ್ಮಾಣ ಅಷ್ಟು ಸುಲಭದ ಕೆಲಸವಲ್ಲ. ಇದಕ್ಕೆ ಒಂದು ಕಾರಣ ಹಳ್ಳಿಯಲ್ಲಿನ ಒಗ್ಗಟಿನ ಕೊರತೆ. ಅವರ ಪ್ರಕಾರ ಆ ಸಮಸ್ಯೆಯನ್ನು ಹೇಗಾದರೂ ಸುಧಾರಿಸಬಹುದು. ಆದರೆ ಅದಕ್ಕಿಂತಲೂ ಗಂಭೀರವಾದ ಸಮಸ್ಯೆ ಗಣಿಮಾಲಿಕರು ಕೆರೆ ನಿರ್ಮಾಣವಾಗದಂತೆ ತಡೆಯುವ ಸಾಧ್ಯತೆ. ಯಾಕೆಂದರೆ ಈಗ ಗಣಿ ಪ್ರದೇಶಕ್ಕೆ ಹೋಗುವ ರಸ್ತೆ ಕೆರೆ ಪಾತ್ರದಲ್ಲಿ ಹೋಗುತ್ತದೆ. ಒಂದು ವೇಳೆ ಕೆರೆ ನಿರ್ಮಾಣವಾದರೆ ಗಣಿ ಮಾಲಿಕರು ಬೇರೆ ರಸ್ತೆ ಮಾಡಿಕೊಳ್ಳಬೇಕು. ಅದು ತುಂಬ ಸುತ್ತು ಬಳಸು ಆಗುತ್ತದೆ. ಅದಕ್ಕೆ ವಿನಿಯೋಜಿಸಬೇಕಾದ ಬಂಡವಾಳ ತುಂಬಾ ಜಾಸ್ತಿ ಆಗಬಹುದು. ಈ ಸಮಸ್ಯೆಯಿಂದ ಹೊರ ಬರಲು ಸಂಬಂಧ ಪಟ್ಟ ಕಡತಗಳನ್ನು ನೋಡುವ ಗುಮಾಸ್ತನಿಗೆ ಕೆಲವು ನೂರು ರೂಪಾಯಿ ಕೊಟ್ಟರೆ ಕೆರೆ ನಿರ್ಮಾಣವನ್ನು ಮುಂದಕ್ಕೆ ಹಾಕುತ್ತಾ ಹೋಗಬಹುದಲ್ಲ. ಎರಡು, ಊರವರು ಕೆರೆ ನಿರ್ಮಾಣ ಮತ್ತು ರಿಪೇರಿಗಳಲ್ಲಿ ತೊಡಗಿಸಿಕೊಳ್ಳಬೇಕಾದರೆ ಅವರಿಗೆ ಸಮಸ್ಯೆಯ ಅರಿವಿರಬೇಕು. ಬಹುತೇಕ ಬಳಕೆದಾರರಿಗೆ ಅದರ ಅರಿವು ಇಲ್ಲ. ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸುವ ಅಗತ್ಯವನ್ನು ಒತ್ತಿ ಹೇಳಿದರು. ಇದಕ್ಕಾಗಿ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಒಳಗೊಂಡಂತೆ ಹಲವಾರು ಸಮಿತಿಗಳನ್ನು ಮಾಡಿ ಪ್ರತಿಯೊಂದು ಸಮಿತಿಗೂ ಸತತವಾಗಿ ಕೆಲವು ಚಟುವಟಿಕೆಗಳನ್ನು ಮಾಡಬಹುದೆಂದು ಆ ಗುಂಪು ಸೂಚಿಸಿತು. ಬೀದಿ ನಾಟಕ ಮೂಲಕ ನೀರಿನ ಸಮಸ್ಯೆ ಬಗ್ಗೆ ಜನರಿಗೆ ಅರಿವು ಮೂಡಿಸುವುದು, ಸೆಟ್ಟಿಕೆರೆ ಪಾತ್ರದಲ್ಲಿ ಕರ ಸೇವೆ ಮಾಡುವುದು, ಈಶ್ವರನ ಕೆರೆಯ ಹೂಳೆತ್ತಲು ಶ್ರಮದಾನ ಮಾಡುವುದು ಇತ್ಯಾದಿಗಳು ಆ ಗುಂಪು ಸೂಚಿಸಿದೆ ಕಾರ್ಯಕ್ರಮಗಳಲ್ಲಿ ಕೆಲವು.

**ಕೋಳಿ ಜಗಳ**

ಸಂಘದ ವತಿಯಿಂದ ಕೆರೆ ನೀರಾವರಿ ಬಗ್ಗೆ ಇಷ್ಟೆಲ್ಲ ಯೋಜನೆಗಳು ರೂಪುಗೊಳ್ಳುತ್ತಿರುವಾಗಲೇ ಹಳ್ಳಿಯಲ್ಲಿ ಒಂದು ಘಟನೆ ನಡೆಯಿತು. ಅದು ಸಂಘದ ಚಟುವಟಿಕೆಗೆ ದೊಡ್ಡ ಹೊಡೆತ ನೀಡಿತು. ಅದನ್ನು ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ಊರಿನ ಕುಟುಂಬವೊಂದರಲ್ಲಿ ಗಂಡ ಹೆಂಡತಿ ನಡುವೆ ಜಗಳ ಆಗಿ ಬೇರ್ಪಟ್ಟಿದ್ದರು. ಹಾಗೆಂದು ಕೋರ್ಟ್‌ಗೆ ಹೋಗಿ ಫಾರ್ಮಲ್ ವಿಚ್ಛೇದನ ಪಡೆದಿಲ್ಲ. ಗಂಡ ಹೆಂಡತಿಯಾಗಿ ಮುಂದುವರಿಯುವುದು ಸಾಧ್ಯವಿಲ್ಲ ಎಂದು ಮನವರಿಕೆಯಾದ ನಂತರ ಅವರು ಬೇರೆ ಬೇರೆ ಮನೆ ಮಾಡಿ ವಾಸವಾಗಿದ್ದರು. ಇದ್ದ ಎರಡು ಮಕ್ಕಳು, ಒಂದು ಗಂಡು ಮತ್ತು ಒಂದು ಹೆಣ್ಣು, ತಾಯಿ ಜತೆ ಇದ್ದವು. ಬೇರ್ಪಟ್ಟು ದಂಪತಿಗಳ ಮನೆಗಳು ಅಕ್ಕ ಪಕ್ಕದಲ್ಲೆ ಇದ್ದವು. ಒಂದು ದಿನ ಗಂಡನ ಮನೆಯ ಕೋಳಿಯೊಂದು ಹೆಂಡತಿ ಮನೆಯ ಜಗಳಿಯಲ್ಲಿ ಇಕ್ಕೆ ಹಾಕಿತು. ಅದಕ್ಕೆ ಹಿಡಿ ಶಾಪ ಹಾಕುತ್ತ ಹೆಂಡತಿ ಕಲ್ಲು ಬೀರಿದಳು. ಅದು ನೇರ ಹೋಗಿ ಗಂಡನ ಹಣೆಗೆ ಬಡಿಯಿತು. ಅವಳು ಉದ್ದೇಶ ಪೂರಿತವಾಗಿ ಗಂಡನಿಗೆ ಕಲ್ಲಿನಿಂದ ಬಡಿದಳೋ ಅಥವಾ ಕೋಳಿಗೆಂದು ಬಿಸಾಕಿದ ಕಲ್ಲು ಗಂಡನಿಗೆ ತಗಲಿತೋ. ಹೇಳುವುದು ಕಷ್ಟ. ಗಂಡನಿಗೆ ಕಲ್ಲಿನ ಏಟು ಬಿದ್ದದಂತೂ ನಿಜ. ಆ ಸಿಟ್ಟಿನಿಂದ ಆತ ಹೆಂಡತಿಯನ್ನು ಹಿಗ್ಗಾ ಮುಗ್ಗಾ ಬಡಿದ. ಅಲ್ಲಿಗೆ ಆ ಜಗಳ ನಿಂತ ಹಾಗೆ ಕಂಡಿತು.

ಆದರೆ ಆ ರೀತಿ ಆಗಲಿಲ್ಲ. ಹೆಂಡತಿ ಜತೆಗಿರುವ ಮಕ್ಕಳಿಬ್ಬರು ಹೊಸಪೇಟೆಯ ಹಿಂದುಳಿದ ವರ್ಗಗಳ ಹಾಸ್ಟೇಲ್‌ಲ್ಲಿ ಇದ್ದುಕೊಂಡು ಓದುತ್ತಿದ್ದಾರೆ. ಅವರು ತಮ್ಮ ತಾಯಿಗೆ ವಿಚ್ಛೇದಿತ ತಂದೆ ಬಡಿತ ಘಟನೆಯನ್ನು ತಮ್ಮ ಸ್ನೇಹಿತರಿಗೆ ತಿಳಿಸಿದ್ದಾರೆ. ಅವರ ಸ್ನೇಹಿತರಲ್ಲಿ ಕೆಲವರು ನಾಯಕ ಸಮುದಾಯಕ್ಕೆ ಸೇರಿದವರು. ಹೊಪೇಟೆಯಲ್ಲಿ ನಾಯಕ ಸಮುದಾಯದ ಯುವಕರು ಸಂಘಟಿತರಾಗಿದ್ದಾರೆ. ನಾಯಕ ಸಮುದಾಯದ ಕೆಲವು ಯುವಕರು ಒಂದು ಸಂಜೆ ಹಳ್ಳಿಗೆ ಬಂದು ಹೆಂಡತಿಗೆ ಗಂಡನನ್ನು ಬಾಯಿಗೆ ಬಂದಂತೆ ಬೈಯಲು ಆರಂಭಿಸಿದರು. ಊರಿನ ಕೆಲವು ಹಿರಿಯರು ಅವರಿಗೆ, ‘ನೋಡಿ ಇದು ನಮ್ಮ ಊರಿನ ಸಮಸ್ಯೆ ಇದಕ್ಕೆ ನೀವು ಹೊರಗಿನವರು ತಲೆ ಹಾಕಬೇಡಿ,’ ಎಂದು ಸಮಾಜದಲ್ಲೇ ಹೇಳಿದರು. ಆದರೆ ಯುವ ರಕ್ತ ಸಮದಾನದ ಮಾತಿಗೆ ಸೊಪ್ಪು ಹಾಕಲಿಲ್ಲ. ಸುತ್ತಮುತ್ತ ಜನ ಸೇರಿದರು. ಎರಡು ಪಕ್ಷಗಳಿಂದಲೂ ಬೈಗಳ ಯುದ್ಧ ನಡೆದಿತ್ತು. ಅಷ್ಟು ಹೊತ್ತಿಗೆ ಅಲ್ಲಿಗೆ ಅದೇ ಹಳ್ಳಿಯ ಮಾಜಿ.ತಾ.ಪ.ಅಧ್ಯಕ್ಷರು ಬಂದರು. ಸುತ್ತು ಸೇರಿದವರಲ್ಲಿ

ಜಗಳದ ಕಾರಣ ತಿಳಿದುಕೊಂಡ ತಾ.ಪ. ಅಧ್ಯಕ್ಷರು ಯುವಕರನ್ನು ಕರೆದು ನೀವು ಆದಷ್ಟು ಬೇಗ ಜಾಗ ಖಾಲಿ ಮಾಡಿದರೆ ನಿಮಗೆ ಒಳ್ಳೆಯದು ಎಂದು ಗದರಿಸಿದರು. ಆದರೆ ಯುವಕರು ಅದಕ್ಕೂ ಸೊಪ್ಪು ಹಾಕಲಿಲ್ಲ. ಆವಾಗ ಮಾಜಿ ಅಧ್ಯಕ್ಷರು ಒಬ್ಬ ಯುವಕನ ಕೊರಳಪಟ್ಟಿ ಹಿಡಿದು ಬಾರಿಸಿದರು. ಒಬ್ಬನಿಗೆ ಏಟು ಬಿದ್ದರೆ ತಡ ಊರವರು ಉಳಿದ ಯುವಕರನ್ನು ಅಟ್ಟಿಸಿಕೊಂಡು ಹೋಗಿ ಹಿಗ್ಗಾಮುಗ್ಗಾ ಬಾರಿಸಿದರು. ಏಟು ತಿಂದು ಹೋದ ಯುವಕರು ಸುಮ್ಮನಿರಲಿಲ್ಲ. ತಮ್ಮ ಸಮುದಾಯದ ಯುವಕರ ಒಂದು ದೊಡ್ಡ ಗುಂಪು ಮಾಡಿಕೊಂಡು ಬಳ್ಳಾರಿ ಸರ್ಕಲ್ ಬಳಿ ಬಂದರು. ಹೊಸಪೇಟೆ ಬಸ್ ನಿಲ್ದಾಣದಿಂದ ಒಂದು ಅಥವಾ ಒಂದೂವರೆ ಕಿ.ಮೀ.ದೂರದಲ್ಲಿ ಬಳ್ಳಾರಿ ಸರ್ಕಲ್ ಇದೆ. ಬಳ್ಳಾರಿ ಕಡೆ ಹೋಗುವ ಎಲ್ಲ ವಾಹನಗಳೂ ಇಲ್ಲಿಂದಲೇ ಹೋಗಬೇಕು. ಏಟು ತಿಂದ ಯುವಕರು ಮತ್ತು ಅವರ ಸಂಗಡಿಗರು ಬಳ್ಳಾರಿ ಕಡೆ ಹೋಗುವ ಆಟೋ, ಮಿನಿ ಬಸ್, ಮೆಟಡೋರ್ ಗಳನ್ನು ನಿಲ್ಲಿಸಿ ನೀವು ಯಾವ ಹಳ್ಳಿಯವರೆಂದು ಕೇಳಿ ಅವರು ಪಿ.ಕೆ.ಹಳ್ಳಿಯವರೆಂದ ಕೂಡಲೇ ವಾಹನಗಳಿಂದ ಇಳಿಸಿ ಹೊಡೆಯಲು ಶುರು ಮಾಡಿದರು.

ಯುವಕರಿಂದ ಏಟು ತಿಂದವರಿಗೂ ಹಿಂದಿನ ದಿನ ಊರಲ್ಲಿ ನಡೆದ ಘಟನೆಗೂ ಏನೇನೂ ಸಂಬಂಧವಿರಲಿಲ್ಲ. ಅವರು ಜಗಳ ಆದಾಗ ಸ್ಥಳಕ್ಕೂ ಬಂದಿರಲಿಲ್ಲ. ಕಾರಣವಿಲ್ಲದೆ ಏಟು ತಿನ್ನುವುದನ್ನು ಸಹಿಸಲಾಗಲಿಲ್ಲ. ಏಟು ತಿಂದವರು ಹಳ್ಳಿಗೆ ಬಂದು ನೇರ ಹೋಗಿ ಹೆಂಗಸನ್ನು ಬೈಯುತ್ತಿದ್ದರು. ಆ ಯುವಕರಿಗೆ ಹೊಡೆಯುವುದನ್ನು ನಿಲ್ಲಿಸಲು ಹೇಳು ಇಲ್ಲದಿದ್ದರೆ ನಿನ್ನನ್ನು ಊರಿಂದ ಬಹಿಷ್ಕಾರ ಹಾಕಿಸುತ್ತೇವೆ ಎಂದು ಗದರಿದರು. ಆದರೆ ಮರು ದಿವಸ ಕೂಡ ಇದೇ ಘಟನೆ ಮರುಕಳುಹಿಸಿತು. ಈ ಬಾರಿ ಏಟು ತಿಂದವರು ಊರಲ್ಲಿ ಯುವಕರಿಗೆ ಮೊದಲು ಬಾರಿಸಿದ ಮಾಜಿ ತಾ.ಪ.ಅಧ್ಯಕ್ಷರ ಹತ್ತಿರ ಹೋಗಿ 'ಇದೆಲ್ಲ ನಿನ್ನಿಂದಲೇ ಆಗಿರುವುದು, ನೀನು ಹೋಗಿ ಆ ಯುವಕರನ್ನು ಸಮಾಧಾನಪಡಿಸಬೇಕೆಂದು,' ಒತ್ತಾಯ ಮಾಡಿದರು. ಏಟು ತಿಂದವರಲ್ಲಿ ಕೆಲವರು ನೀರಿನ ಸಂಘದ ಸದಸ್ಯರು. ಅವರು ನೇರ ಬಂದು ಸಂಘದ ಅಧ್ಯಕ್ಷರಲ್ಲಿ ಆದ ಘಟನೆಯನ್ನು ವಿವರಿಸಿ ಇದನ್ನು ಹೇಗಾದರೂ ಮಾಡಿ ನೀವು ನಿಲ್ಲಿಸಬೇಕೆಂದು ಹೇಳಿದರು. 'ಗುಂಪುಗಟ್ಟಿ ಸಾರ್ವಜನಿಕವಾಗಿ ಹೊಡೆಯುವುದೆಂದರೇನು? ಇದೇನು ಗುಂಡಾ ರಾಜವೇ? ನೀವು ಏಟು ತಿಂದುಕೊಂಡು ಇಲ್ಲಿ ತನಕ ಬಂದಿದ್ದೀರಲ್ಲ; ಅಲ್ಲೇ ಪೋಲಿಸ್ ಸ್ಟೇಷನ್ ಇತ್ತಲ್ಲ? ದೂರ ಕೊಡಬೇಕಿತ್ತು. ಈಗಲೂ ಸಮಯ ಮೀರಿಲ್ಲ. ಬನ್ನಿ ನಾನು ಬರುತ್ತೇನೆ ಪೋಲಿಸ್ ಸ್ಟೇಷನ್ ಹೋಗಿ ದೂರು ಕೊಡುವ,' ಎಂದರು. ಅದಕ್ಕೆ ಏಟು ತಿಂದವರು ರೆಡಿ ಇಲ್ಲ. ಇನ್ನು ಪೋಲಿಸ್ ಠಾಣೆಗೆ ಹೋದರೆ ಅದು ಅಷ್ಟು ಸುಲಭದಲ್ಲಿ ಮುಗಿಯುವುದಿಲ್ಲ. ಅಧ್ಯಕ್ಷರು ಮತ್ತ ಇತರ ಪ್ರಮುಖರು ಮಾತಾಡಿ ಆ ಸಮಸ್ಯೆಯನ್ನು ಪರಿಹರಿಸಬೇಕೆಂದು ಏಟು ತಿಂದವರ ಬಯಕೆ. ಅವರ ಆ ಸಲಹೆಗೆ ಸಂಘದ ಅಧ್ಯಕ್ಷರು ಒಪ್ಪಲಿಲ್ಲ. ಏಟು ತಿಂದವರು ಮಾಜಿ ತಾ.ಪ.ಅಧ್ಯಕ್ಷರನ್ನು ಸಮಸ್ಯೆ ಪರಿಹರಿಸಲು ಒತ್ತಾಯಿಸತೊಡಗಿದರು. ಕಡೆಗೂ ಆ ಸಮಸ್ಯೆ ಪೋಲಿಸ್ ಠಾಣೆಗೆ ಹೋಗದೆ ಮಾತುಕತೆಯಲ್ಲೇ ಪರಿಹಾರವಾಯಿತು. ಇದಿಷ್ಟು ನಡೆದ ಘಟನೆ.

ಈ ಘಟನೆ ನಡೆದ ಕೆಲವು ದಿನಗಳ ನಂತರ ನೀರಿನ ಸಂಘದ ಸಭೆ ಕರೆದರು. ಕಾರ್ಯಕಾರಿ ಸಮಿತಿಯ ಅರ್ಧದಷ್ಟು ಜನ ಬರಲಿಲ್ಲ. ಸಭೆ ಇದೆಯೆಂದು ಬಂದವರಲ್ಲಿ ಕೆಲವರು ಬಾರದವರ ಮನೆಗೆ ಹೋಗಿ ಬಾರದಿರಲು ಕಾರಣ ಏನೆಂದು ವಿಚಾರಿಸಿದರು. ಸ್ವಲ್ಪ ದಿನ ಹಿಂದೆ ನಡೆದ ಘಟನೆಯೇ ಕಾರಣವೆಂದು ಅವರ ಗಮನಕ್ಕೆ ಬಂತು. ತಮಗೆ ಸಮಸ್ಯೆ ಆದಾಗ ಬಾರದ ಸಂಘ ಇದ್ದರೇನು? ಬಿಟ್ಟರೇನು? ಎನ್ನುವುದು ಬಾರದಿರುವವರ ವಾದ. ಸಂಘದ ಉದ್ದೇಶವೇ ಬೇರೆ. ಅದು ಬಿಟ್ಟ ಎಲ್ಲ ವಿಚಾರಗಳಲ್ಲೂ ಸಂಘ ತಮ್ಮ ಹಿಂದೆ ನಿಲ್ಲಬೇಕೆಂದು ಬಯಸುವುದು ಸರಿಯಲ್ಲ ಎಂದು ಅಧ್ಯಕ್ಷರು ಮತ್ತು ಇತರ ಪದಾಧಿಕಾರಿಗಳು ಬಾರದಿರುವವರ ಮನವೊಲಿಸಲು ಪ್ರಯತ್ನಿಸಿದರು. ಆದರೆ ಅವರು ಒಪ್ಪಲೇ ಇಲ್ಲ. ಸರಿ ಅರ್ಧಕ್ಕಿಂತಲೂ ಹೆಚ್ಚು ಸದಸ್ಯರು ಬರದಿದ್ದರೆ ಸಭೆ ನಡೆಸುವುದಾದರೂ ಹೇಗೆ? ಇನ್ನು ಹಿಂದಿನ ಬಾರಿ ಯೋಜಿಸಿದಂತೆ ಊರವರಲ್ಲಿ ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಂತು ದೂರವೇ ಉಳಿಯಿತು. ಹೀಗೆ ಕೆಲವು ತಿಂಗಳು ಕಳೆಯಿತು. ಯಾರು ನೀರಿನ ಸಂಘದ ಬಗ್ಗೆ ಮಾತಾಡಲಿಲ್ಲ. ಸಂಘ ಹೇಗೋ ಜೀವಂತ ಇತ್ತು ಎನ್ನುವುದನ್ನು ಬಿಟ್ಟರೆ ಬೇರೆ ಕಾರ್ಯಕ್ರಮಗಳು ಸಂಘದ ವತಿಯಿಂದ ಇರಲಿಲ್ಲ.

ಹೀಗಿರುವಾಗ ಒಂದು ದಿನ ಜಿಲ್ಲಾ ಪಂಚಾಯತ್‌ನ ಮುಖ್ಯ ಎಂಜಿನೀಯರ್ ಹಳ್ಳಿಗೆ ಬಂದರು. ಅವರು ಸೆಟ್ಟಿಕೆರೆ ಇರುವ ಸ್ಥಳ ನೋಡಿಕೊಂಡು ಹೋಗಲು ಬಂದಿದ್ದರು. ಹಳ್ಳಿಗೆ ಬಂದ ನಂತರ ಬಳ್ಳಾರಿಗೊಂದು ಫೋನ್ ಮಾಡಬೇಕಾಗಿದೆ ಇಲ್ಲಿ ಟೆಲಿಫೋನ್ ಬೂತ್ ಎಲ್ಲಿದೆ ಎಂದು ರಸ್ತೆ ಬದಿಯಲ್ಲಿ ಇದ್ದವರೊಬ್ಬರನ್ನು ಕೇಳಿದ್ದಾರೆ. ಅವರು ಹತ್ತಿರದಲ್ಲೇ ಇರುವ ಸ್ಟೇಷನರಿ ಅಂಗಡಿಯನ್ನು ತೋರಿಸಿದ್ದಾರೆ. ಅದು ನೀರಿನ ಸಂಘದ ಅಧ್ಯಕ್ಷರ ಅಂಗಡಿ. ಅಂಗಡಿ ಜತೆಯಲ್ಲಿ ಟೆಲಿಫೋನ್ ಬೂತ್ ಕೂಡ ನಡೆಸುತ್ತಿದ್ದರು ತಮ್ಮಲ್ಲಿಗೆ ಫೋನ್ ಮಾಡಲು ಬಂದವರು ಜಿಲ್ಲಾ ಪಂಚಾಯತ್ ಎಂಜಿನೀಯರ್ ಮತ್ತು ಅವರು ಕೆರೆ ನೋಡಲು ಬಂದಿದ್ದಾರೆ ಎಂದರೆ ಅಧ್ಯಕ್ಷರು ಸುಮ್ಮನಿರುತ್ತಾರೆಯೇ? ಕೆರೆ ಇರುವ ಸ್ಥಳ ತಾನೆ ತೋರಿಸುತ್ತೇನೆ ಎಂದು ಅಧ್ಯಕ್ಷರು ಹೊರಟರು. ಅದೇ ಸುಮಾರಿಗೆ ಮಾಜಿ ಮಂಡಲ ಅಧ್ಯಕ್ಷರು ಕೂಡ ರಸ್ತೆಯಲ್ಲಿ ಸಿಕ್ಕಿದರು. ತಾನು ಬರುತ್ತೇನೆ ಎಂದು ಅವರೂ ಹೊರಟರು. ಅವರೆಲ್ಲ ಇನ್ನೇನು ಕಾರು ಹತ್ತಬೇಕು ಅತ್ತ ಕಡೆಯಿಂದ ಹಾಲಿ ತಾ.ಪ.ಪಂಚಾಯತ್ ಸದಸ್ಯರು ಬರುತ್ತಿದ್ದಾರೆ. ಅವರನ್ನು ಬಿಟ್ಟು ಹೋಗುವುದು ಸರಿಯಲ್ಲ ಎಂದು ನೀರಿನ ಸಂಘದ ಅಧ್ಯಕ್ಷರು ಅವರನ್ನು ಬನ್ನಿ ಎಂದು ಕರೆದಿದ್ದಾರೆ. ಎಂಜಿನೀಯರ್ ಜತೆ ಅವರ ಕಚೇರಿಯ ಮೂರು ಸಿಬ್ಬಂದಿಗಳು, ಮಾಜಿ ಅಧ್ಯಕ್ಷರು, ನೀರಿನ ಸಂಘದ ಅಧ್ಯಕ್ಷರು ಸೇರಿ ಕಾರು ಆಗಲೇ ಭರ್ತಿಯಾಗಿತ್ತು. ತಮ್ಮ ಸಂಘದ ಕಾರ್ಯದರ್ಶಿಯ ಬೈಕ್‌ಲ್ಲಿ ತಾ.ಪ.ಸದಸ್ಯರನ್ನು ಬರಲು ಹೇಳಿ ಅಧ್ಯಕ್ಷರು ಎಂಜಿನೀಯರ್ ಜತೆ ಹೋದರು. ಆ ಸಲಹೆ ತಾ.ಪ. ಸದಸ್ಯರಿಗೆ ಅಷ್ಟೊಂದು ಇಷ್ಟವಾದಂತೆ ಕಾಣಲಿಲ್ಲ. ಕೆರೆ ಇರುವ ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದರೂ ಕಾರಲ್ಲಿದ್ದವರಿಗೆ ತಾ.ಪ.ಸದಸ್ಯರ ದರ್ಶನ ಆಗಲಿಲ್ಲ.

ಸಂಘದ ಅಧ್ಯಕ್ಷರು ಊರಿಗೆ ಬಂದ ಎಂಜಿನೀಯರ್‌ನ್ನು ಹಾಗೆ ಕಳುಹಿಸುವುದು ಬೇಡ ಎಂದು ಹತ್ತಿರದ ಲಿಂಗಾಯತರ ಹೊಟೇಲಿಗೆ ಕರೆದುಕೊಂಡು ಹೋದರು. ಅಲ್ಲಿಗೆ ಹೋದರೆ ತಾ.ಪ.ಸದಸ್ಯರು ಹೊಟೇಲಲ್ಲೇ ಇದ್ದರು. ಇವರೆನ್ನೆಲ್ಲ ಕಂಡ ಕೂಡಲೇ ತಾ.ಪ.ಸದಸ್ಯರ ಕೋಪ ಕಟ್ಟೆ ಹೊಡೆದು ಹರಿಯಲು ಶುರುವಾಯಿತು. 'ನೀವು ನನ್ನನ್ನು ಏನೆಂದು ತಿಳಿದುಕೊಂಡಿದ್ದೀರಿ. ತಾ.ಪ.ಸದಸ್ಯ ಮುಖ್ಯವೋ ಅಥವಾ ಯಾವುದೋ ಕಾಲದ ಮಂಡಲ ಅಧ್ಯಕ್ಷ ಮುಖ್ಯನೋ? ನೀವೆಲ್ಲ ಸೇರಿ ಜಾತಿ ರಾಜಕೀಯ ಮಾಡತ್ತೀರಿ (ಮಾಜಿ ಮಂಡಲ ಅಧ್ಯಕ್ಷ ಮತ್ತು ಸಂಘದ ಅಧ್ಯಕ್ಷರು ಇಬ್ಬರೂ ಒಂದೇ ಜಾತಿಗೆ ಸೇರಿದವರು),' ಎಂದು ಸಂಘದ ಮತ್ತು ಮಾಜಿ ಮಂಡಲ ಅಧ್ಯಕ್ಷರನ್ನು ಸೇರಿಸಿ ಕೂಗಾಡಿದರು. ಎಂಜಿನಿಯರ್ ಎದುರು ಊರಿನ ಮಾನ ಹರಾಜು ಹಾಕುವುದು ಬೇಡವೆಂದು ತಾ.ಪ.ಸದಸ್ಯರ ಮಾತಿಗೆ ಪ್ರತಿಯಾಡದೆ ಇಬ್ಬರು ಸುಮ್ಮನೆ ಕೂತರು. ಅಷ್ಟು ಸಾಲದೆಂಬಂತೆ 'ತಾ.ಪ.ಪಂಚಾಯತ್ ಸದಸ್ಯ ನಾನು ಇಲ್ಲಿರುವಾಗ ಇವರನ್ನು ಕರೆದುಕೊಂಡು ನೀವು ಹೇಗೆ ಹೋದಿರಿ?' ಎಂದು ಎಂಜಿನೀಯರನ್ನೂ ಕೇಳಿದರು. 'ನೋಡಿ ನಾನು ನನ್ನ ಕರ್ತವ್ಯ ಮಾಡಲು ಬಂದಿದ್ದೇನೆ. ನಿಮ್ಮ ಊರಿನ ರಾಜಕೀಯಕ್ಕೆ ನನ್ನನ್ನು ಎಳೆಯಬೇಡಿ,' ಎಂದು ಹೇಳಿ ಅವರು ಜಾಗ ಖಾಲಿ ಮಾಡಿದರು. ಸಂಘದ ಅಧ್ಯಕ್ಷ ಮತ್ತು ಮಾಜಿ ಅಧ್ಯಕ್ಷರು ಎಂಜಿನೀಯರನ್ನು ಕಾರಿನ ತನಕ ಬಿಡುವ ನೆಪದಲ್ಲಿ ತಾ.ಪ.ಸದಸ್ಯರಿಂದ ತಪ್ಪಿಸಿಕೊಂಡು ಹೊಟೇಲಿನಿಂದ ಹೊರಬಂದರು. ಈ ಘಟನೆ ನಡೆದ ನಂತರ ಅಪರೂಪಕ್ಕೊಮ್ಮೆ ಆಗುತ್ತಿದ್ದ ಸಂಘದ ಸಭೆಗಳು ನಿಂತೆ ಹೋಗಿವೆ.

(೪)

**ಭಾಗ – ೩**

ಅಧ್ಯಾಯದ ಆರಂಭದಲ್ಲಿ ಪ್ರಭುತ್ವ ಮತ್ತು ಸಮುದಾಯ ಬಗ್ಗೆ ಇರುವ ಗೃಹಿತಗಳನ್ನು ತಿಳಿಸಿದ್ದೇನೆ. ಎರಡು ಹಳ್ಳಿಗಳಲ್ಲಿ ನಡೆದ ಸಹಭಾಗಿತ್ವ ಪ್ರಯತ್ನಗಳನ್ನು ವಿವರಿಸಿದ್ದೇನೆ. ಇವುಗಳ ಹಿನ್ನೆಲೆಯಲ್ಲಿ ಮೇಲಿನ ಗೃಹಿಕೆಗಳನ್ನು ಈ ಭಾಗದಲ್ಲಿ ವಿಶ್ಲೇಸಿಲಾಗುವುದು. ಮೊದಲಿಗೆ ಪ್ರಭುತ್ವದ ಪ್ರಶ್ನೆಯನ್ನು ಎತ್ತಿಕೊಳ್ಳೋಣ. ಪ್ರಭುತ್ವ ಬಲಯುತವಾಗಿ ಇದ್ದುದರಿಂದಲೇ ಸಮುದಾಯ ಪ್ರಯತ್ನಗಳು ನಮ್ಮಲ್ಲಿ ಸರಿಯಾಗಿ ಬೇರೂರಲು ಆಗಿಲ್ಲ. ಸಮುದಾಯ ಪ್ರಯತ್ನಗಳು ಸರಿಯಾಗಿ ಬೇರೂರಬೇಕಾದರೆ ಪ್ರಭುತ್ವ ಹಿಂದಕ್ಕೆ ಸರಿಯಲೇ ಬೇಕು. ಪ್ರಭುತ್ವದ ಇರುವಿಕೆಯೇ ಅನಾವಶ್ಯ ಎನ್ನುವ ಗೃಹಿಕೆ ಇದೆ. ಆದರೆ ಎರಡು ಹಳ್ಳಿಗಳಲ್ಲಿ ನಡೆದ ಸಹಭಾಗಿತ್ವ ಪ್ರಯತ್ನ ಈ ಗೃಹಿಕೆಗೆ ಭಿನ್ನವಾದ ಚಿತ್ರಣ ಕೊಡುತ್ತಿದೆ.

ಮಹಮ್ಮದ್ ನಗರದ ಬೇಸಾಯ ಸಹಕಾರಿ ಸಂಘ ರೂಪುಗೊಳ್ಳುವುದೆ ಹಿಂದೆ ಅಂದಿನ ಪ್ರಭುತ್ವ ಮತ್ತು ಅದು ಸಹಕಾರಿ ಚಳವಳಿಗೆ ಕೊಡುತ್ತಿದ್ದ ಮಹತ್ವದ ಪಾತ್ರ ತುಂಬಾ ಇದೆ. ಶಿವಪುರದ ರೀತಿಯಲ್ಲಿ ಉತ್ತರ ಕರ್ನಾಟಕದ ಇತರ ಹಲವಾರು ಕಡೆಗಳಲ್ಲಿ ಸಾಮೂಹಿಕ ಬೇಸಾಯ ಸಹಕಾರಿ ಸಂಘಗಳು ಶುರುವಾಗಿದ್ದವು. ಅಂದಿನ ಸರಕಾರ ರಾಜ್ಯ ಮಟ್ಟದಲ್ಲಿ ಸಹಕಾರಿ ಚಳವಳಿಯನ್ನು ಒಂದು ದೊಡ್ಡ ಪ್ರಮಾಣದಲ್ಲಿ ಮಾಡಿತ್ತು. ತಾಲ್ಲೂಕು ಮಟ್ಟದಲ್ಲಿ ಸರಕಾರಿ ಅಧಿಕಾರಿಗಳು ಓದು ಬರಹ ಇಲ್ಲದ ಜನರಿಗೆ ಸಹಕಾರಿ ಚಳವಳಿಯ ಲಾಭಗಳನ್ನು ತಿಳಿಹೇಳಿದರು. ಜತೆಗೆ ಪ್ರತಿ ಹಂತದಲ್ಲೂ ರೈತರಿಗೆ ಸಲಹೆಗಳನ್ನು ನೀಡುತ್ತಾ ಸಂಘ ರೂಪುಗೊಳ್ಳಲು ಸಹಕರಿಸಿದ್ದಾರೆ.

ಇದಕ್ಕೆ ಹೋಲಿಸಿದರೆ ಪಾಪಿನಾಯಕನ ಹಳ್ಳಿಯಲ್ಲಿ ಊರವರೇ ಸ್ವತಂತ್ರವಾಗಿ ಸಂಘಟಿತವಾಗಿ ತಮ್ಮ ನೀರಿನ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸಿದರು. ಇಲ್ಲಿ ಪ್ರಭುತ್ವ ಯಾವುದೇ ಪಾತ್ರ ವಹಿಸಿಲ್ಲ. ಆದರೆ ಅದು ಯಶಸ್ವಿಯಾಗಲಿಲ್ಲ. ಅದು ವಿಫಲವಾಗುವುದಕ್ಕೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಒಂದು ಹಳ್ಳಿಯಲ್ಲಿನ ವಿವಿಧ ಸಮುದಾಯಗಳನ್ನು ಒಟ್ಟು ಸೇರಿಸಲು ಪೂರಕವಾದ ಸಾಂಘಿಕ ಚೌಕಟ್ಟಿನ ಕೊರತೆ. ಸಹಭಾಗಿತ್ವದ ಬಹುಮುಖ್ಯ ಲಕ್ಷಣ ಸಂಪನ್ಮೂಲ ಬಳಕೆದಾರರು ಅದರ ಬಳಕೆ ಮತ್ತು ನಿರ್ವಹಣೆ ಕುರಿತ ನಿರ್ಧಾರದಲ್ಲಿ ಪಾಲುಗೊಳ್ಳುವುದು. ಅದು ಸಾಧ್ಯವಾಗಬೇಕಾದರೆ ಒಂದು ಸಾಂಘಿಕ ಚೌಕಟ್ಟಿನ ಅವಶ್ಯಕತೆಯಿದೆ. ಮಹಮ್ಮದ್ ನಗರದಲ್ಲಿ ಆ ಕೆಲಸವನ್ನು ಸಹಕಾರಿ ಸಂಘ ಮಾಡಿದೆ. ಸಂಘದ ಸದಸ್ಯರು ನೀರು ನಿರ್ವಹಣೆಯಲ್ಲಿ ಸಕ್ರಿಯವಾಗಿ ಪಾಲುಗೊಳ್ಳುತ್ತಿದ್ದಾರೆ. ಎಲ್ಲ ಸದಸ್ಯರು ನೇರವಾಗಿ ಪಾಲುಗೊಳ್ಳದಿರಬಹುದು. ಆದರೆ ಪರೋಕ್ಷವಾಗಿ ತಮ್ಮ ಕಾರ್ಯಕಾರಿ ಸಮಿತಿ ಸದಸ್ಯರ ಮೂಲಕ ತಮ್ಮ ಆಶಯಗಳನ್ನು ವ್ಯಕ್ತ ಪಡಿಸುತ್ತಾರೆ. ಸಂಘದ ಆಡಳಿತ ಮಂಡಳಿ ಸಾಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದುದನ್ನು ನೋಡಿದ್ದೇನೆ. ಇಷ್ಟಾಗಿಯೂ ಸಾಮಾನ್ಯ ಸದಸ್ಯರ ಈ ಕ್ರಮದ ಪಾಲುಗೊಳ್ಳುವಿಕೆಯನ್ನು ಒಂದು ದೊಡ್ಡ ಸಕರಾತ್ಮ ವಿಚಾರವೆಂದು ತಿಳಿಯಬೇಕಿಲ್ಲ. ಯಾಕೆಂದರೆ ಸಭೆ ಕೊನೆಗೆ ತೀರ್ಮಾನಕ್ಕೆ ಅಭಿಪ್ರಾಯಗಳನ್ನು ಪ್ರತಿಬಿಂಬಿಸುವು ವ್ಯವಸ್ಥೆ ಇದೆಯೇ? ಮತ್ತು ಅದು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆಯೇ?ಎನ್ನುವುದು ಮುಖ್ಯ. ಪಾಪಿನಾಯಕನ ಸಂಘಕ್ಕೆ ಹೋಲಿಸಿದರೆ ಮಹಮ್ಮದ್ ನಗರದ ಸಂಘದಲ್ಲಿ ಈ ಎರಡೂ ಅಂಶಗಳು ಇದ್ದವು ಮಾತ್ರವಲ್ಲ ಅವು ಸಕ್ರಿಯವಾಗಿ ಕೆಲಸ ನಿರ್ವಹಿಸುತ್ತಿದ್ದವು.

ಪ್ರಭುತ್ವ ಮತ್ತು ಸಾಂಘಿಕ ಚೌಕಟ್ಟಿನಂತೆ ಸಹಭಾಗಿತ್ವವನ್ನು ಪ್ರಭಾವಿಸುವ ಮತ್ತೊಂದು ಅಂಶ ಪಾರದರ್ಶಕತೆ ವಿವಿಧ ಹಂತಗಳಲ್ಲಿ ಅಗತ್ಯ. ಆಡಳಿತ ಸದಸ್ಯರ ಆಯ್ಕೆ. ಆಡಳಿತ ಸಮಿತಿ ಸಭೆ ನಡೆಸುವುದು, ಅಲ್ಲಿನ ನಿರ್ಣಯಗಳನ್ನು ಜಾರಿ ತರುವುದು ಇತ್ಯಾದಿಗಳಲ್ಲಿ ಪಾರದರ್ಶಕತೆ ಇರಬೇಕು. ಈ ವಿಚಾರದಲ್ಲಿ ಪಿ.ಕೆ.ಹಳ್ಳಿ ಮತ್ತು ಮಹಮ್ಮದ್ ನಗರದ ಸಂಘಗಳ ಮಧ್ಯೆ ವಿಶೇಷ ಭಿನ್ನತೆ ಇಲ್ಲ. ಪಿ.ಕೆ.ಹಳ್ಳಿಯ ಸಂಘ ಒಂದು ವರ್ಷವನ್ನು ಪೂರೈಸಿಲ್ಲ. ಆದುದರಿಂದ ಸದಸ್ಯರ ಮಹಾಸಭೆ ನಡೆಸುವ ಪ್ರಶ್ನೆಯೇ ಇಲ್ಲ. ಮಹಮ್ಮದ್ ನಗರದಲ್ಲಿ ವಾರ್ಷಿಕ ಮಹಾಸಭೆ ನಡೆಯುತ್ತದೆ. ಅಲ್ಲಿ ಹಿಂದಿನ ವರ್ಷ ಮಾಡಿದ ಕೆಲಸಗಳ ವರದಿ ವಾಚನ ಇರುತ್ತದೆ. ಲೆಕ್ಕ ಪರಿಶೋಧಕರಿಂದ ಪರೀಕ್ಷಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಮಂಡಿಸಿ ಸದಸ್ಯರ ಒಪ್ಪಿಗೆ ಪಡೆಯಬೇಕಾಗುತ್ತದೆ. ಕಾರ್ಯ ಕಾರಿ ಸಮಿತಿ ಸದಸ್ಯರ ಆಯ್ಕೆ ವಿಚಾರದಲ್ಲಿ ಎರಡೂ ಸಂಘಗಳು ಪಾರದರ್ಶಕತೆ ಹೊಂದಿವೆ. ಎರಡೂ ಕಡೆ ಜವಾಬ್ದಾರಿ ಹೊರಲು ಜನ ಮುಂದೆ ಬರುವುದಿಲ್ಲ. ಇದಕ್ಕೆ ಒಳ್ಳೆಯ ಉದಾಹರಣೆಯೆಂದರೆ ಮಹಮ್ಮದ್ ನಗರದ ಸಂಘ. ಇಲ್ಲಿಯವರೆಗೆ ಕಾರ್ಯಕಾರಿ ಸಮಿತಿ ಸದಸ್ಯರು ಆಯ್ಕೆಗಾಗಿ ಚುನಾವಣೆ ನಡೆದಿಲ್ಲ. ಹಿರಿಯ ಸದಸ್ಯರು ಕೆಲವರನ್ನು ಸಮಿತಿ ಸದಸ್ಯರಾಗಬಹುದೆಂದು ಸೂಚಿಸುತ್ತಾರೆ. ಅವರೇ ಸದಸ್ಯರು ಆಗುತ್ತಾರೆ. ಆ ರೀತಿ ಆಯ್ಕೆ ಮಾಡುವಾಗ ಜಾತಿ ಅಥವಾ ಇತರ ಸಾಮಾಜಿಕ ಸಂಗತಿಗಳಿಗಿಂತ ವ್ಯಕ್ತಿಯ ಗುಣ ನಡೆತ, ಪ್ರಾಮಾನಿಕತೆ ಇತ್ಯಾದಿಗಳೇ ಮುಖ್ಯ. ಅದೇ ರೀತಿ ಎರಡೂ ಕಡೆ ಪ್ರತಿ ಸಮುದಾಯದಿಂದ ಕನಿಷ್ಠ ಒಬ್ಬ ಸದಸ್ಯನಾದರು ಆಯ್ಕೆ ಆಗುವಂತೆ ನೋಡಿಕೊಳ್ಳಲಾಗುತ್ತದೆ. ಮಹಮ್ಮದ್ ನಗರದಲ್ಲಿ ಪ್ರಮುಖರ ಈ ಕ್ರಮದ ಆಯ್ಕೆ ವಿರುದ್ಧ ಇಷ್ಟರವರೆಗೆ ಯಾರು ಅಸಮಧಾನ ಸೂಚಿಸಿಲ್ಲ.

ನಿರ್ಣಯಗಳನ್ನು ಜಾರಿ ತರುವ ವಿಚಾರದಲ್ಲಿ ಪಿ.ಕೆ.ಹಳ್ಳಿ ಸಂಘ ಅಷ್ಟು ಕಟ್ಟುನಿಟ್ಟು ಇದ್ದಂತೆ ತೋರುವುದಿಲ್ಲ. ಪ್ರತಿ ಕಾರ್ಯಕಾರಿ ಸದಸ್ಯರು ಹತ್ತು ಬಳಕೆದಾರರನ್ನು ಸೇರಿಸುವ (ಒಂದು ನಿರ್ದಿಷ್ಟ ಮೊತ್ತದ ಸದಸ್ಯತನದ ಜತೆಗೆ), ಸತ್ಯ ನಾರಾಯಣ ಪೂಜೆಯನ್ನು ಕೆರೆ ಪಾತ್ರದಲ್ಲಿ

ಮಾಡುವ, ಮುಂತಾದ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರಲೇ ಇಲ್ಲ. ನಿರ್ಣಯಗಳನ್ನು ಜಾರಿ ತರುವ ವಿಚಾರದಲ್ಲಿ ಮೇಲ್ನೋಟಕ್ಕೆ ಮಹಮ್ಮದ್ ನಗರದ ಸಂಘ ಕೂಡ ಕಟ್ಟುನಿಟ್ಟು ಇದ್ದಂತೆ ಕಾಣುವುದಿಲ್ಲ. ಉದಾಹರಣೆಗೆ ಮನೆ ಬಾಡಿಗೆ ಸಂಗ್ರಹಿಸುವ ವಿಚಾರ ಅಥವಾ ನೀರಿನ ಹಂಚಿಕೆ ಕುರಿತ ನಿಯಮ ಪಾಲನೆ ವಿಚಾರವನ್ನು ತೆಗೆದುಕೊಳ್ಳಬಹುದು. ಆದರೆ ಇಲ್ಲಿ ಸಂಘ ಹಿಂದುಳಿದಿದೆ ಎನ್ನುವ ತೀರ್ಮಾನಕ್ಕೆ ಬರುವ ಮುನ್ನ ಕೆಲವು ವಿಚಾರಗಳನ್ನು ಗಮನಿಸಬೇಕಾಗಿದೆ. ಕಟ್ಟು ನಿಟ್ಟಾಗಿ ಜಾರಿ ತರುವುದೆನ್ನುವಾಗ ನಾವು ನಮ್ಮ ಕಲ್ಪನೆಯ ಕಟ್ಟುನಿಟ್ಟಿನ ಮಾನದಂಡದಲ್ಲಿ ಅವರ ವ್ಯವಹಾರವನ್ನು ಅಳೆಯುತ್ತೇವೆ. ಉದಾಹರಣೆಗೆ ರೈತರೊಬ್ಬರು ನೀರು ಹಂಚಿಕೆ ಜಗಳ ಅಧ್ಯಕ್ಷರ ಹತ್ತಿರ ತಂದಾಗ ನಾನು ಒಂದು ವಿಧದ ಜಗಳ ತೀರ್ಮಾನವನ್ನು ಊಹಿಸಿದ್ದೆ. ಅದರ ಪ್ರಕಾರ ತಕರಾರು ಇರುವ ಇಬ್ಬರು ರೈತರನ್ನು ಕರೆಸಿ, ಅವರಿಬ್ಬರು ವಾದಗಳನ್ನು ಕೇಳಿ ಅಥವಾ ತಾನೇ ಹೊಲಗಳಿಗೆ ಕುದ್ದಾಗಿ ಹೋಗಿ ಪರೀಕ್ಷಿಸಿ ಅಧ್ಯಕ್ಷರು ತೀರ್ಮಾನಕ್ಕೆ ಬರುತ್ತಾರೆ ಎಂದು ತಿಳಿದಿದ್ದೆ. ಆದರೆ ಅವರು ಹೋಗಲಿಲ್ಲ. ದಿನ ನಿತ್ಯ ನೋಡುವ ರೈತರ ನಡವಳಿಕೆ ಬಗ್ಗೆ ಅವರಿಗಿರುವ ತಿಳುವಳಿಕೆ, ಜತೆಗೆ ಆ ಸಮಸ್ಯೆ ಖಂಡಿತವಾಗಿಯೂ ವಿಶೇಷ ರೂಪದಲ್ಲ ಮತ್ತು ಅದು ಸುಲಭದಲ್ಲಿ ಪರಿಹಾರವಾಗುತ್ತದೆ ಎನ್ನುವ ವಿಶ್ವಾಸ ಇತ್ಯಾದಿಗಳ ಅಧ್ಯಕ್ಷರು ಹೋಗದಿರಲು ಕಾರಣವೆಂದು ಅವರ ಮಾತುಗಳಿಂದಲೇ ತಿಳಿಯಬಹುದು. ಅದೇ ರೀತಿ ಮನೆ ಬಾಡಿಗೆ ಸಂಗ್ರಹಿಸುವ ವಿಚಾರದಲ್ಲೂ ಸಂಘ ಅದನ್ನು ಅಷ್ಟು ಸಿರೀಯಸ್ ಆಗಿ ತೆಗೆದುಕೊಂಡಿಲ್ಲ. ತೆಗೆದುಕೊಂಡರೆ ಸಂಘ ವಸೂಲು ಮಾಡುತ್ತದೆ. ಇದನ್ನು ಸಂಘದ ಹಿಂದಿನ ಹೋರಾಟಗಳಿಂದ ತಿಳಿಯಬಹುದು. ಜತೆಗೆ ಪ್ರತಿ ಬೆಳೆಗೆ ನಿಗದಿಯಾದ ಲಾವಣಿ ಸಂಗ್ರಹದಲ್ಲೂ ಸಂಘ ತುಂಬಾ ಕಟ್ಟುನಿಟ್ಟಾಗಿದೆ. ವರ್ಷಕ್ಕೆ ಒಬ್ಬ ರೈತನಿಂದ ಎರಡು ಬೆಳೆಗೆ ಎಂಟು ನೂರು ಸಂಗ್ರಹಿಸುವ ಸಂಘಕ್ಕೆ ಹತ್ತು ರೂಪಾಯಿ ಸಂಗ್ರಹಿಸಲು ಸಾಧ್ಯವಿಲ್ಲ ಎಂದು ತೀರ್ಮಾನಿಸುವುದು ಸರಿಯಲ್ಲ.

ಸಮುದಾಯ ಮತ್ತು ಸಹಭಾಗಿತ್ವ ಸಂಬಂಧ ಕುರಿತಂತೆ ಇರುವ ಗ್ರಹಿತಗಳನ್ನು ನೋಡುವ. ಸಮುದಾಯ ಪ್ರಯತ್ನಗಳು ನಮ್ಮಲ್ಲಿ ಅತಿ ಸುಲಭದಲ್ಲಿ ಬೇರೂರಬಹುದು ಎನ್ನುವ ಗ್ರಹಿಕೆ ಇದೆ. ಯಾಕೆಂದರೆ ನಮ್ಮದು ಮೂಲತಃ ಒಂದು ಸಮುದಾಯದ ನೆಲೆಯಲ್ಲಿ ಗುರುತಿಸಿಕೊಳ್ಳುವ ಸಮಾಜ. ಇಲ್ಲಿ ಪಶ್ಚಿಮದಲ್ಲ ಇದ್ದಂತೆ ವ್ಯಕ್ತಿಗಳು ಇಲ್ಲ; ಸಮುದಾಯಗಳು ಮಾತ್ರ ಇರುವುದು. ಈ ಹಿನ್ನೆಲೆಯಲ್ಲಿ ಸಮುದಾಯಗಳನ್ನು ರೂಪಿಸುವ ಮತ್ತು ಆ ಮೂಲಕ ಅವುಗಳನ್ನು ಆಧುನಿಕ ಅವಶ್ಯಕತೆಗಳಿಗೆ ತಯಾರುಗೊಳಿಸುವ ಪ್ರಶ್ನೆಯೇ ಇಲ್ಲ. ಜತೆಗೆ ಇಲ್ಲಿ ಸಮುದಾಯ ಒಂದು ಘರ್ಷಣೆ ಇಲ್ಲದ, ಸಮಸ್ಯೆರಹಿತ ಸ್ಪೇಸ್ ಆಗಿದೆ. ಇಂತಹ ಸಮುದಾಯಗಳು ಸ್ವತಂತ್ರವಾಗಿ ಒಟ್ಟು ಸೇರಿ ತಮ್ಮ ಸಮಸ್ಯೆಗಳಿಗೆ ತಾವೆ ಪರಿಹಾರ ಕಂಡುಕೊಳ್ಳುತ್ತಾರೆ ಎನ್ನುವ ನಂಬಿಕೆ ಇದೆ. ಆದರೆ ಇದು ಸರಿಯಲ್ಲ ಎನ್ನುವುದು ಪಿ.ಕೆ.ಹಳ್ಳಿಯ ಉದಾಹರಣೆಯಿಂದ ಸ್ಪಷ್ಟವಾಗುತ್ತದೆ. ಯುವಕರ ಪ್ರಯತ್ನ ಒಂದು ಹಂತ ತಲುಪದಂತೆ ನೋಡಿಕೊಳ್ಳುವುದರಲ್ಲಿ ಅಲ್ಲಿನ ಜಾತಿ ರಾಜಕೀಯದ ಪಾತ್ರ ತುಂಬಾ ಇದೆ. ಮೇಲ್ನೋಟಕ್ಕೆ ಅಲ್ಲಿಯ ಹಿರಿಯರು ಯುವಕರ ಪ್ರಯತ್ನಗಳಿಗೆ ಸ್ಪಂದಿಸದಿರುವುದು ಗೊತ್ತಾಗುತ್ತದೆ. ಅದರಿಂದಲು ಮುಖ್ಯವಾಗಿ ಅಲ್ಲಿಯ ಜಾತಿ ರಾಜಕೀಯ ಪ್ರಮುಖ ಪಾತ್ರ ವಹಿಸಿದೆ. ಮಂಡಲ ಪಂಚಾಯತ್ ಬರುವ ವರೆಗೂ ಅಲ್ಲಿ ಒಂದಲ್ಲ ಒಂದು ಲಿಂಗಾಯತ ಕುಟುಂಬಗಳು ನಾಯಕತ್ವ ಕೆಳ ಜಾತಿಯವರಿಗೆ ಹೋಗಿದೆ. ಇದನ್ನು ನೇರವಾಗಿ ಪ್ರತಿಭಟಿಸಲು ಸಾಧ್ಯವಿಲ್ಲ. ಆದರೆ ೨೦೦೦ದ ವರೆಗು ಅಲ್ಲಿ ಪಂಚಾಯತ್‌ಗೆ ಚುನಾವಣೆ ನಡೆದಿಲ್ಲ. ಸದಸ್ಯರು ಮತ್ತು ಅಧ್ಯಕ್ಷರ ಅವಿರೋಧ ಆಯ್ಕೆ ನಡೆಯುತ್ತಿತ್ತು. ಊರಿನ ಪ್ರಮುಖರು ಯಾವ ಜಾತಿಯಿಂದ ಯಾರು ಅಭ್ಯರ್ಥಿ ಆಗಬೇಕೆಂದು ನಿರ್ಧರಿಸುತ್ತಾರೆ. ಈ ಕ್ರಮದಲ್ಲಿ ಸಾಂಪ್ರದಾಯಿಕ ನಾಯಕತ್ವ ಪರೋಕ್ಷವಾಗಿ ತನ್ನ ಹಿಡಿತವನ್ನು ಮುಂದುವರಿಸಿದೆ (ಚಂದ್ರ ಪೂಜಾರಿ, ೨೦೦೦). ಲಿಂಗಾಯತರ ನಂತರ ಕುರುಬರು ಮತ್ತು ನಾಯಕರು ಊರಿನ ನಾಯಕತ್ವಕ್ಕೆ ಪ್ರತಿಸ್ಪರ್ಧಿಗಳು. ಅಧಿಕಾರಕ್ಕಾಗಿ ಇವರ ನಡುವೆ ನಡೆಯುವ ಹೋರಾಟ ಅಲ್ಲಿನ ಸಹಭಾಗಿತ್ವವನ್ನು ಹೇಗೆ ಪ್ರಭಾವಿಸಿದೆ ಎನ್ನುವುದನ್ನು ಮೇಲಿನ ವಿವರಣೆ ಸ್ಪಷ್ಟಪಡಿಸುತ್ತದೆ.

ಅಲ್ಲಿನ ವಿವಿಧ ಜಾತಿಗಳು ಮತ್ತು ಅವುಗಳ ನಡುವಿನ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ರಾಜಕೀಯ ಸಂಬಂಧಗಳು ಸಮಾನತೆಯ ನೆಲೆಯಲ್ಲಿ ರೂಪಿತವಾಗಿಲ್ಲ. ಒಂದು ಗುರುತು ಮತ್ತೊಂದರ ಮೇಲೆ ಯಜಮಾನಿಕೆ ಸಾಧಿಸಲು ಪ್ರಯತ್ನಿಸುತ್ತಲೇ ಇರುತ್ತದೆ. ಒಂದು ಗುರುತಿನ ನೆಲೆಯಲ್ಲಿ ಗುರುತಿಸಿಕೊಳ್ಳುವುದೆಂದರೆ ಅದು ಯಾವತ್ತು ಮತ್ತೊಂದು ಗುರುತನ್ನು ದೃಷ್ಟಿಯಲ್ಲಿ ಇಟ್ಟುಕೊಂಡೆ ನಡೆಯುವ ಪ್ರಕ್ರಿಯೆ. ಇದಕ್ಕಾಗಿ ಕೆಲವು ಸಂದರ್ಭಗಳಲ್ಲಿ ಮತ್ತೊಂದನ್ನು ನೆಗೆಟಿವ್ ಆಗಿ ಚಿತ್ರಿಸುವ ಪ್ರಯತ್ನಗಳೂ ಇವೆ. ಮೇಲು ಜಾತಿಯವರು ತಮ್ಮ

ಯಜಮಾನಿಕೆಯನ್ನು ಕೇವಲ ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಮಾತ್ರ ಚಲಾಯಿಸುವುದಿಲ್ಲ. ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರದ ಯಜಮಾನಿಕೆಯ ಮುಂದುವರಿಕೆಗೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಯಜಮಾನಿಕೆ ಕೂಡ ಅಗತ್ಯ. ಅದಕ್ಕಾಗಿ ಕೆಳ ವರ್ಗದವರು ಸಂಪನ್ಮೂಲದಲ್ಲಿ ಮಾತ್ರ ಬಡವರಲ್ಲ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬಡವರೆಂಬ ಚಿತ್ರಣ ಸದಾ ಬಿಂಬಿತವಾಗುತ್ತದೆ. ಅದು ಹರಿಜನರನ್ನು ಹೊಟೇಲಿಗೆ ಸೇರಿಸುವ ಪ್ರಶ್ನೆ ಇರಬಹುದು, ಗುಡಿಗೆ ಪ್ರವೇಶ ನಿರಾಕರಿಸುವ ವಿಚಾರ ಇರಬಹುದು. ಕೆಳ ಜಾತಿಯವರ ಜತೆ ಊಟ, ಪಾನೀಯ ತೆಗೆದುಕೊಳ್ಳುವ ವಿಚಾರ ಇರಬಹುದು, ಜಾತ್ರೆಗಳಲ್ಲಿ ಜಾತಿಗನುಸಾರ ಕೆಲಸ ಕಾರ್ಯಗಳ ಹಂಚುವಿಕೆ ಇರಬಹುದು. ಇಲ್ಲೆಲ್ಲಾ ಸೇರಿಸಿಕೊಳ್ಳುವ ಮತ್ತು ಹೊರಗಿಡುವ ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ. ಹೀಗೆ ಒಂದು ನಿರ್ದಿಷ್ಟ ಜಾತಿಗೆ (ಗುರುತು) ಸೇರಿದ್ದೇನೆ ಎನ್ನುವ ಮೂಲಕ ತನ್ನ ತನ ಸಾಧಿಸಲು ಹೋರಾಟ ಆರಂಭವಾಗುತ್ತದೆ. ಆ ಹೋರಾಟ ಯಾವುದೋ ನಿರ್ವಾತ ವಾತಾವರಣದಲ್ಲಿ ನಡೆಯುವುದಿಲ್ಲ. ಒಂದು ಸಾಮಾಜಿಕ ಪರಿಸರದಲ್ಲಿ ನಡೆಯುತ್ತದೆ. (ಚಂದ್ರ ಪೂಜಾರಿ,೨೦೦೦).

ಮಹಮ್ಮದ್ ನಗರದ ಸಂಘ ಯಶಸ್ಸು ಕಾಣಬೇಕಾದರೆ ಅಲ್ಲಿ ಒಂದೇ ಜಾತಿಗೆ ಸೇರಿದವರು ಇರಬೇಕು ಅಥವಾ ಯಾವುದೋ ಒಂದು ಜಾತಿಯ ಸದಸ್ಯರ ಸಂಖ್ಯೆ ಹೆಚ್ಚಿರಬೇಕು ಎನ್ನುವ ಗುಮಾನಿ ಬರಬಹುದು. ಆದರೆ ವಸ್ತು ಸ್ಥಿತಿ ಆ ರೀತಿ ಇಲ್ಲ. ಇಲ್ಲೂ ವಿವಿಧ ಸಾಮಾಜಿಕ ಹಿನ್ನೆಲಯಿಂದ ಸದಸ್ಯರು ಬಂದಿದ್ದಾರೆ. ೧೯೬೦ರಲ್ಲಿ ಸೊಸೈಟಿ ಆರಂಭವಾದಾಗ ಇದ್ದ ೨೮ ಸದಸ್ಯರ ಸಾಮಾಜಿಕ ಹಿನ್ನೆಲೆ ಇಂತಿದೆ. ೫ ಹರಿಜನರು, ೧೨ ಕುರುಬರು, ೨ ನಾಯಕರು, ೩ ಲಿಂಗಾಯಿತರು, ೧ ಬ್ರಾಹ್ಮಣರು, ಮತ್ತು ೪ ಆಂಧ್ರದವರು. ಅವರಲ್ಲಿ ಕೆಲವರು ಮಧ್ಯದಲ್ಲಿ ಬಿಟ್ಟು ಹೋದರು. ನಂತರ ಕೆಲವು ಹೊಸ ಸದಸ್ಯರು ಬಂದರು. ಅಂತಿಮವಾಗಿ ಇಂದು ಸಂಘದಲ್ಲಿ ೩ ಹರಿಜನ, ೨೨ ಕುರುಬ, ೮ ನಾಯಕ, ೮ ಲಿಂಗಾಯತ, ೪ ಮುಸ್ಲಿಮ, ೬ ಆಂಧ್ರದ, ೨ ಜೈನ ಮತ್ತು ೧ ಬ್ರಾಹ್ಮಣ ಕುಟುಂಬಗಳಿವೆ. ಸದಸ್ಯರ ಸಾಮಾಜಿಕ ಹಿನ್ನಲೆ ವಿಭಿನ್ನವಾಗಿದ್ದರೂ ಕಾರ್ಯಕಾರಿ ಸಮಿತಿ ಸದಸ್ಯರ ಆಯ್ಕೆಯಲ್ಲಿ ಅದು ಅಷ್ಟಾಗಿ ಪ್ರಭಾವ ಬೀರಿಲ್ಲ. ಅದಕ್ಕೆ ಬೇರೆ ಬೇರೆ ವಿವರಣೆಗಳನ್ನು ಕೊಡಬಹುದು. ಮುಖ್ಯವಾಗಿ ಸದಸ್ಯರ ಸಂಖ್ಯೆ ಕಡಿಮೆ ಇರುವುದು ಮತ್ತು ಅವರು ಇತರರಿಂದ ಪ್ರತ್ಯೇಕ ಇರುವುದು ಇತರ ಗ್ರಾಮೀಣ ಪ್ರದೇಶದಲ್ಲಿ ಕಾಣುವ ಜಾತಿ ರಾಜಕೀಯ ಇಲ್ಲಿ ಇರದಿರಲು ಕಾರಣವೆಂದು ಹೇಳಬಹುದು. ಒಂದು ವಿಧದಲ್ಲಿ ಅದು ಸರಿ ಇರಬಹುದು. ಅವರು ತಮ್ಮ ಹುಟ್ಟೂರನ್ನು ಬಿಟ್ಟು ಬಂದವರು. ಇಲ್ಲಿ ಕೂಡ ಸುಮಾರು ಅರ್ಧದಷ್ಟು ಜನ ಕವಳಿಯಲ್ಲೇ ವಾಸವಾಗಿದ್ದಾರೆ. ಕವಳಿ ಹಿಂದಿನ ಯಾವುದೇ ಹಳ್ಳಿಯ ಮುಂದುವರಿಕೆ ಅಲ್ಲ. ಬದಲಿಗೆ ಸೊಸೈಟಿಯವರಿಂದಲೇ ಶುರುವಾದ ಮತ್ತು ಅವರು ಮಾತ್ರ. ಇರುವ ಪುಟ್ಟ ಹಳ್ಳಿ, ಹಳ್ಳಿ ಎನ್ನುವುದು ಸರಿಯಾಗಲಿಕ್ಕಿಲ್ಲ; ಮನೆಗಳ ಗುಂಪು ಎನ್ನುವುದು ಸರಿಯಾಗಬಹುದು. ಮತ್ತೊಂದು ದೃಷ್ಟಿಯಿಂದ ನೋಡಿದರೆ ಇದು ಸರಿಯಾದ ವಿವರಣೆ ಅಲ್ಲ. ಯಾಕೆಂದರೆ ಸದಸ್ಯರ ನಡುವೆ ಎಲ್ಲ ವಿಧದ ಸಾಮಾಜಿಕ ಅಥವಾ ಸಾಂಸ್ಕೃತಿಕ ಸಂಬಂಧಗಳಿಲ್ಲ. ಸದಸ್ಯರೆಲ್ಲ ಒಟ್ಟು ಸೇರುವುದು ವಾರ್ಷಿಕ ಮಹಾಸಭೆಗೆ ಮಾತ್ರ. ಉಳಿದ ಸಂದರ್ಭದಲ್ಲಿ ಅವರ ಮಧ್ಯೆ ಪರಿಚಿತರ ಸಂಬಂಧ ಮಾತ್ರ ಇದೆ. ಹೀಗಾಗಿ ಸಾಮಾಜಿಕ ಅವಶ್ಯಕತೆಗಳಿಗಾಗಿ ಸಂಘದ ಸದಸ್ಯರು ಸುತ್ತಮುತ್ತಲಿನ ಹಳ್ಳಿಗಳಲ್ಲಿರುವ ತಮ್ಮ ಜಾತಿಯ ಜನರ ಜತೆ ಸಂಬಂಧ ಇಟ್ಟುಕೊಳ್ಳುವುದು ಅನಿವಾರ್ಯವಾಗಿದೆ. ಆ ಸಂಬಂಧಗಳ ಪ್ರಭಾವದಿಂದ ಅವರು ಜಾತಿ ರಾಜಕೀಯ ಮಾಡಬಹುದಿತ್ತು. ಜತೆಗೆ ಸೊಸೈಟಿಯ ಬಹುತೇಕ ಮಂದಿ (೩೫ ಸದಸ್ಯರು) ಶಿವಪುರದಲ್ಲೇ ಮನೆ ಮಾಡಿದ್ದಾರೆ. ಅವರು ಆ ಹಳ್ಳಿಯ ಭಾಗವಾಗಿದ್ದಾರೆ. ಅಲ್ಲಿ ಎಲ್ಲ ಹಳ್ಳಿಗಳಲ್ಲಿ ಇರುವಂತೆ ಜಾತಿ ರಾಜಕೀಯ ಇದೆ. ಅದರ ಪ್ರಭಾವ ಸಂಘದ ವ್ಯವಹಾರದಲ್ಲಿ ಆಗಬೇಕಿತ್ತು. ಆದರೆ ಆಗಿಲ್ಲ. ಇದರ ಅರ್ಥ ಸಂಘದ ವ್ಯವಹಾರದಲ್ಲಿ ಯಾವತ್ತು ರಾಜಕೀಯ ಇರಲಿಲ್ಲವೆಂದಲ್ಲ. ಹಲವಾರು ದಶಕಗಳ ಇತಿಹಾಸ ಇರುವ ಸಂಘ ಸಾಕಷ್ಟು ಪ್ರಯೋಗಗಳನ್ನು ಮಾಡಿದೆ. ಬೇಕಾದಷ್ಟು ಸಾರಿ ಜಾತಿ ಅಂಶ ಬಂದಿದೆ ಮತ್ತು ಅದರಿಂದ ಸಾಕಷ್ಟು ಕೈ ಸುಟ್ಟುಕೊಂಡಿದ್ದಾರೆ. ಆದುದರಿಂದಲೇ ಇಂದು ಒಬ್ಬ ವ್ಯಕ್ತಿ ಆಡಳಿತ ಮಂಡಳಿಯ ಸದಸ್ಯನಾಗಬೇಕಾದರೆ ಆತನ ಸಾಮಾಜಿಕ ಹಿನ್ನೆಲೆಗಿಂತ ಆತನ ಪ್ರಮಾಣಿಕತೆ ಮತ್ತು ಸಂಘದ ವ್ಯವಹಾರದ ಬಗ್ಗೆ ಆತನ ತಿಳುವಳಿಕೆ ಮುಖ್ಯವಾಗುತ್ತದೆ.

ಹಳ್ಳಿಯ ವಿವಿಧ ಸಮುದಾಯಗಳ ಸಮುದಾಯತ್ವವನ್ನು ಪ್ರಭಾವಿಸುವ ಮತ್ತೊಂದು ಅಂಶ ಸದಸ್ಯರ ಭೂ ಹಿಡುವಳಿ. ಪಿ.ಕೆ. ಹಳ್ಳಿಯಲ್ಲಿನ ಭೂ ಹಿಡುವಳಿ ತುಂಬ ಅಸಮಾನವಾಗಿದೆ. ಲಿಂಗಾಯತರು ಪ್ರಮುಖ ಭೂಮಾಲಿಕರು. ಇತರರಿಗೂ ಜಮೀನು ಇದೆ. ಆದರೆ ಅದು ಕಡಿಮೆ

ಪ್ರಮಾಣದಲ್ಲಿ. ಮಹಮ್ಮದ್ ನಗರದಲ್ಲಿ ಎಲ್ಲ ಭೂಮಿ ಸಂಘಕ್ಕೆ ಸೇರಿದೆ. ಬೇಸಾಯಕ್ಕಾಗಿ ಸದಸ್ಯರಿಗೆ ಕಬ್ಜಾ ಕೊಡಲಾಗಿದೆ. ಸದಸ್ಯರು ಸಾಮೂಹಿಕವಾಗಿ ಜಮೀನಿನ ಮಾಲಿಕರು; ಆದರೆ ವ್ಯಕ್ತಿಗತವಾಗಿ ಅಲ್ಲ. ಇಷ್ಟು ಕಾಲ ಮುಂದುವರಿಯುವಲ್ಲಿ ಈ ಅಂಶ ಮುಖ್ಯ ಎಂದು ವಾದಿಸಬಹುದು. ಆದರೆ ಈ ಸಂಘ ಸ್ಥಾಪನೆಯಾದ ಕಾಲದಲ್ಲೇ ಸುತ್ತಮುತ್ತ ಹಳ್ಳಿಗಳಲ್ಲಿ ಇದೇ ರೀತಿಯ ಸಹಕಾರಿ ಸಾಮೂಹಿಕ ಬೇಸಾಯ ಸಂಘಗಳು ಇದ್ದವು. ಅವುಗಳು ಯಾವೂ ಕೂಡ ಸಹಕಾರಿ ಸಂಘಗಳಾಗಿ ಉಳಿದಿಲ್ಲ. ಪ್ರತಿಯೊಂದರಲ್ಲೂ ಸದಸ್ಯರು ಸಂಘವನ್ನು ಮುಚ್ಚಿ ಭೂಮಿಯನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡಿದ್ದಾರೆ. ಅಷ್ಟಾಗ್ಯೂ ಒಂದೇ ಪ್ರಮಾಣದ ಹಿಡುವಳಿ ಪ್ರಭಾವ ಬೀರಿಲ್ಲವೆಂದು ವಾದಿಸುವುದು ಸರಿಯಲ್ಲ. ರೈತರ ದಿನ ನಿತ್ಯದ ಸಂಬಂಧವನ್ನು ಪ್ರಭಾವಿಸುವ ಹಲವಾರು ಸಂಗತಿಗಳು ಭೂ ಹಿಡುವಳಿ ಮೇಲೆ ನಿಂತಿದೆ. ಯಜಮಾನಿಕೆ, ಶೋಷಣೆ, ಇತ್ಯಾದಿಗಳು ನಿಂತಿರುವುದೇ ಭೂ ಹಿಡುವಳಿ ಮೇಲೆ. ಆದುದರಿಂದ ಒಂದೇ ಪ್ರಮಾಣ ಭೂಮಿ ಇರುವುದು ಸಂಘದ ಯಶಸ್ಸಿಗೆ ಬಹು ಮುಖ್ಯ ಪೂರಕ ಅಂಶವೆಂದು ಪರಿಗಣಿಸಬಹುದು. ಕೊನೆಯದಾಗಿ ಹಲವಾರು ವರ್ಷಗಳ ಸಹಕಾರದ ಪ್ರಯೋಗ ಸಮುದಾಯದ ಸಹಭಾಗಿತ್ವನ್ನು ಪ್ರಭಾವಿಸುತ್ತದೆ. ಪಿ.ಕೆ. ಹಳ್ಳಿಯಲ್ಲಿ ಸಂಘ ಆರಂಭದಿಂದಲೇ ಕುಂಟುತ್ತ ತೆವಳುತ್ತ ಸಾಗಿತ್ತು. ಅದು ಬೆಳೆದು ಸದಸ್ಯರ ಸಮಸ್ಯೆಗಳನ್ನು ಪರಿಹರಿಸುವ ದಿನವೇ ಬರಲಿಲ್ಲ. ಇದು ಸಂಘದ ಮೇಲೆ ಊರಿನವರ ಮತ್ತು ಸದಸ್ಯರ ಭರವಸೆಯನ್ನು ಕಡಿಮೆ ಮಾಡಿದೆ. ಇದಕ್ಕೆ ಹೋಲಿಸಿದರೆ ಮಹಮ್ಮದ್ ನಗರದಲ್ಲಿ ಸಂಘಟಿತವಾಗಿ ದುಡಿಯುವುದರ ಮಹತ್ವ ಸದಸ್ಯರೆಲ್ಲರಿಗೂ ಈಗ ಅರ್ಥವಾಗಿದೆ. ಹಿಂದೆ ಈ ಸಂಘದಲ್ಲೂ ಬೇಕಾದಷ್ಟು ಸಮಸ್ಯೆಗಳಿದ್ದವು. ಸಮಸ್ಯರಿಗೆ ಸಂಘಟಿತ ಪ್ರಯತ್ನದಿಂದ ಸ್ವಂತ ಪ್ರಯತ್ನದ ಮೇಲೆ ಭರವಸೆ ಇತ್ತು. ಆದುದರಿಂದಲೇ ಕೆಲವು ಸದಸ್ಯರು ಸಂಘ ಬಿಟ್ಟು ಹೋಗಿರುವುದು. ಆದರೆ ಹಲವಾರು ವರ್ಷಗಳ ಸಂಘಟಿತ ಬದುಕು ಅವರಿಗೆ ಹಲವಾರು ಸಾಧ್ಯತೆಗಲನ್ನು ತೋರಿಸಿದೆ. ಇಂದು ಯಾರು ಕೂಡ ಸದಸ್ಯತನ ಬಿಡುವ ಬಗ್ಗೆ ಮಾತಾಡುತ್ತಿಲ್ಲ. ಅಂದರೆ ಸಂಘಟಿತ ಬದುಕಿನಿಂದ ಲಾಭ ಇದೆ ಎಂದು ಸಾಧಿತವಾದರೆ ಜನರು ಒಟ್ಟಿಗಿರಲು ಇಷ್ಟಪಡುತ್ತಾರೆ.

ಸುಮಾರು ಎಂಬತ್ತರವರೆಗೆ ನಮ್ಮಲ್ಲಿ ನೇತೃತ್ವದ ಅಭಿವೃದ್ಧಿ ಪರ ಚರ್ಚಿಸುವ, ಬರೆಯುವ ಟ್ರೆಂಡ್ ಇತ್ತು. ಆವಾಗ ಅದನ್ನು ಬಿಟ್ಟು ಬೇರೆ ವಿಷಯಗಳ ಚರ್ಚೆಗಳು ಗಂಭೀರವಾಗಿ ಪರಿಗಣಿಸಲ್ಪಡುತ್ತಿರಲಿಲ್ಲ. ಆ ಟ್ರೆಂಡ್ ಎಂಬತ್ತರ ಅರ್ಧಭಾಗದಿಂದಲೇ ತನ್ನ ಮಹತ್ವ ಕಳಕೊಂಡು ತೊಂಬತ್ತರ ವೇಳೆಗೆ ಸಂಪೂರ್ಣ ಅವಾಸ್ತವ ಎನ್ನುವ ಹಂತಕ್ಕೆ ತಲುಪಿದೆ. ಈಗಂತೂ ಪ್ರಭುತ್ವ ನೇತೃತ್ವದ ಅಭಿವೃದ್ಧಿಯನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಹೀಗೆ ಎಲ್ಲವೂ ಒಂದು ಎಕ್ಸ್‌ಟ್ರೀಮ್ ಫಾರ್ಮ್‌ಲ್ಲೇ ಅಭಿವ್ಯಕ್ತಗೊಳ್ಳುವುದು ನಮ್ಮ ಬಹು ದೊಡ್ಡ ಸಮಸ್ಯೆ. ವಾಸ್ತವದಲ್ಲಿ ಆ ರೀತಿ ಇರಲು ಸಾಧ್ಯವಿಲ್ಲ. ಸಂಪೂರ್ಣ ಪ್ರಭುತ್ವದ ನೇತೃತ್ವದ ಅಭಿವೃದ್ಧಿ ಹೇಗೆ ಸಾಧ್ಯವಿಲ್ಲವೇ ಅದೇ ಪ್ರಭುತ್ವವನ್ನು ಪೂರ್ಣವಾಗಿ ಹೊರಗಿಟ್ಟು ಅಭಿವೃದ್ಧಿಯನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಸಹಭಾಗಿತ್ವಕ್ಕಂತೂ ಇದು ತುಂಬ ಅಗತ್ಯ. ಸಮಾಜದ ಕೆಳವರ್ಗಗಳು ತಮ್ಮ ಆಸಕ್ತಿಗಳನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಕರಿಸುವುದು ಸಹಭಾಗಿತ್ವದ ಮುಖ್ಯ ಲಕ್ಷಣ. ಅದು ಸಾಧ್ಯವಾಗಬೇಕಾದರೆ ಅದಕ್ಕೆ ಪೂರಕವಾಗುವಂತಹ ಪರಿಸರವನ್ನು, ಸಾಂಘಿಕ ರಚನೆಗಳನ್ನು, ಮೌಲ್ಯಗಳನ್ನು ರೂಪಿಸಿ ಪ್ರೋತ್ಸಾಹಿಸಲು ಪ್ರಭುತ್ವ ಅಗತ್ಯ. ಇನ್ನು ಸಮುದಾಯವನ್ನು ಸಂಘರ್ಷವಿಲ್ಲದ, ತಾರತಮ್ಯ ಇಲ್ಲದ ಒಂದು ಸ್ಪೇಸ್ ಆಗಿ ಉಹಿಸಿಕೊಳ್ಳುವುದು ಅವಾಸ್ತವ. ಸಹಭಾಗಿತ್ವಕ್ಕೆ ತುಂಬ ಅಗತ್ಯವಿರುವ ಅಂಶಗಳೆಂದರೆ ಸಮಾನತೆ ಮತ್ತು ಸ್ವಾತಂತ್ರ್ಯ. ಆದರೆ ಚಾರಿತ್ರಿಕವಾಗಿ ರೂಪುಗೊಂಡ ನಮ್ಮ ಸಮುದಾಯಗಳಲ್ಲಿ ಆ ಗುಣಗಳು ತುಂಬ ಕಡಿಮೆ ಇವೆ. ವಾಸ್ತವ ಹೀಗಿದ್ದರೂ ಮೇಲಿನ ಗುಣಗಳನ್ನು ನಮ್ಮ ಸಮುದಾಯಗಳಿಗೆ ಹೇರಲಾಗುತ್ತಿದೆ. ಇದು ನಮ್ಮ ಸಮುದಾಯಗಳ ಸರಿಯಾದ ಕಲ್ಪನೆ ಇಲ್ಲದವನು ಮಾತ್ರ ಮಾಡಲು ಸಾಧ್ಯ. ಒಂದು ವಿಧದಲ್ಲಿ ಈ ಅಸಮಾನ ವ್ಯವಸ್ಥೆಯೇ ಪ್ರಭುತ್ವದ ಇರುವಿಕೆಯನ್ನು ಹೆಚ್ಚು ಹೆಚ್ಚಾಗಿ ಬಯಸುವಂತೆ ಮಾಡುತ್ತದೆ.

**ಪರಾಮರ್ಶನ ಬರಹಗಳು**


೧. ರಜನಿ ಕೊಥಾರಿ, "ಅಂಡರ್ ಗ್ಲೋಬಲೈಸೇಶನ್ ವಿಲ್ ದಿ ನೇಶನ್ ಸ್ಟೇಟ್ ಹೋಲ್ಡ್," *ಎಕಾನಮಿಕ್ ಆಂಡ್ ಪೊಲಿಟಿಲ್ ವೀಕ್ಲಿ,* ಜುಲೈ ೧,೧೯೯೫, ಪು. ೧೫೯೩-೧೬೦೩

೨. ಡಿ.ಎಲ್.ಸೇಥ್, "ಗ್ರಾಸ್ ರೂಟ್ಸ್ ಇನಿಶೇಟಿವ್ಸ್ ಇನ್ ಇಂಡಿಯ," *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ,*ವಾ.೧೯, ೧೯೮೪, ಪು. ೬೧೫-೨೬.

೩. ಪಾರ್ಥ ಚಟರ್ಜಿ, "ಕಮ್ಯುನಿಟಿಸ್ ಆಫ್ ದಿ ಈಸ್ಟ್," *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ,*ವಾ.೩೩, ಫೆಬ್ರವರಿ, ೭, ೧೯೯೮, ಪು. ೨೭೭-೨೮೨.

೪. ದಾಂಟೆವಾಲ, ಸೇಥಿ, ಆಂಡ್ ಮಿಸಾರಿಯ (ಸಂ), *ಸೋಶಿಯಲ್ ಚೇಂಜ್ ಥ್ರೋ ವಾಲೆಂಟರಿ ಆಕ್ಷನ್,*ನ್ಯೂಡೆಲ್ಲಿ; ಸೇಜ್,೧೯೯೮.

೫. ಸಹಕಾರಿ ಸಂಘಗಳ ಉಪ ನಿಬಂಧಕರ ಪತ್ರ ಸಂಖ್ಯೆ ವಿ-೯:೧೦೩:೮೬-೮೭, ರಾಯಚೂರು, ವಿಷಯ: ಶ್ರೀ ಶಿವಪ್ಪ ಅವರಿಂದ ಮಹಮ್ಮದ್ ನಗರ ಜೋಯಿಂಟ್ ಫಾರ್ಮಿಂಗ್.ಕೋ ಸೊಸೈಟಿ ಆದ ಏರು ಪೇರು ಬಗ್ಗೆ.

೬. ಮಹಮ್ಮದ್ ನಗರ ಸಹಕಾರಿ ಬೇಸಾಯ ಸಂಘ, ತಿದ್ದುಪಡಿಯಾದ ಬೈಲಾ, ೧೯೮೨.

೭. ಮಹಮ್ಮದ್ ನಗರ ಸಹಕಾರಿ ಸಾಮೂಹಿಕ ಬೇಸಾಯ ಸಂಘ ತಮ್ಮ ಭೂಮಿಯನ್ನು ಸಲಾರ್ ಜಂಗ್ ಶುಗರ್ ಮಿಲ್‌ನವರಿಂದ ಮರುವಶಪಡಿಸಿಕೊಳ್ಳಲು ಕೋರಿ ತಹಶೀಲ್ದಾರರಗಿಎ ಬರಕೊಂಡ ಪತ್ರ, ೧೯೮೫.

೮. ಮಹಮ್ಮದ್ ನಗರ ಸಹಕಾರಿ ಸಾಮೂಹಿಕ ಬೇಸಾಯ ಸಂಘದ ಕಾರ್ಯಕಾರಿ ಸಮಿತಿ ಸಭೆ ವರದಿ, ೧೯೬೩-೬೪.

೯. ಸಂಘದ ಪತ್ರ, ಸಂಘದ ವ್ಯವಹಾರ ಕುರಿತು ವಿವರಣೆ ನೀಡಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಬರೆದ ಪತ್ರ, ೧೯೮೭.

೧೦. ಉಪ ನಿಬಂಧಕರು, ೨೦-೨-೮೩ ರಿಂದ ೨೭-೯-೮೩ರ ವರೆಗೆ ಮಾಡಿದ ಪರಿಶೀಲನಾ ವರದಿ, ಕೊಪ್ಪಳ, ೧೯೮೩.

೧೧. ಗ್ರಾಮ ಪಂಚಾಯತ್ ಕಛೇರಿ, ಮನೆ ತೆರಿಗೆ ಸಂಗ್ರಹ ರಿಜಿಸ್ಟರ್ -೧೯೯೯-೨೦೦೦, ಪಾಪಿನಾಯಕನಹಳ್ಳಿ; ಪಂಚಾಯತ್ ಕಾರ್ಯದರ್ಶಿ, ೧೯೯೯.

೧೨. ಅರುಣೋದಯ, ರಿಪ್ರೊಡಕ್ಟಿವ್ ಆಂಡ್ ಚೈಲ್ಡ್ ಹೆಲ್ತ್ ಕೇರ್ ಸಮೀಕ್ಷೆ (ಆರ್.ಸಿ.ಹೆಚ್.ಸಮೀಕ್ಷೆ), ಪಾಪಿನಾಯಕ ಹಳ್ಳಿ; ಪೊಯಿರಾಡ, ೧೯೯೯.

೧೩. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಷನ್, ಡಿಸ್ಟ್ರಿಕ್ಟ್ ಸೆನ್ಸಸ್ ಹೇಂಡ್ ಬುಕ್ – ಬಳ್ಳಾರಿ ಡಿಸ್ಟ್ರಿಕ್ಟ್, ಬೆಂಗಳೂರು: ಗವರ್ನಮೆಂಟ್ ಆಫ಼ ಕರ್ನಾಟಕ, ೧೯೯೧.

೧೪. ಚಂದ್ರ ಪೂಜಾರಿ, *ದೇಶಿಯತೆಯ ನೆರಳಲ್ಲಿ ವಿಕೇಂದ್ರಿಕರಣ,* ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೦.

## ಸಹಭಾಗಿತ್ವ ಅಭಿವೃದ್ಧಿ – ಕೆಲವು ತಾತ್ವಿಕ ಪ್ರಶ್ನೆಗಳು

### (೧)

ವರ್ತಮಾನದಲ್ಲಿ ಸುದ್ಧಿಯಲ್ಲಿರುವ ಅಭಿವೃದ್ಧಿಯ ಮತ್ತೊಂದು ಮಾದರಿ ಸಹಭಾಗಿತ್ವ ಅಥವಾ ಜನರ ಪಾಲುಗೊಳ್ಳವಿಕೆ ಆಧಾರಿತ ಅಭಿವೃದ್ಧಿ. ದಿನ ನಿತ್ಯದ ಮಾಧ್ಯಮಗಳಲ್ಲಿ ಒಂದಲ್ಲ ಒಂದು ಕ್ಷೇತ್ರದಲ್ಲಿ ಜನರ ಸಹಭಾಗಿತ್ವದಿಂದ ಆದ ಮತ್ತು ಆಗುತ್ತಿರುವ ಕ್ರಾಂತಿಕಾರಕ ಬದಲಾವಣೆಗಳು ಸುದ್ಧಿ ಬರುತ್ತಲೇ ಇದೆ. ಶಿಕ್ಷಣದಲ್ಲಿ, ಆರೋಗ್ಯ ಕ್ಷೇತ್ರದಲ್ಲಿ, ನೀರಾವರಿ ನಿರ್ವಹಣೆಯಲ್ಲಿ, ಅರಣ್ಯ ಸರಂಕ್ಷಣೆಯಲ್ಲಿ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಜನರ ಪಾಲ್ಗೊಳ್ಳುವಿಕೆಯ ಕುರಿತು ಪ್ರಚಾರವಿದೆ. ಸಹಭಾಗಿತ್ವ ಮಾದರಿ ಅಭಿವೃದ್ಧಿ ಎಂದರೇನು? ಇದು ತುಂಬ ಸರಳ ವಿಚಾರ. ಜನರ ಬೇಕು ಬೇಡಗಳ ಕುರಿತು ಅವರೇ ನಿರ್ಧಾರ ತೆಗೆದುಕೊಂಡು ಅದರ ಪೂರೈಕೆಗೆ ಅಗತ್ಯವಿರುವ ಯೋಜನೆಗಳನ್ನು ಅವರೇ ಮಾಡಿ ಅದನ್ನು ಕಾರ್ಯರೂಪಕ್ಕೆ ತರುವ ಅಭಿವೃದ್ಧಿಯ ಹೊಸ ಪರಿಕಲ್ಪನೆಯೇ ಸಹಭಾಗಿತ್ವ ಅಥವಾ ಜನರ ಪಾಲುಗೊಳ್ಳುವಿಕೆಯಿಂದ ಸಾಧ್ಯವಾಗುವ ಅಭಿವೃದ್ಧಿ. ಇದು ಹೊಸ ಪರಿಕಲ್ಪನೆಯಾದರೆ ಈಗಾಗಲೇ ಇರುವ ಅಭಿವೃದ್ಧಿಯ ಪರಿಕಲ್ಪನೆಯೇನು? ಈಗ ಅಭಿವೃದ್ಧಿ

ಆಗುವವರು ಮತ್ತು ಅಭಿವೃದ್ಧಿ ಮಾಡುವವರು ಎಂಬ ಎರಡು ವರ್ಗವಿದೆ. ಅಭಿವೃದ್ಧಿ ಅಂದರೇನು? ಅದನ್ನು ಹೇಗೆ ಸಾಧಿಸಬಹುದು? ಯಾವ ಯೋಜನೆಗಳು ಯಾಗಿಗೆ ಸೂಕ್ತ? ಆ ಯೋಜನೆಗಳಲ್ಲಿ ವಿನಿಯೋಜಿಸಬೇಕಾದ ಸಂಪನ್ಮೂಲವೆಷ್ಟು? ಇತ್ಯಾದಿ ಕುರಿತ ನಿರ್ಧಾರವನ್ನು ಅಭಿವೃದ್ಧಿ ಮಾಡುವವರು ಅಭಿವೃದ್ಧಿ ಆಗಬೇಕಾದವರ ಪರವಾಗಿ ತೆಗೆದು ಕೊಳ್ಳುತ್ತಾರೆ. ಇಲ್ಲಿ ಅಭಿವೃದ್ಧಿ ಆಗುವವರು ಒಂದು ಟಾರ್ಗೆಟ್ ಗುಂಪಾಗಿ ಪರಿಗಣಿಸಲ್ಪಡುತ್ತಾರೆ. ಅವರ ಅವಶ್ಯಕತೆಗಳೇನು ಅಥವಾ ಅವರ ಪ್ರಯೋರಿಟಿಗಳೇನು? ಎಂದು ಕೇಳುವ ಗೋಜಿಗೆ ಹೋಗುವುದಿಲ್ಲ. ಅವುಗಳನ್ನು ಅಭಿವೃದ್ಧಿ ಮಾಡುವವರು ನಿರ್ಧರಿಸಿ ಯೋಜನೆ ಗಳನ್ನು ಜಾರಿ ತರುತ್ತಾರೆ. ಬಡವರ ಕಲ್ಯಾಣಕ್ಕಾಗಿರುವ ಬಹುತೇಕ ಕಾರ್ಯಕ್ರಮಗಳು ಇದೇ ಕ್ರಮದಲ್ಲಿ ರೂಪುಗೊಳ್ಳುತ್ತವೆ ಮತ್ತು ಜಾರಿಗೊಳ್ಳುತ್ತವೆ. ಆದರೆ ಸಹಭಾಗಿತ್ವದ ತಾತ್ವಿಕತೆಗೆ ಅನುಸಾರ ನಡೆಯುವ ಅಭಿವೃದ್ಧಿಯಲ್ಲಿ ಈ ಸಮಸ್ಯೆ ಇಲ್ಲ. ಜನರು ಅವರ ಆದ್ಯತೆಗಳನ್ನು ಅವರೇ ಗುರುತಿಸುತ್ತಾರೆ. ಜತೆಗೆ ಅವುಗಳ ಈಡೇರಿಕೆಗೆ ಪೂರಕವಾದ ಯೋಜನೆಗಳನ್ನು ಕನ್‌ಸೀವ್ ಮಾಡಿ ಕಾರ್ಯರೂಪಕ್ಕೆ ತರುವುದು ಕೂಡ ಅವರ ಸಹಭಾಗಿತ್ವದ ಅಂಗವಾಗಿರುತ್ತದೆ. ಈ ಅಧ್ಯಾಯದಲ್ಲಿ ಸಹಭಾಗಿತ್ವ ಅಭಿವೃದ್ಧಿಯ ತಾತ್ವಿಕ ಹಿನ್ನೆಲೆಯನ್ನು ಪರಿಚಯಿಸುವ ಪ್ರಯತ್ನವನ್ನು ಮಾಡಿದ್ದೇನೆ. ಹಿಂದೆ ಯಾವ ಯಾವ ಅಂಶಗಳು ಅಭಿವೃದ್ಧಿಯ ಮಿಸ್ಸಿಂಗ್ ಲಿಂಕ್ ಎಗಿ ಕೆಲಸ ಮಾಡಿವೆ? ಸೋಶಿಯಲ್ ಕ್ಯಾಪಿಟಲ್ ಇಂದು ಹೇಗೆ? ಮತ್ತು ಯಾಕೆ? ಹೊಸ ಮಿಸ್ಸಿಂಗ್ ಲಿಂಕ್ ಆಗಿದೆ, ಸೋಶಿಯಲ್ ಕ್ಯಾಪಿಟಲ್‌ನ್ನು ಹೇಗೆ ಸಹಭಾಗಿತ್ವದ ಅಡಿಪಾಯವೆಂದು ಮುಂಚೂಣಿಗೆ ತರಲಾಗುತ್ತಿದೆ? ಸಮುದಾಯವಾದ ಮತ್ತು ಪರಿಸರವಾದ ಹೇಗೆ ಸಹಭಾಗಿತ್ವ ಅಭಿವೃದ್ಧಿಗೆ ಪೂರಕವಾದ ವಾತಾವರಣ ಸೃಷ್ಟಿಸಿದೆ? ನಮ್ಮಂತಹ ಬಡದೇಶದಲ್ಲಿ ಸೋಶಿಯಲ್ ಕ್ಯಾಪಿಟಲ್‌ನ ಅನ್ವಯಿಕೆ ಹೇಗಿರಬಹುದು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸಲು ಈ ಅಧ್ಯಾಯದಲ್ಲಿ ಪ್ರಯತ್ನಿಸಿದ್ದೇನೆ

**ಅಭಿವೃದ್ಧಿಯ ಮಿಸ್ಸಿಂಗ್ ಲಿಂಕ್**

ಸಹಭಾಗಿತ್ವ ಅಭಿವೃದ್ಧಿ ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಇಷ್ಟೊಂದು ಪ್ರಚಾರ ಪಡೆಯಲು ಕಾರಣವೇನು? ಇದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಅಭಿವೃದ್ಧಿಯ ಮಿಸ್ಸಿಂಗ್ ಲಿಂಕ್‌ಗಳ ಚರ್ಚೆಯ ಕಿರು ಪರಿಚಯ ಅಗತ್ಯವಿದೆ. ಆರಂಭದಲ್ಲಿ ಬಂಡವಾಳ ಮತ್ತು ತಂತ್ರಜ್ಞಾನದ ಕೊರತೆ ಅಭಿವೃದ್ಧಿಯ ಮುಖ್ಯ ಮಿಸ್ಸಿಂಗ್ ಲಿಂಕ್ ಆಗಿತ್ತು (ಹರ್ಶ್‌ಮನ್ ೧೯೫೮). ಹಾಗೆಂದು ಸಹಾಯ ಧನ ಮತ್ತು ಸಾಲದ ರೂಪದಲ್ಲಿ ಒಂದು ಕಡೆಯಿಂದ ಪರದೇಶಿ ಬಂಡವಾಳ ಬಂತು. ಹಾಗೆ ಬಂದ ಬಂಡವಾಳದಲ್ಲಿ ಸ್ವಲ್ಪ ಭಾಗ ಪಶ್ಚಿಮದ ತಂತ್ರಜ್ಞಾನವನ್ನು ಖರೀದಿಗಾಗಿ ಎಲ್ಲಿಂದ ಬಂತೋ ಅಲ್ಲಿಗೆ ಸೇರಿದ ಉದಾಹರಣೆಗಳೂ ಇವೆ. ಅದರ ಮಧ್ಯೆ ಕೂಡ ಹಳ್ಳಿಯನ್ನು ತಾಲ್ಲೂಕು ಕೇಂದ್ರಕ್ಕೆ ತಾಲ್ಲೂಕನ್ನು ಜಿಲ್ಲಾ ಕೇಂದ್ರಕ್ಕೆ, ಜಿಲ್ಲೆಯನ್ನು ರಾಜ್ಯ ಕೇಂದ್ರಕ್ಕೆ ಮತ್ತು ರಾಜ್ಯವನ್ನು ದೇಶದ ಕೇಂದ್ರಕ್ಕೆ ಜೋಡಿಸುವ ವ್ಯವಸ್ಥೆ ಸಾಧ್ಯವಾಯಿತು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಆಧುನೀಕರಣಕ್ಕೆ ಅಥವಾ ಬಂಡವಾಳದ ವಿಸ್ತರಣೆಗೆ ಅಗತ್ಯವಿರುವ ಮೇಟರಿಯಲ್ ಹಾಗೂ ಇನ್‌ಸ್ಟಿಟ್ಯುಶನಲ್ ಇನ್‌ಫ್ರಸ್ಟ್ರಕ್ಚರ್‌ಗಳನ್ನು ರೂಪಿಸಲು ಅದು ನೆರವಾಯಿತು. ಈ ಪ್ರಕ್ರಿಯೆ ಹಲವಾರು ದಶಖಗಳವರೆಗೆ ನಡೆಯಿತು. ಆದರೂ ಬಡದೇಶಗಳ ಕೆಳ ವರ್ಗದವರ ಸ್ಥಿತಿ ವಿಶೇಷ ಸುಧಾರಣೆಯಾಗಲಿಲ್ಲ. ಆದುದರಿಂದ ಅಭಿವೃದ್ಧಿಯ ಹೊಸ ಮಿಸ್ಸಿಂಗ್ ಲಿಂಕ್‌ಗೆ ಹುಡುಕಾಟ ಶುರುವಾಯಿತು. ಹಾಗೆ ಎಪ್ಪತ್ತರ ದಶಕದಲ್ಲಿ ಬಂಡವಾಳ ಮತ್ತು ತಂತ್ರಜ್ಞಾನದ ಬದಲು ಉದ್ಯಮಶೀಲತೆ ಅಭಿವೃದ್ಧಿಯ ಹೊಸ ಮಿಸ್ಸಿಂಗ್ ಲಿಂಕ್ ಆಯಿತು (ಶಂಪೀಟರ್ ೧೯೩೪). ಹೊಸ ಥಿಸಿಸ್ ಪ್ರಕಾರ ಬಡದೇಶಗಳಲ್ಲಿ ಮುಖ್ಯ ಕೊರತೆಯೆಂದರೆ ಬಂಡವಾಳ ಮತ್ತು ತಂತ್ರಜ್ಞಾನ. ಆದರೆ ಒಂದು ವಿಚಾರದಲ್ಲಿ ಮಾತ್ರ ಬಡದೇಶಗಳು ಶ್ರೀಮಂತವಾಗಿವೆ. ಅದೇನೆಂದರೆ ಅವರಲ್ಲಿನ ಮಾನವ ಸಂಪತ್ತು. ಬಡದೇಶಗಳಲ್ಲಿ ಧಾರಾಳವಾಗಿ ಇರುವುದೆಂದರೆ ಜನಸಂಖ್ಯೆ. ಅದನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರೆ ಅಭಿವೃದ್ಧಿ ಸಾಧ್ಯ ಎಂಬ ಹೊಸ ಥಿಯರಿಗಳು ಬರಲು ಆರಂಭವಾದವು. ಅವುಗಳಲ್ಲಿ ಉದ್ಯಮಶೀಲತೆಗೆ ಸಂಬಂಧಿಸಿದ ಥಿಯರಿಗಳು ಮುಖ್ಯ ಉದಾಹರಣೆಗೆ ಮೆಕ್‌ಲೇಂಡ್‌ನ ಎಚೀವ್‌ಮೆಂಟ್ ಥಿಯರಿ (ಮೆಕ್‌ಲೇಂಡ್ ೧೯೬೧). ಇದರ ಪ್ರಕಾರ ಉದ್ಯಮಶೀಲತೆ ಹೆಚ್ಚು ಇರುವ ದೇಶಗಳು ಅಭಿವೃದ್ಧಿ ಹೊಂದಿವೆ; ಕಡಿಮೆ ಇರುವ ದೇಶಗಳು ಬಡದೇಶಗಳಾಗಿಯೇ ಉಳಿದಿವೆ. ಹಾಗೆಂದು ಬಡದೇಶಗಳು ನಿರಾಶರಾಗುವ ಅಗತ್ಯವಿಲ್ಲ. ಯಾಕೆಂದರೆ ಉದ್ಯಮಶೀಲತೆಯ ಗುಣಗಳನ್ನು ಪಟ್ಟಿ ಮಾಡಬಹುದು. ಜತಗೆ ಆ ಗುಣಗಳು ಹುಟ್ಟಿನಿಂದ ಬರಬೇಕಾಗಿಲ್ಲ. ಸರಿಯಾದ

ತರಬೇತಿ ನೀಡುವ ಮೂಲಕ ಯಾರಲ್ಲೂ ಬೇಕಾದರೂ ಅವುಗಳನ್ನು ಬೆಳೆಸಬಹುದು. ಹಾಗೆ ತರಬೇತಿ ಪಡೆದ ಉದ್ಯಮಿಗಳು ಸಣ್ಣ ಉದ್ದಿಮೆಗಳನ್ನು ಆರಂಭಿಸುತ್ತಾರೆ. ಇಂತಹ ಸಣ್ಣ ಉದ್ದಿಮೆಗಳು ದೊಡ್ಡ ಉದ್ದಿಮೆದಾರರನ್ನು ಸೃಷ್ಟಿಸುವ ತರಬೇತಿ ಕೇಂದ್ರಗಳಾಗಿರುತ್ತವೆ. ಹೀಗೆ ಎಂತಹ ಬಡ ದೇಶ ಕೂಡ ಶ್ರೀಮಂವಾಗಬಹುದೆಂಬ ವಾದ ಇತ್ತ. ಅದನ್ನೂ ಬಡದೇಶಗಳು ಆದರದಿಂದ ಸ್ವಾಗತಿಸದವು. ಪಾಪ ಅವರಿಗೆ ಬೇರೆ ದಾರಿಯೇ ಇರಲಿಲ್ಲ. ಅವರ ಮುಖ್ಯ ಸಂಪತ್ತೇ ಜನಸಂಖ್ಯೆ ಅದನ್ನು ಬಳಸಿಕೊಂಡು ಅಭಿವೃದ್ಧಿ ಸಾಧ್ಯ ಎನ್ನುವ ಥಿಯರಿ ಅವರಿಗೆ ಅಪ್ಯಾಯಮಾನವಾಯಿತು.

ಆ ನೀತಿಯಿಂದ ಏನೂ ಆಗಲಿಲ್ಲವೆಂದು ಹೇಳುವುದು ಸರಿಯಲ್ಲ. ಅದು ಕೂಡ ನಮ್ಮ ದೇಶದ ಆರ್ಥಿಕ ಸ್ಥಿತಿಯನ್ನು ಸ್ವಲ್ಪ ಬದಲಾಯಿಸಲು ಸಹಕರಿಸಿದೆ. ಸಣ್ಣ ಉದ್ದಿಮೆಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿತು. ಅದರಲ್ಲಿ ದುಡಿಯುವ ಉದ್ಯೋಗಿಗಳ ಸಂಖ್ಯೆ ಹೆಚ್ಚಿತು. ರಾಷ್ಟ್ರೀಯ ಉತ್ಪನ್ನದಲ್ಲಿ ಸಣ್ಣ ಉದ್ದಿಮೆಯ ಪಾಲು ಹೆಚ್ಚಿತು. ಆದರೆ ಉದ್ಯಮಶೀಲತೆಯ ಥಿಯರಿಗಳು ಊಹಿಸಿದ ಒಂದು ಬದಲಾವಣೆ ಆಗಲೇ ಇಲ್ಲ. ಅದೇನಂದರೆ ಸಮಾಜದ ಥಿಯರಿಗಳು ಉಹಿಸಿದ ಒಂದು ಬದಲಾವಣೆ ಆಗಲೇ ಇಲ್ಲ. ಅದೇನಂದರೆ ಸಮಾಜದ ಎಲ್ಲ ವರ್ಗಗಳಿಂದ ಉದ್ಯಮಿಗಳು ಬರಲೇ ಇಲ್ಲ. ಅದೇನಂದರೆ ಸಮಾಜದ ಎಲ್ಲ ವರ್ಗಗಳಿಂದ ಉದ್ಯಮಿಗಳು ಬರಲೇ ಇಲ್ಲ. ಅದೇನಂದರೆ ಸಮಾಜದ ಎಲ್ಲ ವರ್ಗಗಳಿಂದ ಉದ್ಯಮಿಗಳು ಇರಲೇ ಇಲ್ಲ. ಸಣ್ಣ ಉದ್ಯಮಗಳನ್ನು ಪ್ರಾರಂಭಿಸಿದವರಲ್ಲಿ ಬಹುತೇಕರು ವ್ಯಾಪಾರಿ ಕುಟುಂಬದಿಂದ ಬಂದವರು. ಮತ್ತೂ ಮುಂದೆ ಹೋದರೆ ಆಯಾಯ ಪ್ರದೇಶದ ಬಲಿಷ್ಠ ರೈತ ಸಮುದಾಯಗಳು ತಮ್ಮ ಕೃಷಿಯಲ್ಲಿ ಬಂದ ಮಿಗತೆ ಆದಾಯವನ್ನು ಬಳಸಿಕೊಂಡ ಸಣ್ಣ ಉದ್ಯಮ ಆರಂಭಿಸಿದರು (ನಫೀಜರ್ ೧೯೭೮). ಹೀಗೆ ಉದ್ಯಮಶೀಲತೆಯ ಥಿಯರಿ ಬಡದೇಶಗಳ ಕೆಳವರ್ಗದ ಸಮಸ್ಯೆ ಪರಿಹರಿಸಲು ವಿಶೇಷ ಸಹಕಾರಿಯಾಗಲಿಲ್ಲ. ಈ ಸಂದರ್ಭದಲ್ಲಿ ಮಾನವ ಸಂಪನ್ಮೂಲದ ಥಿಯರಿನ್ನು ವಿಶೇಷ ಸಹಕಾರಿಯಾಗಲಿಲ್ಲ. ಈ ಸಂದರ್ಭದಲ್ಲಿ ಮಾನವ ಸಂಪನ್ಮೂಲದ ಥಿಯರಿಯನ್ನು ಇನ್ನೂ ಸ್ವಲ್ಪ ವಿಸ್ತರಿಸಲಾಯಿತು. ಇದರ ಹೊಸ ರೂಪದಲ್ಲಿ ಮಾನವ ಸಂಪನ್ಮೂಲವನ್ನು ಕೇವಲ ಉದ್ಯಮಶೀಲತೆಗೆ ಸೀಮಿತಗೊಳಿಸಿ ನೋಡುವುದು ಸರಿಯಲ್ಲ. ಸಮಾಜದ ಎಲ್ಲ ವರ್ಗಗಳ ಅದರಲ್ಲೂ ಕೆಲ ವರ್ಗದಲ್ಲಿನ ಮಾನವ ಸಂಪನ್ಮೂಲ ಬಳಕೆ ಕುರಿತಂತೆ ಚಿಂತನೆಗಳು ನಡೆಯಬೇಕೆಂದಾಯಿತು (ಕೀತ್ ಗ್ರಿಫಿನ್ ಅಂಡ್ ಜಾನ್ ನೈಟ್, ೧೯೯೦). ಅದರಂತೆ ಮಾನವ ಸಂಪನ್ಮೂಲ ಅಭಿವೃದ್ಧಿಯ ಥಿಯರಿಗಳು ಬಂದವು. ಇಲ್ಲಿ ಇಡೀ ವ್ಯವಸ್ಥೆಯನ್ನು ಬದಲಾಯಿಸುವ ಪ್ರಯತ್ನವಿಲ್ಲ. ವ್ಯಕ್ತಿಯ ಪರಿವರ್ತನೆಗೆ ಮಹತ್ವ. ಉತ್ತಮ ಆರೋಗ್ಯ, ಶಿಕ್ಷಣ ಮತ್ತು ಯಾವುದಾದರೂ ಒಂದು ಕೆಲಸದಲ್ಲಿ ಪರಿಣಿತಿ ನೀಡಿದರೆ ವ್ಯಕ್ತಿಯೊಬ್ಬರ ಬದುಕುವ ಸಾಧ್ಯತೆಯೇ ಸಕಾರಾತ್ಮಕವಾಗಿ ಬದಲಾಗಬಹುದೆನ್ನುವ ಗ್ರಹಿತ ಇಲ್ಲಿದೆ. ಆರೋಗ್ಯ, ಶಿಕ್ಷಣ ಮತ್ತು ಇತರ ಸವಲತ್ತುಗಳ ಮೂಲಕ ವ್ಯಕ್ತಿಯೊಬ್ಬನ ಸಂಪನ್ಮೂಲ ಹೆಚ್ಚಿಸಿಕೊಳ್ಳುವ ಸಾಧ್ಯತೆಗಳನ್ನು ಹೆಚ್ಚಿಸುವುದಕ್ಕೆ ಈ ಮಾದರಿಯ ಪ್ರಾಮುಖ್ಯತೆ. ಉತ್ತಮ ಆರೋಗ್ಯ ಮತ್ತು ಶಿಕ್ಷಣದಿಂದ ಆಧುನಿಕ ಕಸುಬಿಗೆ ಅಗತ್ಯವಾದ ಪರಿಣಿತಿ ಹೊಂದಿ ಹೊಸದಾಗಿ ರೂಪುಗೊಳ್ಳುವ ಶ್ರಮ ಮಾರುಕಟ್ಟೆಯಲ್ಲಿ ಪಾಲುಗೊಳ್ಳಲು ಅನುಕೂಲ. ಆ ಮೂಲಕ ತನ್ನ ಮತ್ತು ಕುಟುಂಬದ ಆದಾಯವನ್ನು ಸುಧಾರಿಸಿಕೊಳ್ಳಬಹುದೆಂಬ ಗ್ರಹಿತವಿದೆ (ಥಿಯೊಡರ್ ಶಲ್ಜ್ ೧೯೭೧).

**ಸಹಭಾಗಿತ್ವ ಮತ್ತು ಸೋಶಿಯಲ್ ಕ್ಯಾಪಿಟಲ್**

ಇಷ್ಟರವರೆಗಿನ ಅಭಿವೃದ್ಧಿಯ ಕಲ್ಪನೆಯಲ್ಲಿ ವ್ಯಕ್ತಿ ಮತ್ತು ಆತನ ಅಭಿವೃದ್ಧಿ ಕುಟುಂಬ ಮತ್ತು ಸಮುದಾಯದ ಅಭಿವೃದ್ಧಿಗೆ ದಾರಿ ಎನ್ನುವ ನಿಲುವಿತ್ತು. ಆದರೆ ಬರ ಬರುತ್ತಾ ಆ ನಿಲುವು ಮಹತ್ವ ಕಳಕೊಳ್ಳುತ್ತಾ ಬಂತು. ಸಮುದಾಯದಿಂದ ವ್ಯಕ್ತಿ ಮತ್ತು ಕುಟುಂಬದ ಕಡೆಗೆ ಅಭಿವೃದ್ಧಿ ಹರಿಯಬೇಕೆಂಬ ನಿಲುವು ಬಲಗೊಳ್ಳುತ್ತಿದೆ. ಆ ಕಾರಣದಿಂದಲೇ ವರ್ತಮಾನದಲ್ಲಿ ಅಭಿವೃದ್ಧಿಯ ಹೊಸ ಮಿಸ್ಸಿಂಗ್ ಲಿಂಕ್ – ಸೋಶಿಯಲ್ ಕ್ಯಾಪಿಟಲ್ ತುಂಬಾ ಪ್ರಚಾರದಲ್ಲಿದೆ. ಹಾಗೆ ನೋಡಿದರೆ ಸೋಶಿಯಲ್ ಕ್ಯಾಪಿಟಲ್‌ನ ಪರಿಕಲ್ಪನೆ ಹೊಸದೇನಲ್ಲ. ಸಮಾಜ ಶಾಸ್ತ್ರಜ್ಞರಿಗೆ ಇದು ತುಂಬಾ ಹಳೆಯ ಪದ. ನಮ್ಮ ಜಾತಿ ಪದ್ಧತಿಯ ಚರ್ಚೆಯಲ್ಲಿ ಇದರ ಸರಳೀಕೃತ ರೂಪವನ್ನು ಕೇಳಿರಬಹುದು. ಬೇರೆ ಬೇರೆ ಜಾತಿಗೆ ಸೇರಿದ ಬಡವರೆಲ್ಲ ಒಂದೇ ಅಲ್ಲ ಎನ್ನುವ ಚರ್ಚೆ ಒಂದು ವಿಧದಲ್ಲಿ ಸೋಶಿಯಲ್ ಕ್ಯಾಪಿಟಲ್‌ನ ಚರ್ಚೆಗೆ ಸಂಬಂಧಿಸಿದೆ. ದಲಿತ ಬಡವನನ್ನು

ಬ್ರಾಹ್ಮಣ ಅಥವಾ ಇತರ ಮೇಲು ಜಾತಿಯ ಬಡವನಿಗೆ ಹೋಲಿಸುವ ಸಾಧ್ಯವಿಲ್ಲ. ಅವರಿಬ್ಬರ ಆರ್ಥಿಕ ಸ್ಥಿತಿ ಒಂದೇ ಇದ್ದರೂ ಅವರ ಸಾಮಾಜಿಕ ಸ್ಥಾನಮಾನ ಬೇರೆ ಬೇರೆ ಇದೆ. ಮೇಲು ಜಾತಿಗೆ ಸೇರಿದ ವ್ಯಕ್ತಿಯೊಬ್ಬನಿಗೆ ಆತನ ಸಾಮಾಜಿಕ ಸಂಬಂಧಗಳ ಕಾರಣದಿಂದ ವಿಶೇಷ ಪ್ರಯತ್ನವಿಲ್ಲದೇ ಹಲವಾರು ಉನ್ನತ ಸ್ಥಾನಮಾನವಿರುವ ವ್ಯಕ್ತಿಗಳ ಸಂಪರ್ಕ ಸಾಧ್ಯವಾಗುತ್ತದೆ. ಬದುಕಿನ ಹಲವಾರು ಸಾಧ್ಯತೆಗಳ ಬಗ್ಗೆ ಅರಿವು ಸಾಧ್ಯವಾಗುತ್ತದೆ. ಉದ್ಯೋಗದ, ಮತ್ತು ಇತರ ಹೊಸ ಅವಕಾಶಗಳ ಬಗ್ಗೆ ಮಾಹಿತಿ ಸಿಗುತ್ತದೆ. ಕೆಲವು ಸಂದರ್ಭಗಳಲ್ಲಿ ದೂರದ ಸಂಬಂಧಿಕ ಅಥವಾ ಜಾತಿ ಬಾಂಧವ ಎನ್ನುವ ಕಾರಣಕ್ಕಾಗಿ ಪ್ರೋತ್ಸಾಹ ದೊರೆಯುತ್ತದೆ. ಈ ಎಲ್ಲ ಸಂದರ್ಭಗಳಲ್ಲಿ ಸಾಮಾಜಿಕ ಸಂಬಂಧಗಳು ಬದುಕಿನ ಸಾಧ್ಯತೆಗಳನ್ನು ವೃದ್ಧಿಗೊಳಿಸುವ ಆರ್ಥಿಕ ಅಥವಾ ರಾಜಕೀಯ ಅವಕಾಶಗಳಾಗಿ ಮಾರ್ಪಡುತ್ತವೆ.

ಉದ್ಯಮಶೀಲತೆಯ ಚರ್ಚೆಯಿಲ್ಲಂತೂ ಸೋಶಿಯಲ್ ಕ್ಯಾಪಿಟಲ್‌ನ ಪರಿಕಲ್ಪನೆ ಬಹು ಹಿಂದಿನಿಂದಲೇ ಚಾಲ್ತಿಯಲ್ಲಿತ್ತು (ಜೇಮ್ಸ್ ಎಸ್ ಕೊಲಮೆನ್ ೧೯೮೮). ನಮ್ಮಲ್ಲಿನ ಹಲವಾರು ವ್ಯಾಪಾರಿ ಸಮುದಾಯಗಳು ಆಧುನೀಕರಣದೊಂದಿಗೆ ತಮ್ಮ ಸಾಂಪ್ರದಾಯಿಕ ಸಂಬಂಧಗಳನ್ನು ಕಳಚಿಕೊಳ್ಳಲಿಲ್ಲ (ಕೆಲ್ಲಿ ಜೊನಾಥೆನ್, ೧೯೭೮). ಬದಲಿಗೆ ಆ ಸಂಬಂಧಗಳನ್ನು ಬಳಸಿಕೊಂಡೆ ತಮ್ಮ ವ್ಯಾಪಾರವನ್ನು ವೃದ್ಧಿಸಿಕೊಂಡರು. ವ್ಯಾಪಾರಸ್ಥರ ಮಕ್ಕಳಿಗೆ ವ್ಯಾಪಾರದ ಮೂಲಭೂತ ಪಾಠ ಕುಟುಂಬದ ಅಂಗಡಿಯಲ್ಲಿ ಅಥವಾ ಉದ್ಯಮದಲ್ಲಿ ಚಿಕ್ಕಂದಿನಿಂದಲೇ ಆರಂಭವಾಗುತ್ತದೆ. ಶಾಲೆ ಅಥವಾ ಕಾಲೇಜು ಓದುತ್ತಿರುವಾಗ ಇತರರ ಮಕ್ಕಳು ಆಟ ಇತರ ಚಟುವಟಿಕೆಯಲ್ಲಿ ತೊಡಗಿಸಿಕೊಂಡರೆ ವ್ಯಾಪಾರಿಯ ಮಗ ತಂದೆಯ ಅಂಗಡಿಯಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. ತನ್ನ ಓದು ಮುಗಿಸಿದ ನಂತರ ಉದ್ಯೋಗ ಹುಡುಕುವ ಪ್ರಶ್ನೆ ಕಡಿಮೆ. ಕುಟುಂಬದ ವ್ಯಾಪಾರವನ್ನು ಮುಂದುವರಿಸುವುದು ಅಥವಾ ಹೊಸ ವ್ಯಾಪಾರ ಶುರು ಮಾಡುವುದು ಸಾಮಾನ್ಯ. ಇಲ್ಲಿ ಕೇವಲ ಸೋಶಿಯಲ್ ಕ್ಯಾಪಿಟಲ್ ಮಾತ್ರ ವರ್ಗಾವಣೆಯಾಗುವುದಿಲ್ಲ; ಭೌತಿಕ ಕ್ಯಾಪಿಟಲ್ ಕೂಡ ವರ್ಗಾವಣೆಯಾಗುತ್ತದೆ. ಇದು ಈಗಾಗಲೇ ವ್ಯಾಪಾರ ಇರುವ ಕುಟುಂಬದ ಕತೆಯಾದರೆ ಇನ್ನು ಯಾವುದೇ ವ್ಯಾಪಾರವಿಲ್ಲದ ಕುಟುಂಬದ ವ್ಯಕ್ತಿ ಚಿಂತಿತನಾಗುವ ಅಗತ್ಯವಿಲ್ಲ. ತನ್ನ ವ್ಯಾಪಾರದ ಬಗ್ಗೆ ಸಮುದಾಯದ ನಾಯಕರಲ್ಲಿ ತೋಡಿಕೊಂಡರೆ ಅಗತ್ಯವಿಲ್ಲ. ತನ್ನ ವ್ಯಾಪಾರದ ಬಗ್ಗೆ ಸಮುದಾಯದ ನಾಯಕರಲ್ಲಿ ತೋಡಿಕೊಂಡರೆ ಆತನಿಗೆ ವ್ಯಾಪಾರ ಮಾತ್ರವಲ್ಲ. ಅವರದ್ದೇ ಸಮುದಾಯದ ಇತರ ವ್ಯಾಪಾರಿಗಳು ಹೆಚ್ಚು ಕಾಲಾವಕಾಶವಿರುವ ಉದ್ದರಿ ಕೊಟ್ಟು ಸರಕು ಒದಗಿಸುತ್ತಾರೆ. ಕಡಿಮೆ ಬಡ್ಡಿಗೆ ಸಾಲ ಕೊಡಿಸುತ್ತಾರೆ. ಆತನ ಸರಕನ್ನು ಮಾರಲು ಕೊಂಡಿಯಾಗಿ ಸಹಕರಿಸುತ್ತಾರೆ. ಹೀಗೆ ಸಮುದಾಯ ಆತ ಮುಂದೆ ಬರಲು ಸಹಕರಿಸುತ್ತದೆ. ಅಂದರೆ ಆಧುನೀಕರಣಕ್ಕೆ ಅಥವಾ ಅಭಿವೃದ್ಧಿಗೆ ಸಾಂಪ್ರದಾಯಿಕ ಸಂಬಂಧಗಳು ಅಡ್ಡಿಯಲ್ಲ ಎಂದಂತಾಯಿತು.

ಇದೆಲ್ಲ ಸಾಧ್ಯವಾಗುವುದು ಅಸಮಾನ ಸಾಮಾಜಿಕ ವ್ಯವಸ್ಥೆಯಿಂದ. ಸಮಾನತೆ ಇದ್ದರೆ ಈ ಸೋಶಿಯಲ್ ಕ್ಯಾಪಿಟಲ್‌ನ ಪರಿಕಲ್ಪನೆ ಅವಾಸ್ತವಾಗುತ್ತದೆ ಎನ್ನುವ ವಾದವು ಇದೆ. ಆದರೆ ಕೆಲವು ಸಮಾಜವಾದಿ ದೇಶಗಳ ಅನುಭವ ಈ ವಾದವನ್ನು ಸಮರ್ಥಿಸುತ್ತಿಲ್ಲ. ಆದರೆ ಕೆಲವು ಸಮಾಜವಾದಿ ದೇಶಗಳ ಅನುಭವ ಈ ವಾದವನ್ನು ಸಮರ್ಥಿಸುತ್ತಿಲ್ಲ. ಚೀನಾದ ಶಿಕ್ಷಣ ವ್ಯವಸ್ಥೆಯ ಬಗ್ಗೆ ಅಧ್ಯಯನ ಮಾಡಿದವರು ಅಲ್ಲೂ ಸೋಶಿಯಲ್ ಕ್ಯಾಪಿಟಲ್ ಕೆಲಸ ಮಾಡುವುದರ ಕುರಿತು ಚರ್ಚಿಸಿದ್ದಾರೆ (ಜೂಲಿಯ ಕ್ವಾಂಗ್, ೧೯೮೩). ಅಲ್ಲಿ ಉನ್ನತ ಶಿಕ್ಷಣ ಪುಕ್ಸಟ್ಟೆಯಾಗಿ ಬರುತ್ತದೆ. ಆದರೆ ಉನ್ನತ ಶಿಕ್ಷಣದ ಸೀಟು ಮಾಡುವವರಲ್ಲಿ ಕಾರ್ಖಾನೆ ಕೆಲಸಗಾರರ ಮಕ್ಕಳಿಗೆ ಹೋಲಿಸಿದರೆ ಕಾಲೇಜು ಅಥವಾ ವಿಶ್ವವಿದ್ಯಾಲಯದ ಶಿಕ್ಷಕರ ಮಕ್ಕಳ ಸಂಖ್ಯೆ ಜಾಸ್ತಿ ಇದೆ. ಇದಕ್ಕೆ ಕಾರಣ ಅವರು ತಮ್ಮ ಮಕ್ಕಳನ್ನು ಪರೀಕ್ಷೆಗೆ ತಯಾರು ಮಾಡುವುದು. ತಮ್ಮ ಜ್ಞಾನ ಮತ್ತು ಅನುಭವಗಳನ್ನು ಮಕ್ಕಳಿಗೆ ವರ್ಗಾಯಿಸುವುದರ ಮೂಲಕ ಮಕ್ಕಳು ಉನ್ನತ ಶಿಕ್ಷಣದ ಅವಕಾಶ ಗಿಟ್ಟಿಸಲು ಸಹಕರಿಸುತ್ತಾರೆ. ಉನ್ನತ ಶಿಕ್ಷಣವೆಂದರೆ ಉನ್ನತ ಹುದ್ದೆ ಮತ್ತು ಉನ್ನತ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಸ್ಥಾನಮಾನ.

ಫ್ರೆಂಚ್ ಮಾನವ ಶಾಸ್ತ್ರಜ್ಞ ಪಾರಿ ಬಾರ್ಡಿ ಎನ್ನುವವ ಈ ಕುರಿತು ಚರ್ಚಿಸಿದ್ದಾನೆ (ಪಾರಿ ಬಾರ್ಡಿ ೧೯೯೩). ಆತನ ವಿವರಣೆಯನ್ನು ಒಂದು ಉದಾಹರಣೆಯೊಂದಿಗೆ ವಿವರಿಸುತ್ತೇನೆ. ನಗರದ ಎಲ್ಲ ಕಡೆಗಳಲ್ಲಿ ರೊಟರಿ ಕ್ಲಬ್‌ಗಳಿರುತ್ತವೆ. ಅಂತಹ ಕ್ಲಬ್‌ಗಳಿಗೆ ಸದಸ್ಯನಾಗಬೇಕಾದರೆ

ಕೆಲವು ಶರತ್ತುಗಳು ಇರುತ್ತವೆ. ಅವೆಲ್ಲ ಬಹುತೇಕ ಸಂದರ್ಭಗಳಲ್ಲಿ ಸಮಾಜದ ಕೆಳವರ್ಗವನ್ನು ದೂರ ಇಡುವ ದೃಷ್ಟಿಯಿಂದಲೇ ಇರುತ್ತವೆ. ಅಂದರೆ ಕೇವಲ ಪ್ರತಿಷ್ಠಿತರು ಮಾತ್ರ ಕ್ಲಬ್ಬಿನ ಸದಸ್ಯರಾಗಲು ಸಾಧ್ಯ. ಅಂತಹ ಕಬ್ಲಿನ ಸದಸ್ಯನಾದರೆ ಆತ ನೇರವಾಗಿ ಆ ನಗರದ ಪ್ರತಿಷ್ಠಿತ ವರ್ಗದ ಸಂಬಂಧಕ್ಕೆ ಬರುತ್ತಾನೆ. ಆ ಕ್ಲಬ್‌ಗಳು ಮೀಟಿಂಗ್‌ಗಳಲ್ಲಿ ಸದಸ್ಯನೊಬ್ಬ ಸ್ಥಳೀಯ ಅಧಿಕಾರಿಗಳ ಜತೆ ಸಂಬಂಧ ಬೆಳೆಸಿಕೊಳ್ಳಬಹುದು. ಸಣ್ಣ ಉದ್ಯಮಿಯೊಬ್ಬ ಅಂತಹ ಕ್ಲಬ್‌ನ ಸದಸ್ಯನಾದರೆ ಆತ ಕ್ಬಬ್‌ಗೆ ಬರುವ ಬ್ಯಾಂಕ್ ಮೇನೆಜರ್ ಅಥವಾ ಇತರ ಅಧಿಕಾರಿ ಜತೆ ಸಂಬಂಧ ಬೆಳೆಸಬಹುದು. ಬ್ಯಾಂಕ್ ಮ್ಯಾನೇಜರ್ ಜತೆ ತನ್ನ ಆರ್ಥಿಕ ಬೇಕು ಬೇಡಗಳನ್ನು ವಿವರಿಸಿ ತನಗೆ ಅಗತ್ಯವಿರುವ ಸಾಲದ ಬಗ್ಗೆ ಪೀಠಿಕೆ ಹಾಕಬಹುದು. ಹೀಗೆ ಸಾಮಾಜಿಕ ಸಂಬಂಧವನ್ನು ಹಣಕಾಸಿನ ಸಂಬಂಧವನ್ನಾಗಿ ಪರಿವರ್ತಿಸಬಹುದು.

ಸೋಶಿಯಲ್ ಕ್ಯಾಪಿಟಲ್ ಬಗ್ಗೆ ಇಷ್ಟೆಲ್ಲಾ ಕೆಲಸಗಳು ಬಹು ಹಿಂದೆಯೇ ನಡೆದಿದ್ದರೂ ಇತ್ತೀಚಿನ ದಿನಗಳಲ್ಲಿ ಅದು ನಾಟಕೀಯ ಪರಿವರ್ತನೆ ಕಂಡಿದೆ. ಅಮೇರಿಕದ ರಾಜಕೀಯ ಶಾಸ್ತ್ರಜ್ಞ ರಾಬರ್ಟ್ ಪುನಮ್ ಅದಕ್ಕೆ ಹೊಸ ಅವತಾರ ಕೊಟ್ಟವ (ರಾಬರ್ಟ್ ಪುನಮ್, ೧೯೯೩). ಆತ ತನ್ನ ಮೇಕಿಂಗ್ ಡೆಮಾಕ್ರಸಿ ವರ್ಕ್ ಎನ್ನುವ ಪುಸ್ತಕದಲ್ಲಿ ಅದಕ್ಕೆ ಹೊಸ ರೂಪಕೊಟ್ಟಿದ್ದಾನೆ. ಇಷ್ಟರವರೆಗೆ ಸೋಶಿಯಲ್ ಕ್ಯಾಪಿಟಲ್ ಕುಟುಂಬದ ಸಾಮಾಜಿಕ ಸಂಬಂಧ ಆರ್ಥಿಕ ರಾಜಕೀಯ ಬಂಡವಾಳವಾಗಿ ಪರಿವರ್ತನೆಗೊಳ್ಳುವ ಸಾಧ್ಯತೆ ಬಗ್ಗೆ ನೋಡಿದ್ದೇವೆ. ಹೆಚ್ಚೆಂದರೆ ಒಂದು ಸಮುದಾಯ ತನ್ನ ಸಾಮಾಜಿಕ ಸಂಬಂಧಗಳನ್ನು ಬಂಡವಾಳವಾಗಿ ಪರಿವರ್ತಿಸಿಕೊಳ್ಳುವುದನ್ನು ವಿವರಿಸಲಾಗಿದೆ. ಬಹುತೇಕ ಉದಾಹರಣೆಗಳು ವ್ಯಾಪಾರಿ ಮತ್ತು ಮೇಲ್ ವರ್ಗದ ಕುರಿತೆ ಇದೆ. ಅಂದರೆ ಸೋಶಿಯಲ್ ಕ್ಯಾಪಿಟಲ್ ಕುಟುಂಬಕ್ಕೆ ಅಥವಾ ಮೇಲ್ ವರ್ಗಕ್ಕೆ ಸೀಮಿತಗೊಂಡಂತೆ ಬಳಕೆಯಾಗುತ್ತಿತ್ತು. ಈ ದೃಷ್ಟಿಯಿಂದ ಅದಕ್ಕೆ ಒಂದು ಸೀಮಿತತೆ ಇತ್ತು. ಅದರ ಸೀಮಿತ ಅನ್ವಯಿಕೆಯನ್ನು ಇಟಲಿಯ ಅಭಿವೃದ್ಧಿಯನ್ನು ಅಧ್ಯಯನ ಮಾಡುತ್ತ ಉತ್ತರ ಮತ್ತು ದಕ್ಷಿಣ ಇಟಲಿ ಮಧ್ಯೆ ಇರುವ ವ್ಯತ್ಯಾಸವನ್ನು ಗುರುತಿಸಿದ್ದಾನೆ. ಅದೊಂದು ರೀತಿ ನಮ್ಮ ಉತ್ತರ ಮತ್ತು ದಕ್ಷಿಣ ಕರ್ನಾಟಕದ ಕತೆಯೇ. ವ್ಯತ್ಯಾಸವೆಂದರೆ ನಮ್ಮ ಸ್ಥಿತಿಗಿಂತ ಭಿನ್ನವಾಗಿ ಅಲ್ಲಿ ಉತ್ತರ ಇಟಲಿ ಅಭಿವೃದ್ಧಿ ಹೊಂದಿ ದಕ್ಷಿಣ ಇಟಲಿ ಹಿಂದುಳಿದಿತ್ತು. ಅದಕ್ಕೆ ಉತ್ತರ ಇಟಲಿ ಮುಂದುವರಿಯಲು ಮತ್ತು ದಕ್ಷಿಣ ಇಟಲಿ ಹಿಂದುಳಿಯಲು ಕಾರಣವನ್ನು ಆತ ನಾಗರಿಕ ಸಂಘಟನೆಗಳಲ್ಲಿ ಕಂಡುಕೊಳ್ಳುತ್ತಾನೆ. ಆತನ ಪ್ರಕಾರ ಉತ್ತರ ಇಟಲಿಯಲ್ಲಿ ಹಲವಾರು ಸಿವಿಲ್ ಸಂಘಟನೆಗಳು ಸಕ್ರಿಯವಾಗಿ ಸಾರ್ವಜನಿಕ ಕೆಸಲಗಳಲ್ಲಿ ತೊಡಗಿಸಿಕೊಂಡಿವೆ. ಅದಕ್ಕೆ ಹೋಲಿಸಿದರೆ ದಕ್ಷಿಣ ಇಟಲಿಯಲ್ಲಿ ಸಿವಿಲ್ ಸಂಘಟನೆಗಳು ಕಡಿಮೆ ಇವೆ. ಸಿವಿಲ್ ಸಂಘಟನೆಗಳನ್ನು ಆತ ಸರಕಾರ ಮತ್ತು ವ್ಯಕ್ತಿ ಮಧ್ಯೆ ಇರುವ ಕೊಂಡಿ ಎಂದು ವ್ಯಾಖ್ಯಾನಿಸುತ್ತಾನೆ. ಇದು ಕೇವಲ ಕೊಂಡಿಯಾಗಿ ಮಾತ್ರ ಕೆಲಸ ಮಾಡುವುದಲ್ಲ. ಸಂಘಟನೆಗಳಲ್ಲಿ ಪಾಲುಗೊಳ್ಳುವವರಿಗೆ ಪ್ರಜಾಪ್ರಭುತ್ವದ ಮೂಲಭೂತ ಪಾಠ ಹೇಳಿಕೊಡುತ್ತದೆ. ಸಂಘಟನೆಯಲ್ಲಿ ಪಾಳುಗೊಳ್ಳುವ ಸದಸ್ಯರ ನಡುವೆ ನಂಬಿಕೆ, ಇತರ ಸದಸ್ಯರ ಸುಖ ದುಃಖಗಳಲ್ಲಿ ಭಾಗಿಯಾಗುವುದು ಮತ್ತು ಸಂಘದ ನೀತಿ ನಿಯಮಕ್ಕೆ ಅನುಗುಣವಾಗಿ ನಡೆಯುವುದು ಇತ್ಯಾದಿಗಳೂ ಸಿವಿಲ್ ಸಂಘಟನೆಯಿಂದ ಸಿಗುವ ಪಾಠಗಳು. ಇಂತಹ ಸಂಘಟನೆಗಳು ಉತ್ತರದಲ್ಲಿ ಹೆಚ್ಚು ಇವೆ ಆದುದರಿಂದ ಅದು ಹೆಚ್ಚು ಅಭಿವೃದ್ಧಿ ಹೊಂದಿದೆ ಎಂಬ ತೀರ್ಮಾನಕ್ಕೆ ಆತ ಬರುತ್ತಾನೆ.

ಸಂಘಟಿತ ಬದುಕು ಅಥವಾ ಸಿವಿಲ್ ಸೊಸೈಟಿ ಮತ್ತು ಪ್ರಜಾಪ್ರಭುತ್ವ ನಡುವೆ ಸಂಬಂಧ ಹಣಿಯುವ ಬರಹಗಳು ಹಿಂದೆಯೂ ಇದ್ದವು. ಅವುಗಳಲ್ಲಿ ಅಲೆಕ್ಸಡಿ ತೊವಿಲ್ಲೆ (೧೯೬೯), ಜೇಮ್ಸ ಎಸ್ ಕೊಲ್‌ಮೆನ್ (೧೯೯೦) ಬರಹಗಳನ್ನು ಗುರುತಿಸಬಹುದು. ಅವರು ಅಮೇರಿಕದ ಪ್ರಜಾಪ್ರಭುತ್ವದಲ್ಲಿ ಸಿವಿಲ್ ಸೊಸೈಟಿಯ ಪಾತ್ರ ಕುರಿತು ಚರ್ಚಿಸಿದ್ದಾರೆ. ಇವರ ಥಿಯರಿಗಳು ಸಿವಿಲ್ ಸೊಸೈಟಿ ಮತ್ತು ಒಳ್ಳೆಯ ಆಡಳಿತ ಕುರಿತು ಚರ್ಚಿಸಿದ್ದಾರೆ. ಇವರ ಥಿಯರಿಗಳು ಸಿವಿಲ್ ಸೊಸೈಟಿ ಪ್ರಜಾಪ್ರಭುತ್ವ ಮಾದರಿಯಲ್ಲಿ ಸಮಸ್ಯೆ ಪರಿಹಾರದ ಮೂಲಭೂತ ಪಾಠವನ್ನು ಹೇಳಿ ಕೊಡುತ್ತದೆ ಎಂದು ಇವರು ಅಭಿಪ್ರಾಯ ಪಡುತ್ತಾರೆ. ಹೀಗೆ ಅಭಿವೃದ್ಧಿ ಮತ್ತು ಸಿವಿಲ್ ಸೊಸೈಟಿ ನಡುವಿನ ಸಂಬಂಧವನ್ನು ಪರೋಕ್ಷವಾಗಿ ಗುರುತಿಸಿದ್ದಾರೆ. ರಾಬರ್ಟ್ ಪುನಮ್ ಒಂದು ಹೆಜ್ಜೆ ಮುಂದೆ ಹೋಗಿ ಅಂತಹ ಸಂಘಟನೆಗಳ ಇರುವಿಕೆ ಮತ್ತು ಅಭಿವೃದ್ಧಿ ನಡುವೆ ನೇರ ಸಂಬಂಧ ನೇಯುತ್ತಾನೆ. ನೆರೆಕರೆಯವರ ಸುಖ ದುಃಖಗಳಲ್ಲಿ ಭಾಗಿಯಾಗಲು ತರಬೇತಿಯನ್ನು ಈ ಸಣ್ಣ ಪುಟ್ಟ ಸಂಘಟನೆಗಳು ನೀಡುತ್ತವೆ. ಅದೇ ರೀತಿಯಲ್ಲಿ ಪರಸ್ಪರದಲ್ಲಿ ನಂಬಿಕೆ ಮತ್ತು ಎಲ್ಲರು ಸೇರಿ ರೂಪಿಸಿಕೊಳ್ಳುವ ನೀತಿ ನಿಯಮಗಳಿಗೆ ಅನುಗುಣವಾಗಿ ವ್ಯವಹರಿಸುವ ತರಬೇತಿಯನ್ನು ಇಂತಹ ಸಂಘಟನೆಗಳಲ್ಲಿ ಕಲಿಯಬಹುದಾಗಿದೆ ಎಂದು ಈ ಥಿಯರಿಗಳು ಹೇಳುತ್ತವೆ.

ಸಂಘಟಿತ ಬದುಕಿನ ಇಂತಹ ಸಣ್ಣ ಸಣ್ಣ ಹನಿಗಳೂ ಸೇರಿ ಆರೋಗ್ಯಕರ ಸಮಾಜ ರೂಪುಗೊಳ್ಳುತ್ತದೆ ಎಂದು ಮೇಲಿನ ಥಿಯರಿಗಳು ವಾದಿಸುತ್ತವೆ. ಇವರ ಥಿಯರಿಗಳು ಸಿವಿಲ್ ಸೊಸೈಟಿ ಮತ್ತು ಒಳ್ಳೆಯ ಆಡಳಿತ ಮತ್ತು ಅದರಿಂದ ಸಾಧ್ಯವಾಗುವ ಅಭಿವೃದ್ಧಿ ಕುರಿತು ವಿವರಿಸುತ್ತವೆ.

ಹೀಗೆ ಜನರ ಸಹಭಾಗಿತ್ವದ ಚರ್ಚೆ ಇಂದು ಬಲಗೊಳ್ಳುವುದರ ಹಿಂದೆ ಅಭಿವೃದ್ಧಿಯ ಮಿಸ್ಸಿಂಗ್ ಲಿಂಕ್‌ನ ಹುಡುಕಾಟದ ಪಾತ್ರ ಇದೆ. ಇದು ಆಧುನೀಕರಣ ಥಿಯರಿಯನ್ನು ಬಲವಾಗಿ ಪ್ರಭಾವಿಸಿದೆ. ಒಂದು ಕಾಲದಲ್ಲಿ ಬಂಡವಾಳದ ವಿಸ್ತರಣೆ (ಆಧುನೀಕರಣ) ಮತ್ತು ಸಾಂಪ್ರದಾಯಿಕ ಸಮುದಾಯ ಬದುಕು ಪರಸ್ಪರ ವಿರುದ್ಧ ಎನ್ನುವ ವಿವರಣೆ ಚಾಲ್ತಿಯಲ್ಲಿತ್ತು. ಆದರೆ ನಂತರದ ದಿನಗಳಲ್ಲಿ, ಮುಖ್ಯವಾಗಿ ಅಭಿವೃದ್ಧಿಶೀಲ ದೇಶಗಳಲ್ಲಿ ನಡೆದ ಆಧುನೀಕರಣದಲ್ಲಿ ಆಧಾರಿಸಿ ಬಂಡವಾಳ ಮತ್ತು ಸಮುದಾಯ ಬದುಕಿನ ಬಗ್ಗೆ ಹೊಸ ಥಿಯರಿಗಳು ಬಂದವು. ಅವುಗಳ ಪ್ರಕಾರ ಬಂಡವಾಳದ ವಿಸ್ತರಣೆ ಮತ್ತು ಸಾಂಪ್ರದಾಯಿಕ ಸಮುದಾಯ ಬದುಕು ಪರಸ್ಪರ ವಿರುದ್ಧ ಆಗಬೇಕಿಲ್ಲ; ಪೂರಕವೂ ಆಗಬಹುದು ಎನ್ನುವ ನಂಬಿಕೆ ಬಲಗೊಳ್ಳುತ್ತ ಬಂತು. ಈ ಬದಲಾವಣೆ ಎರಡು ರೀತಿಯ ಬೆಳವಣಿಗೆಗಳನ್ನು ಆಧರಿಸಿದೆ. ಒಂದು, ಆಧುನೀಕರಣದ ನಡುವೆಯೂ ಸಾಂಪ್ರದಾಯಿಕ ಸಮುದಾಯಗಳು ಸಣ್ಣ ಪುಟ್ಟ ಪರಿವರ್ತನೆಗಳನ್ನು ಮಾಡಿಕೊಂಡು ಜೀವಂತ ಉಳಿದಿರುವುದು. ಮಾತ್ರವಲ್ಲ ಕೆಲವು ವಿಚಾರಗಳಲ್ಲಿ ಹಿಂದಿಗಿಂತಲೂ ಹೆಚ್ಚು ಪ್ರಬಲವಾಗಿ ವ್ಯಕ್ತವಾದವು. ನಮ್ಮ ದೇಶದ ಉದಾಹರಣೆ ತೆಗೆದುಕೊಳ್ಳುವುದಾದರೆ ಆಧುನೀಕರಣದೊಂದಿಗೆ ನಮ್ಮ ಜಾತಿ, ಧರ್ಮ ಮತ್ತು ಕುಟುಂಬ ವ್ಯವಸ್ಥೆ ಮೂಲಭೂತವಾಗಿ ಬದಲಾಗಬೇಕಿತ್ತು. ಆದರೆ ಅವೆಲ್ಲ ಸಣ್ಣ ಪುಟ್ಟ ಬದಲಾವಣೆಯೊಂದಿಗೆ ಬಲಯುತಗೊಂಡವು. ಎರಡನೇ ಅಂಶ-ಹಲವಾರು ವ್ಯಾಪಾರಿ ಸಮುದಾಯಗಳು ತಮ್ಮ ಸಮುದಾಯ ಬದುಕನ್ನು ಬಂಡವಾಳದ ವೃದ್ಧಿಗೆ ಪರಿಣಾಮಕಾರಿಯಾಗಿ ಬಳಸಿಕೊಂಡವು. ಇದು ಕೇವಲ ಭಾರತದ ಮಾರ್ವಾಡಿ ಅಥವಾ ಜೈನ ವ್ಯಾಪಾರಿಗಳಿಗೆ ಮಾತ್ರ ಅನ್ವಯಿಸುವುದಲ್ಲ. ಪ್ರಪಂಚದ ಎಲ್ಲ ಕಡೆ ಇಂತಹ ವ್ಯಾಪಾರಿ ಸಮುದಾಯಗಳು ಇವೆ ಮತ್ತು ಅವು ತಮ್ಮ ಸಾಂಪ್ರದಾಯಿಕ ಸಂಬಂಧಗಳನ್ನು ಬಂಡವಾಳದ ವೃದ್ಧಿಗೆ ಪರಿಣಾಮಕಾರಿಯಾಗಿ ಬಳಸಿಕೊಂಡಿವೆ.

ಇದರ ಜತೆ ಹಲವಾರು ಬಡ ದೇಶಗಳಲ್ಲಿ ಆಧುನಿಕ ಸಂಸ್ಥೆಗಳು ಮಾಡಲು ಸಾಧ್ಯವಿಲ್ಲದ್ದನ್ನು ಸಾಂಪ್ರದಾಯಿಕ ಸಂಸ್ಥೆಗಳು ಸಾಧಿಸಿದವು. ಉದಾಹರಣೆಗೆ ಸಣ್ಣ ಮಟ್ಟದ ಸಾಲ ವ್ಯವಸ್ಥೆ. ಆಧುನಿಕ ಬ್ಯಾಂಕ್‌ಗಳು ಬಡ ವರ್ಗಕ್ಕೆ ಸಾಲ ಕೊಡಲು ಹಿಂದೆ ಮುಂದೆ ನೋಡುತ್ತವೆ. ಅದಕ್ಕೆ ಕಾರಣ ಸಾಲ ಮರು ಪಾವತಿ ಕುರಿತು ಬ್ಯಾಂಕಿನವರಿಗೆ ಇರುವ ಶಂಕೆ. ಒಂದು ವೇಳೆ ಸಾಲ ಮರು ಪಾವತಿಯಾಗದಿದ್ದರೆ ಸಾಲಗಾರನ ಚರ ಅಥವಾ ಸ್ಥಿರ ಆಸ್ತಿಯನ್ನು ಏಲಂ ಮಾಡಿ ಬ್ಯಾಂಕ್ ತನ್ನ ಬಾಕಿಯನ್ನು ಹಿಂದಕ್ಕೆ ಪಡಿಯವುದು ಕ್ರಮ. ಆದರೆ ಚರ ಅಥವಾ ಸ್ಥಿರ ಆಸ್ತಿಯೇ ಇಲ್ಲದ ಬಡವರಿಗೆ ಸಾಲ ಕೊಟ್ಟರೆ ಅವರಿಂದ ಹಿಂದಕ್ಕೆ ಪಡೆಯುವುದಾದರೂ ಹೇಗೆ? ಈ ಸಮಸ್ಯೆಯಿಂದ ಹೊರ ಬರುವ ಉಪಾಯವನ್ನು ಬಾಂಗ್ಲ ದೇಶದ ಬಡ ಸಮುದಾಯಗಳು ತೋರಿಸಿಕೊಟ್ಟಿವೆ (ಮಹಮ್ಮದ್ ಮೊಹಿದ್ದೀನ್ ಅಬ್ದುಲ್ಲ, ೧೯೭೯). ಸಾಲ ಪಡೆಯಲು ಇಚ್ಚೆಸುವವರು ಒಂದು ಗುಂಪು ಮಾಡಿಕೊಳ್ಳುತ್ತಾರೆ. ಆ ಗುಂಪಿನಲ್ಲಿ ಒಬ್ಬರಿಗೆ ಅಥವಾ ಕೆಲವರಿಗೆ ಉಳಿದ ಸದಸ್ಯರ ಜಾಮೀನಿನ ಆಧಾರದಲ್ಲಿ ಸಾಲ ಕೊಡುತ್ತಾರೆ. ಸಾಲ ಪಡಕೊಂಡವರು ಕಟ್ಟಿದ ನಂತರ ಗುಂಪಿನ ಇತರ ಸದಸ್ಯರಿಗೆ ಸಾಲ ಪಡೆಯುವ ಹಕ್ಕು ಬರುತ್ತದೆ. ಈ ವ್ಯವಸ್ಥೆ ಸಾಲ ಪಡೆದವರನ್ನು ಕಾಲಕ್ಕೆ ಸರಿಯಾಗಿ ಸಂದಾಯ ಮಾಡುವಂತೆ ಇತರರು ಒತ್ತಾಯಿಸುವಂತೆ ಮಾಡುತ್ತದೆ. ಇದೇ ಸಂದರ್ಭದಲ್ಲಿ ಸಂಘಟಿತ ಕುರಿತ ಬರಹಗಳು ಸಹಭಾಗಿತ್ವದ ಕಲ್ಪನೆಯನ್ನು ಇನ್ನೂ ಬಲಗೊಳಿಸಿದವು. ಸಂಘಟಿತ ಬದುಕಿನ ಇಂತಹ ಸಣ್ಣ ಸಣ್ಣ ಹನಿಗಳು ಸೇರಿ ಆರೋಗ್ಯಕರ ಸಮಾಜ ರೂಪುಗೊಳ್ಳುತ್ತದೆ ಎಂದು ಮೇಲಿನ ಥಿಯರಿಗಳು ವಾದಿಸುತ್ತವೆ. ಕೋಟಿಗಟ್ಟಲೆ ದುಡ್ಡನ್ನು ಬಡ ದೇಶಗಳಲ್ಲಿ ವಿನಿಯೋಜಿಸುವ ವಿಶ್ವ ಬ್ಯಾಂಕಿಗೆ ಈ ಥಿಯರಿಗಳು ವರದಾನವಾದವು. ಯಾಕೆಂದರೆ ಶ್ರೀಮಂತ ದೇಶಗಳು ಕೊಡಮಾಡುವ ಅಭಿವೃದ್ಧಿ ಮಾದರಿಗಳನ್ನು ಯಥಾ ರೂಪದಲ್ಲಿ ಅನುಸರಿಸಿದರೂ ಬಡ ದೇಶಗಳು ಉದ್ಧಾರವಾಗುವ ಲಕ್ಷಣ ಕಾಣುತ್ತಿಲ್ಲ. ಅಂತಹ ಸಂದರ್ಭದಲ್ಲಿ ನೀವು ಪುನಃ ಬಂಡವಾಳ ಹೂಡಿ ಎಂದು ಬಡ ದೇಶಗಳಿಗೆ ಸಾಲ ಕೊಡುವುದಾದರೂ ಹೇಗೆ? ಇಂತಹ ಸಂದಿಗ್ಧ ಸಂದರ್ಭದಲ್ಲಿ ಅಭಿವೃದ್ಧಿ ಮತ್ತು ಸಿವಿಲ್ ಸೊಸೈಟಿ ಮಧ್ಯೆ ಸಂಬಂಧ ಬೆಸೆಯುವ ಈ ಥಿಯರಿಗಳು ವಿಶ್ವ ಬ್ಯಾಂಕಿನವರಿಗೆ ಪ್ರಿಯವಾದವು (ಜೋನ್ ಹೇರಿಸ್, ೨೦೦೧). ಇಂದು ಪ್ರಪಂಚದ ಮೂಲೆ ಮೂಲೆಯಲ್ಲೂ ವರ್ಲ್ಡ್ ಬ್ಯಾಂಕ್ ಸಹಕಾರದೊಂದಿಗೆ ನಡೆಯುವ ಹಲವಾರು ಅಭಿವೃದ್ಧಿ

ಕಾರ್ಯಕ್ರಮಗಳು ಇವೆ. ಕೆರೆ ನೀರಾವರಿಗೂ ವರ್ಲ್ಡ್‌ಧ ಬ್ಯಾಂಕ ನೆರವು ಇದೆ. ಇಲ್ಲೂ ಕೂಡ ಅವರು ಜನರ ಸಹಭಾಗಿತ್ವದಲ್ಲಿ ಯೋಜನೆಯನ್ನು ಜಾರಿಗೊಳಿಸಲು ಸೂಚಿಸಿದ್ದಾರೆ. ಈ ರೀತಿಯಲ್ಲಿ ಬಾಹ್ಯ ಕಾರಣದಿಂದ ಜನರ ಸಹಭಾಗಿತ್ವ ಇಂದು ನಮ್ಮ ಯೋಜನೆಗಳ ಭಾಗವಾಗಿದೆ.

(೨)

**ಸಹಭಾಗಿತ್ವ ಮತ್ತು ಸಮುದಾಯವಾದ**

ಇದರ ಜೊತೆಗೆ ಆಂತರಿಕ ಕಾರಣವು ಇದೆ. ಇದನ್ನು ಸಮುದಾಯವಾದ ಅಥವಾ ಕಮ್ಯುನಿಟೇರಿಯನ್ ರಾಜಕೀಯ ಮತ್ತು ಪರಿಸರ ಚಳವಳಿಗಳು ಫಲ ಎನ್ನಬಹುದು. ಇವರ ಪ್ರಕಾರ ಮಾರುಕಟ್ಟೆ ಆಧಾರಿತ ಮತ್ತ ಪ್ರಭುತ್ವ ಕೇಂದ್ರಕೃತ ಅಭಿವೃದ್ಧಿ ಮಾದರಿಗಳು ನಮ್ಮ ಸಾಮಾಜಿಕ ಪರಿಸರಕ್ಕೆ ಹೇಳಿದ್ದಲ್ಲ. ಐದು ದಶಕಗಳ ಆಧುನೀಕರಣದ ನಂತರವೂ ನಮ್ಮಲ್ಲಿ ಮಾರುಕಟ್ಟೆಯಲ್ಲಿ ವ್ಯವಹರಿಸಿದ ಬಹುದೊಡ್ಡ ಜನವರ್ಗ ಇದೆ. ಈ ವರ್ಗದ ಜನರು ತಮ್ಮ ಸಾಂಪ್ರದಾಯಿಕ ಜೀವನ ಕ್ರಮದಲ್ಲೆ ಬದುಕುತ್ತಿದ್ದಾರೆ (ಮಾಧವ ಗಾಡ್ಗಿಲ್ ಅಂಡ್ ರಾಮಚಂದ್ರ ಗುಹ, ೧೯೯೫). ಭೂಮಿ, ನೀರು, ಅರಣ್ಯ ಇತ್ಯಾದಿಗಳನ್ನು ಅದೇ ಹಳೇ ಕ್ರಮದಲ್ಲಿ ಇವರು ಬಳಸುತ್ತಾರೆ. ಇವರು ಬೆಳೆಯುವುದು ಮಾರುಕಟ್ಟೆಗಾಗಿ ಅಲ್ಲ; ತಮ್ಮ ಹೊಟ್ಟೆ ಪಾಡಿಗಾಗಿ. ಅದೇ ರೀತಿ ಇವರು ಪ್ರಭುತ್ವದ ಕಾನೂನು ಪ್ರಕಾರ ತಮ್ಮ ಬದುಕನ್ನು ರೂಪಿಸಿಕೊಳ್ಳುತ್ತಿಲ್ಲ. ಅಸಂಘಟಿತ ವಲಯದಲ್ಲಿ ದುಡಿಯುವ ಕೋಟಿಗಟ್ಟಲೆ ಜನರಿಗೆ ಪ್ರಭುತ್ವ ಯಾವುದೇ ಸೌಲಭ್ಯ ಕೊಡುತ್ತಿಲ್ಲ. ಅವರಿಗೆ ವಸತಿ, ಶಿಕ್ಷಣ, ಆರೋಗ್ಯ ಇತ್ಯಾದಿಗಳನ್ನು ಅವರ ಕುಟುಂಬ ಭರಿಸುತ್ತದೆ. ಜತೆಗೆ ಕುಟುಂಬ ಮತ್ತು ಸಮುದಾಯ ಅವರ ಬಾಲ್ಯ ಮತ್ತು ಮುಪ್ಪಿನ ಸಂದರ್ಭದಲ್ಲಿ ಸಹಾಯಕ್ಕೆ ಬರುತ್ತಿದೆ. ಹೀಗೆ ಮಾರುಕಟ್ಟೆ ಅಥವಾ ಪ್ರಭುತ್ವ ಕೇಂದ್ರಕೃತ ಅಭಿವೃದ್ಧಿ ಮಾದರಿ ನಮ್ಮ ಪರಿಸರಕ್ಕೆ ಸರಿಯಲ್ಲ ಎಂದು ಸಮುದಾಯವಾದಿಗಳು ವಾದಿಸುತ್ತಾರೆ (ರಜನಿ ಕೊಥಾರಿ, ೧೯೮೮). ಇದರ ಜತೆಗೆ ಆಧುನೀಕರಣ ರೂಪಿಸುವ ಅಮೂರ್ತ ಸ್ವರೂಪದ ವ್ಯಕ್ತಿ ಅಚಾರಿತ್ರಿಕವಾದುದು. ಅಚಾರಿತ್ರಿಕವಾದುದು ಯಾಕೆಂದರೆ ವ್ಯಕ್ತಿ ಕೇವಲ ಸರಕು ಅಥವಾ ಸೇವೆಯನ್ನು ಅನುಭವಿಸುವ ಪ್ರಾಣಿಯಾಗಿರುವುದಿಲ್ಲ. ಆತ ಯಾವುದೋ ಕುಟುಂಬಕ್ಕೆ ಜಾತಿ, ಧರ್ಮಕ್ಕೆ ಸೇರಿದವನು. ಅವುಗಳ ವ್ಯಕ್ತಿ ಬದುಕುವ ಪರಿಸರದ ಮೌಲ್ಯ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಹುಟ್ಟಿನಿಂದ ಸಾವಿನ ತನಕ ವ್ಯಕ್ತಿಯ ಅರಿವನ್ನು ರೂಪಿಸುವ ಕೆಲಸವನ್ನು ಇವು ಮಾಡುತ್ತವೆ. ಹೀಗೆ ಅವುಗಳು ಆತನ ಬೇಕು ಬೇಡಗಳನ್ನು ಪ್ರಭಾವಿಸುತ್ತವೆ. ಆಧುನಿಕ ಅರ್ಥ ಶಾಸ್ತ್ರ ತಿಳಿಸುವಂತೆ ಅದು ವ್ಯಕ್ತಿ ಆಧಾರಿತವಲ್ಲ. ಅದರಿಂದಲೂ ಮುಖ್ಯವಾಗಿ ಅಮೂರ್ತ ಸ್ವರೂಪದ ವ್ಯಕ್ತಿ ಇತರರೊಂದಿಗೆ ಕೇವಲ ಒಪ್ಪಂದ ಆಧಾರಿತ ಸಂಬಂಧ ಇಟ್ಟುಕೊಳ್ಳುತ್ತಾನೆ. ಆ ಸಂಬಂಧ ಕೂಡ ತನ್ನ ವೈಯಕ್ತಿಕ ಲಾಭ ನಷ್ಟಗಳ ಲೆಕ್ಕಾಚಾರದಲ್ಲಿ ನಡೆಯುವುದರಿಂದ ಸಮುದಾಯ ಬದುಕು ನಶಿಸಿದೆ. ಈ ಕ್ರಮದಲ್ಲಿ ರೂಪುಗೊಂಡ ಅಮೂರ್ತ ವ್ಯಕ್ತಿಗೆ ತ್ವರಿತಗತಿಯಲ್ಲಿ ನಡೆಯುವ ಎಲ್ಲ ಬಗೆಯ ಪರಿವರ್ತನೆಗಳನ್ನು ಜೀರ್ಣಿಸಿಕೊಳ್ಳಲು ಆಗುತ್ತಿಲ್ಲ. ಆಧುನಿಕ ಪರಿಕರಗಳ ಮೂಲಕ ಜೀರ್ಣಿಸಿಕೊಳ್ಳುವಷ್ಟು ತಯಾರು ಸಮಾಜದ ಎಲ್ಲಾ ವರ್ಗಗಳಲ್ಲಿ ಇಲ್ಲ. ಈ ಸಂದರ್ಭದಲ್ಲಿ ನಮ್ಮ ಸಂಸ್ಕೃತಿಯಲ್ಲಿ ಚಾರಿತ್ರಿಕವಾಗಿ ರೂಪುಗೊಂಡ ಸಮುದಾಯ ಆಧಾರಿತ ಸಂಪನ್ಮೂಲ ನಿರ್ವಹಣೆ ಪ್ರಕ್ರಿಯೆಗಳನ್ನು ಪುನರ್ ಜೀವಗೊಳಿಸುವ ಅಗತ್ಯವಿದೆ ಎಂದು ಸಮುದಾಯದವರಿಗೂ ಅಭಿಪ್ರಾಯಪಡುತ್ತಾರೆ (ಆಶಿಸ್ ನಂದಿ, ೧೯೮೩).

ವಸಾಹತು ಪೂರ್ವದಲ್ಲಿ ನೆಲ, ಜಲ, ಅರಣ್ಯ ಇತ್ಯಾದಿಗಳ ನಿರ್ವಹಣೆ ಕುರಿತು ನಮ್ಮದೇ ವ್ಯವಸ್ಥೆಗಳು ಇದ್ದವು (ಜೋದ ೧೯೯೩). ಸಾಂಪ್ರದಾಯಿಕ ಸಮಾಜದಲ್ಲಿನ ನಿಕಟ ಮತ್ತು ಪರಸ್ಪರ ಅರಿತಿರುವ ಸಂದರ್ಭದಲ್ಲಿ ಸಮುದಾಯದ ಸಂಪನ್ಮೂಲ ಬಳಕೆ ಮತ್ತು ನಿರ್ವಹಣೆ ಕುರಿತಂತೆ ಸ್ವಯಂ ಪ್ರೇರಿತ ನಿಬಂಧನೆಗಳಿದ್ದವು. ಸ್ಥಳೀಯ ಸಂಪನ್ಮೂಲಗಳನ್ನು ಆಧರಿಸಿ ಬದುಕುತ್ತಿದ್ದ ಸಮುದಾಯಗಳಿಗೆ ಆ ಸಂಪನ್ಮೂಲಗಳ ಬಳಕೆ ಮತ್ತು ಸಂರಕ್ಷಣೆ ಕುರಿತು ತಿಳುವಳಿಕೆಯಿತ್ತು, ಜವಾಬ್ದಾರಿಯಿತ್ತು (ಆಶಿಸ್ ಕೊಥಾರಿ ಮತ್ತು ಇತರರು, ೧೯೮೮). ಆದರೆ ಆಧುನಿಕತೆ ಮುಚ್ಚಿಕೊಂಡಿದ್ದ ಸಮುದಾಯ ಬದುಕನ್ನು ತೆರೆದು ಇತರ ಸಮುದಾಯಗಳೊಂದಿಗೆ ಸಂಪರ್ಕ ಮತ್ತು ವಿನಿಮಯಗಳನ್ನು

ಕಲ್ಪಿಸಿತು. ಈ ಸಂಪರ್ಕ ಮತ್ತು ವಿನಿಮಯ ಇಂದು ಸ್ಥಳೀಯ ಸಂಪನ್ಮೂಲಗಳ ಬಳಕೆಯನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಯೊಂದಿಗೆ ಜೋಡಿಸಿದೆ. ಹಾಗಾಗಿ ಸಂಪನ್ಮೂಲಗಳ ಬಳಕೆ ನಿರ್ಧಾರಗಳು ಇಂದು ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗಿ ರೂಪಿತವಾಗುವುದಿಲ್ಲ. ಬದಲಿಗೆ ಮಾರುಕಟ್ಟೆಗಳ ಅಗತ್ಯಗಳಿಗೆ ಅನುಗುಣವಾಗಿ ಅಮೂರ್ತ ರೂಪದಲ್ಲಿ ಆಗುತ್ತಿವೆ. ಇದು ಎರಡು, ರೀತಿಯ ದುಷ್ಪರಿಣಾಮಗಳಿಗೆ ಕಾರಣವಾಗಿದೆ. ಒಂದು ಸಂಪನ್ಮೂಲಗಳ ಎಗ್ಗಿಲ್ಲದ ನಾಶ ಮತ್ತು ಸ್ಥಳೀಯ ಸಮುದಾಯಗಳು ಕೂಡ ಅವುಗಳ ಸಂರಕ್ಷಣೆ ಬಗ್ಗೆ ದಿವ್ಯ ನಿರ್ಲಕ್ಷ ತೋರುವುದು. ಈ ಸಮಸ್ಯೆಗಳಿಂದ ಹೊರಬರಲು ಒಂದೇ ದಾರಿ – ಸಂಪನ್ಮೂಲಗಳ ನಿರ್ವಹಣೆಯಲ್ಲಿ ಸಮುದಾಯಗಳ ಸಹಭಾಗಿತ್ವ. ತಮ್ಮ ಪರಿಸರದಲ್ಲಿನ ನೆಲ, ಜಲ, ಅರಣ್ಯ ಇತ್ಯಾದಿಗಳ ನಿರ್ವಹಣೆ ಮತ್ತು ಸಂರಕ್ಷಣೆಯ ಜವಾಬ್ದಾರಿಗಳನ್ನು ಸ್ಥಳೀಯ ಸಮುದಾಯಗಳು ವಹಿಸಿಕೊಳ್ಳಬೇಕೆಂದು ಪರಿಸರವಾದಿಗಳು ಮತ್ತು ಸಮುದಾಯ ವಾದಿಗಳು ವಾದಿಸುತ್ತಾರೆ. ಇದೇನು ಹೊಸ ಪ್ರಯೋಗವಲ್ಲ. ಕೆರೆ ಮತ್ತು ಇತರ ಜಲ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಸಮುದಾಯ ಪಾಲುಗೊಂಡಿರುವುದರ ಕುರಿತು ಧಾರಾಳ ಮಾಹಿತಿ ನಮ್ಮ ಚರಿತ್ರೆಯಲ್ಲಿ ಸಿಗುತ್ತದೆ. ಕೆರೆ ಕಟ್ಟಿಸುವುದರಲ್ಲಿ ಊರಿನ ಧನಿಕರ, ವ್ಯಾಪಾರಿಗಳ, ದೇವಸ್ಥಾನಗಳ ಮತ್ತು ರಾಜನ ಪಾತ್ರ ಮಹತ್ವದ್ದು. ಅವುಗಳ ನಿರ್ವಹಣೆ ಮತ್ತು ಸಂರಕ್ಷಣೆಯಲ್ಲಿ ರೈತಾಪಿ ಜನರ ಪಾತ್ರ ಅಲ್ಲಗೆಳೆಯುವಂತಿರಲಿಲ್ಲ. ನಮ್ಮ ಹಿರಿಯರು ಮಾಡಿದ ಪ್ರಯೋಗಗಳಿಂದ ಇಂದಿನ ನಮ್ಮ ಸಮಸ್ಯೆಗಳಿಗೆ ಕೆಲವು ಪರಿಹಾರಗಳಾದರೂ ಸಿಗಬಹುದು. ಆ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಅಗತ್ಯವೆಂದು ಸಮುದಾಯವಾದಿಗಳು ವಾದಿಸುತ್ತಾರೆ. ಜತೆಗೆ ಆಧುನೀಕರಣ ಸಾಂಪ್ರಾದಾಯಿಕ ಸಂಸ್ಥೆಗಳನ್ನು ಸ್ವಲ್ಪ ಮಟ್ಟಿಗೆ ಬದಲಾಯಿಸಿದೆ; ಆದರೆ ಅವುಗಳನ್ನು ಸಂಪೂರ್ಣ ನಾಶಗೊಳಿಸಿಲ್ಲ. ಇಷ್ಟೆಲ್ಲಾ ಆಧುನೀಕರಣ ಪ್ರಕ್ರಿಯೆಯ ನಡುವೆಯೂ ಅವುಗಳ ಜೀವಂತ ಇರುವುದೇ ಅವುಗಳ ಅಂತ:ಸತ್ವಕ್ಕೆ ಸಾಕ್ಷಿ. ಆದುದರಿಂದ ಅವುಗಳನ್ನು ಸಾಂಪ್ರಾದಾಯಿಕ ಸಂಸ್ಥೆಗಳೆಂದು ಮೂಲೆಗುಂಪಾಗಿಸುವುದು ಸರಿಯಲ್ಲ. ಅವುಗಳನ್ನು ನಾಶವಾಗಲು ಬಿಡಬಾರದು; ರಕ್ಷಿಸಿ ಬೆಳಸಬೇಕೆಂದು ಇವರುಗಳ ವಾದ. ಈ ಹಿನ್ನೆಲೆಯಿಂದಲೂ ಜನರ ಸಹಭಾಗಿತ್ವದ ವಿಚಾರವನ್ನು ನೋಡಬಹುದು.

ಹೀಗೆ ನಾಲ್ಕು ದಶಕಗಳ ಆಧುನೀಕರಣ ನಂತರವೂ ಶತಮಾನಗಳ ಅಸಮಾನತೆ ಕಡಿಮೆಯಾಗದಿರಲು ಕಾರಣ ಎಲ್ಲ ಕ್ಷೇತ್ರಗಳಲ್ಲೂ ಪ್ರಭುತ್ವದ ಅತಿಯಾಗಿ ಮೂಗು ತೂರಿಸುವುದೇ ಆಗಿದೆ ಎನ್ನುವ ತೀರ್ಮಾನಕ್ಕೆ ಸಮುದಾಯವಾದಿಗಳು ಬರುತ್ತಾರೆ. ಪ್ರಭುತ್ವವನ್ನು ಹೊರತು ಪಡಿಸಿದ ಪ್ರಯತ್ನಗಳಿಗೆ ಪ್ರಾಮುಖ್ಯತೆ ಕೊಡುವುದೆ ಈ ಸಮಸ್ಯೆಗಳಿಗೆ ಸರಿಯಾದ ಪರಿಹಾರವೆಂದು ಮನಗಾಣಲಾಗಿದೆ. ಎಲ್ಲ ಕ್ಷೇತ್ರಗಳಲ್ಲೂ ಖಾಸಗಿ ಮತ್ತು ಸಮುದಾಯ ಪ್ರಯತ್ನಗಳಿಗೆ ಮಹತ್ವ ಕೊಡುವುದು ತುಂಬಾ ಅಗತ್ಯ ಎನ್ನುವ ಧೋರಣೆ ಇಲ್ಲಿದೆ. ಪ್ರಭುತ್ವ ಬಲಯುತವಾಗಿ ಇದ್ದುದರಿಂದಲೇ ಖಾಸಗಿ ಮತ್ತು ಸಮುದಾಯ ಪ್ರಯತ್ನಗಳು ನಮ್ಮಲ್ಲಿ ಸರಿಯಾಗಿ ಬೇರೂರಲು ಆಗಿಲ್ಲ. ಖಾಸಗಿ ಮತ್ತು ಸಮುದಾಯ ಪ್ರಯತ್ನಗಳು ಸರಿಯಾಗಿ ಬೇರೂರಬೇಕಾದರೆ ಪ್ರಭುತ್ವ ಹಿಂದಕ್ಕೆ ಸರಿಯಲೇ ಬೇಕು ಎನ್ನುವ ನಿಲುವು ಇದೆ. ಅವರಲ್ಲಿ ಕೆಲವರು ಈ ವಾದವನ್ನು ಅದರ ಪರಾಕಾಷ್ಠೆಗೆ ಒಯ್ದು ಪ್ರಭುತ್ವದ ಇರುವಿಕೆಯೇ ಅನಾವಶ್ಯ ಎನ್ನುವ ಅರ್ಥ ಬರುವ ಹಾಗೆ ಮಾತಾಡುತ್ತಿದ್ದಾರೆ. ಇದರ ಜತೆಗೆ ಸಮುದಾಯ ಪ್ರಯತ್ನಗಳು ನಮ್ಮಲ್ಲಿ ಅತಿ ಸುಲಭದಲ್ಲಿ ಬೇರೂರಬಹುದು ಎನ್ನುವ ಗ್ರಹಿಕೆನೂ ಇದೆ. ಯಾಕೆಂದರೆ ನಮ್ಮದು ಮೂಲತಃ ಒಂದು ಸಮುದಾಯದ ನೆಲೆಯಲ್ಲಿ ಗುರುತಿಸಿಕೊಳ್ಳುವ ಸಮಾಜ. ಇಲ್ಲಿ ಪಶ್ಚಿಮದಲ್ಲಿ ಇದ್ದಂತೆ ವ್ಯಕ್ತಿಗಳು ಇಲ್ಲ; ಸಮುದಾಯಗಳು ಮಾತ್ರ ಇರುವುದು. ಈ ಹಿನ್ನೆಲೆಯಲ್ಲಿ ಸಮುದಾಯಗಳನ್ನು ರೂಪಿಸುವ ಮತ್ತು ಆ ಮೂಲಕ ಅವುಗಳನ್ನು ಆಧುನಿಕ ಅವಶ್ಯಕತೆಗಳಿಗೆ ತಯಾರುಗೊಳಿಸುವ ಪ್ರಶ್ನೆಯೇ ಇಲ್ಲ. ಚಾರಿತ್ರಿಕವಾಗಿ ನಮ್ಮ ಸಂಸ್ಕೃತಿಯಲ್ಲಿ ರೂಪುಗೊಂಡ ನಮ್ಮ ಸಮುದಾಯಗಳು ವಿಶೇಷ ಬದಲಾವಣೆ ಇಲ್ಲದೆ ಇಂದಿನ ಅಗತ್ಯಗಳಿಗೆ ಧಾರಾಳ ಸ್ಪಂದಿಸಬಹುದು ಎನ್ನುವ ಗ್ರಹಿತವೂ ಇದೆ. ಇಲ್ಲಿ ಸಮುದಾಯವನ್ನು ಒಂದು ಘರ್ಷಣೆ ಇಲ್ಲದ, ಸಮಸ್ಯೆರಹಿತ ಸ್ಪೇಸ್ ಆಗಿ ನೋಡಲಾಗುತ್ತಿದೆ. ಇಂತಹ ಸಮುದಾಯಗಳೂ ಸ್ವತಂತ್ರವಾಗಿ ಒಟ್ಟು ಸೇರಿ ತಮ್ಮ ಸಮಸ್ಯೆಗಳಿಗೆ ತಾವೇ ಪರಿಹಾರ ಕಂಡುಕೊಳ್ಳುತ್ತಾರೆ ಎನ್ನುವ ನಂಬಿಕೆ ಇದೆ.

**ಕಾರ್ಯರೂಪದಲ್ಲಿ ಸಹಭಾಗಿತ್ವ**

ತಮ್ಮ ಸಮಸ್ಯೆಗಳೇನು? ಅವುಗಳ ಹಿಂದಿರುವ ಮುಖ್ಯ ಕಾರಣಗಳೇನು? ಮತ್ತು ಅವುಗಳನ್ನು ಹೇಗೆ ಪರಿಹರಿಸಬಹುದು? ಎನ್ನುವ ಪ್ರಶ್ನೆಗಳೊಂದಿಗೆ ಸಹಭಾಗಿತ್ವ ಅಭಿವೃದ್ಧಿ ಆರಂಭವಾಗುತ್ತದೆ. ಸಮಸ್ಯೆಗಳ ಹಿಂದಿರುವ ಕಾರಣಗಳನ್ನು ವಿಶ್ಲೇಷಿಸುವ ಮೂಲಕ ತಾವು ಬದುಕುವ ಪರಿಸರದ ಪರಿಚಯವಾಗುತ್ತದೆ. ಅಲ್ಲಿರುವ ವಿವಿಧ ಸಾಮಾಜಿಕ ಸ್ತರಗಳು, ಅವುಗಳ ಆರ್ಥಿಕ ಸ್ಥಿತಿಗತಿ, ಅಧಿಕಾರದ ಹಂಚಿಕೆ, ಇತ್ಯಾದಿಗಳ ಕಿರು ಪರಿಚಯ ತಾವು ಬದುಕುವ ಪರಿಸರದ ಪರಿಚಯಕ್ಕೆ ಅಗತ್ಯ. ನಂತರದ ಹಂತದಲ್ಲಿ ಸಂಘಟಿತರಾಗಿ ತಮ್ಮ ಸ್ಥಿತಿಗೆ ಕಾರಣವಾದ ಪರಿಸರದ ಪರಿಚಯಕ್ಕೆ ಅಗತ್ಯ. ನಂತರದ ಹಂತದಲ್ಲಿ ಸಂಘಟಿತರಾಗಿ ತಮ್ಮ ಸ್ಥಿತಿಗೆ ಕಾರಣವಾದ ಪರಿಸರದ ಪರಿಚಯಕ್ಕೆ ಅಗತ್ಯ. ನಂತರದ ಹಂತದಲ್ಲಿ ಸಂಘಟಿತರಾಗಿ ತಮ್ಮ ಸ್ಥಿತಿಗೆ ಕಾರಣವಾದ ಪರಿಸರದ ಪರಿವರ್ತನೆಗೆ ಪ್ರಯತ್ನ. ಹೀಗೆ ತಮ್ಮ ಕುಂಟಿತ ಅಭಿವೃದ್ಧಿಗೆ ಕಾರಣವಾದ ಪರಿಸರದ ಪರಿಚಯ ಮಾಡಿಕೊಂಡು ಅದರ ಪರಿವರ್ತನೆಗೆ ಪ್ರಯತ್ನಿಸುವ ಪ್ರಕ್ರಿಯೆ ಜನರನ್ನು ಸಶಕ್ತೀಕರಣಗೊಳಿಸುತ್ತದೆ ಎನ್ನುವ ಗ್ರಹಿತವಿದೆ. ಕುಂಟಿತ ಅಭಿವೃದ್ಧಿಗೆ ಕಾರಣವಾದ ಪರಿಸರವನ್ನು ಪರಿವರ್ತಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೂಲಕ ಕೆಳವರ್ಗದ ಜನರು ಪ್ರಪಂಚವನ್ನು ನೋಡುವ ತಮ್ಮ ದೃಷ್ಟಿಕೋನದಲ್ಲಿ ಸಾಕಷ್ಟು ಪರಿವರ್ತನೆ ಮಾಡಿಕೊಳ್ಳುತ್ತಾರೆ. ಇದು ಕೆಳವರ್ಗದ ಸಶಕ್ತೀಕರಣಕ್ಕೆ ಅಥವಾ ಹೆಚ್ಚಿನ ಅಧಿಕಾರಕ್ಕೆ ಮೂಲವಾಗುತ್ತದೆ ಎನ್ನುತ್ತಾರೆ. ಆದರೆ ಅಷ್ಟು ಸುಲಭದಲ್ಲಿ ಅಧಿಕಾರದ ಮರುವಿತರಣೆ ಸಾಧ್ಯವೇ? ಸಾಮಾನ್ಯವಾಗಿ ಸಮಾಜದಲ್ಲಿನ ಅಧಿಕಾರದ ಹಂಚುವಿಕೆಯನ್ನು ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಊಹಿಸಿಕೊಳ್ಳಲಾಗುತ್ತದೆ. ಅಂತಹ ನಿರ್ದಿಷ್ಟ ಪ್ರಮಾಣದ ಅಧಿಕಾರ ಸಮಾಜದ ವಿವಿಧ ಸ್ತರಗಳಲ್ಲಿ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಇರುತ್ತದೆ. ಇಂತಹ ವ್ಯವಸ್ಥೆಯಲ್ಲಿ ಒಂದು ವರ್ಗದ ಅಧಿಕಾರದ ಪ್ರಮಾಣದಲ್ಲಿನ ಏರುಪೇರು ಅನಿವಾರ್ಯವಾಗಿ ಮತ್ತೊಂದು ವರ್ಗದ ಅಧಿಕಾರದ ಪ್ರಮಾಣವನ್ನು ಪ್ರಭಾವಿಸುತ್ತದೆ. ಆವಾಗ ಅಧಿಕಾರ ಕಳಕೊಳ್ಳಬೇಕಾದ ವರ್ಗ ಪ್ರತಿಭಟಿಸುವುದಿಲ್ಲವೇ? ಈ ಸಂದೇಹಕ್ಕೂ ಸಹಭಾಗಿತ್ವ ಚಿಂತನೆಯಲ್ಲಿ ಪರಿಹಾರವಿದೆ. ಅವರ ಪ್ರಕಾರ ಅಧಿಕಾರವನ್ನು ನಿರ್ದಿಷ್ಟ ಪ್ರಮಾಣದಲ್ಲಿ ಮತ್ತು ನಿರ್ದಿಷ್ಟ ಕ್ಷೇತ್ರದಲ್ಲಿ ಊಹಿಸಿಕೊಳ್ಳುವುದೇ ಸರಿಯಲ್ಲ. ಅಧಿಕಾರ ಅನಿರ್ದಿಷ್ಟ ಮತ್ತು ಬಹುರೂಪಿ. ಆದುದರಿಂದ ಅದರ ಬಹುರೂಪಿ ಮೂಲಗಳನ್ನು ಕೆದಕುವ ಮೂಲಕ ಇಡೀ ಸಮುದಾಯದ ಅಧಿಕಾರದ ಪ್ರಮಾಣವನ್ನು ಹೆಚ್ಚಿಸಬಹುದು. ಆ ರೀತಿ ಹೆಚ್ಚುವ ಅಧಿಕಾರದಲ್ಲಿ ಪಾಲು ಪಡೆಯುವುದು ಸುಲಭ ಎಂದು ಸಹಭಾಗಿತ್ವವಾದಿಗಳ ಅಭಿಪ್ರಾಯ. ಆದರೆ ವಾಸ್ತವ ಸಹಭಾಗಿತ್ವ ಅಥವಾ ಸೋಶಿಯಲ್ ಕ್ಯಾಪಿಟಲ್ ಥಿಯರಿಯಲ್ಲಿ ಹೇಳಿದಂತೆ ಇರುತ್ತದೆಯೇ?

ಭಾರತದಂತಹ ಅಸಮಾನ ಸಾಮಾಜಿಕ ವ್ಯವಸ್ಥೆಯಲ್ಲಿ ಸೋಶಿಯಲ್ ಕ್ಯಾಪಿಟಲ್‌ನ ಪರಿಕಲ್ಪನೆಯೇ ಅವಾಸ್ತವ ಆಗಬಹುದೆಂಬ ನಿಲುವುಗಳಿವೆ (ಸುಸಾನೆ ಹೊಬರ್ ರುಡಾಲ್ಪ, ೨೦೦೦). ಇದರ ಜತೆ ನಮ್ಮ ಸಮಾಜದ ಸಂಕೀರ್ಣತೆಯನ್ನು ಹಿಡಿದು ಕೊಡಲು ಸೋಶಿಯಲ್ ಕ್ಯಾಪಿಟಲ್ ಶಕ್ತವಾಗಿಲ್ಲವೆಂದು ಅಧ್ಯಯನಗಳು ತಿಳಿಸುತ್ತವೆ. ಗ್ರಾಮ ಪಂಚಾಯತಿ ರಾಜಕೀಯದ ಬಗ್ಗೆ ಅಧ್ಯಯನ ಮಾಡಿದ ಸುಧಾ ಪೈಯವರ ಪ್ರಕಾರ ಒಂದು ಸಮುದಾಯಕ್ಕೆ ಸೇರಿದವರ ನಡುವೆ ಸೋಶಿಯಲ್ ಕ್ಯಾಪಿಟಲ್ ಇರುತ್ತದೆ. ಆದರೆ, ಎರಡು ಸಮುದಾಯಗಳ ನಡುವೆ ಸೋಶಿಯಲ್ ಕ್ಯಾಪಿಟಲ್ ಇರುತ್ತದೆ ಎನ್ನಲು ಸಾಧ್ಯವಿಲ್ಲ (ಸುಧಾ ಪೈ ೨೦೦೧). ಉತ್ತರ ಪ್ರದೇಶದಲ್ಲಿ ಮಾಯಾವತಿ ಮುಖ್ಯ ಮಂತ್ರಿಯಾಗಿದ್ದ ಸಂದರ್ಭದಲ್ಲಿನ ಗ್ರಾಮ ಪಂಚಾಯತ್ ರಾಜಕೀಯವನ್ನು ಅಧ್ಯಯನ ಮಾಡಿ ಈ ತೀರ್ಮಾನಕ್ಕೆ ಅವರು ಬರುತ್ತಾರೆ. ಬಹುಜನ ಸಮಾಜವಾದಿ ಪಕ್ಷದ ಪ್ರಭಾವದಿಂದ ಅಲ್ಲಿ ಗ್ರಾಮೀಣ ಪ್ರದೇಶದಲ್ಲೂ ದಲಿತರು ರಾಜಕೀಯ ಸಂಘಟನೆಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳಲು ರಾಜಕೀಯದಲ್ಲಿ ಪಾಲುಗೊಳ್ಳುತ್ತಿದ್ದವು. ಅವು ಗ್ರಾಮ ಪಂಚಾಯತ್ ರಾಜಕೀಯದಲ್ಲಿ ಸಕ್ರೀಯವಾಗಿ ಪಾಲುಗೊಂಡು ನಿರ್ಣಾಯಕ ಪಾತ್ರವಹಿಸಲು ಆರಂಭಿಸಿದವು. ಗ್ರಾಮ ಪಂಚಾಯತ್‌ನಲ್ಲಿ ದಲತರ ಪ್ರಭಾವ ಹೆಚ್ಚಿದಂತೆ ಇತರ ಕೆಳ ಜಾತಿಯವರು ಮತ್ತು ದಲಿತರ ನಡುವೆ ಬಿರುಕು ಹೆಚ್ಚುತ್ತಾ ಹೋಯಿತು. ಹಲವಾರು ಕೆಳ ಜಾತಿಗಳು ದಲಿತರಷ್ಟೆ ಆರ್ಥಿಕವಾಗಿ, ರಾಜಕೀಯವಾಗಿ ಹಿಂದುಳಿದವರು ಇಂತಹ ದಲಿತ ಸಂಘಟನೆಗಳಿಂದ ಹೊರಗುಳಿಯಬೇಕಾಯಿತು. ಒಂದು ಕಾಲದಲ್ಲಿ ದಲಿತರು ಮತ್ತು ಮೇಲ್ ಜಾತಿ ನಡುವೆ ಬಿರುಕಿತ್ತು. ಆದರೆ ಹೊಸ ರಾಜಕೀಯ ಪ್ರಕ್ರಿಯೆಯಿಂದ ಕೆಳವರ್ಗದ ನಡುವೆ ಬಿರುಕು ಸೃಷ್ಟಿಯಾಯಿತೆಂದು ಅಧ್ಯಯನಕಾರರ ಅಭಿಪ್ರಾಯ. ಆದುದರಿಂದ ಸಂಪನ್ಮೂಲ ನಿರ್ವಹಣೆಗಾಗಿ ರೂಪುಗೊಳ್ಳುವ ಸಮುದಾಯಗಳಲ್ಲಿ ಆಂತರಿಕವಾಗಿ ಸದಸ್ಯರ ನಡುವೆ ಹೆಚ್ಚು ಕಡಿಮೆ ಒಳ್ಳೆಯ ಸಂಬಂಧ ಇರುತ್ತದೆ. ಆದರೆ ಸಮುದಾಯದಿಂದ ಹೊರಗಿನವರ ಜತೆ ಘರ್ಷಣೆ ನಡೆದಿರುತ್ತದೆ.

ಸೋಶಿಯಲ್ ಕ್ಯಾಪಿಟಲ್, ಸಿವಿಲ್ ಸೊಸೈಟಿ ಇತ್ಯಾದಿಗಳು ಮತ್ತು ಪ್ರಜಾಪ್ರಭುತ್ವ ಮಾದರಿಯಲ್ಲಿ ಕೆಲಸ ಮಾಡುವ ಸಂಸ್ಥೆಗಳ ನಡುವೆ ಒಂದು ವಿಧದ ಆರೋಗ್ಯಕರ ಸಂಬಂಧವನ್ನು ಸೋಶಿಯಲ್ ಕ್ಯಾಪಿಟಲ್‌ನ ಥಿಯರಿಸ್ಟ್‌ರು ಪ್ರತಿಪಾದಿಸುತ್ತಾರೆ. ಸಂಘಟನೆ, ಸಿವಿಲ್ ಸೊಸೈಟಿ, ಸೋಶಿಯಲ್ ಕ್ಯಾಪಿಟಲ್ ಇತ್ಯಾದಿಗಳು ಪ್ರಜಾಪ್ರಭುತ್ವದ ಅಡಿಪಾಯಗಳಾಗಿ ಚಿತ್ರಿತವಾಗಿವೆ. ಆದರೆ ನಮ್ಮಲ್ಲಿನ ಸಾಮಾಜಿಕ ವಾಸ್ತವತೆ ಆ ರೀತಿ ಇದೆಯೇ? ಎಷ್ಟೋ ಸಂದರ್ಭಗಳಲ್ಲಿ ಅವೆರಡರ ನಡುವೆ ನಕರಾತ್ಮಕ ಸಂಬಂಧವಿರುವುದನ್ನು ನಾವು ಕಾಣಬಹುದು. ತಳ ಮಟ್ಟದಲ್ಲಿ ಪ್ರಜಾಪ್ರಭುತ್ವ ಕಾರ್ಯರೂಪಕ್ಕೆ ಬರುವುದು ಚುನಾವಣೆ, ಪಾರ್ಟಿ, ಪ್ರಚಾರ ಇತ್ಯಾದಿಗಳ ಮೂಲಕ. ಇವು ಸೋಶಿಯಲ್ ಕ್ಯಾಪಿಟಲ್‌ನ್ನು ಬೆಳಸುವುದರ ಬದಲು ಮುರಿದ ಸಂದರ್ಭಗಳು ಹೆಚ್ಚು ಇವೆ. ನಿರಜಾ ಜಯಲ್ ಅವರು ಹಿಮಾಲಯ ಪ್ರದೇಶದ ಎರಡು ಹಳ್ಳಿಗಳಲ್ಲಿ ಸಮುದಾಯ ಅರಣ್ಯ ನಿರ್ವಹಣೆ ಕುರಿತ ಅಧ್ಯಯನ ಕೈಗೊಂಡಿದ್ದರು (ನಿರಜಾ ಗೋಪಾಲ್ ಜಯಲ್, ೨೦೦೧). ಆ ಹಳ್ಳಿಗಳ ಸರಹದ್ದಿನಲ್ಲಿ ಸಾಕಷ್ಟು ಪ್ರಮಾಣದ ಗಿಡಮರಗಳಿದ್ದವು. ಕಾಲಕ್ರಮೇಣ ಊರವರ ಮತ್ತು ಇತರರ ದಿಕ್ಕುದಿಸೆಯಿಲ್ಲದ ಮರ ಕಡಿಯುವಿಕೆಯಿಂದ ಅರಣ್ಯ ಸಂಪೂರ್ಣ ನಾಶವಾಗುವ ಸ್ಥಿತಿಬಂತು. ಆ ಸಂದರ್ಭದಲ್ಲಿ ಗಾಂಧಿ ತತ್ತ್ವ ಆಧಾರಿತ ಚಿಪ್ಕೊ ಚಳವಳಿ ಆ ಪ್ರದೇಶಗಳಲ್ಲಿ ಶುರುವಾಯಿತು. ಅದರಿಂದ ಪ್ರಭಾವಿತರಾದ ಊರವರು ಊರ ಪ್ರಮುಖರ ನಾಯಕತ್ವದಲ್ಲಿ ಅರಣ್ಯ ರಕ್ಷಣೆಗಾಗಿ ಸಂಘಟನೆಗಳನ್ನು ಮಾಡಿಕೊಂಡರು. ಆ ಸಂಘಟನೆಗಳಲ್ಲಿ ಊರಿನ ಎಲ್ಲ ಜನರು ಪಾಲುಗೊಂಡರು. ಅರಣ್ಯ ಬೆಳೆಸುವುದರಿಂದ ಹಿಡಿದು ಅದರ ರಕ್ಷಣೆ, ಉಪಯೋಗ ಇತ್ಯಾದಿಗಳ ಕುರಿತು ಊರವರೆಲ್ಲ ಸೇರಿ ನೀತಿ ನಿಬಂಧನೆಗಳನ್ನು ಮಾಡಿಕೊಂಡರು. ಆ ನಿಬಂಧನೆಗಳನ್ನು ಮೀರಿದವರಿಗೆ ದಂಡ ವಿಧಿಸುವ ಮತ್ತು ಇತರ ಶಿಕ್ಷೆ ವಿಧಿಸುವ ಕ್ರಮ ಮಾಡಿಕೊಂಡರು. ಹೀಗೆ ತಮ್ಮ ಸರಹದ್ದಿನ ಅರಣ್ಯ ಹಿಂದಿನ ರೀತಿಯಲ್ಲಿ ನಲನಲಿಸುವಂತೆ ಮಾಡಿದರು. ಸ್ವಲ್ಪ ಕಾಲದ ನಂತರ ಉತ್ತರ ಪ್ರದೇಶ ಸರಕಾರ ಅರಣ್ಯ ಪಂಚಾಯತ್‌ಗಳನ್ನು ರಚಿಸಲು ಆರಂಭಿಸಿತು. ಅರಣ್ಯ ಪಂಚಾಯತ್‌ನಲ್ಲಿ ಊರವರೆಲ್ಲ ಸದಸ್ಯರಾಗಿರುತ್ತಾರೆ. ಅಧ್ಯಕ್ಷ ಮತ್ತು ಪದಾಧಿಕಾರಿಗಳು ಚುನಾಯಿತರಾಗುತ್ತಾರೆ. ಹೀಗೆ ಸಮುದಾಯದ ಅರಣ್ಯ ಸಂರಕ್ಷಣೆಯಲ್ಲಿ ಪ್ರಜಾಪ್ರಭುತ್ವ ಮಾದರಿಯ ಸಂಸ್ಥೆಗಳು ಕಾರ್ಯರೂಪಕ್ಕೆ ಬರಲು ಆರಂಭವಾದವು. ಇದು ಜನರ ಮಧ್ಯೆ ಮತ್ತೊಂದು ವಿಧದ ಸಂಘಟನೆಗೆ ನಾಂದಿ ಹಾಡಿತು. ಜತೆಗೆ ಇಡೀ ಅರಣ್ಯದ ಸಂರಕ್ಷಣೆಯ ಕೇವಲ ಪಂಚಾಯತ್ ನವರ ಜವಾಬ್ದಾರಿಯಾಗುತ್ತಾ ಬಂತು. ಹಿಂದೆ ಸ್ವ ಇಚ್ಚೆಯಿಂದ ಪಾಲುಗೊಳ್ಳುತ್ತಿದ್ದ ಜನ ದೂರ ಸರಿಯಲು ಆರಂಭಿಸಿದರು. ಅರಣ್ಯ ಪಂಚಾಯತ್ ಶುರುವಾಗುವುದರೊಂದಿಗೆ ಕಾನೂನು ಪ್ರಕಾರ ಅರಣ್ಯ ರಕ್ಷಣೆ ಎಲ್ಲರ ಜವಾಬ್ದಾರಿ ಆಯಿತು. ಆದರೆ ವಾಸ್ತವದಲ್ಲಿ ಯಾರ ಜವಾಬ್ದಾರಿಯೂ ಆಗಲಿಲ್ಲ. ಮರಗಿಡಗಳು ಹಿಂದಿನ ರೀತಿಯಲ್ಲಿ ಖಾಲಿಯಾದವು. ಹೀಗೆ ಪ್ರಜಾಪ್ರಭುತ್ವದ ಸ್ಪರ್ಧೆ ಮತ್ತು ರೆಶನಾಲಿಟಿ ಜನರ ಹಿಂದಿನ ಸ್ವ ಇಚ್ಚೆಯಿಂದ ರೂಪುಗೊಂಡ ಸೋಶಿಯಲ್ ಕ್ಯಾಪಿಟಲ್‌ನ್ನು ವೃದ್ಧಿಸುವ ಬದಲು ಕ್ಷೀಣಿಸಿದವು.

ಒಂದು ಕಾಲದಲ್ಲಿ ಯಾವುದೋ ಚಾರಿತ್ರಿಕ ಕಾರಣಗಳಿಂದ ಸೋಶಿಯಲ್ ಕ್ಯಾಪಿಟಲ್ ಇದ್ದು ನಂತರದ ದಿನಗಳಲ್ಲಿ ಆರ್ಥಿಕ ಪ್ರಗತಿಯೊಂದಿಗೆ ಅದು ಕ್ಷೀಣಿಸಿದರೆ ಅದನ್ನು ಪುನಃ ಬೆಳೆಸುವುದು ಹೇಗೆ? ಕಳೆದ ವರ್ಷ ಕೇರಳದಲ್ಲಿ ಗ್ರಾಮ ಮಟ್ಟದ ಯೋಜನೆ ತಯಾರಿಯನ್ನು ಒಂದು ಸಾಮಾಜಿಕ ಚಳವಳಿ ರೂಪದಲ್ಲಿ ನಡೆಸಲಾಯಿತು. ಆ ಸಂದರ್ಭದಲ್ಲಿ ಉತ್ತರ ಕೇರಳದ ಜನರು ದಕ್ಷಿಣ ಕೇರಳದ ಜನರಿಗಿಂತ ಹೆಚ್ಚು ಉತ್ಸಾಹದಿಂದ ಭಾಗವಹಿಸಿದ್ದರು ಮತ್ತು ಯೋಜನೆ ತಯಾರಿ ಕೆಲಸ ಉತ್ತರದಲ್ಲಿ ಪರಿಣಾಮಕಾರಿಯಾಗಿ ಜಾರಿ ಬಂದಿದೆ. ಇದನ್ನು ರಾಬರ್ಟ್ ಪುನಮ್‌ನ ಸಮುದಾಯದ ಪಾಲುಗೊಳ್ಳುವಿಕೆಯ ಥಿಯರಿಯ ದೃಷ್ಟಿಯಿಂದ ನೋಡಿದರೆ ದಕ್ಷಿಣ ಕೇರಳದಲ್ಲಿ ಚಾರಿತ್ರಿಕವಾಗಿಯೇ ಸಹಭಾಗಿತ್ವ ಇರಲಿಲ್ಲ ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಆದರೆ ಚಾರಿತ್ರಿಕವಾಗಿ ದಕ್ಷಿಣ ಕೇರಳ ಆ ರೀತಿ ಇರಲಿಲ್ಲ. ಸಾಮಾಜಿಕ ಹಾಗೂ ರಾಜಕೀಯ ಚಳವಳಿಗಳು ದಕ್ಷಿಣ ಕೇರಳದಲ್ಲಿ ಹಿಂದಿನಿಂದಲೇ ಜೋರಾಗಿದ್ದವು. ಕಮ್ಯುನಿಷ್ಟ್ ಚಳವಳಿ, ಗುರು ನಾರಾಯಣ್ ಚಳವಳಿ, ರೈತ ಕಾರ್ಮಿಕ ಚಳವಳಿ, ಅಸಂಘಟಿತ ಕಾರ್ಮಿಕ ಚಳವಳಿ ಹೀಗೆ ಹಲವಾರು ಚಳವಳಿಗಳು ದಕ್ಷಿಣ ಕೇರಳದಲ್ಲಿ ತುಂಬಾ ಪ್ರಬಲವಾಗಿದ್ದವು. ಹಾಗಿದ್ದರು ಇಂದು ಅಲ್ಲಿ ಸಹಭಾಗಿತ್ವ ಕಡಿಮೆಯಾಗಿದೆ. ಇದಕ್ಕೆ ಮುಖ್ಯ ಕಾರಣ ದಕ್ಷಿಣ ಕೇರಳದಲ್ಲಿ ತುಂಬಾ ಪ್ರಬಲವಾಗಿದ್ದವು. ಹಾಗಿದ್ದರು ಇಂದು ಅಲ್ಲಿ ಸಹಭಾಗಿತ್ವ ಕಡಿಮೆಯಾಗಿದೆ. ಇದಕ್ಕೆ ಮುಖ್ಯ ಕಾರಣ ದಕ್ಷಿಣ ಕೇರಳ ತುಂಬಾ ಸಕ್ರಿಯವಾಗಿ ಅಭಿವೃದ್ಧಿಯಲ್ಲಿ ಪಾಲುಗೊಂಡಿದ್ದು (ರಾಜನ್ ಗುರುಕಲ್, ೨೦೦೧). ಅಂದರೆ ಬಂಡವಾಳ ಸಂಗ್ರಹ ಕಾರ್ಯಕ್ರಮದಲ್ಲಿ. ದಕ್ಷಿಣ ಕೇರಳ ಸಹಭಾಗಿತ್ವದಲ್ಲಿ ಹಿಂದೆ ಉಳಿದಿರಬಹುದು. ಆದರೆ ಅಲ್ಲಿ ಹೆಚ್ಚು ಕಾರ್ಖಾನೆಗಳಿವೆ, ನಗರೀಕರಣ ಜಾಸ್ತಿ ಆಗಿದೆ, ಕೃಷಿಯಿಂದ ಕೃಷಿಯೇತರ

ಚಟುವಟಿಕೆಗಳು ಹೆಚ್ಚಾಗಿವೆ. ಹೀಗೆ ನಾವು ಏನನ್ನು ಅಭಿವೃದ್ಧಿ ಎಂದು ಗುರುತಿಸುತ್ತೇವೆಯೋ ಅದು ದಕ್ಷಿಣ ಕೇರಳದಲ್ಲಿ ಇದೆ. ಆದರೆ ಸೋಶಿಯಲ್ ಕ್ಯಾಪಿಟಲ್ ಕಡಿಮೆ ಇದೆ. ಅಂದರೆ ನಾವು ಮಾರುಕಟ್ಟೆಯಲ್ಲಿ ವ್ಯವಹರಿಸುವುದು ಅನಿವಾರ್ಯವಾದ ಹಾಗೆ ನಮ್ಮ ಸಾಂಪ್ರದಾಯಿಕ ಸಂಬಂಧಗಳನ್ನು ಹಿಂದಿನ ರೀತಿಯಲ್ಲಿ ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಎಲ್ಲ ವಿಧದ ಅಸಮಾನತೆಗಳಿಂದ ತುಂಬಿರುವ ನಮ್ಮ ಸಮಾಜದಲ್ಲಿ ಸೋಶಿಯಲ್ ಕ್ಯಾಪಿಟಲ್‌ನ ಪರಿಕಲ್ಪನೆ ಮತ್ತು ಅದರಿಂದ ಸಾಧ್ಯವಾಗುವ ಸಹಭಾಗಿತ್ವ ಹೇಗೆ ಬೇರೆಯ ರೂಪ ಪಡೆಯಬಹುದು ಎನ್ನುವುದನ್ನು ಮೇಲಿನ ಉದಾಹರಣೆಗಳು ತೋರಿಸಿವೆ. ಅದೇ ಸಂದರ್ಭದಲ್ಲಿ ಸೋಶಿಯಲ್ ಕ್ಯಾಪಿಟಲ್‌ನಿಂದ ಸಮುದಾಯ ಮತ್ತು ಸಮುದಾಯದಿಂದ ಸಹಭಾಗಿತ್ವ ಎನ್ನುವ ಸರಳ ರೇಖಾತ್ಮಕ ಸಂಬಂಧವನ್ನು ಕೂಡ ಇವು ಪ್ರಶ್ನಿಸುತ್ತವೆ. ಇದಕ್ಕೆ ಮುಖ್ಯ ಕಾರಣ ಕೆಲವು ವಿಚಾರಗಳನ್ನು ವಿಶೇಷ ಸಮಸ್ಯೀಕರಿಸಿದೆ ಒಪ್ಪಿಕೊಂಡಿರುವುದು. ಅವುಗಳಲ್ಲಿ ಒಂದು ಸಮುದಾಯ ರೂಪುಗೊಳ್ಳುವ ಪ್ರಶ್ನೆ. ಸೋಶಿಯಲ್ ಕ್ಯಾಪಿಟಲ್‌ನ ಪ್ರವಾದಿ ರಾಬರ್ಟ್ ಪುನಮ್ ಪ್ರಕಾರ ಅದು ಚಾರಿತ್ರಿಕವಾಗಿ ರೂಪುಗೊಳ್ಳುತ್ತದೆ. ಅಂದರೆ ಪ್ರಯತ್ನ ಪೂರ್ವಕವಾಗಿ ರೂಪುಗೊಳ್ಳಲು ಅವಕಾಶ ಇಲ್ಲವೆಂದಲ್ಲ. ಇದೆ ಆದರೆ ಅವುಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವುದರ ಬಗ್ಗೆ ಗುಮಾನಿ ಇದೆ. ನಮ್ಮಲ್ಲಿ ಚಾರಿತ್ರಿಕವಾಗಿ ರೂಪುಗೊಂಡಿರುವ ಸಮುದಾಯಗಳೆಂದರೆ ಜಾತಿ ಆಧಾರಿತ ಸಮುದಾಯಗಳು. ಪಾರ್ಥ ಚಟರ್ಜಿ ಪ್ರಕಾರ ಸಮುದಾಯದ ಕಲ್ಪನೆಯನ್ನು ಜಾತಿಗೆ ಸೀಮಿತಗೊಳಿಸಿದ್ದು ವಸಾಹತು ಶಾಹಿ (ಪಾರ್ಥ ಚಟರ್ಜಿ, ೧೯೯೮). ವಸಾಹತುಶಾಹಿ ಸ್ಥಳೀಯ ಸಮುದಾಯಗಳನ್ನು ಹತೋಟಿಯಲ್ಲಿ ಇಡಲು ಅವುಗಳನ್ನು ಅರ್ಥಮಾಡಿಕೊಳ್ಳಬೇಕಾಯಿತು. ಅದನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ವಿಂಗಡಿಸಬೇಕಾಯಿತು. ವಿಂಗಡಿಸಲು ಜಾತಿಯನ್ನು ಮಾನದಂಡವಾಗಿ ಬಳಸಲಾಯಿತು. ಜಾತಿ ಆಧಾರದ ವಿಂಗಡನೆ ಸಮುದಾಯಗಳ ನಡುವೆ ಖಚಿತವಾದ ಗೆರೆ ಎಳೆಯಿತು. ಹಿಂದೆ ಸಮುದಾಯಗಳ ನಡುವೆ ಅಷ್ಟು ಖಚಿತವಾದ ಗೆರೆಗಳು ಇರಲಿಲ್ಲ. ಒಂದು ಸಮುದಾಯ ಎಲ್ಲಿ ಕೊನೆಗೊಳ್ಳುತ್ತದೆ ಮತ್ತು ಇನ್ನೊಂದು ಸಮುದಾಯ ಎಲ್ಲಿಂದ ಶುರುವಾಗುತ್ತದೆ ಎಂದು ಹೇಳುವುದು ಸುಲಭವಾಗಿರಲಿಲ್ಲ. ಆದರೆ ಯಾವಾಗ ಸೆನ್ಸಸ್ ಮೂಲಕ ಜಾತಿ ಲೆಕ್ಕಚಾರ ಮತ್ತು ರಾಜಕೀಯ ಲಾಭಕ್ಕಾಗಿ ಜಾತಿ ಜನರ ಓಟು ಲೆಕ್ಕಾಚಾರ ಆರಂಭವಾಯಿತೋ ಅಂದಿನಿಂದ ಸಮುದಾಯಗಳ ನಡುವಿನ ಗೆರೆ ಬಲಗೊಳ್ಳುತ್ತಾ ಬಂತು ಎಂದು ಪಾರ್ಥ ಚಟರ್ಜಿಯವರ ವಾದ.

ಇದೇ ಸಂದರ್ಭದಲ್ಲಿ ಆಧುನೀಕರಣದೊಂದಿಗೆ ಸಮುದಾಯಗಳ ನಡುವಿನ ಗೆರೆ ಬಲಗೊಂಡಿತು ಎನ್ನುವುದು ಸರಿಯಲ್ಲ ಎನ್ನುವ ವಾದಗಳು ಇವೆ. ಬಹುಹಿಂದಿನಿಂದಲೇ ನಮ್ಮಲ್ಲಿ ಜಾತಿಗಳಿದ್ದವು, ಜಾತಿ ಪಂಚಾಯತ್‌ಗಳಿದ್ದವು, ಜಾತಿ ಜಾತಿಗಳ ನಡುವೆ ಸಾಕಷ್ಟು ದೊಡ್ಡ ಕಂದರಗಳಿದ್ದವು. ವಸಾಹತು ಪೂರ್ವದಲ್ಲಿ ಜಾತಿ ಜಾತಿ ನಡುವಿನ ಗೆರೆಗಳ ತುಂಬ ಸ್ಪಷ್ಟವಾಗಿದ್ದವು. ವಸಾಹತು ಮತ್ತು ನಂತರದ ಆಧುನೀಕರಣ ಆ ಗೆರೆಗಳನ್ನು ಮಸುಕುಗೊಳಿಸಿವೆ. ಜತೆಗೆ ಸಂಖ್ಯೆಯ ಆಧಾರದಲ್ಲಿ ನಡೆಯುವ ಪ್ರಜಾಪ್ರಭುತ್ವ ಹಿಂದೆ ಆಗಾಧವಾದ ಭಿನ್ನತೆಯನ್ನು ಪ್ರದರ್ಶಿಸುತ್ತಿದ್ದ ಹಲವಾರು ಸಮುದಾಯಗಳನ್ನು ಒಟ್ಟುಗೂಡಿಸಿದೆ ಎನ್ನುವ ವಾದಗಳೂ ಇವೆ (ಆಂದ್ರೆ ಬಿಟೆ ೧೯೯೭). ಹೀಗೆ ಇದೊಂದು ಮುಗಿಯಲಾರದ ಜಗಳ. ಆದುದರಿಂದ ಇದನ್ನು ಈ ದೃಷ್ಟಿಯಿಂದ ನೋಡುವ ಬದಲು ಜಾತಿ ಅಥವಾ ಸಮುದಾಯ ರೂಪುಗೊಳ್ಳುವಿಕೆಯನ್ನು ಒಂದು ಸತತ ಪ್ರಕ್ರಿಯೆಯಾಗಿ ನೋಡಿದರೆ ನಮ್ಮ ಸಮಾಜವನ್ನು ಅರ್ಥಮಾಡಿಕೊಳ್ಳಲು ಸುಲಭವಾದೀತು. ಬೇರೆ ಬೇರೆ ಚಾರಿತ್ರಿಕ ಸಂದರ್ಭಗಳಲ್ಲಿ ಬೇರೆ ಬೇರೆ ನೆಲೆಯಲ್ಲಿ ಸಮುದಾಯಗಳು ನಡುವಿನ ಗೆರೆಗಳು ಬೇರೆಯೇ ಆಗಿದ್ದವು. ಆದುದರಿಂದ ಸಮುದಾಯಗಳ ನಡುವೆ ಹಿಂದೆ ಬಲವಾದ ಗೆರೆಗಳು ಇರಲಿಲ್ಲ ಅಥವಾ ಈಗ ಅಂದರೆ ಆಧುನೀಕರಣದೊಂದಿಗೆ ಆ ಗೆರೆಗಳು ಸ್ಪಷ್ಟವಾಗಿವೆ ಎನ್ನುವ ವಾದ ನಮ್ಮ ಇಂದಿನ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಲ್ಲ. ಸಮುದಾಯಗಳ ನಡುವಿನ ಸಂಬಂಧ ಮತ್ತು ವ್ಯಕ್ತಿ ಮತ್ತು ಸಮುದಾಯದ ನಡುವಿನ ಸಂಬಂಧ ಕುರಿತು ನಾವು ಇಂದು ಗಮನ ಹರಿಸಬೇಕಾಗಿದೆ.

ಜಾತಿಯ ಮೂಲಕ ಸಮುದಾಯ ರೂಪುಗೊಳ್ಳುವುದು ವಾಸ್ತವಾದರೆ ಅದನ್ನು ಒಪ್ಪಿಕೊಳ್ಳಲು ಸಮಸ್ಯೆ ಏನು? ಸಮಸ್ಯೆ ಇದೆ. ಅವು ತಮ್ಮ ಜಾತಿಯ ಸದಸ್ಯರಿಗೆ ಸಂಬಂಧಿಸಿದಂತೆ ಕೆಲವು ಒಳ್ಳೆಯ ಗುಣಗಳನ್ನು ಪ್ರದರ್ಶಿಸಬಹುದು. ನಿಜ. ಆದರೆ ಒಂದು ಜಾತಿಯ ಗುರುತಿನ

ನೆಲೆಯಲ್ಲಿ ಗುರುತಿಸಿಕೊಳ್ಳುವುದೆಂದರೆ ಅದು ಯಾವತ್ತು ಮತ್ತೊಂದು ಗುರುತನ್ನು ದೃಷ್ಠಿಯಲ್ಲಿ ಇಟ್ಟುಕೊಂಡೆ ನಡೆಯುವ ಪ್ರಕ್ರಿಯೆ. ಇದಕ್ಕಾಗಿ ಕೆಲವು ಸಂದರ್ಭಗಳಲ್ಲಿ ಮತ್ತೊಂದನ್ನು ನೆಗೆಟಿವ್ ಆಗಿ ಚಿತ್ರಿಸುವ ಪ್ರಯತ್ನಗಳೂ ಇವೆ. ಮೇಲು ಜಾತಿಯವರು ತನ್ನ ಯಜಮಾನಿಕೆಯನ್ನು ಕೇವಲ ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಮಾತ್ರ ಚಲಾಯಿಸುವುದಲ್ಲ (ಚಂದ್ರ ಪೂಜಾರಿ, ೨೦೦೦). ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರದ ಯಜಮಾನಿಕೆಯ ಮುಂದುವರಿಕೆಗೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಯಜಮಾನಿಕೆ ಕೂಡ ಅಗತ್ಯ. ಅದಕ್ಕಾಗಿ ಕೆಳ ವರ್ಗದವರು ಸಂಪನ್ಮೂಲದಲ್ಲಿ ಮಾತ್ರ ಬಡವರಲ್ಲ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿಯೂ ಬಡವರೆಂಬ ಚಿತ್ರಣ ಸದಾ ಬಿಂಬಿತವಾಗುತ್ತದೆ. ಅದು ಹರಿಜನರನ್ನು ಹೊಟೇಲಿಗೆ ಸೇರಿಸುವ ಪ್ರಶ್ನೆ ಇರಬಹುದು, ಗುಡಿಗೆ ಪ್ರದೇಶ ನಿರಾಕರಿಸುವ ವಿಚಾರ ಇರಬಹುದು, ಕೆಳ ಜಾತಿಯವರ ಜತೆ ಊಟ, ಪಾನೀಯ ತೆಗೆದುಕೊಳ್ಳದ ವಿಚಾರ ಇರಬಹುದು, ಜಾತ್ರೆಗಳಲ್ಲಿ ಜಾಗಿಗನುಸಾರ ಕೆಲಸ ಕಾರ್ಯಗಳ ಹಂಚುವಿಕೆ ಇರಬಹುದು. ಇಲ್ಲೆಲ್ಲಾ ಸೇರಿಸಿಕೊಳ್ಳುವ ಮತ್ತು ಹೊರಗಿಡುವ ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ. ಹೀಗೆ ಒಂದು ನಿರ್ದಿಷ್ಟ ಜಾತಿಗೆ (ಗುರುತು) ಸೇರಿದ್ದೇನೆ ಎನ್ನುವ ಮೂಲಕ ತನ್ನತನ ಸಾಧಿಸಲು ಹೋರಾಟ ಆರಂಭವಾಗುತ್ತದೆ.

ಜಾತಿ ನೆಲೆಯಲ್ಲಿ ಸಮುದಾಯಗಳು ರೂಪುಗೊಳ್ಳುವುದರಿಂದ ಉಂಟಾಗುವ ಸಮಸ್ಯೆಗಳ ಸಂಕ್ಷಿಪ್ತ ಪರಿಚಯವಾಗಿರಬಹುದು. ಅದೊಂದು ಚಾರಿತ್ರಿಕ ವಾಸ್ತವ ಆಗಿರುವುದರಿಂದ ಒಮ್ಮಿಂದೊಮ್ಮೆಲೆ ಅದಕ್ಕಿಂಥ ಭಿನ್ನವಾದ ಸಮುದಾಯ ರೂಪುಗೊಳ್ಳುವಿಕೆಯನ್ನು ಊಹಿಸಿಕೊಳ್ಳುವುದು ಸ್ವಲ್ಪ ಕಷ್ಟ. ಆದರೆ ಇದೇ ಸಂದರ್ಭದಲ್ಲಿ ಇಂದು ಕಾರ್ಯರೂಪಕ್ಕೆ ಬರುತ್ತಿರುವ ಸಾಂಸ್ಥಿಕ ರಚನೆಗಳ ಕಡೆಗೂ ಗಮನ ಹರಿಸಬೇಕಾಗುತ್ತದೆ. ಗ್ರಾಮೀಣ ಸಂಪನ್ಮೂಲ ನಿರ್ವಹಣೆಗೆ ಸಂಬಂಧಿಸಿ ಜಾರಿಗೆ ಬರುತ್ತಿರುವ ಸಂಘಟನೆಗಳೆಲ್ಲಾ ಆಧುನಿಕ ಮೌಲ್ಯ ಪ್ರಕಾರ ರೂಪುಗೊಳ್ಳಬೇಕಾಗುತ್ತದೆ. ಅಲ್ಲಿ ವ್ಯಕ್ತಿಯ ಸಾಂಪ್ರದಾಯಿಕ ಹಿನ್ನೆಲೆ ಅಂದರೆ ಆತನ/ಅವಳ ಹುಟ್ಟು, ಜಾತಿ, ಧರ್ಮ, ಕಸುಬು ಇತ್ಯಾದಿಗಳು ಮುಖ್ಯವಲ್ಲ. ಆತ ಗ್ರಾಮಕ್ಕೆ ಸೇರಿರುವುದು ಅಥವಾ ಸಂಪನ್ಮೂಲ ಬಳಕೆದಾರನಾಗಿರುವುದು ಮುಖ್ಯವಾಗುತ್ತದೆ. ಪ್ರತಿಯೊಬ್ಬನು/ಳು ಇಲ್ಲಿ ಸದಸ್ಯನಾಗಬಹುದು. ಸದಸ್ಯನಾಗುವ ಮೂಲಕ ಸಮನಾದ ಹಕ್ಕಿಗೆ ಭಾದ್ಯನಾಗುತ್ತಾನೆ. ಇದು ನಮ್ಮ ಸಾಮಾಜಿಕ ವಾಸ್ತವತೆ ಮತ್ತು ಸಂಘಟನೆಗಳು ಬಯಸುವ ಆದರ್ಶದ ನಡುವೆ ಕಂದರವನ್ನು ಸೃಷ್ಟಿಸುತ್ತದೆ. ಇದೊಂದು ಬಗೆಯ ತ್ರಿಶಂಕು ಸ್ಥಿತಿ ನಿರ್ಮಾಣಕ್ಕೆ ಎಡೆ ಮಾಡಿಕೊಡುತ್ತದೆ. ಇದರಲ್ಲಿ ಚಾರಿತ್ರಿಕವಾಗಿ ರೂಪುಗೊಂಡ ಹಲವಾರು ಸಮುದಾಯಗಳು ಏಕ ಕಾಲದಲ್ಲಿ ಒಂದು ಸಾಂಸ್ಥಿಕ ಚೌಕಟ್ಟಿನೊಳಗೆ ವ್ಯವಹರಿಸಬೇಕು. ಹಿಂದಿನ ಎಲ್ಲ ಮೌಲ್ಯಗಳು ಇಂದು ಹೆಚ್ಚು ಕಡಿಮೆ ಪ್ರಶ್ನಿಸಲ್ಪಟ್ಟಿವೆ. ಇಂತಹ ಸಂದರ್ಭದಲ್ಲಿ ಸಾರ್ವಜನಿಕ ವ್ಯವಹಾರ ಯಾರ ಮೌಲ್ಯ ಪ್ರಕಾರ ನಡೆಯಬೇಕು? ಯಾವುದೋ ಒಂದು ಸಮುದಾಯದ ಪ್ರಕಾರ ನಡೆದರೆ ಅದು ಇತರ ಸಮುದಾಯಗಳ ಮೇಲೆ ಸವಾರಿ ಮಾಡಿದಂತೆ ಆಗುತ್ತದೆ. ಆದುದರಿಂದ ಎಲ್ಲರಿಗೂ ಅನುಕೂಲವಾಗುವ ಮೌಲ್ಯ ನಿರ್ಮಾಣವಾಗಬೇಕಾಗುತ್ತದೆ. ಇದು ಯಾವ ಅಥವಾ ಯಾರ ಮೌಲ್ಯ? ಹೀಗೆ ಪರದೇಶಿ ಥಿಯರಿಗಳನ್ನು ಸಾರಾಸಗಟಾಗಿ ನಮ್ಮ ಪರಿಸರಕ್ಕೆ ಅನ್ವಯಿಸಿದಾಗ ಹಲವಾರು ಸಮಸ್ಯೆಗಳು ಎದುರಾಗುತ್ತವೆ.

(೩)

**ಕೆರೆ ನೀರಾವರಿ ನಿರ್ವಹಣೆ ಮತ್ತು ಸಹಭಾಗಿತ್ವ**

ಸಮುದಾಯ ವಾದಿಗಳ ಪ್ರಕಾರ ನೆಲ, ಜಲ, ಅರಣ್ಯ ಇತ್ಯಾದಿಗಳ ನಿರ್ವಹಣೆಯಲ್ಲಿ ಹಿಂದಿನಿಂದಲೂ ನಮ್ಮಲ್ಲಿ ಸಮುದಾಯದ ಪಾತ್ರ ಇತ್ತು. ಕೆರೆ ಕಟ್ಟುವುದು, ಅದರ ರಿಪೇರಿ, ನೀರಿನ ಹಂಚುವಿಕೆ, ಇತ್ಯಾದಿಗಳನ್ನು ಹಿಂದೆ ನೀರು ಬಳಸುವವರು ನೋಡಿಕೊಳ್ಳುತ್ತಿದ್ದರು (ದೀಕ್ಷಿತ್ ಮತ್ತು ಇತರರು ೨೦೦೦). ಸ್ವಾತಂತ್ರ್ಯ ನಂತರ ಆಧುನಿಕ ನೀರಾವರಿ ವ್ಯವಸ್ಥೆ ಜಾರಿ ಬಂತು. ಅದು ಒಂದು ಕಡೆಯಿಂದ ಬೃಹತ್ ನೀರಾವರಿ ವ್ಯವಸ್ಥೆಗೆ ಮಹತ್ವ ಕೊಟ್ಟರೆ ಇನ್ನೊಂದು ದಿಕ್ಕಿನಲ್ಲಿ ನೀರಾವರಿ ನಿರ್ವಹಣೆಯಲ್ಲಿ ಸಮುದಾಯದ ಪಾತ್ರವನ್ನು ಕಡೆಗಣಿಸಿದೆ. ಇದರಿಂದಾಗಿ ಕೆರೆ ನೀರಾವರಿ ವ್ಯವಸ್ಥೆ ಅರ್ಥ ಕಳೆದುಕೊಳ್ಳುತ್ತಾ ಬಂತು. ಜತೆಗೆ ಕೆರೆ ನಿರ್ಮಾಣ, ಉಸ್ತುವಾರಿ, ನೀರಿನ ಹಂಚುವಿಕೆ, ಇತ್ಯಾದಿಗಳು ಸರಕಾರದ

ಜವಾಬ್ದಾರಿಯಾದವು. ಕೆರೆ ನೀರಿನ ನಿರ್ವಹಣೆಯಲ್ಲಿ ಸಮುದಾಯದ ಪಾತ್ರ ಕಡಿಮೆಯಾಗುತ್ತಾ ಬಂತು. ಈ ಎಲ್ಲ ಬೆಳವಣಿಗೆಗಳ ದುಷ್ಪರಿಣಾಮಗಳನ್ನು ನಾವಿಂದು ಮನಗಾಣುತ್ತಿದ್ದೇವೆ. ಬಹುತೇಕ ಕೆರೆಗಳು ಹೂಳು ತುಂಬಿ ನಿರುಪಯುಕ್ತವಾಗಿವೆ. ಮಳೆ ನೀರನ್ನು ಸಂಗ್ರಹಿಸುವ ಕಾಲುವೆಗಳೂ, ಹೊಲಗಳಿಗೆ ನೀರುಣ್ಣಿಸುವ ಕಾಲುವೆಗಳೂ, ಕೆರೆ ಏರಿ, ಇತ್ಯಾದಿಗಳು ಜೀರ್ಣಾವಸ್ಥೆಯಲ್ಲಿವೆ. ಎಲ್ಲಾ ಕೆರೆಗಳಿಗೆ ಪುನರ್ ಜೀವ ನೀಡಲು ಕೋಟ್ಯಾಂತರ ರೂಪಾಯಿಗಳ ವಿನಿಯೋಜನೆ ಅಗತ್ಯವಿದೆ. ಆದರೆ ಉದಾರೀಕೃತ ಆರ್ಥಿಕ ನೀತಿಯ ಬಲವಾದ ಗಾಳಿ ಬೀಸುವ ಇಂದಿನ ಸಂದರ್ಭದಲ್ಲಿ ಕೆರೆಗಳ ಪುನರ್ ನಿರ್ಮಾಣದ ಸಂಪೂರ್ಣ ಜವಾಬ್ದಾರಿಯನ್ನು ಸರಕಾರವೇ ಹೊರುವ ಸ್ಥಿತಿಯಲ್ಲಿ ಇಲ್ಲ. ಹಾಗಾಗಿ ಕೆರೆ ನೀರಿನ ನಿರ್ವಹಣೆಯಲ್ಲಿ ಸಮುದಾಯದ ಭಾಗವಹಿಸುವಿಕೆಗೆ ಇಂದು ಮಹತ್ವ ಬಂದಿದೆ.

ಬಳಕೆದಾರರು ಕೆರೆ ನೀರಾವರಿ ನಿರ್ವಹಣೆಯ ಜವಾಬ್ದಾರಿ ಹೊರುವುದನ್ನು ಕೆರೆ ನೀರಾವರಿ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವ ಎನ್ನಬಹುದು. ಕೆರೆ ನೀರಾವರಿ ನಿರ್ವಹಣೆಯಲ್ಲಿ ಬರುವ ಮುಖ್ಯ ಅಂಶಗಳು ಯಾವುವು? ಜಲಾನಯನ ಪ್ರದೇಶ, ಅಲ್ಲಿಂದ ನೀರು ಹರಿದು ಬರಲು ಕಾಲುವೆ ನಿರ್ಮಾಣ ಮತ್ತು ಕಾಲಕಾಲಕ್ಕೆ ಅದರ ರಿಪೇರಿ, ಕೆರೆಯ ಪಾತ್ರ ಮತ್ತು ಅದರ ನಿರ್ವಹಣೆ ಅಂದರೆ ಅದು ಹೂಳು ತುಂಬದಂತೆ ನೋಡಿಕೊಳ್ಳುವುದು ಮತ್ತು ಅದನ್ನು ಒತ್ತುವರಿ ಮಾಡಿಕೊಳ್ಳದಂತೆ ನೋಡಿಕೊಳ್ಳುವುದು. ಕೆರೆ ಕಟ್ಟೆ, ನೀರು ಬಿಡುವ ತೂಬುಗಳನ್ನು ಸೇರಿಸಿ ಅಲ್ಲಿಂದ ಕೆರೆ ಕೆಳಭಾಗದಲ್ಲಿ ಬರುವ ಹೊಲಗಳಿಗೆ ಕ್ರಮಪ್ರಕಾರ ನೀರು ಹೋಗಲು ಕಾಲುವೆ ನಿರ್ಮಾಣ ಮತ್ತು ಉಸ್ತುವಾರಿ. ಹೊಸ ಕೆರೆ ಅಥವಾ ಕಾಲುವೆ ನಿರ್ಮಾಣದ ಕೆಲಸ ಇಂದಿಲ್ಲ. ಇಂದು ಏನಿದ್ದರೂ ಈಗಾಗಲೇ ಇರುವ ಕೆರೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ನಿರ್ಮಾಣಗಳನ್ನು ಕೆಡದಂತೆ ನೋಡಿಕೊಳ್ಳುವುದು ಮಾತ್ರ ಈಗ ನಡೆಯುತ್ತಿರುವ ಕೆಲಸ. ಮೇಲಿನ ಎಲ್ಲ ಜವಾಬ್ದಾರಿಗಳ ನಿರ್ವಹಣೆ, ನೀರು ಹಂಚಿಕೆ, ತೆರಿಗೆ ಸಂಗ್ರಹ, ಇವುಗಳಿಗೆ ಸಂಬಂಧಿಸಿದ ತಕರಾರುಗಳ ಪರಿಹಾರ ಇತ್ಯಾದಿಗಳು ಜನರ ಸಹಭಾಗಿತ್ವದ ವ್ಯಾಪ್ತಿಯೊಳಗೆ ಬರಬಹುದಾದ ವಿಚಾರಗಳು. ಈಗ ನಮ್ಮ ಮುಂದೆ ಎರಡು ಪ್ರಶ್ನೆಗಳಿವೆ. ಒಂದು, ಹಲವಾರು ದಶಕಗಳ ಆಧುನೀಕರಣಕ್ಕೆ ಒಗ್ಗಿ ಹೋಗಿರುವ ಜನರು ಒಮ್ಮಿಂದೊಮ್ಮೆಲೆ ಈ ಜವಾಬ್ದಾರಿ ಹೊರಲು ಸಿದ್ಧರಾಗಿದ್ದಾರೆಯೇ? ಎರಡು, ಒಂದು ವೇಳೆ ಅವರ ಸಿದ್ಧತೆ ಆಗುವುದು ಅಥವಾ ಆಗದಿರುವುದರ ಬಗ್ಗೆ ವಿಶೇಷ ತಲೆ ಕೆಡೆಸಿಕೊಳ್ಳದೆ ವಿವಿಧ ಕೆಲಸಗಳಿಗೆ ಅವರನ್ನು ಜವಾಬ್ದಾರರನ್ನಾಗಿಸುವದೆಂದು ತೀರ್ಮಾನಿಸಿದರೆ (ತೀರ್ಮಾನಿಸಲಾಗಿದೆ) ಅದನ್ನು ಯಾವ ರೀತಿಯಲ್ಲಿ ಮಾಡುವುದು? ಎರಡನೇ ಪ್ರಶ್ನೆ ಕುರಿತು ಚಿಂತಿಸಬೇಕಾಗಿಲ್ಲ. ಯಾಕೆಂದರೆ ಸರಕಾರ ಈ ಕುರಿತು ಕೆಲವು ತೀರ್ಮಾನಗಳನ್ನು ಕೈಗೊಂಡು ಜಾರಿಗೊಳಿಸಿದೆ. ದೊಡ್ಡ ನೀರಾವರಿ ಇಲಾಖೆ ಕೆಳಗೆ ಬರುವ ನೀರು ಬಳಸುವವರ ಸಹಕಾರಿ ಕೂಡ ಆ ನಿಟ್ಟಿನಲ್ಲಿ ಆಲೋಚಿಸುತ್ತಿದೆ. ಹೀಗೆ ತಳ ಮಟ್ಟದಲ್ಲಿ ಕೆರೆ ನೀರಾವರಿ ನಿರ್ವಹಣೆಗೆ ಊರವರ ಸಹಕಾರಿ ಸಂಘಟನೆಗಳು ಜಾರಿ ಬರಲಿವೆ ಮತ್ತು ಕೆಲವು ಕಡೆಗಳಲ್ಲಿ ಜಾರಿ ಬಂದಿವೆ.

ಸೊಸೈಟಿಗಳನ್ನು ರಚಿಸುವ ವಿಚಾರವನ್ನು ಒಂದು ತಾಂತ್ರಿಕ ದೃಷ್ಟಿಯಿಂದ ನೋಡುವುದಾದರೆ ಒಂದೇ ವರ್ಷದಲ್ಲಿ ನೂರಾರು ಸಹಕಾರಿ ಸಂಘಟನೆಗಳನ್ನು ರಚಿಸುವುದು ಕಷ್ಟವಲ್ಲ. ಆದರೆ ಅವೆಲ್ಲಾ ನಿಜವಾದ ಅರ್ಥದಲ್ಲಿ ಜನರ ಸಹಭಾಗಿತ್ವದ ಮಾಧ್ಯಮಗಳಾಗಬಹುದೇ? ಈ ಪ್ರಶ್ನೆ ಯಾಕೆಂದು ವಿವರಿಸಬೇಕಾಗಿದೆ. ಜನರ ಸಹಭಾಗಿತ್ವದ ವಿಚಾರ ಕೆರೆ ನೀರಾವರಿ ನಿರ್ವಹಣೆಯ ಜತೆ ಆರಂಭವಾಗಿಲ್ಲ. ಗ್ರಾಮ ಪಂಚಾಯತ್, ಸಮುದಾಯ ಅರಣ್ಯ ಸಮಿತಿ, ಗ್ರಾಮೀಣ ಸಹಕಾರಿ ಸಂಘಗಳು ಮತ್ತು ಇತರ ಗ್ರಾಮೀಣ ಸಂಘಟನೆಗಳಲ್ಲೂ ಜನರ ಸಹಭಾಗಿತ್ವದ ಅಂಶಗಳಿವೆ. ಆ ಕ್ಷೇತ್ರಗಳಿಗೆ ಸಂಬಂಧಿಸಿದ ಅಧ್ಯಯನಗಳು ಜನರ ಸಹಭಾಗಿತ್ವದ ಅಂಶಗಳಿವೆ. ಆ ಕ್ಷೇತ್ರಗಳಿಗೆ ಸಂಬಂಧಿಸಿದ ಅಧ್ಯಯನಗಳು ಜನರ ಭಾಗವಹಿಸುವಿಕೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳನ್ನು ಪಟ್ಟಿ ಮಾಡಿವೆ. ಅವುಗಳೆಂದರೆ ಒಂದು, ಸಂಘಟನೆ ಯಾವ ಮಾನದಂಡದಲ್ಲಿ ನಡೆಯಬೇಕು? ಚಾರಿತ್ರಿಕವಾಗಿ ರೂಪುಗೊಂಡ ಸಂಸ್ಥೆಗಳ ಮೂಲಕ ಸಿವಿಲ್ ಸೊಸೈಟಿ ರೂಪುಗೊಳ್ಳುವುದರ ಪರ ಸಮುದಾಯವಾದಿಗಳು ಇದ್ದಾರೆ. ಹಿಮಾಲಯದ ಎರಡು ಹಳ್ಳಿಗಳ ಅಧ್ಯಯನ ಈ ವಾದವನ್ನು ತುಂಬಾ ಪರಿಣಾಮಕಾರಿಯಾಗಿ ಸಮರ್ಥಿಸುತ್ತದೆ. ಆಧುನಿಕ ಅರಣ್ಯ ಪಂಚಾಯತ್ ಬಂದ ನಂತರ ಊರಿನವರ ನಡುವೆ ಇದ್ದ ಸೋಶಿಯಲ್ ಕ್ಯಾಪಿಟಲ್ ಕ್ಷೀಣಿಸುತ್ತಾ ಹೋಯಿತು. ಇದಕ್ಕೆ ಕಾರಣ ನಂತರ ಬಂದ ಪಾರ್ಟಿ ರಾಜಕೀಯ ಅಥವಾ ಚುನಾವಣೆ ಮಾತ್ರ ಎನ್ನಲು ಸಾಧ್ಯವಿಲ್ಲ. ಅದಕ್ಕಿಂತಲೂ ಮುಖ್ಯವಾಗಿ ಸೀಟು ಕಾದಿರಿಸುವಿಕೆಯ ಮೂಲಕ ಕೆಳ ಜಾತಿಯವರು ಹೆಚ್ಚಿನ ಸಂಖ್ಯೆಯಲ್ಲಿ ಪಂಚಾಯತ್

ಸದಸ್ಯರಾಗಿರುವುದು ಕಾರಣವಾಗಿರಬಹುದು. ಒಂದು ಕಾಲದಲ್ಲಿ ಇಡೀ ಹಳ್ಳಿಯ ಎಲ್ಲ ವ್ಯವಹಾರದಲ್ಲೂ ಮೇಲ್ ಜಾತಿಯವರು ಹೊಂದಿದ್ದ ಏಕಸ್ವಾಮ್ಯ ಹಕ್ಕನ್ನು ಪ್ರಶ್ನಿಸಿದ್ದು ಕೂಡ ಸೋಶಿಯಲ್ ಕ್ಯಾಪಿಟಲ್ ಕ್ಷೀಣಿಸುವುದಕ್ಕೆ ಕಾರಣವಾಗಿರಬಹುದು. ಹಾಗೆ ಎಂದಾದರೆ ಹಿಂದಿನ ವ್ಯವಸ್ಥೆ ಎಷ್ಟೇ ಘರ್ಷಣೆರಹಿತವಾದರೂ ಸಮಾಜದ ಕೆಳವರ್ಗದ ದೃಷ್ಟಿಯಿಂದ ಲಾಭದಾಯಕವಾಗಿರಲು ಸಾಧ್ಯವೇ? ಆಧುನಿಕ ಮಾನದಂಡಗಳಿಗೆ ಅನುಸಾರವಾಗಿ ರೂಪುಗೊಳ್ಳುವ ಸಂಘಟನೆಗಳು ಯಾಕೆ ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ? ಕೆಲವು ಸಂದರ್ಭಗಳಲ್ಲಿ ಚಾರಿತ್ರಿಕವಾಗಿ ರೂಪುಗೊಂಡ ಸಂಸ್ಥೆಗಳ ಮೂಲಕ ಆಧುನಿಕ ಸಂಘಟನೆಗಳನ್ನು ರೂಪಿಸಿಕೊಳ್ಳುವುದು ಅನಿವಾರ್ಯವಾಗಬಹುದು. ಅಂತಹ ಸಂದರ್ಭಗಳಲ್ಲಿ ಸಂಪನ್ಮೂಲದ ನಿರ್ವಹಣೆ ಕುರಿತ ನಿರ್ಧಾರ ಪ್ರಶ್ನೆ ವ್ಯಕ್ತಿಯ ಹಕ್ಕು ಮತ್ತು ಸಮಾನತೆಯ ನೆಲೆಯಲ್ಲಿ ನಿರ್ಧಾರವಾಗುವಂತೆ ನೋಡಿಕೊಳ್ಳಬೇಕಾಗುತ್ತದೆ.

ಎರಡು, ಸಮಾಜದ ಕೆಳವರ್ಗದವರಲ್ಲಿ ಪರಸ್ಪರ ಬಂಧಿಸುವ ಸೋಶಿಯಲ್ ಕ್ಯಾಪಿಟಲ್ ಹೆಚ್ಚಿದೆ. ಅವರು ಅವರದ್ದೇ ಸ್ಥಿತಿಯಲ್ಲಿ ಇರುವ ಇತರ ಸಮುದಾಯಗಳ ಜತೆ ಸಂಪರ್ಕ ಬೆಳೆಸಿಕೊಳ್ಳಬೇಕಾಗುತ್ತದೆ. ಹೀಗೆ ತಳಮಟ್ಟದಲ್ಲಿ ಒಂದಾದ ಸಮುದಾಯಗಳು ತಮ್ಮ ಮೇಲ್ ಸ್ತರದಲ್ಲಿರುವ ಸಮುದಾಯಗಳ ಜತೆ ಸಂಬಂಧ ಬೆಳಸಬೇಕು. ಒಟ್ಟು ಪರಿಸರದಿಂದ ಬೇರ್ಪಡಿಸಿ ಚರ್ಚಿಸಲು ಇದು ತುಂಬ ಸುಲಭ. ಆದರೆ ಅಸಮಾನ ಅಧಿಕಾರ ಮತ್ತು ಸಂಪನ್ಮೂಲಗಳ ವಿತರಣೆ ಇರುವ ನಮ್ಮಂತಹ ಸಮಾಜದಲ್ಲಿ ಇದು ಕಾರ್ಯರೂಪಕ್ಕೆ ಬರುವುದು ಹೇಗೆ? ಹೆಚ್ಚೆಂದರೆ ಒಂದೇ ಜಾತಿಗೆ ಸೇರಿದ ಕೆಳವರ್ಗಕ್ಕೆ ಸೇರಿದವರು ಒಗ್ಗಟ್ಟಾಗಬಹುದು. ಅವರ ಒಳಗೂ ಬೇಕಾದಷ್ಟು ಬಿರುಕುಗಳಿರುತ್ತವೆ. ಅವೆನ್ನೆಲ್ಲ ಬದಿಗಿಟ್ಟು ಅವರು ಒಗ್ಗಟ್ಟಾಗುತ್ತಾರೆ ಎಂದು ಗೃಹಿಸುವ. ಅದೇ ರೀತಿ ಹೆಚ್ಚು ಕಡಿಮೆ ಒಂದೇ ಸ್ಥಿತಿಯಲ್ಲಿರುವ ಕೆಳಜಾತಿಗಳು ಒಂದಾಗುತ್ತಾರೆ ಎಂದಿಟ್ಟುಕೊಳ್ಳೋಣ. ಆದರೆ ಇವರಿಬ್ಬರೂ ಕೂಡಿ ಮೇಲ್ ಸ್ತರದ ಸಮುದಾಯಗಳನ್ನು ಅಧಿಕಾರದಲ್ಲಿ ಪಾಲುಕೊಡಲು ಒತ್ತಾಯಿಸಲು ಸಾಧ್ಯವೇ? ಸಾಧ್ಯವಾಗಹಬುದು. ದ್ವೀಪದಂತಹ ಪರಿಸರದಲ್ಲಿ ಸಂಖ್ಯೆಯಲ್ಲಿ ಬಲಯುತರಾಗಿರುವ ಕೆಳಜಾತಿಯವರು ಸಂಘಟಿತರಾಗಿ ಮೇಲ್ ಜಾತಿಯವರನ್ನು ಅಧಿಕಾರದ ಮರು ವಿತರಣೆಗೆ ಒತ್ತಾಯಿಸಬಹುದೋ ಏನೋ? ಇಷ್ಟಾಗ್ಯೂ ಇದೊಂದು ಅಧಿಕಾರದ ಹಂಚುವಿಕೆಯ ವಿವರಣೆಯಾಗುತ್ತದೆ. ಅಧಿಕಾರ ಕೇವಲ ಆರ್ಥಿಕ ಹಾಗು ರಾಜಕೀಯ ಕ್ಷೇತ್ರದ ಅಸಮಾನತೆ ಮೇಲೆ ಆಧಾರಿತವಲ್ಲ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಚರಣೆಗಳು ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರದ ಅಸಮಾನತೆಗಳನ್ನು ಮುಂದುವರಿಸಲು ಪೂರಕ ಆಗುವ ರೀತಿಯಲ್ಲೇ ಇವೆ. ಇಂತಹ ಪರಿಸರದಲ್ಲಿ ತಳಮಟ್ಟದಲ್ಲಿನ ಸಮುದಾಯಗಳು ಸಂಘಟಿತರಾಗಿ ಅಧಿಕಾರದಲ್ಲಿ ಕಲ್ಪಿಸಿಕೊಳ್ಳುವ ನಾಗರಿಕ ಸಂಘಟನೆಗಳು ಕೆಳವರ್ಗದ ಜನರ ದೃಷ್ಟಿಯಿಂದ ಉಪಯೋಗವಿಲ್ಲ. ಹಲವಾರು ಸಾಂಸ್ಥಿಕ ವ್ಯವಸ್ಥೆಗಳನ್ನು ಕಾನೂನು ಮೂಲಕ ಜಾರಿ ತರುವುದು ಮತ್ತು ಅವುಗಳಲ್ಲಿ ಕೆಳಜಾತಿಗಳಿಗೆ ಸೀಟು ಕಾದಿರಿಸುವಿಕೆ ಮೂಲಕ ಪ್ರವೇಶ ಗ್ಯಾರಂಟಿ ಮಾಡುವುದು ಅಗತ್ಯ. ಆದುದರಿಂದ ಪ್ರಭುತ್ವದ ಪಾತ್ರವನ್ನು ನಿರಾಕರಿಸುವ ಸಿವಿಲ್ ಸೊಸೈಟಿ ಕಲ್ಪನೆಗಳು ಅಭಿವೃದ್ಧಿಶೀಲ ದೇಶಗಳ ಮಟ್ಟಿಗೆ ಸಹಕಾರಿಯಾಗಲಿಕ್ಕಿಲ್ಲ (ಗುರುಪ್ರೀತ್ ಮಹಾಜನ್, ೧೯೯೯).

ಜನರ ಬೇಕು ಬೇಡಗಳ ಕುರಿತು ಅವರೇ ನಿರ್ಧಾರ ತೆಗೆದುಕೊಂಡು ಅದರ ಪೂರೈಕೆಗೆ ಅಗತ್ಯವಿರುವ ಯೋಜನೆಗಳನ್ನು ಅವರೇ ಮಾಡಿ ಅದನ್ನು ಕಾರ್ಯರೂಪಕ್ಕೆ ತರುವ ಸಹಭಾಗಿತ್ವ ಆದರ್ಶರೂಪದ್ದು. ವಾಸ್ತವದಲ್ಲಿ ಸಹಭಾಗಿತ್ವ ಈ ರೂಪದಲ್ಲಿ ಬರುವುದು ತುಂಬಾ ಅಪರೂಪ. ವಾಸ್ತವದಲ್ಲಿ ಅದರ ಹಲವಾರು ಡೈಲ್ಯುಟೆಡ್ ರೂಪಗಳನ್ನು ಕಾಣಬಹುದು. ನಮ್ಮಲ್ಲಂತೂ ಅದನ್ನೊಂದು ತಂತ್ರದ ರೀತಿಯಲ್ಲಿ ಬಳಸಲಾಗುತ್ತಿದೆ. ಅಂದರೆ ಯೋಜನೆಗಳು ಹಿಂದಿನ ರೀತಿಯಲ್ಲಿ ಕೇಂದ್ರ ಅಥವಾ ರಾಜ್ಯ ಮಟ್ಟದಲ್ಲಿ ತಯಾರಾಗುತ್ತವೆ. ತಳ ಮಟ್ಟದಲ್ಲಿ ಯೋಜನೆಗಳನ್ನು ಜಾರಿ ತರಲು ಸೃಷ್ಟಿಸಿದೆ ಮೆಕಾನಿಸಮ್‌ಗಳ ಮುಂದೆ ಯೋಜನೆಗಳನ್ನು ಮಂಡಿಸುವ ಶಾಸ್ತ್ರ ನಡೆಯುತ್ತದೆ. ಜನರಿಗೆ ಯೋಜನೆಗಳ ಬಗ್ಗೆ ಸರಿಯಾದ ಕಲ್ಪನೆಯೇ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ಅವರು ಸಕ್ರಿಯವಾಗಿ ಪಾಲುಗೊಳ್ಳುವ ವಿಚಾರವೇ ಹುಟ್ಟುವುದಿಲ್ಲ. ಇದೊಂದು ರೀತಿ ಒಪ್ಪಿಗೆ ಪಡೆಯುವ ಶಾಸ್ತ್ರ ಇನ್ನು ಕೆಲವು ಸಲ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಜನರು ಸಹಕರಿಸುವುದನ್ನು ಸಹಭಾಗಿತ್ವ ಎಂದು ವ್ಯಾಖ್ಯನಿಸುತ್ತಾರೆ. ಅಂದರೆ ಸಹಭಾಗಿತ್ವ ಕೂಡ ಒಂದು ಅಸ್ತ್ರದ ರೀತಿಯಲ್ಲಿ ಬಳಕೆಯಾಗತ್ತಿದೆ. ಆದರೆ ಜನರು ಸಹಭಾಗಿತ್ವದಿಂದ ಸಶಕ್ತೀಕರಣಗೊಳ್ಳಬೇಕಾದರೆ ಯೋಜನೆಗಳನ್ನು ರೂಪಿಸುವಲ್ಲಿಂದ ಅದು ಕಾರ್ಯರೂಪಕ್ಕೆ ಬರುವವರೆಗೆ

ಸಕ್ರೀಯವಾಗಿ ಭಾಗವಹಿಸಬೇಕು. ಇದು ಒಮ್ಮಿಂದೊಮ್ಮೆಲ್ಲೆ ಸಾಧ್ಯವಾಗಲಿಕ್ಕಿಲ್ಲ. ಇದಕ್ಕೆ ಎರಡು ಮುಖ್ಯ ಕಾರಣಗಳನ್ನು ಗುರುತಿಸಬಹುದು. ಒಂದು ಮೇಲ್‌ಸ್ತರದ ಸಮಸ್ಯೆ. ಅಂದರೆ ಅಭಿವೃದ್ಧಿ ಮಾಡುವ ವರ್ಗದ ಸಮಸ್ಯೆ. ಅದು ಅಧಿಕಾರದಲ್ಲಿ ಉಳಿಯಬೇಕಾದರೆ ಅಭಿವೃದ್ಧಿ ಮಾಡಬೇಕಾಗಿರುವ ಕುರಿಮಂದೆ ಸದಾ ಅದರ ಮುಂದಿರಬೇಕು. ಆದುದರಿಂದ ಅದು ಯಾವತ್ತು ಅಭಿವೃದ್ಧಿಗೊಳಿಸಬೇಕಾದ ಜನರನ್ನು ತಿಳುವಳಿಕೆ ಉಳ್ಳವರು, ಜವಾಬ್ದಾರಿಯುಳ್ಳವರು, ಸರಿಯಾದ ಪರಿಸರ ನಿರ್ಮಿಸಿದರೆ ತಮ್ಮ ಅಭಿವೃದ್ಧಿಯನ್ನು ತಾವೇ ಮಾಡಿಕೊಂಡರು ಎಂದು ಪರಿಗಣಿಸುವುದಿಲ್ಲ. ಆದುದರಿಂದ ಜನರನ್ನು ಅಭಿವೃದ್ಧಿಗೊಳಿಸುವ ತನ್ನ ವಿಧಾನ ಮತ್ತು ಗುರಿಯ ಬಗ್ಗೆ ಅದಕ್ಕೆ ಯಾವತ್ತು ಸಂಶಯ ಬಂದಿಲ್ಲ. ಇದು ನಿಜವಾಗಿಯೂ ಬಹುದೊಡ್ಡ ಸಮಸ್ಯೆ. ತಿಳುವಳಿಕೆ ಇಲ್ಲದವರನ್ನು ಮತ್ತು ಅದರ ಅರಿವಿರುವವರನ್ನು ಒಪ್ಪಿಸಬಹುದು. ಆದರೆ ತಾವು ಮಾಡುವುದೇ ಸರಿಯೆಂದು ಬಲವಾಗಿ ನಂಬುವವರನ್ನು ತಿದ್ದುವುದು ಬಹು ಕಷ್ಟ.

ಇನ್ನು ಎರಡನೇ ಸಮಸ್ಯೆ ಸಹಭಾಗಿತ್ವದಲ್ಲಿ ಪಾಲುಗೊಳ್ಳುವ ಜನರದ್ದು. ಹಲವಾರು ದಶಕಗಳಿಂದ ತಮ್ಮ ಅಭಿವೃದ್ಧಿಗಾಗಿ ಅಧಿಕಾರದಲ್ಲಿರುವವರ ಕಡೆ ನೋಡಿ ಅಭ್ಯಾಸವಾಗಿರುವ ಜನ ಒಮ್ಮಿಂದೊಮ್ಮಲೆ ತಮ್ಮ ಅಭಿವೃದ್ಧಿಯ ಜವಾಬ್ದಾರಿಯನ್ನು ತಾವೆ ಹೊರಲು ಸಿದ್ಧವಾಗಬೇಕಾಗಿದೆ. ಇಲ್ಲಿ ಎರಡು ರೀತಿಯ ಸಿದ್ಧತೆಗಳು ಅಗತ್ಯ. ಒಂದು ಮಾನಸಿಕ ಎರಡು ಭೌತಿಕ. ಮಾನಸಿಕ ಸಿದ್ಧತೆ ಅರಿವಿನಿಂದ ಸಾಧ್ಯ. ಸರಿಯಾದ ಶಿಕ್ಷಣ ಮತ್ತು ಇತರ ವಿಧಾನಗಳಿಂದ ಸಹಭಾಗಿತ್ವದ ಮಹತ್ವ ಮತ್ತು ಅದರಲ್ಲಿ ಅವರ ಪಾತ್ರ ಕುರಿತು ಅರಿವು ಮೂಡಿಸಬಹುದು. ಅರಿವು ಕಾರ್ಯರೂಪಕ್ಕೆ ಬರಬೇಕಾದರೆ ಜನರ ಭೌತಿಕ ಸಿದ್ಧತೆಯೂ ಆಗಬೇಕಾಗಿದೆ. ಜನರು ತಮ್ಮ ಪಾಲಿನ ಶ್ರಮ ಅಥವಾ ಧನ ಕೊಡಲು ಮುಂದಾಗಬೇಕಾಗುತ್ತದೆ. ಅದಕ್ಕೆ ಸಾಕಾಗುವಷ್ಟು ಅವರ ಆರ್ಥಿಕ ಸ್ಥಿತಿ ಅನುಕೂಲವಾಗಿರಬೇಕು. ಸಾವಿರಾರು ರೂಪಾಯಿಗಳನ್ನು ತೆರಿಗೆ ಅಥವಾ ದೇಣಿಗೆ ನೀಡುವುದು ಬಡಜನರಿಗೂ ಸಮಸ್ಯೆಯಾಗಬಹುದು. ಆದರೆ ವರ್ಷಕ್ಕೆ ನೂರು ಅಥವಾ ಇನ್ನೂರು ರೂಪಾಯಿಗಳಷ್ಟು ತೆರಿಗೆ ಸಂದಾಯ ಮಾಡುವುದು ಕೆಳವರ್ಗದವರಿಗೂ ಸಮಸ್ಯೆಯಾಗಲಿಕ್ಕಿಲ್ಲ. ಮನವರಿಕೆ ಮಾಡಿದರೆ ತಳಮಟ್ಟದಲ್ಲಿರುವವರು ತಮ್ಮ ಪಾಲಿನ ಕೊಡುಗೆಯನ್ನು ಕೊಡಲು ಹಿಂದಕ್ಕೆ ಸರಿಯುವುದಿಲ್ಲ. ಆದರೆ ಅವರು ಬದುಕುವ ಪರಿಸರ ಅವರಿಗೆ ಬೇರೆಯದ್ದೇ ಪಾಠ ಹೇಳಿಕೊಡುತ್ತಿದೆ. ಉಳ್ಳವರು ತಮ್ಮ ಕಣ್ಣ ಮುಂದೆಯೇ ತಮ್ಮ ಪಾಲಿನ ಕೊಡುಗೆಯನ್ನು ಕೊಡಲು ನಿರಾಕರಿಸುವುದು ಕೆಳವರ್ಗದವರಿಗೂ ಮನೆ ತೆರಿಗೆ, ನೀರಿನ ತೆರಿಗೆ ಇತ್ಯಾದಿಗಳನ್ನು ಬಾಕಿ ಉಳಿಸಲು ಸಬೂಬುಗಳಾಗುತ್ತವೆ. ತೆರಿಗೆ ಸಂದಾಯ ಮಾಡಿದವರಿಗೂ ಮಾಡದವರಿಗೂ ವಿಶೇಷ ವ್ಯತ್ಯಾಸವೇ ಇರುವುದಿಲ್ಲ. ತಮ್ಮ ಪಾಲಿನ ಬಾಕಿಯನ್ನು ಕಟ್ಟದವರ ವಿರುದ್ಧ ಯಾವುದೇ ಕ್ರಮ ಇರುವುದಿಲ್ಲ. ಜತೆಗೆ ಅವರಿಗೂ ಇತರರಂತೆ ನೀರು, ವಿದ್ಯುತ್ ಅಥವಾ ಇತರ ಸೌಲಭ್ಯಗಳು ಸಿಗುತ್ತಿರುತ್ತವೆ. ಇಂತಹ ಭೌತಿಕ ಪರಿಸರ ಬದಲಾಗಬೇಕಾಗಿದೆ.

ಜನರು ಮಾನಸಿಕವಾಗಿ ಹಾಗೂ ಭೌತಿಕವಾಗಿ ತಯಾರು ಆದಾಗ್ಯೂ ಸಹಭಾಗಿತ್ವ ಪರಿಣಾಮಕಾರಿಯಾಗಬೇಕಾದರೆ ಆರಂಭದ ಹಂತದಲ್ಲಿ ಜನರನ್ನು ಒಗ್ಗೂಡಿಸುವ ಕೆಲಸ ಆಗಬೇಕಾಗಿದೆ. ಇದಕ್ಕೆ ಒಂದೋ ಸ್ಥಳೀಯ ನಾಯಕತ್ವ ಜವಾಬ್ದಾರಿ ವಹಿಸಬೇಕು ಅಥವಾ ಹೊರಗಿನ ನಾಯಕತ್ವದ ಆಸರೆ ಪಡೆಯಬೇಕು. ಸ್ಥಳೀಯರು ಆಸಕ್ತಿ ವಹಿಸಿಕೊಂಡು ಸಹಭಾಗಿತ್ವ ಬೆಳೆದರೆ ಉತ್ತಮ. ಆದರೆ ಎಷ್ಟೋ ಸಂದರ್ಭಗಳಲ್ಲಿ ಸ್ಥಳೀಯ ನಾಯಕತ್ವ ಸಿಗದಿರಬಹುದು. ಒಂದು ವೇಳೆ ಸಿಕ್ಕಿದರೂ ಅದು ಪಾರಂಪರಿಕವಾಗಿ ಯಜಮಾನಿಕೆಯಲ್ಲಿದ್ದು ಇಂದು ಅದರ ಯಜಮಾನಿಕೆಯನ್ನು ಮುಂದುವರಿಸುವ ರೀತಿಯಲ್ಲಿ ನಾಯಕತ್ವ ನೀಡುವ ಸಾಧ್ಯತೆ ಇರಬಹುದು. ಅಂತಹ ಸಂದರ್ಭಗಳಲ್ಲಿ ಆ ಕೆಲಸವನ್ನು ಸರಕಾರೇತರ ಸಂಸ್ಥೆಗಳು ಮತ್ತು ಸರಕಾರಿ ಅಧಿಕಾರಿಗಳು ನಿರ್ವಹಿಸುತ್ತಾರೆ. ಸರಕಾರೇತರ ಸಂಸ್ಥೆಗಳು ಈ ನಿಟ್ಟಿನಲ್ಲಿ ಸಾಕಷ್ಟು ಕೆಲಸ ಮಾಡಿದ ಉದಾಹರಣೆಗಳು ಇವೆ. ಸಿವಿಲ್ ಸೊಸೈಟಿ ಮತ್ತು ಸಹಭಾಗಿತ್ವದ ಪ್ರಚಾರ ನಮ್ಮಲ್ಲಿ ಒಂದು ವಿಧದಲ್ಲಿ ಸರಕಾತೇರ ಸಂಸ್ಥೆಗಳು ಬಲವಾಗಿ ಬೇರೂರುವುದನ್ನು ತೋರಿಸುತ್ತಿವೆ. ನಿಜವಾದ ಅರ್ಥದಲ್ಲಿ ಜನಸಾಮಾನ್ಯರು ತಮ್ಮ ಹಕ್ಕಿಗಾಗಿ ಅಥವಾ ತಮ್ಮ ಸಂಪನ್ಮೂಲಗಳ ನಿರ್ವಹಣೆಗೆ ಸಮುದಾಯವಾಗಿ ಪ್ರಯತ್ನಿಸುವುದು ಕಂಡು ಬರುತ್ತಿಲ್ಲ. ಹಿಂದೆ ಅಭಿವೃದ್ಧಿ ಮಾಡುವುದು ಸರಕಾರದ ಮತ್ತು ಅಧಿಕಾರಗಳ ಜವಾಬ್ದಾರಿಯಾದರೆ; ಇಂದು ಅದು ಸರಕಾರೇತರ ಸಂಸ್ಥೆಗಳದ್ದಾಗಿದೆ. ಹಿಂದೆ ತಳಮಟ್ಟದ ಜನರು ಅವರ ಬೇಕು ಬೇಡಗಳಿಗೆ ಅನುಸಾರ ಯೋಜನೆಗಳನ್ನು ರೂಪಿಸುವುದರಲ್ಲಿ ಪಾಲುಗೊಳ್ಳುತ್ತಿರಲಿಲ್ಲ. ಇಂದು ಸರಕಾರೇತರ ಸಂಸ್ಥೆಗಳು ಬಂದು ಸ್ಥಿತಿ ವಿಶೇಷ ಬದಲಾಗಿಲ್ಲ.

ಹೆಚ್ಚೆಂದರೆ ರಾಜ್ಯ ಅಥವಾ ಕೇಂದ್ರ ಸರಕಾರದ ಮಟ್ಟದಲ್ಲಿ ರೂಪಿತವಾದ ಯೋಜನೆಗಳಿಗೆ ಒಪ್ಪಿಗೆ ಪಡೆಯುವ ಶಾಸ್ತ್ರಕ್ಕೆ ಪುರೋಹಿತ್ಯ ಒದಗಿಸುವ ಕೆಲಸವನ್ನು ಸರಕಾರೇತರ ಸಂಸ್ಥೆಗಳು ಮಾಡುತ್ತಿವೆ. ಇದಕ್ಕೆ ಮುಖ್ಯ ಕಾರಣ ಕುಂಟಿತ ಅಭಿವೃದ್ಧಿಯನ್ನು ಕೇವಲ ಆರ್ಥಿಕ ಪ್ರಶ್ನೆಯನ್ನಾಗಿ ನೋಡುವುದು. ಆದರೆ ಕೆಳವರ್ಗದವರ ಸಮಸ್ಯೆ ಕೇವಲ ಆರ್ಥಿಕ ಕೊರತೆ ಮಾತ್ರ ಅಲ್ಲ. ಅದು ಬಹು ಆಯಾಮವುಳ್ಳ ವಿಚಾರ. ಚಾರಿತ್ರಿಕವಾಗಿ ರೂಪುಗೊಂಡ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ, ರಚನೆಗಳು ಕುಂಟಿತ ಅಭಿವೃದ್ಧಿಯನ್ನು ಮುಂದುವರಿಸಲು ಅವಶ್ಯವಾದ ಚೌಕಟ್ಟನ್ನು ಒದಿಗಿಸುತ್ತಿರುವುದು ಬಹು ದೊಡ್ಡ ಸಮಸ್ಯೆ. ಆ ಚೌಕಟ್ಟನ್ನು ಸುಧಾರಿಸುವ ಕಾರ್ಯಕ್ರಮಗಳು ಇಲ್ಲದಿದ್ದರೆ ಭೌತಿಕ ಕೊರತೆ ಮುಂದುವರಿಯುತ್ತಲೇ ಇರುತ್ತದೆ. ಬಹುತೇಕ ಸರಕಾರೇತರ ಸಂಸ್ಥೆಗಳು ಭೌತಿಕ ಕೊರತೆಗಳನ್ನು ಮುಂದುವರಿಸಲು ಪೂರಕವಾಗುವ ಚೌಕಟ್ಟನ್ನು ಸುಧಾರಿಸುವ ಜವಾಬ್ದಾರಿ ವಹಿಸುವುದಿಲ್ಲ. ಹಾಗೆಂದು ಮೂಲಭೂತವಾದ ಪರಿವರ್ತನೆಗಳನ್ನು ಉದ್ದೇಶವಾಗಿ ಇಟ್ಟುಕೊಂಡು ದುಡಿಯುವ ಸರಕಾರೇತರ ಸಂಸ್ಥೆಗಳು ಇಲ್ಲವೆಂದಲ್ಲ. ಇವೆ. ಆದರೆ ಅಂತಹ ಸಂಸ್ಥೆಗಳಿಗೆ ವಿದೇಶಿ ನೆರವು ಸಿಗುವುದಿಲ್ಲ. ಜತೆಗೆ ನಮ್ಮ ಸರಕಾರಗಳು ಕೂಡ ಅಂತಹ ಸಂಸ್ಥೆಗಳನ್ನು ಗಾವುದ ದೂರ ಇರಿಸುತ್ತವೆ. ಅವುಗಳ ಮೂಲಕ ಅಭಿವೃದ್ಧಿ ಕಾರ್ಯಕ್ರಮಗಳು ಮಿಡಿಯೇಟ್ ಆಗದಂತೆ ಸರಕಾರಗಳು ನೋಡಿಕೊಳ್ಳುತ್ತವೆ. ಇಂತಹ ಸ್ಥಿತಿಯಲ್ಲಿ ಸಹಭಾಗಿತ್ವವನ್ನು ಒಂದು ಸಾಮಾಜಿಕ ಚಳವಳಿಯ ರೂಪದಲ್ಲಿ ಜನರಿಗೆ ತಲುಪಿಸುವುದು ಹೆಚ್ಚು ಪರಿಣಾಮಕಾರಿ. ಇದು ಹೊರಗಿನ ಏಜಂಟರ್‌ಗಳ ಮೇಲೆ ಡಿಪೆಂಡ್ ಆಗುವುದನ್ನು ತಪ್ಪಿಸುತ್ತದೆ. ಜತೆಗೆ ತಳ ಮಟ್ಟದಲ್ಲಿ ಪಾಲುದಾರರ ಅರಿವಿನ ಮಟ್ಟವನ್ನು ಗಣನೀಯವಾಗಿ ಪ್ರಭಾವಿಸುತ್ತದೆ.

ಭಾರತದಂತಹ ಅಸಮಾನ ಸಮಾಜದಲ್ಲಿ ಸೋಶಿಯಲ್ ಕ್ಯಾಪಿಟಲ್‌ನ ಸೀಮಿತ ಅನ್ವಯಿಕೆಯ ಕಂಡಿದ್ದೇವೆ. ಆದಾಗ್ಯೂ ಇಂದು ಈ ಪದ ಅಭಿವೃದ್ಧಿ ಚಿಂತಕರ, ಪಾಲಿಸಿ ರೂಪಿಸುವ ಅಧಿಕಾರಿಗಳ, ಸರಕಾರೇತರ ಸಂಸ್ಥೆಗಳ ಮುಖ್ಯ ಮಂತ್ರವಾಗಿದೆ. ಇದಕ್ಕೆ ಒಂದು ಕಾರಣ ವರ್ಲ್ಡ್ ಬ್ಯಾಂಕಿನ ಕೃಪೆಯಿಂದ ಸೋಶಿಯಲ್ ಕ್ಯಾಪಿಟಲ್ ಇಂದು ಅಭಿವೃದ್ಧಿಯ ಹೊಸ ಮಿಸ್ಸಿಂಗ್ ಲಿಂಕ್ ಆಗಿರುವುದು. ಇಲ್ಲಿ ಸೋಶಿಯಲ್ ಕ್ಯಾಪಿಟಲಿಗೂ ಸಹಭಾಗಿತ್ವಕ್ಕೂ ನೇರ ಸಂಬಂಧ ಹಣಿಯಲಾಗುತ್ತಿದೆ. ಈ ಕ್ರಮದ ಸಹಭಾಗಿತ್ವದ ಮುಖ್ಯ ಸಮಸ್ಯೆಯೆಂದರೆ ಇಲ್ಲಿ ಸಮುದಾಯವನ್ನು ಒಂದು ಘರ್ಷಣೆ ಇಲ್ಲದ, ಸಮಸ್ಯೆರಹಿತ ಸ್ಪೇಸ್ ಆಗಿ ನೋಡಲಾಗುತ್ತಿದೆ. ಇಂತಹ ಸಮುದಾಯಗಳು ಸ್ವತಂತ್ರವಾಗಿ ಒಟ್ಟ ಸೇರಿ ತಮ್ಮ ಸಮಸ್ಯೆಗಳಿಗೆ ತಾವೇ ಪರಿಹಾರ ಕಂಡುಕೊಳ್ಳುತ್ತಾರೆ ಎನ್ನುವ ನಂಬಿಕೆ ಇದೆ. ಅವುಗಳು ಒಟ್ಟು ಸೇರಿ ತಮ್ಮ ಸಮಸ್ಯೆಗಳು ಪರಿಹಾರಕ್ಕೆ ಪ್ರಯತ್ನಿಸಲು ಹೆಚ್ಚೆಂದರೆ ಕೆಲವು ಸರಕಾರೇತರ ಸಂಸ್ಥೆಗಳು (ಎನ್.ಜಿ.ಓ) ಸಹಕಾರ ಇದ್ದರೆ ಸಾಕು ಎನ್ನುವ ಗೃಹಿಕೆ ಇದೆ. ಇದಕ್ಕೆ ಮುಖ್ಯ ಕಾರಣ ತಳಮಟ್ಟದಲ್ಲಿನ ಅಧಿಕಾರ ಸಂಬಂಧ ಬಗ್ಗೆ ತುಂಬ ಸರಳೀಕೃತ ನಿಲುವನ್ನು ಸೋಶಿಯಲ್ ಕ್ಯಾಪಿಟಲ್ ಥಿಯರಿ ಪ್ರತಿಪಾದಿಸುತ್ತಿರುವುದು. ಆದರೆ ವಾಸ್ತವಿಕದಲ್ಲಿ ಈ ಅಧಿಕಾರ ಸಂಬಂಧಗಳು ಎಷ್ಟು ಸಂಕೀರ್ಣವಾಗಿದೆ ಎನ್ನುವುದನ್ನು ಮೇಲಿನ ಉದಾಹರಣೆಗಳು ದೃಢಪಡಿಸುತ್ತವೆ. ಇಷ್ಟೊಂದು ಸೀಮಿತ ಅನ್ವಯಿಕೆ ಇದ್ದಾಗ್ಯೂ ಸೋಶಿಯಲ್ ಕ್ಯಾಪಿಟಲ್ ಇಂದು ತುಂಬಾ ಪ್ರಚಾರದಲ್ಲಿದೆ. ಅದಕ್ಕೆ ಕಾರಣ ಸೋಶಿಯಲ್ ಕ್ಯಾಪಿಟಲ್‌ನ ವಿಶ್ಲೇಷಣ ಶಕ್ತಿಯಲ್ಲ; ಅದು ಇಂದು ಯಜಮಾನಿಕೆಯಲ್ಲಿರುವ ಅಭಿವೃದ್ಧಿ ಚಿಂತನೆಂದು ಭಾಗವಾಗಿರುವುದು. ಇಂದು ಯಜಮಾನಿಕೆಯಲ್ಲಿರುವ ಅಭಿ ವೃದ್ಧಿ ಚಿಂತನೆ ಸಹಭಾಗಿತ್ವವನ್ನು ಒಂದು ಅಸ್ತ್ರದ ರೂಪದಲ್ಲಿ ಬಳಸುತ್ತಿದೆ. ಅಭಿವೃದ್ಧಿ ಕಾರ್ಯಕ್ರಮಗಳನ್ನು ತಳಮಟ್ಟ ತಲುಪಿಸುವ ಒಂದು ಮೆಕಾನಿಸಮ್ ಆಗಿ ಇಲ್ಲಿ ಸಹಭಾಗಿತ್ವವನ್ನು ನೋಡಲಾಗುತ್ತದೆ. ಇದರ ಮುಖ್ಯ ಉದ್ದೇಶ ಮೇಲ್‌ಸ್ತರದಲ್ಲಿ ರೂಪುಗೊಳ್ಳುವ ಅಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜ ಆರಿ ತರುವುದು. ಇಲ್ಲಿ ತಳಮಟ್ಟದ ಅಧಿಕಾರ ಸಂಬಂಧಗಳನ್ನು ಕೆದಕುವ ಅಥವಾ ಏರುಪೇರುಗೊಳಿಸುವ ಪ್ರಶ್ನೆ ಇಲ್ಲ.

**ಪರಾಮರ್ಶನ ಬರಹಗಳು**


೧. ಹರ್ಶ್‌ಮನ್, *ದಿ ಸ್ಟ್ರಟಜಿ ಆಫ್ ಎಕಾನಮಿಕ್ ಡೆವಲಪ್‌ಮೆಂಟ್, ನ್ಯೂಯಾರ್ಕ್:*ಯೇಲ್ ಯುನಿವರ್ಸಿಟಿ ಪ್ರೆಸ್, ೧೯೫೮.

೨. ಶಂಪೀಟರ್, *ದಿ ಥಿಯರಿ ಆಫ್ ಎಕಾನಮಿಕ್ ಡೆವಲಪ್‌ಮೆಂಟ್, ಮೆಪಶುಸೆಟ್ಸ್:*ಹಾರ್‌ವರ್ಡ್ ಯುನಿವರ್ಸಿಟಿ ಪ್ರಸ್, ೧೯೩೪.

೩. ಮೆಕ್‌ಲೆಂಡ್, *ದಿ ಎಚೀವಿಂಗ್ ಸೊಸೈಟಿ, ಬಾಂಬೆ:*ವಕೀಲ್ಸ್, ಪೆಪ್ಪರ್ ಅಂಡ್ ಸೈಮನ್ಸ್ ಲಿಮಿಟೆಡ್, ೧೯೬೧.

೪. ವೇನ್ ಇ ನಫೀಜರ್, *ಕ್ಲಾಸ್, ಕಾಸ್ಟ್ ಆಂಡ್ ಎಂತ್‌ಪ್ರನರ್ ಶಿಪ್: ಎ ಸ್ಟಡಿ ಆಫ್ ಇಂಡಿಯನ್ ಇಂಡಸ್ಟ್ರಿಯಲಿಸ್ಟ್ಸ್, ಹೊನಲುಲು :*ಯುನಿವರ್ಸಿಟಿ ಆಫ್ ಹಾವಯಿ, ೧೯೭೮.

೫. ಕೀತ್ ಗ್ರಿಫಿನ್ ಆಂಡ್ ಜಾನ್ ನೈಟ್, *ಹ್ಯೂಮನ್ ಡೆವಲಪ್‌ಮೆಂಟ್ ಆಂಡ್ ದಿ ಇನ್‌ಟರ್‌ನೇಶನಲ್ ಡೆವಲಪ್‌ಮೆಂಟ್ ಸ್ಟ್ರಟಜಿ, ಲಂಡನ್:*ಮೆಕ್ ಮಿಲನ್ ೧೯೯೦.

೬. ಥಿಯೊಡರ್ ಸಲ್ಜ್, *ಇನ್ ವೆಸ್ಟಮೆಂಟ್ ಇನ್ ಹ್ಯೂಮನ್ ಕ್ಯಾಪಿಟಲ್, ನ್ಯೂಯಾರ್ಕ್:*ಫ್ರಿ ಪ್ರೆಸ್, ೧೯೭೧.

೭. ಜೇಮ್ಸ್ ಎಸ್ ಕೊಲಮೆನ್ *"ಸೋಶಿಯಲ್ ಕ್ಯಾಪಿಟಲ್ ಇನ್ ದಿ ಕ್ರಿಯೇಶನ್ ಆಫ್ ಹ್ಯೂಮನ್ ಕ್ಯಾಪಿಟಲ್," ಅಮೇರಿಕನ್ ಜರ್ನಲ್ ಆಫ್ ಸೋಶಿಯಲಾಜಿ,*೯೪, ೧೯೮೮, ಪು. ೯೫-೧೨೦.

೮. ಕೆಲ್ಲಿ ಜೊನಾಥೆನ್, "ವೆಲ್ತ್ ಆಂಡ್ ಫೆಮಿಲಿ ಬೇಗ್ರೌಂಡ್ ಇನ್ ದಿ ಒಕ್ಯುಪೆಶನಲ್ ಕೆರೀಯರ್ : ಥಿಯರಿ ಆಂಡ್ ಕ್ರಾಸ್ ಕಲ್ಚರಲ್ ಡಾಟ," ಬ್ರಿಟಿಷ್ ಜರ್ನಲ್ ಆಫ್ ಸೋಶಿಯಲಾಜಿ, ವಾ.೨೯,ನಂ.೧,ಮಾರ್ಚ್೧೯೭೮, ಪು. ೯೪-೧೦೭.

೯. ಜೂಲಿಯ ಕ್ವಾಂಗ್, "ಈಸ್ ಎವರಿ ಒನ್ ಇಕ್ವಲ್ ಬಿಫೋರ್ ದಿ ಸಿಸ್ಟಮ್ ಆಫ್ ಗ್ರೇಡ್ಸ್ : ಸೋಶಿಯಲ್ ಬೇಗ್ರೌಂಡ್ ಅಂಡ್ ಒಪರ್ಚುನಿಟಿಸ್ ಇನ್ ಚೈನ್," *ಬ್ರಿಟಿಷ್ ಜರ್ನಲ್ ಆಫ್ ಸೋಶಿಯಲಾಜಿ,*ವಾ.೩೪, ನಂ.೧, ಮಾರ್ಚ್ ೧೯೮೩, ಪು.೯೩-೧೦೮.

೧೦. ಪಾರಿ ಬಾರ್ಡಿ, *ಸೋಶಿಯಲಾಜಿ ಇನ್ ಕ್ವಶ್ಚನ್,ಲಂಡನ್:*ಸೇಜ್ ಪಬ್ಲಿಕೇಶನ್ಸ್, ೧೯೯೩

೧೧. ರಾಬರ್ಟ ಪುನಮ್, *ಮೇಕಿಂಗ್ ಡೆಮಾಕ್ರಸಿ ವರ್ಕ್: ಸಿವಿಕ್ ಟ್ರೆಡಿಶನ್ಸ್ ಇನ್ ಮೊಡರ್ನ್ ಇಟಲಿ, ಪ್ರಿನ್ಸ್‌ಟನ್:*ಪ್ರಿನ್ಸ್‌ಟನ್ ಯುನಿವರ್ಸಿಟಿ ಪ್ರೆಸ್, ೧೯೯೩.

೧೨. ಮಹಮ್ಮದ್ ಮೊಹಿದ್ದೀನ್ ಅಬ್ದುಲ್ಲ, *ರೂರಲ್ ಡೆವಲಪ್‌ಮೆಂಟ್ ಇನ್ ಬಾಂಗ್ಲಾದೇಶ್: ಪ್ರೊಬ್ಲೆಮ್ಸ್ ಆಂಡ್ ಪ್ರೊಸ್‌ಪೆಕ್ಟ್ಸ್, ಡಾಕ್ಕಾ:*ನೂರ್ ಜಹಾನ್ ಬೇಗಂ, ೧೯೭೯.

೧೩. ಮಾಧವ ಗಾಡ್ಗಿಲ ಅಂಡ್ ರಾಮಚಂದ್ರ, ಇಕಲಾಜಿ ಆಂಡ್ ಇಕ್ವಿಟಿ: ದಿ ಯೂಸ್ ಆಂಡ್ ಎಬ್ಯೂಸ್ ಆಫ್ ನೇಚರ್ ಇನ್ ಕಾಂಟೆಂಪರರಿ ಇಂಡಿಯಾ, ನ್ಯೂಡೆಲ್ಲಿ : ಪೆಂಗ್ವಿನ್ ಬುಕ್ಸ್, ೧೯೯೫.

೧೪. ರಜನಿ ಕೊಥಾರಿ, *ಸ್ಟೇಟ್ ಎಗೇಯಿನ್‌ಸ್ಟ್ ಡೆಮಾಕ್ರಸಿ: ಇನ್ ಸರ್ಚ್ ಆಫ್ ಹ್ಯೂಮನ್ ಗವರ್ನೆನ್ಸ್,*ಡೆಲ್ಲಿ: ಅಜಂತಾ ಪಬ್ಲಿಷರ್ಸ್, ೧೯೮೮.

೧೫. ಆಶಿಸ್ ನಂದಿ, ಕಲ್ಚರ್ ಸ್ಟೇಟ್ ಆಂಡ್ ರಿಡಿಸ್ಕವರಿ ಆಫ್ ಇಂಡಿಯನ್ ಪೊಲಿಟಿಕ್ಸ್," *ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ,*ವಾ. ೧೯.೧೯೮೪. ಪು. ೨೦೭೮-೮೩.

೧೬. ಜೋದ ಎನ್ ಎಸ್., "ಕಾಮನ್ ಪ್ರಪರ್ಟಿ ರಿಸೋರ್ಸಸ್," ಇನ್ ರಾಮಚಂದ್ರ ಗುಹ (ಎಡಿಟೆಡ್), *ಸೋಶಿಯಲ್ ಇಕಲಾಜಿ,*ಡೆಲ್ಲಿ: ಆಕ್ಸ್ ಪರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೪.

೧೭. ಆಶಿಸ್ ಕೊಥಾರಿ ಮತ್ತು ಇತರರು, *ಕಮ್ಯುನಿಟೀಸ್ ಆಂಡ್ ಕನ್‌ಸರ್‌ವೇಶನ್: ನೇಚುರಲ್ ರಿಸೋರ್ಸ್ ಮೇನೇಜ್‌ಮೆಂಟ್ ಇನ್ ಸೌತ್ ಅಂಡ್ ಸೆಂಟ್ರಲ್ ಏಶ್ಯಾ,*ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೧೯೯೮.

೧೮. ಸುಧಾ ಪೈ "ಸೋಶಿಯಲ್ ಕ್ಯಾಪಿಟಲ್, ಪಂಚಾಯತ್ಸ್ ಆಂಡ್ ಗ್ರಾಸ್ ರೂಟ್ಸ್ ಡೆಮಾಕ್ರಸಿ: ಪೊಲಿಟಿಕ್ಸ್ ಆಫ್ ದಲಿತ ಎಸರ್ಸನ್ ಇನ್ ಉತ್ತರ್‌ಪ್ರದೇಶ್," *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ,*ವಾ. ೩೬, ನಂ.೮, ಫೆಬ್ರವರಿ ೨೦೦೧, ಪು.೬೪೫-೬೫೪.

೧೯. ನಿರಜಾ ಗೋಪಾಲ್ ಜಯಲ್, "ಡೆಮಾಕ್ರಸಿ ಆಂಡ್ ಸೋಶಿಯಲ್ ಕ್ಯಾಪಿಟಲ್ ಇನ್ ಸೆಂಟ್ರಲ್ ಹಿಮಾಲಯ: ಟೇಲ್ ಆಫ್ ಟು ವಿಲೇಜಸ್," *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ,*ವಾ. ೩೬, ನಂ.೮ ಫೆಬ್ರವರಿ ೨೦೦೧, ಪು.೬೫೫-೬೬೪.

೨೦. ರಾಜನ್ ಗುರುಕಲ್, "ವೆನ್ ಎ ಕೊಯಿಲೇಶನ್ ಆಫ್ ಕಾನ್‌ಫ್ಲಿಕ್‌ಟಿಂಗ್ ಇನ್ ಟರೆಸ್ಟ್ಸ್, ಡಿಸೆಂಟ್ರಲೈಸ್ : ಎ ಥಿಯರೆಟಿಕಲ್ ಕ್ರಿಟೀಕ್ ಆಫ್ ಡಿಸೆಂಟ್ರಲೈಸೇಶನ್ ಪೊಲಿಟಿಕ್ಸ್ ಇನ್ ಕೇರಳ," *ಸೋಶಿಯಲ್ ಸೈಯಿನ್‌ಟಿಸ್ಟ್,*ವಾ.೨೯,ನಂ೯-೧೦, ಸೆಪ್ಟಂಬರ್ ಅಕ್ಟೋಬರ್ ೨೦೦೧, ಪು.೬೦-೭೬.

೨೧. ಪಾರ್ಥ ಚಟರ್ಜಿ, “ಕಮ್ಯುನಿಟಿ ಇನ್ ದಿ ಈಸ್ಟ್,” *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ,*ವಾ.೩೩, ನಂ.೬, ಪೆಬ್ರವರಿ ೧೯೯೮, ಪು.೨೭೭-೮೦.
೨೨. ಜಿ.ಎಸ್ ದೀಕ್ಷಿತ್ ಮತ್ತು ಇತರರು, *ಕರ್ನಾಟಕದಲ್ಲಿ ಕೆರೆ ನೀರಾವರಿ,*ಅನು : ನೀಲತ್ತಹಳ್ಳಿ ಕಸ್ತೂರಿ, ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೦.
೨೩. ಎಂ. ಚಂದ್ರಪೂಜಾರಿ, *ದೇಶಿಯತೆಯ ನೆರಳಲ್ಲಿ ವಿಕೇಂದ್ರೀಕರಣ,*ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೦.
೨೪. ಗುರುಪ್ರೀತ್ ಮಹಾಜನ್, “ಸಿವಿಲ್ ಸೊಸೈಟಿ ಆಂಡ್ ಇಟ್ಸ್‌ಅವತಾರಸ್,” *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ,*ವಾ.೩೪, ನಂ ೨೦, ಮೇ ೧೯೯೯, ಪು.೧೧೮೮-೯೫.
೨೫. ಸುಸಾನೆ ಹೊಬರ್ ರುಡಾಲ್ಪ್, “ಸಿವಿಲ್ ಸೊಸೈಟಿ ಆಂಡ್ ದಿ ರೆಲ್ಮ್ ಆಫ್ ಫ್ರಿಡಂ,” *ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ,*ವಾ.೩೫, ನಂ ೨೦, ಮೇ ೨೦೦೦, ಪು.೧೭೬೨-೬೯.
೨೬. ಜೋನ್ ಹೇರಿಸ್, ಡಿಪೊಲಿಟಿಸೈಜಿಂಗ್ ಡೆವಲಪ್‌ಮೆಂಟ್ : *ದಿ ವರ್ಲ್ಡ್ ಬೇಂಕ್ ಆಂಡ್ ಸೋಶಿಯಲ್ ಕ್ಯಾಪಿಟಲ್,*ನ್ಯೂಡೆಲ್ಲಿ: ಲೆಪ್ಟವರ್ಡ್‌ಬುಕ್ಸ್, ೨೦೦೧.
೨೭. ಅಲೆಕ್ಸಿ ಡಿ ತೊವಿಲ್ಲೆ, *ಡೆಮಾಕ್ರಸಿ ಇನ್ ಅಮೇರಿಕ,*ನ್ಯಯಾಕ್ : ಹೇಂಕರ್ ಬುಕ್ಸ್, ೧೯೬೯.
೨೮. ಜೇಮ್ಸ ಎಸ್ ಕಾಲೆಮನ್, ಫೌಂಡೇಶನ್ಸ ಆಫ್ ಸೋಶಿಯಲ್ ಥಿಯರಿ, ಕೇಂಬ್ರಿಡ್ಜ್ : ಹಾರ್‌ವರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೦.

## ಪರಾಮರ್ಶನ ಬರಹಗಳು

೧. ಹರ್ಶ್‌ಮನ್, *ದಿ ಸ್ಟ್ರೆಟಜಿ ಆಫ್ ಎಕಾನಮಿಕ್ ಡೆವಲಪ್‌ಮೆಂಟ್,*ನ್ಯೂಯಾರ್ಕ್: ಯೇಲ್ ಯುನಿವರ್ಸಿಟಿ ಪ್ರೆಸ್, ೧೯೫೮
೨. ಶಂಪೀಟರ್, *ದಿ ಥಿಯರಿ ಆಫ್ ಎಕಾನಮಿಕ್ ಡೆವಲಪ್‌ಮೆಂಟ್,*ಮೆಸಚುಸೆಟ್ಸ್ : ಹಾರ್ ವರ್ಡ್ ಯುನಿವರ್ಸಿಟಿ ಪ್ರೆಸ್, ೧೯೩೪
೩. ಮೆಕ್‌ಲೇಂಡ್, *ದಿ ಎಚೀವಿಂಗ್ ಸೊಸೈಟಿ,*ಬಾಂಬೆ : ವಕೀಲ್ಸ್, ಪೆಪ್ಪರ್ ಆಂಡ್ ಸೈಮನ್ಸ್ ಲಿಮಿಟೆಡ್, ೧೯೬೧
೪. ವೇನ್ ಇ ನಫೀಜರ್, *ಕ್ಲಾಸ್ ಕಾಸ್ಟ್ ಆಂಡ್ ಎಂತ್ರಪ್ರನರ್‌ಶಿಫ್: ಎ ಸ್ಟಡಿ ಆಫ್ ಇಂಡಿಯನ್ ಇಂಡಸ್ಟ್ರೀಯಲಿಸ್ಟ್,*ಹೊನಲುಲು: ಯುನಿವರ್ಸಿಟಿ ಆಫ್ ಹಾವಯಿ, ೧೯೭೮
೫. ಕೀತ್ ಗ್ರಿಫಿನ್ ಆಂಡ್ ಜಾನ್ ನೈಟ್, *ಹ್ಯೂಮನ್ ಡೆವಲಪ್‌ಮೆಂಟ್ ಆಂಡ್ ದಿ ಇನ್‌ಟರ್‌ನೇಶನಲ್ ಡೆವಲಪ್‌ಮೆಂಟ್ ಸ್ಟ್ರೆಟಜಿ,*ಲಂಡನ್: ಮೆಕ್ ಮಿಲನ್, ೧೯೯೦
೬. ಥಿಯೊಡರ್ ಶಲ್ಜ್, “ಸೋಶಿಯಲ್ ಕ್ಯಾಪಿಟಲ್ ಇನ್ ದಿ ಕ್ರಿಯೇಶನ್ ಆಫ್ ಹ್ಯೂಮನ್ ಕ್ಯಾಪಿಟಲ್”, *ಅಮೇರಿಕನ್ ಜರ್ನಲ್ ಆಫ್ ಸೋಶಿಯಲಾಜಿ,*೯೪, ೧೯೮೮, ಪು. ೬೫-೧೨೦
೮. ಜೊನಾಥೆನ್ ಕೆಲ್ಲಿ, “ವೆಲ್ತ್ ಆಂಡ್ ಫೇಮಿಲಿ ಬೆಗ್ರೌಂಡ್ ಇನ್ ದಿ ಒಕ್ಯುಪೇಶನಲ್ ಕೆರಿಯರ್: ಥಿಯರಿ ಆಂಡ್ ಕ್ರಾಸ್ ಕಲ್ಚರಲ್ ಡಾಟ”, *ಬ್ರಿಟಿಷ್ ಜರ್ನಲ್ ಆಫ್ ಸೋಶಿಯಲಾಜಿ,*ವಾ.೨೯, ನಂ.೧, ಮಾರ್ಚ್ ೧೯೮೩, ಪು.೯೩-೧೦೮
೧೦. ಬಾರಿ ಬಾರ್ಡಿ, *ಸೋಶಿಯಲಾಜಿ ಇನ್ ಕ್ವಶ್ಚನ್,*ಲಂಡನ್ : ಸೇಜ್ ಪಬ್ಲಿಕೇಶನ್ಸ್, ೧೯೯೩
೧೧. ರಾಬರ್ಟ್ ಪುನಮ್, *ಮೇಕಿಂಗ್ ಡೆಮಾಕ್ರಸಿ ವರ್ಕ್: ಸಿವಿಕ್ ಟ್ರೆಡಿಶನ್ಸ್ ಇನ್ ಮೊಡರ್ನ್ ಇಟಲಿ,*ಪ್ರಿನ್ಸ್ ಟನ್ : ಪ್ರಿನ್ಸ್ ಟನ್ ಯುನಿವರ್ಸಿಟಿ ಪ್ರೆಸ್,೧೯೯೩
೧೨. ಮಹಮ್ಮದ್ ಮೊಹಿದ್ದೀನ್ ಅಬ್ದುಲ್ಲ, *ರೂರಲ್ ಡೆವಲಪ್‌ಮೆಂಟ್ ಇನ್ ಬಾಂಗ್ಲದೇಶ್: ಪ್ರೊಬ್ಲೆಮ್ಸ್ ಆಂಡ್ ಪ್ರೊಸ್‌ಪೆಕ್ಟ್ಸ್,*ಡಾಕ್ಕಾ: ನೂರ್‌ಜಹಾನ್ ಬೇಗಂ, ೧೯೭೯

೧೩. ಮಾಧವ ಗಾಡ್ಗಿಲ್ ಆಡ್ ರಾಮಚಂದ್ರ ಗುಹ, ಇಕಲಾಜಿ ಆಂಡ್ ಇಕ್ವಿಟಿ: *ದಿ ಯೂಸ್ ಆಂಡ್ ಎಬ್ಯೂಸ್ ಆಫ್ ನೇಚರ್ ಇನ್ ಕಾಂಪೆಂಪರರಿ ಇಂಡಿಯಾ*,ನ್ಯೂಡೆಲ್ಲಿ: ಪೆಂಗ್ವಿನ್ ಬುಕ್ಸ್, ೧೯೯೫

೧೪. ರಜನಿ ಕೊಥಾರಿ, *ಸ್ಟೇಟ್ ಎಗೇಯಿನ್‌ಸ್ಟ್ ಡೆಮಾಕ್ರಸಿ: ಇನ್ ಸರ್ಚ್ ಆಫ್ ಹ್ಯೂಮಾನ್ ಗವರ್ನೆನ್ಸ್*, ಡೆಲ್ಲಿ: ಅಜಂತಾ ಪಬ್ಲಿಷರ್ಸ್, ೧೯೮೮

೧೫. ಆಶಿಸ್ ನಂದಿ, ''ಕಲ್ಚರ್, ಸ್ಟೇಟ್ ಆಂಡ್ ರಿಡಿಸ್ಕವರಿ ಆಫ್ ಇಂಡಿಯನ್ ಪೊಲಿಟಿಕ್ಸ್'', *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*,ವಾ.೧೯,೧೯೮೪,ಪು.೨೦೭೮-೮೩

೧೬. ಜೋದ ಎನ್.ಎಸ್., ''ಕಾಮನ್ ಪ್ರೊಪರ್ಟಿ ರಿಸೋರ್ಸಸ್'', ಇನ್ ರಾಮಚಂದ್ರ ಗುಹ (ಎಡಿಟೆಡ್), *ಸೋಶಿಯಲ್ ಇಕಲಾಜಿ*,ಡೆಲ್ಲಿ: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೪

೧೭. ಆಶಿಸ್ ಕೊಥಾರಿ ಮತ್ತು ಇತರರು, *ಕಮ್ಯುನಿಟೀಸ್ ಆಂಡ್ ಕನ್‌ಸರ್‌ವೇಶನ್: ನೇಚುರಲ್ ರಿಸೋರ್ಸ್ ಮೇನೇಜ್ ಮೆಂಟ್ ಇನ್ ಸೌತ್ ಆಂಡ್ ಸೆಂಟ್ರಲ್ ಏಶ್ಯಾ*,ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೧೯೯೮

೧೮. ಸುಧಾ ಪೈ, ''ಸೋಶಿಯಲ್ ಕ್ಯಾಪಿಟಲ್, ಪಂಚಾಯತ್ಸ್ ಆಂಡ್ ಗ್ರಾಸ್‌ರೂಟ್ಸ್ ಡೆಮಾಕ್ರಸಿ: ಪೊಲಿಟಿಕ್ಸ್ ಆಫ್ ದಲಿತ್ ಎಸರ್ಸ್‌ನ್ ಇನ್ನ ಉತ್ತರ್ ಪ್ರದೇಶ್'', *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*,ವಾ. ೩೬, ನಂ.೮, ಫೆಬ್ರವರಿ ೨೦೦೧, ಪು.೬೪೫-೬೫೪

೧೯. ನಿರಜಾ ಗೋಪಾಲ್ ಜಯಲ್, ''ಡೆಮಾಕ್ರಸಿ ಆಂಡ್ ಸೋಶಿಯಲ್ ಕ್ಯಾಪಿಟಲ್ ಇನ್ ಸೆಂಟ್ರಲ್ ಹಿಮಾಲಯ: ಟೇಲ್ ಆಫ್ ಟು ವಿಲೇಜಸ್'', *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*,ವಾ.೩೬, ನಂ.೮, ಫೆಬ್ರವರಿ ೨೦೦೧, ಪು.೬೫೫-೬೬೪

೨೦. ರಾಜನ್ ಗುರುಕಲ್, ''ವೆನ್ ಎ ಕೊಯಿಲೇಶನ್ ಆಫ್ ಕಾನ್ ಫ್ಲಿಕ್ಟಿಂಗ್ ಇನ್ ಟರೆಸ್ಟ್ಸ್ ಡಿಸೆಂಟ್ರಲೈಸ್ : ಎ ಥಿಯರೆಟಿಕಲ್ ಕ್ರಿಟೀಕ್ ಆಫ್ ಡಿಸೆಂಟ್ರಲೈಸೇಶನ್ ಪೊಲಿಟಿಕ್ಸ್ ಇನ್ ಕೇರಳ'', *ಸೋಶಿಯಲ್ ಸೈಯಿನ್‌ಟಿಸ್ಟ್*,ವಾ.೨೯,ನಂ. ೯-೧೦, ಸೆಪ್ಟಂಬರ್-ಅಕ್ಟೋಬರ್ ೨೦೦೧, ಪು. ೬೦-೭೬

೨೧. ಪಾರ್ಥ ಚಟರ್ಜಿ, ''ಕಮ್ಯುನಿಟಿ ಇನ್ ದಿ ಈಸ್ಟ್'', *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*,ವಾ.೩೩, ನಂ. ೬, ಫೆಬ್ರವರಿ ೧೯೯೮. ಪು. ೨೭೭-೮೦

೨೨. ಜಿ.ಎಸ್. ದೀಕ್ಷಿತ್ ಮತ್ತು ಇತರರು, *ಕರ್ನಾಟಕದಲ್ಲಿ ಕೆರೆ ನೀರಾವರಿ*,ಅನು: ನೀಲತ್ತಹಳ್ಳಿ ಕಸ್ತೂರಿ, ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೦

೨೩. ಎಂ.ಚಂದ್ರ ಪೂಜಾರಿ, *ದೇಶಿಯತೆಯ ನೆರಳಲ್ಲಿ ವಿಕೇಂದ್ರಿಕರಣ*,ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦

೨೪. ಗುರುಪ್ರೀತ್ ಮಹಾಜನ್, ''ಸಿವಿಲ್ ಸೊಸೈಟಿ ಆಂಡ್ ಇಟ್ಸ್ ಅವತಾರಸ್'', *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*,ವಾ.೩ ೪, ನಂ. ೨೦, ಮೇ ೧೯೯೯, ಪು.೧೧೮೮-೯೫

೨೫. ಸುಸಾನೆ ಹೊಬರ್ ರುಡಾಲ್ಸ್, ''ಸಿವಿಲ್ ಸೊಸೈಟಿ ಆಂಡ್ ದಿ ರೆಲ್ಮ್ ಆಫ್ ಫ್ರಿಡಂ'', *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*, ವಾ. ೩೫, ನಂ. ೨೦, ಮೇ ೨೦೦೦, ಪು. ೧೭೬೨-೬೯.

೨೬. ಜೋನ್ ಹೇರಿಸ್, *ಡಿಪೊಲಿಟಿಸೈಜಿಂಗ್ ಡೆವಲಪ್‌ಮೆಂಟ್: ದಿ ವರ್ಲ್ಡ್ ಬೇಂಕ್ ಆಂಡ್* ಸೋಶಿಯಲ್ ಕ್ಯಾಪಿಟಲ್, ನ್ಯೂಡೆಲ್ಲಿ: ಲೆಫ್ಟ್ ವರ್ಡ್ ಬುಕ್ಸ್, ೨೦೦೧

೨೭. ಅಲೆಕ್ಸಿ ಡಿ ತೊವಿಲ್ಲೆ, *ಡೆಮಾಕ್ರಸಿ ಇನ್ ಅಮೇರಿಕ*,ನ್ಯೂಯಾರ್ಕ್: ಹೇಂಕರ್ ಬುಕ್ಸ್, ೧೯೬೯

೨೮. ಜೇಮ್ಸ್ ಎಸ್ ಕೊಲ್‌ಮನ್, *ಫೌಂಡೇಶನ್ಸ್ ಆಫ್ ಸೋಶಿಯಲ್ ಥಿಯರಿ*,ಕೇಂಬ್ರಿಡ್ಜ್: ಹಾರ್‌ವರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೦

೨೯. ಸಿ.ಎಸ್. ವಾಸುದೇವನ್, *ಹಂಪಿ ಪರಿಸರದ ಕೆರೆಗಳು*,ಹಂಪಿ ಕನ್ನಡ ವಿಶ್ವವಿದ್ಯಾಲಯ, ೨೦೦೧

೩೦. ಕರ್ನಾಟಕ ಸರಕಾರ, *ದಿ ಕರ್ನಾಟಕ ಇರಿಗೇಶನ್ ಆಂಡ್ ಸರ್ಟೆಯಿನ್ ಅದರ್ ಲಾ (ಎಮೆಂಡ್‌ಮೆಂಟ್) ಬಿಲ್, ೨೦೦೦.*

೩೧. *ಕೌಟಿಲ್ಯನ ಅರ್ಥಶಾಸ್ತ್ರ*,ಅನುವಾದಕರು ಕೆ.ಕೃಷ್ಣಭಟ್ಟ, ಧಾರವಾಡ: ಮನೋಹರ ಘಾಣೇಕರ, (ತೃತೀಯ ಮುದ್ರಣ)೨೦೦೦

೩೨. ಮೈಸೂರು ಸರಕಾರ, ಮೈಸೂರು ಆಕ್ಟ್, ನಂಬರ್ ೧ ಆಫ್ ೧೯೧೧, ದಿ ಟೇಂಕ್ ಪಂಚಾಯತ್ ಆಕ್ಟ್, ೧೯೧೧

೩೩. ಸಿ.ಟಿ.ಎಂ. ಕೊಟ್ರಯ್ಯ, *ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ,*ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೧

೩೪. ರಜನಿ ಕೋಥಾರಿ, "ಅಂಡರ್ ಗ್ಲೊಬಲೈಸೇಶನ್ ವಿಲ್ ದಿ ನೇಶನ್ ಸ್ಟೇಟ್ ಹೋಲ್ಡ್", *ಎಕಾನಮಿಕ್ ಆಂಡ್ ಪೊಲಿಟಿಕ್ ವೀಕ್ಲಿ,*ಜುಲೈ ೧: ೧೯೯೫, ಪೆ. ೧೫೧೩-೧೬೦೩

೩೫. ಡಿ.ವಿಲ್. ಸೇಥ್, "ಗ್ರಾಸ್‌ರೂಟ್ಸ್ ಇನಿಶೇಟಿವ್ಸ್ ಇನ್ ಇಂಡಿಯ', *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ,*ವಾ. ೧೯, ೧೯೮೪, ಪೆ.೬೧೫-೨೬

೩೬. ದಾಂಟೆವಾಲ, ಸೇಥಿ ಆಂಡ್ ವಿಸಾರಿಯ (ಸಂ.), *ಸೋಶಿಯಲ್ ಚೇಂಜ್ ಥ್ರೋ ವಾಲೆಂಟರಿ ಆಕ್ಷನ್,*ನ್ಯೂಡೆಲ್ಲಿ: ಸೇಜ್, ೧೯೯೮

೩೭. ಡೇವಿಡ್ ಲಡ್ಡನ್ (ಸಂ.), *ಎಗ್ರಿಕಲ್ಚರಲ್ ಪ್ರೊಡಕ್ಷನ್ ಆಂಡ್ ಇಂಡಿಯನ್ ಹಿಸ್ಟರಿ,*ಡೆಲ್ಲಿ: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೪

೩೮. ನಖ್ವಿ ಎಸ್., "ಮಾರ್ಕ್ಸ್ ಆನ್ ಪ್ರಿಬ್ರಿಟಿಷ್ ಇಂಡಿಯನ್ ಸೊಸೈಟಿ ಆಂಡ್ ಎಕಾನಮಿ", *ಇನ್ ಸಾಯನ್ಸ್ ಆಂಡ್ ಹ್ಯೂಮನ್ ಪ್ರೊಗ್ರೆಸ್,*ಪೊಪ್ಯುಲರ್ ಪ್ರಕಾಶನ್, ೧೯೭೪

೩೯. ದೀಕ್ಷಿತ್ ಜಿ.ಎಸ್., *ಲೋಕಲ್ ಸೆಲ್ಫ್ –ಗವರ್ನ್‌ಮೆಂಟ್ ಇನ್ ಮಿಡಿವಲ್ ಕರ್ನಾಟಕ,*ಧಾರವಾಡ, ೧೯೬೪

೪೦. ಬರ್ಟನ್ ಸ್ಟೈನ್, "ದಿ ಸೆಗ್‌ಮೆಂಟರಿ ಸ್ಟೇಟ್ "ಇಂಟರಿಮ್ ರಿಫ್ಲೆಕ್ಷನ್ಸ್", *ಇನ್ ದಿ ಸ್ಟೇಟ್ ಇನ್ ಇಂಡಿಯ ೧೦೦೦–೧೭೦೦,* ಸಂ.ಹರ್ಮನ್ ಕುಲ್ಕೆ, ಡೆಲ್ಲಿ: ಆಕ್ಸ್ ಪರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೭

೪೧. ಬರ್ಟನ್ ಸ್ಟೈನ್, *ಆಲ್ ದಿ ಕಿಂಗ್ಸ್ ಮಾನ,*ಮದ್ರಾಸ್, ೧೯೮೪

೪೨. ಶರ್ಮ ಆರ್.ಎಸ್., *ಅರ್ಬನ್ ಡಿಕೇ,*ದೆಹಲಿ, ೧೯೮೭

೪೩. ಚಟ್ಟೋಪಾಧ್ಯಾಯ ಬಿ.ಡಿ., *ದಿ ಮೇಕಿಂಗ್ ಆಫ್ ಅರ್ಲಿ ಮಿಡಿವಲ್ ಇಂಡಿಯ,*ಡೆಲ್ಲಿ: ಆಕ್ಸ್ ಪರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೪

***